

ವರ್ಣದಿಂದ
ವರ್ಗದ ಕಡೆಗೆ
ಆರ್. ವಿ. ಭಂಡಾರಿ

ಆಕರ ಗ್ರಂಥಮಾಲೆ

ವರ್ಣದಿಂದ ವರ್ಗದ ಕಡೆಗೆ

ಆರ್.ವಿ. ಭಂಡಾರಿ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಚಾಮರಾಜಪೇಟೆ, ಬೆಂಗಳೂರು

VARNADINDA VARGADA KADEGE
A Collection of Articles

Writer
R.V. Bhandari
Kerekona, Are Angadi Post, Honnavara Taluk
Uttara Kannada District-581 430

Administrative Officer
Kannada Pusthaka Pradhikara (Kannada Book Authority)
Pampa Mahakavi Road, Chamarajpet
Bangalore-560 018

First Edition : 2003
Pages : XII + 296
Rs. 100/-

ISBN 81-7713-129-X

D.T.P. by:
Varshini Graphics, Bangalore-40 ✆ : 3402575

Printer:
Sneha Printers
No. 114, 4th Cross, B.C.C. Layout, Attiguppe
Vijayanagar 2nd Stage, Bangalore-40 ✆ : 3392814
E-Mail-snehaprinters1@rediffmail.com
karthikenterprisesin@yahoo.com

ಅಕ್ಷರ ಸೂರ್ಯನಿಗೆ ನಮನ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರವು ನಾಡಿನ ಎಲ್ಲ ಬಗೆಯ ಜ್ಞಾನ ಸಂಪತ್ತನ್ನು ಉಳಿಸಿ-ಬೆಳೆಸುವ ತುಂಬು ಹಂಬಲವನ್ನು ಹೊತ್ತಿದೆ. ಇದು ಒಂದು ಬಗೆಯಲ್ಲಿ ಲೇಖಕ, ಪ್ರಕಾಶಕ, ಓದುಗ ಈ ಮೂವರ ಜತೆ ಸುಸಂಬದ್ಧವಾದ ಅಂತರ್‌ಜಾಲವನ್ನು ಪೋಷಿಸುವ ಸಾಂಸ್ಕೃತಿಕ ಚೈತನ್ಯದ ಸಂಸ್ಥೆಯಾಗಿದೆ. ನಮ್ಮ ನಾಡಿನ ಜ್ಞಾನ ಸಂಪತ್ತು ಅಕ್ಷಯವಾದುದು. ನಾವು ಬಗೆದಷ್ಟು ಮುಗಿಯದ ತವನಿಧಿ. ಈ ನಿಧಿಯ ರಕ್ಷಣೆ-ಪಾಲನೆ ಮತ್ತು ಪೋಷಣೆ ಎಂದೆಂದೂ ಬೇಕು. ಅಕ್ಷರನಿಧಿಯು ಎಂದೆಂದೂ ಅಳಿಯುವುದಿಲ್ಲ. ಈ ನಿಧಿಗೆ ಒಡೆಯರಾದವರು ನಮ್ಮ ಓದುಗರು. ಪಾರಂಪರಿಕ ಜ್ಞಾನಕ್ಕೂ ಆಧುನಿಕ ಕಾಲದ ಜ್ಞಾನಕ್ಕೂ ಓದುಗರೇ ವಾರಸುದಾರರು. ಈ ವಾರಸುದಾರರಿಗೆ ನಿಧಿಯ ಮೌಲ್ಯವನ್ನೂ, ಮಹತ್ವವನ್ನೂ ತೆರೆದು ತೋರಿಸುವುದು ಪುಸ್ತಕ ಪ್ರಾಧಿಕಾರದ ಕರ್ತವ್ಯಗಳಲ್ಲಿ ಒಂದೆಂದು ತಿಳಿದಿದ್ದೇನೆ. ನಮ್ಮ ಕರ್ತವ್ಯವನ್ನು ನಾವು ಮಾಡುವುದು ಬೇಡವೇ? ಈ ಕರ್ತವ್ಯಕ್ಕೆ ಹಲವು ದಾರಿಗಳಿವೆ. ಕೇವಲ ಪ್ರಕಟಣೆ ಮಾತ್ರ ನಮ್ಮ ಏಕೋದ್ದೇಶ್ಯವಲ್ಲ. ಪ್ರಕಟಣೆಯ ಜೊತೆಗೆ ಅಕ್ಷರ ಸಂಸ್ಕೃತಿ ದೀಪಗಳನ್ನು ಕತ್ತಲೆಯ ಮೂಲೆ ಮುಡುಕುಗಳಲ್ಲಿ ಇಡುವುದು ನಮ್ಮ ಕರ್ತವ್ಯದ ಭಾಗವೇ ಆಗಿದೆ. ಪ್ರತಿಯೊಂದು ತಾಲ್ಲೂಕುಗಳನ್ನು ಇಂಥ ದೀಪಗಳಿಂದ ಬೆಳಗಿಸಬೇಕಾಗಿದೆ. ನಗರ, ಪಟ್ಟಣ ಪ್ರದೇಶಗಳು ಅಕ್ಷರ ಬೆಳಕಿನಿಂದ ಬೆಳಗಿವೆ. ಆದರೆ, ದೂರ ದೂರದ ಕತ್ತಲೆಯ ಜಾಗಗಳೂ ಅಜ್ಞಾತ ವಲಯಗಳೂ ಬೆಳಗುವುದು ಪ್ರಜಾಪ್ರಭುತ್ವದ ಕಾಲದಲ್ಲಿ ಅತಿಮುಖ್ಯವಲ್ಲವೆ? ಈಗ ನಮ್ಮೆಲ್ಲರ ಕಣ್ಣು ಮತ್ತು ಮನಸ್ಸು ಗ್ರಾಮ-ಗ್ರಾಮಾಂತರಗಳಿಗೂ ತಾಲ್ಲೂಕು-ತಾಲ್ಲೂಕಾಂತರಗಳ ಕಡೆಗೂ ಚಾಚಬೇಕಾಗಿದೆ. ಅಲ್ಲಿರುವ ಸಹಸ್ರಾರು ಜ್ಞಾನದಾಹಿಗಳ ಮನಸ್ಸನ್ನು ಅರಳಿಸುವ, ಅಕ್ಷರಲೋಕಕ್ಕೆ ಕರೆದೊಯ್ಯುವ ಕೆಲಸ ಮಾಡಬೇಕಾಗಿದೆ. ಇದಕ್ಕಾಗಿ ಪುಸ್ತಕ ಪ್ರಕಟಣೆಯ ಜತೆಗೆ, ಪುಸ್ತಕ ಮೇಳ, ಪುಸ್ತಕ ಜಾತ್ರೆ ಆಗುವುದು ಅಗತ್ಯ. ಇದು ನೆರವೇರಿದಾಗ 'ಕನ್ನಡ ಪುಸ್ತಕ ಪ್ರಾಧಿಕಾರ' ಎಂಬ ಮಾತಿಗೆ ಬೆಲೆ ಬರುತ್ತದೆ; ಅದಕ್ಕೊಂದು ಸಾಂಸ್ಕೃತಿಕ ಮೌಲ್ಯ ಪ್ರಾಪ್ತವಾಗುತ್ತದೆಂಬ ನಂಬುಗೆ ನನ್ನದು!

ಜ್ಞಾನದ ಹಂಬಲ ಪ್ರತಿಯೊಬ್ಬರಿಗೂ ಉಂಟು! ಈ ಜ್ಞಾನವು ಹಲವು ರೂಪಗಳಲ್ಲಿ ತೋರುತ್ತದೆ. 'ಜ್ಞಾನದ ಬಲದಿಂದ ಅಜ್ಞಾನದ ಕೇಡು' ಎಂದು ಬಸವಣ್ಣನವರು ಹೇಳಿದ್ದುಂಟು!

ಇದು ಆಧುನಿಕ ಜ್ಞಾನಕ್ಕೂ ಅವಲಂಬಿಸುತ್ತದೆ. ಇಪ್ಪತ್ತನೆಯ ಶತಮಾನ ಕಳೆದು ಹೊಸ ಸಹಸ್ರಮಾನದಲ್ಲಿರುವ ನಾವು ಹಲವು ಬಗೆಯ ತೊಡಕುಗಳಲ್ಲಿ ಮತ್ತು ಸಂಕಟಗಳಲ್ಲಿ ಇದ್ದೇವೆ. ಒಂದು ಕಡೆ ಇಪ್ಪತ್ತನೆಯ ಶತಮಾನ ಸಾಹಿತ್ಯಿಕವಾಗಿ ಸಮೃದ್ಧವಾದ ಕಾಲವೇನೋ ನಿಜ. ಮೂಲಜ್ಞಾನದ ಬೇರುಗಳು ಹೊರಹೊಮ್ಮಿ ಹಲವು ಬಗೆಯ ವೈವಿಧ್ಯಗಳಿಂದ ವಿರಾಜಮಾನವಾದ ಕಾಲವೂ ಆಗಿದೆ! ಸಾಹಿತ್ಯಕವಾಗಿ ಎಷ್ಟು ಸಮೃದ್ಧವೋ ಸಾಂಸ್ಕೃತಿಕ-ವಾಗಿಯೂ ಅಷ್ಟೇ ಬಗೆಯ ವಾಗ್ವಾದ ಮತ್ತು ಸಂವಾದಗಳಿಗೆ ಕೂಡಿದ ಕಾಲವಾಗಿದೆ. ಈಗ ಅನೇಕ ತಳವರ್ಗದ ಜನಸ್ಥಾನಗಳು ಮೊದಲಬಾರಿಗೆ ಅಕ್ಷರ ಸೂರ್ಯನಿಗೆ ನಮಸ್ಕರಿಸಿದ್ದುಂಟಷ್ಟೆ. ಜ್ಞಾನಾರ್ಜನೆ ಎಂಬುದು ಒಂದು ಶೈಕ್ಷಣಿಕ ಶಿಸ್ತಾಗಿದೆ. ಆದರೆ, ಇದು ಸಮಾಜದ ಅವಿರತ ಹಾಗೂ ಸದಾಕಾಲವೂ ಹಂಬಲಿಸುವ ಆಶಯ ಆಗಬೇಕು. ಈ ಆಶಯ, ಹಂಬಲ ಹಲವು ಬಗೆಯ ಸಂಕೇತಗಳಲ್ಲೊ, ರೂಪಕಗಳಲ್ಲೊ ಕಾಣಿಸುತ್ತದೆ. ಪಾರಂಪರಿಕ ಜ್ಞಾನ ಮತ್ತು ಆಧುನಿಕ ಜ್ಞಾನ ಇವೆರಡು ಬೇರುಗಳನ್ನು ಕಸಿ ಹಾಕುವ ಅಗತ್ಯ ನಮ್ಮ ಮುಂದಿದೆ. ಪಾರಂಪರಿಕ ಜ್ಞಾನವು ಕೇವಲ ಸಾಹಿತ್ಯಕ ಸಮೃದ್ಧತೆಯ ಕಡೆಗೆ ಮಾತ್ರ ಬೊಟ್ಟು ಮಾಡಿ ತೋರಿಸುತ್ತಿದೆಯೆಂದು ನಾವು ತಿಳಿಯುವಂತಿಲ್ಲ. ಸಮಾಜ-ಸಮುದಾಯಗಳಿಗೆ ಬೇಕಾದ ಹಲವು ಬಗೆಯ ಜ್ಞಾನದ ಕೌಶಲ್ಯಗಳು ನಮ್ಮಲ್ಲಿ ಹಿಂದೆ ಇದ್ದುವು. ೧೮೨೦ರಲ್ಲಿ ಅತ್ಯುತ್ತಮ ತಾಂತ್ರಿಕ ಜ್ಞಾನ ನಮ್ಮಲ್ಲಿದ್ದುದನ್ನು ಹೇಗೋ ಈಗ ಉಳಿದುಕೊಂಡಿರುವ ವಿಲಿಯಂ ಆ್ಯಡಂ ವರದಿಗಳು ತಿಳಿಸುತ್ತವೆ. ಆದರೆ, ನಾವಿಂದು ಈ ಬಗೆಯ ಸ್ಮೃತಿಗಳಿಂದ ಹೊರಗುಳಿದಿದ್ದೇವೆ. ನಮ್ಮ ನಮ್ಮ ಸಂಸ್ಕೃತಿ ಸಮುದಾಯಗಳು ಪಡೆದಿರುವ ಜ್ಞಾನ ಕೌಶಲ್ಯ, ಜ್ಞಾನ ಸಂಪತ್ತನ್ನು -ಈ ಕಾಲದ ಅಗತ್ಯಗಳಿಗೆ ತಕ್ಕಂತೆ ಮರುಜೋಡಣೆ ಮಾಡುವ ಅಗತ್ಯವಿದೆ. ಇಲ್ಲದೆ ಹೋದರೆ, ಕಳೆದುಹೋದ ಕಾಲವು ನಿರ್ವಾತವಾಗಿತ್ತೆಂದೂ ಬರುವ ಕಾಲ ಈ ನಿರ್ವಾತವನ್ನು ತುಂಬುವ ಹಂಬಲವನ್ನು ಹೊತ್ತಿರುವುದೆಂದೂ ತಿಳಿಯುವ ಕ್ಲೈಬ್ಯದಲ್ಲಿ ನಾವು ಮುಳುಗಬೇಕಾಗುತ್ತದೆ! ಈ ಅಜ್ಞಾನದಿಂದ ನಾವು ಎಚ್ಚರಗೊಳ್ಳಬೇಕಾಗಿದೆ. ಹೀಗೆ ಎಚ್ಚರಿಸುವ ಕಾರ್ಯವನ್ನು ನಾಡಿನ ಹಲವಾರು ಸಾಂಸ್ಕೃತಿಕ ಸಂಸ್ಥೆಗಳು ಮಾಡುತ್ತಿವೆ. ಆದರೆ, ಕನ್ನಡ ಪುಸ್ತಕ ಪ್ರಾಧಿಕಾರವು ತನ್ನದೇ ಆದ ಕೆಲವು ನಿರ್ದಿಷ್ಟ ಯೋಜನೆ ಮತ್ತು ಪ್ರಕಟಣ ನೀತಿಸಂಹಿತೆಯಿಂದ ಹೊಸ ಆಕಾರವನ್ನು ಪಡೆಯುವ ಹಂಬಲವನ್ನು ಹೊತ್ತಿದೆ.

ಈ ಹಿನ್ನೆಲೆಯಲ್ಲಿ ಹಲವು ಬಗೆಯ ಮಾಲೆಗಳನ್ನು ಹಿಂದಿನ ವರ್ಷಗಳಿಂದ ಕನ್ನಡ ಪುಸ್ತಕ ಪ್ರಾಧಿಕಾರವು ನಡೆಸಿಕೊಂಡು ಬರುತ್ತಿದೆ. ಹೊಸ ಹೊಸ ಮಾಲೆಗಳು ಈಗೀಗ ಅಸ್ತಿತ್ವಕ್ಕೆ ಬರುತ್ತಿವೆ. ನಮ್ಮ ಹೊಸ ಓದು, ಹೊಸ ನುಡಿಗಟ್ಟು, ಹೊಸ ಸಂವೇದನೆಗಳು ಸಹಸ್ರಮಾನದ ಉದಯಕ್ಕೆ ಸಜ್ಜುಗೊಳ್ಳುವ ಅಗತ್ಯವಿದೆಯೆಂದು ಪುಸ್ತಕ ಪ್ರಾಧಿಕಾರವು ತಿಳಿಯುತ್ತದೆ!

ಶ್ರೀ ಆರ್.ವಿ. ಭಂಡಾರಿ ಅವರು ನಮ್ಮ ನಡುವಿನ ವೈಚಾರಿಕ ಚಿಂತಕರು. ಅವರು ಕಳೆದ ನಾಲ್ವತ್ತು ವರ್ಷಗಳಿಂದ ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರಗಳಲ್ಲಿ ತಮ್ಮದೇ ಆದ ನಿರ್ದಿಷ್ಟ

ನಿಲುವುಗಳನ್ನು ಅಪಾರವಾದ ವೈಚಾರಿಕ ಸಾಮರ್ಥ್ಯವನ್ನು ತೋರಿಸುತ್ತ ಬಂದಿದ್ದಾರೆ. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರಗಳಲ್ಲಿ ವೈಚಾರಿಕ ದೃಷ್ಟಿಕೋನ ಒಂದು ವಿಶಿಷ್ಟ ಆಶಯವನ್ನು ನಮ್ಮ ಮುಂದಿಡುತ್ತದೆ. ಈ ದೃಷ್ಟಿಕೋನಕ್ಕೆ ಶಂಬಾ ಜೋಶಿ, ಪಂಡಿತ ತಾರಾನಾಥ ಮುಂತಾದವರು ಮೊದಲ ಹಂತವನ್ನು; ಗೌರೀಶ ಕಾಯ್ಕಿಣಿ, ಸೇಡಿಯಾಪು ಕೃಷ್ಣಭಟ್ಟ ಎರಡನೆಯ ಹಂತವನ್ನು; ತೇಜಸ್ವಿ, ಅನಂತಮೂರ್ತಿ, ಲಂಕೇಶ್, ಕೆ.ವಿ. ಸುಬ್ಬಣ್ಣ ಮುಂತಾದವರು ಮೂರನೇ ಹಂತವನ್ನು; ದೇವನೂರ ಮಹಾದೇವ, ಮ.ನ. ಜವರಯ್ಯ, ಅರವಿಂದ ಮಾಲಗತ್ತಿ, ಸಿದ್ಧಲಿಂಗಯ್ಯ ಮುಂತಾದ ಅಸಂಖ್ಯಾತರು ನಾಲ್ಕನೇ ಹಂತವನ್ನು ಪ್ರತಿನಿಧಿಸುತ್ತಾರೆ. ಈ ನಾಲ್ಕು ಹಂತಗಳಲ್ಲಿ ಆರ್.ವಿ. ಭಂಡಾರಿ ಅವರು ಮೂರನೇ ಹಂತದಲ್ಲಿ ಬರುತ್ತಾರೆ. ಇವರು ಸಾಹಿತ್ಯ-ಸಂಸ್ಕೃತಿಗಳ ಜತೆಗಿನ ಹೆದ್ದಾರಿ ಮತ್ತು ಕಿರುದಾರಿಗಳಲ್ಲಿ ನಡೆದವರು. ಅವರು ನಡೆಯುವ ಹಾದಿಯಲ್ಲಿ ಮನುಷ್ಯರೂ ಕೆಳಸಮುದಾಯದವರೂ ಒಳನುಗ್ಗಿ ಬರುತ್ತಾರೆ. ಅವರ ಎಲ್ಲ ಲೇಖನಗಳು ಸಾಹಿತ್ಯ, ಸಂಸ್ಕೃತಿ, ಸಮಾಜಗಳಲ್ಲಿ ಅಡಗಿರುವ ಇಡುಗುತಾಣಗಳನ್ನು ಎತ್ತಿತೋರಿಸುತ್ತವೆ.

ಯಾವುದೇ ರಾಜ್ಯದ ಒಟ್ಟು ಅಭಿವೃದ್ಧಿ ಕ್ರಮವನ್ನು ಹಲವು ಬಗೆಗಳಲ್ಲಿ ನೋಡಲು ನಮಗೆ ಅವಕಾಶವುಂಟು! ಧಾರ್ಮಿಕ, ಆರ್ಥಿಕ, ಸಾಮಾಜಿಕ ನೋಟಗಳ ಮೂಲಕವೂ ಈ ಅಂಶವನ್ನು ನೋಡಬಹುದು. ಇವುಗಳನ್ನು ನೋಡುವಾಗ ಭಾಷೆ, ಅಧಿಕಾರ ಮತ್ತು ಜ್ಞಾನ -ಇವು ಮೂರೂ ನಮ್ಮ ಪರಿಶೀಲನೆಗೆ ಒಳಗಾಗುತ್ತವೆ. ಅಂತಿಮವಾಗಿ ಈ ಮೂರೂ ನೆಲೆಗಳನ್ನು ತಿಳಿದರೆ ಸಂಸ್ಕೃತಿ ರಹಸ್ಯವನ್ನು ತಿಳಿದಂತೆಯೇ ಸರಿ. ಹಿರಿಯ ಲೇಖಕ ಆರ್.ವಿ. ಭಂಡಾರಿ ಅವರ ಇಲ್ಲಿಯ ಚಿಂತನಾತ್ಮಕ ಬರೆಹಗಳು ಅಧಿಕಾರ, ಭಾಷೆ ಮತ್ತು ಜ್ಞಾನ -ಈ ಸಾಂಸ್ಕೃತಿಕ ಪರಿಕಲ್ಪನೆಗಳ ನಡುವೆ ಅನುಸಂಧಾನಿಸುತ್ತವೆ; ಹೊಸ ಬಗೆಯ ಅನುಸಂಧಾನಕ್ಕೆ ಅವಕಾಶ ಮಾಡಿಕೊಡುತ್ತವೆ. ನಮ್ಮ ಈ ಹೊತ್ತಿನ ರಾಷ್ಟ್ರೀಯತೆ, ನವರಾಷ್ಟ್ರೀಯತೆ, ಹಿಂದುತ್ವ, ಧರ್ಮನಿರಪೇಕ್ಷತೆ, ಸಾಮರಸ್ಯ, ದೇಶೀಯತೆ, ಭಾವೈಕ್ಯ, ಸಾಂಸ್ಕೃತಿಕ ಪುನರುಜ್ಜೀವನ, ಬ್ರಾಹ್ಮಣ್ಯ, ಬಂಡಾಯ -ಈ ಬಗೆಯ ಸಾಂಸ್ಕೃತಿಕ ಪರಿಭಾಷೆಗಳನ್ನು ಪರಿಕಲ್ಪನೆಗಳನ್ನು ಕಲಾಕೃತಿಗಳ ಜತೆಗೂ ಸಾಹಿತ್ಯ ಕೃತಿಗಳ ಜತೆಗೂ ಇಟ್ಟು ನೋಡಿರುವ ಲೇಖಕರ ದೃಷ್ಟಿಕೋನ ನಮಗೆ ಹೊಸ ತಿಳಿವಳಿಕೆಯನ್ನು ನೀಡುತ್ತವೆ. ಇದು ಪ್ರಾಧಿಕಾರದ ವಿಶಿಷ್ಟ ಕೃತಿ ಪ್ರಕಟಣೆಗಳಲ್ಲಿ ಒಂದೆಂದು ನಾನು ಭಾವಿಸಿದ್ದೇನೆ.

ಈ ಪುಸ್ತಕ ಹೊರಬರುವಲ್ಲಿ ಶ್ರೀ ಆರ್.ವಿ. ಭಂಡಾರಿ ಅವರ ಪಾತ್ರ ದೊಡ್ಡದು. ಪ್ರಾಧಿಕಾರ ಪ್ರಕಟಿಸಲು ಅವರು ಪ್ರೀತಿಯಿಂದ ಅನುವು ಮಾಡಿಕೊಟ್ಟಿದ್ದಾರೆ; ಸದಸ್ಯ ಮಿತ್ರರು ಸಹಕರಿಸಿದ್ದಾರೆ. ಮುದ್ರಕರಾದ ಸ್ನೇಹಾ ಪ್ರಿಂಟರ್ಸ್‌ನ ಶ್ರೀ ಮಹೇಶ್ ಅವರು ತಾಳ್ಮೆ, ಸೌಜನ್ಯದಿಂದ ನಮ್ಮೊಡನೆ ಸಹಕರಿಸಿದ್ದಾರೆ. ಜನಮಾನಸವು ಈ ಕೃತಿಯನ್ನು ಆದರದಿಂದ ಸ್ವಾಗತಿಸಬೇಕೆಂದು ಕೋರುತ್ತೇನೆ.

ಲೇಖಕರ ಮಾತು

ಇಲ್ಲಿಯ ಮೂವತ್ತಮೂರು ಬರಹಗಳನ್ನು ಮೂರು ಭಾಗಗಳಲ್ಲಿ ಶೇಖರಿಸಿದ್ದೇನೆ. ಹೀಗೆ ಮಾಡುವಾಗ ಅವು ಪ್ರಕಟವಾದ ಅನುಕ್ರಮಣಿಕೆಯನ್ನು ಅನುಸರಿಸಲಿಲ್ಲ. ಬದಲಾಗಿ ಒಂದು ಸಂವೇದನೆಯ ಸುತ್ತ ಬರುವ ಬರಹಗಳು ಒಂದೆಡೆ ಸೇರುವಂತೆ ನೋಡಿಕೊಂಡಿದ್ದೇನೆ. ಇದರಿಂದ ಗ್ರಹಿಕೆಗೆ ಹೆಚ್ಚು ಅನುಕೂಲ ಎಂದು ತಿಳಿದಿದ್ದೇನೆ.

ಇಲ್ಲಿಯ ಬರಹಗಳು ಪಂಡಿತಮಾನ್ಯರ ತೃಪ್ತಿಗೆ ಸಮರ್ಥವಾದವು ಎಂಬ ಅತಿ ನಂಬಿಕೆ ನನ್ನದಲ್ಲ. ನಾನು ಇರುವುದೇ, ರಾಜಧಾನಿಯಿಂದ ದೂರದ ಅಂಚಿನ ಹಳ್ಳಿಯಲ್ಲಿ. ಅಲ್ಲಿ ಆಧುನಿಕೋತ್ತರ ಚಿಂತನೆ ನಡೆಯುತ್ತಿದ್ದರೆ ಇಲ್ಲಿ ನಮಗೆ ಇನ್ನೂ ಆಧುನಿಕತೆಯೇ ಬಂದು ಮುಟ್ಟಲಿಲ್ಲ. ಅಲ್ಲಿ ಜಾಗತೀಕರಣ, ದೇಶೀಯತೆಯ ಬಗೆಗಿನ ವಾಗ್ವಾದ ನಡೆಯುತ್ತಿದ್ದರೆ ಇಲ್ಲಿ ನಾವು ಗತಕಾಲದ ದೇಶೀಯತೆಯ ಜಡತ್ವದಿಂದ ಮೇಲೇಳಲೇ ಇಲ್ಲ. ಇದು ನನ್ನ ಜನಗಳ ಸ್ಥಿತಿ. ಇವರು ಒಂದು ಹೆಜ್ಜೆ ಮುಂದಿಡದೆ ನಾನು ಎರಡು ಹೆಜ್ಜೆ ಮುಂದಿಡಲಾರೆ. ಆದ್ದರಿಂದ ನನ್ನೆಲ್ಲ ಬರಹ, ಭಾಷಣ, ಸಂಘಟನೆಯ ಕೆಲಸ, ಸಾಕ್ಷರತೆಯ ಕಾರ್ಯ ಎಲ್ಲವೂ ಹೊಂದಿದ ಮಿತಿಯೂ ಇದೆ.

ಅತ್ಯಂತ ಹಳ್ಳಿಯಲ್ಲಿ ಕುಳಿತು ಬರೆಯುತ್ತಿರುವ ನನ್ನ ಮೇಲೆ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರ ಮತ್ತು ಸದಸ್ಯರ ಹದ್ದಿನ ಕಣ್ಣು ಬಿದ್ದುದು ಬೆರಗಿನ ಸಂಗತಿಯೇ. ನನಗೆ ಇದರಿಂದ ತುಂಬಾ ಸಂತೋಷವಾಗಿದೆ. ಆದ್ದರಿಂದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರಿಗೂ, ಪುಸ್ತಕ ಪ್ರಾಧಿಕಾರದ ಉಳಿದೆಲ್ಲ ಸದಸ್ಯರಿಗೂ ನಾನು ಕೃತಜ್ಞತೆ ಹೇಳಿದಷ್ಟೂ ಕಡಿಮೆಯೆ.

ಇದರಲ್ಲಿಯ ಬರಹಗಳನ್ನು ಪ್ರಕಟಿಸಿದ ಸಂಕ್ರಮಣ, ಕನ್ನಡ ಅಧ್ಯಯನ, ಸಾಧನ, ಜಾನಪದ ಗಂಗೋತ್ರಿ, ಮುಂಗಾರು, ದೃಷ್ಟಿ, ಅಂಬೇಡ್ಕರ ವಾಹಿನಿ, ಕೆಂಬಾವುಟ, ಧ್ಯೇಯನಿಷ್ಠ ಪತ್ರಕರ್ತ, ಲೋಕ ದರ್ಶನ, ನಾಗರಿಕ, ಶ್ರೀ ಚಕ್ರ (ಸಮಾರಂಭ ಸಂಚಿಕೆ), ಅನ್ವೇಷಣೆ, ಜನದನಿ, ಕನ್ನಡ ಸಾಹಿತ್ಯ ಅಕಾಡೆಮಿಯ 'ವಿಚಾರ ಸಾಹಿತ್ಯ', 'ನಮ್ಮ ಸುಬ್ಬಣ್ಣ' ಗ್ರಂಥ, ಕರ್ನಾಟಕ ಸಾಹಿತ್ಯ ಸಮ್ಮೇಳನದ ಸಂಚಿಕೆ, ಆಕಾಶವಾಣಿ ಮೊದಲಾದವುಗಳ ಸಂಪಾದಕರುಗಳಿಗೆ ಕೃತಜ್ಞತೆ.

ಇದರ ಹಸ್ತಪ್ರತಿ ತಯಾರಿಸುವಲ್ಲಿ ಸಹಕರಿಸಿದ ನನ್ನ ಮಗ ವಿಠ್ಠಲನಿಗೂ ನನ್ನ ಕೃತಜ್ಞತೆ. ಅಂದವಾಗಿ ಮುದ್ರಿಸಿಕೊಟ್ಟ ಸ್ನೇಹಾ ಪ್ರಿಂಟರ್ಸ್‌ನವರಿಗೆ, ಮುಖಪುಟ ವಿನ್ಯಾಸಕಾರರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ದಿ: ೧೦-೧೨-೨೦೦೨ — ಆರ್.ವಿ. ಭಂಡಾರಿ

ಪರಿವಿಡಿ

ಭಾಗ-೧

ಭಾಗ-೨

ಭಾಗ-೩

ಭಾಗ-೧

ಸಾಂಸ್ಕೃತಿಕ ಸಂಘರ್ಷಗಳನ್ನು ಗ್ರಹಿಸುವ ವಿಧಾನ ಯಾವುದು?

"ಇದುವರೆವಿಗೂ ಆಗಿ ಹೋಗಿರುವ ಎಲ್ಲ ಸಮಾಜದ ಇತಿಹಾಸವೂ ವರ್ಗ ಹೋರಾಟಗಳ ಇತಿಹಾಸವೆ." ಇದು ಕಮ್ಯುನಿಸ್ಟ್ ಮೆನಿಫೆಸ್ಟೋದ ಮೊದಲ ವಾಕ್ಯ. ಇದರ ಹಿಂದಿರುವ ತತ್ವವೆಂದರೆ, ಹಿಂದೊಂದು ಕಾಲದಲ್ಲಿ ಆದಿ ಸಮಾಜವಾದಿ ಸಮಾಜ (ಪ್ರಿಮಿಟಿವ್ ಕಮ್ಯುನಿಸಂ) ಇತ್ತು. ಮುಂದೆ, ಸಮಾಜ ಮುಂದುವರಿದಂತೆ ಅಂದರೆ ಸಾಮೂಹಿಕ ಉತ್ಪಾದನೆ ಬೆಳೆದಂತೆ ಸಮಾಜದಲ್ಲಿ ವರ್ಗಭೇದ ಉಂಟಾಯಿತು. ಈ ವರ್ಗಗಳಲ್ಲಿ ಅನೇಕ ಮಜಲು, ಕವಲುಗಳು ಇದ್ದರೂ ಮುಖ್ಯವಾದ ವಿಧವೆಂದರೆ ಉಳ್ಳವರು-ಇಲ್ಲದವರು ಎಂದು. ಹೀಗೆ ಉಳ್ಳವರು, ಇಲ್ಲದವರು ಎಂಬ ವರ್ಗವಿಭಜನೆಯಾದಾಗ ಈ ವರ್ಗಗಳ ಮಧ್ಯೆ ಸಂಘರ್ಷ ಸಹಜವಾಗಿ ಹುಟ್ಟಿಕೊಳ್ಳುತ್ತದೆ. ಅದು ಒಮ್ಮೆಲೇ ಕಾಣದಿರಬಹುದು, ಪ್ರತ್ಯಕ್ಷವಾಗಿ ಕಾಣದಿರಬಹುದು ಅಥವ ಎಲ್ಲರಲ್ಲೂ ಕಾಣದಿರಬಹುದು. ಅದೇನೂ ಒಂದು ದಿನದಲ್ಲಿ ಸಂಭವಿಸುವ ಘಟನೆ ಅಲ್ಲವಲ್ಲ. ಈ ಸಂಘರ್ಷ ಸಮಾಜ ಪರಿವರ್ತನೆಗೆ, ಬೆಳವಣಿಗೆಗೆ ಕಾರಣವಾಗುತ್ತದೆ. ಹೀಗೆ ವರ್ಗ ಹೋರಾಟವೇ ಎಲ್ಲ ಸಮಾಜದ ಇತಿಹಾಸವಾಗುತ್ತದೆ. ಇದು ಎಲ್ಲಿ ಯವರೆಗೆಂದರೆ, ಸಮಾಜ ಮತ್ತೆ ಸಮಾಜವಾದಿ ಸಮಾಜ ಆಗುವವರೆಗೆ. ಮುಂದೆಯೂ ನಡೆದೀತು ಬೇರೆ ಬೇರೆ ಕಾರಣಕ್ಕೆ. ಒಟ್ಟಾರೆ ಸಮಾಜವಾದಿ ಸಮಾಜರಚನೆ ಅದರ ಕೊನೆಯ ಗುತ್ತು.

ಅಂದರೆ ಇಲ್ಲಿ ಚರಿತ್ರೆ ಪುನರಾವರ್ತನೆಯಾಗುವುದಾದರೆ ಏನು ಸಾಧನೆಯಾ ದಂತಾಯಿತು? ಎಂಬ ಪ್ರಶ್ನೆ ಏಳಬಹುದು. ಆದರೆ ಚರಿತ್ರೆ ಅದೇ ಚಕ್ರಸುತ್ತಿ ಹೊರಟ ಬಿಂದುವಿಗೇ ಮತ್ತೆ ಬರುವುದಿಲ್ಲ. ಅದರ ಬದಲಾಗಿ ಅದರ ಬಿಂದು ಒಂದು ಉನ್ನತವಾದ ಸ್ಥಾನಕ್ಕೇರುತ್ತದೆ. ಆದಿ ಸಮಾಜವಾದಿ ಸಂದರ್ಭದಲ್ಲಿ ಹಂಚಿ ತಿನ್ನುವ, ಉಳ್ಳವರು ಎಂಬ ಯಜಮಾನರಿಲ್ಲದ, ಆದ್ದರಿಂದ ಒಂದು ಸಾಂಸ್ಕೃತಿಕ ಯಜಮಾನಿಕೆಯಿಲ್ಲದ ಸ್ಥಿತಿ ಇರುತ್ತಿತ್ತು. ಯಾಕೆಂದರೆ ಅಲ್ಲಿ ಮಿಗುತಾಯ ಉತ್ಪತ್ತಿಯೇ ಇರುತ್ತಿರಲಿಲ್ಲ. ಆದರೆ ಅಂತಿಮ ಸಮಾಜವಾದ ಪ್ರಜ್ಞಾಪೂರಕವಾಗಿ ಸ್ಥಾಪಿಸಿ ಕೊಂಡದ್ದಾಗಿರುತ್ತದೆ. ಸಮಾಜದಲ್ಲಿ ಉಂಟಾಗಿರುವ ವರ್ಗ ವಿಭಜನೆಯನ್ನು ತೊಡೆದು ಹಾಕಿ ಸಮಾಜವಾದಿ ವ್ಯವಸ್ಥೆ ತರುವುದಾಗಿರುತ್ತದೆ. ಆಗಲೂ ಅಲ್ಲಿ ಉಳ್ಳವರು ಇಲ್ಲದವರು ಎಂಬ ಭೇದ ಇರುವುದಿಲ್ಲ. ಸಂಸ್ಕೃತಿಯಲ್ಲಿ ವೈವಿಧ್ಯತೆ ಉಂಟಾದರೂ ಅದರಲ್ಲಿ ಒಂದು

ಮೊದಲ ಪ್ರಕಟನೆ: 'ಕನ್ನಡ ಅಧ್ಯಯನ' ಸಂಪುಟ-೨, ಸಂಚಿಕೆ-೩; ೨೦೦೧ ಹಂಪಿ ವಿ.ವಿ.

ಯಜಮಾನ ಆಗಲಾರದು; ಆಗಬಾರದು. ಮೊದಲನೆಯದು ಅನಿವಾರ್ಯ ಸಮಾಜವಾದವಾದರೆ, ಕೊನೆಯದು ಆದರ್ಶ ಸಮಾಜವಾದವಾಗಿರುತ್ತದೆ. ಇಲ್ಲಿ ಇಲ್ಲದವರೆನ್ನುವವರಿರುವುದಿಲ್ಲ. ಅಲ್ಲದೆ ಕೊರತೆ ಕೂಡ ಇರುವುದಿಲ್ಲ. ಇದು ಮೇಲಿನ ಸೂತ್ರಕ್ಕೆ ವ್ಯಾಖ್ಯಾನ.

ಆದರೆ ಸೂತ್ರ ಸಂಶೋಧನೆಯ ಒಂದು ಪರಿಣಾಮ. ಸಮಾಜದೊಳಗಿನ ಅಮೂರ್ತವಾದ, ಸಂಕೀರ್ಣವಾದ ಅಂಶಗಳಿಗೆ- ಸಮಾಜ ಮುಂದುವರಿದಂತೆ ಅದು ಹೆಚ್ಚು ಹೆಚ್ಚು ಸಂಕೀರ್ಣವಾಗುತ್ತ ಹೋಗುತ್ತದೆ- ಒಂದು ಮೂರ್ತರೂಪವಾಗಿರುತ್ತದೆ. ಆದ್ದರಿಂದ ಅದು ಒಂದು ಭಾಷೆಯ ವ್ಯಾಕರಣದಂತೆ ಅನ್ವಯಕ್ಕೆ ದಕ್ಕುವುದಿಲ್ಲ. ಹಾಗೆ ಮಾಡಲೆಳಸಿದಾಗ ತೆಳ್ಳಗಾಗುತ್ತದೆ. ಹಗುರು ಆಗುತ್ತದೆ. ಮತ್ತು ಆಂತರಿಕವಾದ ಮುಖ್ಯ ಆಲೋಚನೆಗೆ ಮುಸುಕೆಳೆಯುತ್ತದೆ.

ಹೀಗೆ ವಿಚಾರ ಮಾಡುತ್ತ ವರ್ಗದ ರಚನೆಯ ಕುರಿತು ಗಮನಿಸಬೇಕಾಗುತ್ತದೆ. 'ವರ್ಗ' ಎನ್ನುವ ಪರಿಕಲ್ಪನೆ ಆರ್ಥಿಕ ಮೂಲವಾದುದು. ವರ್ಗವನ್ನು ಸಿದ್ಧಗೊಳಿಸುವುದು ಆಯಾ ಉದ್ಯೋಗ ಮಾಡುವವರ ಆರ್ಥಿಕ ಸ್ಥಿತಿ, ಉತ್ಪಾದನೆಯಲ್ಲಿ ವಹಿಸುವ ಸ್ಥಾನದಿಂದ. ನಮ್ಮ ನಮ್ಮ ಆರ್ಥಿಕ ಸ್ಥಿತಿಯ ಮೇಲಿಂದ ನಮ್ಮ ಜೀವನದ ರೀತಿ ಉಂಟಾಗುತ್ತದೆ. ನಮ್ಮ ನಂಬಿಕೆ, ವ್ಯವಹಾರಿಕತೆ-ಆರಾಧನೆ ಇತ್ಯಾದಿ ಉಂಟಾಗುತ್ತದೆ. ಆದ್ದರಿಂದ ನಮ್ಮೆಲ್ಲ ಚಟುವಟಿಕೆ, ರೀತಿನೀತಿ, ಹವ್ಯಾಸ, ಅಭ್ಯಾಸ ಇತ್ಯಾದಿಗಳಿಗೆಲ್ಲ ನಮ್ಮ ಆರ್ಥಿಕ ಚಟುವಟಿಕೆ -ಗಳಿಕೆಯೇ ಕಾರಣವಾಗುವುದರಿಂದ, ಆರ್ಥಿಕತೆಯು ವರ್ಗ ಅಡಿರಚನೆ (ಬೇಸ್ ಸ್ಟ್ರಕ್ಚರ್)ಯಾಗಿದೆ. ಇದರಿಂದುಂಟಾಗುವ ಧರ್ಮ, ಸಂಸ್ಕೃತಿ, ಸಾಹಿತ್ಯ ಇತ್ಯಾದಿಗಳಲ್ಲೆ ಮೇಲ್ ರಚನೆ (ಸೂಪರ್ ಸ್ಟ್ರಕ್ಚರ್) ಆಗಿದೆ. ಆದ್ದರಿಂದ ಸಮಾಜ ಪರಿವರ್ತನೆಯಲ್ಲಿ ಅಡಿರಚನೆಯನ್ನು ಭಂಗಪಡಿಸುವುದೇ ಮುಖ್ಯವಾಗುತ್ತದೆ. ಆದರೆ ಮೇಲ್‌ರಚನೆಯಾದ ಧರ್ಮ, ಸಂಸ್ಕೃತಿ, ಸಾಹಿತ್ಯ ಇತ್ಯಾದಿಗಳೂ ಪ್ರಭಾವ ಶಾಲಿಯಾದವೇ ಎನ್ನಲು ಲೋಕದ ಎಲ್ಲ ಕಡೆಗೂ ನಮಗೆ ಉದಾಹರಣೆಗಳು ಇದ್ದೇ ಇವೆ. ಆದರಿಂದಲೇ ಆರ್ಥಿಕತೆಯ ಪರಿವರ್ತನೆಯಾಗುವುದಿಲ್ಲ. ಆರ್ಥಿಕತೆ ಪರಿವರ್ತನೆಗೆ ಮೂಲ ಶಕ್ತಿ ಆದಲ್ಲವಾದ್ದರಿಂದ ಅದು ಮೇಲ್‌ರಚನೆಯಾಗೇ ಸಲ್ಲುತ್ತದೆ.

ಪಾಶ್ಚಾತ್ಯ ದೇಶಗಳಲ್ಲಿಯ ಸಮಾಜ ವರ್ಗಸಮಾಜದ ರೀತಿಯದು. ಉದ್ಯೋಗ ವಿವಿಧದ್ದಾಗಿರಬಹುದು. ಆದರೆ ದಿನನಿತ್ಯದ ವ್ಯವಹಾರ ಹೊರಗೆ-ಒಳಗೆನ್ನದೆ ಒಂದಾಗಿರುತ್ತದೆ. ಸಾಂಸ್ಕೃತಿಕ ಸಂದರ್ಭದಲ್ಲಿ ವೈವಿಧ್ಯತೆ ಇದ್ದರೆ, ಅದು ವರ್ಗ ಅಂತಸ್ತಿನ ಪ್ರಶ್ನೆಯಾಗಿರುವುದಿಲ್ಲ. ಅದನ್ನು ಮೀರಿಯೂ ಅವರು ಒಂದು ವರ್ಗದ ಅಡಿಯಲ್ಲಿ ಬರಬಲ್ಲರು. ಆದ್ದರಿಂದ ಅಲ್ಲಿ ವರ್ಗ ಹೋರಾಟ ನೇರ. ಆದರೆ ಇದೇ ಸೂತ್ರ (ವರ್ಗ ಹೋರಾಟದ ಸೂತ್ರ) ಭಾರತಕ್ಕೂ ಅನ್ವಯವಾಗುತ್ತದೆಯೇ? ಇದಕ್ಕೆ ಉತ್ತರ ಒಮ್ಮುಖವಾದುದಲ್ಲ.

ಭಾರತದಲ್ಲಿ ಇರುವುದು ವರ್ಗ ಸಮಾಜವಲ್ಲ. ಹಿಂದಿನ ಕಾಲದಲ್ಲಂತೂ ಪೂರ್ತಿಯಾಗಿ ಇದು ವರ್ಣ ಮತ್ತು ಜಾತಿಯ ಶ್ರೇಣೀಕರಣಕ್ಕೆ ಒಳಗಾದ ಸಮಾಜವೇ ಇತ್ತು. ಈಗಲೂ

ಅದೇ ಮುಂದುವರಿದಿದೆ. ಜಾತಿಯ ಪ್ರಭಾವ ಕಡಿಮೆಯಾಗಿರ ಬಹುದಾದರೂ ಮೂಲಭೂತವಾದ ಜಾತಿಯ ಭಿನ್ನತೆ ಅಳಿಸಿಹೋಗಲಿಲ್ಲ. ಮುಸ್ಲಿಂ ಮತ್ತು ಕ್ರಿಶ್ಚನ್ ಕೂಡ ಭಾರತೀಯ ಸಮಾಜವೇ ಆಗಿವೆ. ಆದರೆ ಆ ಸಮಾಜ ಹಿಂದುಗಳಲ್ಲಿದ್ದಂತೆ ಜಾತಿಯ ಶ್ರೇಣೀಕರಣಕ್ಕೆ ಒಳಗಾದದ್ದಲ್ಲ. ಆದರೂ ಅಲ್ಲಿ ಧರ್ಮವೇ ವರ್ಗಸಂಘರ್ಷವನ್ನು ಆ ಮುಖಾಂತರ ಸಾಂಸ್ಕೃತಿಕ ಸಂಘರ್ಷವನ್ನು ತಡೆಯುವಲ್ಲಿ ಶಕ್ತವಾಗಿದೆ. ಆದರೆ ಅದು 'ಜಾತಿ'ಯಷ್ಟು ಅಭೇದ್ಯವಾದುದಲ್ಲ. ಅದು 'ಜಾತಿ'ಸಮಾಜವಲ್ಲ. 'ಜಾತಿ'ಯಲ್ಲಿ ಜಾತಿಯೂ ಧರ್ಮವೂ ಕೂಡಿಕೊಂಡು ಇಮ್ಮಡಿ ಶಕ್ತಿಶಾಲಿಯಾಗಿದೆ.

ಪಾಶ್ಚಾತ್ಯರಲ್ಲಿ ವರ್ಗ ಪಲ್ಲಟ ಸಾಧ್ಯ. ಉದ್ಯೋಗ ಪಲ್ಲಟ ಸಾಧ್ಯ. ಹಿಂದೂ ಸಮಾಜದಲ್ಲಿ ವರ್ಗ ಪಲ್ಲಟ ಕಠಿಣ. ಯಾಕೆಂದರೆ 'ಜಾತಿ'ವರ್ಗವನ್ನು ತಡೆಹಿಡಿಯುತ್ತದೆ. 'ಜಾತಿ' ಒಂದೇ ವರ್ಗವನ್ನು ನೂರಾರು ಹೋಳು ಮಾಡಿದೆ. ಇಲ್ಲಿ ಜಾತಿ ಪಲ್ಲಟವೂ ಅಸಾಧ್ಯ. ಆದ್ದರಿಂದ ವರ್ಗ ಸಮಾಜ ಅಸಾಧ್ಯವಾಗಿದೆ. ಜಾತಿಗೆ ಇಲ್ಲಿ ಧಾರ್ಮಿಕ ಸ್ವರೂಪವಿದೆ. ಹಿಂದೂಧರ್ಮದ ಮುಖ್ಯ ಧಾರ್ಮಿಕ ಗ್ರಂಥವಾದ 'ಭಗವದ್ಗೀತೆ'ಯಲ್ಲಿ ಅದನ್ನು ರಚಿಸಿದನೆಂದುಕೊಳ್ಳುವ ಪರಮಾತ್ಮನೇ 'ಗುಣಕರ್ಮಕ್ಕೆ ಅನುಸಾರಿಯಾಗಿ ವರ್ಣವನ್ನು ಸೃಷ್ಟಿಸಿದ್ದೇನೆ' ಎಂದಿದ್ದಾನೆ. ವರ್ಣಸಮಾಜವೆಂದರೆ ಬ್ರಾಹ್ಮಣ ಶ್ರೇಷ್ಠತೆಯನ್ನು, ಶೂದ್ರ ಕನಿಷ್ಠತೆಯನ್ನು ಸಾರುವ ರಚನೆ. ಖರೆ ಎಂದರೆ ಕೃಷ್ಣನಿಂದ ಹೇಳಿಸಿದಂತೆ ಇದೇನೂ ಗುಣಕರ್ಮ ವಿಭಾಗವಲ್ಲ. ಗುಣಕರ್ಮ ವಿಭಾಗ ಪಾಶ್ಚಾತ್ಯ ಸಮಾಜದ್ದು. ಅಲ್ಲಿ ಆಯಾ ಒಲವಿಗೆ, ಉಂಟಾದ ಕುಶಲತೆಗೆ ಅಂದರೆ 'ಗುಣ'ಕ್ಕೆ ತಕ್ಕ ಉದ್ಯೋಗ (ಕರ್ಮ) ಇರುತ್ತದೆ. ಅದು ಹುಟ್ಟಿದ ಮೇಲೆ ಕಲಿಕೆಯೊ, ಪರಿಸರವೊ ಉಂಟು ಮಾಡುವ ರೀತಿ. ಆದರೆ ಹಿಂದೂಸಮಾಜ ಜನರ 'ಗುಣಕರ್ಮ' ಹುಟ್ಟುವ ಮೊದಲೇ ನಿರ್ಧಾರವಾಗಿರುತ್ತದೆ. ಅವರ ಗುಣಕರ್ಮದ ಪ್ರಯೋಗಕ್ಕೆ, ಪರಿಣಾಮಕ್ಕೆ, ಫಲಸಿದ್ಧಿಗೆ ಅವಕಾಶವಿಲ್ಲ. ಆದ್ದರಿಂದ ಇಲ್ಲಿ ಭಂಡಾರಿ ಬಡಿಗ ಆಗಲಾರ, ಬಡಿಗ ಅಗಸ ಆಗಲಾರ. 'ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ' ಎಂಬುದು ಜಾತಿಯ ಸಾಂಸ್ಥಿಕತೆಗೆ ಒಂದು ಪ್ರತಿಭಟನಾತ್ಮಕ ವ್ಯಾಖ್ಯಾನವಾಗುತ್ತದೆಯೇ ಹೊರತು ವಾಸ್ತವವಾದುದಲ್ಲ. ಈಗಿತ್ತಲಾಗಿ ಗ್ರಾಮೀಣ ಪ್ರದೇಶದಲ್ಲೂ ಉದ್ಯೋಗ ಬದಲಾವಣೆ ಅಪರೂಪಕ್ಕೆ ಆಗುವುದುಂಟು. ಉದಾಹರಣೆಗಾಗಿ ನಮ್ಮೂರಿನಲ್ಲೆ ಇಬ್ಬರು ನಾಯ್ಕ ಜಾತಿಯವರು ಆಚಾರಿ (ಬಡಿಗ) ಕೆಲಸ ಮಾಡುತ್ತಾರೆ. (ಇವೆರಡು ಸಮಾನ ಅಂತಸ್ಥಿನ ಜಾತಿಗಳೇ) ಅವರಿಗೆ ನಾವು 'ನಾಯ್ಕ ಆಚಾರಿ' ಎಂದು ಕರೆಯುತ್ತೇವೆ. ಆದರೆ ಅವರು ಎಂದೂ ಆಚಾರಿ ಜಾತಿ ಆದುದಿಲ್ಲ. ಕ್ಷೌರಿಕರು ಬಡಿಗತನ ಮಾಡುತ್ತಾರೆ. ಆದರೆ ಅವರು ಕ್ಷೌರಿಕ ಜಾತಿಯವರೇ. ಇಲ್ಲಿ 'ನಾಯ್ಕ ಬಡಿಗರ'ಜೊತೆ ಜಾತಿ ಬಡಿಗರ ಅಟ್ಟಡುಗೆ ಇಲ್ಲ. ಹಾಗೆಯೇ ನಿಜಬಡಿಗ, ನಾಯ್ಕಬಡಿಗರ ಕೂಡೂಟ 'ಕ್ಷೌರಿಕ ಬಡಿಗರ' ಜೊತೆಗಿಲ್ಲ. ಹೀಗೆ ಜಾತಿ ಚಲನ ರಹಿತವಾಗಿದೆ. ಇದು ಸಮಾಜ ಪರಿವರ್ತನೆಗೆ ದೊಡ್ಡ ಅಡ್ಡಿಯಾಗಿದೆ. ಆದ್ದರಿಂದ ಸಮಾಜ ಪರಿವರ್ತನೆಯ 'ವರ್ಗಹೋರಾಟ'ದ ತತ್ವವನ್ನು ಹಿಂದೂ ಸಮಾಜಕ್ಕೆ, ಅದೆ ಬಹುಸಂಖ್ಯಾತವಾದ್ದರಿಂದ ಭಾರತೀಯ ಸಮಾಜಕ್ಕೆ, ಅನ್ವಯಿಸುವುದು ತಕ್ಕದ್ದಲ್ಲ ಅಥವಾ ವೈಜ್ಞಾನಿಕವಾಗುವುದಿಲ್ಲ ಎನ್ನುವ ಮಾತಿದೆ.

'ಜಾತಿ'ಪದ್ಧತಿ ಇಡಿಯ ಸಮಾಜವನ್ನು ಹೋಳುಹೋಳು ಮಾಡಿದೆ ಎಂದು ಮೊದಲೇ ಹೇಳಿದೆ. ಇದು ಕೇವಲ ಉದ್ಯೋಗದ ವಿಭಜನೆಯಲ್ಲ; ಉದ್ಯೋಗಿಗಳ ವಿಭಜನೆ ಎಂದು ಅಂಬೇಡ್ಕರ ಹೇಳುತ್ತಾರೆ. ವರ್ಣ ವಿಭಜನೆ ಶೂದ್ರಸಮಾಜವನ್ನು ಇಡಿಯಾಗಿ ತಂದಿತ್ತು. ಆದರೆ ಈ ವರ್ಣದಲ್ಲೆ ಉಂಟಾದ ಸಾವಿರಾರು ಜಾತಿ ಒಂದು ಕಡೆಯಾದರೆ, ದಲಿತರೆಂಬ ಒಂದು ದೊಡ್ಡ ಸಮೂಹವನ್ನೇ 'ಮುಟ್ಟಬಾರದ' ಜಾತಿಯನ್ನಾಗಿ ಮಾಡಿತು. ಅದರೊಳಗೂ ಎಡಗೈ, ಬಲಗೈ ಭೇದಗಳಿವೆ. ಹಾಗಾದರೆ ಈ ಜಾತಿ ವಿಭಜನೆಯ ಮೂಲದಲ್ಲೂ ಅರ್ಥಮೂಲ ಇಲ್ಲವೇ? ಇದನ್ನು ಅಲ್ಲಗಳೆಯಲಾಗುವುದಿಲ್ಲ. ಅಂಬೇಡ್ಕರರು ಸ್ಪಷ್ಟವಾಗಿ ಹೇಳುತ್ತಾರೆ: "ಶೂದ್ರರಿಗೆ ಆಸ್ತಿಸಂಪಾದಿಸುವ ಹಕ್ಕು ಇದ್ದಿರಲಿಲ್ಲ. ಹಾಗೆಯೇ ವಿದ್ಯೆ ಕಲಿಯುವ ಹಕ್ಕಿನಿಂದ ದೂರ ಮಾಡಲಾಯಿತು. ಅವರಿಗೆ ಮೇಲು ವರ್ಣ (ಜಾತಿ)ದವರ ಸೇವೆ ಮಾಡುವುದೇ ಕರ್ತವ್ಯ ಎಂದು ನಿಶ್ಚಯಿಸಲಾಯಿತು."[೧] ಆದರೆ ಯಾವ ಯಾವ ಜಾತಿ ಹೆಚ್ಚು ಸಂಪತ್ತನ್ನು ಗಳಿಸಬಲ್ಲದೊ ಆ ಜಾತಿ ಸಮಾಜದಲ್ಲಿ ಹೆಚ್ಚು ಸ್ಥಾನ-ಮಾನ ಗಳಿಸುತ್ತದೆ. ಅದರಲ್ಲಿ ಅತ್ಯಂತ ಹೀನಾಯಮಾನವಾದ ಬದುಕನ್ನು ಸಾಗಿಸುವವರು ದಲಿತರು (ಅಸ್ಪೃಶ್ಯರು). ಅಂದ ಮೇಲೆ ಜಾತಿಯ ಸಾಂಸ್ಥಿಕ ಸ್ವರೂಪದ ಆಡಿಯಲ್ಲೂ ಆರ್ಥಿಕತೆಯ ಪ್ರಬಲವಾದ ಶಕ್ತಿ ಇದ್ದೇ ಇದೆ ಎಂದಾಯಿತು.

ಹೀಗೆ ವರ್ಗ ಹೋರಾಟದ ತತ್ವಜ್ಞಾನ ಇಡೀ ಜಗತ್ತಿಗೇ ಅನ್ವಯಿಸುವಂತಹದು ಎನ್ನುವುದು ಒಂದು ವರ್ಗವಾದರೆ, ಭಾರತದ 'ಜಾತಿಸಮಾಜ'ಕ್ಕೆ ಇದು ಅನ್ವಯಿಸಲಾರದು ಎಂಬುದು ಇನ್ನೊಂದು ವರ್ಗ. ಅಂದರೆ ಜಾತಿ ಎನ್ನುವುದು ಮೇಲ್‌ರಚನೆ ಎನ್ನುವುದು ಒಂದಾದರೆ, ಅದು ಅಡಿರಚನೆಯೇ ಎಂಬುದು ಮತ್ತೊಂದು. "ಜಾತಿ ಎನ್ನುವುದು ಮಾರ್ಕ್ಸ್‌ವಾದಿ ದೃಷ್ಟಿಯಿಂದ ಮೇಲ್‌ರಚನೆಯಾದರೂ ಭಾರತದಲ್ಲಿ ಜಾತಿಮೂಲವಾದ ಅದರ ಉತ್ಪಾದಕ ಸಂಬಂಧ ಅಡಿರಚನಾತ್ಮಕ ವಾದುದು. ಆದ್ದರಿಂದ ಬೇರೆ ಮಾತಿನಿಂದ ಹೇಳುವುದಾದರೆ, ಭಾರತೀಯ ಸಮಾಜದಲ್ಲಿ ತನ್ನ ಚಾರಿತ್ರಿಕ ಪ್ರಕ್ರಿಯೆಯಲ್ಲಿ ಜಾತಿಯ ಒಳಗಡೆ ವರ್ಗವು ಕಾಣಿಸಿಕೊಳ್ಳುವ ಸ್ವರೂಪದ್ದಾಗಿದೆ"[೨] ಎಂದು ಪಾರ್ಥ ಚಟರ್ಜಿ ಅವರು ಹೇಳಿರುವುದು ಸಮಂಜಸವಾಗೇ ಇದೆ. ಈ ಸೂಕ್ಷ್ಮವನ್ನು ಗ್ರಹಿಸಿಯೇ ಡಾ. ಅಂಬೇಡ್ಕರ ಕೂಡ "ಜಾತಿ ಎಂಬುದು ಪರಿವೇಷ್ಟಿತವಾದ ವರ್ಗ"[೩] ಎಂದಿದ್ದಾರೆ. ಇದಕ್ಕೆ ಉದಾಹರಣೆ ಯಾಗಿ 'ಉಳ್ಳವರು ಶಿವಾಲಯವ ಮಾಡುವರು' ಎಂಬ ವಚನವನ್ನು ನೋಡಬಹುದು. ಇಲ್ಲಿನ ಪ್ರತಿಭಟನೆಯ ಸ್ವರೂಪ ಸಂಕೀರ್ಣವಾದುದು; ಶಕ್ತಿಶಾಲಿಯಾದುದು. ಆದರೆ ಅದು ವ್ಯಕ್ತಗೊಂಡ ಸ್ವರೂಪ ಧಾರ್ಮಿಕ (ಸಾಂಸ್ಕೃತಿಕ)ವಾದುದಾಗಿದೆ. ಪ್ರತಿಭಟನೆಯ ಮೂಲ ಆರ್ಥಿಕ ಸಂಬಂಧದಿಂದಲೇ ಪ್ರೇರಿತ. ಆದರೂ ಅದು ಸ್ಪಷ್ಟವಾದ ವರ್ಗ ಸ್ವರೂಪದ್ದಲ್ಲ. ಅಂದರೆ ಪ್ರತಿಭಟನೆ ಸಾಂಸ್ಕೃತಿಕ ರೂಪದಲ್ಲಿ ಪ್ರಕಟಗೊಂಡ ವರ್ಗದ ಪ್ರಕ್ರಿಯೆಯೇ ಆಗಿದೆ ಅಥವಾ ವರ್ಗ ಸಾಂಸ್ಕೃತಿಕ ಸ್ವರೂಪದಲ್ಲಿ ಪ್ರಕಟವಾಗಿಗೆ. ಆದ್ದರಿಂದ ಭಾರತೀಯ ಸಮಾಜದ ಮುನ್ನಡೆ ಸಾಂಸ್ಕೃತಿಕ ಸ್ವರೂಪದ್ದಾಗಿದೆ.

ಇಲ್ಲಿಯ ಮುಖ್ಯವಾದ ಸಂಘರ್ಷ ವೈದಿಕ ಮತ್ತು ಅವೈದಿಕ ಸಂಸ್ಕೃತಿಯ ಮಧ್ಯ ನಡೆದಿದೆ. ಅದು ಮೊದಲು ಆರ್ಯ ಮತ್ತು ಅನಾರ್ಯರಿಂದಿರಬಹುದು. ಆದರೆ ಚರಿತ್ರೆಯ ನಡೆಯಲ್ಲಿ ಅದು ಪ್ರಕಾಶಗೊಂಡದ್ದು ವೈದಿಕ ಮತ್ತು ಅವೈದಿಕ ಎಂದೇ. ಹೀಗೆಂದಾಗ ಮತ್ತೆ ಬೇರೆ ಸಂಘರ್ಷ (ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಇತ್ಯಾದಿಗಳು ವೈದಿಕದ ಮಧ್ಯದಲ್ಲೇ ಸಂಘರ್ಷಕ್ಕೊಳಗಾಗಿವೆ) ನಡೆಯಲಿಲ್ಲ ಎಂದರ್ಥವಲ್ಲ. ಅಂಥ ಸಂಘರ್ಷ ಧಾರ್ಮಿಕವಾಗಿ ದಾಖಲಾಗಿವೆ. ಉದಾಹರಣೆಗಾಗಿ ವೈಷ್ಣವ ಪುರಾಣದಲ್ಲಿ ಪ್ರಹ್ಲಾದ ಚರಿತ್ರೆ ಚಿತ್ರಿತವಾಗುವ ರೀತಿ ನೋಡಬಹುದು. ಪ್ರಹ್ಲಾದ ವಿಷ್ಣು ಭಕ್ತ. ಆತನ ತಂದೆ ಹಿರಣ್ಯಕಶಿಪು ಈಶ್ವರ ಭಕ್ತ. ಅವನ ತಕರಾರೆಂದರೆ 'ತಮ್ಮ ಕುಲದೇವತೆ ಶಿವ; ಮಗನೂ ಅದನ್ನೇ ಅನುಸರಿಸಬೇಕು.' ಇದರಲ್ಲಿ ಆತನನ್ನು ರಾಕ್ಷಸನೆಂದು ಹೆಸರಿಸುವಷ್ಟು ಅಪರಾಧವೇನೂ ಕಾಣದು. ಹಿರಣ್ಯಕಶಿಪು 'ಎಲ್ಲಿ ನಿನ್ನ ವಿಷ್ಣು? ಈ ಕಂಬದಲ್ಲಿದ್ದಾನಾ' ಎಂದು ಕಂಬವನ್ನು ಒದೆಯುತ್ತಾನೆ. ಅದೇ ಕಂಬವನ್ನು ಸೀಳಿಕೊಂಡು ವಿಷ್ಣುವಿನ ಅವತಾರವೆಂಬ ನರಸಿಂಹ ಹೊರಬಂದು ಹಿರಣ್ಯಕಶಿಪುವನ್ನು ಸೀಳುತ್ತಾನೆ. ಪ್ರಹ್ಲಾದ ನರಸಿಂಹನ ಭಜನೆ ಮಾಡುತ್ತ ಇರುತ್ತಾನೆಯೇ ಹೊರತು, ಅಪ್ಪನನ್ನು ರಕ್ಷಿಸಲು ಮುಂದಾಗುವುದಿಲ್ಲ. ಇಂಥ ಒಬ್ಬ ಮಗ ಆದರ್ಶ ಮಗ ಎನ್ನಿಸಿಕೊಳ್ಳಬಹುದೇ? ಆದರೆ ಪ್ರಹ್ಲಾದ ಪರಮಭಕ್ತ ಎನ್ನಿಸಿ ಪೂಜ್ಯನಾಗುತ್ತಾನೆ. ಇದು ವೈಷ್ಣವ ಮಹಿಮೆ.

ಶಿವ ಮುಖ್ಯವಾಗಿ ದ್ರಾವಿಡ ದೇವರು. ಅವನ ವೇಷಭೂಷಣ ನೋಡಿದರೂ ಆತನೊಬ್ಬ ಸಂಚಾರಿ ಜನಾಂಗದ ದೇವರೇ ಇದ್ದಂತಿದೆ. ಸಿಂಧೂ ಸಂಸ್ಕೃತಿಯಲ್ಲೂ ಆತ ಕಾಣಿಸಿಕೊಳ್ಳುತ್ತಾನೆ. ಮುಂದೆ ಈ ಆರ್ಯ-ಅನಾರ್ಯರ ಸಂಘರ್ಷದಲ್ಲಿ (ಆರ್ಯದೇವತೆ ಇಂದ್ರನ ರಾಜ್ಯವಾದ ಸ್ವರ್ಗದ ಮೇಲೆ ರಾಕ್ಷಸರು ಪದೇ ಪದೇ ಧಾಳಿಮಾಡುವುದನ್ನು ಗಮನಕ್ಕೆ ತಂದುಕೊಳ್ಳಬೇಕು). ಶಿವ ಆರ್ಯ ದೇವಬಳಗದಲ್ಲಿ ಸ್ಥಾಪಿಸಲ್ಪಡುತ್ತಾನೆ. ತ್ರಿಮೂರ್ತಿಗಳಲ್ಲಿ ಒಬ್ಬನಾಗುತ್ತಾನೆ. ಆದರೆ ಅದೇನೂ ವಿಷ್ಣುವಿನ ಸಮಾನ ಸ್ಥಾನವಲ್ಲ. ಮುಂದೆ ಪರಮೇಶ್ವರ ಸ್ಥಾನಕ್ಕೆ ಏರುತ್ತಾನೆ. ಇದು ಪರಮ ಪದವಿಯೇ ಹೌದು. ಇದು ಸಂಘರ್ಷದಿಂದ ಉಂಟಾದ ಸಾಮರಸ್ಯ ಕೂಡ ಹೌದು. ಆದರೂ ಒಳಗಿಂದೊಳಗೆ ಸಂಘರ್ಷ ಹೊಗೆಯಾಡುತ್ತಲೇ ಇರುತ್ತದೆ. ಅದೇ ಮುಂದೆ 'ವೀರಶೈವವಾಗಿ' 'ಶೈವಾದ್ವೈತ'ವಾಗಿ ಹೊರಹೊಮ್ಮುವುದನ್ನು ನಾವು ಕಾಣುತ್ತೇವೆ.

ಇದರಂತೆ ಅವೈದಿಕದಲ್ಲಿ ಕೂಡ ಒಳ ಸಂಘರ್ಷ ನಡೆದಿದೆ. ಇದು ಕೂಡ ಆರಾಧನೆಯಲ್ಲಿ ದಾಖಲಾಗುತ್ತದೆ. ಅಂದರೆ ಪ್ರತ್ಯಕ್ಷ ಉಂಟಾಗುವ ಸಂಘರ್ಷ ಸಾಮರಸ್ಯದ ಕಡೆಗೆ ಸಾಗುತ್ತದೆ. ಅದು ಆರಾಧನೆಯಲ್ಲಿ, ಪುರಾಣದಲ್ಲಿ ದಾಖಲಾಗುತ್ತದೆ. ಅದು ಪ್ರತಿಭಟನೆಯ ದಾಖಲೆಯೇ ಆಗಿದ್ದು ಹೋರಾಟದ ಚರಿತ್ರೆಯನ್ನು ತೆರೆದು ತೋರುತ್ತದೆ. ಇಂಥ ಒಂದು ಅವೈದಿಕದೊಳಗಿನ ಜನಾಂಗೀಯ ಸಂಘರ್ಷವನ್ನು 'ಮೈಲಾರಲಿಂಗನ ಮದುವೆ: ಜಾತ್ರೆ'ಯಲ್ಲಿ ಡಾ. ಪುರುಷೋತ್ತಮ ಬಿಳಿಮಲೆ ಕಟ್ಟಿಕೊಡುತ್ತಾರೆ.

"ಮೈಲಾರಲಿಂಗ" ಸಂಬಂಧಿಸಿದ ಮೂರು ಮದುವೆಗಳು ಚರಿತ್ರೆಯ ವಿವಿಧ ಘಟ್ಟಗಳಲ್ಲಿ ಆ ಪರಂಪರೆಯ ಮೂರು ಭಿನ್ನ ಸಮದಾಯಗಳೊಂದಿಗೆ ನಡೆಸಿದ ಸಂಘರ್ಷ ಮತ್ತು

ಏರ್ಪಡಿಸಿಕೊಂಡ ಸಮನ್ವಯ ಎಂದು ತೋರುತ್ತದೆ. ಈ ಮೂರು ಸಮದಾಯಗಳೆಂದರೆ ಕೊಮಾರಿಯ ಮೂಲಕವಾಗಿ ಮೂಲನಿವಾಸಿಗಳಾದ ದಲಿತವರ್ಗ, ಕುರುಬತ್ತೆವ್ವನ ಮೂಲಕ ವಲಸೆಗಾರ ಕುರುಬವರ್ಗ ಮತ್ತು ಗಂಗಮ್ಮನ ಮೂಲಕವಾಗಿ ಆರ್ಥಿಕಾಭಿವೃದ್ಧಿ ಸಾಧಿಸಿದ ವರ್ತಕ ವರ್ಗ. ಇದನ್ನು ಚಾರಿತ್ರಿಕವಾಗಿ ದಲಿತರೊಡನೆ ಏರ್ಪಟ್ಟ ಸಂಘರ್ಷ ಮತ್ತು ಸಮನ್ವಯ ಮೊದಲ ಹಂತದಲ್ಲೂ, ಕುರುಬರೊಡನೆ ಏರ್ಪಟ್ಟ ಸಂಘರ್ಷ ಎರಡನೇ ಹಂತದಲ್ಲೂ ಮತ್ತು ಕೊನೆಯ ಹಂತದಲ್ಲಿ ವರ್ತಕರೊಡನೆ ಸಂಘರ್ಷ ಮತ್ತು ಸಮನ್ವಯಗಳು ಏರ್ಪಟ್ಟವೆಂದೂ ಹೇಳಬಹುದು."[೪]

ಇದು ಹಿಂದೂಧರ್ಮದಲ್ಲಿ ಮಾತ್ರವಲ್ಲ, ಇಸ್ಲಾಂ ಧರ್ಮದಲ್ಲಿ ಸಹ ಯಜಮಾನ ಸಂಸ್ಕೃತಿಯ ವಿರುದ್ಧ ಅಧೀನ ಸಂಸ್ಕೃತಿಯ ಪ್ರತಿಭಟನೆ ನಡೆದದ್ದಿದೆ. ಇದರ ಒಂದು ರೂಪವೇ ಸೂಫಿಪಂಥ. ಸೂಫಿಪಂಥ ಮೂಲಭೂತವಾಗಿ ಇಸ್ಲಾಮಿಗೆ ಭಿನ್ನವಾದುದು. ಅದರ ಚರಿತ್ರೆಯ ಒಂದು ಮೊಗವೇ ಮೂಲಭೂತವಾದಿ ಇಸ್ಲಾಮಿನ ಜತೆಗಿನ ಸಂಘರ್ಷದ ಕಥನ. ಇಸ್ಲಾಮಿನ ಮೂಲಭೂತವಾದದಿಂದ ನಲುಗಿದ ವಿಜಾಪುರದ ಸೂಫಿಗಳೇ ಇದಕ್ಕೆ ಸಾಕ್ಷಿ. "ಭಾರತದಲ್ಲಿ ಸಾಕಾರವಾದಿ ಭಕ್ತರ ಮತ್ತು ನಿರಾಕಾರವಾದಿ ಯೋಗಿಗಳ ನಡುವಣ ಸಂಘರ್ಷವು ಇಸ್ಲಾಮಿನ ಆಗಮನದ ಹಿಂದಿನಿಂದಲೂ ಇದ್ದದ್ದೆ. ವಚನಕಾರರಲ್ಲಿ ಈ ಸಂಘರ್ಷ ಇಷ್ಟಲಿಂಗವಾದಿ ಹಾಗೂ ಆತ್ಮಲಿಂಗವಾದಿಗಳ ನಡುವೆ ಇತ್ತು. ಸೂಫಿ ಅನುಭಾವವು ಇಸ್ಲಾಮ್ ಧರ್ಮ ಹಾಗೂ ಪರ್ಶಿಯನ್ ಆಳುವ ವರ್ಗದ ಜತೆ ಭಾರತಕ್ಕೆ ಬಂದಿತು ನಿಜ. ಆದರೆ ಅದು ಈ ರಾಜಕಾರಣ ಹಾಗೂ ಧರ್ಮಗಳು ಭಾರತವನ್ನು ಮುಖಾಮುಖಿ ಮಾಡಿದ ರೀತಿಗಿಂತ ಬೇರೆ ರೀತಿಯನ್ನು ಅನುಸರಿಸಿತು. ಇಂಡಿಯಾದ ಬೌದ್ಧಸಿದ್ಧ, ನಾಥಸಿದ್ಧ ಮುಂತಾದ ಯೋಗಿಮಾರ್ಗ ದರ್ಶನಗಳ ಜತೆ ತನ್ನ ಸಂವಾದ ಆರಂಭಿಸಿತು. ಈ ಸಂವಾದದ ಫಲವೇ ಕೊಡೇಕಲ್, ಸಾವಳಗಿ, ತಿಂತಿಣಿ, ಶಿರಹಟ್ಟಿ ಪರಂಪರೆಗಳು" ಎಂದು ರಹಮತ್ ತರೀಕೆರೆ ಹೇಳುತ್ತಾರೆ.[೫]

ಇದರ ಸೂಕ್ಷ್ಮವನ್ನು ಗ್ರಹಿಸಬೇಕು. ಕರ್ನಾಟಕದ ಭಕ್ತಿಪಂಥದಂತೆ ಇದು ತನ್ನಲ್ಲಿಯ ಯಜಮಾನ ಸಂಸ್ಕೃತಿಯನ್ನು ಅಂದರೆ ಅದರ ಹೆಜಿಮನಿಯನ್ನು ಪ್ರತಿಭಟಿಸುತ್ತದೆ. ಇದು ಇಷ್ಟಕ್ಕೇ ನಿಲ್ಲುವುದಿಲ್ಲ. ಮುಂದುವರಿದು ಹಿಂದೂ ಮುಸ್ಲಿಮರಲ್ಲಿ ಗುರು-ಶಿಷ್ಯ ಪರಂಪರೆಯನ್ನು ಬೆಳೆಸುತ್ತದೆ. ಅಂದರೆ ಧರ್ಮವೆಂಬ ಉಕ್ಕಿನ ಬೇಲಿಯನ್ನು ಭೇದಿಸಿ ಸಮಾನತೆಯ ಬಂಧುತ್ವವನ್ನು ಹೊಂದಲು ಸಾಧ್ಯವಾಗುತ್ತದೆ. ಇನ್ನೂ ಸ್ಪಷ್ಟಪಡಿಸಬೇಕೆಂದರೆ ಅದು ಧರ್ಮವೆಂಬ ಮೇಲ್ ರಚನೆಯನ್ನು ವಿಚ್ಛೇಧಿಸಿ ವರ್ಗದ ಸ್ವಭಾವವನ್ನು ಹೊಂದುತ್ತದೆ. ಇದು ಚರಿತ್ರೆಯಲ್ಲಿ ಆಗಾಗ ಕಾಣಿಸಿಕೊಂಡಿದ್ದಿದೆ. ಒಂದರ್ಥದಲ್ಲಿ ಇದು ಸಾಂಸ್ಕೃತಿಕ ರೂಪದಲ್ಲಿ ನಡೆದ ವರ್ಗ ಸಮರ ಎಂದರೆ ತಪ್ಪಾಗಲಾರದು. ಇದು ಭಾರತದ ಚರಿತ್ರೆ ತೆರೆದು ತೋರುವ ಕುತೂಹಲಕಾರಿಯಾದ ಅಂಶವಾಗಿದೆ.

ಆದರೆ ಈ ಎಲ್ಲ ಸಂಘರ್ಷಗಳೂ ವರ್ಗ ಸಮಾಜದಲ್ಲಿ ಬೇರೆಬೇರೆ ಸಂದರ್ಭದಲ್ಲಿ ಏರ್ಪಡುವ ಉಪಸಂಘರ್ಷದಂತಿರುತ್ತವೆಯೇ ಹೊರತು, ಮುಖ್ಯ ಸಂಘರ್ಷವಾಗಿರುವುದಿಲ್ಲ.

ಆದರೆ ವೈದಿಕ ಮತ್ತು ಅವೈದಿಕದ ಮಧ್ಯೆ ನಡೆಯುವ ಸಂಘರ್ಷ 'ಜಾತಿಸಮಾಜ'ದ ಮುಖ್ಯವಾದ ಸಾಂಸ್ಕೃತಿಕ ಸಂಘರ್ಷವಾಗಿರುತ್ತದೆ. ಇದೂ ಕೂಡ ಕಾವ್ಯ, ಪುರಾಣ, ಆರಾಧನೆಯ ರೂಪದಲ್ಲಿ ತಲೆ ಮರೆಸಿಕೊಂಡಿರುತ್ತದೆ. ಇದು ಚರಿತ್ರೆ ನಮಗೆ ಕೊಡುವ ಒಳನೋಟವಾಗಿರುತ್ತದೆ. ಇಂಥ ಒಂದು ವೈದಿಕ ಮತ್ತು ಅವೈದಿಕ ಸಾಂಸ್ಕೃತಿಕ ಮುಖಾಮುಖಿಯನ್ನು ರಾಜಾರಾಮ ಹೆಗಡೆ ತಮ್ಮ 'ಬಲಿ-ವಾಮನ-ವಿಕ್ರಮ' ಎಂಬ ಬರಹದಲ್ಲಿ ವಿವರಿಸುತ್ತಾರೆ.[೬]

ಇಂದ್ರ ವೇದಕಾಲೀನ ದೇವತೆ. ಆತನೇ ಮಳೆಯ ದೇವತೆ ಕೂಡ. ಅಂದರೆ ಕೃಷಿ ದೇವತೆ ಕೂಡ ಆಗುತ್ತಾನೆ. ಅವನು ವರ್ಣಧರ್ಮದ ರಕ್ಷಕ. ಅವೈದಿಕ- ಅಸುರರೊಡನೆ ಆತನ ಅನೇಕ ಯುದ್ಧಗಳು ನಡೆಯುತ್ತವೆ. ಅದರಲ್ಲಿ ಆತ ಜಯಶಾಲಿಯಾಗುತ್ತಾನೆ. ಆತ ವೈರಿಗಳ ಪುರಗಳನ್ನು ನಾಶ ಮಾಡಿ ಆರ್ಯರನ್ನು ರಕ್ಷಿಸುತ್ತಾನೆ. ಆದ್ದರಿಂದಲೇ ಆತ ಪುರಂಧರ ಕೂಡ.

ವೇದಕಾಲವೇನೂ ಸ್ಥಗಿತ ಭೂಖಂಡದ್ದಾಗಿರಲಿಲ್ಲ. ಕಾಲಕಳೆದಂತೆ ಆರ್ಯಾವರ್ತದ ವಿಸ್ತೀರ್ಣವೂ ನಡೆಯುತ್ತದೆ. ಹಾಗೆ ಆಗುವಾಗ ಅನೇಕ ಸಂಘರ್ಷವೂ ಎದುರಾಗುವುದು ಸಹಜ. ಅದು ಕ್ಷುಲ್ಲಕವಾದಾಗ ನಾಶಮಾಡಲಾಗುತ್ತದೆ. ಎದುರಿನದು ಭೌತಿಕ ಶಕ್ತಿಯಿಂದಲೂ ಸಾಂಸ್ಕೃತಿಕ ಹಿರಿಮೆಯಿಂದಲೂ ಕೂಡಿದ್ದಾಗ ಜಯಿಸ ಲಾಗುವುದಿಲ್ಲ. ಅದರೊಡನೆ ಸಂಧಾನ-ಸಾಮರಸ್ಯ ನಡೆಯಬೇಕಾಗುತ್ತದೆ. ಆದ್ದರಿಂದಲೇ ಆರ್ಯಾವರ್ತ ವಿಸ್ತೀರ್ಣವಾದಂತೆ ಅದು ಬೇರೆ ಬೇರೆ ಸ್ಥಳಿಕ ಸಂಪ್ರದಾಯವನ್ನು, ದೇವರನ್ನು ಒಳಗೊಳ್ಳಬೇಕಾಗುತ್ತದೆ. ತಾತ್ಕಾಲಿಕವಾದ ಸಂಘರ್ಷ ಒಂದು ನಿಶ್ಚಯಕ್ಕೆ ಬಂದರೂ, ಅದರ ಸಾಂಸ್ಕೃತಿಕ ಪರಿಣಾಮ ಮುಂದುವರಿಯುತ್ತದೆ. ಯಾಕೆಂದರೆ ಅದು ಮಾನಸಿಕವಾದ ಮತ್ತು ದೈವಿಕವಾದ ಪ್ರಭಾವದಲ್ಲಿ ತನ್ನ ವಿರೋಧಿಗಳನ್ನೂ ಹತ್ತಿರತರಲು ಶಕ್ತವಾಗುತ್ತದೆ. ಆದರೆ ಇದೇನೂ ಸರಳ ರಚನೆಯಲ್ಲ. ಮೊದಲೇ ಇರುವ ಅಥವಾ ಬೇರೆಯಾದ ಪ್ರತೀಕ, ಪುರಾಣದೊಡನೆ ಹೊಸ ಪುರಾಣವಾಗಿ ಸೇರ್ಪಡೆಯಾಗುತ್ತದೆ. ಹಾಗೆ ಸೇರ್ಪಡೆಯಾಗಿ ಬೇರೆಬೇರೆ ರೀತಿಯಿಂದ ಜನಪ್ರಿಯವಾದ ಕತೆ 'ಬಲಿ'ಯದು. ಸಂಸ್ಕೃತ ಸಾಹಿತ್ಯದಲ್ಲಿ ವೇದೋತ್ತರ ಕಾಲದಲ್ಲಿ ಇದು ಹೆಚ್ಚು ಬೆಳೆದುಬಂತು.

ಇಂದ್ರನು ವೇದಕಾಲದ ಮಳೆಯ, ಕೃಷಿಯ ದೇವತೆ ಎಂದು ಮೊದಲೇ ಹೇಳಿದೆ. ಮುಂದೆ ಇದರ ಜೊತೆ 'ಬಲಿ' ಕೂಡ ಕೃಷಿಯ ದೇವತೆಯಾಗಿ ಸೇರ್ಪಡೆಯಾಗುತ್ತಾನೆ. ಹಿಂದಿನಿಂದ ಇರುವ 'ದೀಪಾವಳಿ' ಆಚರಣೆಗೂ ಬಲಿಪೂಜೆಗೂ ಗಂಟು ಬೀಳುತ್ತದೆ. ಹಾಗೆಯೇ ಕೃಷಿಗೆ ಸಂಬಂಧಿಸಿದ ಗೋಪೂಜೆಯೇ ಮೊದಲಾದ ಆಚರಣೆಗಳೂ ಸೇರ್ಪಡೆಯಾಗುತ್ತವೆ. 'ಬಲಿ' ಒಬ್ಬ ಅನಾರ್ಯ ದೇವತೆ. ಸ್ಥಳಿಕವಾದ ಕೃಷಿದೇವತೆಯಾದರೂ ಅವೈದಿಕ ಪ್ರಪಂಚದಲ್ಲಿ ಪ್ರಚಲಿತವಾಗಿದ್ದಿರಬೇಕು. ವೈದಿಕ ಕೃಷಿ ದೇವತೆಯಾದ ಇಂದ್ರನಿಗೂ ಅವೈದಿಕ ಕೃಷಿ ದೇವತೆಯಾದ ಬಲಿಗೂ ಸಂಘರ್ಷ ವೇರ್ಪಡುತ್ತದೆ. ಇಲ್ಲಿ ಅವೈದಿಕ ದೇವತೆಯಾದ 'ಬಲಿ'ಯನ್ನು ವೈದಿಕ ತನ್ನ ತೆಕ್ಕೆಯಲ್ಲಿ ತೆಗೆದುಕೊಳ್ಳುವ ಹುನ್ನಾರೇ ಬಲಿಯ ಕುರಿತಾದ ಜನಪ್ರಿಯ ಪುರಾಣಕತೆ 'ಬಲಿ-ವಾಮನ' ಚರಿತ್ರೆಯಾಗಿದೆ.

ವೇದೋತ್ತರ ಕಾಲದಲ್ಲಿ ಇಂದ್ರನ ಶಕ್ತಿ ಕ್ಷೀಣವಾಗುತ್ತದೆ. ವಿಷ್ಣುವೇ ಸರ್ವಶಕ್ತನಾದ ದೇವರಾಗುತ್ತಾನೆ. ವಿಷ್ಣುವು ವೈದಿಕ ದೇವತೆಯಾಗಿದ್ದು ಸದಾ ವರ್ಣಧರ್ಮವನ್ನು ರಕ್ಷಿಸುತ್ತಾನೆ. ಬಲಿ ಸ್ವರ್ಗರಾಜ್ಯದ 'ಇಂದ್ರ' ಪದವಿಯನ್ನು ಅದಕ್ಕೆ ತಕ್ಕದ್ದಾದ ಯಜ್ಞ ಮತ್ತು ಬ್ರಾಹ್ಮಣರಿಗೆ ದಾನ ಮಾಡುವ ಮೂಲಕವೇ ಪಡೆಯಲು ತಂತ್ರವನ್ನು ರೂಪಿಸುತ್ತಾನೆ. ಈಗ ಇಂದ್ರ ವಿಷ್ಣುವಿನ ಮೊರೆ ಹೋಗುತ್ತಾನೆ. ವಿಷ್ಣು ವಾಮನ ಅವತಾರ ತಾಳಿ ಬಲಿಯ ಕಡೆ ಬಂದು, ತನಗೆ ಮೂರು ಹೆಜ್ಜೆ ನೆಲ ದಾನಕೊಡಬೇಕೆಂದು ಕೇಳುತ್ತಾನೆ. ಕೇಳಿದ್ದನ್ನು ಕೊಡುವುದು ಆತನ ಮಾತಾದ್ದರಿಂದ ಬಲಿ ಅದಕ್ಕೆ ಒಪ್ಪುತ್ತಿದ್ದಂತೆ ವಾಮನ ತ್ರಿವಿಕ್ರಮನಾಗಿ ಬೆಳೆಯುತ್ತಾನೆ. ತನ್ನೆರಡು ಹೆಜ್ಜೆಗಳಿಂದ ಭೂಮ್ಯಾಕಾಶವನ್ನು ಪಡೆದ ವಾಮನ ಮೂರನೇ ಹೆಜ್ಜೆಯನ್ನು ಬಲಿಯ ನಿರ್ದೇಶನದಂತೆ ಆತನ ತಲೆಯ ಮೇಲೆ ಇಟ್ಟು ಪಾತಾಳಕ್ಕೆ ತಳ್ಳುತ್ತಾನೆ. ಅಲ್ಲಿ ಆತ ಪಾತಾಳದ ರಾಜನಾಗಿರುತ್ತಾನೆ. ಆದರೆ ವಿಷ್ಣುವಿನ ಬಂಧನದಲ್ಲಿ ಇರುತ್ತಾನೆ. ಬಲಿ ವಿಷ್ಣುವಿನ ಭಕ್ತನೂ ಆಗಿರುವುದರಿಂದ ಅವನಿಗೆ ದೈವತ್ವವನ್ನು ಕರುಣಿಸುತ್ತಾನೆ. ಈಗಿನ ಕಲ್ಪದಲ್ಲಿ ಇಂದ್ರನೇ 'ದೇವೇಂದ್ರ'ನಾಗಿ ಮುಂದಿನ ಕಲ್ಪದಲ್ಲಿ ಬಲಿ 'ಬಲೀಂದ್ರ'ನಾಗುವ ವರ ಕೊಡುತ್ತಾನೆ. ಹೀಗೆ ವೈರಿಯಾದ ಬಲಿ ಭಕ್ತ ಶಿರೋಮಣಿಯಾಗುತ್ತಾನೆ. ಮುಂದಿನ ಕಲ್ಪದಲ್ಲಿ ಇಂದ್ರನಾಗುವ ಭರವಸೆಯಲ್ಲಿ ಇರುತ್ತಾನೆ. ಈ ಎಲ್ಲ ಪದವಿಗಳ ನಿಯಂತ್ರಕ ವೈದಿಕ ಪರವಾದ ವಿಷ್ಣು ಆಗುತ್ತಾನೆ. ಹೀಗೆ ಪೊಲಿ-ಹೊಲಿ-ಕೃತಿಯ ದೇವತೆಯಾದ ಬಲಿ, ವೈದಿಕಕ್ಕೆ 'ಬಲಿ'ಯಾಗುವ ಕತೆಯ ತಿರುಳನ್ನು ಈ ಪುರಾಣ ಸಾಬೀತುಪಡಿಸುತ್ತದೆ.

ಬಲಿಯ ಈ ಪುರಾಣವನ್ನು ಬ್ರಾಹ್ಮಣ್ಯದ ಶ್ರೇಷ್ಠತೆಯನ್ನು ಎತ್ತಿಹಿಡಿಯಲು ಅಲ್ಲಲ್ಲಿ ಉಪಯೋಗಿಸಲಾಗುತ್ತದೆ. ಮಹಾಭಾರತದಲ್ಲಿ ಭೀಷ್ಮ ಧರ್ಮರಾಜನಿಗೆ ರಾಜ ತನ್ನ ಸೋಲಿನಲ್ಲಿ ಕುಗ್ಗದೆ ಹೇಗೆ ಇರಬೇಕೆಂಬ ಬಗ್ಗೆ ಉದಾಹರಣೆಗಾಗಿ ಬಲಿಯ ಕತೆಯನ್ನು ಹೇಳುತ್ತಾನೆ. ಅಲ್ಲಿ ಇಂದ್ರ ಬಲಿಯನ್ನು ಭೆಟ್ಟಿಯಾದಾಗ ಬಲಿಯೇ "ನನಗೆ ಈಗ ವಿಕ್ರಮ ಕಾಲವಲ್ಲ. ಇದು ಕ್ಷಮಾ ಕಾಲ. ಕಾಲವೇ ಎಲ್ಲರನ್ನು ಎತ್ತುತ್ತದೆ ಹಾಗೂ ತುಳಿಯುತ್ತದೆ. ಈ ಎಲ್ಲದರ ಹಿಂದೆ ಯಾವುದೋ ಶಕ್ತಿ ನಮ್ಮನ್ನು ಆಡಿಸುತ್ತದೆ. ಒಮ್ಮೆ ನಾನು ಇಂದ್ರನಾಗಿದ್ದೆ. ಇಂದು ನೀನು ಇಂದ್ರನಾಗಿರುವಿ. ಮುಂದೆ ನನ್ನ ಸರದಿ ಬರುತ್ತದೆ...." ಮುಂತಾಗಿ ಹೇಳುತ್ತಾನೆ. ಆಗ ಅವನಲ್ಲಿದ್ದ ಸ್ತ್ರೀದೇವತೆ ಹೊರ ಬಂದು "ಆಗ ಈ ಬಲಿ ತಪಸ್ಸು, ಸತ್ಯ, ವ್ರತ ಪರಾಕ್ರಮಗಳಿಂದ ಕೂಡಿದ್ದಾಗ ನಾನು ಆತನಲ್ಲಿ ನೆಲೆಸಿದ್ದೆ. ಈತ ಸದಾ ಬ್ರಾಹ್ಮಣರನ್ನು ಗೌರವಿಸಿ ಜೀತೇಂದ್ರಿಯನಾಗಿದ್ದ. ಆದರೆ ಈಗ ಬ್ರಾಹ್ಮಣರನ್ನು ಅಸೂಯೆಯಿಂದ ನೋಡುತ್ತಾನೆ"[೬] ಎಂದು ಹೇಳಿ ಇಂದ್ರನ ದೇಹದಲ್ಲಿ ಪ್ರವೇಶಿಸುತ್ತಾಳೆ.

ವಿಷ್ಣುವು ಕ್ಷತ್ರಿಯ ದೇವತೆಯಾದರೂ ವಾಮನ (ಬ್ರಾಹ್ಮಣ)ನಾಗಿ ಅವತಾರ ಎತ್ತುತ್ತಾನೆ. ಹೀಗೆ ಕ್ಷತ್ರಿಯ ಮತ್ತು ಬ್ರಾಹ್ಮಣರ ಮೇಲ್ಮೆಯನ್ನು ಸಾಧಿಸಲಾಗುತ್ತದೆ. ಮತ್ತು ಅವರ ವರ್ಗ ಸ್ವಭಾವವೂ ಅಲ್ಲಿ ಪ್ರಕಟವಾಗುತ್ತದೆ. ವಿಷ್ಣು ಅನೇಕ ಅವತಾರವನ್ನೆತ್ತಿ ವರ್ಣಧರ್ಮವನ್ನು ರಕ್ಷಿಸುತ್ತಾನೆ. ಆದರೆ ಇಷ್ಟೇ ಆಗುವುದಿಲ್ಲ. ಅಲ್ಲಿ ಅವೈದಿಕರಾದರೂ ಪರಮಭಕ್ತರಿಗೆ ದೈವಿಕ

ಪದವಿಯನ್ನು, ಪೂಜೆ ಪುನಸ್ಕಾರವನ್ನು ಕೊಡುತ್ತಾನೆ. ಹೀಗೆ ಮಾಡುವುದರ ಮೂಲಕ ಸ್ಥಳಿಕ ಸಂಸ್ಕೃತಿಯನ್ನೂ (ಅವೈದಿಕ ಸಂಸ್ಕೃತಿಯನ್ನು) ಆಂಶಿಕವಾಗಿ ಒಳಗೊಳ್ಳುವಂತಾಗುತ್ತದೆ. ಇದೊಂದು ವೈದಿಗ ಸಂಸ್ಕೃತಿಯ ವಿಸ್ತರಣೆಯೂ ಆದಂತೆ ಸಾಮರಸ್ಯದ ಕಡೆ ಇಡುವ ಹೆಜ್ಜೆಯೂ ಆಗುತ್ತದೆ. ಹಾಗೆ ಆಗುತ್ತಲೇ "ಒಟ್ಟಿನಲ್ಲಿ ಸಂಸ್ಕೃತ ಪೌರಾಣಿಕ ವಿಷ್ಣುವಿಗೆ ವೈದಿಕ-ಅವೈದಿಕ ಸಂಸ್ಕೃತಿಗಳನ್ನೆಲ್ಲ ಒಳಗೊಂಡ ರಾಜ್ಯ ಸಂಸ್ಕೃತಿಯ ಪರದೈವವಾಗಬಲ್ಲ ಎಲ್ಲ ಲಕ್ಷಣಗಳೂ ಬೆಳೆಯುತ್ತವೆ. ಈ ಲಕ್ಷಣಗಳನ್ನು ನಿರೂಪಿಸುವ ಸಂಸ್ಕೃತ ಸಾಹಿತ್ಯವೂ ಈ ಮೂಲಕ ಒಂದು ಪುರೋಹಿತ ಯಜಮಾನ ಸಂಸ್ಕೃತಿಯನ್ನು ಸೃಜಿಸುತ್ತದೆ."[೮]

ಇದು ಪೌರಾಣಿಕ ಕಾಲಕ್ಕೆ ಮುಗಿದು ಹೋಯಿತೆಂದು ಗ್ರಹಿಸಬೇಕಿಲ್ಲ. 'ವರ್ತಮಾನ ಪತ್ರಿಕೆಯ ತುಂಬ ಭೂತದ ಸುದ್ದಿ'ಯ ಪ್ರಕಟನೆ ಇದ್ದೇ ಇರುತ್ತದೆ. ಇದಕ್ಕೆ ಉದಾಹರಣೆಯಾಗಿ ಬಲಪಂಥೀಯ ರಾಜಕಾರಣ ತಂತ್ರವನ್ನೇ ನೋಡಬಹುದು. ಸನಾತನತೆಯನ್ನು ಎತ್ತಿಹಿಡಿಯುತ್ತೇನೆಂದು ಘಂಟಾಘೋಷವಾಗಿ ಸಾರಿಕೊಳ್ಳದ ಈ ರಾಜಕಾರಣವು, ತನ್ನ ಅಧಿಕಾರ ಸ್ಥಾಪನೆಗೆ ದಲಿತರನ್ನು ಒಳಗೆ ಹಾಕಿಕೊಳ್ಳುವ ಅನಿವಾರ್ಯತೆಯನ್ನು ಮನಗಂಡೇ ದಲಿತರನ್ನು ಉನ್ನತ ಪದವಿಗೇರಿಸುತ್ತದೆ- ತನ್ನ ಭಕ್ತನಾದ ಬಲಿಯನ್ನು ದೇವ ಪದವಿಗೆ ಏರಿಸಿದಂತೆ. ಆದರೆ ಆಟ ಆಡಿಸುವ ಸೂತ್ರ ವಿಷ್ಣುವಿನ ಕೈಯಲ್ಲೇ ಇರುತ್ತದೆ. ಮೂರುದಿನ ತನ್ನ ಜನರನ್ನು ಕಂಡುಬರಲು ವಿಷ್ಣುವಿನ ಅಪ್ಪಣೆ ಪಡೆದೇ ಬಲಿ ಪಾತಾಳದಿಂದ ಭೂಮಿಗೆ ಬರಬೇಕಾಗುತ್ತದೆ. ಅಂದರೆ 'ಬಲಿಯ ಭಾಗ್ಯ ಮೂರು ದಿನ'. ಹೀಗಿದ್ದಾಗಲೂ ಜಾನಪದ ತನ್ನ ಪ್ರತಿಭಟನೆಯನ್ನು ತನ್ನದೇ ಆದ ರೀತಿಯಲ್ಲಿ ಆಚರಣೆಯಲ್ಲಿ ಸ್ಥಾಪಿಸಿರುತ್ತದೆ. ಇದಕ್ಕೆ ಬಲಿಯ ಕುರಿತಾದ ಜನಪದ ಕಾವ್ಯವೇ ಸಾಕ್ಷಿಯಾಗಿದೆ.

ಜನಪದ ಸಾಹಿತ್ಯದಲ್ಲಿ ಬಲಿಪೂಜೆಯ ವಿವರ ನೋಡಿದರೆ ಜನಪದರಿಗೆ ಇವೆಲ್ಲದರ ಪರಿಚಯವೇ ಇಲ್ಲವೇನೊ ಎನ್ನುವ ಹಾಗಿಲ್ಲ. ಯಾಕೆಂದರೆ ಪುರಾಣ-ಪ್ರವಚನ, ಹರಿಕಥೆಗಳ ಮೂಲಕ ಶಿಷ್ಟ ಪುರಾಣಗಳು ತೀರ ಕೊನೆಯವರೆಗೂ ಪರಿಚಿತವಾ ದವುಗಳೇ ಇರುತ್ತವೆ. ಹಿಂದೂ ಅನ್ನುವ ಪರಂಪರೆಯಲ್ಲಿ ಅನೇಕ ವೈರುಧ್ಯಗಳ ಮಧ್ಯೆಯೂ ಒಂದಕ್ಕೊಂದು ಕೊಂಡಿ ಕೂಡಿಕೊಂಡಿರುವುದು ಇದರಿಂದ ಸಾಧ್ಯವಾಗಿದೆ. ಅದು ಇಡೀ ಭಾರತದ ಗುಂಟ ಒಂದು ಸಾಂಸ್ಕೃತಿಕ ಸಂಬಂಧವನ್ನು ತಂದಿದೆ. ಆದ್ದರಿಂದಲೇ ಇಲ್ಲಿಯ ಸಾಂಸ್ಕೃತಿಕ ಸಂಘರ್ಷ ಕೂಡ ಈ ಚೌಕಟ್ಟನ್ನು ಹಿಗ್ಗಿಸುವ ಮಟ್ಟದಲ್ಲೇ ನಡೆಯುತ್ತದೆ.

'ಬಲಿ' ಕೃಷಿಯ ದೇವರು ಎಂದು ಈಗಾಗಲೇ ಹೇಳಲಾಗಿದೆ. ವೈದಿಕಕ್ಕೆ ಇಂದ್ರ ಇದ್ದ ಹಾಗೆ ಅವೈದಿಕಕ್ಕೆ ಬಲಿ. ಅವನೇ ಬಲೀಂದ್ರ. ಬಲೀಂದ್ರ ಹಬ್ಬಕ್ಕೆ 'ದೊಡ್ಡಹಬ್ಬ' ಎನ್ನುತ್ತಾರೆ. ಬ್ರಾಹ್ಮಣ-ಶೂದ್ರರಲ್ಲೂ ಈ ಹಬ್ಬ ಬ್ರಾಹ್ಮಣ ಪಂಚಾಂಗದಂತೆಯೇ ನಡೆಯುತ್ತದೆ. ಆದರೂ ಇದು ಮುಖ್ಯವಾಗಿ ಹೆಣ್ಣು ಮಕ್ಕಳ ಮುಖಾಂತರವೇ ನಡೆಯುತ್ತಿದೆ. ಹಬ್ಬದ ಮುನ್ನಾದಿನ 'ಬೂರಜ್ಜೆ'ಯನ್ನು ತರಲಾಗುತ್ತದೆ. 'ಬೂರಜ್ಜೆ'ಯೆಂಬುದು ಮಾತೃದೇವತೆ ಎನ್ನಲಾಗಿದೆ. ಬಲೀಂದ್ರ ಭೂಮಿಯ ಮಗನೂ ಹೌದಾಗಿ ಬಲಿಯ ಸಂಗಡ ಮಾತೃದೇವತೆಯೂ ಪೂಜಿಸಲ್ಪಡುತ್ತಾಳೆ.

ಕೃಷಿಯು ಮಹಿಳೆಯ ಸಂಶೋಧನೆಯಾಗಿದ್ದು ಅವಳೇ ಅದರ ಮೊದಲ ಯಜಮಾನಿ. ಅನಂತರ ಅದು ಪುರುಷ ಯಾಜಮಾನ್ಯಕ್ಕೆ ಒಳಗಾದುದು. ಆದರೂ ಕೂಡ ಮಾತೃಪ್ರಾಧಾನ್ಯತೆಯ ನೆನಪಾಗಿ ಧಾರ್ಮಿಕ-ಆಚರಣೆಯಲ್ಲಿ ಉಳಿದುಕೊಂಡಿದೆ.

ಬಲಿಪೂಜೆ ಮುಖ್ಯವಾಗಿ ಹೆಂಗಸರದಾಗಿದೆ ಎಂದು ಮೇಲೆ ಹೇಳಿದರೂ, ಇದು ಆಶ್ಚರ್ಯಕರವಾಗಿ ಬ್ರಾಹ್ಮಣ ಹೆಂಗಸರಲ್ಲಿಯೂ ಉಳಿದುಕೊಂಡಿದೆ. ಶಿಷ್ಟ ಪರಂಪರೆಯೊಳಗೆ ಸಿಕ್ಕ ಮಹಿಳೆ ಸಂಪೂರ್ಣವಾಗಿ ಅಲ್ಲಿಯ ಪುರುಷ ಪರಂಪರೆಗೆ ಆಧೀನವಾಗಬೇಕಿತ್ತು. ಆದರೂ ಹಾಗಾಗದೆ ಮಹಿಳೆಯ ಪ್ರಾಧಾನ್ಯತೆಯೇ ಇರುವುದು, ಬಹುಶಃ ಕೃಷಿಯ ಯಾಜಮಾನ್ಯ ಮಹಿಳೆಯಿಂದ ಮಹನೀಯನ ಕಡೆ ಹೋದ ಮಧ್ಯದಲ್ಲಿಯ ಸಂಘರ್ಷದ ದಾಖಲೆಯಾಗಿ ಉಳಿದಂತಿದೆ. ಇದಕ್ಕೆ ಬಹಳ ಕಡೆ 'ಬಲಿಯಡೆ'ಯನ್ನು ಬ್ರಾಹ್ಮಣ ಮಹಿಳೆಯರು ಅಥವಾ ಶೂದ್ರರೇ ತಿನ್ನುವುದು ಸಾಕ್ಷಿಯಾಗಿದೆ. ಇದಕ್ಕೆ ಡಾ. ಎನ್.ಆರ್. ನಾಯಕ ಅವರು "ಉತ್ತರದ ಆರ್ಯರು ದಕ್ಷಿಣದ ದ್ರಾವಿಡ ಸಂಪ್ರದಾಯದ ಹೆಣ್ಣನ್ನು ಮದುವೆಯಾಗಿ ಆರ್ಯ-ದ್ರಾವಿಡ ಸಂಸ್ಕೃತಿಯ ಹರಿಕಾರರಾದಾಗ, ದ್ರಾವಿಡ ಸಂಪ್ರದಾಯದ ದೇವತೆ ಬಲೀಂದ್ರ ಪೂಜೆಯೂ ಅವರಲ್ಲಿ ಸಮ್ಮಿಶ್ರ ಸಂಸ್ಕೃತಿಯ ದ್ಯೋತಕವಾಗಿ ರೂಢಿಗತವಾಗಿರಬೇಕು" ಎನ್ನುತ್ತಾರೆ.[೯] ಹೀಗಿದ್ದರೂ ಬ್ರಾಹ್ಮಣ ಹೆಂಗಸರ ಹಾಡಿನಲ್ಲಿ ಬಲಿ ವಾಮನರ ಕತೆ ಶಿಷ್ಟ ಪುರಾಣದ್ದೇ ಆಗಿರುತ್ತದೆ.

ಒಮ್ಮೆಯಲಿ ಹರಿ ತಾನು ಒಮ್ಮೆ ವೇಷವ ಧರಿಸಿ
ಒಮ್ಮೆಯಲಿ ತನ್ನೆರಡು ಕರವ ಮುಗಿದು
ಒಮ್ಮೆ ಪರಿಯಲಿ ನಮ್ಮ ಬಲಿಯ ಬೇಡುತ ಬಂದ
ಒಮ್ಮೆ ವಾಮನ ರೂಪ ಹರಿ ಧರಿಸಿದ[೧೦]

ಹೀಗೆಯೇ ಅದು ವಾಮನ ಮೂರು ಹೆಜ್ಜೆ ದಾನ ಕೇಳುವವರೆಗೂ ಮುಂದುವರಿಯುತ್ತದೆ. ಆದರೂ ಅವನ ರಾಜ್ಯದಲ್ಲಿ

ಕಲ್ಲೆಲ್ಲ ಕನಕಮಯ ಹುಲ್ಲೆಲ್ಲ ರಾಜ್ಯವು
ಬಳ್ಳಿತುಂಡಿಲುಗಳು ಹವಳ ಮುತ್ತೆ
ಎಲ್ಲೆಲ್ಲಿ ನೋಡಿದರು ಕೆರೆಬಾವಿಗಳ್ಹಾಲು ತುಪ್ಪ
ಬಲಿದನೇ ತಾನೆಂದು ಮೆರೆಯುತ್ತಿದ್ದ (ಅದೇ ಹಾಡು)

ಇದು ಶೂದ್ರ ಸಂಪ್ರದಾಯದಲ್ಲಿ ಬೇರೆಯದೇ ಆಗಿ ಅಭಿವ್ಯಕ್ತಿಗೊಳ್ಳುತ್ತದೆ.

ಬಲೀಂದ್ರ ರಾಯರೇ ಕಾಲಾದೀಲ್ ಬರುವವರಲ್ಲ
ಬೆಳ್ಳೀರತ ಹತ್ತೇ ಬರುವರು....
ಬಲ್ಲೀಂದ್ರ ರಾಯರು ಕಾಲಾದೀಲ್ ಹೋಗೂವರಲ್ಲ
ಚಿನ್ನದ ರತ ಹೊತ್ತೇ ಹೋಗುವರೊ[೧೧]

ಇನ್ನೊಂದು ಹಾಡಿನಲ್ಲಿ

ಬಲ್ಲಾಳ ಬಲವಿಂದ್ರನೋ ರಾಜೀಕೆ-ಸಿರಿವಂತನೋ
ಎಲ್ಲಾರು ಸಲುವಂತಾನು

ಇಂದ್ರಲೋಕದಿಂದ ಬಲ್ಲಾಳ ಬರುವಂಗೆ
ಕಲ್ಲಾಮಳೀಗಳು ಸುರಿದಾವು[೧೨]

ಹೀಗೆ ಇಲ್ಲಿ ಬಲಿಯನ್ನು ವಾಮನ ಪಾತಾಳಕ್ಕೆ ತುಳಿದ ಪೂರಾಣವೇ ಬದಲಾಗಿ ಬಿಟ್ಟಿದೆ! ಇಲ್ಲಿಯ. ಜನಪದರು ಬಲಿಯನ್ನು ದೇವಲೋಕದ ರಾಜನನ್ನಾಗಿಯೇ, ತಮ್ಮ 'ಇಂದ್ರ'ನನ್ನಾಗಿಯೇ ನೋಡಿದ್ದಾರೆ. ಆತ ಕೂಡ ತನ್ನ ರಾಜ್ಯವನ್ನು ನೋಡಲು ಬಂದಾತ. ತನ್ನ ಜೊತೆಯವರಿಗೆ "ನೀ ಹೋಗು ಶೆಟ್ಟರ ಮನೆಗೆ। ನೀ ಹೋಗು ಭಟ್ಟರ ಮನೆಗೆ. ಬಾ ಹೋತೆ ಒಕ್ಕಲ ಮನೆಗಿನ್ನೆ" ಎಂದು ಹೇಳುತ್ತಾನೆ. ಭಟ್ಟರ ಮತ್ತು ಶೆಟ್ಟರನ್ನು (ಬ್ರಾಹ್ಮಣ ಮತ್ತು ವಾಣಿಜ್ಯದೊಡೆಯರನ್ನು) ಬಲೀಂದ್ರ ತಿರಸ್ಕರಿಸುವುದು, ಜನಪದರ ಆಂತರಿಕ ಅಭಿವ್ಯಕ್ತಿಯೇ ಆಗಿದೆ.

ಇದೇ ಪುರಾಣ 'ಗೊಂಡರ ಪದಗಳಲ್ಲಿ' ಬೇರೆಯ ರೂಪ ಪಡೆಯುತ್ತದೆ. ಅಲ್ಲಿ ಮೂರು ಹೆಜ್ಜೆ ದಾನ ಕೇಳುವಲ್ಲಿ ಶಿಷ್ಟಪುರಾಣದ ಪ್ರಭಾವ ಬಿದ್ದಿರುವುದು ಕಾಣಬಹುದಾದರೂ ವಾಮನ ಒಬ್ಬ ಖಳನಾಯಕನಂತೇ ಆಗುತ್ತಾನೆ. ಇಲ್ಲಿ ಬಲೀಂದ್ರ 'ಬಲೀಂದ್ರಜ್ಜ'ನೂ, ವಾಮನ 'ಕಲೀಂದ್ರಜ್ಜ'ನೂ ಆಗಿರುತ್ತಾನೆ. ಕಲೀಂದ್ರಜ್ಜನಿಗೆ ಮೂರು ಹೆಜ್ಜೆ ಭೂಮಿಯನ್ನು ಕೊಡಬೇಕಾದ ಸಂದರ್ಭದಲ್ಲಿ ಬಲಿಯೇ ಇನ್ನು ಮೇಲೆ

ನರುಲೋಕ್ದಲ್ಲೀ ನಾವೇ ಇರುಬಾsರsದೇ
ತಮು ಮಡದಿಯಾss ಕೈಲಿ ನುಡಿತಾsರೀಗಾs
ದೆವ್ರು ಲೋಕsಕೇ ನಾsವೆ ಒಡ್ದು ಮೂಡಬೇಕು
ನಮುಗ್ಯಾsನಾsನೆ ನೀವೆ ಮರಿಬಾsರಾsದೇ[೧೩]

ಎಂದು ಹೇಳುತ್ತಾನೆ. ಮರಳಿ ಆತ ದೇವಲೋಕಕ್ಕೆ ಹೋಗುವ ಸೂಚನೆ. ತುಳುವಾಲ ಪಾಡ್ದನಗಳು 'ವಾಮನಾವತಾರ' ಪುರಾಣವನ್ನೇ ವಿಶದವಾಗಿ ಕಟ್ಟಿಕೊಡುತ್ತವೆಯಾದರೂ ಪುರಾಣವನ್ನು ಎದುರಿಸಿ ಬಲೀಂದ್ರನನ್ನು ಸಮರ್ಥಿಸುವ ಉದ್ದೇಶ ಇಲ್ಲಿ ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತದೆ. ಹಾಗಾಗಿ ಇದೊಂದು ಕೇವಲ ಪುರಾಣದ ಕೃತಿಯಲ್ಲ. ಪುರಾಣವನ್ನು ಉಪಯೋಗಿಸಿ ಪ್ರಾದೇಶಿಕತೆ ತನ್ನನ್ನು ಇಲ್ಲಿ ಸ್ಥಾಪಿಸಿಕೊಳ್ಳುವ ಪ್ರಯತ್ನವಿದೆ" ಎಂದು ರಾಜಾರಾಮ ಹೆಗಡೆ ಹೇಳುತ್ತಾರೆ. "ಪಾಡ್ದನಗಳಲ್ಲಿ ಬಲೀಂದ್ರ ಒಬ್ಬ ಆದರ್ಶ ರಾಜನಾಗಿದ್ದು ನಾಯಕ ಸ್ಥಾನದಲ್ಲಿ ಇದ್ದರೆ ದೇವತೆಗಳು 'ಖಳ'ರಾಗಿ ಬದಲಾಗಿದ್ದಾರೆ" ಎಂದೂ ಹೇಳುತ್ತಾರೆ.[೧೪]

ಹಿಂದೂ ಧರ್ಮದಲ್ಲಿಯೇ ಭಕ್ತಿಪಂಥದ ಹುಟ್ಟು ಕೂಡ ಇಂಥ ಸಂಘರ್ಷದ ಕಾರಣದಿಂದಾಗಿಯೇ ಆಗಿದೆ. ಅದು ಧರ್ಮದ ದಮನವನ್ನು ಮೀರುವ ಪ್ರಯತ್ನ ಕೂಡ ಆಗಿದ್ದು, ವೈದಿಕ ಸಂಸ್ಕೃತಿಯನ್ನು ಸುಧಾರಣವಾದಿಯನ್ನಾಗಿ ಹಿಗ್ಗಿಸಿದೆ. "ಹಿಂದೂ ಧಾರ್ಮಿಕ ವ್ಯವಸ್ಥೆಯ ಜಡ ಸ್ವರೂಪವನ್ನೂ, ರೂಢಿ ಆಚಾರಗಳನ್ನೂ ವಿರೋಧಿಸಿ, ಧಾರ್ಮಿಕತೆಯನ್ನು ವೈಯಕ್ತಿಕ ಅನುಭವದ ಅರ್ಪಣಾತ್ಮಕ ನೆಲೆಯಿಂದ ಅರ್ಥೈಸಿದ್ದು ಭಾರತದ ಧಾರ್ಮಿಕ ಚರಿತ್ರೆಯಲ್ಲಿ 'ಮನುಷ್ಯ'ನ ಅನಾವರಣ ಆದ ಕಾಲವೆಂದರೆ ಭಕ್ತಿಯ ಸಂದರ್ಭವೇ ಆಗಿದೆಯೆನ್ನಬಹುದು" ಎಂದು ಶಿವರಾಮ ಪಡಿಕ್ಕಲ್[೧೫] ಹೇಳುತ್ತಿರುವುದು ಭಕ್ತಿಪಂಥದ ಕ್ರಾಂತಿಕಾರಕತೆಯನ್ನು ತೋರಿಸುತ್ತದೆ. ಹೆಚ್ಚಾಗಿ ಇದು ಕೆಳ ವರ್ಗ ಜಾತಿಗಳಿಂದಲೇ ಬಂದಿದೆ. ಹಾಗಾದರೆ ಅವು

ಧಾರ್ಮಿಕ ಮೂಲ ಭೂತವಾದಿತ್ವವನ್ನೂ, ಜಾತಿ-ವರ್ಗವನ್ನು ಮೀರಿ ಸ್ಥಾಪನೆಯಾಗಬಹುದಾದ ಪರಿಯನ್ನು, ಸೂಫಿ ಮತ್ತು ವಚನ ಚಳುವಳಿಯ ಸಂದರ್ಭದಲ್ಲಿ ಉದಾಹರಣೆ ಯಾಗಿರುವುದನ್ನು ಪ್ರಾರಂಭದಲ್ಲಿಯೇ ನೋಡಿದ್ದೇವೆ. ಕೆಳಜಾತಿಯಿಂದ ಬಂದ ಒಂದು ಸಂದರ್ಭವನ್ನು ಇಲ್ಲಿ ಪ್ರಸ್ತಾಪಿಸಬಹುದಾಗಿದೆ.

ಅಂಥ ಒಂದು ಸಂದರ್ಭ 'ಮಹಿಮಾಧರ್ಮ' ಸ್ಥಾಪನೆ. ಮಹಿಮಾಧರ್ಮ ಚಳುವಳಿ ೧೯ನೇ ಶತಮಾನದಲ್ಲಿ ಒರಿಸ್ಸಾದಲ್ಲಿ ಅತ್ಯಂತ ಕೆಳಜಾತಿಯವರಿಂದ ನಡೆದ ಚಳವಳಿ. ರಾಜರು ಮತ್ತು ಬ್ರಾಹ್ಮಣ ಒಕ್ಕೂಟದ ಕರ್ಮಠ ಜಗನ್ನಾಥ ಭಕ್ತಿಯ ವಿರುದ್ಧ ಸೆಣಸಿದ ಹೋರಾಟ. ದಶರಾಮ ಎಂಬುವನ ನೇತೃತ್ವದಲ್ಲಿ ಪುರಿಯ ಜಗನ್ನಾಥ ವಿಗ್ರಹವನ್ನೇ ಸುಡಲು ಪ್ರಯತ್ನಿಸಿದ ಹೋರಾಟ. ಜಗನ್ನಾಥ ಮೊದಲು ಗುಡ್ಡಗಾಡು ಜನರ ದೇವತೆಯಾಗಿದ್ದ. ಕ್ರಮೇಣ ಅವನು ಇಡೀ ಒರಿಸ್ಸಾದ 'ಬಡಾ ಠಾಕೂರ' ಆದ. ದೇವಾಲಯದ ಒಳಗೆ ಆದಿವಾಸಿಗಳು, ಅಸ್ಪ್ರಶ್ಯರು ಬರಬಾರದೆಂದು ಬ್ರಾಹ್ಮಣರು ವಿಧಿಸಿದ್ದುದರ ವಿರುದ್ಧ 'ಮಹಿಮಾ ಧರ್ಮ' ಸ್ಥಾಪನೆಯಾಯಿತು. ಆದರಲ್ಲಿ ಬ್ರಾಹ್ಮಣರನ್ನೇ ಅಸ್ಪ್ರಶ್ಯರೆಂದು ಅವರು ಸಾರಿಬಿಟ್ಟರು![೧೬]

೧೯ನೇ ಶತಮಾನದ ಪೂರ್ವಾರ್ಧದಲ್ಲಿ ಬಂಗಾಲದಲ್ಲಿ ನಡೆದ ಇಂತಹದೇ ಒಂದು ಚಳವಳಿಯ ಪರಿಣಾಮ 'ಬಲರಾಮ' ಅಥವಾ 'ಬಲಹದಿ' (Balahadi) ಧರ್ಮ ಸ್ಥಾಪನೆ. ಇವರು ಕೂಡ ಕೆಳಜಾತಿಯ ಶೂದ್ರರೇ. 'ಬಲರಾಮ' ಧರ್ಮದ ಉಪದೇಶ ಜಾತೀಯತೆಯನ್ನು ಟೀಕಿಸಿದ ಹಾಗೆ ಬ್ರಾಹ್ಮಣರನ್ನೂ ಟೀಕಿಸುತ್ತದೆ. ವೇದಶಾಸ್ತ್ರಗಳನ್ನೂ ಟೀಕಿಸುತ್ತದೆ. ಇದರ ಮುಖ್ಯವಾದ ಲಕ್ಷಣವೇ ಬ್ರಾಹ್ಮಣದ್ವೇಷ ಎನ್ನುವುದಾಗಿಯೂ ಪಾರ್ಥ ಚಟರ್ಜಿ ಬರೆಯುತ್ತಾರೆ.[೧೭]

ಭಕ್ತಿ ಪಂಥವೇ ಆದರೂ ಇದೇ ರೀತಿಯ ಪ್ರತಿಭಟನೆ ಎಲ್ಲಾ ಸಂದರ್ಭದಲ್ಲೂ ನಡೆಯುತ್ತದೆಂದೇನೂ ಇಲ್ಲ. "ಉತ್ತರ ಭಾರತದಲ್ಲಿ ಮುಂದೆ ನಡೆದ ವಿಷ್ಣುಭಕ್ತಿ ಚಳವಳಿಗಳು ಮುಖ್ಯವಾಗಿ ಎರಡು ಸ್ವರೂಪಗಳನ್ನು ಪಡೆದುಕೊಂಡವೆಂದು ತೋರುತ್ತದೆ. ಜಾತಿ ವ್ಯವಸ್ಥೆಯ ಬಗ್ಗೆ ವಿರೋಧವನ್ನು ತೋರದ, ಆದರೆ ಎಲ್ಲರೂ ಸಮಾನರೆಂಬ ಉದಾರವಾದಿ ಮನೋಭಾವದ ಸಂತರು ಒಂದು ಬಗೆಯವರು. ಇವರು ಬ್ರಾಹ್ಮಣ ವರ್ಗಕ್ಕೆ ಸೇರಿದವರಾಗಿದ್ದರು. ೧೩ನೇ ಶತಮಾನದ ರಮಾನಂದ ಇವರಲ್ಲಿ ಮುಖ್ಯನಾದವನು. ಹಿಂದೀ ಪ್ರದೇಶಗಳಲ್ಲಿ ಭಕ್ತಿಪಂಥರಲ್ಲಿ ಪ್ರಸಿದ್ಧಿ ಪಡೆದ ತುಳಸೀದಾಸನೂ ಆಳದಲ್ಲಿ ಅತ್ಯಂತ ಸಂಪ್ರದಾಯವಾದಿಯಾಗಿದ್ದನು. ಇಂತಹ ಕೆಲವರನ್ನು ಬಿಟ್ಟರೆ ವಿಷ್ಣುಪಂಥದ ಸಂತರೆಲ್ಲ ಜಾತಿವ್ಯವಸ್ಥೆಯ ವಿರುದ್ಧ ತಿರುಗಿಬಿದ್ದವರೇ ಆಗಿದ್ದಾರೆ."[೧೮]

ಹೀಗೆ ವೈದಿಕ ಮತ್ತು ಅವೈದಿಕದ ಸಂಘರ್ಷವೇ ಇಲ್ಲಿಯ ಚರಿತ್ರೆಯ ಮುನ್ನಡೆಯ ಮುಖ್ಯ ಸಾಂಸ್ಕೃತಿಕ ಶಕ್ತಿಗಳಾಗಿರುವುದು ನಿಚ್ಚಳವಾಗಿ ಕಾಣುತ್ತದೆ. ಇದೊಂದು ಸಮುದ್ರ ಮಥನ ಇದ್ದ ಹಾಗೆ. ಈ ಮಥನದಲ್ಲಿ ಹಾಲಾಹಲವೂ ಬರುತ್ತದೆ; ಅಮೃತವೂ ಹುಟ್ಟುತ್ತದೆ. ಹಾಲಾಹಲ ಯಾವುದೆಂದರೆ ಈ ಎಲ್ಲ ಸಂಘರ್ಷದಿಂದ ಉಂಟಾಗುವ ಮತೀಯ, ಪಂಥೀಯ, ಜಾತೀಯ,

ಜನಾಂಗೀಯ ದ್ವೇಷ. ಇದು ಒಮ್ಮೆ ಮರೆಯಲ್ಲಿ, ಒಮ್ಮೆ ಪ್ರಚ್ಛನ್ನವಾಗಿ ತೋರುತ್ತದೆ. ದೀರ್ಘಕಾಲೀನವಾದ ಮಾನಸಿಕ ತರಬೇತಿ ಅಲ್ಪಕಾಲಿಕವಾಗಿರುವುದಿಲ್ಲ. ಅದು ಸಮಾಜ, ಸಂಘ, ರಾಜಕೀಯ ಎಲ್ಲದರಲ್ಲಿ ತನ್ನ ವಿಷದ ಹಲ್ಲನ್ನು ಚಾಚುತ್ತದೆ. ಕೀಳರಿಮೆ-ಮೇಲರಿಮೆಯಾಗಿ ಕಾಡುತ್ತದೆ. ಇಡಿಯಾಗಿ ಭಾರತದ ಕೆಳಜಾತಿ ಜನಾಂಗದವರು ಬ್ರಾಹ್ಮಣ ಮೇಲರಿಮೆಯನ್ನು ಹೊರುವ ಅಥವಾ ಶೂದ್ರ ಕೀಳರಿಮೆಯಿಂದ ತಪ್ಪಿಸಿಕೊಳ್ಳುವ ಸಂಕೀರ್ಣತೆಗೆ ಪಕ್ಕಾಗಿದ್ದಾರೆ ಎಂದರೆ ತಪ್ಪಾಗಲಾರದು.

ಅಮೃತ ಎಂದರೆ ಈ ದೀರ್ಘಕಾಲದಲ್ಲಿ ಹರಿದು ಬಂದ, ಹೊರೆದು ಬಂದ, ಸಂಘರ್ಷ ತಂದುಕೊಟ್ಟ ಅರಿವೇ ಆಗಿದೆ. ಈ ಅರಿವು ಯಾವುದು? ಇಲ್ಲಿಯತನಕವೂ ನಡೆದ ಕೆಳವರ್ಗದ ಸಂಘರ್ಷ ಅನೇಕ ಗುಣಾತ್ಮಕ ಫಲವನ್ನು ತಂದುಕೊಟ್ಟಿದೆ ಎನ್ನುವುದರಲ್ಲಿ ಸಂದೇಹವಿಲ್ಲ. ಆದರೆ ಅದರೊಟ್ಟಿಗೆ ಆಯಾ ಕಾಲದ ಸಂಘರ್ಷ ಒಂದು ನಡುಗಡ್ಡೆಯಾಗಿ, ಮತ್ತೊಂದು ಜಾತಿಯೋ ಮೌಢ್ಯವೋ ಆಗಿ ಪರಿವರ್ತನೆಯಾದುದು. ಮಹಾಕ್ರಾಂತಿಕಾರಕ ಸತ್ವವನ್ನು ಹೊಂದಿದ್ದ ವೀರಶೈವ ಚಳವಳಿ ಕೂಡ ಒಂದು ಪ್ರತ್ಯೇಕ ಧರ್ಮವಾಗಿ, ಸಂಪ್ರದಾಯ ಶರಣತೆಯಲ್ಲಿ ಅದ್ದು ಹೋದುದು ನಮ್ಮೆದುರು ಇದೆ.

ಈ ಅರಿವಿನ ನೆಲೆಯಲ್ಲಿ ನಾವು ಕಂಡುಕೊಳ್ಳಬೇಕಾದುದು, ಸಾಂಸ್ಕೃತಿಕ ಅಥವಾ ಧಾರ್ಮಿಕ ಚೌಕಟ್ಟಿನಲ್ಲಿ ನಡೆಯುವ ಸಂಘರ್ಷದ ಮಿತಿಯನ್ನು. ಹಾಗೆಯೇ ಈ ಮಿತಿಯನ್ನು ಮೀರುವ ಪರಿಯನ್ನು. ಈ ಅರಿವು ನಮಗೆ ಸಮಸಂಸ್ಕೃತಿಗಳ ಅರಿವನ್ನು ಕೊಡುತ್ತದೆ. ಇಲ್ಲಿ ವೈದಿಕ ಮತ್ತು ಅವೈದಿಕ ಎಂಬುದು ಮುಖ್ಯವಲ್ಲ. ಈ ದೇಶದ ವೈವಿಧ್ಯಮಯವಾದ ಸಂಸ್ಕೃತಿಯಲ್ಲಿ ಇಸ್ಲಾಂ, ಕ್ರಿಶ್ಚನ್ ಇತ್ಯಾದಿಗಳೂ ಬರುತ್ತವೆ. ಮತ್ತು ಈ ಎಲ್ಲ ಸಂಸ್ಕೃತಿಗಳನ್ನು ಸಮಾನ ಗೌರವದಿಂದಲೇ ಕಾಣಬೇಕಾದುದೇ ತಾರಣವಾದುದು. ಇಲ್ಲಿ ಯಾವುದೇ ಒಂದನ್ನು ಯಜಮಾನಿಕೆಯ ಸಂಸ್ಕೃತಿಯನ್ನಾಗಿ ಬೆಳೆಸುವುದು ಸಾಧ್ಯವಾಗದು. ಹಾಗಾದಾಗ ಸಂಘರ್ಷವಾಗಿ ಪರಿವರ್ತನೆ ಹೊಂದ ಬೇಕಾಗುತ್ತದೆ.

ಈಗ ನಮ್ಮ ಮುಂದಿನ ಸಂಘರ್ಷದ ರೀತಿ ಯಾವುದು? ಅದು ಸಾಂಸ್ಕೃತಿಕ ಮೂಲವಾದ ವೈದಿಕ-ಅವೈದಿಕವೇ? ಅಥವಾ ಧಾರ್ಮಿಕ ಮೂಲಭೂತವಾದ ಮತ್ತು ಜಾತ್ಯತೀತವೇ? ಅಥವಾ ವರ್ಗಮೂಲವಾದ ಉಳ್ಳವರ ಮತ್ತು ಇಲ್ಲದವರ ಮಧ್ಯದ ವರ್ಗ ಸಂಘರ್ಷವೇ? ಅಥವಾ ಎರಡೂ ಕೂಡಿ ಉಂಟಾಗುವ ವೈಶಿಷ್ಟ್ಯವೇ? ಇದು ನಮ್ಮ ಮುಂದಿರುವ ಯಕ್ಷಪ್ರಶ್ನೆ.

ಅಡಿಟಿಪ್ಪಣಿಗಳು

೧. W.N. Kuber, 'Dr. Ambedkar A Critical study', 1979, P-28.

೨. Partha Chatterjee, 'Caste and Subaltern Consciousness', -Subaltern Studies VI (Writing on South Asian History and Socialogy) Edited by Ranjit Guha, 1989, P-175.

೩. ಬಾಬಾಸಾಹೇಬ ಅಂಬೇಡ್ಕರ, ಬರಹಗಳು ಮತ್ತು ಭಾಷಣಗಳು ಸಂ. ೧. ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ೧೯೯೦, ಪು. ೧೯.

೪. ಪುರುಷೋತ್ತಮ ಬಿಳಿಮಲೆ, ಕೂಡುಕಟ್ಟು, ೧೯೯೭, ಪು. ೧೭.

೫. ರಹಮತ್ ತರೀಕೆರೆ, ಕರ್ನಾಟಕದ ಸೂಫಿಗಳು, ೧೯೯೮, ೧೨-೧೩.

೬. ರಾಜಾರಾಮ ಹೆಗಡೆ, ಬಲಿ-ವಾಮನ-ತ್ರಿವಿಕ್ರಮ, ಅರಿವು ಬರಹ ಸಂ. ೧೪, ೧೯೯೮, ಪು. ೨೬.

೭. ಅದೇ ಪು. ೪೫-೪೬.

೮. ಅದೇ ಪು. ೫೮.

೯. ಡಾ. ಎನ್.ಆರ್. ನಾಯಕ, ಬಂದಾನೆ ಬಲೀಂದ್ರರಾಯ, ೧೯೯೮, ಮುನ್ನುಡಿ, ಪು. ೧೨.

೧೦. ಬಲಿಯಬೇಡುವ ಬಂದ ಅದೇ, ಪು. ೨.

೧೧. ಬಲೀಂದ್ರರಾಯರೇ ಆಲಾದಿಲ್ ಬರುವರಲಿ, ಅದೇ ಪು. ೯.

೧೨. ಇಂದ್ರಾಲೋಕದಿಂದ ಬಲ್ಲಾಳ ಬರುವಂಗೆ, ಅದೇ ಪು. ೧೯.

೧೩. ಡಾ. ಎಲ್.ಆರ್. ಹೆಗಡೆ, ಗೊಂಡರ ಪದಗಳು, ೧೯೭೭, ಪು. ೧೬೫.

೧೪. ಡಾ. ರಾಜಾರಾಮ ಹೆಗಡೆ, ಬಲೀಂದ್ರ ರಾಜ್ಯದಿಂದ ಗಡಿಪಾರಿನವರೆಗೆ 'ಸಂವಾದ' ಸಂಚಿಕೆ-೫೧ (ಜುಲೈ, ಸಪ್ಟೆಂಬರ್, ೧೯೯೯), ಪು. ೩೮ ಮತ್ತು ೪೦.

೧೫. ಶಿವರಾಮ ಪಡಿಕ್ಕಲ, ಭಕ್ತಿ, ಸುಧಾರಣವಾದ ಮತ್ತು ವೈಚಾರಿಕತೆ. ಕನ್ನಡ ಅಧ್ಯಯನ, ಏಪ್ರಿಲ್, ಮೇ, ಜೂನ್ ಸಂಚಿಕೆ, ೧೯೯೯.

೧೬. ಮೂಲ: ಡಾ ಫಣೀಂದಂ ದೇವ್ ಅನು: ಜಿ. ರಾಜಶೇಖರ, ದಾರು ಪ್ರತಿಮಾ ನಪೂಜಿವೇ, ೧೯೯೩, ಅಕ್ಷರ ಚಿಂತನ.

೧೭. ಪಾರ್ಥ ಚಟರ್ಜಿ ಮೇಲೆ ನಮೂದಿಸಿದ್ದು.

೧೮. ಬಸವರಾಜ ಕಲ್ಗುಡಿ, ಮಧ್ಯಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ, ೧೯೮೮, ಪು. ೨೨೭.

*

ಭಕ್ತಿಪಂಥದ ಬಂಡಾಯವೂ ಮತ್ತು ಅದರ ಅಧಃಪತನವೂ

ಮಾತುಕತೆಯ ಮಧ್ಯೆ ಒಮ್ಮೆ ಹಿರಿಯ ವೈಚಾರಿಕರಾದ ಗೌರೀಶ ಕಾಯ್ಕಿಣಿಯವರು ಭಗವದ್ಗೀತೆಯ ಭಕ್ತಿಯೋಗ ಎನ್ನುವುದು ಕೃಷ್ಣನ ಒಂದು 'ಕ್ರಾಂತಿಕಾರಕ' ದರ್ಶನ ಎಂದರು. ಅದನ್ನು ಕೇಳಿದಾಗ ನನ್ನ ತಲೆಗೆ ಬಲವಾಗಿ ಗುದ್ದು ಹಾಕಿದಂತಾಯಿತು. ಯಾಕೆಂದರೆ ನನ್ನ ತಿಳುವಳಿಕೆಯ ಪ್ರಕಾರ ಅದೊಂದು ಪರಮ ನೀಚ ರಾಜಕೀಯ ತಂತ್ರವಾಗಿದೆ ಎಂದೇ.

ಭಕ್ತರಿಗೆ ಕೃಷ್ಣನ ಆಶ್ವಾಸನೆ ಹೀಗಿದೆ:
ಮಾಂ ಹಿ ಪಾರ್ಥಾ ವ್ಯಪಾಶ್ರಿತ್ಯ ಯೇಽಪಿ
ಸ್ಯುಃ ಪಾಪಯೋನಯಃ
ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಽಪಿ
ಯಾಂತಿ ಪರಾಂ ಗತಿಮ್ (೯-೩೨).

ಪಾಪಿ ಜನ್ಮಿಗಳಾದ (ಪಾಪಯೋನಿಜರುಗಳಾದ?) ಸ್ತ್ರೀಯರೂ ವೈಶ್ಯರೂ ಮತ್ತು ಶೂದ್ರರೂ ನನ್ನನ್ನು ಆಶ್ರಯಿಸಿದರೆ ಪರಮಗತಿಯೆನ್ನೇ ಹೊಂದುತ್ತಾರೆ. ಇಲ್ಲಿ ಕೃಷ್ಣನ 'ಕ್ರಾಂತಿಕಾರಕತೆ'. ಯಾವುದು? ಯಾವುದೆಂದರೆ ಕರ್ಮಯೋಗ, ಜ್ಞಾನಯೋಗ ಬ್ರಾಹ್ಮಣ-ಕ್ಷತ್ರಿಯರಿಗೆ ಮಾತ್ರ ಸಾಧ್ಯ. ಅರ್ಥಾತ್ ಅದರಲ್ಲಿ ಅವರಿಗೆ ಮುಕ್ತ ಅವಕಾಶ. ಆದರೆ ಹಾಗೆ ಅವಕಾಶ ಇಲ್ಲದವರು ಸ್ತ್ರೀಯರು, ವೈಶ್ಯರು ಮತ್ತು ಶೂದ್ರರು; ಅವರು ಪಾಪಜನ್ಮಿಗಳು. ಪಾಪಜನ್ಮಿಗಳಾದರೂ ತನ್ನನ್ನು ಆಶ್ರಯಸಿ ಅರ್ಥಾತ್ ಭಕ್ತಿಯಿಂದ ತನಗೆ ಅರ್ಪಿಸಿಕೊಂಡರೆ ಮೇಲಿನ ವರ್ಣದವರಿಗೆ ಸಮನಾದ ಪರಮಗತಿಯನ್ನೇ ಅವರೂ ಪಡೆಯುತ್ತಾರೆ. ಅಂದರೆ ವರ್ಣಧರ್ಮದಲ್ಲಿ ಶೂದ್ರರಿಗೆ ವಿದ್ಯೆ ವರ್ಜ್ಯ. ಸಂಪತ್ತು ಇಲ್ಲ. ಅವರು ಕೇವಲ ಮೇಲಿನ ವರ್ಣದವರ ಸೇವೆ ಮಾಡುತ್ತ ಜೀವಿಸಬೇಕು. ಹಾಗಿರುವಾಗಲೂ ಅವರು ನಿರಾಶರಾಗಬೇಕಾದುದಿಲ್ಲ. ಭಕ್ತಿಯಿಂದ ಒಂದು ಪತ್ರೆದಳ, ಒಂದು ಹೂವು, ಒಂದು ಹಣ್ಣು, ಹನಿ ನೀರನ್ನು ಅರ್ಪಿಸುತ್ತಾರಾದರೆ (ಪತ್ರಂ ಪುಷ್ಪಂ ಫಲಂತೋಯಂ) (೯-೨೬) ಅವರು ಪರಮಗತಿಯನ್ನು ಪಡೆಯುತ್ತಾರೆ. ಈ ಬಣ್ಣದ ಮಾತಿನ ಹಿಂದಿರುವ ಕ್ರಾಂತಿಕಾರತೆಯೆ ಯಾವುದು? ರಾಜಕೀಯ ಯಾವುದು?

ಕೇವಲ ಮೇಲಿನ ವರ್ಣದವರ ಸೇವೆಗಾಗಿ, ಅವರಿಗೆ ಸಂಪತ್ತು ಒದಗಿಸಿಕೊಟ್ಟು ಯಜ್ಞಯಾಗಾದಿಗಳಿಗೆ ವಿದ್ಯೆಗೆ ಬೇಕಾಗುವ ವಿಶ್ರಾಂತಿಯನ್ನು ಒದಗಿಸಿಕೊಡುವ ಈ ಶೂದ್ರ

ಮತ್ತು ಸ್ತ್ರೀ ಸಮೂಹ ಪರಮಾತ್ಮನಿಂದ ವಂಚಿತವಾದೆವೆಂದು ತಿಳಿಯದೇ ಸಮಾಧಾನದಿಂದ ಭಕ್ತಮೂಢವಾಗಿ ಹಾಗೆಯೇ ಇರಬೇಕು. ವಿದ್ಯೆಗಾಗಿ, ಆಧ್ಯಾತ್ಮಕ್ಕಾಗಿ, ಸಂಪತ್ತಿಗಾಗಿ ಹಾರೈಸುವ ಮತ್ತು ಅದಕ್ಕಾಗಿ ಬಂಡಾಯವೇಳುವ ಅವಶ್ಯಕತೆಯಿಲ್ಲ. ಈ ಎಲ್ಲದರ ಮನೋ ವೈಜ್ಞಾನಿಕ ತಳಹದಿಯಲ್ಲಿ ಎಂದೆಂದೂ ಈ ವಂಚಿತ ಸಮೂಹ ಬಂಡಾಯವೇಳಬಾರದೆಂಬ ಬಹುದೂರ್ತ ರಾಜಕೀಯ ಇದರಲ್ಲಿ ಅಡಗಿದೆ ಎಂಬುದೇ ನನ್ನ ತಿಳಿವಳಿಕೆ, ಅಂದಿಗೂ ಇಂದಿಗೂ. ಭಕ್ತಿಪಂಥವನ್ನು ಅರಸಿ ಹೊರಟಾಗ ಅದರ ಮೂಲಕ್ಕೆ ಎಂದರೆ ಭಗವದ್ಗೀತೆಯ ಬಳಿಗೇ ಹೋಗಬೇಕಲ್ಲ? ಆದ್ದರಿಂದಲೇ ಕಾಯ್ಕಿಣಿಯವರ ಮಾತಿನಿಂದ ತಲೆಗೆ ಒಂದು ಗುದ್ದು ಬಿದ್ದಂತಾದುದು. ಕೃಷ್ಣ ದರ್ಶನದ ರಾಜಕೀಯ ಹೀಗಿದೆ ಎಂದು ತಿಳಿದುಕೊಂಡಾಗಲೂ ಚರಿತ್ರೆಯಲ್ಲಿ ಅಷ್ಟೇ ಆಗಿ ನಿಂತಿರದೆ ಅದನ್ನು ಮೀರುವ ಪ್ರಯತ್ನವೊಂದು ನಡೆದೂ ಇದೆ ಎನ್ನುವ ಒಂದು ವಿಚಾರದ ಎಳೆ ಹೊರಡಲು ಆ ಗುದ್ದು ಕಾರಣವಾಯಿತು.

ಭಕ್ತಿಪಂಥದ ಪ್ರಧಾನ ಘಟ್ಟವಾದ ಹನ್ನೆರಡನೇ ಶತಮಾನದ ಚಳವಳಿಗೆ ಬಂದರೆ ನಮಗೆ ಆಶ್ಚರ್ಯಕರವಾದ ಸಾಮಾಜಿಕ ಅಂಶಗಳು ಕಂಡುಬರುತ್ತವೆ. ಒಂದು ಬೃಹದ್ ಆಣೆಕಟ್ಟೆಯಲ್ಲಿ ಸಂಗ್ರಹವಾದ ನೀರಿನ ಒತ್ತಡದಿಂದಾಗಿ ಆ ಆಣೆಕಟ್ಟು ಚೂರು ಚೂರು ಆಗುವಂತೆ ಮತ್ತು ಭೋರ್ಗರವ ನದಿಯಂತೆ ಆ ಕಾಲದ ಚರಿತ್ರೆಯ ವಿನ್ಯಾಸ ಎನ್ನಬಹುದು. ಅದು ಶೈವ ಭಕ್ತಿಪಂಥವಾಗಿದೆ. ಆನುವಂಶಿಕವಾದ ಗುಣ ಕೆಲವು ತಲೆಗಳಿಗಳಲ್ಲಿ ಮಾಯ (ಗೌಣ)ವಾಗಿ ಮತ್ತೆ ಮತ್ತೆ ಪ್ರಾದುರ್ಭಾವಕ್ಕೆ ಬರುವ ವಂಶವಾಹಿನಿಯ ಗುಣದಂತೆ ಶಿವ ಮತ್ತು ವಿಷ್ಣು ಪಂಥಗಳು ದ್ರಾವಿಡ ಮತ್ತು ಆರ್ಯರ ಸಾಂಸ್ಕೃತಿಕ ಸಂಘರ್ಷದ ಬಿಂದು ಚರಿತ್ರೆಯ ಒಡಲಿನ ಬೀಜ ಬಿಂದು (ಜೀನಿ) ಎಂಬಂತೆ ಕಾಣಿಸಿಕೊಂಡಿದೆಯೋ ಏನೋ! ಈ ಚಳವಳಿಯ ನೇತಾರ ಬಸವೇಶ್ವರ ಬ್ರಾಹ್ಮಣ ಶಿವಸಂಪ್ರದಾಯದವರು. ಬ್ರಾಹ್ಮಣನಾದರೂ ಅವರು ತನ್ನನ್ನು ಗುರುತಿಸಿಕೊಂಡದ್ದು ದಲಿತರಲ್ಲಿ

"ಚೆನ್ನಯ್ಯನ ಮನೆಯ ದಾಸಿಯ ಮಗನು
ಕಕ್ಕಯ್ಯನ ಮನೆಯ ದಾಸಿಯ ಮಗನು
ಇವರಿಬ್ಬರೂ ಹೊಲದಲ್ಲಿ ಬೆರಣಿಗೆ ಹೋಗಿ
ಸಂಗವ ಮಾಡಿದರು.
ಇವರಿಬ್ಬರಿಗೆ ಹುಟ್ಟಿದ ಮಗ ನಾನು"

ಇದು ಕೇವಲ ಬಸವೇಶ್ವರರು ತಮ್ಮನ್ನು ದಲಿತರಲ್ಲಿ ಗುರುತಿಸಿಕೊಂಡರು ಎಂಬುದು ಮಾತ್ರವಲ್ಲ. ಇಡಿಯ ಚಳವಳಿಯೇ ದಾಸದಾಸಿಯರ ಬಂಡಾಯವಾಗಿದೆ ಎಂಬುದನ್ನು ಸಂಕೇತಿಸುತ್ತದೆ. ಇಷ್ಟು ಮಾತ್ರವಲ್ಲ, ಅಲ್ಲಿಯವರೆಗೆ ವೈದಿಕ ಪ್ರಣೀತವಾದ ವೈವಾಹಿಕ ಜಡ ಸಂಪ್ರದಾಯದ ಪಾವಿತ್ರ್ಯದ ಪರಿಕಲ್ಪನೆಗೇ ಸಿಡಿಮದ್ದನ್ನೊಡ್ಡುತ್ತದೆ. ಒಟ್ಟಾರೆಯಾಗಿ ಭಕ್ತಿಯ ಹೆಸರಿನಲ್ಲಿ ಭಜನೆ ಮಾಡುವ ಗಾಂಪರ ಗುಂಪಾಗಿರದೆ ಅದು ವೈದಿಕ ಯಾಜಮಾನ್ಯ ಸಂಸ್ಕೃತಿಯ ವಿರುದ್ಧ ಎದ್ದ ಸಾಂಸ್ಕೃತಿಕ ಮಾತ್ರವಾಗಿರದ ಸಾಮಾಜಿಕ ಬಂಡಾಯವಾಗಿತ್ತು ಎಂಬ ಅಂಶ

ಎದ್ದುಕಾಣುತ್ತದೆ. ಅದನ್ನು ಹೀಗೆ ಸಂಗ್ರಹವಾಗಿ ಗುರುತಿಸಬಹುದು: ೧. ದೇವರನ್ನು ಗರ್ಭಗುಡಿಯಿಂದ ವ್ಯಕ್ತಿಯ ನೆಲೆಗೆ ತಂದದ್ದು.

ಅಂದು ದೇವರು ಉಳ್ಳವರ ಸೆರೆಯಾಳಾಗಿದ್ದ. ಮಡಿಮೈಲಿಗಿಯನ್ನು ಬಿಗಿದುಕೊಂಡು ದೇವಸ್ಥಾನದಲ್ಲಿ ಸ್ಥಾವರನಾಗಿದ್ದ. ಅಂಥ ದೇವರ ಸೆರೆಯನ್ನು ಬಿಡಿಸಿದ್ದು ಇಲ್ಲಿಯ ಕೇವಲ ಆಧ್ಯಾತ್ಮಿಕ ಅಂಶ ಮಾತ್ರವಾಗಿರದೆ ಅದೊಂದು ಸ್ಥಾಪಿತ ಶಕ್ತಿಗೆ ಎದುರಾದ ಪ್ರತಿಭಟನೆಕೂಡ ಹೌದು.

ಉಳ್ಳವರು ಶಿವಾಲಯ ಮಾಡುವರು
ನಾನೇನ ಮಾಡುವೆ ಬಡವನಯ್ಯ
ಎನ್ನ ಕಾಲೇ ಕಂಬ, ದೇಹವೇ ದೇಗುಲ,
ಶಿರವೇ ಹೊನ್ನ ಕಲಶವಯ್ಯ
ಕೂಡಲ ಸಂಗಮದೇವಾ ಕೇಳಯ್ಯ
ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ

ಇದು ಕೇವಲ ಭಕ್ತಿಯ ವೈಯಕ್ತೀಕರಣವಾಗಿರದೆ ಉಳ್ಳವರ ನಿರಾಕರಣೆಯೂ ಆಗಿದೆ. ಮಹಾತ್ಮಾ ಏಸುವಿನ 'ಸೂಜಿಯ ಕಣ್ಣಿನಲ್ಲಿ ಒಂಟೆಯನ್ನಾದರೂ ನುಸುಳಿಸಬಹುದು, ಆದರೆ ಸ್ವರ್ಗದ ಬಾಗಿಲಲ್ಲಿ ಶ್ರೀಮಂತರನ್ನು ನುಸುಳಿಸಲಾಗದು' ಎಂಬ ಮಾತಿನಂತಿದೆ. ಇದು ಬಡತನದ ವೈಭವೀಕರಣವಾಗಿದರೆ ಉಳ್ಳವರ ವಿರೋಧವಾಗಿದೆ.

ವೇದಶಾಸ್ತ್ರ ಆಗಮ ಪುರಾಣಗಳೆಲ್ಲವು
ಕೊಟ್ಟಣವ ಕುಟ್ಟಿದ ನುಚ್ಚು ತೌಡು ಕಾಣಭೋ
ಇವ ಕುಟ್ಟಲೇಕೆ ಕುಸುಕಲೇಕೆ
ಅತ್ತಲಿತ್ತ ಹರಿವ ಮನವ ಶಿರವನರಿದಡೆ
ಬಚ್ಚಬರಿಯ ಬಯಲು ಚೆನ್ನಮಲ್ಲಿಕಾರ್ಜುನ

ಇಡಿಯಾಗೇ ವೇದಶಾಸ್ತ್ರಗಳ ನಿರಾಕರಣೆ ಇಲ್ಲಿಯದು.

೨. ಸ್ತ್ರೀ ಸಮಾನತೆಯ ಹೋರಾಟ ಇನ್ನೊಂದು ಧನಾತ್ಮಕ ಅಂಶ ಇಲ್ಲಿಯದು. ಜಾತಿಯಿಂದ ಮೇಲು ಕೀಳೆನ್ನದೆ ಎಷ್ಟೊಂದು ಜನ ಶರಣೆಯರು ಬಾಯ್ಬಿಟ್ಟರು! ವಚನ ರಚಿಸಿದರು!

"ಕೂಟಕ್ಕೆ ಸತಿ-ಪತಿಯೆಂಬ ನಾಮವಲ್ಲದೆ
ಅರಿವಿಂಗೆ ಬೇರೊಂದೊಡಲುಂಟೆ?"

ಆಯ್ದಕ್ಕಿ ಲಕ್ಕಮ್ಮ ದಿಟ್ಟತನದ ಪ್ರಶ್ನೆ ಕೇಳುತ್ತಾಳೆ.

ಅಕ್ಕಮಹಾದೇವಿಯಂತೂ ಇಂದಿನ ಸ್ತ್ರೀ ವಾದಿಳಿಗೆ ಪುರುಷ ಯಾಜಮಾನ್ಯದ ವಿರುದ್ಧ ಎದ್ದ ಒಂದು ಚಿರಂತನ ಧ್ವನಿಯಾಗಿ, ಸಂಕೇತವಾಗಿ ಸಂದಿದೆ. ಅಕ್ಕ ತನ್ನ ಗಂಡನನ್ನು ತೊರೆದು ಭಾವಾವೇಶದಲ್ಲಿ ಬತ್ತಲಾದ ಭಕ್ತೆಯಲ್ಲ. ಬದಲಾಗಿ ಮೂಲಭೂತವಾಗೇ ತನ್ನ ನಿಜ ವ್ಯಕ್ತಿತ್ವವನ್ನು

ಮರೆದವಳು. ರಾಜನೊಡನಾದ ತನ್ನ ಮದುವೆಯು ತನ್ನ ನಿಜ ಆಯ್ಕೆ ಅಲ್ಲವೆಂದು ಕೇವಲ ಅವಳು ಗಂಡನನ್ನು ತೊರೆದದ್ದಲ್ಲ. ಅದರೊಡನೆ ಅವಳು ರಾಜ್ಯಪ್ರಭುತ್ವನ್ನೇ ಧಿಕ್ಕರಿಸಿ ನಡೆದಳು. ಇದೇನು ಸಣ್ಣ ಸಂಗತಿಯಲ್ಲ. ಹೀಗೆ ಪ್ರಭುತ್ವವನ್ನು ಮೀರುವ ಕೆಚ್ಚನ್ನು ತೋರಿದ ಉದಾಹರಣೆ ಸೂಫಿಪಂಥದಲ್ಲೂ ಕಂಡುಬರುತ್ತದೆ. ಸಯೀದ್ ಸರ್ಮದ್ ಎನ್ನುವ ಸೂಫಿಸಂತನೊಬ್ಬ ಔರಂಗಜೇಬನನ್ನೇ ಅಪಮಾನಪಡಿಸಿದನಂತೆ! ಅದಕ್ಕಾಗಿ ಆತ ಮರಣ ದಂಡನೆಯನ್ನೇ ಅನುಭೋಗಿಸಬೇಕಾಯಿತು!"[7]

ಎಚ್.ಎಸ್. ಶಿವಪ್ರಕಾಶರ ನಾಟಕ ಮಹಾಚೈತ್ರ ದ ಬ್ಲರ್ಬಿನಲ್ಲಿ ಈ ಕೆಳಗಿನ ಮಾತು ಇದೆ.

"ಮಡಿವಾಳಿರು, ಹಡಪದವರು, ಹೆಂಡ ಇಳಿಸುವವರು, ಕುಡಿಯುವವರು, ನಾಟಕ ಬರೆದವರು, ದೋಣಿ ನಡೆಸಿದವರು, ಕನ್ನಹಾಕಿದವರು, ಕಸಎತ್ತಿದವರು, ಹೀಗೆಲ್ಲ ಇದ್ದ ಜನ ಭಾಗವಹಿಸಿದ್ದರು ಕಲ್ಯಾಣದ ಕ್ರಾಂತಿಯಲ್ಲಿ"

ಈ ಮಾತು ಪ್ರಸ್ತುತ ಚಳವಳಿ ಮೂಕ ಜನತೆಯ ಪ್ರತಿಸ್ಪಟನೆಯೂ, ಪ್ರಗತಿಪರವಾದುದಾಗಿದ್ದುದೂ ದಾಗಿತ್ತೆಂಬುದನ್ನು ನಿಚ್ಚಳಗೊಳಿಸುತ್ತದೆ.

ಇಂಥಾದ್ದೊಂದು ಜಂಗಮ ಚಳವಳಿ ಮಠ ಮಾನ್ಯಗಳಲ್ಲಿ, ಉಳ್ಳವರ ಹಿಡಿತದಲ್ಲಿ ಸ್ಥಾವರವಾಗಿ ಕುಳಿತು ಬಿಟ್ಟಿರುವ ವರ್ತಮಾನವೇ ನಮಗೆ ಇದೆ. ಕಾರಣವೇನು? ಕೇವಲ ವೈದಿಕ ಧರ್ಮದ ಕರಾಳತೆಯೇ? ಅಥವಾ ಭಾರತದ ಸಾಮಾಜಿಕ ಮತ್ತು ಧಾರ್ಮಿಕ ಸಂಬಂಧವಾಗಿ ಶೂದ್ರರ ಕೀಳರಿಮೆಯ ಮನೋಗಂಡದ ಪರಿಣಾಮವಾಗಿ ಆಹ್ವಾನಿಸಲಾಗುವ ಸಂಸ್ಕೃತೀಕರಣವೇ? ಇಂದಿಗೂ ಭಾರತದಲ್ಲಿ ಊಳಿಗ ಮಾನ್ಯ ಪದ್ಧತಿ ಅಸ್ತಿತ್ವದಲ್ಲಿದ್ದು, ಹಿಂದೆ ರಾಜರು, ಜಹಗೀರುದಾರರ ವಶದಲ್ಲಿದ್ದ ಮಠಗಳು ಜಮೀನುದಾರರ ಮತ್ತು ಸಂಪತ್ತುಳ್ಳವರ ವಶದಲ್ಲಿವೆ. ಇಂಥ ಊಳಿಗಮಾನ್ಯ ಸಮಾಜ ತನ್ನ ಮೇಲೆ ವೈದಿಕಶಾಹಿಗಳಿಂದ ಆಗುವ ಅವಮಾನ ಆಕ್ರಮಣವನ್ನು ಪ್ರತಿರೋಧಿಸುತ್ತಾದರೂ ತನ್ನ ಅಧಿಕಾರವನ್ನು ಭದ್ರಪಡಿಸಿಕೊಳ್ಳಲು ಅದೇ ತಂತ್ರವನ್ನು ಇತರರಿಗಾಗಿ ಮುಂದುವರಿಸುತ್ತದೆ. ಜನರನ್ನು ಮೂಢನಂಬಿಕೆಯವರನ್ನಾಗಿಡಲು ಮಠ ಸಾಧನೆ ಮಾಡುತ್ತಿದ್ದರೆ ಮಠಕ್ಕೆ ಹಣದ ಹೊಳೆಯನ್ನು ಉಳ್ಳವರು ಹರಿಸುತ್ತಾರೆ. ಒಂದು ಕಾಲಕ್ಕೆ ಕ್ರಾಂತಿ ಕಿಡಿಯನ್ನು ಹಾರಿಸಿದ ಶರಣ ಸಮಾಜ ಇಂದು ಅದೇ ವೈದಿಕ ಶಾಹಿಯ ಜಾತಿ, ಅಸ್ಪೃಶ್ಯತೆ, ಹಿಂದುತ್ವದ ಉಗ್ರಗಾಮಿತ್ವವನ್ನೆಲ್ಲ ಸುತ್ತುಕೊಂಡು ಪ್ರತಿಗಾಮಿ ಸಂಸ್ಥೆಗಳಾಗಿವೆ.

ಹೀಗಿದ್ದಾಗಲೂ ಚಳವಳಿಯ ಹಿನ್ನೆಲೆಯಲ್ಲಿರುವ ಸಾಮಾಜಿಕ ಕಾರಣವನ್ನು ಸಿ.ವೀರಣ್ಣ ಹೀಗೆ ಗುರುತಿಸುತ್ತಾರೆ.

"ಹನ್ನೊಂದನೇ ಶತಮಾನದ ಮಧ್ಯಭಾಗದಿಂದ ಕರ್ನಾಟಕದಲ್ಲಿ ಅದರಲ್ಲೂ ವಿಶೇಷವಾಗಿ ವಚನಕಾರರು ಹುಟ್ಟಿ ಬೆಳೆದ ಭಾಗದಲ್ಲಿ ಜನತೆಯ, ಅದರಲ್ಲೂ ವೃತ್ತಿಯನ್ನು ಅವಲಂಬಿಸಿಕೊಂಡು

ಬದುಕುತ್ತಿದ್ದವರ ಮೇಲೆ ಹಾಕಲಾಗಿದ್ದ ತೆರಿಗೆಗಳನ್ನು ಗಮನಿಸಿದರೆ ವಚನಕಾರರಾಗಿ ಬಂದವರು ಬಹಳಷ್ಟು ಜನ ಕಾಯಕ ಜೀವಿಗಳೇ ಆಗಿರುವುದೇಕೆಂಬುದು ತಿಳಿಯುತ್ತದೆ".[೨] ಇವೆಲ್ಲವುಗಳನ್ನು ಗಮನಿಸಿದ ಡಾ. ಬಸವರಾಜ ಕಲ್ಗುಡಿ. "ವಚನ ಚಳವಳಿ ಬಹುತೇಕ ಕೆಳಜಾತಿ, ಕೆಳವರ್ಗ ಜನತೆಯ ಕಾರಣದಿಂದಲೇ ಒಂದು ದೊಡ್ಡ ಶಕ್ತಿಯಾಗಲು ಕಾರಣವಾಯಿತು. ವರ್ಣವ್ಯವಸ್ಥೆಯ ಶ್ರೇಣೀಕರಣವನ್ನು ಮುರಿದು ಸಮಾನ ವ್ಯಕ್ತಿತ್ವದ ಆಧಾರದ ಮೇಲೆ ಧಾರ್ಮಿಕ ಪಂಥವೊಂದನ್ನು ನಿರ್ಮಾಣ ಮಾಡುವ ಕೆಲಸವು ಇಲ್ಲಿ ನಡೆಯಿತು"[೩] ಎಂದು ಹೇಳುತ್ತಾರೆ.

ಯಾವ ಯಾವಾಗ ಈ ಭಕ್ತಿಪಂಥ ಸ್ಥಾಪಿತ ಹಿತಾಸಕ್ತಿಗಳ ಕೈವಶವಾಗಿ ಜಡಸ್ವರೂಪಿಯೂ, ಜನವಿರೋಧಿಯೂ ಆಯಿತೋ ಆಗೆಲ್ಲ ಮತ್ತೆ ಮತ್ತೆ ಭಕ್ತಿಪಂಥದ ಚಳವಳಿ ಕಾಣಿಸಿಕೊಂಡಿದ್ದನ್ನು ನೋಡಬಹುದು. ವಚನ ಚಳವಳಿ ಜಂಗಮತ್ವವನ್ನು ಕೇವಲ ಮಾರ್ಜಾಲನ್ಯಾಯವನ್ನಾಗಿ ಆಚರಿಸಿಕೊಂಡಾಗ ಅದರ ವಿರುದ್ಧ ನಡೆದ ಕೆಳವರ್ಗದ ಚಳವಳಿಯ ದಾಖಲೆಗಳನ್ನು 'ಮಲೆಯ ಮಾದೇಶ್ವರ' ಮತ್ತು 'ಮಂಟೇಸ್ವಾಮಿ' ಎಂಬೆರಡು ಜನಪದ ಮಹಾಕಾವ್ಯಗಳಲ್ಲಿ ಕಾಣಬಹುದಾಗಿದೆ ಎಂಬ ಮಾತನ್ನು ಡಾ. ಸಿ. ರಾಮಚಂದ್ರನ್ ಹೇಳುತ್ತಾರೆ.[೪] ಇಂತಹದು ಕರ್ನಾಟಕದ ಮಟ್ಟದಲ್ಲಿ ಮಾತ್ರ ನಡೆದದ್ದಲ್ಲ; ಅಖಿಲ ಭಾರತದ ಮಟ್ಟದಲ್ಲಿ ಇಪ್ಪತ್ತನೇ ಶತಮಾನದವರೆಗೂ ನಡೆದು ಬಂದ ಚರಿತ್ರೆಯಾಗಿದೆ ಎಂಬುದು ಕಂಡುಬರುತ್ತದೆ.

೧೭-೧೮ನೇ ಶತಮಾನದ ಮಧ್ಯದಲ್ಲಿ ಜೀವಿಸಿರಬಹುದಾದ ಆಂಧ್ರ ಪ್ರದೇಶದವನಾದ ಭಕ್ತಿ ಕವಿ ವೇಮನ ವೇದಪುರಾಣಾದಿಯಾಗಿ ವೈದಿಕ ಧರ್ಮಶಾಸ್ತ್ರಗಳನ್ನು ಖಂಡಿಸುತ್ತಾನೆ. ಜಾತಿಪದ್ಧತಿ, ಅಸ್ಪೃಶ್ಯತೆಯ ಆಚರಣೆ ಮೊದಲಾದ ಮೂಢನಂಬಿಕೆಗಳನ್ನು ಉಗ್ರವಾಗಿ ಖಂಡಿಸುತ್ತಾನೆ.

ವೇದ ವಿದ್ಯೆಯೆಲ್ಲ ವೇಶ್ಯೆಯರಂತವು
ಭ್ರಮೆಯಗೊಳಿಸಿ ತಿಳಿಯ ಮಾಡಗೊಡವು
ಗುಪ್ತವಿದ್ಯೆಯೊಂದೆ ಕುಲಕಾಂತೆಯಂತೆ
ವಿಶ್ವಧಾಭಿರಾಮ ಕೇಳುವೇಮ[೫]

ಎಂದು ಹೇಳುವ ವೇಮನ ಭಕ್ತರ ಬೂಟಾಟಿಕೆಯನ್ನು ಕೂಡ ಖಂಡಿಸಿ ಆತ್ಮಶೋಧನೆಗೆ ಹಚ್ಚುತ್ತಾನೆ.

ಹದಿನೇಳನೇ ಶತಮಾನದ ಪೂರ್ವಾರ್ಧದಲ್ಲಿ ಬದುಕಿದ ತುಕಾರಾಮ ಮಹಾರಾಷ್ಟ್ರದ ಭಕ್ತಕವಿ. ಶೂದ್ರನಾದ ಈತ ವೈದಿಕ ಸಂಪ್ರದಾಯವನ್ನು ಖಂಡಿಸುತ್ತಾನೆ. ಭಕ್ತಿಯೊಂದೇ ದೇವರ ಸಾಧನೆಗೆ ಹಾದಿ. ಕಾವಿಬಟ್ಟೆ ಧರಿಸುವುದು, ವ್ರತ ಆಚರಿಸುವುದು, ಧರ್ಮಗ್ರಂಥದ ಪಠನ, ಯಂತ್ರ ಮಂತ್ರ ಇವನ್ನೆಲ್ಲ ಗೇಲಿ ಮಾಡಿದ ತುಕಾರಾಮ ಜಾತಿಯತೆಯೇ ಮೊದಲಾದ ಅನಿಷ್ಟಗಳ ವಿರುದ್ಧ ಯುದ್ಧ ಸಾರಿದವನು.

ಬೈಗು ಬೆಳಗು ಒಂದೇ ಸುಮಯುದ್ಧ
ಈಗ ಜಗಕೂ ನನಗೂ ಭೀಕರ ಯುದ್ಧ
ಏಕದಂ ಎರಗಿದರೂ ಎಚ್ಚರ ತಪ್ಪಲ್ಲಾ
ಗಟ್ಟಿನಿಲ್ಲದೆ ನಾವು ಹಾಗೇ ಬಿಡಲ್ಲಾ
ಎಲ್ಲರ ಬೆದರಿಸೊ ತುಕಾನ ನುಡಿಯಿದು
ಬಲಬಂತೋ ಬಲಾ ನಿನ್ನೆ ಹೆಸರಿನಿಂದ[೬]

ಹೀಗೆ ಆತ ಜೀವನ ಪೂರ್ತಿ ಹಳೆಯ ರೂಢಿಗಳವಿರುದ್ಧ ಹೋರಾಡುತ್ತಲೇ ಇದ್ದ.

ಕರ್ನಾಟಕದ ಶರಣೆಯರು ಹಾಗೂ ಸೌರಾಷ್ಟ್ರದ ಮಹಾ ಪಂಥ ಯೋಗಿನಿಯರು ಒಂದು ತೌಲನಿಕ ಅಧ್ಯಯನ" ಎಂಬ ಲೇಖನದಲ್ಲಿ ಡಾ. ಮಂಗಲ ದೇಸಾಯಿ ಅವರ ಕೃತಿಗಳಿಂದ ಸ್ಪಷ್ಟವಾಗಿ ಕಂಡುಬರುವುದೇನೆಂದರೆ ಇವರು ಜಾತಿ-ವಿಜಾತಿ, ಉಚ್ಚ-ನೀಚ, ಸ್ತ್ರೀ-ಪುರುಷ ಇತ್ಯಾದಿ ಅಂಶಗಳನ್ನಾಧರಿಸಿದ ಭೇದ ಭಾವಗಳನ್ನು ತ್ರೀವ್ರವಾಗಿ ವಿರೋಧಿಸಿದರು. ಭಕ್ತಿಯ ಮಾರ್ಗದಲ್ಲಿ ಯಾರೂ ದೊಡ್ಡವರಲ್ಲ ಸಣ್ಣವರಲ್ಲ; ನಿಜವಾದ ಭಕ್ತನಿಗೆ ಯಾವ ಭಯವೂ ಸಂಕೋಚವೂ ಇರಲಾರದು; ಅನೇಕ ಸಲ ಸಮಾಜದ ಉಚ್ಚವರ್ಗದವರಿಂದ ಕೀಳೆಂದು ಹೀಯಾಳಿಸಲ್ಪಡುವ ನಿಮ್ನ ವರ್ಗದ ಜನರೇ ಮಹಾಸಂತರೂ ಕವಿಗಳೂ ಎಂದು ಹೆಸರಾಗಿದ್ದಾರೆ.[೭]

ಭಕ್ತಕವಿಗಳಲ್ಲಿ ಕಬೀರನ ಹೆಸರು ಖ್ಯಾತವಾದುದೇ. ಹುಟ್ಟಿನಿಂದ ನೇಕಾರ ಎಂದು ಗ್ರಹಿಸಲ್ಪಟ್ಟಿರುವ ಕಬೀರ ಒಬ್ಬ ಶೂದ್ರ. ಅವನು ಹಿಂದುವೊ ಮುಸ್ಲಿಮನೊ ಎಂಬುದು ಚರ್ಚೆಯ ವಿಷಯ. ಆತ ಸತ್ತಾಗ ಆತನ ಹೆಣವನ್ನು ಹಿಂದೂ ಮತ್ತು ಮುಸ್ಲಿಂ ಇಬ್ಬರೂ ತಮಗೆ ಕೊಡಬೇಕೆಂದು ಬೇಡಿದರಂತೆ. ಕಾಶ್ಮೀರದ ಸಮೀಪ ಇದ್ದ ಈತ ಬಹು ಕಾಲ ಉತ್ತರ ಪ್ರದೇಶದಲ್ಲಿದ್ದು ಅಲ್ಲಿಯ ಭಾಷೆಗೆ ಸಾಹಿತ್ಯಶಕ್ತಿ ತುಂಬಿದನು. ಹಿಂದೂ- ಮುಸ್ಲಿಂ ಇಬ್ಬರನ್ನೂ ಪಕ್ಷಪಾತವಿಲ್ಲದೆ ವಿಮರ್ಶೆಗೆ ಒಳಪಡಿಸಿದ್ದರಿಂದ ಎರಡೂ ಕಡೆಯ ಧಾರ್ಮಿಕ ಪಟ್ಟಭದ್ರರಿಂದ ಕಿರುಕುಳಕ್ಕೆ ಒಳಗಾದನು.

"ಜಪಮಣಿ ಮರದಿಂದ ಮಾಡಿದ್ದು, ದೇವವಿಗ್ರಹಗಳು ಕಲ್ಲಿನವು, ಗಂಗಾ ಮತ್ತು ಯಮುನಾ ಎಂಬವು ನೀರು, ರಾಮ ಮತ್ತು ಕೃಷ್ಣ ಸತ್ತು ಹೋಗಿದ್ದಾರೆ. ನಾಲ್ಕು ವೇದ ಕಟ್ಟು ಕಥೆಗಳು. "ಬೆಳಗಿನ ಪ್ರಾರ್ಥನೆಯ ಹೊತ್ತು ಮಸೀದೆಯ ಗೋಪುರದ ಎತ್ತರವಾದ ಕಡೆ ನಿಂತು ಖಾಜಿಯು ಏಕೆ ಹಾಗೆ ಕಿರುಚಿಕೊಳ್ಳುತ್ತಾನೆ? ದೇವರೇನು ಕಿವುಡನೆ?" ಎಂದು ಚೇಡಿಸುತ್ತಾನೆ.[೮]

ಒರಿಸ್ಸಾದಲ್ಲಿ ೧೯ನೇ ಶತಮಾನದಲ್ಲಿ ಕೆಳವರ್ಗದ ಜಾತಿಯ ಜನರಿಂದ ನಡೆದ ಮಹಿಮಾ ಧರ್ಮದ ಚಳವಳಿ ಬೆಳೆದು ಬಂದ ಬಗೆಯನ್ನು ಅದರೆಲ್ಲದರ ಸಾಮಾಜಿಕ ಹಿನ್ನೆಲೆಗಳೊಂದಿಗೆ ಜಿ. ರಾಜಶೇಖರ 'ದಾರು ಪ್ರತಿಮಾನ' ಪೂಜಿವೇ ಎಂಬ ಪುಸ್ತಕದಲ್ಲಿ ಚಿತ್ರಿಸಿದ್ದಾರೆ. ೧೯ನೇ ಶತಮಾನದಲ್ಲಿ ಒರಿಸ್ಸಾದ ಜಗನ್ನಾಥ ದೇವರು ಮೊದಲಿನಂತೆ ದೀನಬಂಧುವಾಗಿರಲಿಲ್ಲ. ಆತ

ಆಳುವವರ ಮತ್ತು ಬ್ರಾಹ್ಮಣರ ವಶವರ್ತಿಯಾಗಿದ್ದ ಇದರಿಂದ ಕೆಳಜಾತಿಯವರ ದುಃಖ ದುಮ್ಮಾನಗಳು ಹೆಚ್ಚಾದುವು. ಇದರ ಪ್ರತೀಕಾ ರಾರ್ಥವಾಗಿ ಮಹಿಮಾಧರ್ಮ ಸ್ಥಾಪನೆಯಾಯಿತು. ಅವರು ಬ್ರಾಹ್ಮಣರನ್ನೇ ಅಸ್ಪೃಶ್ಯರು ಎಂದು ಸಾರಿ ಬಿಟ್ಟರು. ಪುರಿ ಜಗನ್ನಾಥ ದೇವಾಲಯದ ಮೇಲೆ ಧಾಳಿನಡೆಸಿ ನಿಮ್ನ ಭಕ್ತವರ್ಗ ದೇವಾಲಯದ ಒಳನುಗ್ಗಿ ದೇವರ ಮೂರ್ತಿಯನ್ನು ಸುಟ್ಟು ಹಾಕಲು ಪ್ರಯತ್ನಿಸಿದರು.

೧೯ನೇ ಶತಮಾನದ ಮೊದಲು ಭಾಗದಲ್ಲಿ ಅಸ್ಪೃಶ್ಯ ಜನರಿಂದ ಸತ್ನಾಮ್ ಪಂಥ ಹುಟ್ಟಿತು. ಇದು ಕೂಡ ಅಂದಿನ ಮೇಲ್ಜಾತಿಗಳ ಸಾಂಸ್ಕೃತಿಕ ಮತ್ತು ಆರ್ಥಿಕ ಶೋಷಣೆಗೆ ಕೊಟ್ಟ ಉತ್ತರವಾಗಿರಲೂಬಹುದು.

೧೮ನೇ ಶತಮಾನದ ಅಂತ್ಯದಲ್ಲಿ ಬಂಗಾಲದಲ್ಲಿ ಬಲಹದಿ ಪಂಥವೊಂದು ಬಂತು. ಇದು ಅಸ್ಪೃಶ್ಯ ಜನಾಂಗಕ್ಕೆ ಸೇರಿದ್ದು, ವೈದಿಕ ಧರ್ಮವನ್ನು ಖಂಡನೆಗೆ ಒಳಪಡಿಸುವುದು ಸ್ವಾಭಾವಿಕವಾಗೇ ಇದೆ. ವೈದಿಕವನ್ನು ಮಾತ್ರವಲ್ಲ ವೈಷ್ಣವ ಪಂಥವೇ ಆದ ಚೈತನ್ಯರನ್ನೂ ವಿಡಂಬನೆಗೆ ಗುರಿಮಾಡಿದರು.

೧೯ನೇ ಶತಮಾನದ ಅಂತ್ಯದಲ್ಲಿ ಮತ್ತು ೨೦ನೇ ಶತಮಾನದ ಮೊದಲ ಭಾಗದಲ್ಲಿ ತಿರವಾಂಕೂರಿನಲ್ಲಿ ಗುರು ನಾರಾಯಣ ಸ್ವಾಮಿ ಅವರ ಪಂಥ ಅಸ್ತಿತ್ವಕ್ಕೆ ಬಂತು. ನಾರಾಯಣ ಸ್ವಾಮಿ ಶೂದ್ರರಾಗಿದ್ದರು. ಜಾತೀಯತೆ, ಅಸ್ಪೃಶ್ಯತೆಯನ್ನು ನಾಶಮಾಡಲು ಅವರು ಹವಣಿಸಿದರು

ಜಾತಿ ಭೇದ ಮತ ದ್ವೇಷ
ಎಳ್ಳನಿತಿಲ್ಲದೆ ಸಕಲರೂ
ಸಹೋದರತ್ವದಿ ಬಾಳುತ್ತಿರುವ
ಮಾತೃಕೆ ಯಂತಿಹುದು ಈ ತಾಣ"[೧೦]

ಹೀಗೆ ಹನ್ನೆರಡನೇ ಶತಮಾನದಿಂದ ೨೦ ನೆಯ ಶತಮಾನದವರೆಗೂ ಒಮ್ಮೆ ಕುದುರಿ ಒಮ್ಮೆ ಮುದುಡಿ ನಡೆಯುತ್ತ ಬಂದರೂ ಅದು ಜಾತೀಯತೆ, ಅಸ್ಪೃಶ್ಯತೆ ಮತ್ತು ಧಾರ್ಮಿಕ ಡಂಬಾ ಚಾರವನ್ನು ತಡೆಯಲು ಸಾಧ್ಯವಾಗಲಿಲ್ಲವೇಕೆ? ಸಾಮಾಜಿಕ ಪರಿವರ್ತನೆಯಲ್ಲಿ ಅದರ ಪಾತ್ರವೇನು? ಶಕ್ತಿ ಎಷ್ಟು ಎಂದು ನಿರ್ಧರಿಸುವುದು ತುಂಬ ಕಷ್ಟಕರವಾದುದು. ಅಂದರೆ ಸಮಾಜ ರಚನೆಯ ಮೂಲ ಶಕ್ತಿಯ ಅಂದರೆ ವರ್ಗ ಹೋರಾಟ ಸ್ವರೂಪವನ್ನು ಅದು ಹೊಂದಿರಲಿಲ್ಲವೇ? ಎಂಬ ಸಮಸ್ಯೆ ಬಹುಸಂಕೀರ್ಣವಾದುದು. ಯಾಕೆಂದರೆ ಇದು ವರ್ಣ (ಜಾತಿ) ಹೋರಾಟವೊ ವರ್ಗಹೋರಾಟವೊ ಅಥವಾ ಕೇವಲ ಆಧ್ಯಾತ್ಮಿಕ ಸ್ವರೂಪದ್ದೋ ಎಂದು ಕೇಳಿದರೆ ಉತ್ತರ ಸರಳವಾಗುವುದಿಲ್ಲ. ಇದಕ್ಕೆ ಕಾರಣ ನಮ್ಮಲ್ಲಿ ಒಂದೇ ವರ್ಗದ ಮಧ್ಯೆಯೂ ಬಂದು ನಿಲ್ಲುವ ಜಾತಿಯ ಗೋಡೆಗಳು. ಆದರೆ ಭಕ್ತಿಪಂಥದ ಹೆಚ್ಚಿನ ಮತ್ತು ಕ್ರಾಂತಿಕಾರಕತೆ ಬಂದುದು ಕೆಳವರ್ಗ ಮತ್ತು ಜಾತಿಗಳಿಂದಲೇ. ಆದ್ದರಿಂದ ಜಾತಿಯನ್ನು ಸಾಮಾಜಿಕ ಹೋರಾಟದಲ್ಲಿ ಕಡೆಗಣಿಸುವಂತಿಲ್ಲ. ವರ್ಗ ಮತ್ತು ಜಾತಿಯ ಸ್ವರೂಪ ಭಾರತದ ಸಂದರ್ಭದಲ್ಲಿ ಬಹಳ ಸಂಕೀರ್ಣವಾಗಿದೆ. ಅದನ್ನು ಡಾ. ಅಂಬೇಡ್ಕರರು 'ಜಾತಿ' ಎಂದರೆ

'ಬಾಗಿಲು ಮುಚ್ಚಿದ ವರ್ಗ' ಎಂದಿದ್ದಾರೆ. ಉಪಸಂಸ್ಕೃತಿಗಳನ್ನು ಆಳವಾಗಿ ಆಲೋಚಿಸಿದ ಪಾರ್ಥಚಟರ್ಜಿ ಭಕ್ತಿ ಚಳವಳಿಯಲ್ಲಿ ವರ್ಗ ಹೋರಾಟದ ಚರಿತ್ರೆಯ ಸಂಯೋಗವನ್ನು ವಿಶ್ಲೇಷಿಸುತ್ತ "ನಮ್ಮ ಎಲ್ಲ ಆಲೋಚನೆಯೊಂದಿಗೆ ನೆನಪಿಸಿಕೊಳ್ಳಬೇಕಾದ ಸಂಗತಿಯೆಂದರೆ ಉಪಸಂಸ್ಕೃತಿಯ ಪ್ರಜ್ಞೆ ಎಂಬುದು ಕೇವಲ ನಿಷೇಧಾತ್ಮಕತೆಯನ್ನೇ ಹೊಂದಿದ ರಚನೆಯಲ್ಲ. ಅದು ಪ್ರಬಲ ಮತ್ತು ಅಧೀನ ಸಂಸ್ಕೃತಿಗಳ ಕ್ರಿಯೆ ಮತ್ತು ಪ್ರತಿಕ್ರಿಯೆ ಮುಂಖಾಂತರ ಪರಿಣಾಮಗೊಂಡು ಬದಲಾವಣೆಗೆ ಮೈವಡ್ಡಿ ಬೆಳವಣಿಗೆ ಹೊಂದಿದ ಚರಿತ್ರೆ"[೧೧] ಎನ್ನುತ್ತಾರೆ. ಆದ್ದರಿಂದಲೇ ಮಧ್ಯಕಾಲೀನ ಚಾರಿತ್ರಿಕ ಸಂದರ್ಭದಲ್ಲಿ ಹುಟ್ಟಿ ಬೆಳೆದುಕೊಂಡ ಭಕ್ತಿ ಪಂಥದ ಕಾರಣವನ್ನು ಆ ಕಾಲದ ರಾಜಕೀಯದಲ್ಲಿ ಹುಡುಕುವುದಕ್ಕಿಂತ ಆ ಪಂಥದಲ್ಲಿ ಕೆಳಜಾತಿಗಳೇ ಮತ್ತು ಮಹಿಳೆಯರೇ ಹೆಚ್ಚುಭಾಗವಹಿಸಿದ್ದು ಮತ್ತು ಆಧಾತ್ಮಿಕ ಧಾರ್ಮಿಕ ಬಂಡಾಯವೆದ್ದುದು ಸಮಾಜಿಕ ಪರಿವರ್ತನೆಯ ಆಶಯದ ಕಾರಣವೆಂದು ತಿಳಿಯುವುದೇ ಹೆಚ್ಚು ಲಾಭದಾಯಕವಾದ್ದುದು. ಈ ಬಗ್ಗೆ ಡಾ. ಪಣೀಂದು ದೇವರ ಮಾತು ಮನನೀಯವಾಗಿದೆ.

"ಲಾಗಾಯ್ತಿನಿಂದಲೂ ಧಾರ್ಮಿಕ ವಿಚಾರಗಳು, ಜನ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸುವ ವಿಧಾನಗಳಾಗಿವೆ ಎಂಬುವುದನ್ನು ಈಗಾಗಲೇ ಗುರುತ್ತಿಸಲಾಗಿದೆ. ಅದು ಧಾರ್ಮಿಕ ವೈಚಾರಿಕತೆ, ಹೊಸವ್ಯವಸ್ಥೆಗಾಗಿ ಹಾತೊರೆಯುವ ತುಡಿತವೂ ಆಗಿದೆ. ವೈಯಕ್ತಿಕತೆ ಮತ್ತು ಪ್ರತ್ಯೇಕ ಅಸ್ತಿತ್ವಗಳ ಹಂಬಲಕ್ಕೂ ಅದು ಒಂದು ಅಭಿವ್ಯಕ್ತಿಯಾಗಿದೆ. ಜನತೆಯ ವಿಭಿನ್ನ ವರ್ಗಗಳ ಆಶೋತ್ತರಗಳನ್ನು ನ್ಯಾಯ ಸಮ್ಮತವೆಂಬಂತೆ ಚಿತ್ರಿಸಲು ಮತ್ತು ಸಾಮಾಜಿಕ ಸಂಬಂಧಗಳಲ್ಲಿ ಆಗುವ ಬದಲಾವಣೆಗಳನ್ನು ಸಮರ್ಥಿಸಲು ಅವಶ್ಯವಾದ ಪರಂಪರೆಯ ಪುನರ್ ವ್ಯಾಖ್ಯಾನಗಳಿಗೂ ಈ ಬಗೆಯ ವೈಚಾರಿಕತೆಯಲ್ಲಿ ತುಂಬ ಅವಕಾಶಗಳಿವೆ."[೧೨]

ಸಾಮರಸ್ಯದ ನೆಲೆ

ಮುಸ್ಲಿಂ ಧರ್ಮದವರೆಂದು ಗಣಿಸಲ್ಪಡುವ 'ಸೂಫಿಪಂಥ'ವನ್ನು ಮುಸ್ಲಿಮರಲ್ಲಿಯ ಭಕ್ತಿಪಂಥವೆಂದೇ ಕರೆಯಲಾಗುತ್ತದೆ. ಮುಸ್ಲಿಂರಲ್ಲಿ ಮೂರ್ತಿ ಪೂಜೆಯು ಇಲ್ಲದಿರುವಾಗಿ ತಾತ್ವಿಕವಾಗಿ ಸೂಫಿಗಳನ್ನು ಭಕ್ತರು ಎಂದು ಕರೆಯುವುದು ಸರಿಯಾಗಲಾರದು. ಆದರೆ ಅವರು ಅನುಭಾವಿಗಳೂ ಆಗಿದ್ದು ಹಿಂದೂ ಭಕ್ತಿಪಂಥದೊಡನೆ ಸಮೀಕರಿಸಿದರೆ ತಪ್ಪೇನೂ ಅಲ್ಲ. ಬಹು ಮುಖ್ಯವಾಗಿ ಸೂಫಿಗಳ ಸಂಬಂಧ ಅವೈದಿಕ ಪಂಥದೊಡನೆ ಇರುವುದು ಅದರ ಬಂಡಾಯ ಪ್ರವೃತ್ತಿಯನ್ನು ತೋರಿಸುತ್ತದೆ. ಭಕ್ತಿ ಪಂಥ ಮತ್ತು ಸೂಫಿಪಂಥ ಸಾಮಿಪ್ಯವನ್ನು ರಹಮತ್ ತರೀಕೆರೆ ಹೀಗೆ ಚಿತ್ರಿಸುತ್ತಾರೆ.

"ಹೀಗಾಗಿ ಸೂಫಿವಾದವು ಹಲವು ಧಾರೆಗಳನ್ನು ಒಳಗೊಂಡ ನದಿಯಂತೆ, ಹಲವು ದೇಶಗಳ ಹಲವು ಕಾಲದ ಹಲವು ಪಂಥಗಳು ತುಂಬಿದ್ದ ಭಾರತಕ್ಕೆ ಬಂದಾಗ, ಸೂಫಿಗಳಿಗೆ ತಾತ್ವಿಕವಾಗಿ ನಾವು ಹೊಸ ತಾಣಕ್ಕೆ ಬಂದೆವು ಎಂದು ಬಹುಶಃ ಅನ್ನಿಸಲಿಲ್ಲ. 'ಭಕ್ತಿ ಪಂಥೀಯರು' ಎಂದು ದುಂಡಾಗಿ ಕರೆಯಲಾಗುವ ಮಾನುಭಾವ, ವಾರಕರಿ, ಚೈತನ್ಯ, ಕಬೀರಪಂಥಗಳ

ಅನುಭವಿಗಳಿಗೂ ಸೂಫಿಗಳು ಹೊರಗಿನವರು ಅನ್ನಿಸಲಿಲ್ಲ. ಕರ್ನಾಟಕದ ಸೂಫಿಗಳು ಅಲ್ಲಮಪ್ರಭುವನ್ನು ನೆನೆಯುವುದು, ಫಕೀರೇಶನು ಅಮೀನನ ಶಿಷ್ಯನಾಗುವುದು; ಮಡಿವಾಳಪ್ಪನಿಗೆ ಮೊಟ್ನಳ್ಳಿ ಹಸನಸಾಬನು ಶಿಷ್ಯನಾಗುವುದು ಇವೆಲ್ಲ ಯಾಕೆ ವಿಚಿತ್ರವಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ."

ಹಿಂದೂ ಇರಲಿ ಮುಸ್ಲಿಮ ಇರಲಿ ಕೆಳವರ್ಗದವರು, ಕೆಳಜಾತಿಯವರು ತಮ್ಮ ಬದುಕಿನ ಸುಖಕಷ್ಟಗಳಲ್ಲಿ ಒಂದಾಗಿಯೇ ಬೆರೆತರು. ಬಾಳಿನಲ್ಲಿ ಕಷ್ಟಬಂದಾಗ ಪರಿಹಾರಕ್ಕೆ ಯಾವ ದೇವರಾದರೇನು? ದೇವಸ್ಥಾನವೊ, ದರ್ಗಾವೊ ಅದು ಮುಖ್ಯವಾಗಲಿಲ್ಲ. ಹಾಗೆಯೇ ಮೊಹರಂನಂಥ ಹಬ್ಬದಲ್ಲಿ ಸಂತೋಷಪಡುವಲ್ಲಿ ಕೂಡ ಹೀಗೆ ಭಕ್ತಿ ಪಂಥ ಮತ್ತು ಸೂಫಿಗಳು ಸಾಧಿಸಿದ ಹಿಂದೂ-ಮುಸ್ಲಿಂ ಸಾಮರಸ್ಯ ಚರಿತ್ರೆಯಲ್ಲಿ ಬಹುಮುಖ್ಯವಾಗಿ ಎದ್ದುಕಾಣುತ್ತದೆ. ಇದು ಕರ್ನಾಟಕದಲ್ಲಿ ಮಾತ್ರವಲ್ಲ. ಭಾರತದೆಲ್ಲೆಡೆಯ ಸಾಮಾನ್ಯ ಗುಣವಾಗಿದೆ.

ಹದಿನಾಲ್ಕನೇ ಶತಮಾನದಲ್ಲಿ ಕಾಶ್ಮೀರದಲ್ಲಿ ಸೂಫಿ ಪಂಥ ಹೆಚ್ಚು ಪ್ರಚಾರದಲ್ಲಿತ್ತು. ಅದೇ ಕಾಲದ ಶೈವಯೋಗಿನಿ ಲಲ್ಲೇಶ್ವರಿ ಜೀವಿಸಿದ್ದಳು. ಆಕೆಯನ್ನು ಹಿಂದೂಗಳು 'ಲಲಯೋಗೇಶ್ವರಿ' ಎಂದೂ ಮುಸ್ಲಿಮರು ಲಲ ಆರಿಫಾ (ಮಹಾತ್ಮಳು) ಎಂದೂ ಕರೆಯುತ್ತಿದ್ದರು. ನುಂದ ಋಷಿ, ಬಾಬಾ ನಸರುದ್ದೀನ ಮತ್ತು ಲಲ್ಲೇಶ್ವರಿಯ ನಡುವೆ ಆಗಾಗ ಪಾರಮಾರ್ಥಿಕ ಚರ್ಚೆ ನಡೆಯುತ್ತಿತ್ತೆಂದೂ, ಅಂದಿನ ಇಸ್ಲಾಮಿ ಸೂಫಿಸಂತರ ಮೇಲೆ ಶೈವಧರ್ಮದ ಪ್ರಭಾವವಿದ್ದಂತೆ, ಶೈವಧರ್ಮದ ಯೋಗಿಗಳ ಮೇಲೂ ಸೂಫಿ ಪಂಥದ ಪ್ರಭಾವವೂ ಇತ್ತೆಂದು ಕಂಡುಬರುತ್ತದೆ ಎಂದೂ ಡಾ. ಪಂಚಾಕ್ಷರಿ ಹಿರೇಮಠ ಹೇಳುತ್ತಾರೆ." ಶಿವ ಸರ್ವಾಂತರ್ಯಾಮಿಯಾಗಿದ್ದಾನೆ. ಹಿಂದೂ ಮುಸಲ್ಮಾನರು ಬೇರೆ ಬೇರೆಯಾಗಿ ಭಾವಿಸದಿರು ಎಂದು ಲಲ್ಲೇಶ್ವರಿ ಹೇಳಿರುವುದನ್ನು ತೋರಿಸಿರುತ್ತಾರೆ.

ಇಂಥ ಉದಾಹರಣೆಗಳನ್ನು ಕಬೀರನಲ್ಲೂ ಕಾಣಬಹುದು.

"ತುರುಕರಿಗೆ ಮಸೀದೆಯಲಿ, ಹಿಂದುಗಳಿಗೆ ದೇವಾಲಯದಿ
ಖುದಾ ಮತ್ತು ರಾಮ ಇಬ್ಬರೂ ಇದ್ದಾರೆ"

"ದೇವರು ಮಸೀದಿಗಳಲ್ಲೇ ಇರುವುದಾದರೆ
ಮಿಕ್ಕಾ ಭೂಮಿಯಲ್ಲೆಲ್ಲ ವಾಸಿಸುವವರು ಯಾರು?
ರಾಮನು ಯಾತ್ರಕ್ಷೇತ್ರಗಳಲ್ಲಿ ವಿಗ್ರಹಗಳಲ್ಲಿ ಮಾತ್ರ
ಜೀವಿಸುವುದಾದರೆ
ಅವನು ಈ ಎರಡು ಕಡೆಗಳಲ್ಲಿಯೂ ಏಕಕಾಲದಲ್ಲಿ
ಇರುವುದು ಹೀಗೆ ಸಾಧ್ಯ?"

ಕರ್ನಾಟಕದಲ್ಲಿಯೂ ಈ ಭಕ್ತ-ಶರಣರ ಮತ್ತು ಸೂಫಿಗಳ ಸಾಮರಸ್ಯ ಕೊಡು ಪಡೆ ಅತ್ಯಂತ ಸಮೃದ್ಧವಾದುದೆಂದು ತೋರುತ್ತದೆ.

ಗೋವಿಂದ ಭಟ್ಟ ಶಿಶುನಾಳ ಶರೀಫರ ಗುರುವಾಗುವುದು, ಮಹಪತಿದಾಸರಿಗೆ ನಂಗಾಶಾಹ ಎಂಬ ಸೂಫಿ ಗುರುವಾಗುವುದು ಎದ್ದುಕಾಣುವ ಹೆಸರಾದರೆ ಇದೇ ಪರಂಪರೆಯ ದೊಡ್ಡ ಪಟ್ಟಿಯೇ ಇಲ್ಲಿ ಇರುವುದನ್ನು ಕಾಣಬಹುದು. ಹಿಂದುಗಳು ಉರಸನ್ನು ನಡೆಸುವುದು, ದರ್ಗಾಕ್ಕೆ ಹಿಂದುಗಳು ಕೂಡ ನಡೆದುಕೊಳ್ಳುವುದು ಆಶ್ಚರ್ಯದ, ಅಪರೂಪದ ಸಂಗತಿಯೇನೂ ಅಲ್ಲ.

"ಹುಸೇನಿ ಸಾಹೇಬರ ಬದಿಯಲಿ ಹೋಗಿ
ಹಸನರಾಗಿ ಬಂದೆವು
ಮಸೂತಿಯೊಳಗಿನ ಮೂಲವ ತಿಳಿದು
ದೀನದಯಾಳನ ನೆನೆದೆವು"

ಎಂದು ಸಿದ್ಧೇಶ್ವರ ಎಂಬ ಕವಿ ಹಾಡಿದರೆ ಸಿದ್ದಲಿಂಗ ಕವಿಯು ತನ್ನ ಗುರುವಿನ ಬಗ್ಗೆ "ಗುರುಶೇಖ ನಸುರುದ್ದೀನ ದೆಹಲಿಯ ದೀಪದಂತಿದ್ದವನು, ಎಷ್ಟೋ ಲಕ್ಷ ಭಕ್ತರಿಗೆ ಪೊರೆದ ಪ್ರವಾದಿ ಅವನು. ಅವನ ಪಾದಗಳಲ್ಲಿರು ಎಂದು ಸಿದ್ದಲಿಂಗ ಹೇಳುತ್ತಾನೆ"[13] ಹಿಂದು ಮತ್ತು ಸೂಫಿಗಳ ಏಕತೆಯ ಸಂಗತಿಯಾಗಿ ಶರಣಪುರಾಣಗಳ ಕೂಡು ರಚನೆ ಉದಾಹರಣೆಯಾಗುತ್ತವೆ. ತುರುಕರ ಪೀರಣ್ಣನ ಕತೆಯಲ್ಲಿ ಈ ಸೊಗಸನ್ನು ಕಾಣಬೇಕು.

"ಕಲ್ಯಾಣ ಪಟ್ಟಣದಲ್ಲಿ ಕಲ್ಲೆಲ್ಲ ಲಿಂಗವಲ್ಲೊ
ಸರಣುಗೆಲ್ಲಿ ಮಾತ್ಮುರ‍್ಯಾರೊ ತುರುಕರ ಪೀರಣ್ಣೋರು"[14]

ಹೀಗೆ ಭಕ್ತಿ ಪಾರಮ್ಯದಲ್ಲಿ ಈ ಹಿಂದು-ಮುಸ್ಲಿಮರು ತಮ್ಮ ಪಾರಂಪರಿಕ ಜಾತಿ-ಧರ್ಮಗಳ ಕಟ್ಟನ್ನು ಮೀರಿ ತಮ್ಮ ವರ್ಗದ ನೆಲೆಯಲ್ಲಿ ಒಂದಾಗಿರುವುದನ್ನು ಮತೀಯ ಸಾಮರಸ್ಯವನ್ನು ಸಾಧಿಸಿರುವುದನ್ನು ಕಾಣಬಹುದಾಗಿದೆ. ಈ ನೆಲೆಯಲ್ಲಿ "ಭಾರತದ ಸಂದರ್ಭದಲ್ಲಿ ನಿಜವಾಗಿ ಜಾತಿ ತನ್ನ ಚಾರಿತ್ರಿಕ ಆಯಾಮದಿಂದಾಗಿ ಅಡಿ ರಚನೆಯಲ್ಲಿ ಒಂದು ವಿಶೇಷವಾದ ಸಂಬಂಧ ಹೊಂದಿದೆ. ಬೇರೆ ಮಾತಿನಲ್ಲಿ ಹೇಳುವುದಾದರೆ ಜಾತಿ ಎಂಬುದು ಭಾರತದ ಚರಿತ್ರೆಯಲ್ಲಿ ಕಾಣಿಸಿಕೊಳ್ಳುವ ವರ್ಗಸ್ವರೂಪವೇ ಆಗಿದೆ ಎಂದೂ ಹೇಳುವ ವಾದವಿದೆ"[15] ಎಂದು ಹೇಳುವ ಪಾರ್ಥ ಚಟರ್ಜಿ ಯವರ ಮಾತಿಗೆ ಮೇಲಿನ ಉದಾಹರಣೆಗಳೆಲ್ಲ ಸಾಕ್ಷಿಯಂತಿವೆ.

ಈ ಮಾತಿಗೆ ಇನ್ನೊಂದು ನೆಲೆಯಿಂದಲೂ ಪುಷ್ಟಿ ದೊರೆಯುವಂತಿದೆ. 'ಕನಕನ ಲೋಕಗ್ರಹಿಕೆ' ಎಂಬ ಪ್ರಬಂಧದಲ್ಲಿ ಡಾ. ಆರ್.ಕೆ. ಮಣಿಪಾಲ ಕನಕ ಮತ್ತು ವಿಜಯದಾಸ ಇವರುಗಳಲ್ಲಿ ಅಭಿವ್ಯಕ್ತಿ ಪಡೆಯುವ ಭಕ್ತಿಯ ನೆಲೆಯನ್ನು ಸೂಕ್ಷ್ಮವಾಗಿ ಹೀಗೆ ಸೂಚಿಸುತ್ತಾರೆ.

ಏಕೆ ನಡುಗಿದೆ ತಾಯಿ ಭೂಮಿ ನಡುರಾತ್ರಿಯೊಳು
ಪೊಡವಿಗೊಡೆಯನ ರಾಣಿ
ಕಳ್ಳತನವನು ಕಲಿತು ಕಾಲೋಚಿತ ಕೇಳ್ದು
ಸುಳ್ಳು ಮಾತುಗಳನಾಡಿ ಒಡಲ ಪೊರೆವಾತ ತಾಳಿ

ಕೊಳ್ಳದೆನ್ನ ಅವಗುಣಂಗಳ ಬಿಟ್ಟು ಇಂಥ
ಸುಳ್ಳು ಮನುಜರ ಹೊರಬಾರದೆಂದು ನುಡುಗಿದೆಯ

ಎಂದು ಕನಕ ಕೇಳಿದರೆ, ವಿಜಯದಾಸ,

"ನಿನ್ನ ಒಲುಮೆಯಿಂದ ನಿಖಿಳಜನರು ಬಂದು
ಮನ್ನಿಸುವರೊ ಮಹರಾಯಾ
ಎನ್ನ ಪುಣ್ಯಗಳಿಂದ ಈ ಪರಿಯುಂಟೇನೊ
ನಿನ್ನದೆ ಸಕಲ ಸಂಪತ್ತು.

ಎಂದು ಹೇಳಿ "ಮನೆ ಮನೆ ತಿರಿದರು ಕಾಸು ಹುಟ್ಟದೆ ಸುಮ್ಮನೆ ಚಾಲ್ವರಿದು ಬಳಲಿದೆನೊ ಹಣ ಹೊನ್ನು ದ್ರವ್ಯಂಗಳಿದ್ದಲ್ಲಿಗೆ ತನಗೆ ತಾನೆ ಪ್ರಾಪ್ತಿ ನೋಡೋಜೀಯ" ಎನ್ನುತ್ತಾರೆ. ಇದನ್ನು ವಿಶ್ಲೇಸುತ್ತಾ ಮಣಿಪಾಲ "ವಿಜಯದಾಸನಂಥ ಮೇಲು ಜಾತಿಯ ವ್ಯಕ್ತಿ ದಾಸನಾಗಿ ಹಬ್ಬದೂಟವನ್ನು ಉಣ್ಣುವಂತಾದುದು, ಅದಕ್ಕೆ ಮುನ್ನ ಆತ ಒಂದು ತುತ್ತು ಅನ್ನಕ್ಕಾಗಿ ಚಡಪಡಿಸುತ್ತಿದ್ದುದು ಇದನ್ನು ಗಮನಿಸಿದರೆ ಕನಕನ ನಂತರ ಎರಡು ಶತಮಾನಗಳಲ್ಲಿ ಮತಮಾನ್ಯಗಳ ಸ್ಥಿತಿ ಮತ್ತೆ ಊರ್ಜಿತವಾದುದು ಸೂಚಿತವಾಗುತ್ತದೆ. ಕನಕನಂಥವರಿಗೆ ದಾಸನಾದರೂ ಆತನ ಪೂರ್ವಕ್ರಮದ ಜಾತಿಯಿಂದಾಗಿ ವಿಜಯಾದಾಸನಂಥವರ ಸವಲತ್ತು ಸಿಕ್ಕಲಾರದು"[illegible] ಎಂದು ಅನ್ನುತ್ತಾರೆ. ಕನಕನಿಗೆ 'ರಾಮಧಾನ್ಯ ಚರಿತೆ' ಬರೆಯುವ ಒತ್ತಡದ ಹಿಂದೆ ಇರಬಹುದಾದ ವರ್ಗ ಮನೋಭಾವವನ್ನು ಸಹ ಗುರುತಿಸಬಹುದಾಗಿದೆ. ಹಾಗೆಯೇ ಇಲ್ಲಿ ಕೆಳಜಾತಿ, ಕೆಳವರ್ಗವನ್ನು ಹೊಂದಿರುವ ಹಾಗೆ ಭಕ್ತಿ ಪಂಥ ವೈದಿಕದ ಕಡೆ ಹೋದಾಗ ಅಲ್ಲಿ ಮೇಲು ಜಾತಿ ಮೇಲಿನ ವರ್ಗದ ಸ್ವಭಾವನ್ನು ಮೈಗೂಡಿಸಿಕೊಳ್ಳುವುದನ್ನು ಕಾಣಬಹುದು. ವಿಜಯದಾಸರ ಮನೋಭಾವದಲ್ಲಿ ಕೂಡಾ ಇದು ನಿಚ್ಚಳವಾಗಿ ಅಥವಾ ಪೂರ್ಣ ಪ್ರಮಾಣದಲ್ಲಿ ಕಾಣಿಸಿಕೊಂಡಂತಿದೆ. ಈ ಕೆಳಜಾತಿಗಳ ಭಕ್ತಿಪಂಥ ಮತೀಯ ಸಾಮರಸ್ಯವನ್ನು ಒಂದು ಉಚ್ಛಾಂಕದಲ್ಲಿ ಸಾಧಿಸಿದ್ದಾದರೆ ಪೇಜಾವರ ಶ್ರೀಗಳು ಅದರ ನೀಚಾಂಶದಲ್ಲಿ ಸ್ಥಾಪಿಸಿದ್ದಾರೆ.

ಭಕ್ತಿ ಪಂಥ ವೈಷ್ಣವ ಇರಲಿ ಶೈವ ಇರಲಿ ಅದು ಹಿಂದೂ-ಮುಸ್ಲಿಂರ ಮಧ್ಯೆ ಧಾರ್ಮಿಕ ಸಾಮರಸ್ಯವನ್ನು ಸಾಧಿಸುವಲ್ಲಿ ಚರಿತ್ರಾರ್ಹವಾದ ದಾಖಲೆಯನ್ನು ಸಾಧಿಸಿದೆ. ಆದರೆ ಪೇಜಾವರ ಶ್ರೀಗಳು ಧಾರ್ಮಿಕ ಜನಾಂಗೀಯ ವೈರಿಯಾದ ವಿಶ್ವ ಹಿಂದು ಪರಿಷತ್ ಅಧ್ಯಕ್ಷರೋ ಅಥವಾ ಪತ್ತಿರದ ಪದಾಧಿಕಾರಿಗಳೋ ಆಗಿದ್ದಾರೆ. ಕಬೀರನು

"ತುರುಕರಿಗೆ ಮಸಿದಿಯಲಿ, ಹಿಂದುಗಳಿಗೆ ದೇವಾಲಯದಿ
ಖುದಾ ಮತ್ತು ರಾಮ ಇಬ್ಬರೂ ಇದ್ದಾರೆ"[illegible] ಹೇಳಿದರೆ

ಪೇಜಾವರ ಶ್ರೀಗಳು ಬಾಬ್ರೀ ಮಸೀದಿ ಕೆಡುವುದರಲ್ಲಿ ಸ್ವತಃ ಕ್ರಿಯಾಶೀಲರಾಗಿದ್ದರು. "ದತ್ತಾತ್ರೇಯ ಪಂಥವು ನಾಥ ಮತ್ತು ಸೂಫಿಗಳ ಸಂಕರರೂಪವಾಗಿರುವುದಾದರೆ ಅದಕ್ಕೆ ಸಾಕ್ಷಿ ಎಂಬಂತೆ ಬಾಬಾಬುಡನಗಿರಿಯಲ್ಲಿಯ ದತ್ತ ಪೀಠದ ನಿರ್ವಹಣೆ ಮುಸ್ಲಿಮರಲ್ಲಿ ಇದೆ. ಅಲ್ಲೇ ದತ್ತಪೀಠ ಇದೆ. "ಹಿಂದೂ ದೇವರು ಮುಸಲ್ಮಾನ ಅವಲಿಯಾನ ರೂಪತಳೆದು ದರ್ಶನ

ನೀಡುವ ಸಂಗತಿ, ಇಂದು ಮುಸಲ್ಮಾನರ ಬಗ್ಗೆ ಇರುವ ತಿರಸ್ಕಾರ ದೃಷ್ಟಿಕೋನದಿಂದಲೂ ಕೆಲವು ಪಂಡಿತರಿಗೆ ಆಶ್ಚರ್ಯಜನಕವಾಗಿ ಕಂಡು ಅವರು ಉದ್ವೇಗದಿಂದ ಏನೇನೋ ಹರಟುಬಿಡುತ್ತಾರೆ ಎಂದು ಶಂಬಾ ಹೇಳುತ್ತಾರೆ. ಇಂದು ಬಾಬಾಬುಡನಗಿರಿಯ ದತ್ತಾತ್ರಯಪೀಠ ಹಿಂದುತ್ವವಾದಿಗಳ ಆಕ್ರಮಣದ ಸ್ಥಳವಾಗಿದೆ."[೩]

ಚರಿತ್ರೆಯ ಗುಂಟ ಭಕ್ತಿ ಪಂಥ ಕೆಳಜಾತಿಗಳ ಮತ್ತು ತುಳಿತಕ್ಕೊಳಗಾದವರ ಪ್ರತಿಭಟನಾ ತೇಜಸ್ಸಿನಿಂದ ಕೂಡಿದ್ದರೆ ಮಠದ ಸುತ್ತಲೇ ಕೊರಗರು ದೀನವಾಗಿ ಬದುಕುತ್ತಿದ್ದರೂ ದೀನಬಂಧುವಾದ ಕೃಷ್ಣಭಕ್ತರಾದ ಸ್ವಾಮಿಗಳಿಗೆ ಯಾವ ದಯವೂ ಇಲ್ಲ; ಅವರು ದಲಿತೋದ್ಧಾರಕರಾಗಲಾರರು. ದನಕಾಯುವ ಗೋಪಾಲಕೃಷ್ಣ ಈಗ ತನ್ನ ಸರಳತೆ ಸಜ್ಜನತೆಯನ್ನು ನೀಗಿಕೊಂಡು ಚಿನ್ನದ ಕಿರೀಟ, ಚಿನ್ನದ ಕವಚ ತೊಡತೊಡಗಿದ್ದಾನೆ. ಯಾಕೆ, ಗೋವಳರು ಚಿನ್ನದ ಕಿರೀಟ ಧರಿಸಬಾರದೇ? ಅವನ ಭಕ್ತರೇನು ಹಾದಿಹೋಕರೇ? ಹೇಗೆ ಭಕ್ತರೋ ಹಾಗೇ ದೇವರು. ಕನಕನನ್ನು ದೇವಸ್ಥಾನದ ಹೊರಸುತ್ತಿಗೆ ಇಟ್ಟು ಅದರಾಚೆ ಕನಕ ಭವನವನ್ನು ಕಟ್ಟಿಸಿ ದಲಿತೋದ್ಧಾರ ಮಾಡಹೊರಟ ಸಂತ ಶ್ರೇಷ್ಠರಾಗಿದ್ದಾರೆ ಪೇಜಾವರ ಶ್ರೀಗಳು. 'ಭಕ್ತರಿಗೆ ಭಕ್ತಿಯೆಂಬುದು ಮಾಡಬಾರದು ಹೋಗುತ್ತ ಕೊಯ್ಯುವುದು ಬರುತ್ತ ಕೊಯ್ಯುವುದು' ಎಂಬ ಅಂತರಂಗದ ಮಥನ, ಪ್ರಾಮಾಣಿಕತೆಯಾಗಿದ್ದರೆ ಶ್ರೀಗಳಿಗೆ ಅದೊಂದು ಭಕ್ತಿಯ ಡಾಂಬಿಕ ಪ್ರದರ್ಶನವಾಗಿದೆ. ಅದು ಅವರ ಭಕ್ತರ (ಮೇಲೆ) ಆದರ್ಶ ಸ್ವಭಾವದ ಸಡಗರದ ಪ್ರದರ್ಶನವಾಗಿದೆ. "ಎಡಬಿಡದ ಕಾರ್ಯಕ್ರಮ, ಪ್ರವಚನಗಳಲ್ಲಿ ನಿರತವಾಗಿರುವ ಪೇಜಾವರ ಶ್ರೀಗಳನ್ನು ಮಂಗಳೂರಿಗೆ ಕರೆತಂದು ಸನ್ಮಾನದಲ್ಲಿ ಉತ್ಸವ ಮೂರ್ತಿ ಮಾಡುವುದು ಅಗತ್ಯವಿತ್ತೆ? ಪರ್ಯಾಯಪೀಠವೇರುವಾಗ ನಾಗರಿಕ ಸನ್ಮಾನ, ಪೀಠ ಇಳಿವಾಗ ನಾಗರಿಕ ಸನ್ಮಾನ. ಎಲ್ಲಿಗೆ ಬಂತು ಇವೆಲ್ಲ? ಸ್ವಾಮಿಜಿಯವರಿಗೂ ಹೊಗಳಿಸಿಕೊಳ್ಳುವ ಇರಾದೆ ಇಲ್ಲದಿರುತ್ತಿದ್ದರೆ ತಮ್ಮ ಸುತ್ತು ಹೊಗಳುಭಟರ ಕೋಟೆ ನಿರ್ಮಿಸಿಕೊಳ್ಳ ಬೇಕೆಂಬುದು ಇರದಿದ್ದರೆ ಇಂಥ ಅಬ್ಬೇಪಾರಿ ಪ್ರಚಾರ ಚಪಲರನ್ನು ದೂರ ಇಡುವುದುಸಾಧ್ಯ. ಪೇಜಾವರ ಶ್ರೀಗಳು ಕೇಳಿಸಿಕೊಳ್ಳಬೇಕು" ಎಂದು ಬಿವಿಸೀ ಹೇಳುವುದು ಸರಿಯಾದ ಭಾಷ್ಯವಲ್ಲವೇ?

ಭಗವದ್ಗೀತೆಯ ಕೃಷ್ಣ ಭಕ್ತಿಪಂಥದ ಒಂದು ಉತ್ಥಾನ ಬಿಂದುವಾಗಿದ್ದರೆ ಉಡುಪಿ ಮಠದ ಪೇಜಾವರ ಶ್ರೀಗಳು ಭಕ್ತಿ ಪಂಥದ ಅಧಃಪತನದ ಬಿಂದುವಾಗಿದ್ದಾರೆ. ಇವರ ಜೊತೆ ದಲಿತ ಪೀಠದ ನಿಡುಮಾಮಿಡಿ, ವೀರಭದ್ರ ಚೆನ್ನಮಲ್ಲ ಸ್ವಾಮಿಗಳನ್ನು ಹೋಲಿಸಿದರೆ ಮತ್ತೆ ವರ್ಗಸ್ವಭಾವದ ದ್ವಂದ್ವ ಎದ್ದು ಕಾಣುತ್ತದೆ.

ಅಡಿಟಪ್ಪಣಿಗಳು

೧. ಕರ್ನಾಟಕದ ಸೂಫಿಗಳು; ರಹಮತ್ ತರೀಕೆರೆ ೧೯೯೮ ದಿನದ ೩.೨.

೨. ಹನ್ನೆರಡನೇ ಶತಮಾನದ ಕಾಯಕ ಜೀವಿಗಳು. ಸೀ. ವೀರಣ್ಣ. ೧೯೮೬; ೧೩-೧೪

೩. ಮಧ್ಯಕಾಲೀನ ಭಕ್ತಿಪಂಥ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ.ಡಾ. ಬಸವರಾಜ ಕಲ್ಗುಡಿ, ೧೯೯೮, ೨೩೮.

೪. ಪ್ರಜಾವಾಣಿ ರವಿವಾರ ಪುರವಣಿ ೨೦.೧.೨೦೦೨ ಮಲೆಮಾದೇಶ್ವರ ಅಪೂರ್ವ ಕಥನ.

೫. ವೇಮನ್ ಸಿ.ಎಸ್.ದ್ವಾರಕಾನಾಥ ೧೯೯೪ ಕರ್ನಾಟಕ ಸಾಹಿತ್ಯ ಅಕಾಡೆಮಿ, ಪುಟ. ೩೪.

೬. 'ಅನಿಕೇತನ' ಸಾಹಿತ್ಯ ಅಕಾಡೆಮಿಯ ತ್ರೈಮಾಸಿಕ ಏಪ್ರಿಲ್-ಜೂನ್ ೨೦೦೦. ಶ್ರೀಧರರಾವ್ ಪಿಸ್ಸೆ ತುಕಾರಾಮನ ಕೆಲವು ಆ ಭಂಗಗಳು

೭. 'ಅನಿಕೇತನ' ಸಾಹಿತ್ಯ ಅಕಾಡೆಮಿ ತ್ರೈಮಾಸಿಕ ಜನವರಿ-ಮಾರ್ಚ್ ೧೯೯೩; ೧೧೧.

೮. 'ಕಬೀರ' ಭಾರತೀಯ ಸಾಹಿತ್ಯ ನಿರ್ಮಾಪಕರು ಪ್ರಭಾಕರ ಮಾಚ್ವೆ ಅನು.ಜಿ. ವೆಂಕಟ ಸುಬ್ಬಯ್ಯ ೧೯೬೭; ೩೬-೩೭.

೯. ಸೌರಬ್ ದುಬೆ, ಫಣಿಂದರ ದೇವ್, ಇಶಿಲಾ ಬ್ಯಾನರ್ಜಿ; ಅನು. ಜಿ. ರಾಜಶೇಖರ ಅಕ್ಷರ ಚಿಂತನ ಮಾಲೆ ೧೯೯೩.

೧೦. ನಾರಾಯಣಗುರು ಡಾ. ದಾಮೋದರ ಶೆಟ್ಟಿ ಕರ್ನಾಟಕ ಸಾಹಿತ್ಯ ಅಕಾಡೆಮಿ ೧೯೯೪;೧೪.

೧೧. Caste and subaltern consciousness; subalter studies VI Ranjit Guha 1989; 206.

೧೨. ದಾರು ಪ್ರತಿಮಾ ನಪೂಜಿವೇ ಅನು; ಜಿ. ರಾಜಶೇಖರ್ ೧೯೯೩; ೧೦.

೧೩. ಕರ್ನಾಟಕದ ಸೂಫಿಗಳು, ಪೂರ್ವೋಕ್ತ, ಪುಟ. ೨೫.

೧೪. ಮಹಾಯೋಗಿನಿ ಲಲ್ಲೇಶ್ವರಿ ೨೦೦೦ (ದ್ವಿತೀಯ) ೨೬ ಮತ್ತು ೩೦.

೧೫. 'ಕಬೀರ' ಮೇಲೆ ಹೇಳಿದ್ದು

೧೬. ಕರ್ನಾಟಕ ಸೂಫಿಗಳು; ೬೩ ಮತ್ತು ೬೪.

೧೭. ಕರ್ನಾಟಕ ಸೂಫಿಗಳು; ೧೭೮.

೧೮. Others have suggested that caste is infact the specifically Indian term of material relations of the base with its own historical dynemic, caste in other words, is the form in which classes appear in Indian history. ಪಾರ್ಥಚಟರ್ಜಿ; ಮೊದಲು ನಮೂದಿಸಿದ ಪುಸ್ತಕ ಪುಟ. ೧೭೫.

೧೯. 'ಲೋಕ ಗ್ರಹಿಕೆ' ಮತ್ತು 'ಅಭಿವ್ಯಕ್ತಿ' ೧೯೯೫; ೧೮ ಮತ್ತು ೨೭.

೨೦. 'ಕಬೀರ' ಹಿಂದೆ ನಮೂದಿಸಿದ ಪುಸ್ತಕ.

೨೧. ಕರ್ನಾಟಕದ ಸೂಫಿಗಳು ಪು. ೬೯.

೨೨. ಬಿ.ವಿ.ಸೀ. ವಂದನೀಯ ಮಠಾಧೀಶರೂ ಸನ್ಮಾನ ಸಮಾರಂಭಗಳು ಕನ್ನಡ ಜನಾಂತರಂಗ ೨೩.೧.೨೦೦೨ ಪು. ೬.

*

ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಕಟ್ಟುವ ಬಗೆ

ಕಟ್ಟುವಿಕೆ ಎಂದೊಡನೆ ಅವಶ್ಯಕತೆಗೆ ತಕ್ಕಂತೆ ಮಾರ್ಪಡಿಸಿಕೊಳ್ಳುವುದು ಎಂದು ಅರ್ಥ ಹೊರಡುತ್ತದೆ. ಅಂದರೆ ಕಟ್ಟುವ ಕೆಲಸ ಪ್ರಜ್ಞಾಪೂರಕವಾದ ಕ್ರಿಯೆ ಎಂದರ್ಥವಾಗುತ್ತದೆ. ಇದು ವೈಯಕ್ತಿಕವಾದಾಗ ಅದರ ಫಲವೂ ಸೀಮಿತವಾಗಿದ್ದು ಕ್ರಿಯೆಯೂ ಸೀಮಿತವಾಗಿರುತ್ತದೆ. 'ಕಟ್ಟುವ ಕೆಲಸ ಬಲು ಕಷ್ಟ'. ಎಂಬ ಕವಿ ಮಾತು ಕೂಡ ಉಂಟು. ಉದಾಹರಣೆಗಾಗಿ ಯಾವುದೋ ವ್ಯಕ್ತಿ ತನ್ನದೊಂದು ಮನೆ ಕಟ್ಟಿಕೊಳ್ಳುವುದಾದರೆ ಅದರ ಕಷ್ಟ, ಸಾಧನೆ ಸೀಮಿತವಾಗಿರುತ್ತದೆ. ಆದರೂ ಆ ಕಟ್ಟುವಿಕೆಯ ಹಿಂದೆಯೂ ಒಂದು ಪ್ರಜ್ಞೆ, ನಿಯಮ ಹಾಜರಾಗಿ ಇದ್ದೇ ಇರುತ್ತದೆ. ನಮ್ಮ ಪ್ರತಿಯೊಂದು ಎಚ್ಚೆತ್ತ ಕ್ರಿಯೆಯ ಹಿಂದೆ ಕೆಲವೊಂದು ಅಂದುಕೊಳ್ಳುವಿಕೆ ಇದ್ದೇ ಇರುತ್ತದೆ. ನಾನು ದಿನಾಲು ಒಂದು ಸೇಬು ಹಣ್ಣು ಖರೀದಿಸುತ್ತೇನೆ ಎಂದು ಇಟ್ಟುಕೊಳ್ಳುವ. ಆ ಅದರ ಹಿಂದುಗಡೆ ನನ್ನ ಕೆಲವು ಅಂದುಕೊಳ್ಳುವಿಕೆ ಇದ್ದೇ ಇರುತ್ತದೆ. ಸೇಬು ಕಾಣಲು ಚಂದದ್ದಿದೆ ಎಂದೂ, ನನಗೆ ಬೇರೆ ಹೊಟ್ಟೆಗೆ ಇಲ್ಲ ಎಂದೂ ನಾನು ಅದನ್ನು ಖರೀದಿಸುವುದಿಲ್ಲ. ಬದಲಾಗಿ ಸೇಬು ಆರೋಗ್ಯಕ್ಕೆ ಹಿತಕರ ಎಂಬುದೊಂದು ಗ್ರಹಿಕೆ. ದಿನಾಒಂದೊಂದು ಸೇಬು ಸೇವಿಸುವುದು ಉತ್ತಮ ಎಂದು ಯಾರೂ ಪ್ರಸಿದ್ಧ ವೈದ್ಯರು ಹೇಳಿದ್ದನ್ನು ಖಾತ್ರಿ ಮಾಡಿಕೊಂಡಿರುತ್ತೇನೆ. ಆ ಸೇಬಿನ ಬೆಲೆಯನ್ನು ಇತರ ಹಣ್ಣುಗಳೊಡನೆ ಹೋಲಿಸಿಕೊಂಡಿರುತ್ತೇನೆ. ಸೇಬಿನ ಬೆಲೆಗೂ ನನ್ನ ಕಿಸೆಯಲ್ಲಿ ಮಿಗುತಾಯವಾಗುವ ಹಣವನ್ನು ಗ್ರಹಿಸುತ್ತೇನೆ. ಹೀಗೆ ಒಂದು ಸೇಬು ಕೊಳ್ಳುವುದರಲ್ಲಿ ಎಷ್ಟೆಲ್ಲ ಗ್ರಹೀತಗಳು ಕೆಲಸ ಮಾಡುತ್ತವೆ! ಇದು ಹಾಗಲ್ಲ, ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಕಟ್ಟುವ ಬಗೆ, ಎಷ್ಟೆಲ್ಲ ಸಮಸ್ಯೆ, ಸಂಕೀರ್ಣತೆಯನ್ನು ಉಂಟುಮಾಡಲಿಕ್ಕಿಲ್ಲ? ಇದು ವೈಯಕ್ತಿಕವಲ್ಲ. ಸಮೂಹವನ್ನು ಕಟ್ಟುವ ಕ್ರಿಯೆ. ಚರಿತ್ರೆಯನ್ನು ಕಟ್ಟುವ ಕ್ರಿಯೆ. ಆದ್ದರಿಂದ ಇದರ ವಿನ್ಯಾಸ ಬಹು ಸಂಕೀರ್ಣವಾದುದು. ಜೇನು ಹುಳು ಸಾವಿರಾರು ಹೂಗಳಿಂದ ಒಂದೊಂದು ನಮೂನೆಯ ಒಂದೊಂದೂ ಹನಿಯನ್ನು ಸಂಗ್ರಹಿಸಿ ಅವೆಲ್ಲವಕ್ಕಿಂತ ಬೇರೆಯದೇ ಆದ ಒಂದು ಪಾಕವನ್ನು ತಯಾರಿಸದಂತೆ ಈ ಕಟ್ಟುವ ಕ್ರಿಯೆ. ಈ ದೇಶ ಕಟ್ಟುವ ಕ್ರಿಯೆಯಲ್ಲಿ ತೊಡಗಿದ ಮಹಾತ್ಮಾಗಾಂಧಿಯನ್ನು ಪಕ್ಕಾ ದೇಶೀ ಮನುಷ್ಯ ಎನ್ನುತ್ತೇವೆ. ಆದರೆ ಅವರ ವ್ಯಕ್ತಿತ್ವದಲ್ಲಿ ಮಿಲನಗೊಂಡ ಪ್ರಭಾವ ಎಷ್ಟೊಂದು!

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಆಶ್ರಯದಲ್ಲಿ ಗದಗದಲ್ಲಿ ನಡೆದ ೨೨-೩-೨೦೦೨ರಂದು 'ಜನತೆಯತ್ತ ಕನ್ನಡ' ಕಾರ್ಯಕ್ರಮದಲ್ಲಿ ಮಂಡಿಸಿದ್ದು.

ರುಸೋನ 'ಅಂಟುದಿಸ್ ಲಾಸ್ಟ' ಒಂದು ಕಡೆಯಾದರೆ ಟಾಲಿಸ್ಟಾಯ್‌ನ ಶಾಲೆ ಒಂದುಕಡೆ. ಏಸುವಿನ ಕ್ಷಮಾಭಾವ ಇನ್ನೊಂದಾದರೆ ವೈಷ್ಣವ ಭಕ್ತಿ ಪಂಥದ ದೈವಿಕ ಭಾವ ಇನ್ನೊಂದು ಕಡೆ. ಇದೆಲ್ಲವೂ ಸೇರಿಯೂ ಆತ ದೇಶೀ ಆಗಿಯೇ ಉಳಿದಿರುವುದು ಒಂದು ಪವಾಡ ಎನ್ನುವುದಾದರೆ, ನಾಡು, ನುಡಿ, ಸಂಸ್ಕೃತಿಗಳನ್ನು ಕಟ್ಟುವ ಕೆಲಸವೂ ಹಾಗೆಯೇ. ಇಲ್ಲಿ ದುರಾಗ್ರಹ ಸಹ ಸಲ್ಲದು. ಯಾಕೆಂದರೆ ನಾವು ನಮ್ಮ ಖಾಸಾ ಸಂಸ್ಕೃತಿಯನ್ನು ಕಟ್ಟುತ್ತೇವೆ ಎಂದುಕೊಂಡು ಪಾಶ್ಚಾತ್ಯ ಕೊಡುಗೆಯಾದ ಪ್ರಜಾಪ್ರಭುತ್ವ (ಡೆಮೊಕ್ರಸಿ)ಯನ್ನು ನಿರಾಕರಿಸಲಾಗುತ್ತದೆಯೇ? ಆದ್ದರಿಂದ ಭಾಷೆ, ಸಂಸ್ಕೃತಿಯನ್ನು ಕಟ್ಟುವ ಕೆಲಸದಲ್ಲಿ ದುರಭಿಮಾನ, ದುರಹಂಕಾರ ಸಲ್ಲದು. ಧಾರ್ಮಿಕ ಮೂಲಭೂತವಾದಂತೆ ಭಾಷೆ ಮತ್ತು ಸಂಸ್ಕೃತಿಯ ಮೂಲಭೂತವಾದವೂ ತ್ಯಾಜ್ಯ. ಆದ್ದರಿಂದ ಕಟ್ಟುವ ಕೆಲಸ ನಮ್ಮ ಅಂತಸ್ಫೂರ್ತಿಯಿಂದ ಆಗಿರಬೇಕು. ಹಾಗೆಯೇ ಭಾಷೆ-ಸಂಸ್ಕೃತಿಗಳ ಅಂತಿಮ ಉದ್ದೇಶ ಕೂಡ ನಮ್ಮ ಅಸ್ಮಿತೆಯನ್ನು ಇಟ್ಟುಕೊಂಡು ಪರರ ಅಸ್ಮಿತೆಯನ್ನು ಅರಿಯವ ಮತ್ತು ಗೌರವಿಸುವುದಾಗಿರಬೇಕು. ಸಾವಿರಾರು ಹೂಗಳಿಂದ ಮಕರಂದವನ್ನು ಸಂಗ್ರಹಿಸುವ ಜೇನುಹುಳ ತಯಾರಿಸುವ ಹೊಸ ಪಾಕದಲ್ಲಿ ಆ ಎಲ್ಲ ಮಕರಂದಗಳ ಮೂಲ ಗುಣವೂ ಸೇರಿ ಒಂದು ಹೊಸ ರುಚಿ ಬಂದಿರುತ್ತದೆ. ಅಂದರೆ ನಾವು ಜೇನುತುಪ್ಪ ಎಂದು ಕರೆಯುವ ಹೊಸ ಪಾಕದಲ್ಲಿ ಎಲ್ಲವೂ ಇದ್ದೂ ಹೊಸದಾಗೇ ಇರುತ್ತದೆ. ಈ ಹದಗೊಳಿಸುವಿಕೆಯಲ್ಲಿ ಸ್ಥಿರಾಂಶವೂ ಇದೆ, ಪರಿವರ್ತನೆಯೂ ಇದೆ. ಭಾಷೆ ಮತ್ತು ಸಂಸ್ಕೃತಿಯ ಕಟ್ಟುವಿಕೆಯೂ ಹಾಗೆ. ಅದು ಕಟ್ಟುಪಾಡಿಗೆ ಸಿಕ್ಕಿದ್ದು ಎಂದು ಕೊಂಡಾಗಲೂ ಅದನ್ನು ಮೀರಿರುತ್ತದೆ. ಅಂದರೆ ಸಂಸ್ಕೃತಿಯ ಚರಿತ್ರೆ ಎನ್ನುವುದು ಏಕ ಕಾಲಕ್ಕೆ ಸ್ಥಿರವೂ ಮತ್ತು ಚಲನಶೀಲವೂ ಆಗಿರುತ್ತದೆ. ಮೂಲಭೂತವಾದವಾದರೆ ಹಾಗಿರುವುದಿಲ್ಲ. ಅದು ನಿಂತ ನೀರು. ನಿಂತ ನೀರು ಕೊಳೆಯುತ್ತದೆ; ನಾರುತ್ತದೆ. ಅದು ಸ್ಥಿರ-ಸ್ಥಾವರ. ಸ್ಥಾವರಕ್ಕೆ ಅಳಿವುಂಟು. ಜಂಗಮಕ್ಕೆ ಅಳಿವಿಲ್ಲ. ಸಂಸ್ಕೃತಿಯ ಹದ, ಸಂಸ್ಕೃತಿಯ ತಾಳಿಕೆ ಅಂತಹದು.

ಇಲ್ಲೊಂದು ವೈರುಧ್ಯ ತಲೆ ಹಾಕಬಹುದಾಗಿದೆ. ಕಟ್ಟುವುದು ಎಂದರೆ ಕೃತ್ರಿಮ. ಸಂಸ್ಕೃತಿ, ಭಾಷೆ ನೈಸರ್ಗಿಕ. ಒಂದು ಭಾಷೆ, ಒಂದು ಸಂಸ್ಕೃತಿ ಎಂಬುದನ್ನು ಮನೆ ಕಟ್ಟಿದವರಿಗೆ ಹಾಗೆ ನಾವು ಕೆಲವರು ಕುಳಿತು ಕಟ್ಟಲಾಗುತ್ತದೆಯೇ? ಹಾಗಾದರೆ ಯಾರೂ ಏನನ್ನೂ ಯಾವಾಗಾದರೂ ಮಾಡಿಬಿಡಬಹುದಲ್ಲ? ಭಾಷೆ, ಸಂಸ್ಕೃತಿ ಎಂಬುದು ಹಾಗೆ ಒಬ್ಬನ ಕೈ ಚಳಕವಲ್ಲ. ಹಾಗೆ ಕೆಲವು ಶಬ್ದಗಳನ್ನು ತಮಾಶೆಗೆ ನಿರ್ಮಿಸಬಹುದು. ಭಾಷೆ, ಸಂಸ್ಕೃತಿಗಳೆಲ್ಲ ಬದುಕಿನ ಫಲ; ಸಮೂಹದ ಫಲ; ಅಂತಿಮವಾಗಿ ಮನುಷ್ಯ ಸಮೂಹದ ಕ್ರಿಯಾಶೀಲತೆಯ, ಶ್ರಮಶೀಲತೆಯ ಪಾಕ-ಪರಿಣಾಮ. ಅದರಲ್ಲಿ ಪರಿಸರ, ಪ್ರಾಸಂಗಿಕತೆಯ ಪರಿಣಾಮ ಇರುವಂತೆ ಪ್ರಜ್ಞಾಪೂರ್ವಕ ಪರಿಣಾಮವೂ ಇರುತ್ತದೆ. ಕೋಬರ್ ಎಂಬ ಸಮಾಜಶಾಸ್ತ್ರಜ್ಞ ಸಂಸ್ಕೃತಿಯೆಂದರೆ "ನಾವು ಕಲಿತ ಹಾಗೂ ಪ್ರಸಾರ ಮಾಡುವ ಸ್ವಭಾವ, ತಂತ್ರವಿಧಾನ, ಚಿಂತನೆ ಮತ್ತು ಮೌಲ್ಯಗಳ ಮೊತ್ತ"[1] ಎನ್ನುತ್ತಾರೆ. ಅಂದರೆ ಇದ್ದುದು ಇದ್ದ ಹಾಗೇ ಸಂಸ್ಕೃತಿಯಾಗುವುದಿಲ್ಲ. ಪರಿಸರ, ಪ್ರಾಸಂಗಿಕತೆ, ಆರ್ಥಿಕತೆ ಇತ್ಯಾದಿಗಳ ಸ್ವಯಂಮತ್ವವನ್ನು ಒಳಗೊಂಡೇ ಚಿಂತನೆ, ತಂತ್ರ ಹಾಗೂ

ಮೌಲ್ಯಗಳ ಆಯ್ಕೆ ಇರುತ್ತದೆ ಎಂದು ಅರ್ಥ. ಹಾಗೆಯೇ ಅದನ್ನು ಗುರುತಿಸುವಾಗಲೂ ಮೌಲ್ಯದ ಮಾನದಂಡ ಇದ್ದೇ ಇರುತ್ತದೆ. ಆದರೆ ಅದರ ಕೇಂದ್ರ ಸ್ಥಾನ ಯಾವುದು ಎನ್ನುವುದು ಕಟ್ಟುವ ಕ್ರಿಯಯಲ್ಲಿ ಮುಖ್ಯವಾಗಬೇಕು.

ಕಟ್ಟುವ ಕ್ರಿಯೆಯಲ್ಲಿ ಎರಡು ವಿಭಾಗದ ಒಂದು ಏಕತೆ ಇರಬೇಕಾಗುತ್ತದೆ. ಉದಾಹರಣೆಗಾಗಿ ಹೇಳುವುದಾದರೆ ಒಂದು ಸೇತುವೆಯನ್ನು ಕಟ್ಟುವ ಕೆಲಸವನ್ನು ನೋಡಬಹುದು. ಅಲ್ಲಿ ಎರಡು ಪಡೆಗಳಿರುತ್ತವೆ. ಒಂದು ಕಾರ್ಮಿಕ ಪಡೆ. ಇನ್ನೊಂದು ತಂತ್ರಜ್ಞರದು. ಈ ಎರಡು ಪಡೆಗ ಸಮೂಹ ಸಾಮರಸ್ಯದಿಂದಲೇ ಸರಿಯಾದ ಸೇತುವೆ ನಿರ್ಮಾಣವಾಗುತ್ತದೆ. ನಾಡು, ನುಡಿ ಸಂಸ್ಕೃತಿಯನ್ನು ಕಟ್ಟುವ ಕಾರ್ಯದಲ್ಲೂ ಹಾಗೇ. ನುಡಿಯ ಕುರಿತು, ನಾಡಿನ ಕುರಿತು, ತನ್ನತನದ ಕುರಿತು ಉತ್ಸಾಹವನ್ನು, ಭಾವವನ್ನು (ಭಾವೋದ್ರೇಕ ಅಲ್ಲ), ಪ್ರೀತಿಯನ್ನು, ಶ್ರಮವನ್ನು ಹುಟ್ಟಿಸುವ, ಒಟ್ಟಾರೆಯಾಗಿ ಕ್ರಿಯಾಶೀಲತೆಯನ್ನು ನಿರ್ವಹಿಸುವ ಭಾಗ. ಇದು ಕಾರ್ಯಕರ್ತರ ಪಡೆ ಎನ್ನಬಹುದು. ಇದರಲ್ಲಿ ಚಳವಳಿಯ ಎಲ್ಲ ಈ ಅಂಶಗಳೂ ಇರುತ್ತವೆ. ಹಾಗೆಯೇ ಈ ಎಲ್ಲದಕ್ಕೂ ಮತ್ತು ಚಳವಳಿಗೂ ತಾತ್ವಿಕತೆಯನ್ನು ಒದಗಿಸುವ ಸೈದ್ಧಾಂತಿಕತೆಯನ್ನು ಒದಗಿಸುವ ಪ್ರಜ್ಞಾಭಾಗ ಇನ್ನೊಂದು. ಈ ಚಿಂತನೆ, ತಾತ್ವಿಕತೆ ಎಂಬುದು ಜನಮುಖಿ, ಜನಪರ ಆದಾಗ ಚಳವಳಿ ಜನಮುಖಿ, ಜನಪರ ಮತ್ತು ಸಾಮರಸ್ಯದ ಪರವಾಗಿರುತ್ತದೆ. ಇಲ್ಲದಿದ್ದರೆ ಉದ್ರೇಕಕ್ಕೆ ಎಡೆಕೊಡುತ್ತದೆ. ಮೂಲಭೂತವಾದ ವಾಗುತ್ತದೆ. ಜನವಿರೋಧಿ ಯಾಗುತ್ತದೆ. ಹಾಗೆಯೇ ಹಿಂಸೆ ಮತ್ತು ನಾಶಕ್ಕೆ ಎಡೆ ಮಾಡುತ್ತದೆ. ಅಂಥ ತಾತ್ವಿಕ ಚೌಕಟ್ಟನ್ನು ಚರಿತ್ರೆಯಿಂದಲೂ, ಸಾಮಾಜಿಕ ಪ್ರಸ್ತುತತೆಯಿಂದಲೂ ವೈಯಕ್ತಿಕ ಮತ್ತು ಸಾಮೂಹಿಕ ಅನುಭವದಿಂದಲೂ ಆರಿಸಿ, ಕಾಸಿ, ಹೆಣೆದು ಅರಗಿಸಿಕೊಳ್ಳಬೇಕು.

ಸಂಸ್ಕೃತಿ ಎಂದರೇನು?

ಸಂಸ್ಕೃತಿ ಎಂದರೇನು? ಎನ್ನುವ ಪ್ರಶ್ನೆಗೆ ಉತ್ತರ ದಿನದಿನಕ್ಕೂ ಸಂಕೀರ್ಣವಾಗುತ್ತಲೇ ಹೋಗುತ್ತದೆ. ಇಂದಿನ ದಿನಗಳಲ್ಲಿ 'ಸಂಸ್ಕೃತಿ' ಎಂಬುದು ಬಳಸುವವರ ಮನಸ್ಸಿಗೆ ತೋಚಿದಂತೆ ಬಳಕೆಯಾಗಿ ಅದರ ಖಚಿತ ಸ್ವರೂಪವೇ ಸಿಕ್ಕುತ್ತಿಲ್ಲ ಎಂಬುದರ ಕಡೆಗೆ ಡಾ. ರಹಮತ ತರೀಕೆರೆ ನಮ್ಮ ಗಮನ ಸೆಳೆಯುತ್ತಾರೆ.[3]

ಆದರೆ ನಾವಿಲ್ಲಿ ಒಂದು ನಿರ್ದಿಷ್ಟ ಸಂದರ್ಭದಲ್ಲಿ ಜನ ಸಂಸ್ಕೃತಿಯಾಗಿ 'ಸಂಸ್ಕೃತಿ'ಯನ್ನು ಬಳಸುತ್ತಿದ್ದೇವೆ ಎಂಬುದರ ಹಿನ್ನೆಲೆಯಲ್ಲಿ ಕನ್ನಡದಲ್ಲಿ ಸಂಸ್ಕೃತಿ ಕುರಿತಾಗಿ ನಡೆದ ಚರ್ಚೆಯ ನೆಲೆಗಳನ್ನು ಸ್ಥೂಲವಾಗಿ ನೋಡುವ.

''ಸಂಸ್ಕೃತಿ''ಯ ಕುರಿತಾಗಿ ಕನ್ನಡದಲ್ಲಿ ಚಿಂತನೆ ನಡೆಸಿದವರಲ್ಲಿ ಡಿ.ವಿ. ಗುಂಡಪ್ಪನವರು ಹಿರಿಯರಲ್ಲಿ ಮುಖ್ಯರು. ಅವರನ್ನು ಗಮನಿಸಿದರೆ 'ಸಂಸ್ಕೃತಿ' ಕುರಿತಾದ ಒಂದು ತಿಟ್ಟನ ಗ್ರಹಿಕೆ ಸಾಧ್ಯವಾಗುತ್ತದೆ.

ಡಿ.ವಿ.ಜಿ. ಯವರು ಕನ್ನಡದ ಹಿರಿಯ ಚಿಂತಕರಾದಂತೆ ಹಿರಿಯ ಕವಿಗಳೂ, ಪತ್ರಕರ್ತರೂ ಹೌದು. ರಾಷ್ಟ್ರ ಜೀವನವನ್ನು ಕಟ್ಟುವ ಕೆಲಸದಲ್ಲಿ ಗಂಭೀರವಾಗಿ ತೊಡಗಿಕೊಂಡವರು. ಬಡ ಬ್ರಾಹ್ಮಣ ಮನೆತನದಲ್ಲಿ ಹುಟ್ಟಿಬಂದ ಅವರು ಆರ್ಥಿಕವಾಗಿ ಕಷ್ಟದಲ್ಲಿದ್ದರೂ ಕೂಡ ಸಂಬಳದ ನೌಕರಿಯನ್ನು ಬಿಟ್ಟು ಸ್ವಂತ ದುಡಿಮೆಯಾದ ಪತ್ರಕರ್ತರ ಬದುಕನ್ನು ಆರಿಸಿಕೊಂಡವರು. ಅವರು ಸಂಸ್ಕೃತ-ಕನ್ನಡದಲ್ಲಿ ಹೇಗೋ ಹಾಗೆ ಇಂಗ್ಲೀಷ್ ಆಧುನಿಕ ಜ್ಞಾನದಿಂದಲೂ ಆಕರ್ಷಿತರಾದವರು. ಭಾರತೀಯರ ಜೀವನ ಪರಾಮ್ಮುಖತೆಯನ್ನು ಕಂಡು ಬಲು ನೊಂದುಕೊಂಡವರು. "ಗೌರವಿಸು ಜೀವನವ ಗೌರವಿಸು ಚೇತನವ ಆರದೋ ಜಗವೆಂದು ಭೇದವೆಣಿಸದಿರು ಹೋರುವುದು ಜೀವನ ಸಮೃದ್ಧಿಗೊಳಿಸುವುದೆ ನಿನಗೆ ದಾರಿ ಆತ್ಮೋನ್ನತಿಗೆ ಮಂಕುತಿಮ್ಮ" ಎಂದು ಜನವನ್ನು ಉತ್ತೇಜಿಸಿದವರು.

ಅವರ ಪ್ರಸಿದ್ಧವಾದ ಮುಕ್ತಕ : ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು
ಹೊಸಯುಕ್ತಿ ಹಳೆತತ್ವದೊಡಗೂಡೆ ಧರ್ಮ,
ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ;
ಜಸವು ಜೀವನಕೆ -ಮಂಕುತಿಮ್ಮ"

ಎಂಬುದು ಅವರ ತಾತ್ವಿಕ ಗ್ರಹಿಕೆಯನ್ನು ಪ್ರಕಟಪಡಿಸುತ್ತದೆ. ಅವರ ಸಾಂಸ್ಕೃತಿಕ ಚಿಂತನೆಯನ್ನು 'ಸಂಸ್ಕೃತಿ' ಎಂಬ ಪುಸ್ತಕ ಗಟ್ಟಿಗೊಳಿಸುತ್ತದೆ. ಈ ಕುರಿತಾದ ಅವರ ಚಿಂತನೆಯನ್ನು ಕೆ. ರಾಘವೇಂದ್ರರಾವ್ 'ಧರ್ಮವು ಬದುಕಿನ ಮಾರ್ಗ ದರ್ಶಕ ತತ್ವ. ನಮ್ಮ ಸಂಸ್ಕೃತಿಯು ಭೌತಿಕ ಸುಖಕ್ಕಿಂತ ಆಧ್ಯಾತ್ಮಿಕ ಮತ್ತು ನೈತಿಕ ತತ್ವಗಳಿಗೆ ಹೆಚ್ಚಿನ ಒತ್ತು ಕೊಡುತ್ತದೆ' ಎಂಬ ಮಾತಿನಲ್ಲಿ ಹರಳುಗೊಳಿಸಿದ್ದಾರೆ. ಇದರ ವಿವರಕ್ಕಾಗಿ ಡಿ.ವಿ.ಜಿ. ಅವರ ಕೆಲ ಮಾತುಗಳನ್ನು ಗಮನಿಸಬಹುದಾಗಿದೆ.

ಪುರಾತನ ಗ್ರಂಥಗಳಲ್ಲಿಯೂ ಅದರ (ಸಂಸ್ಕೃತಿ ಎಂಬ ಪದದ) ಪ್ರಯೋಗ ಕಾಣಸುವುದಿಲ್ಲ. ಆದರೆ ಅದಕ್ಕೆ ಜ್ಞಾತಿಪದವಾದ 'ಸಂಸ್ಕಾರ' ಎಂಬ ಪದವು ಪೂರ್ವಿಕ ಪ್ರಯೋಗದಲ್ಲಿದೆ. ಶೋಡಷ ಸಂಸ್ಕಾರವಾದ ಬುದ್ಧಿ 'ಸಂಸ್ಕಾರ' ಇತ್ಯಾದಿ. ಸಂಸ್ಕಾರ ಪಡೆದ ಭಾಷೆ 'ಸಂಸ್ಕೃತ' ಹಾಗೆಯೇ ಒಳ್ಳೆಯ ವಿದ್ಯಾ ಸಂಸ್ಕಾರ ಪಡೆದ ಮನುಷ್ಯ ಸಂಸ್ಕೃತನು. ಇದು ಹಿಂದಿನ ವಾಡಿಕೆ. ಸಂಸ್ಕೃತನ ಗುಣ ಸಂಪತ್ತು ಸಂಸ್ಕೃತಿ.

ಹೀಗೆ ಹೇಳಿದ ಡಿವಿಜಿ ಅದಕ್ಕೆ ಸಂವಾದಿಯಾದ ಇಂಗ್ಲೀಷಿನ ಕಲ್ಚರ್ ಪದವನ್ನು ವಿವರಿಸುತ್ತಾರೆ. "ಕಲ್ಚರ್ ಶಬ್ದದ ಮೂಲ ಲ್ಯಾಟಿನ ಭಾಷೆಯ 'ಕಲ್ಪ' ಅಥವಾ 'ಕಲ್ಪಸ್'. ಆ ಪದದ ಮೂಲಾರ್ಥ ಗೌರವಿಸು, ಸೇವಿಸು, ನಿಷ್ಠೆ ಮಾಡು, ಲಕ್ಷದಲ್ಲಿರಿಸಿಕೊ ಎಂಬ ರೀತಿಯದಾಗಿತ್ತು. ಆ ಮಾತಿನಿಂದ ಕ್ರಮೇಣ ಎರಡು ಅರ್ಥಗಳು ಹೊರಟವು. ದೈವದೀಕ್ಷೆ, ವ್ರತದೀಕ್ಷೆ, ಮತ ಸಿದ್ಧಾಂತ ಇತ್ಯಾದಿ. ಭೂದೇವಿಯ ಆರಾಧನೆ, ಕೃಷಿ, ಉಳುಮೆ, ಪೈರು ಬೆಳೆಸುವುದು ಇತ್ಯಾದಿ.... ಕಲ್ಚರ್ ಎಂದರೆ ಮನುಷ್ಯನ ಬುದ್ಧಿಯ ವ್ಯವಸಾಯ, ಅಂತರಂಗ ಸಂಸ್ಕಾರ ಎಂಬ ಅರ್ಥವು ಪ್ರಚಾರಕ್ಕೆ ಬಂತು. ಹೀಗೆ ಸಾಹಿತ್ಯ, ಸಂಗೀತ, ಚಿತ್ರಾ, ಶಿಲ್ಪ

ಮೊದಲಾದ ಕಲೆಗಳ ಮೂಲಕ ಉಂಟಾಗತಕ್ಕ ಉತ್ತಮ ಮನೋಭಾವ 'ಕಲ್ಚರ್' ಎಂದು ರೂಢಿಗೆ ಬಂದಿದೆ.

ಈ ಸಂದರ್ಭದಲ್ಲಿ ಅವರು ಆಂಗ್ಲ ಚಿಂತಕ ಮ್ಯಾಥ್ಯೂ ಅರ್ನಾಲ್ಡನ ಸಂಸ್ಕೃತಿ ವ್ಯಾಖ್ಯಾನವನ್ನು ವಿವರಿಸುತ್ತಾರೆ. ಆ ಮೇಲೆ ಅವರು ತಲ್ಪುವ ನಿರ್ಣಯ ಹೀಗಿದೆ. 'ಸಂಸ್ಕೃತಿ ಎಂಬುದು ಬರಿಯ ವಿದ್ಯೆಯಲ್ಲ; ಅದು ವಿದ್ಯಾ ಕುಸುಮದ ಪರಾಗ ಅದು ಸಾಹಿತ್ಯ ಪರಾಮರ್ಶೆಯ ಮತ್ತು ಲೋಕಾನುಭವವಿವೇಕದ ದಾಂಪತ್ಯದಿಂದ ಜನಿಸುವ ಒಂದಾನೊಂದು ಸಕಲ ಸಮಾಧಾನಕರವಾದ ಶೀಲಸೌಭಾಗ್ಯ, ಅದು ಜೀವನದ ನಾನಾ ವಿಷಯಗಳ, ನಾನಾ ಧ್ಯೇಯಗಳ, ನಾನಾ ತತ್ವಗಳ, ನಾನಾ ಧರ್ಮಗಳ ಮೌಲ್ಯ ತಾರತಮ್ಯ ಜ್ಞಾನದಿಂದಾದ ಸಮನ್ವಯ ಸ್ವಾರಸ್ಯ. ಅದೇ ನಯ ವಿನಯ ಮರ್ಯಾದೆ... ಸಂಸ್ಕಾರದಿಂದ ಸಂಸ್ಕೃತಿ. ಸಂಸ್ಕಾರ ಅಥವಾ ಸಂಸ್ಕರಣ ಎಂದರೆ ಸಮ್ಯಕರಣ, ಸಮ್ಯಕ್ ಕೃತಿ-ಸಂಸ್ಕೃತಿ ಹಾಗೆಂದರೆ ಚೆನ್ನಾಗಿರುವುದು.'[7]

ಇಲ್ಲಿಯವರೆಗಿನ ವ್ಯಾಖ್ಯಾನದಲ್ಲಿ ನಮಗೆ ಮನದಟ್ಟಾಗುವ ಅರ್ಥವೆಂದರೆ ಸಂಸ್ಕೃತಿಯೆಂದರೆ ಅಂತರಂಗದ ಪರಿಪಾಕ. ಅದು ನಡತೆಯ ನಯ ವಿನಯದಲ್ಲಿ ಕಾಣಿಸಿಕೊಳ್ಳುತ್ತದೆ. ನಾನಾ ತತ್ವ ವಿಚಾರ, ಸಾಹಿತ್ಯ, ಕಲೆಗಳ ಅನುಭವದಿಂದ ಹದಗೊಳ್ಳುವ ವ್ಯಕ್ತಿತ್ವ.

"ರೂಪ ಗುಣಗಳು ಅನೇಕವಿದ್ದು ಒಂದೊಂದು ರೂಪವೂ ಒಂದೊಂದು ಗುಣವೂ ತನ್ನ ಮಟ್ಟಿಗೆ ತಾನು ಕೂಡಿದಷ್ಟು ಚೆನ್ನಾಗಿ ಎದ್ದು ನಿಲ್ಲಬೇಕು; ಮತ್ತು ಪ್ರತಿಯೊಂದು ತನ್ನ ನೆರೆ ಹೊರೆಯ ರೂಪ ಗುಣಗಳೊಡನೆ ಬೆರೆತು, ಒಟ್ಟಿನ ಸೊಗಸಿಗೆ ಅನುಕೂಲವಾಗುವಂತೆ ತನ್ನ ಭಾವಚರ್ಯೆಗಳನ್ನು ಮಾಡಿಕೊಳ್ಳಬೇಕು."

"ಆರೋಗ್ಯವಂತನ ಶರೀರದ ಅವಯವಗಳಲ್ಲಿ ಎರಡು ಲಕ್ಷಣಗಳು ಕಾಣ ಬರುತ್ತವೆ. ತೋಳು ಬಲವಾಗಿರುತ್ತದೆ; ಆದರೆ ಕಾಲಿಗೆ ಸಲ್ಲಬೇಕಾದ ಪುಷ್ಟಿಯನ್ನು ಅದು ನುಂಗಿಕೊಳ್ಳುವುದಿಲ್ಲ. ಕಣ್ಣು ಸೂಕ್ಷ್ಮ ಗ್ರಹಿಯಾಗಿರುತ್ತದೆ; ಆದರೆ ಕಿವಿಯ ಶಕ್ತಿಯನ್ನು ಅದು ಮಂದ ಮಾಡುವುದಿಲ್ಲ. ಅಂಗಾಂಗಗಳಲ್ಲಿ ಒಂದು ಸ್ವಕರ್ಮ ನಿಷ್ಠೆಯಿರುವುದರಿಂದ ಅದು ಅನ್ಯೋನ್ಯ ಸ್ನೇಹ ದೃಷ್ಟಿಯೂ ಇರುತ್ತದೆ. ಅದರಿಂದಲೇ ಅನುರೂಪತೆ; ಅದೇ ಅನುಗುಣ್ಯ. ಅದೇ ಔಚಿತ್ಯ."[8]

ಇಲ್ಲಿ ನಮ್ಮ ಕಣ್ಣೆದುರು ನಿಲ್ಲುವುದು ಪುರುಷ ಸೂಕ್ತ ಪ್ರಣೀತ ಸಮಾಜ ಪುರುಷನ ಪ್ರತಿಮೆ. ಇದನ್ನು ಓದಿದೊಡನೆ ಭಗವದ್ಗೀತೆಯ ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮ ವಿಭಾಗಶಃ ಎಂಬ ಮಾತು ನೆನಪಿಗೆ ಬರುತ್ತದೆ. ಮತ್ತು ಭಗವದ್ಗೀತೆಯ ಈ ಮಾತಿನ ಹಿನ್ನೆಲೆಯಲ್ಲಿ ವರ್ಣಧರ್ಮದ ಅಸಮಾನತೆ ಅಡಕವಾಗಿದೆ. ತೋರಿಕೆಗೆ ಇದು ಸಭ್ಯವೆಂದು ಕಂಡರೂ ಇದು ಕಣ್ಣು, ಕಿವಿ ಕಾಲಿನಷ್ಟು ಸರಳ-ಸಭ್ಯವಾಗಿಲ್ಲ. ವಿನೋಬಾ ಭಾವೆಯವರು ಇನ್ನೊಂದು ಕಡೆ 'ಇಡಿಯಾಗಿ ಸಕ್ಕರೆಯ ಒಂದು ಗೊಂಬೆಯಲ್ಲಿ ಕಾಲೇನು, ತಲೆಯೇನು ಎಲ್ಲವೂ ಒಂದೇ

ಸಿಪಿ' ಎಂದು ಹೇಳಿದ್ದಾರೆ. ಇಂಥವುಗಳೆಲ್ಲ ತೋರಿಕೆಗಷ್ಟೇ ಸಭ್ಯ-ಸುಂದರ. ಆದರೆ ವಾಸ್ತವತೆ ಅತ್ಯಂತ ಕ್ರೂರವಾಗಿರುತ್ತದೆ.

ಈ ವಿಭಜನೆಗೆ ಕರ್ತವ್ಯ ಅಥವಾ ಕರ್ಮ-ವಿಭಜನೆಗೆ ಅರಿಸ್ಟಾಟಲ್‌ನ ಸಾಮಾಜಿಕ ವರ್ಗ ಹೋಲಿಕೆಯನ್ನು ಕೊಡುವುದು ಸರಿಹೋಗುವುದಿಲ್ಲ. ಅದಕ್ಕೆ ಡಾ. ಅಂಬೇಡ್ಕರರ ಉದಾಹರಣೆಯೇ ಸಾಕ್ಷಿ. ಡಾ. ಅಂಬೇಡ್ಕರ ಹಿಂದೂ ಧರ್ಮದಲ್ಲಿ ಜಾತಿ-ಅಸ್ಪೃಶ್ಯತೆ ತೊಲಗಿ ಸಮಾನತೆ-ಸೋದರತೆ ಬರುವಂತಾಗಬಹುದೆಂದು ಆಶಿಸಿ ತಾನು ಅಸ್ಪೃಶ್ಯನಾಗಿ ಹುಟ್ಟಿ ಅಸ್ಪೃಶ್ಯನಾಗಿ ಸಾಯುವುದಿಲ್ಲ ಎಂದು ಸಮಾಜ ಸುಧಾರಕರಿಗೆ ಸವಾಲು ಹಾಕಿ ಮೂವತ್ತೂ ವರ್ಷ ಕಾದರೂ ಪ್ರಯೋಜನವಾಗಲಿಲ್ಲ. ಕೊನೆಗೆ ಅವರು ಸಾಮಾಜಿಕ ಸಮಾನತೆಯನ್ನು ಅರಸಿ ಬೌದ್ಧ ಧರ್ಮಕ್ಕೆ ಶರಣುಹೋದರು.

ಹಿಂದೂ ಧರ್ಮದಲ್ಲಿಯ ಅಸ್ಪೃಶ್ಯತೆ ಮತ್ತು ಜಾತಿ ಜಾತಿಯ ಮಧ್ಯೆಯ ಹೊಕ್ಕ ಬಳಕೆಯನ್ನು ಕಳೆದು ಬಿಟ್ಟರೆ ಚಾತುರ್ವರ್ಣ ವೈಜ್ಞಾನಿಕ ಎಂದೇ ಗಾಂಧೀಜಿ ಹೇಳುತ್ತಾರೆ. ಆಶ್ಚರ್ಯಕರ ಎಂಬಂತೆ ಪುರೋಹಿತಶಾಹಿಯ ಕಟುಟೀಕಾಕಾರರಾದ ಕುವೆಂಪು ಅವರೂ "ಇಲ್ಲಿ ಗೀತೆಯದೇನೂ ತಪ್ಪಿಲ್ಲ ಅದು ವಿಶ್ವ ಜನತೆಗೆ ಅನ್ವಯವಾಗುವಂತೆ ಮನಃಶಾಸ್ತ್ರೀಯ ಸಮ್ಮತವಾಗಿ ಗುಣ ಕರ್ಮ ವಿಭಾಗಶ: ವರ್ಣಗಳು ಸೃಷ್ಟಿಯಾಗಿವೆ ಎಂದೇ ಹೇಳುತ್ತೇನೆ" ಅನ್ನುತ್ತಾರೆ. ಅದನ್ನು ವಿವರಿಸುತ್ತಾ "ವರ್ಣನಿರ್ಣಯ ಹುಟ್ಟಿನಿಂದಲ್ಲ. ಜೀವದ ಸ್ವರೂಪದ ಸ್ವಭಾವ, ಜನ್ಮಾಂತರ ಸಂಸ್ಕಾರ ಮತ್ತು ಅದಕ್ಕೆ ಅನುಸಾರವಾಗಿ ಅದು ಸಹಜವಾಗಿ ಕೈಕೊಳ್ಳುವ ಕರ್ಮ ಇವುಗಳಿಂದ ಸಿದ್ಧವಾಗುತ್ತದೆ. ಇದು ಸರ್ವ ಮಾನವರಿಗೂ ಅನ್ವಯವಾಗುವ ವಿಶ್ವತತ್ವ" ಎಂದು ಹೇಳುತ್ತಾರೆ. ಭಾರತ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಭಾರತೀಯರೆಲ್ಲರ ಒಕ್ಕೂಟವನ್ನು ಕಾಯ್ದುಕೊಳ್ಳಬೇಕಾಗಿತ್ತು. ಆಗಲೇ ಲೋಕಮಾನ್ಯರಾದಿಗಳಿಂದ ಇಂಗ್ಲೀಷರ ಎದುರಾಗಿ ಭಾರತದ ಆಧ್ಯಾತ್ಮಿಕ ಶ್ರೇಷ್ಠತೆ ಸಾಧಿಸಲ್ಪಟ್ಟಿತು. ಹಾಗೆಯೇ ರಾಜಾರಾಮ ಮೋಹನರಾಯ ಮೊದಲಾದವರ ಸಮಾಜ-ಧರ್ಮ-ಸುಧಾರಣೆಯ ಚಳವಳಿ, ವಿವೇಕಾನಂದರಂಥವರ ಅದ್ವೈತ ಧರ್ಮದ ವಿವರಣೆ ಇತ್ಯಾದಿಗಳು ಕುವೆಂಪು ಅವರಿಂದಲೂ ಈ ಮಾತನ್ನು ಹೊರಡಿಸಿರಬೇಕು. ಆಗ ಅನೇಕ ನೇತಾರರು ಹಿಡಿದ ದಾರಿ ಅದೇ; ಅನಿವಾರ್ಯ ಎಂದುಕೊಂಡದಾರಿ. ಆದರೆ ಅದಕ್ಕೆಲ್ಲ ನಿಜವಾದ ಉತ್ತರವೆಂದರೆ ಕುವೆಂಪು ಅವರದ್ದೇ ಆದ ಬ್ರಿಟಿಷರು ಬರದಿದ್ದರೆ ನಾನು ಯಾವುದೇ ಬ್ರಾಹ್ಮಣರ ಮನೆಯಲ್ಲಿ ಗೊಬ್ಬರ ತೆಗೆಯುತ್ತಿರುತ್ತಿದ್ದೆ, ಎನ್ನುವ ಮಾತಾಗಿದೆ.

ತಮ್ಮ ಸಂಸ್ಕೃತಿಯ ವಿವರಗಳನ್ನು ಮುಂದುವರಿಸುತ್ತ ಡಿವಿಜಿ... ಈ ಅಭ್ಯಾಸ ಭೇದಗಳ ಮತ್ತು ಸಂಪ್ರದಾಯ ಭೇದಗಳ ಆಧಾರದ ಮೇಲೆ ಆಗಿರುವ ವಂಶ, ಜನಪದ, ವರ್ಗ, ಜಾತಿ ಎಂಬ ಭೇದ ಆಚರಣೆಗಳಲ್ಲಿದೆ. ಈ ಪಂಗಡಗಳು ಯಾರೋ ಒಬ್ಬ ಮನುಷ್ಯ ಅಥವಾ ಗುಂಪು ಹುಟ್ಟು ಹಾಕಿದ ಕ್ರತ್ರಿಮ ವಿಭಜನೆಯಲ್ಲ, ಒಟ್ಟಿಗಿದ್ದದನ್ನು ಯಾರೂ ಒಡೆದು ಹಾಕಿಲ್ಲ. ಹುಟ್ಟಿನಲ್ಲಿಯೇ ಮೊಳಕೆ ಹತ್ತು ಕಾಂಡಗಳಾಗಿತ್ತು. ಮತ್ತು ಅದು ಕೊರತೆ ಉಂಟುಮಾಡಬೇಕಾದ

ಸಂಗತಿಯೂ ಅಲ್ಲ. ಆ ಹತ್ತರ ಹತ್ತು ಬಗೆಯದೇ ಸೊಗಸು. ನಮಗೆ ಅಪೇಕ್ಷಣೀಯವಾದದ್ದು ವೈವಿಧ್ಯದ ವಿನಾಶವಲ್ಲ. ವೈವಿಧ್ಯದ ಸಂಮಿಳಿತತೆ-ಏಕರಸತೆಯಲ್ಲಿ, ಸಮರಸತೆ. ಉಪ್ಪು ಹುಳಿಯೂ ಮೆಣಸಾಗಬೇಕಾದದ್ದಿಲ್ಲ. ಆಯಾ ದ್ರವ್ಯ ಆಯಾ ರುಚಿಯನ್ನೇ ಇಟ್ಟು ಕೊಂಡಿರಬೇಕು. ಆ ಸರಿಬೆರಕೆಯೇ ಸಾರಿನ ಸೊಗಸು. ಈ ಮರ್ಮವನ್ನರಿತವರು ಈಗ ಅಲ್ಲಲ್ಲಿ ಕೇಳಿಬರುವ 'ವರ್ಗ ರಹಿತ ಸಮಾಜ', 'ಜಾತಿ ಶೂನ್ಯ ಸಮಾಜ' ಎಂಬ ಕೂಗುಗಳನ್ನು ಕುರುಡು ಕೂಗನ್ನದೇ ಇರರು"[೬] ಎನ್ನುತ್ತಾರೆ.

ಇದೊಂದು ಆರೋಪವಲ್ಲ. ಒಂದು ಸಂದರ್ಭದ ಸಾಂಸ್ಕೃತಿಕ ಚಿಂತನೆಯಿದು. ಮೂಲದ ಕ್ರೂರತೆಯನ್ನು ಉದ್ದಗೊರಟು ಹಾಕಿ ನಯಗೊಳಿಸಿ ಹೊಸ ಕಾಲದ ಹೊಸ ಸಂದರ್ಭದ ಅನಿವಾರ್ಯಕ್ಕೆ ಹದಗೊಳಿಸುವ ರೀತಿ. ಇದು ಡಿವಿಜಿಯ ವರದೊಬ್ಬರದೇ ರೀತಿಯಲ್ಲ. ನವೋದಯ ಕಾಲದ, ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಸಂಸ್ಕೃತಿಯನ್ನು ಪುನಃ ವ್ಯಾಖ್ಯಾನಿಸಿ ಕೊಂಡ ರೀತಿ; ದೇಶದ ಸಂಸ್ಕೃತಿಯನ್ನು ಹೊಸ ಹೊಂದಾಣಿಕೆಯಲ್ಲಿ ಕಟ್ಟಿಕೊಂಡ ರೀತಿ. ಆದ್ದರಿಂದ ಇದು ಡಿವಿಜಿ ಅವರ ಒಬ್ಬರ ವ್ಯಾಖ್ಯಾನ ಎನ್ನುವುದಕ್ಕಿಂತ ಇದೊಂದು ಅಭಿಜಾತ (ಕ್ಲಾಸಿಕಲ್) ಎನ್ನಬಹುದಾದ ಪ್ರಾತಿನಿಧಿಕ ವ್ಯಾಖ್ಯಾನ ಅಂದುಕೊಳ್ಳುವುದು ಸೂಕ್ತ.

ಹೀಗೆ ಇದು ವ್ಯಕ್ತಿ ಕೇಂದ್ರಿತ, ಅಂತರಂಗ ಕೇಂದ್ರಿತ, ಧರ್ಮ-ದೇವರು ಕೇಂದ್ರಿತ, ಜಾತಿ ಕೇಂದ್ರಿತ ಸಂಸ್ಕೃತಿಯಾದರೆ ಇದಕ್ಕೆ ತೀರಾ ವಿರುದ್ಧವಾದ ಬಿಂದುವಿನಿಂದ ಅಂದರೆ ಸಮಾಜ ಕೇಂದ್ರಿತ, ಜಾತ್ಯಾತೀತ ಕೇಂದ್ರಿತ ಸಂಸ್ಕೃತಿಯ ಚಿಂತನೆಯೊಂದು ಇಪ್ಪತ್ತನೇ ಶತಮಾನದ ಕೊನೆ ಕೊನೆಯ ದಶಕಗಳಲ್ಲಿ ಬೆಳೆದುದುದನ್ನು ನಾವು ನೋಡಬಹುದು. ಈ ಚಿಂತನೆಯ ಪ್ರಕಾರದಲ್ಲಿ ಪ್ರಾತಿನಿಧಿಕವಾಗಿ ನಮಗೆ ತೋರುವುದು ಬರಗೂರು ರಾಮಚಂದ್ರಪ್ಪನವರ ಸಂಸ್ಕೃತಿಯ ವ್ಯಾಖ್ಯಾನ.

ಅವರು ಡಿ.ವಿ.ಜಿ.ಯವರಿಂದ ಪ್ರಾತಿನಿಧಿಕವಾಗುವ ಅಭಿಜಾತ ವ್ಯಾಖ್ಯಾನಗಳು ವ್ಯಕ್ತಿ ವಿಶಿಷ್ಟತೆಯ ನೆಲೆಯಲ್ಲಿ ಬಂದಿವೆ. "ವ್ಯಕ್ತಿಯೊಬ್ಬನ ಅಂತರಂಗದ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ. ಅನೇಕ ವ್ಯಕ್ತಿಗಳ ಜೀವನ ವಿಧಾನ ಮತ್ತು ಸಾಂಸ್ಕೃತಿಕ ನೆಲೆಗಳು ಒದಗಿಸಿಕೊಡುವ ವರ್ಗ ನೆಲೆ ಮುಖ್ಯವಾಗಿದ್ದು, ಸಂಸ್ಕೃತಿ ಎನ್ನುವುದು ವ್ಯಕ್ತಿಗಿಂತ ಸಮಾಜದ ಭಾಗವಾಗಿದೆ. ವ್ಯಕ್ತಿಯು ಈ ಸಮಾಜದ, ಈ ಸಂಸ್ಕೃತಿಯ ಒಂದು ಘಟಕವಾಗಿ ಒದಗಿಸುವ, ಹೊರಗಾಗುವ ಒಡನಾಟ ಮತ್ತು ಹೋರಾಟಗಳಲ್ಲಿ ಮಗ್ನನಾಗಿರುತ್ತಾನೆ."

"ಒಟ್ಟಿನಲ್ಲಿ ಅಂತರಾತ್ಮ ಪಾರಮ್ಯ ಮತ್ತು ಆಧ್ಯಾತ್ಮಿಕ ದೃಷ್ಟಿಯ ಲೋಕವ್ಯವಹಾರದ ಎರಡು ತತ್ವ ಹಿಂದೂ ಸಂಸ್ಕೃತಿಯ ಅಂತಸ್ಸಾರ ಎಂದು ಹೇಳಬಹುದು" ಎಂದು ಡಿ.ವಿ.ಜಿ ಹೇಳಿದರೆ, ಬರಗೂರು "ವಾಸ್ತವವಾಗಿ ದೇವರಿಲ್ಲದ ಧರ್ಮವಿದೆ. ಧರ್ಮವಿಲ್ಲದ ಸಂಸ್ಕೃತಿ ಇದೆ" ಎಂದು ಹೇಳುತ್ತಾರೆ.

ಅವರು ತಮ್ಮ ಚಿಂತನೆಯನ್ನು 'ಭೂಮಿತತ್ವ' ಎಂಬ ನೆಲೆಯಲ್ಲಿ ವ್ಯಾಖ್ಯಾನಿಸುತ್ತಾರೆ. "ಬೆವರು ಮನುಷ್ಯ ಸಮಾಜದ ಮೂಲ. ಕತ್ತಲಿನಿಂದ ಬೆಳಕಿಗೆ, ಬೆಳಕಿನಿಂದ ಕತ್ತಲೆಗೆ ಸೇತುವೆ ಕಟ್ಟುತ್ತಾ ಬಂದ 'ಬೆವರು' ನಮ್ಮ ನಡುವಿನ ಒಂದು ಚಾರಿತ್ರಿಕ ಪ್ರಕ್ರಿಯೆ. ಹಗಲಿರುಳೆನ್ನದೆ ನಿರಂತರ ಕ್ರಿಯಾಶೀಲತೆಯಲ್ಲಿ ಮಗ್ನವಾದ ಈ ಬೆವರು ಬೆಟ್ಟಗುಡ್ಡಗಳಲ್ಲಿ ಬದುಕನ್ನು ಹುಡುಕಿದೆ. ನದಿಗಳನ್ನು ನೆಲಮುಖಿಯಾಗಿಸಿ ಹಸಿರು ಬೆಳೆಸುವ ಉಸಿರಾಗಿದೆ. ತನ್ನ ತೊಡಗುವಿಕೆಯ ಮೂಲಕ ಬುದ್ಧಿ-ಭಾವಗಳನ್ನು ಒಳಗೊಳ್ಳುತ್ತ ಸೃಜನಶೀಲ ನೆಲೆಗಳನ್ನು ನಿರ್ಮಾಣ ಮಾಡುತ್ತ ಬಂದಿದೆ. ಒಟ್ಟಾರೆ ಇದೊಂದು ಮನುಷ್ಯ ಚರಿತ್ರೆ. ಎಂದೂ ಬತ್ತದ ಅಕ್ಷಯ ಪಾತ್ರೆ. ಇದೇ ನನ್ನ ಭೂಮಿತತ್ವ."[6]

ಅಂದರೆ ಬರಗೂರು ಅವರ ಈ 'ಭೂಮಿತತ್ವ' ಧರ್ಮನಿರಪೇಕ್ಷಿತ (ಸೆಕ್ಯುಲರ್) ಮತ್ತು ಪ್ರಜಾಪ್ರಭುತ್ವವಾದಿಯಾಗಿದೆ. ಇದು ದೇವರಿಂದ ಮನುಷ್ಯರಿಗೆ, ಧರ್ಮದಿಂದ ಧರ್ಮನಿರಪೇಕ್ಷತೆಯ ಕಡೆಗೆ, ವ್ಯಕ್ತಿಯಿಂದ ಸಮಾಜದ ಕಡೆಗೆ, ಸಾಂಸ್ಕೃತಿಕ ಯಜಮಾನಿಕತೆ (ಹೆಜಮನಿ)ಯಿಂದ ಸಮಾನತೆಯ ಕಡೆಗೆ ತುಡಿತ ಉಳ್ಳದ್ದಾಗಿದೆ. ಸಾಮಾಜಿಕ ವಿಕಾಸವನ್ನು ದೈವ ಮೂಲದಿಂದ ವ್ಯಾಖ್ಯಾನಿಸುವ ಮೂಲಕ ಬೆನ್ನು ಕೆಳಗಾಗಿ ಕಾಲು ಮೇಲಾಗಿ ಮಲಗಿಸಿದ ಪಶುವನ್ನು ತಾನು ಆರ್ಥಿಕತೆಯ ಮೂಲಕ ವಿವರಿಸಿ ಅದನ್ನು ಸರಿಯಾಗಿ ಕಾಲ ಮೇಲೆ ನಿಲ್ಲಿಸಿದ್ದೇನೆ ಎಂದ ಕಾರ್ಲ್‌ಮಾರ್ಕ್ಸ್‌ರ ಹಾಗೆ ಬರಗೂರರು ಸಂಸ್ಕೃತಿಯನ್ನು ಬದುಕಿನ ಕೇಂದ್ರಗೊಳಿಸುವುದರ ಮೂಲಕ ಸರಿಪಡಿಸಿದಂತಾಗಿದೆ. ಇದನ್ನು ಇನ್ನೂ ತುಸು ಒಳಹೊಕ್ಕಿ ನೋಡುವ ಅವಶ್ಯಕತೆಯಿದೆ.

"ಸಂಸ್ಕೃತಿಯೊಂದರ ರೂಪಧಾರಣೆಯ ಹಿಂದೆ ಮನುಷ್ಯನ ಶ್ರಮ ಮತ್ತು ಸೃಜನಶೀಲತೆಗಳೆರಡೂ ಕೆಲಸ ಮಾಡುತ್ತವೆಂದು ನನ್ನ ಗ್ರಹಿಕೆ... ಬುದ್ಧಿ-ಭಾವಗಳನ್ನು ಮಾತ್ರ ಗುರುತಿಸಿ ಬೆವರಿನ ನೆಲೆಗಳನ್ನು ನಿರ್ಲಕ್ಷಿಸುವುದರಿಂದ ಮನುಷ್ಯ ಸಮಾಜದ ಮುಖ್ಯ ಅಂಗಗಳನ್ನು ಅನಾಮತ್ತಾಗಿ ದೂರಕ್ಕೆ ಎತ್ತಿ ಹಾಕಿ 'ಸಾಂಸ್ಕೃತಿಕ ಅಸ್ಪೃಶ್ಯತೆಯನ್ನು ಆಚರಿಸಿದಂತಾಗುತ್ತದೆ"[7] ಸಂಸ್ಕೃತಿಯೆಂದರೆ ಕೇವಲ ಸಾಹಿತ್ಯ, ಸಂಗೀತ, ಚಿತ್ರಕಲೆ, ಧರ್ಮ, ಶಾಸ್ತ್ರ, ಜಾತಿ-ವರ್ಣ ಇತ್ಯಾದಿಗಳ ಮೇಲು ಕೀಳುಗಳ ಗಣನೆ-ಗ್ರಹಿಕೆ ಅಲ್ಲ. ಬದಲಾಗಿ ಅವನ್ನೆಲ್ಲ ಉತ್ಪಾದನೆ ಮಾಡುವ ಶ್ರಮ ಮತ್ತು ಬದುಕಿನ ಇಡಿಯಭಾಗದ ಚಹರೆ-ಸಾಧನೆ ಸಂಸ್ಕೃತಿಯ ವ್ಯಾಖ್ಯಾನಕ್ಕೆ ಒಳಪಡಬೇಕು. ಅಂದರೆ ಸಂಸ್ಕೃತಿಯ ಚಾಲಕ ಶಕ್ತಿ ದೇವರ ಭಯವಾಗಲಿ, ಧರ್ಮದ ಆಜ್ಞೆಯಾಗಲಿ ಆಗಿರದೆ ಒಂದು ದತ್ತ ಭೌಗೋಳಿಕ, ಸಾಮಾಜಿಕ ಸನ್ನಿವೇಶದಲ್ಲಿ ಕಟ್ಟಿಕೊಂಡ ಬದುಕು ಮತ್ತು ಬದುಕಿನ ಪ್ರಕ್ರಿಯೆಯ ಸ್ವರೂಪವೇ ಸಂಸ್ಕೃತಿ. ಅದೇ ಶ್ರಮ ಸಂಸ್ಕೃತಿಯ ವಿಧಾನವಾಗಿದೆ.

ಬರಗೂರರು ಸಮಾಜಶಾಸ್ತ್ರಜ್ಞ ಟೇಲರನ "ಸಮಾಜದ ಒಬ್ಬ ಸದಸ್ಯನಾಗಿ ಮನುಷ್ಯನು ಗಳಿಸಿಕೊಂಡ ಜ್ಞಾನ, ನಂಬಿಕೆ, ಕಲೆ, ನೀತಿ, ಆಚರಣೆ, ಸ್ವಭಾವ ಮತ್ತು ಯಾವುದೇ ಶಕ್ತಸ್ಥಿತಿಯನ್ನು ಒಳಗೊಳ್ಳುವ ಒಂದು ಸಂಕೀರ್ಣವೇ ಸಂಸ್ಕೃತಿ" ಎಂಬ ಮಾತನ್ನು ಉದ್ಧರಿಸುತ್ತಾರೆ. ಅಂದರೆ

ಜನಪದರ ಲೋಕಗ್ರಹಿಕೆ ಇಡಿಯಾಗಿ ಶ್ರಮ ಸಂಸ್ಕೃತಿಯಲ್ಲಿ ಎರಕ ಹೊಯ್ದಿರುತ್ತದೆ ಎಂಬುದು ಮುಖ್ಯ.

ಬರಗೂರರ ಸಂಸ್ಕೃತಿಯ ವ್ಯಾಖ್ಯಾನದಲ್ಲಿ 'ಒಂದು ಸಂಸ್ಕೃತಿ' (ಅ ಕಲ್ಚರ್) ಎನ್ನುವುದು ಬಹು ಮುಖ್ಯವಾಗಿದೆ. ಯಾಕೆಂದರೆ 'ಸಂಸ್ಕೃತಿ' ಎನ್ನುವುದು ಬದುಕಿನ ವೈಶಿಷ್ಟ್ಯ. ಜೀವನದ ರೀತಿ ನೀತಿಗಳ ತಾಳಿಕೆಯ ಗುಣವನ್ನು ಅಥವಾ ವೈಶಿಷ್ಟ್ಯವನ್ನು ತಮ್ಮ ಸಮೂಹದ ಬದುಕಿನ ಅನುಭವ, ಪ್ರಯೋಗ, ಪರಿಣಾಮದ, ಗೆಯ್ಮೆಯ ಮತ್ತು ಆಕಾಂಕ್ಷೆಯ ಹಿನ್ನೆಲೆಯಲ್ಲಿ ಆಯ್ದು ಕಟ್ಟಿಕೊಳ್ಳುವ ಪ್ರಕ್ರಿಯೆಯೇ ಸಂಸ್ಕೃತಿಯ ಪರಿಕಲ್ಪನೆಯಾಗಿರುತ್ತದೆ. ಇದು ಸಂಭವಿಸುವುದು ಕೂಡ ಒಂದು ಗುಂಪಿನ ಮಧ್ಯೆ. ಒಂದು ವಿಸ್ತಾರವಾದ ಭೌಗೋಳಿಕ ಪರಿಸರದಲ್ಲಿ ಅನೇಕ ಧರ್ಮ, ಜಾತಿ, ಸಂಪ್ರದಾಯಗಳ ಸಂಬಂಧದಿಂದ ಮೇಲು-ಕೀಳು ಎಂಬೆಲ್ಲ ಅನೇಕ ರೀತಿ ರಿವಾಜುಗಳುಳ್ಳ ಸಮೂಹ ಇರಲು ಸಾಧ್ಯ. ಆಗೆಲ್ಲ ಅನೇಕ ಸಂಸ್ಕೃತಿಗಳು ಉಂಟಾಗುತ್ತವೆ. ವಸ್ತು ನಿಷ್ಠವಾಗಿ "ಸಂಸ್ಕೃತಿ"ಯನ್ನು ನೋಡುವಾಗ ಅನೇಕ ಸಂಸ್ಕೃತಿಗಳು ಕಾಣುತ್ತವೆಯೇ ಹೊರತು ಮೇಲು ಸಂಸ್ಕೃತಿ, ಕೀಳು ಸಂಸ್ಕೃತಿ, ಸ್ಪರ್ಶ ಸಂಸ್ಕೃತಿ, ಅಸ್ಪರ್ಶ ಸಂಸ್ಕೃತಿ ಎಂಬುದಲ್ಲ. ಅಲ್ಲಿ ಕಾಣುವುದು ಒಂದು ಸಂಸ್ಕೃತಿಯಾಗಿರುತ್ತದೆ. ಈ 'ಒಂದು ಸಂಸ್ಕೃತಿ' ಅನೇಕ ಸಂಸ್ಕೃತಿಯ ಮಧ್ಯೆ ಜೀವ ತಳೆದಿರುತ್ತದೆ. ಮತ್ತು ಬದುಕಿರುತ್ತದೆ. ಆದ್ದರಿಂದ ಈ ಒಂದು ಸಂಸ್ಕೃತಿಯ ಪರಿಕಲ್ಪನೆ, ಅನೇಕ ಸಂಸ್ಕೃತಿಯ ಮನ್ನಣೆಗೆ, ಗೌರವಕ್ಕೆ ಅವಕಾಶ ಮಾಡಿಕೊಡುತ್ತದೆ. ಒಂದು ಸಂಸ್ಕೃತಿ' ಅನೇಕ ಸಂಸ್ಕೃತಿಯ ಸಹಜೀವನ ಮತ್ತು ಸಹಯೋಗವನ್ನು ಕೂಡ ಸಾಧ್ಯವಾಗಿಸುತ್ತದೆ. ಒಟ್ಟು ಸಂಸ್ಕೃತಿಗೆ 'ಈ ಒಂದು ಸಂಸ್ಕೃತಿ'ಯ ಕೊಡುಗೆ ಸೆಕ್ಯುಲರ್ ಆಗಿದ್ದು ಸಹಸದಸ್ಯವಾಗಿದ್ದು, ವಿಶಿಷ್ಟತೆಯನ್ನು ಕೊಡಲು ಸಾಧ್ಯ ಅಥವಾ ಕೊಡುತ್ತಿರುತ್ತದೆ. ಅದನ್ನು ಗುರುತಿಸುವ ಕಣ್ಣು ನಮಗೆ ಬೇಕು. ಧರ್ಮಮೂಲವಾದ ಸಂಸ್ಕೃತಿ ಯಜಮಾನಿಕೆಯನ್ನು ಮಾಡುತ್ತದೆ. ವರ್ಣಧರ್ಮ ಮೂಲವಾದ ಹಿಂದೂ ಸಂಸ್ಕೃತಿಯೆನ್ನುವುದು ದೇಶಕ್ಕೆ ಸ್ವಾತಂತ್ರ್ಯ ಬಂದು ಐವತ್ತು ವರ್ಷ ಕಳೆದರೂ ಸಾಂಸ್ಕೃತಿಕ ಯಜಮಾನಿಕೆ (ಹೆಜಮನಿ)ಯನ್ನು ಭದ್ರಪಡಿಸುತ್ತಲೇ ಇದೆ. ಆಳುವವರು ಯಾರೇ ಆದರೂ ಪುರೋಹಿತಶಾಹಿ ಭದ್ರವಾಗೇ ಇದೆ- ಇರುವುದು ಮಾತ್ರವಲ್ಲ ಪ್ರಜಾಪ್ರಭುತ್ವವನ್ನು ಅದು ಹಾಕಿ ಕೊಟ್ಟ ಧರ್ಮ ನಿರಪೇಕ್ಷತೆಯನ್ನು ಕಬಳಿಸುತ್ತಿದೆ. ಪುರೋಹಿತಶಾಹಿ ಎನ್ನುವುದು ಇರುವಲ್ಲೆಲ್ಲ ಅಂದರೆ ವೀರಶೈವ, ಕ್ರಿಶ್ಚನ್, ಮುಸ್ಲಿಮಂ, ಸೀಖ್ ಮುಂತಾದಡೆಯಲ್ಲೂ ಸಹ ಅವರ ಯಾಜಮಾನಿಕತೆ ನಡೆದಿರುತ್ತದೆ ಎನ್ನುವುದಕ್ಕೆ ಆಗಾಗ ಸಾಕ್ಷಿ ಸಿಕ್ಕುತ್ತಲೇ ಇರುತ್ತದೆ.

'ಒಂದು ಸಂಸ್ಕತಿ' ಶ್ರಮಶೀಲವಾದುದರಿಂದ ಅದು ಚಲನಶೀಲವೂ ಆಗಿದೆ. ಯಜಮಾನ ಸಂಸ್ಕೃತಿ ಸ್ಥಗಿತ ಸಂಸ್ಕೃತಿಯಾಗಿರುತ್ತದೆ. ಅದು ಚಲಿಸಿದಂತೆ ಕಂಡರೆ ಎರಡು ಕಾರಣಗಳಾಗಿ, ಒಂದು ತನ್ನ ಗತವನ್ನು ಮರಳಿ ಪಡೆಯುವ ಪ್ರಯತ್ನದಲ್ಲಿ ಮತ್ತು ಎರಡು, 'ಒಂದು ಸಂಸ್ಕೃತಿ'ಯ ಸಮಾನತೆಯನ್ನು ಕಬಳಿಸಲು ವ್ಯೂಹ (ಸ್ಟೆಟಜಿ) ರಚಿಸುವಲ್ಲಿ, ಒಟ್ಟಾರೆ ಪ್ರತಿಗಾಮಿ ವಿಚಾರದಲ್ಲಿ.

ಹೀಗೆ ದೇವಮೂಲವಾದ ಅಥವಾ ಧರ್ಮಮೂಲವಾದ ವ್ಯಕ್ತಿಕೇಂದ್ರಿತ ಸಂಸ್ಕೃತಿಯು ತನ್ನ ಯಜಮಾನಿಕೆಯ ಕಾರಣದಿಂದಾಗಿ ಒಟ್ಟಂದದ ಸಂಸ್ಕೃತಿಯ ವಿನ್ಯಾಸದಲ್ಲಿ ಪ್ರಧಾನಧಾರೆ

ಆಗಿರುವ ಅನುಭವವೇ ಜಾಸ್ತಿ. ಉದಾಹರಣೆಗಾಗಿ ಪ್ರಾಚೀನ ಕಾಲದಲ್ಲಿದ್ದಂತೆ ದೇಶದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲೂ ವೈದಿಕ ಮೂಲವಾದ ಹಿಂದೂ ಸಂಸ್ಕೃತಿಯೇ ಪ್ರಧಾನಧಾರೆಯಾಗಿತ್ತು. ಹಾಗಿರುವಾಗ ಶ್ರಮ ಮೂಲವಾದ ಇತರ ಸಂಸ್ಕೃತಿಗಳು ನಿರ್ಲಕ್ಷಕ್ಕೆ ಒಳಗಾದವು. ಈಗಲೂ ಪರಿಸ್ಥಿತಿ ಪೂರ್ತಿ ಬದಲಾವಣೆಯೇನೂ ಆಗಲಿಲ್ಲ. ಅಂದರೆ ಪ್ರಧಾನ ಧಾರೆಗೆ ಹೊರತಾದ ಅಥವಾ ಹೊರತು ಎನ್ನಿಸಿಕೊಂಡಿರುವ 'ಸಂಸ್ಕತಿ' 'ಉಪಸಂಸ್ಕತಿ' ಎಂಬ ಪರಿಕಲ್ಪನೆಯಡಿ ಬರಗೂರು ಅವರು ವ್ಯಾಖ್ಯಾನಿಸುತ್ತಾರೆ. ಅದಕ್ಕೆ ಅವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ಹೊರತಂದ ಉಪಸಂಸ್ಕೃತಿಯ ಮಾಲೆಯೇ ಸಾಕ್ಷಿಯಾಗಿದೆ.

ಈ 'ಉಪಸಂಸ್ಕೃತಿಗಳು' ಜಗತ್ತಿನ ಸೃಷ್ಟಿಯ ಬಗ್ಗೆ, ಜಾತಿ-ಜನಾಂಗದ ಬಗ್ಗೆ ದೇವರ ಬಗ್ಗೆ, ಕಲೆಯ ಬಗ್ಗೆ (ಮತ್ತು ಅದರ ಕಲೆಗಳಲ್ಲಿ ಶ್ರಮಶಕ್ತಿ ಢಾಳಾಗಿ ತೋರಿಕೊಳ್ಳುತ್ತದೆ) ಸಂಬಂಧದ ಬಗ್ಗೆ, ಆಚರಣೆ ಬಗ್ಗೆ, ಗಂಡುಹೆಣ್ಣು ಸಂಬಂಧದ ಬಗ್ಗೆ, ಔಷಧಿಯ ಬಗ್ಗೆ, ನಿಸರ್ಗದ ಬಗ್ಗೆ, ತನ್ನದೇ ಆದ ಕತೆ, ಪುರಾಣ ಮತ್ತು ತತ್ವಜ್ಞಾನವನ್ನು ಹೊಂದಿರುತ್ತದೆ.

ಉಪಸಂಸ್ಕೃತಿ ಶ್ರಮ ಮೂಲವಾಗಿದ್ದು ಅದು ಸದಾ ಚಲನಶೀಲವಾಗಿರುತ್ತದೆ ಎಂಬುದನ್ನು ಮೊದಲೇ ಹೇಳಲಾಗಿದೆ. ಈ ಚಲನಶೀಲತೆಯ ಫಲವಾಗಿಯೇ ಎತ್ತಿನಗಾಡಿ ಬಸ್ಸಾಗಿ, ಬಸ್ಸು ರೈಲಾಗಿ, ರೈಲು ವಿಮಾನವಾಗಿ ಪ್ರಗತಿಯತ್ತ ನಡೆಯುತ್ತದೆ. ಆದರೆ ಇದಕ್ಕೆ ಶ್ರಮ ಮಾತ್ರ ಸಾಲದು; ಶ್ರಮದ ಜೊತೆ ಅನ್ವೇಷಕ ಗುಣ-ಕುಶಲತೆಗಳೂ ಬೇಕು. ಆದ್ದರಿಂದ "ಉಪಸಂಸ್ಕೃತಿಗಳ ಜೀವನ ವಿಧಾನ ವರ್ತಮಾನದ ಹೊಸಬಣ್ಣ ಪಡೆದು ಪ್ರಧಾನ ವಾಗಬೇಕು. ಇದ್ದ ಹಾಗೆಯೇ ಭೂತದ ಬದುಕನ್ನು ಪ್ರತಿಷ್ಠಾಪಿಸಬಾರದು. ಪ್ರಧಾನ ಸಂಸ್ಕೃತಿಯ ನೆಲೆಗಳನ್ನು ತಾನು ತುಂಬುತ್ತ ಮತ್ತೆ ನಿರ್ಲಕ್ಷಿತ ನೆಲೆಗಳನ್ನು ಹುಟ್ಟು ಹಾಕಬಾರದು. ಬಹು ಸಂಸ್ಕೃತಿಗಳ ಸಮಾನ ಅಧಿಕಾರ ಹಂಚಿಕೊಳ್ಳ ಬೇಕು"[೧೦] ಆದ್ದರಿಂದ ಇದು ಕೇವಲ ಜನಾಂಗೀಯ ಅಭ್ಯಾಸವಾಗಿರದೆ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಮೂಲಕ ಪಡೆಯಬೇಕು. ಸಮಾನತೆ ಪ್ರಜಾ ಸತ್ತಾತ್ಮಕತೆ' ಅದರ ಮುಂದಿನ ತುಡಿತ. ಹೀಗೆ 'ಉಪಸಂಸ್ಕೃತಿಯ' 'ಒಂದು ಸಂಸ್ಕೃತಿ'ಯಾಗಿ ಪರಿವರ್ತನೆ ಆಗಬೇಕು'.

ನಾಡು-ನುಡಿಯನ್ನು ಕಟ್ಟುವ ಬಗೆ

'ಕಟ್ಟುವ ಬಗೆ'ಯ ಬಗ್ಗೆ ವಿಸ್ತಾರವಾಗಿ ಪ್ರಸ್ತಾಪಿಸಲಾಗಿದೆ. ಹಾಗೆಯೇ ನಾಡು-ನುಡಿಯನ್ನು ಕಟ್ಟುವ ಬಗೆ. ಎಲ್ಲರಿಗೆ ಗೊತ್ತಿರುವ ಹಾಗೆ ಕನ್ನಡ ನಾಡು ಅಂದರೆ, ಕನ್ನಡ ಮಾತನ್ನಾಡುವವರ ನಾಡು ಅನೇಕ ಭಾಷಿಕರ ನಾಡಿನಲ್ಲಿ ಹಂಚಿಹೋಗಿತ್ತು. ಮುಂಬೈ ಪ್ರಾಂತದಲ್ಲಿ, ಹೈದರಾಬಾದಲ್ಲಿ, ತಮಿಳುನಾಡಿನಲ್ಲಿ, ಕೇರಳದಲ್ಲಿ ಹೀಗೆ ಎಲ್ಲಕಡೆ ಕನ್ನಡಿಗರು ಅಲ್ಪ ಸಂಖ್ಯಾತರಾಗಿದ್ದರು. ಮೈಸೂರು ಸಂಸ್ಥಾನ ಮಾತ್ರ ಕನ್ನಡ ನಾಡೆಂದು ಗುರುತಿಸಲ್ಪಡುತ್ತಿತ್ತು. ಹೀಗೆ ಹರಿದು ಹಂಚಿಹೋದ ನಾಡು ಯಾವ ನಾಡಿನಲ್ಲೂ ಗಣ್ಯವಾಗಿರಲಿಲ್ಲ. ಕನ್ನಡ ಸಾಹಿತ್ಯಕ್ಕೆ, ಭಾಷೆಗೆ ಮೈಸೂರು ಒಂದನ್ನು ಬಿಟ್ಟು ಬೇರೆಲ್ಲೂ ಪ್ರಾಧಾನ್ಯತೆ ಇರಲಿಲ್ಲ. ಕನ್ನಡ ಸಾಹಿತ್ಯಕ್ಕೆ ಸಂಸ್ಕೃತಿಗೆ ಎರಡು ಸಾವಿರ ವರ್ಷದ ಇತಿಹಾಸವಿದ್ದರೂ ಕನ್ನಡದಲ್ಲಿ ಮಹಾಕಾವ್ಯಗಳು ಇತರ ಭಾಷೆಗೆ ಸರಿಸಾಟಿಯಾಗಿದ್ದರೂ

ವಿಜಯನಗರದಂಥ ಚಾರಿತ್ರಿಕವಾಗಿ ಹೆಸರು ಮಾಡಿದ ರಾಜ್ಯಭಾರ ನಡೆದಿದ್ದರೂ ಕನ್ನಡದ ಅವಸ್ಥೆ ಶಕ್ತಿಹೀನವಾಗಿತ್ತು. ಅದನ್ನೇ ಬೇಂದ್ರೆಯವರು ತಮ್ಮ ಕನಸಿನೊಳಗೊಂದು ಕಣಸು ಕವನದಲ್ಲಿ ಚಿತ್ರಿಸುತ್ತಾರೆ. ಸ್ವಪ್ನದಲ್ಲಿ ಬಂದ ಕನ್ನಡ ತಾಯಿ ಬಡವಳಾಗಿ ಕಂಡರೂ 'ರಾಜಮುಖಿ ನಿನ್ನಲ್ಲಿ ರಾಜಕಳೆ ಇಹುದು' ಎನ್ನುತ್ತಾರೆ. ರಾಜಶ್ರೀಯೇ ಆದರೂ 'ಪಕ್ಷವದ್ಧವಹುದು' ಎಂದು ಅವಳು ಹೇಳುತ್ತಾಳೆ. ಚಂಡಿಚಾಮುಂಡಿ ಪೇಳ ಬೇಕಾದೇನು? ಎಂದು ಕವಿ ಕೇಳಿದಾಗ 'ಗಂಡಸಾದರೆ ನಿನ್ನ ಬಲಿ ಕೊಡುವಿಯೇನು?' ಎಂದು ಕೇಳುತ್ತಾಳೆ.

ಹೀಗೆ ಕರ್ನಾಟಕದ ಏಕೀಕರಣದ ಕನಸು ಕನ್ನಡದ ಸಾಂಸ್ಕೃತಿಕ ನೇತಾರರಲ್ಲಿ ಉಂಟಾಯಿತು. ಆದರೆ ಆಗ ಭಾರತದ ಸ್ವಾತಂತ್ರ್ಯ ಹೋರಾಟ ಕೂಡ ನಡೆಯುತ್ತಿತ್ತು. ಇಲ್ಲಿ ಕರ್ನಾಟಕ ಏಕೀಕರಣ ಮುಖ್ಯವೊ, ಭಾರತದ ಸ್ವಾತಂತ್ರ್ಯ ಮುಖ್ಯವೊ? ಭಾರತದ ಸ್ವಾತಂತ್ರ್ಯ ಗುರಿಗೆ ಬಾಧಕವಾಗದ ಹಾಗೆ ಕರ್ನಾಟಕವನ್ನು ಕಟ್ಟುವುದು ಹೇಗೆ? ಪ್ರಧಾನ ಧಾರೆಯೊಡನೆ ಸಂಘರ್ಷ ಸಾಧ್ಯವಿಲ್ಲವಾದರೆ ಸಾಮರಸ್ಯ ಸಾಧಿಸುವುದು ಹೇಗೆ ಎಂಬುದು ನಮ್ಮ ಚಿಂತಕರನ್ನು ಕಾಡಿದ ಸಮಸ್ಯೆ. ಅಂಥ ಸಂದರ್ಭದಲ್ಲಿ ಅವರು ಕಂಡುಕೊಂಡ ದಾರಿ ದಿಕ್ಕು ನಮಗೆ ಬಹು ಮುಖ್ಯವಾಗಿದೆ. ಅಂಥ ವೈಚಾರಿಕ ಪ್ರಾತಿನಿಧಿಕ ಚಿಂತನೆಯ ಕಡೆ ಗಮನ ಹರಿಸುವುದು ನಾಡು ನುಡಿ ಕಟ್ಟುವ ಬಗೆಗೆ ಅವಶ್ಯವಾದುದು. ಈ ಕುರಿತು 'ಕರ್ನಾಟಕದ ಗಾಂಧಿ' ಎಂದೇ ಹೆಸರಾದ ಹರ್ಡೇಕರ ಮಂಜಪ್ಪನವರ ಮತ್ತು ಕರ್ನಾಟಕದ ಕುಲ ಪುರೋಹಿತರೆಂದೇ ಕರೆಯಲ್ಪಡುವ ಆಲೂರ ವೆಂಕಟರಾವ ಅವರ ವಿಚಾರವನ್ನು ಗಮನಿಸುವ.

ಹರ್ಡೇಕರ ಮಂಜಪ್ಪ ಅವರು ಉತ್ತರ ಕನ್ನಡ ಜಿಲ್ಲೆಯ ಬನವಾಸಿಯವರು. ಬನವಾ ಕನ್ನಡ ಮೊದಲ ರಾಜಮನೆತನವಾದ ಕದಂಬರ ರಾಜಧಾನಿಯಾಗಿತ್ತು. ಮಂಜಪ್ಪನವರ ಕಾಲ ಅದು ಪಳೆಯುಳಿಕೆಯಾಗಿತ್ತು. ವಿಜಯನಗರ ಸಾಮ್ರಾಜ್ಯದ ಪಳೆಯುಳಿಕೆ ಅವರಿಗೆ ಸ್ಫೂರ್ತಿ ಕೊಟ್ಟ ಹಾಗೆ ಬನವಾಸಿಯ ಇತಿಹಾಸ ಕೂಡ ಅವರ ಸ್ಫೂರ್ತಿಯ ನೆಲೆಯಾಗಿರಲೂ ಬಹುದು ಅವರು ಲಿಂಗಾಯತ ಧರ್ಮಕ್ಕೆ ಸೇರಿದವರಾಗಿದ್ದರು. ವೀರಶೈವ ಧರ್ಮ ಅಥವಾ ಹನ್ನೆರಡನೇ ಶತಮಾನದ ಬಸವಣ್ಣನವರ ಧಾರ್ಮಿಕ ಚಳವಳಿ-ಧಾರ್ಮಿಕ ತತ್ವಗಳು ಅವರ ವಿಚಾರದ ಮುಖ್ಯ ಆಕರ ಕೂಡ ಆಗಿರಬಹುದಾಗಿದೆ. ಆದರೆ ಆಗಲೇ ಭಾರತೀಯ ಸಂಸ್ಕೃತಿ ಎಂದರೆ ವೇದ ಸಂಸ್ಕೃತಿ-ಹಿಂದೂ ಸಂಸ್ಕೃತಿ ಎಂದು ಪ್ರತಿಷ್ಠಾಪಿಸಲಾಗಿತ್ತು. ಭಾರತದ ಯಾವುದೇ ಧರ್ಮ ಭಾರತದ ಸ್ವಾತಂತ್ರ್ಯ ಹೋರಾಟದ ಹಿತಾಸಕ್ತಿಗೆ ಅಡ್ಡಿಯಾಗ ಕೂಡದು. ಆದರೆ ಸ್ವತಃ ವೀರಶೈವ ಧರ್ಮವೇ ವೈದಿಕ-ಧರ್ಮದ ವಿರೋಧಿಯಾಗಿದೆ. ಇದನ್ನು ಮಂಜಪ್ಪನವರ ಹೊಂದಾಣಿಕೆ ಮಾಡಿಕೊಳ್ಳಬೇಕಿತ್ತು. ಆದ್ದರಿಂದ ಅವರು ವೀರಶೈವ ಧರ್ಮ ಹಿಂದೂಧರ್ಮದ ಒಂದು ಭಾಗವೇ ಎಂಬುದನ್ನು ಪ್ರಚಾರ ಪಡಿಸಿದರು.

ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ ಜೀವನ ಆರಂಭ ಮಾಡಿದ ಹರ್ಡೇಕರು ೧೯೦೧ರಲ್ಲಿ 'ವಂಗಭಂಗ ಚಳವಳಿ'ಯಿಂದಾಗಿ ಸ್ವಾತಂತ್ರ್ಯ ಹೋರಾಟದ ಚಳವಳಿಯ ಕಡೆ ಸೆಳೆಯಲ್ಪಟ್ಟರು. ಶಿಕ್ಷಕ ಜಾಗೆಗೆ ರಾಜೀನಾಮೆ ನೀಡಿ ದೇಶ ಸೇವೆಗೆ ತೊಡಗಿದರು. ಮುಂದೆ ಅವರು 'ಕರ್ನಾಟಕದ

ಗಾಂಧಿ' ಎಂದು ಹೆಸರು ಪಡೆದರು. ಕೊನೆ ಕೊನೆಗೆ ಅವರು ಹಿಂದೂ ಮಹಾಸಭಾ' ಕಡೆಗೆ ಒಲಿದಿದ್ದರೆನ್ನುತ್ತಾರೆ. ಆದರೆ ಅವರು ಕೋಮವಾದಿ ಆಗಿರಲಿಲ್ಲ.

ಅವರ ಮುಂದಿರುವ ಪ್ರಶ್ನೆ ದೇಶದ ಜನರಲ್ಲಿ ದೇಶ ಪ್ರೇಮ ಕುದುರಿಸುವುದು ಹೇಗೆ ಎಂಬುದು. ದೇಶಪ್ರೇಮ-ದೇಶಭಕ್ತಿಯ ಮೂಲವನ್ನು ಅರಸುವ ಕಡೆ ಅವರು ಗಮನಹರಿಸಿದರು.

ದೇಶಭಕ್ತಿ-ಸ್ವದೇಶಭಕ್ತಿ ಎನ್ನುವುದಕ್ಕೆ ಇಲ್ಲಿ ಸ್ವದೇಶ ಎಂಬುದೇ ಇದ್ದಿರಲಿಲ್ಲ ಇಂಗ್ಲೀಷರಿಂದ ಆಳಲ್ಪಡುವವರಿಗೆ ದೇಶಪ್ರೇಮ ಹೇಗೆ ಬರಬೇಕು? ಆದ್ದರಿಂದ ದೇಶಭಕ್ತಿ ಎಂದರೆ ಜನರ ಬಗ್ಗೆ ಇರುವ ಭಕ್ತಿ ಮತ್ತು ದೇಶಸೇವೆ ಎಂದರೆ ಪ್ರಜೆಗಳ ಸೇವೆ ಎಂಬುದಾಯಿತು.

ಮುಂದಿನ ಅವರ ಹುಟುಕಾಟ ದೇಶಾಭಿಮಾನ ಮತ್ತು ಧರ್ಮಾಭಿಮಾನದ ಕಡೆ ಹೊರಟಿತು. ಪ್ರಾಚೀನ ಭಾರತದಲ್ಲಿ ಆರ್ಯಜನಾಂಗಕ್ಕೆ ದೇಶಾಭಿಮಾನ ಇತ್ತೇ? ಎಂದು ಪ್ರಶ್ನಿಸಿಕೊಳ್ಳುತ್ತಾರೆ. ಸ್ಮೃತಿ, ಶ್ರುತಿ, ಪುರಾಣ ಮತ್ತು ಸಂಸ್ಕೃತ ಕಾವ್ಯಗಳಲ್ಲಿ ಹುಡುಕುತ್ತಾರೆ. ಅಲ್ಲಿ ಅವರಿಗೆ ಎಲ್ಲೂ ದೇಶಭಕ್ತಿ, ದೇಶಾಭಿಮಾನ ಇದ್ದ ಬಗ್ಗೆ ಸಾಕ್ಷಿಸಿಕ್ಕುವುದಿಲ್ಲ. ಇತಿಹಾಸ ಕಾಲದಲ್ಲೂ ದೇಶಾಭಿಮಾನ, ದೇಶಭಕ್ತಿಯ ಕುರುಹು ಸಿಕ್ಕುವುದಿಲ್ಲ. ಶಿವಾಜಿ ಕಾಲದಲ್ಲಿ ಅಂಥ ಕುರುಹು ಕಾಣುತ್ತದೆಂದೆನ್ನಿಸಿದರೂ ಅದು ರಾಜ್ಯಗಳಿಕೆಯ ದಾಹವೇ ಹೊರತು ದೇಶಾಭಿಮಾನ ಎನ್ನಿಸುವುದಿಲ್ಲ.

ಭಾರತದಲ್ಲಿ ಇದು ಇಲ್ಲದಿರುವುದಕ್ಕೆ ಭಾರತೀಯರು ಭೌತಿಕಕ್ಕಿಂತ ಆಧ್ಯಾತ್ಮಿಕತೆಯ ಕಡೆ ಹೆಚ್ಚು ಒಲಿದದ್ದೆ ಕಾರಣ ಎಂದುಕೊಳ್ಳುತ್ತಾರೆ. ಹಿಂದೂ ಧರ್ಮದಲ್ಲಿ ಚಾತುವರ್ಣ ಪದ್ಧತಿಯಿದ್ದು ರಾಜಕೀಯ ಕ್ಷತ್ರಿಯ ವರ್ಣದ ಗುತ್ತಿಗೆಯಾಗಿತ್ತು. ಇದರಿಂದ ಪ್ರಜಾಪ್ರಭುತ್ವವಾದಿ ವಿಚಾರ ಬರದಂತಾಯಿತು. ಪಶ್ಚಿಮದ- ಗ್ರೀಕ ಶಕ್ತಿ ಕ್ರಿಯಾಶೀಲತೆಯನ್ನು ಆರಿಸಿಕೊಂಡಿತು. ಹೀಗಾಗಿ ಭಾರತ ತತ್ವಜ್ಞಾನದಲ್ಲಿ- ಊಹಾತ್ಮಕ ಪರದಲ್ಲಿ ಶ್ರೇಷ್ಠ ಸಾಧನೆ ಮಾಡಿದರೆ ಪಶ್ಚಿಮ ಭೌತಶಾಸ್ತ್ರ, ರಸಾಯನ ಶಾಸ್ತ್ರವೇ ಮೊದಲಾದ ವಿಜ್ಞಾನದಲ್ಲಿ ಶ್ರೇಷ್ಠತೆ ಸಾಧಿಸಿತು. ಅವರು ಸಾಧಿಸಿದ ಲೌಕಿಕ ಬದುಕು ಸಾಮಾಜಿಕ ನೈತಿಕತೆಯನ್ನು, ದೇಶಪ್ರೇಮವನ್ನು ಬೆಳೆಸಿದರೆ ಭಾರತ ಪಾರಲೌಕಿಕದ ಪ್ರೇಮವನ್ನು, ಲೌಕಿಕವಾಗಿ ಜಡ ಉಪದೇಶ, ಕಟ್ಟುಪಾಡನ್ನು ಬೆಳೆಸಿತು. ಆದರೆ ಭಾರತ ದೇಶಪ್ರೇಮವನ್ನೇನಾದರೂ ಕಲಿತದಿದ್ದರೆ ಅದು ಇಂಗ್ಲೀಷರಿಂದ. ಅದು ಬ್ರಿಟಿಷರಲ್ಲಿ ತುಂಬಿದೆ. ಇಲ್ಲಿ ಹಿಂದೂ ಮುಸ್ಲಿಮರಲ್ಲಿ ಜಗಳವೇ ಜಾಸ್ತಿ. ಎರಡೂ ಕಡೆಯವರು ಧರ್ಮಪ್ರೇಮಿಗಳು. ಸ್ವಾತಂತ್ರ್ಯ ಹೋರಾಟಕ್ಕೆ ಈ ಹಿಂದೂ-ಮುಸ್ಲಿಂ ಜಗಳ ಆತಂಕಕಾರಿ. ಆದ್ದರಿಂದ ಅದನ್ನು ನಿವಾರಿಸಿಕೊಳ್ಳಬೇಕಾದ ಜವಾಬ್ದಾರಿ ಹೋರಾಟದ ನೇತಾರರ ಮೇಲೆ ಇತ್ತು. ಇದರಿಂದ ಮಂಜಪ್ಪನವರು ಇಂಗ್ಲೀಷರು ಪ್ರಸ್ತಾಪಿಸಿದ ಸೆಕ್ಯುಲರಿಸಂನ್ನು ಅನುಸರಿಸಿದ ಹೊರತು ದೇಶಪ್ರೇಮ ಬೆಳೆಯುವದಿಲ್ಲ ಎಂದುಕೊಂಡರು. ಹೀಗೆ ಧರ್ಮ-ಧರ್ಮಗಳ ಮಧ್ಯೆ ರಾಷ್ಟ್ರ-ಪ್ರಾಂತಗಳ ಮಧ್ಯೆ ಸಂಘರ್ಷವೇರ್ಪಡದಂತೆ ದೇಶಭಕ್ತಿಯನ್ನು ವ್ಯಾಖ್ಯಾನಿಸಿಕೊಂಡರು.

ಇದೇ ದಿಕ್ಕಿನಲ್ಲೇ ಕರ್ನಾಟಕ ಕುಲ ಪುರೋಹಿತ (ಈ 'ಪುರೋಹಿತ' ಎಂಬ ಭಾಷೆ ಕೂಡ ವೈದಿಕಶಾಹಿಯ ಭಾಷೆ) ಆಲೂರು ವೆಂಕಟರಾವ ಕೂಡ ನಾಡು ನುಡಿಯನ್ನು ಕಟ್ಟುವ ಬಗೆಯಲ್ಲಿ ದಾರಿ ಸುಗಮಗೊಳಿಸಲು ಹೋರಾಡಿದರು.

ಆಲೂರರು ಮಾಧ್ವ ಬ್ರಾಹ್ಮಣ ಪಂಥದವರಾಗಿ ಅವರ ವೈಚಾರಿಕ ಮೂಲನೇ ಅಲ್ಲಿಂದಲೇ ನೀರನ್ನು ಪಡೆದಂತಹದು. ಹಿಂದೂ ಧರ್ಮ, ಅದರಲ್ಲೂ ದ್ವೈತ ಪಂಥ ಮತ್ತು ಜಾತಿ ವ್ಯವಸ್ಥೆ ಕುಸಿದದ್ದರ ಬಗ್ಗೆ ವ್ಯಥಿಸುತ್ತಾರೆ. ಆದರೂ ಅವರು ನಾಡು-ನುಡಿಯನ್ನು ಕಟ್ಟುವ ಬಗ್ಗೆ ದೇಶಸೇವೆಗೆ ಮುಂದಾಗುತ್ತಾರೆ ಮತ್ತು ಹಿಂದೂಧರ್ಮ ಮತ್ತು ಅನೇಕ ಧರ್ಮಗಳ ಮಧ್ಯೆಯ ಘರ್ಷಣೆಯನ್ನು ತರ್ಕಬದ್ಧವಾಗೇ ನಿವಾರಿಸಿ ದೇಶ ಮತ್ತು ಕರ್ನಾಟಕವನ್ನು ಕಟ್ಟುವ ದಾರಿಯನ್ನು ಸುಗಮಗೊಳಿಸುತ್ತಾರೆ. ಆಗ ದೇಶದಲ್ಲಿ ಸ್ವಾತಂತ್ರ್ಯ ಹೋರಾಟದ ತುರುಸು ಇತ್ತು ಎಂಬುದು ಇಡಿಯಾಗೇ ಭಾರತದ ಜನ ಏಕ ಮುಖಿಯಾಗಬೇಕಾದುದು ಅಂದಿನ ಅವಶ್ಯಕತೆಯಾಗಿತ್ತು ಎಂಬುದನ್ನು ಮತ್ತೊಮ್ಮೆ ನೆನಸಿಕೊಳ್ಳಬೇಕು.

'ಕರ್ನಾಟಕ' ಎಂಬುದು ಕೇವಲ ಒಂದು ಭೌಗೋಲಿಕತೆಯಲ್ಲ. ಇಡಿಯಾಗಿ ಕನ್ನಡ ಭಾಷಿಕರ ಪ್ರಶ್ನೆಯಾಗಿದೆ. ಅದು ಭಾರತದ ಒಳಗಿನ ಒಂದು ಪ್ರಾಂತದ ಪ್ರಶ್ನೆಯಲ್ಲ. ಬದಲಾಗಿ ಕರ್ನಾಟಕತ್ವದ ಪ್ರಶ್ನೆಯಾಗಿದೆ. ಆದರೆ ದೇಶದ ಭಾವನೆಯಿಂದ ಕಳಚಿಕೊಳ್ಳುವ ಕರ್ನಾಟಕತ್ವದಲ್ಲ. ಸನಾತನ ಧರ್ಮ ವಿಶ್ವಮಾನವತ್ವಕ್ಕೆ ಮೂಲವಾಗಿದೆ. ಅಂದರೆ ವಿಶ್ವದಲ್ಲಿ ಅನೇಕ ಧರ್ಮಗಳಿವೆ. ಅನೇಕ ಧರ್ಮಗಳ ಪ್ರಪಂಚವೇ ವಿಶ್ವ. ನಾವು ವಿಶ್ವದ ಸದಸ್ಯನಾಗುವುದೆಂದರೆ ನಮ್ಮ ಸನಾತನ ಧರ್ಮದ ಮೂಲಕ. ಆದ್ದರಿಂದ ವಿಶ್ವಮಾನವತ್ವ ಭಾರತೀಯತ್ವ ಒಂದರೊಳಗೆ ಒಂದು ಕೊಂಡಿ ಸಿಲುಕಿಸಿಕೊಂಡಿದೆ. ಹಾಗೆಯೇ ಕರ್ನಾಟಕ ಭಾರತದೊಡನೆ ಕೊಂಡಿ ಸಿಲುಕಿಸಿಕೊಂಡಿದೆ. ಅಂದರೆ ನಮಗೆ ಭಾರತೀಯತ್ವ ಸಾಧ್ಯವಾಗುವುದು ಕರ್ನಾಟಕತ್ವದ ಮೂಲಕ ಮಾತ್ರ ಸಾಧ್ಯವಾಗುತ್ತದೆ. ಆದ್ದರಿಂದ ಕರ್ನಾಟಕದ ಏಕೀಕರಣ ಭಾರತೀಯತ್ವ ಬೆಳೆಯಲು ಸಹಕಾರಿಯೇ ಆಗಿದೆ.

ಇನ್ನು ಎರಡನೇ ಅಂಶವೊಂದಿದೆ. ಭಾರತೀಯತ್ವ ಎಂದರೆ ಸನಾತನ ಅದರಲ್ಲೂ ದ್ವೈತತತ್ವ ಎಂದೇ ಎಂದು ಅವರ ನಂಬಿಗೆ. ಅದಲ್ಲದಿದ್ದರೂ ದೇಶ ಎಂದರೇನು ಎಂದು ಕೇಳಿದರೆ ಕೂಡಲೇ ಹೊರಡುವ ಉತ್ತರವೆಂದರೆ ಒಂದು ಜನಾಂಗ-ಧರ್ಮ ಮತ್ತು ಒಂದು ಭಾಷೆಯ ಜನ ವಾಸಿಸುವ ಪ್ರದೇಶ ಎಂದೇ ಆಗುತ್ತದೆ. ಆದರೆ ಆಲೂರ ಅಂದುಕೊಳ್ಳುತ್ತಾರೆ, ನಮ್ಮ ದೇಶದಲ್ಲಿ ಹಾಗೆ ಇಲ್ಲ. ಇಲ್ಲಿ ಅನೇಕ ಧರ್ಮ ಮತ್ತು ಭಾಷೆಗಳಿವೆ. ಈ ಅನೇಕತ್ವವನ್ನು ಹೇಗೆ ಸೇರ್ಪಡಿಸಬೇಕು? ಅದಕ್ಕೊಂದು ತರ್ಕಸಿದ್ಧ ಮಾರ್ಗ ಅವರದ್ದಾಯಿತು.

ದ್ವೈತದಲ್ಲಿ ಆತ್ಮ ಮತ್ತು ಪರಮಾತ್ಮ ಬೇರೆ. ಆತ್ಮ ಪರಮಾತ್ಮನ ಭಾಗ ಆಗಿದ್ದರೂ ಆತ್ಮದ್ದೇ ಪ್ರತ್ಯೇಕವಾದ ಅಸ್ತಿತ್ವವಿದೆ. ಅಸ್ಮಿತೆಯಿದೆ. ಅದು ಪರಮಾತ್ಮದಲ್ಲಿ ಒಂದಾಗಿ ಹೋಗುವುದಿಲ್ಲ. ಆದರೆ ಅದು ಪರಸ್ಪರ ವಿರುದ್ಧವೂ ಅಲ್ಲ. ಹಾಗೆ ಭಾರತ ಮತ್ತು ಕರ್ನಾಟಕದ ಸಂಬಂಧ.

ಹಾಗೇ ದೇಶದ ವ್ಯಾಖ್ಯಾನಕ್ಕೆ ಇಲ್ಲಿ ಒಂದೇ ಧರ್ಮವಿಲ್ಲ. ಇದು ಬಹು ಧರ್ಮಗಳ ನಾಡು. ಅದರಲ್ಲೂ ಮುಸ್ಲಿಂ-ಕ್ರೈಸ್ತ ಧರ್ಮವೂ ಇದೆ. ಇದು ಘರ್ಷಣೆಗೆ ಹಾದಿ ಮಾಡಿಕೊಡುತ್ತದೆ. ಇಂಗ್ಲೀಷರೇನೋ ಸೆಕ್ಯುಲರಿಸಂ ಅನುಸರಿಸುತ್ತಾರೆ. ಇಲ್ಲಿ ಅನೇಕ ಧರ್ಮ ಇರುವುದರಿಂದ ನಮ್ಮ ದರೊಡನೆ (ಸನಾತನ ಧರ್ಮ, ಯಾಕೆಂದರೆ ಭಾರತದ ಧರ್ಮ ಸನಾತನ ಧರ್ಮ) ಸಾಮರಸ್ಯ, ಸಹಕಾರ ಬೆಳೆಸುವುದು ಹೇಗೆ? ಅಂಥ ಪರಂಪರೆ ನಮ್ಮದೇ ಎನ್ನುವ ಪ್ರಶ್ನೆ ಕಾಡುವುದು ಅವರಿಗೆ ಸಹಜವಾಗಿತ್ತು.

ಆದರೆ ಭಾರತದಲ್ಲಿ ಹಿಂದೂ ಧರ್ಮ ಆದಿಯದಾಗಿದ್ದರೂ ಸನಾತನ ಧರ್ಮದಲ್ಲಿಯೇ ಎಷ್ಟೊಂದು ಪಂಥಗಳಿಲ್ಲ? ದ್ವೈತ, ಅದ್ವೈತ, ಶೈವ ಇತ್ಯಾದಿ. ಹಾಗಿರುವಾಗ ಈ ಸನಾತನ ಧರ್ಮದಲ್ಲೇ ಬಹುತ್ವದ ಅಂಶವಿದೆ. ಅಂದರೆ ಬಹುತ್ವ-ಪ್ಲುರಾಲಿಟಿ- ಎನ್ನುವುದು ಸನಾತನ ಧರ್ಮದ ಸ್ವಭಾವವೇ ಆಗಿದೆ. ಇಂಡಿಯಾವು ಒಂದು ಧರ್ಮ ಸಾಮ್ರಾಜ್ಯವೇನೋ ಹೌದು; ಆದರೆ ಅದು ಸೆಕ್ಯುಲರ್ - ಧರ್ಮನಿರಪೇಕ್ಷಿತವಾಗಿದೆ. ಆದರೆ ಸೆಕ್ಯುಲರಿಸಂ ಎಂದರೆ ಬ್ರಿಟಿಷರಿಗಾದಂತೆ ಧರ್ಮ ನಿರಪೇಕ್ಷಿತವಲ್ಲ, ಬದಲಾಗಿ ಸರಕಾರ ಎಲ್ಲಾ ಧರ್ಮವನ್ನು ರಕ್ಷಿಸಬೇಕು. ಆದರೂ ಅವುಗಳೊಳಗೆ ಕೈ ಹಾಕಬಾರದು. ಹೀಗೆ ಅವರು ಎಲ್ಲಾ ಧರ್ಮದೊಡನೆ ಸಂಬಂಧ ಸ್ಥಾಪಿಸುತ್ತಾರೆ. ಹೀಗೆ ಪ್ರಾಂತೀಯತೆ ಎಂಬುದು ಭಾರತೀಯತೆಯಿಂದ ಬೇರಾಗಬೇಕಾಗಲಿಲ್ಲ ಎಂಬುದನ್ನು ಸ್ಥಾಪಿಸಿದರು. ಕನ್ನಡಿಗ ಅಥವಾ ಕರ್ನಾಟಕತ್ವ ಎಂಬುದು ವ್ಯಕ್ತಿ ತನ್ನ ಇತರ ಧರ್ಮ-ಭಾಷೆಯಲ್ಲಿಯ ತನ್ನ ಅಸ್ಮಿತೆಯನ್ನು ನಾಶಮಾಡಿಕೊಳ್ಳಬೇಕಾದುದಿಲ್ಲ ಎಂಬ ಆರೋಗ್ಯಕರ ವಾದ ನಿಲುವನ್ನು ಪ್ರಸ್ತಾಪಿಸಿ ಅದನ್ನು ಹಾಗೆ ವ್ಯಾಖ್ಯಾನಿಸಿದರು. ಇದು ಮುಂದಿನ ಬೆಳವಣಿಗೆಗೆ ದಾರಿಯಾಯಿತು.

'ಜೈ ಕರ್ನಾಟಕ' ಮಾತೆ, ಭಾರತ ಜನನಿಯ ತನುಜಾತೆ' ಎಂಬಂತ ಪರಿಕಲ್ಪನೆ ಬೆಳೆದು ಬಂದುದಕ್ಕೆ ಈ ಎಲ್ಲ ಹಿಂದಿನ ಬೆಳವಣಿಗೆಯೂ ಭಾರತೀಯತ್ವದ ಒಳಗಡೆ ಕರ್ನಾಟಕತ್ವವನ್ನು ವ್ಯಾಖ್ಯಾನಿಸಬೇಕಾದ ಅನಿವಾರ್ಯತೆಯೂ ಹಿನ್ನೆಲೆಯಾಗಿದೆ ಎನ್ನುವುದು ಒಂದು ಚಾರಿತ್ರಿಕ ಬೆಳವಣಿಗೆಯಾಗಿದೆ.

ಕುವೆಂಪು ಅವರು 'ಬಾರಿಸು ಕನ್ನಡ ಡಿಂಡಿಮವ' ಎಂದು ಗುಡುಗಿದರು. 'ಕನ್ನಡವ ಕಾಪಾಡು ಕನ್ನಡದ ಕಂದ, ಜೋಗುಳದ ಹರಕೆಯಿಂದ ಮರೆಯದಿರು ಚಿನ್ನ' ಎಂದು ತಾಯಿಯಾದರು. ಕನ್ನಡದ ಕಟ್ಟುವ ಕೆಲಸದಲ್ಲಿ ಆದ್ಯರ ಸಾಲಿಗೆ ಸೇರಿ ಹೋದ ಬಿ.ಎಂ.ಶ್ರೀ ಅವರು "ನಮ್ಮ ಭಾಷೆಯನ್ನು ನಾವು ಎತ್ತದೇ ಹೋದರೆ ಎತ್ತುವವರು ಯಾರು? ಎತ್ತುವುದಕ್ಕೆ ನಿಂತರೆ ತಡೆಯುವವರು ಯಾರು?"[೧೧] ಎಂದು ಕೇಳುತ್ತಾರೆ.

'ಕನ್ನಡದ ತಲೆ ಎತ್ತುವ ಬಗೆ' ಇಂಗ್ಲೀಷನಿಂದ ಗಳಿಸುವ ಜ್ಞಾನಕ್ಕೂ, ಸಂಸ್ಕೃತದಿಂದ ಪಡೆಯುವ ನಲುವಿಗೂ ಅಡ್ಡಿಯಾಗುವುದು ಬೇಡ. ಬೇರೆ ಭಾಷೆ ಶಬ್ದಗಳನ್ನು ಬಳಸಬಾರದೆಂಬ ಮಡಿವಂತಿಕೆ ಬೇಡ. ಆದರೆ ಅದು ಮುದ್ದಣ ಹೇಳಿದಂತೆ 'ಕರ್ಮಣಿ ಸರದೊಳ್ ಚೆಂಬಳಮಂ ಕೋದಂತಿರೆ' ಎಂಬಂತೆ ಇರಲಿ. ಅದು ಕನ್ನಡ ಅರ್ಥವನ್ನು ಹಿಗ್ಗಿಸುವಂತೆ, ಅಂದವನ್ನು

ಹೆಚ್ಚಿಸುವಂತೆ ಇರಲಿ. ಶ್ರೀ ಅವರ ಮಾತಿನಲ್ಲೇ ಹೇಳುವುದಾದರೆ ರೈಲನ್ನು ರೈಲೆಂದೇ ಕರೆಯುವುದು ಉತ್ತಮ; ಹೊಗೆ ಬಂಡಿ, ಹೊಗೆಗಾಡಿ ಎನ್ನುವುದು ಮಧ್ಯಮ; ಧೂಮಶಕಟ ಎನ್ನುವುದು ಅಧಮ."೨

ಇಂಗ್ಲೀಷನಿಂದಲೂ ಸಂಸ್ಕೃತದಿಂದಲೂ ಉತ್ತಮ ಕೃತಿಗಳು ಅನುವಾದವಾಗಿ ಬರಲಿ. ಹಾಗೆಯೇ ಇಂಗ್ಲೀಷನ್ನು ಒಂದು ಭಾಷೆಯನ್ನಾಗಿ ಚೆನ್ನಾಗಿ ಕಲಿಯಲಿ. ಅದು ನಮ್ಮ ಜ್ಞಾನ ವೃದ್ಧಿಗೆ ಬೇಕು. ಆದರೆ ಕರ್ನಾಟಕದಲ್ಲಿ ಕನ್ನಡ ಆಡಳಿತ ಹಾಗೂ ಶೈಕ್ಷಣಿಕ ಮಾಧ್ಯಮವಾಗಿ ಇರಲಿ. ಸದ್ಯಕ್ಕೆ ನಮ್ಮ ಬೇಡಿಕೆ ಹತ್ತನೆಯ ತರಗತಿ ತನಕ ಕನ್ನಡ ಶಿಕ್ಷಣ ಮಾಧ್ಯಮವಾಗಬೇಕೆಂಬುದು. ಆದರೆ ಪ್ರಸ್ತುತ ಸನ್ನಿವೇಶ ಹೇಗಿದೆಯೆಂದರೆ ಪ್ರಾಥಮಿಕ ಶಿಕ್ಷಣದಲ್ಲಿ ಪೂರ್ತಿಯಾಗಿ ಕೂಡ ಕನ್ನಡ ಮಾಧ್ಯಮ ಕಡ್ಡಾಯವಿಲ್ಲ. ಕಿರಿಯ ಪ್ರಾಥಮಿಕ ಶಿಕ್ಷಣದ ಮಟ್ಟಿಗೆ ಮಾತ್ರ ಕನ್ನಡ ಮಾಧ್ಯಮ ಕಡ್ಡಾಯವಾಗಿದ್ದುದು ಕೂಡ ಸರಿಯಾಗಿ ಜಾರಿಯಾಗುತ್ತಿಲ್ಲ. ಒಟ್ಟಾರೆಯಾಗಿ ಕನ್ನಡವನ್ನು ಕಟ್ಟುವ ಬಗೆಯನ್ನು ಹೀಗೆ ಗುರುತು ಮಾಡಬಹುದಾಗಿದೆ.

೧. ಕನ್ನಡ ಕಟ್ಟುವ ಬಗ್ಗೆ ಸಂಪೂರ್ಣವಾಗಿ ಸೆಕ್ಯುಲರ-ಜಾತ್ಯತೀತವಾಗಿರತಕ್ಕುದು.

೨. ಕರ್ನಾಟಕದಲ್ಲಿರುವ ಧಾರ್ಮಿಕ ಹಾಗೂ ಭಾಷಿಕ ಅಲ್ಪಸಂಖ್ಯಾತರ ಸಾಂಸ್ಕೃತಿಕ ಹಕ್ಕುಗಳಿಗೆ ಸಂಪೂರ್ಣ ರಕ್ಷಣೆ ಇರಬೇಕು.

೩. ಕನ್ನಡ ರಾಜ್ಯದಲ್ಲಿರುವವರೆಲ್ಲ ಕನ್ನಡಿಗರೆಂದೇ ಗಣಿಸಲ್ಪಡಬೇಕು.

೪. ಮಕ್ಕಳು ಇಂಗ್ಲೀಷ್ ಭಾಷೆಯನ್ನು ಚೆನ್ನಾಗಿ ಕಲಿಯಲು ಅವಕಾಶ ಮತ್ತು ಸೌಕರ್ಯ ಹೆಚ್ಚಿಸಬೇಕು. ಮತ್ತು ತ್ರಿಭಾಷಾಸೂತ್ರವನ್ನು ಮುಂದುವರಿಸಬೇಕು. ಬೇರೆ ಬೇರೆ ಭಾಷೆಯನ್ನು ಕಲಿಯಲು ಅವಕಾಶವಿರಬೇಕು.

೫. ಆಡಳಿತ ಭಾಷೆ ಎಂತೋ ಅಂತೆ ಶೈಕ್ಷಣಿಕ ಮಾಧ್ಯಮ ಕೂಡ ಕನ್ನಡವೇ ಆಗಬೇಕು.

೬. ಸದ್ಯಕ್ಕೆ ಹತ್ತನೆಯ ತರಗತಿಯ ತನಕ ಕನ್ನಡ ಮಾಧ್ಯಮ ಕಡ್ಡಾಯವಾಗಬೇಕು.

೭. ಕರ್ನಾಟದಲ್ಲಿ ಬಾಳುವವಲ್ಲಿ ಕನ್ನಡ ತೀರ ಸಹಜ ಎಂಬ ಭಾವನೆ ಬೆಳೆದುಬರಬೇಕು. ಹಾಗೆ ಬೆಳೆದು ಬರಬೇಕಾದರೆ ಕನ್ನಡ ಅನಿವಾರ್ಯವೂ, ಜ್ಞಾನಕ್ಕೂ, ಉದ್ಯೋಗಾಭಿವೃದ್ಧಿಗೂ ಅನುಕೂಲವೂ ಆಗುವಂತಿರಬೇಕು. ಕೊನೆಯದಾಗಿ,

೮. ಕರ್ನಾಟಕದಲ್ಲಿ ಕನ್ನಡ ಮಾಧ್ಯಮ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವ; ಜನಸಾಮಾನ್ಯರನ್ನು ರಾಜಕೀಯದಲ್ಲೂ, ಅಭಿವೃದ್ಧಿಯಲ್ಲೂ ತೊಡಗಿಸುವ ಸಮಾಜವಾದಿ ಪ್ರಜ್ಞೆಯನ್ನು ಬೆಳೆಸುವ ಸಾಧನವಾಗಬೇಕು.

ಅಡಿಟಿಪ್ಪಣಿಗಳು

೧. ಸಂಸ್ಕೃತಿ, ಶ್ರಮ ಮತ್ತು ಸೃಜನಶೀಲತೆ ಬರಗೂರು ರಾಮಚಂದ್ರಪ್ಪ, ೨೦೦೧; ೧೭೩.

೨. "ಕನ್ನಡ ಎಂಬ ವಿಶೇಷಣ ಹಚ್ಚಿ ಸಂಶೋಧನೆ ಮಾಡುವುದು ಈಗಿನ ಜನಪ್ರಿಯ ವಿಧಾನವೂ ಆಗಿದೆ. ಇದರ ಜತೆಗೆ ಹಿಂದೂ ಸಂಸ್ಕೃತಿ, ಇಸ್ಲಾಂ ಸಂಸ್ಕೃತಿ, ಭಾರತೀಯ ಸಂಸ್ಕೃತಿ, ಕನ್ನಡ ಸಂಸ್ಕೃತಿ, ಪ್ರತಿ ಸಂಸ್ಕೃತಿ, ಪರ್ಯಾಯ ಸಂಸ್ಕೃತಿ, ಉಪಸಂಸ್ಕೃತಿ, ಯಜಮಾನ ಸಂಸ್ಕೃತಿ ಎಂಬ ಪದವನ್ನು ಸೇರಿಸಿ ಹೊಸ ಹೊಸ ಪರಿಕಲ್ಪನೆಗಳು ಸೃಷ್ಟಿಯಾಗಿವೆ. ಯುದ್ಧ ಸಂಸ್ಕೃತಿ, ಚಾಕು ಚೂರಿ ಸಂಸ್ಕೃತಿ ಎಂಬ ಪರಿಕಲ್ಪನೆಯೂ ಜಾರಿಯಲ್ಲಿವೆ?"

(ಕನ್ನಡ ಅಧ್ಯಯನ ಸಂಪುಟ ೮; ಸಂಚಿಕೆ ೧೨ ಜುಲೈ-ಸೆಪ್ಟೆಂಬರ್ ೨೦೦೧)

೩. Imaging Unimaginable communities 2000; 129.

೪. ಡಿ.ವಿ.ಜಿ. ಕೃತಿಶ್ರೇಣಿ ಸಂಪುಟ-೧, ವಿಚಾರ ವಿಮರ್ಶೆ ೧೯೮೭; ೧೧೪-೧೭.

೫. ಅದೇ, ೧೪೬.

೬. ವಿಚಾರ ಕ್ರಾಂತಿಗೆ ಆಹ್ವಾನ ೧೯೮೭; ೫೬ (ಟಿಪ್ಪಣಿ).

೭. ಡಿ.ವಿ.ಜಿ. ಕೃತಿಶ್ರೇಣಿ ಪುಟ. ೫೪೩.

೮. 'ಸಂಸ್ಕೃತಿ : ಶ್ರಮ ಮತ್ತು ಸೃಜನಶೀಲತೆ' ೨೦೦೧; ಮುನ್ನುಡಿ III.

೯. ಅಲ್ಲೇ,

೧೦. ಅದೇ; ೧೭೧.

೧೧. 'ಕನ್ನಡ ಮಾತು ತಲೆ ಎತ್ತುವ ಬಗೆ' ಬಿ.ಎಂ. ಶ್ರೀ ಅವರ ಭಾಷಣ ಕನ್ನಡ ಅಧ್ಯಯನ ಸಂಚಿಕೆ ೧೯೯೯ ಅಕ್ಟೋಬರ್.

೧೨. ಅದೇ.

*

ವೈದಿಕ ತತ್ವಜ್ಞಾನದಲ್ಲಿ ಬ್ರಾಹ್ಮಣ ಮತ್ತು ಕ್ಷತ್ರಿಯ ಸಂಘರ್ಷ

ಸಿರ್ಸಿ ಸ್ವರ್ಣವಲ್ಲಿಯಲ್ಲಿ ನಡೆದ ಶಂಕರಾಚಾರ್ಯರ ಕುರಿತಾದ ವಿಚಾರ ಸಂಕಿರ್ಣದಲ್ಲಿ ಬೆಂಗಳೂರಿನ ರಂಗಪ್ರಿಯ ಶ್ರೀಗಳು ಬ್ರಾಹ್ಮಣ-ಕ್ಷತ್ರಿಯ ಸಂಘರ್ಷ ಎಲ್ಲಿಯೂ ಕಂಡು ಬರುವುದಿಲ್ಲ ಎಂದು ಹೇಳಿದ್ದಾರೆ. (ಪತ್ರಿಕಾ ವರದಿ ೪-೫-೨೦೦೦) ಹಾಗೆಯೇ ಪ್ರಬಂಧ ಮಂಡಿಸಿದ ಡಾ. ವಿ.ಡಿ. ಹೆಗಡೆಯವರು ಶಂಕರರಿಂದ ಬೌದ್ಧ ಧರ್ಮದ ಮೇಲೆ ಆಕ್ರಮಣ ನಡೆಯಿತೆಂಬುದಕ್ಕೆ ಎಲ್ಲಿಯೂ ಋಜುವಾತಿಲ್ಲ ಎಂಬುದಾಗಿ ಹೇಳಿದ್ದಾರೆ. ಈ ಎರಡು ಅಂಶಗಳ ಸುತ್ತಮುತ್ತ ನನ್ನ ಈ ಬರಹ ಇದೆ.

ವೈದಿಕ ತತ್ವಜ್ಞಾನದ ಬೆಳವಣಿಗೆಯಲ್ಲಿ ವೇದ ಒಂದು ಶಿಖರವಾದರೆ ಉಪನಿಷತ್ತು ಇನ್ನೊಂದು ಶಿಖರ. ಒಂದಕ್ಕೆ ಕರ್ಮಕಾಂಡವೆಂದು ಇನ್ನೊಂದಕ್ಕೆ ಜ್ಞಾನ ಕಾಂಡವೆಂದು ಕರೆಯಲಾಗುತ್ತದೆ. ಇದು ಒಂದರ ವಿಕಾಸ ಇನ್ನೊಂದೆಂದೂ ಗಣಿಸಲ್ಪಡುತ್ತದೆ. ಆದರೆ ಇಂಥ ವಿಕಾಸ ಸಂಘರ್ಷ ಮತ್ತು ಸಮನ್ವಯದಿಂದಲೇ ಮುಂದಡಿಯಿಡುವ ಒಂದು ಕ್ರಮವೇ ಆಗಿದೆ. ಈ ಕುರಿತು ತಮ್ಮ ವಿಚಾರವನ್ನು ಭಗವತ್ ಶರಣ ಉಪಾಧ್ಯಾಯರು 'ತಮ್ಮ ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ' ಎಂಬ ಪುಸ್ತಕದಲ್ಲಿ 'ವೇದದಿಂದ ಬ್ರಾಹ್ಮಣ (ಅರಣ್ಯಕ)ಗಳತ್ತ, ಬ್ರಾಹ್ಮಣದಿಂದ ಉಪನಿಷತ್ತುಗಳತ್ತ, ಉಪನಿಷತ್ತುಗಳಿಂದ ಸಾಂಖ್ಯವೇ ಮೊದಲಾದ ಬ್ರಾಹ್ಮಣ ದರ್ಶನಗಳತ್ತ ಹಾಗೂ ಇವುಗಳ ನಡುವೆ ಪರಸ್ಪರ ಹೋರಾಟ ಪ್ರಕ್ರಿಯೆ, ಸಿದ್ಧಾಂತ ಸೃಷ್ಟಿ ಇದೇ ದಾರ್ಶನಿಕ ಮುನ್ನಡೆಯ ಸಂಕ್ಷಿಪ್ತ ಇತಿಹಾಸ''[೧] ಎನ್ನುತ್ತಾರೆ. ವೇದದ ಯಜ್ಞ ಬ್ರಾಹ್ಮಣ ಚಿಂತನೆಯಾದರೆ ಬ್ರಹ್ಮರಹಸ್ಯ ಉಪನಿಷತ್ತಿನ ಚಿಂತನೆ ಎಂಬುದು ಅವರ ಅಭಿಪ್ರಾಯ. ಈ ಉಪನಿಷತ್ ರಹಸ್ಯ ಕ್ಷತ್ರಿಯದ್ದಾಗಿತ್ತು. ಯಜ್ಞದಿಂದ ಸರ್ವವನ್ನು ಪಡೆದುಕೊಳ್ಳಬಹುದೆಂಬ ಚಿಂತನೆಗೆ ಯಜ್ಞವನ್ನೇ ನಿರಾಕರಿಸುವ ಉಪನಿಷತ್ ಚಿಂತನೆ ಬ್ರಾಹ್ಮಣ ವರ್ಗವನ್ನು ದಿಗ್ಭ್ರಾಂತಗೊಳಿಸಿತು. ಬ್ರಾಹ್ಮಣ ಮೇಲ್ಮೆಯನ್ನು ಕ್ಷತ್ರಿಯರು ಈ ಮುಖಾಂತರ ಛಿದ್ರಗೊಳಿಸಿದ್ದರು. ಅವರ ಮುಂದೆ ಬ್ರಾಹ್ಮಣರು ಎರಡನೇ ಸ್ಥಾನಕ್ಕೆ ಇಳಿಯಬೇಕಾಯಿತು. ಪ್ರಾರಂಭದಲ್ಲಿ ಬ್ರಹ್ಮವು ಒಂದೇ ಆಗಿತ್ತು. ಒಂದೇ ಆಗಿದ್ದು ಬೆಳವಣಿಗೆ ಇದ್ದಿರಲಿಲ್ಲ. ಮುಂದೆ ಆತ ಒಂದು ಅತಿ ಶ್ರೇಷ್ಠವಾದ ಕ್ಷತ್ರಿಯ ವರ್ಗವನ್ನು ಸೃಷ್ಟಿಸಿದ. ಆದ್ದರಿಂದ ಕ್ಷತ್ರಿಯರಿಗಿಂತ

ಮೊದಲು ಮುನ್ನಡೆ ಸಿರ್ಸಿ; ಆನಂತರ 'ವಿಚಾರ ಸಾಹಿತ್ಯ ೨೦೦೦' ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಕಟಣೆ.

ಹೆಚ್ಚು ಮೇಲಿನದು ಯಾವುದೂ ಇಲ್ಲ. ಆದ್ದರಿಂದ ಕಿರೀಟಧಾರಣಾ ಮಹೋತ್ಸವದಲ್ಲಿ ಬ್ರಾಹ್ಮಣನು ಕ್ಷತ್ರಿಯನಿಗಿಂತ ಕೆಳಗೆ ಕೂಡುತ್ತಾನೆ. ಕ್ಷತ್ರಿಯರಿಗೆ ಮಾತ್ರ ಈ ಗೌರವ ಸಲ್ಲುತ್ತದೆ. ಕ್ಷತ್ರಿಯ ವರ್ಗಕ್ಕೆ ಮೂಲವಾದುದೇ ಬ್ರಾಹ್ಮಣ ವರ್ಗಕ್ಕೂ ಆಕರ. ಆದ್ದರಿಂದ ರಾಜನೇ ಶ್ರೇಷ್ಠತಮ ಸ್ಥಾನ ಹೊಂದಿದ್ದರೂ ಅಂತಿಮವಾಗಿ ಬ್ರಾಹ್ಮಣರನ್ನು ಅವಲಂಬಿಸುತ್ತಾನೆ.'[೨]

ಈ ಮೇಲಿನ ಅವತರಣಿಕೆ ಕ್ಷತ್ರಿಯ-ಬ್ರಾಹ್ಮಣ ನಡುವೆಯ ಸಂಘರ್ಷ ಮತ್ತು ಸಮನ್ವಯವನ್ನು ಬಿಂಬಿಸುತ್ತದೆಂದು ನನ್ನ ಅನಿಸಿಕೆ. ಉಪನಿಷತ್ ರಹಸ್ಯವನ್ನು ಕ್ಷತ್ರಿಯರೇ ಬ್ರಾಹ್ಮಣರಿಗೆ ಬೋಧಿಸುತ್ತಾರೆ. ಅದು ರಹಸ್ಯ ವಿದ್ಯೆ. ಆದರೆ ಉಪನಿಷತ್ತಿನ ಮುಂದಿನ ಬಹು ಮಹತ್ವದ ಜ್ಞಾನವನ್ನು ಜ್ಞಾನವಲಕ್ಯನಂಥ ಬ್ರಾಹ್ಮಣರೇ ತೋರಿದ್ದಾರೆ. ಯಾಕೆಂದರೆ ಚಿಂತನೆಯು-ತಪಸ್ಸು, ಧ್ಯಾನ -ಬ್ರಾಹ್ಮಣರ ಮುಖ್ಯ ಕಾರ್ಯ ಕ್ಷೇತ್ರವಾಗಿತ್ತು. ಅದು ಬ್ರಾಹ್ಮಣರದೇ ಕೈ ವಶವಾಯಿತು. ಈ ಇಡೀ ಚಿಂತನೆಯನ್ನು ಮತ್ತೆ ಸಂಘರ್ಷಿಸಿದವರು ಕ್ಷತ್ರಿಯರೇ ಬುದ್ಧ, ಮಹಾವೀರ.

ಯಾವುದೇ ತತ್ವಜ್ಞಾನ ರಾಜಕೀಯವನ್ನೊಳಗೊಂಡ ಸಾಮಾಜಿಕ ಪರಿಸರದಿಂದಲೇ ಪ್ರಭಾವಿಸಲ್ಪಡುತ್ತದೆ. ಹಾಗೆ ನೋಡಿದಾಗ ರಾಜಕೀಯವಾಗಿ ಕೂಡ ಬ್ರಾಹ್ಮಣ-ಕ್ಷತ್ರಿಯ ಸಂಘರ್ಷ ನಡೆದುದನ್ನು ಚರಿತ್ರೆ ಗುರುತಿಸುತ್ತದೆ. ಅಶೋಕ ಬೌದ್ಧ ಧರ್ಮವನ್ನು ಸ್ವೀಕರಿಸಿದ (ಆತ ಕ್ಷತ್ರಿಯ) ಯಜ್ಞಯಾಗಾದಿಗಳನ್ನು ನಿಲ್ಲಿಸಿದ. ಎಲ್ಲ ವರ್ಗಗಳೂ ಸಮಾನ ಎಂದ. ಬೌದ್ಧ ಧರ್ಮ, ವರ್ಣ, ಜಾತಿಯನ್ನು ನಿರಾಕರಿಸಿತ್ತು. ಒಬ್ಬ ದಲಿತ ಸಂಘದ ಹಿರಿಯನಾಗಿರಬಲ್ಲವನಾಗಿದ್ದ. ಈಗಿನ ಮಠಕ್ಕೆ ಗುರು ಇದ್ದಂತೆ. ಇದು ವೈದಿಕ ಧರ್ಮದ ಮೇಲೆ ದೊಡ್ಡ ಆಘಾತವಾಗಿತ್ತು. ಪುರೋಹಿತರ ಉತ್ಪನ್ನದ ಮೇಲೆಯೂ ಆಘಾತವೇ. ಇದರಿಂದ ಒಳಗೊಳಗೆ ಹಿತಾಸಕ್ತಿ ಕಿಡಿಕಾಯುತ್ತಲೇ ಇದ್ದಿರಬೇಕು. ಮೌರ್ಯರ ಕೊನೆಯ ಅರಸು ಬೃಹದ್ರಥನನ್ನು ಬ್ರಾಹ್ಮಣ ಪುಷ್ಯಮಿತ್ರ ಒಳಸಂಚಿನಿಂದ ಕೊಂದು ಬ್ರಾಹ್ಮಣ ರಾಜ್ಯವನ್ನು ಸ್ಥಾಪಿಸಿದ. ಅವನ ಮೇಲೆ ಏರಿ ಬಂದ ಮಿನಾಂದರನನ್ನು ಕೊಂದು ಪಾಟಲೀಪುತ್ರದಿಂದ ಜಾಲಂಧರದವರೆಗಿನ ಎಲ್ಲ ಬೌದ್ಧ ವಿಹಾರವನ್ನು ಸುಟ್ಟುಹಾಕಿದ. ಇಷ್ಟು ಮಾತ್ರವಲ್ಲ ಒಬ್ಬ ಶ್ರವಣನ ತಲೆಯನ್ನು ತಂದೊಪ್ಪಿಸಿದವರಿಗೆ ಧನದ ಬಹುಮಾನ ಕೊಡುವುದಾಗಿ ಸಾರಿದ. ಇದು ಬ್ರಾಹ್ಮಣ-ಕ್ಷತ್ರಿಯ ಸಂಘರ್ಷ ಮತ್ತು ಬೌದ್ಧರ ಮೇಲೆ ನಡೆದ ಆಕ್ರಮಣಕ್ಕೆ ಜ್ವಲಂತ ಉದಾಹರಣೆಯಾಗಿದೆ. ಇಲ್ಲಿ ಬೌದ್ಧರ ಮೇಲೆ ಸ್ವತಃ ಶಂಕರಚಾರ್ಯರ ಸಮ್ಮುಖದಲ್ಲೇ ನಡೆದ ಬೌದ್ಧ ವಿಹಾರದ ವಿಧ್ವಂಸದ ಉದಾಹರಣೆ ದಾಖಲಾಗಿದೆ.

"ಬೌದ್ಧ ಧರ್ಮದ ಒಂದು ಗಟ್ಟಿ ನೆಲವಾಗಿದ್ದ ನಾಗಾರ್ಜುನಕೊಂಡವನ್ನು ತಮ್ಮ ಅಸಂಖ್ಯಾತ ಅನುಯಾಯಿಗಳ ಜೊತೆ ಹೋಗಿ ತಮ್ಮ ಮೇಲ್ವಿಚಾರಣೆಯಲ್ಲಿ ಧ್ವಂಸ ಮಾಡಿದರು, ಬೌದ್ಧವಿಗ್ರಹಗಳು, ಸ್ತೂಪಗಳು, ಸ್ಮಾರಕಗಳನ್ನು ನಿರ್ನಾಮ ಮಾಡಿದರೆಂದು ನಾಗಾರ್ಜುನ ಕೊಂಡದಲ್ಲಿ ಮೊಟ್ಟಮೊದಲ ಭೂ ಶೋಧನೆ ನಡೆಸಿದ ಎ.ಎಲ್. ಲಾಂಗಹಸ್ಟ್ ಹೇಳಿದ್ದಾನೆ. ಕ್ರೂರ ರೀತಿ, ಎದೆ ನಡುಗಿಸುವ, ಮನಸ್ವೇಚ್ಛೆ, ಚೂರು-ಚೂರು ಮಾಡಿರುವುದು ಮುಂತಾದ

ಪದಪುಂಜಗಳಲ್ಲಿ ಪಾಶ್ಚಾತ್ಯ ವಿದ್ವಾಂಸನ ನೋವು ಚೆನ್ನಾಗಿ ಧ್ವನಿತವಾಗುತ್ತದೆ. ಈ ಮ್ಲೇಂಛನಿಗಿರುವ ಕಲಾಪ್ರೇಮ, ದೇಶಪ್ರೇಮ ಅದ್ವೈತಿಯಾದ ಶಂಕರಾಚಾರ್ಯರಿಗೆ ಇರಲಿಲ್ಲವಲ್ಲ ಎಂಬುದು ಬಹಳ ಸಂಕಟದ ಸಂಗತಿ"[೩] ಎಂದು ಭಗವಾನ್ ಹೇಳುತ್ತಾರೆ.

ಆರ್.ಎಸ್.ಎಸ್., ವಿ.ಹಿಂ.ಪ. ಇತ್ಯಾದಿಗಳು ಇತಿಹಾಸದ ತಪ್ಪನ್ನು ಸರಿಪಡಿಸುವ ಮಾತನ್ನು ಹೇಳುತ್ತಾರೆ. ಅದನ್ನು ಜಾರಿಗೊಳಿಸಲೋಸುಗ ಮಸೀದಿ, ಚರ್ಚ್‌ಗಳನ್ನು ನಾಶ ಮಾಡುವುದು, ಅನ್ಯ ಧರ್ಮೀಯರನ್ನು ಕೊಲೆ ಮಾಡುವ ಕಾರ್ಯಕ್ರಮವನ್ನು ಹಾಕಿ ಕೊಂಡಿದ್ದಾರೆ. ಇದೇ ಸಿದ್ಧಾಂತವನ್ನು ಇಂದಿನ ಬೌದ್ಧರೂ ಬ್ರಾಹ್ಮಣರ ವಿರುದ್ಧ ಪ್ರಯೋಗಿಸುತ್ತೇವೆಂದು ಈಗಿನ ಬ್ರಾಹ್ಮಣರನ್ನು ಕೊಲ್ಲುವ, ಹಿಂದೆ ವಿಹಾರವಿದ್ದ ಸ್ಥಳದಲ್ಲೇ ಈಗ ವಿಹಾರ ನಿರ್ಮಿಸಬೇಕೆಂಬ ಕಾರ್ಯಕ್ರಮ ಹಾಕಿಕೊಂಡರೆ ಇವರು ಏನು ಉತ್ತರಿಸಬಲ್ಲರು? ಎರಡನೇ ಅಂಶವೆಂದರೆ ಶಂಕರಾಚಾರ್ಯರ ಬ್ರಾಹ್ಮಣ ಪಕ್ಷಪಾತ. ಇದರ ಅರ್ಥ ಶಂಕರರು ವಿದ್ವಾಂಸರಲ್ಲವೆಂದು ಅರ್ಥವಲ್ಲ. ಆ ಬುದ್ಧಿವಂತಿಕೆ ಒಂದು ಹಿಡಿಯಷ್ಟಿರುವ ಬ್ರಾಹ್ಮಣ ವರ್ಣದ ಪ್ರಗತಿಗೆ ಮಾತ್ರ ಮೀಸಲಾಯಿತು.

ಆಗಿನ ಹಿಂದೂ ಧರ್ಮ ಮತ್ತು ಬೌದ್ಧ ಧರ್ಮದ ನೆನಪು ಬಂದಾಗ ನನಗೆ 'ನಾಗಾನಂದ' ನಾಟಕ ಒಂದು ಭವ್ಯ ಪ್ರತಿಮೆಯಾಗಿ ಕಾಣುತ್ತದೆ. 'ನಾಗಾನಂದ'ದಲ್ಲಿ ಗರುಡ ತಿಂದು ಹಾಕಿದ ನಾಗಗಳ ಎಲುಬಿನ ರಾಶಿಯೇ ಬಿದ್ದಿರುತ್ತದೆ. ಒಂದು ದಿನ ಜೀಮೂತ ವಾಹನ ಗರುಡಕ್ಕೆ ಆಹಾರವಾಗಲು ಶಾಲು ಹೊದೆದು ಮಲಗಿರುತ್ತಾನೆ. ಹಾರಿ ಬಂದ ಗರುಡ ಇದು ನಾಗವೇ ಎಂದು ತಿಳಿದು ತನ್ನ ಕಬ್ಬಿಣದಂಥ ಕೊಕ್ಕಿನಿಂದ ಹಿಸಿದು ಹಿಸಿದು ತಿನ್ನುತ್ತದೆ. ನಂತರ ಗರುಡಕ್ಕೆ ತಾನು ತಿನ್ನುತ್ತಿರುವುದು ಜೀಮೂತ ವಾಹನ ಎಂದು ಗೊತ್ತಾಗುತ್ತದೆ. ಗರುಡದ ಮನಸ್ಸು ಪರಿವರ್ತನೆಯಾಗುತ್ತದೆ. ಸ್ವರ್ಗಕ್ಕೆ ಹಾರಿ ಅಮೃತವನ್ನು ತಂದು ಸಿಂಪಡಿಸಿ ಸತ್ತ ಎಲ್ಲ ನಾಗಗಳನ್ನು ಬದುಕಿಸುತ್ತದೆ. ಇಲ್ಲಿ ಹಿಂದೂ ಧರ್ಮ ಗರುಡ, ಶೂದ್ರರೇ ನಾಗ ಮತ್ತು ಬೌದ್ಧಧರ್ಮವೇ ಜೀಮೂತವಾಹನ ಎಂದುಕೊಂಡರೆ ಸರಿಯಾಗುತ್ತದೆ. ಆದರೆ ಇಲ್ಲಿ ಒಂದು ವ್ಯತ್ಯಾಸವೆಂದರೆ ಶೂದ್ರರ ಪಾಲಿಗೆ ಹಿಂದೂ ಧರ್ಮ ಅಮೃತ ತರುವ ಗರುಡ ಮಾತ್ರ ಆಗಲೇ ಇಲ್ಲ.

ಶಂಕರಾಚಾರ್ಯರು ಶೂನ್ಯವಾದವನ್ನು, ಅಹಿಂಸೆಯನ್ನೂ ಬೌದ್ಧರಿಂದಲೇ ತೆಗೆದುಕೊಂಡರು. ಮಠ ಸ್ಥಾಪನೆ ಕೂಡ ಅಲ್ಲಿಯದೆ. ಆದರೆ ಶೂದ್ರರ ವಿಚಾರದಲ್ಲಿ ಮಾತ್ರ ಸ್ಮೃತಿಗಳನ್ನೇ ಅಂತಿಮ ಆಧಾರವನ್ನಾಗಿ ಸ್ವೀಕರಿಸಿದರು. ಇದು ದುಃಖದ ಸಂಗತಿ. ತತ್ವಜ್ಞಾನದ ಜ್ಞಾನಯೋಗದಿಂದ ಮಾತ್ರ ಮುಕ್ತಿ ದೊರಕುತ್ತದೆ. ಆದರೆ ನೈಸರ್ಗಿಕವಾಗೇ ಶೂದ್ರರು ತತ್ವಜ್ಞಾನದಿಂದ ಬಹಿಷ್ಕರಿಸಲ್ಪಟ್ಟಿದ್ದಾರೆ. ಆದ್ದರಿಂದ ಅವರ ವಿಷಯದಲ್ಲಿ ಮುಕ್ತಿಯ ಪ್ರಶ್ನೆಯೇ ಹುಟ್ಟುವುದಿಲ್ಲ (ದೇವಿ ಪ್ರಸಾದ) ಎಂದು ಬಿಟ್ಟರು!

ಆಗಿನ ಸ್ಥಿತಿ ಹೇಗಿತ್ತೆಂದರೆ ಬೌದ್ಧ ಧರ್ಮ ಶೂದ್ರರಿಗೆ ಒಂದು ದೊಡ್ಡ ಪರ್ಯಾಯವಾಗಿತ್ತು. ತಂಡೋಪತಂಡವಾಗಿ ಸೇರಿದರು. ಸೇರುತ್ತಲೂ ಇದ್ದರು. ಆಗ ಶಂಕರಾಚಾರ್ಯರು ವರ್ಣ ಅಥವಾ ಜಾತಿಗಳ ಮೇಲು-ಕೀಳನ್ನು ಕಳೆದು ಶೂದ್ರಾತಿಶೂದ್ರರನ್ನು ಹಿಂದೂ ಧರ್ಮಕ್ಕೆ

ಸೇರಿಸಿಕೊಳ್ಳದಿದ್ದರೆ ಹಿಂದೂ ಧರ್ಮ ಬದುಕುವುದಿಲ್ಲವೆಂದು ಪಟ್ಟು ಹಿಡಿದಿದ್ದರೆ ಸಾಂಪ್ರದಾಯಿಕವಾಗಿದ್ದ ಬ್ರಾಹ್ಮಣರೂ ಒಪ್ಪುತ್ತಿದ್ದರು. ಹಾಗೆ ಮಾಡಿದ್ದರೆ ಹಿಂದೂ ಧರ್ಮದಲ್ಲಿ ಧಾರ್ಮಿಕ ಸಮಾನತೆ, ಮುಸ್ಲಿಂ, ಕ್ರೈಸ್ತ ಧರ್ಮದಂತೆ ಸಾಧ್ಯವಾಗಿ ಹಿಂದೂಧರ್ಮ ಒಂದು ಸಮಾಜ, ಒಂದು ಕುಟುಂಬವಾಗಿ ಬೆಸೆದಿರುತ್ತಿತ್ತು. ಡಾ. ಅಂಬೇಡ್ಕರ್ ಹೇಳುತ್ತಾರೆ, "ಹಿಂದೂ ಧರ್ಮದ ಜಾತಿಯ ವಿಭಜನೆಯಿಂದಾಗಿ ಅದು ಒಂದು ಸಮಾಜವಾಗಿ ಬೆಸೆದುಕೊಳ್ಳಲೇ ಇಲ್ಲ"[೪] ಎಂದು. ಮಹಾತ್ಮಗಾಂಧಿ ಆ ದಿಸೆಯಲ್ಲಿ ಪ್ರಯತ್ನ ಮಾಡಿದರು. ದುಂಡು ಮೇಜಿನ ಪರಿಷತ್ತಿನ ನಂತರ ಗಾಂಧೀಜಿಗೆ ಹಿಂದೂ ಧರ್ಮ ಛಿದ್ರವಾಗುತ್ತದೆಂದು ಮನವರಿಕೆಯಾಯಿತು. ಆದ್ದರಿಂದಲೇ ಅವರು ಅಸ್ಪೃಶ್ಯತಾ ನಿವಾರಣೆ, ಹರಿಜನೋದ್ಧಾರ ಕಾಂಗ್ರೆಸ್ಸಿನ ಕಾರ್ಯಕ್ರಮವನ್ನಾಗಿ ಮಾಡಿದರು. ಇದು ಶಂಕರರಿಂದ ಯಾಕೆ ಸಾಧ್ಯವಾಗಲಿಲ್ಲವೆಂದರೆ ಅವರು ವರ್ಣದ ಸ್ವಾರ್ಥದ ಸ್ವಭಾವದಿಂದ ಬಂಧಿತರಾಗಿದ್ದರು. ವರ್ಗ ಸ್ವಭಾವದ ಕುರಿತು ಮಾರ್ಕ್ಸ್ ಚೆನ್ನಾಗಿ ಹೇಳುತ್ತಾರೆ. ಆದರೆ ಇದು ನಮ್ಮಲ್ಲಿ ವರ್ಗ-ವರ್ಣ ಎರಡೂ ಒಂದು ಸಂಕೀರ್ಣ ಬಂಧನವನ್ನು ಉಂಟು ಮಾಡುತ್ತದೆ.

ಹಾಗಾದರೆ ಈ ವರ್ಣ-ವರ್ಗ ಸ್ವಭಾವದಿಂದ ಹೊರಬರಲು ಸಾಧ್ಯವಿಲ್ಲವೇ? ಸಾಧ್ಯವಿದೆ. ಅದಕ್ಕೆ ಒಂದು ಉದಾಹರಣೆಯನ್ನು ಮಾತ್ರ ಹೇಳುತ್ತೇನೆ. ಡಾ.ಬಿ.ಆರ್. ಅಂಬೇಡ್ಕರ ಇಬ್ಬರು ಶಿಕ್ಷಕರ ವಿಚಾರ ಇದು. ಮೊದಲನೆಯವರಲ್ಲಿ ವಿದ್ಯಾರ್ಥಿ ಅಂಬೇಡ್ಕರ ಶಿಕ್ಷಕರ ಬಳಿ ಹೋಗಿ ತನಗೆ ಸಂಸ್ಕೃತ ಕಲಿಸಿ ಎನ್ನುತ್ತಾರೆ. 'ಎಲಾ, ಮಹಾರನಿಗೆ (ಹೊಲೆಯನಿಗೆ) ಸಂಸ್ಕೃತವೇ, ಹಾಳು' ಎಂದು ಹೆದರಿಸಿ ಕಳಿಸುತ್ತಾರೆ. ಎರಡನೆಯವರು ತನ್ನ ಅಡ್ಡ ಹೆಸರಾದ ಅಂಬೇಡ್ಕರ ಎನ್ನುವುದನ್ನೇ ಬಾಲಕನಿಗೆ ಇಟ್ಟು ಆತನ ಕೀಳರಿಮೆ ಕಳೆದು ಶಿಕ್ಷಣ ಕೊಡುತ್ತಾರೆ. ಲಂಬೇಡ್ಕರ ದಲಿತರ ಮುಂದಾಳುವಾಗಿ ಬಿರುಗಾಳಿಯಾಗಿ ಬ್ರಾಹ್ಮಣ್ಯವನ್ನು ಖಂಡಿಸಿದ್ದರೂ ದುಂಡು ಮೇಜಿನ ಸಭೆಯಲ್ಲಿ ದಲಿತರಿಗಾಗಿ ಮೀಸಲಾತಿಯನ್ನು ಕೇಳುತ್ತಿರುವಾಗಲೂ ಪತ್ರ ಬರೆದು ಅವರನ್ನು ಆಶೀರ್ವದಿಸುತ್ತಾರೆ. ಈ ಇಬ್ಬರೂ ಬ್ರಾಹ್ಮಣರೇ. ಬ್ರಾಹ್ಮಣ ಮಹಿಳೆಯೋರ್ವರು ಡಾ. ಅಂಬೇಡ್ಕರರನ್ನು ಮದುವೆಯಾಗುತ್ತಾರೆ. ಇಂಥವರು ಮೊದಲೂ ಇದ್ದರು. ಈಗಲೂ ಇದ್ದಾರೆ. ಆದರಲ್ಲೂ ಈಗಿತ್ತ ಉದಾರವಾದಿಗಳ ಸಂಖ್ಯೆ ಹೆಚ್ಚಾಗುತ್ತಲಿದೆ ಎಂದು ನನ್ನ ಅನಿಸಿಕೆಯಾಗಿದೆ.

ಮಹಾತ್ಮಗಾಂಧೀಜಿ ಈ ಮಿತಿಯನ್ನು ಮೀರಿದ್ದರಿಂದಲೇ ಅಸ್ಪೃಶ್ಯತೆ ಮನುಸ್ಮೃತಿಯಲ್ಲಿರುವುದಾದರೆ ಅದನ್ನೇ ತಿದ್ದಬೇಕು ಎಂದು ಹೇಳಲು ಸಾಧ್ಯವಾಯಿತು. ಶಂಕರರಿಂದ ತಮ್ಮ ವರ್ಣ ಸ್ವಭಾವವನ್ನು ಮೀರಲಾಗಲಿಲ್ಲ. ಆದ್ದರಿಂದ ಅವರ ಸೇವೆ ಕೇವಲ ಬ್ರಾಹ್ಮಣ ವರ್ಣ, ಈಗಿನ ದೃಷ್ಟಿಯಲ್ಲಿ ಜಾತಿಗಾಗಿ ಮೀಸಲಾಯಿತು. ಅವರ ಜಗನ್ ಮಿಥ್ಯಾ ಸಿದ್ಧಾಂತ ಕೂಡ ದೇಶದ ಪ್ರಗತಿಗೆ ಮಾರಕವಾಯಿತು. "ಭಾರತದ ಇತಿಹಾಸದಲ್ಲಿ ವಿಜ್ಞಾನ ಪದ್ಧತಿಯು ಕುಸಿಯುವುದಕ್ಕೆ ಶಂಕರಾಚಾರ್ಯರ ಸಿದ್ಧಾಂತವೂ ಒಂದು ಕಾರಣವೆಂದು ಅವರು ಬರೆಯುತ್ತಾರೆ" ಎಂದು ಡಾ. ಜಿ. ರಾಮಕೃಷ್ಣ ಹಿರಿಯ ವಿಜ್ಞಾನಿ ಪ್ರಫುಲ್ಲಚಂದ್ರರೇ ಅವರ ಮಾತನ್ನು ದಾಖಲಿಸುತ್ತಾರೆ.[೪]

ಇದೀಗ ಸ್ವರ್ಣವಲ್ಲಿಯಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಶಂಕರರನ್ನು ಕೇವಲ ಆರಾಧಿಸುವ ಬದಲು ಶಂಕರರ ಮೇಧಾಶಕ್ತಿಯನ್ನು ವಿದ್ವತ್ತನ್ನು ಗೌರವಿಸುತ್ತಲೇ ಅವರನ್ನು ಕುರುಡಾದ ಸ್ಮೃತಿಗಳ ಅವಲಂಬನೆಯಿಂದ ಬಿಡಿಸಿದ್ದರೆ ವೈದಿಕ ತತ್ವಜ್ಞಾನದಲ್ಲಿ ಒಂದು ಮುನ್ನಡೆಯಾಗಬಹುದಿತ್ತೋ ಏನೋ. ಆದರೆ ಅಲ್ಲಿರುವವರೆಲ್ಲ ಶಂಕರರ ಹೆಸರು ಹೇಳಿ ಊಟ ಮಾಡುವವರೇ ಆಗಿರುವುದರಿಂದ ಅಂತಹದೇನೂ ಸಾಧ್ಯವಾಗುವುದಿಲ್ಲ.

ಅಡಿಟಿಪ್ಪಣಿಗಳು

೧. ಅನು: ಪ್ರಧಾನಗುರುದತ್ತ, ೧೯೮೬; ೩೦.

೨. ದೇವಿ ಪ್ರಸಾದ ಚಟ್ಟೋಪಧ್ಯಾಯ What is living and what is dead in Indian philosphy 1993; 115.

೩. ಸಂಕ್ರಮಣ ಸಂಚಿಕೆ : ೧೧೨, ಮೇ, ೧೯೮೧.

೪. ಭಾರತೀಯ ವಿಜ್ಞಾನದ ಹಾದಿ ೧೯೯೭; ೧೩೭.

*

ಧರ್ಮ-ದೇವರು; ದ್ವೈತ ಅದ್ವೈತ ಇತ್ಯಾದಿ

ಈಗ ಕೆಲವು ದಿನಗಳಿಂದ 'ಮುಂಗಾರು'ವಿನಲ್ಲಿ ಆಸ್ತಿಕತೆ-ನಾಸ್ತಿಕತೆ ಮತ್ತು ದ್ವೈತ, ಅದ್ವೈತದ ಮೇಲ್ಮೆ, ಮಹತ್ವದ ಚರ್ಚೆ ನಡೆಯುತ್ತಿದೆ.

ಧರ್ಮ ಮತ್ತು ದೇವರುಗಳ ಸಂಬಂಧ ಜಗತ್ತಿನ ಎಲ್ಲ ಸಾಂಸ್ಥಿಕ ಧರ್ಮಗಳಿಗೂ ಸಾಮಾನ್ಯ. ಅದು ಹಿಂದೂ, ಕಿಶ್ಚನ್, ಮುಸ್ಲಿಮ್‌ಗಳಂಥ ಎಲ್ಲ ಮತ ಧರ್ಮದ ಸಂದರ್ಭದಲ್ಲೂ ಹೌದು. ಇದಕ್ಕೆ ಬೌದ್ಧ ಧರ್ಮ ಮಾತ್ರ ಒಂದು ಅಪವಾದವೆಂದು ತೋರುತ್ತದೆ.

ಹಿಂದೂ ಧರ್ಮದಲ್ಲಿ ಮುಖ್ಯವಾಗಿ ದ್ವೈತ ಮತ್ತು ಅದ್ವೈತದ ಶಾಖೆ ಮುಖ್ಯ.

ಇಂಥ ಸಂವಾದ ಹಿಂದಿನಿಂದಲೂ ನಡೆಯುತ್ತಲೇ ಇತ್ತು. ಇಂದೂ ನಡೆಯುತ್ತಿದೆ. ಅದರ ಒಂದು ಪ್ರಕ್ರಿಯೆಯೇ 'ಮುಂಗಾರು'ವಿನಲ್ಲಿ ನಡೆಯುವ ಸಂವಾದ. ಹೀಗೆ ನಡೆಯುತ್ತಿದ್ದರೂ ಅದನ್ನು ಆ ಭಕ್ತ ಮಂಡಳಿಯವರನ್ನು ಬಿಟ್ಟರೆ ಬೇರೆಯವರು ಗಮನಿಸುತ್ತಿರಲಿಲ್ಲ. ಅಂದರೆ ಶೇಕಡಾ ಎಂಬತ್ತಕ್ಕಿಂತ ಹೆಚ್ಚಾಗಿರುವ ಶೂದ್ರರು- ದಲಿತರು ಇದರಲ್ಲಿ ತಲೆಹಾಕುವಂತಿರಲಿಲ್ಲ. ಯಾಕೆಂದರೆ ತಾವು ಬೆವರು ಸುರಿಸಿ ದುಡಿದು ಈ ಧರ್ಮಾತ್ಮರುಗಳ ಬೊಜ್ಜು ಬೆಳೆಸಲು ಪೂರೈಕೆ ಮಾಡುವುದರಲ್ಲೇ ಜನ್ಮ ಕಳೆಯುತ್ತಿತ್ತು. ಇಂದೂ ಪರಿಸ್ಥಿತಿ ಅಷ್ಟೇನೂ ಬದಲಾಗದಿದ್ದರೂ ಈ ನಿರರ್ಥಕತೆಯನ್ನು ಗ್ರಹಿಸುವಷ್ಟು ಜಾಗ್ರತಿ ಉಂಟಾಗಿದೆ.

ಈ ದ್ವೈತಾದ್ವೈತಕ್ಕೆ ಸೇರದ ನನ್ನಂಥ ಶೂದ್ರನಿಗೆ ಇವರು ಕೂದಲೆಳೆ ತೆಗೆಯುವಷ್ಟು ಸೂಕ್ಷ್ಮವಾಗಿ ಹೂಡುವ ವಾದ ವಿವಾದಗಳನ್ನು ನೋಡಿದಾಗ ಡಾ. ಅಂಬೇಡ್ಕರರ "ಈ ದೇಶದಲ್ಲಿ ಮಹಾತ್ಮರುಗಳ ಮೇಲೆ ಮಹಾತ್ಮರು ಆಗಿಹೋಗಿದ್ದಾರೆ; ಆದರೆ ದಲಿತರ ಸ್ಥಿತಿಯಲ್ಲಿ ಮಾತ್ರ ಯಾವ ಬದಲಾವಣೆಯೂ ಆಗಲಿಲ್ಲ" ಎಂಬ ಕಟುವಾಸ್ತವದ ಮಾತು ನೆನಪಾಗುತ್ತದೆ.

ಈ ದ್ವೈತದವರಾಗಲಿ ಅದ್ವೈತದವರಾಗಲಿ ಬಹುಸಂಖ್ಯಾತರಾದ ಶೂದ್ರರ ಸಾಮಾಜಿಕ, ದೈವಿಕ ಉದ್ಧಾರಕ್ಕಾಗಿ ಏನು ಮಾಡಿದ್ದಾರೆ? ಅದನ್ನು ಕೇಳಬೇಕಾಗಿಯೇ ಇಲ್ಲ. ಅದಕ್ಕೆ ವಾಸ್ತವವೇ ಸ್ಪಷ್ಟವಾಗಿದೆ.

ಶೂದ್ರ ಸಮೂಹದವರ ಕಲಿಯುವ, ಗಳಿಸುವ ಹಕ್ಕನ್ನು ಕಸಿಮಕೊಂಡು ಕುರುಡು ಭಕ್ತಿಯ ಬಡತನದ ದೈವಾನುಗ್ರಹವನ್ನು ಕೊಟ್ಟರು. ಅದರಲ್ಲೂ ದಲಿತರನ್ನು ಪಂಚಮರೆಂದು,

---

ಮೊದಲು ಪ್ರಕಟನೆ: ಮುಂಗಾರು ೩೦-೭-೧೯೮೭

ಅತಿಶೂದ್ರರೆಂದು ಊರಹೊರಗೆ ಇಟ್ಟು, ಎಂಜಲು ಬಾಳೆ ತಿನ್ನಬೇಕಾದ ಅಮಾನವೀಯ ಸ್ಥಿತಿಗೆ ನೂಕಿದರು. ಅಂದರೆ ಶಾಶ್ವತವಾದ ಗುಲಾಮಗಿರಿಗೆ ನೂಕಿದರು. ಮಾನವೀಯ ಧರ್ಮ ತುಂಬಿತುಳುಕುವ ಈ ಧರ್ಮಾತ್ಮರುಗಳಿಗೆ ದಲಿತರ ಮೇಲೆ ನಡೆಯುವ ಸಾಮಾಜಿಕ, ಆರ್ಥಿಕ-ಕ್ರೌರ್ಯ ಕಣ್ಣಿಗೆ ಕಾಣಲಿಲ್ಲ. ಯಾಕೆಂದರೆ ಇವರೆಲ್ಲ ಮಡಿಉಟ್ಟುಕೊಂಡು ಕಣ್ಣು ಮುಚ್ಚಿ (ಯಾಕೆಂದರೆ ಕಣ್ಣಿಗೆ ಕಾಣದ) ದೇವರುಗಳ ಸಂಶೋಧಕ ಸಮಾಧಿಯ ಅಮಲಿನಲ್ಲಿದ್ದರು.

ತಾವು ಹೊರಿಸಿದ ಗುಲಾಮಗಿರಿಗೆ ಪ್ರತಿಭಟನೆ ಬರಬಾರದೆಂಬ ದೂರ್ತ ಆಲೋಚನೆಯಿಂದ ಕರ್ಮ ಸಿದ್ಧಾಂತವನ್ನು ಬೆಂಬಲಿಸಿ ಅದನ್ನು ಸ್ಥಿರಗೊಳಿಸಿದರು. ಸಾಮಾಜಿಕರಿಗೆ ಬರುವ ಕಷ್ಟ ಕಾರ್ಪಣ್ಯ, ಸಾಮಾಜಿಕ ಸ್ಥಾನವೆಲ್ಲವೂ ಹಿಂದಿನ ಜನ್ಮದ ಸಂಚಯ, ಪಾಪ ಎಂದು ಹೇಳಿ ಅವರನ್ನು ಸಂಪೂರ್ಣ ನಿಶ್ಶಸ್ತ್ರಗೊಳಿಸಿದರು. ಆ ಕರ್ಮವನ್ನು ಸವೆಯಲು ದೇವರ, ಬ್ರಾಹ್ಮಣರ, (ಯಾಕೆಂದರೆ ಬ್ರಾಹ್ಮಣರು ಭೂ ದೇವತೆಗಳು) ರಾಜರ (ಯಾಕೆಂದರೆ ಅವರು ವಿಷ್ಣುವಿನ ಅಂಶ ಹೊಂದಿದವರು) ಸೇವೆ ಮಾಡಿ ಮುಂದಿನ ಜನ್ಮದಲ್ಲಿ ಉನ್ನತಿ ಹೊಂದಬೇಕೆಂದು ಹೇಳಿ ಅವರನ್ನು ನಿರ್ವೀರ್ಯ ಗೊಳಿಸಿದರು. ಭಾರತದಲ್ಲಿ ಬುದ್ಧ, ಬಸವ ಬಿಟ್ಟರೆ ಈ ದುಃಖಿಗಳ ಹೃದಯಕ್ಕೆ ಸ್ಪಂದಿಸಿದವರಿಲ್ಲ. ಧರ್ಮದ ಸ್ವಭಾವ ಶೋಷಕರೊಡನೆ ಒಪ್ಪಂದ ಮಾಡಿಕೊಳ್ಳುವುದಾದ್ದರಿಂದ ಈ ಧರ್ಮಗಳೂ ಮುಂದೆ ಅಂದರೆ ಈಗ ಏನಾಗಿವೆ ಎಂದು ಬೇರೆ ಹೇಳಬೇಕಿಲ್ಲ.

ಪ್ರಸ್ತುತ ಶಂಕರ-ಮಧ್ವರನ್ನೇ ತೆಗೆದುಕೊಳ್ಳುವ. ಇವರಲ್ಲಿ ಯಾರು ಭಾರತದ ಇಡೀ ಸಮೂಹದ ಒಂದುತನ, ಬಂಧುತ್ವಕ್ಕಾಗಿ ಮಿಡಿದಿದ್ದಾರೆ? ಶಂಕರರ ಸಂದರ್ಭದಲ್ಲಿ ಅವರಿಗೆ ಅನುಕೂಲವಾಗಿ ಒಂದು ಚಾರಿತ್ರಿಕ ಸಂದರ್ಭ ಇತ್ತು. ಬೌದ್ಧ ಧರ್ಮ ತನ್ನ ಭೂತ ದಯಾಪರತೆಯಿಂದ ವೈದಿಕ ಧರ್ಮದ ಶೂದ್ರರನ್ನೂ ದಲಿತರನ್ನೂ ಆಕರ್ಷಿಸುತ್ತಿತ್ತು. ಬೌದ್ಧ ಸಂಘದಲ್ಲಿ ಒಬ್ಬ ಅಸ್ಪೃಶ್ಯ ಸಂಘದ ಮುಖ್ಯಸ್ಥನಾಗಿರುತ್ತಿದ್ದುದೂ ಇತ್ತು. ನಮ್ಮ ದ್ವೈತಾದ್ವೈತ ಮತದಲ್ಲಿ ಎಷ್ಟು ಜನ ದಲಿತರು ಪೀಠವೇರಿದ್ದಾರೆ? ಇರಲಿ. ಅಂತಹ ಬೌದ್ಧಧರ್ಮವನ್ನು ಮೂಲೆಗೆ ಮುಟ್ಟಿಸುವುದರಲ್ಲಿ ಶಂಕರಾಚಾರ್ಯರು ತಮ್ಮೆಲ್ಲ ಕುಶಲತೆಯನ್ನು (ನಿಶ್ಚಯವಾಗಿ ಅವರು ಹೆಚ್ಚಿನ ವಾದಪಟುಗಳೂ, ಬುದ್ಧಿವಂತರೂ ಆಗಿದ್ದರು) ಉಪಯೋಗಿಸಿದರು. ಅದು ಹೋಗಲಿ, ಅದೊಂದು ತತ್ವಶಾಸ್ತ್ರದ ಪಂಥ (Philosophical School) ಎನ್ನ ಬಹುದಾದರೂ ಆಗ ಬೌದ್ಧದರ್ಮದ ಪ್ರಾಬಲ್ಯ, ವೈದಿಕ ಧರ್ಮದ ದೌರ್ಬಲ್ಯವನ್ನು ಮುಂದೆ ಮಾಡಿ ಅವರು ಚಾತುರ್ವರ್ಣವನ್ನು ಮುರಿದು ಇಡೀ ಸಮೂಹವನ್ನು ಒಂದು ಮಾಡಬಹುದಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಸಮದರ್ಶಿಗಳೆಂದು ಅವರ ಹಿಂಬಾಲಕರ ಹೊಗಳಿಕೆಗೆ ಪಾತ್ರವಾದ ಆಚಾರ್ಯರು ಆಧ್ಯಾತ್ಮದಲ್ಲಿ ಜಗತ್ತನ್ನೇ (ಪದಾರ್ಥವನ್ನೇ) ಅಲ್ಲಗಳೆಯುತ್ತ ಆಚರಣೆಯಲ್ಲಿ ಚಾತುರ್ವರ್ಣ್ಯ, ಅಸ್ಪೃಶ್ಯತೆಯನ್ನು ಮನ್ನಿಸಿದರು. ಅಂತೂ ಅವರು ತಿಳಿದೊ ತಿಳಿಯದೆಯೊ ಬ್ರಾಹ್ಮಣ ಪಕ್ಷಪಾತಿಗಳಾದರು ಎಂಬುದರಲ್ಲಿ ಸಂದೇಹ ಬೇಡ. ಇವರು ಸಾರಿದ ಅದ್ವೈತ ಆಷಾಢ ಭೂತಿಗಳಿಗೆ ಲಾಯಕ್ಕಾಯಿತು.

ಇನ್ನು ಶಂಕರರನ್ನು ಮೂದಲಿಸುವ ಮಧ್ವರು (ಮಧ್ವಾಚಾರ್ಯರು) ಶೂದ್ರ ಸಮಾಜಕ್ಕೆ ಮಾಡಿದ್ದೇನು ಮಹಾ? ಇವರು ಶಂಕರರಂತೆ ಈ ಜಡಜಗತ್ತನ್ನೇ ಅಲ್ಲಗಳೆಯಲಿಲ್ಲ.

ಇದೊಂದು ಮಟ್ಟಿಗೆ ಇವರು ತುಸು ಪುರೋಗಾಮಿ ಎನ್ನುವಂತೆ ತೋರಿದರೂ ಅಂತಿಮವಾಗಿ ಪರಮಾತ್ಮನೆ ಸತ್ಯ. ಜಡ ಛಾಯೆ ಎಂಬಲ್ಲಿಗೇಬಂದು ಮುಟ್ಟಿದರು. ಜೀವರುಗಳಿಗೆ ಸಂಬಂಧಿಸಿದಂತೆ 'ನಿತ್ಯ ನಾರಕಿಗಳ' ಒಂದು ಬಡಾವಣೆಯನ್ನೇ ತೆರೆದರು. ಇದು ಒಂದು ಹೆಜ್ಜೆ ಮುಂದೆ ಹೋಗಿ ಎರಡು ಹೆಜ್ಜೆ ಹಿಂದೆ ಬಂದಂತೆ, ಅದೇನೇ ಇರಲಿ. ಅವರು ಇವೆಲ್ಲಕ್ಕೂ ಉತ್ತರ ಕೊಟ್ಟಾರು. ಯಾಕೆಂದರೆ ಇವರ ಸಿದ್ಧಾಂತವೆಲ್ಲ ತರ್ಕದ ಮೇಲೆ ಮಾತ್ರ ನಿಂತಿರುವಂತಹದು. ಅದರಲ್ಲಿ ಎಂಥವರಿಗೂ ಸೋಲು ಉಂಟಾ ದೀತು! ಆದರೆ ಇವರು ಶೂದ್ರಾತಿಶೂದ್ರರ ದೌರ್ಜನ್ಯಕ್ಕಾಗಿ ಯಾವ ಕೆಲಸ ಕೈಕೊಂಡಿದ್ದಾರೆ? ವ್ಯಾಸರಾಯರಿಗೆ ಕುರುಬ ಕನಕ ಪ್ರೀತಿಯ ಶಿಷ್ಯನಾಗಿರ ಬಹುದಾಗಿದ್ದರೂ (ಇದು ಭಾಗವತದವರದ್ದು ಎನ್ನುತ್ತಾರೇನೋ!) ಉಳಿದವರ ಮಧ್ಯೆ ಸಮಾನ ಸ್ಥಾನವಿತ್ತೆ? ಕನಕ ಉಡುಪಿಯ ಕೃಷ್ಣ ದರ್ಶನಕ್ಕೆ ಯಾತ್ರೆಬಂದಾಗ ಆತನಿಗೆ ದೇವಾಲಯ ಪ್ರವೇಶಕೊಡದೆ, ಕೃಷ್ಣ ಹಿಂದಿರುಗಿ ಗೋಡೆ ಕಣ್ಣುಮಾಡಿ ಕನಕನಿಗೆ ದರ್ಶನ ಕೊಟ್ಟ ಎಂಬ ಕಟ್ಟುಕತೆಯನ್ನು ಹರಡಿ ಶೂದ್ರರನ್ನು ಹೊರಗೇ ಇಟ್ಟರು. ಆಧ್ಯಾತ್ಮ ಉನ್ನತಿಯನ್ನು ಜೀವ ಮಾತ್ರರಿಗೆಲ್ಲ ಸಾಧಿಸಿಕೊಡಲು ಸಹಾಯಕವಾಗಬೇಕಾದ ಮಠ ಚಿನ್ನದತೇರು ಮಾಡುವಂಥ ಮೋಹಕ (ಧನದ ಮೋಹ ಕಟ್ಟಿದ್ದಲ್ಲವೆ?) ಕೆಲಸದಲ್ಲಿ ತೊಡಗಿರುವಂಥ ಜನ ಮಾಡಿರುವ ಮಾಡುತ್ತಿರುವ ಸಾಧನೆಯಾದರೂ ಏನು? ದ್ವೈತವೇನು? ಅದ್ವೈತವೇನು? ಎಲ್ಲಾ ನಮಗೆ ಅಳಿಯ ಅಲ್ಲ, ಮಗಳ ಗಂಡ ಎಂಬಂತೆ. ಎಂಥ ಜ್ಞಾನಿ! ಎಂದು ನಗುತ್ತಾರೋ ಏನೋ.

ಆದ್ದರಿಂದ ಈ ಶಂಕರ, ಮಾಧ್ವರ ಸಂವಾದ ನನ್ನಂಥವನಿಗೆ ಹಾಗೂ ಇದೆ ಮನೋಧರ್ಮ ಕೆಲ ಬ್ರಾಹ್ಮಣರಿಗೆ ಕೂಡ ಮನೋರಂಜನೆಯ ಸಂಗತಿಯಾಗ ಬಹುದಲ್ಲದೆ ಬೇರೆಯಿಲ್ಲ. ಅವರ ಪರಸ್ಪರ ಆರೋಪಗಳು ಮಜಾ ಇರುತ್ತವೆ.

ಸಂವಾದದ ಎರಡನೇ ಮುಖವಾಗಿ ದೇವರು- ಧರ್ಮದ ಕುರಿತೂ ಅಭಿಪ್ರಾಯಗಳು ಬರುತ್ತಿವೆ. ಧರ್ಮದ ಚರಿತ್ರೆಯನ್ನು ನೋಡಿದಾಗ ಕಾಲ ಕಾಲದ ಗುಂಟ ಅದು ಸಂಪತ್ತಿನ, ರಾಜಸತ್ತೆಯ ಸಂಗಡವೇ ಬಂದಿದೆ. ರಾಜಸತ್ತೆಗೆ ಜನರನ್ನು ಸುಲಿಯಲು ಜನರು ನಿಶ್ಯಸ್ತ್ರರಾಗುವುದು ಬೇಕಿತ್ತು. ಅದನ್ನು ಸಾಂಸ್ಥಿಕ ಧರ್ಮ ಚೆನ್ನಾಗಿ ಮಾಡಿಕೊಟ್ಟಿದೆ. ಅದರಿಂದಾಗಿ ಪುರೋಹಿತರು, ಮಠಾಧಿಪತಿಗಳು ಬೇಕಷ್ಟು ಬೀಗಿದ್ದಾರೆ. ಇಂದೂ ಸಹ ಅದಕ್ಕೆ ಸಾಕ್ಷಿದೊರಕುತ್ತದೆ. ಸಜ್ಜನ ಹೆಣ್ಣೋರ್ವಳನ್ನು ಬತ್ತಲೆ ಮೆರವಣಿಗೆ ಮಾಡಿಸಿದ ಕುದುರೆ ಮೋತಿ ಸ್ವಾಮಿಯನ್ನು ರಾಜಸತ್ತೆ ಹೇಗೆ ಕಾಪಾಡಿತು ಎಂಬುದು ನಮ್ಮ ಮುಂದಿದೆ. ಪ್ರಸಿದ್ಧ ಮಠ, ದೇವಾಲಯ ಇದಕ್ಕೆ ಹೊರತಾಗಿಲ್ಲ. ಇಂದಿಗೂ ಅಸ್ಪೃಶ್ಯರು ಪ್ರವೇಶ ಮಾಡಬೇಕೆಂದು ಬಯಸಿದರೆ ಚಳವಳಿಯನ್ನೇ ಮಾಡಬೇಕಾಗುತ್ತದೆ. ಅಲ್ಲಿ ಪೋಲೀಸರು ಬರಬೇಕಾಗುತ್ತದೆ. ದೇವ ಸ್ಥಾನ ಪ್ರವೇಶ ಬಯಸಿದ ಭಕ್ತನಿಗೆ, ಸೆರೆಮನೆ ಪ್ರವೇಶ ಸಿಕ್ಕುತ್ತದೆ.

ಧರ್ಮ ಎಂದರೇನು? ಎಂಬುದಕ್ಕೆ ಎತ್ತಿಹಿಡಿಯುವಂತಹದು, ಧಾರಣಶಕ್ತಿ ಉಳ್ಳದ್ದು ಎನ್ನಲಾಗುತ್ತದೆ. ಏನನ್ನ ಎತ್ತಿ ಹಿಡಿಯುವುದು? ಸಾಮಾಜಿಕ ನ್ಯಾಯವನ್ನು. ದಯವೇ ಧಮ್ಮದ ಮೂಲ ಎಂದು ಬಸವಣ್ಣ ಹೇಳಿದ್ದಾರೆ. ದಯವೇ ಧರ್ಮದ ಮೂಲ ಹೌದೂ ಅಲ್ಲವೋ; ಆದರೆ ಸಾಮಾಜಿಕನ್ಯಾಯ ಅದರ ಮೂಲವಾಗಿರದೆ? ಆದರೆ ಚರಿತ್ರೆಯಲ್ಲಿ ಜಗತ್ತಿನಲ್ಲಿ ಧರ್ಮದ ಹೆಸರಿನಲ್ಲಿ ಹರಿದ ರಕ್ತ, ನಡೆದ ಹಿಂಸೆ ಮತ್ತೆ ಯಾವುದರಿಂದಲೂ ಆಗಿಲ್ಲವಲ್ಲವೆ? ಅದು ಹೋಗಲಿ ಭಾರತದಲ್ಲೇ ಇಂದು ನಡೆಯುತ್ತಿರುವ ಕೋಮುಗಲಭೆ ಧರ್ಮದ ಹೆಸರಿನಲ್ಲಿಯೇ ಅಲ್ಲವೆ? ಈ ಕೋಮುಗಲಭೆಯಲ್ಲಿ ಸಾಯುವವರು ಯಾರು? ಯಾವುದಾದರೂ ಸ್ವಾಮಿ, ಫಾದರ್ ಮುಲ್ಲಾ ಸಾಯುತ್ತಾರೆಯೇ? ಇಲ್ಲ, ಮುಗ್ಧರು, ಬಡವರು ಸಾಯುತ್ತಾರೆ. ಇವರಿಗೊಂದಿಷ್ಟು ಧರ್ಮದ ಅಲ್ಕಾಹಾಲನ್ನು ಕುಡಿಯಿಸಿ ಛೂಬಿಡುತ್ತಾರೆ ಧರ್ಮಾತ್ಮರು. ಆ ನಿರಪರಾಧಿಗಳು ದೇವರ ಹೆಸರಿನಲ್ಲಿ ಸಾಯುತ್ತಾರೆ. ಕಾಪಾಡಬೇಕಾದ ಧರ್ಮ ಕೊಲೆ ಮಾಡಿಸುತ್ತದೆ.

ಹೀಗೆ ಹೇಳಿದರೆ ಅದು ಧರ್ಮದ ತಪ್ಪಲ್ಲ. ಅವರ ತತ್ವ ಇಡೀ ವಿಶ್ವಕ್ಕೆ ಅನುಸರಿಸಲು ಯೋಗ್ಯ (ಹಿಂದು, ಕ್ರಿಸ್ತ, ಸಿಖ್, ಮುಸ್ಲಿಂ ಎಲ್ಲ ಧರ್ಮದವರೂ ಹಾಗೇ ಅನ್ನುತ್ತಾರೆ. ಆದ್ದರಿಂದ ಅವರವರ ವಿಶ್ವವೇ ಬೇರೆ. ಅವರ ವಿಶ್ವದಲ್ಲಿ ಮತ್ತೊಂದಕ್ಕೆ ಪ್ರವೇಶವಿಲ್ಲ) ಆದರೆ ಅನುಸರಿಸುವವರ ತಪ್ಪು ಎಂದು ನುಸಿ ಹೊಡೆದು ಬಿಡುತ್ತಾರೆ.

ಹಾಗಂತ ಧರ್ಮಕ್ಕೊಂದು ಚರಿತ್ರೆಯೇ ಇಲ್ಲ; ಅದಕ್ಕೊಂದು ಗುಣವೇ ಇಲ್ಲವಾಗಿತ್ತು ಎನ್ನುವಂತಿಲ್ಲ. ಸನಾತನ ಧರ್ಮವನ್ನು ಪ್ರತಿಭಟಿಸಿ ಬಂದ ಧರ್ಮವೆಲ್ಲವೂ ಪ್ರಾರಂಭದಲ್ಲಿ ಕ್ರಾಂತಿಕಾರಕವೇ ಆಗಿತ್ತು.

ಉದಾಹರಣೆಗಾಗಿ ಕ್ರಿಸ್ತಧರ್ಮ ತನ್ನ ಹುಟ್ಟಿನಲ್ಲಿ ಒಂದು ಸಾಮಾಜಿಕ ಪ್ರಕ್ರಿಯೆಯಾಗಿ ಬಂತು ಎಂಬುದನ್ನು ಗಮನಿಸಬೇಕು. ಮಹಾತ್ಮರಾದ ಏಸು ತನ್ನ ಧರ್ಮವನ್ನು ಸಾರುವಾಗ ಯಾರನ್ನು ಕೂಡಿಕೊಂಡರು? ಅಂದಿನ ಪುರೋಹಿತ ಶಾಹಿಯಲ್ಲಿ ದಮನಕ್ಕೊಳಗಾದ, ಶೋಷಣೆಗೊಳಗಾದ ದೀನ-ದಲಿತರನ್ನು. ಎಂತಲೇ ಅಂದಿನ ಪುರೋಹಿತ ವರ್ಗ ರಾಜಸತ್ತೆಯ ಹತ್ತಿರ ನಿಂತು ಏಸುವನ್ನು ಶಿಲುಬೆಗೇರಿಸಿದರು.

"ದೇವರೆ ನನಗೆ ನನ್ನ ನಿತ್ಯದ ಆಹಾರವನ್ನು ಕೊಡು" ಎಂದು ಹೇಳುವ ಬೈಬಲ್ಲಿನ ಪ್ರಾರ್ಥನೆ ಇದನ್ನೇ ಧ್ವನಿಸುತ್ತದಲ್ಲಾ? ಏಸು ಕೈಯಲ್ಲಿದ್ದ ಬ್ರೆಡ್ಡನ್ನು ಸುತ್ತಲಿನವರಿಗೆ ಹಂಚಿ ತಿಂದರು. ತನಗೆ ಮೊಳೆ ಹೊಡೆಯುತ್ತಿದ್ದವರನ್ನು 'ತಂದೆಯೇ ಇವರನ್ನು ಕ್ಷಮಿಸು' ಎಂದರು. ಆದರೆ ಇಂದು ಅಮೆರಿಕ, ಬ್ರಿಟನ್‌ನಂಥ ಕ್ರಿಸ್ತ ದೇಶಗಳು ಏನು ಮಾಡುತ್ತವೆ? ಜಗತ್ತಿನಲ್ಲಿ ಕಗ್ಗೊಲೆಗೆ ಯಜಮಾನವಾಗುತ್ತಿವೆ.

ಅಂತ್ಯಜರ ಮನೆಗೆ ಹೋಗಿ ಊಟ ಮಾಡಿ, ಅವರನ್ನು ತನ್ನ ತಾಯಿ ತಂದೆ ಎಂದು ಹೇಳಿಕೊಂಡ ಮಹಾತ್ಮಾ ಬಸವಣ್ಣನವರ ಧರ್ಮೀಯರು ಈಗ ಎಷ್ಟು ಕಟ್ಟಾ ಅಸ್ಪೃಶ್ಯತೆಯ ಆಚರಣೆ ಉಳ್ಳವರಾಗಿದ್ದಾರೆ! ಈ ಜಗದ್ಗುರುಗಳಿಗೆ ಜಗತ್ತು ಯಾವುದು?

ಮಹಾತ್ಮರಾದ ಮಹಮ್ಮದ್ ಪೈಗಂಬರರು ತಮ್ಮ ಧರ್ಮವನ್ನು ಹೇಗೆ ಪ್ರಚಾರ ಮಾಡಿದರು? ಅಜ್ಞಾನ, ಮೌಢ್ಯ, ಬಡತನಗಳಿಗೆ ಗುರಿಯಾದ ಜನರಿಗೆ ಒಂದು ಸುಸಂಸ್ಕೃತ, ಸಭ್ಯ ಜೀವನ ಮಾರ್ಗವನ್ನು ಕೊಡಲು ಅವರು ಮುಂದಾಗಲಿಲ್ಲವೆ? ಅದೂ ಸಹ ಒಂದು ಐತಿಹಾಸಿಕ ಪ್ರಕ್ರಿಯೆಯಾಗಿ ಮೂಡಿ ಬಂತೆಂಬುದನ್ನು ಯಾರೂ ಕಂಡುಕೊಳ್ಳಬಹುದು.

ನೂರಾರು ದೇವರು ಮೂರ್ತಿಗಳ ಮೇಲ್ಮೆಗಾಗಿ ಹೊಡೆದಾಡುತ್ತಿದ್ದ ಅರಬ ಜನರಲ್ಲಿ ಏಕತೆಯನ್ನು ತರಲೆಂದೇ ಅವರು ಏಕ-ದೇವಪೂಜೆಯನ್ನು ಸ್ವೀಕರಿಸಿದರು. ಏಕ-ದೇವ ಎಂದರೆ ಯಾರ ದೇವರನ್ನು ಪೂಜಿಸಬೇಕು? ಮುನ್ನೂರಕಿಂತ ಹೆಚ್ಚು ಮೂರ್ತಿಗಳು ಕಾಬಾದಲ್ಲಿ ಇದ್ದವಂತೆ. ಇದು ಜಟಿಲವಾದಾಗ ಮೂರ್ತಿಪೂಜೆಯೇ ಸಲ್ಲದೆಂದರು. ವಿಶಾಲವಾದ ಬೈಲಿನಲ್ಲಿ ಯಾವ ತರಮತೆ ಇಲ್ಲದೆ ಮಂಡಿಯೂರಿ ಒಂದೇ ದೇವರನ್ನು ಪ್ರಾರ್ಥಿಸುವ ಏಕತೆ ಎಷ್ಟು ಆದರಣೀಯವಲ್ಲವೆ? ಆದರೆ ಇಂದು ನಡೆಯುತ್ತಿರುವುದೇನು? ಅಲ್ಲಿಯ ಬಡವರನ್ನು ಅದೇ ಧರ್ಮದ ಶ್ರೀಮಂತರು ಹೇಗೆ ನೋಡಿ ಕೊಳ್ಳುತ್ತಾರೆ? ಸ್ತ್ರೀಯರನ್ನು ಎಷ್ಟು ಅತಂತ್ರ ಸ್ಥಿತಿಗೆ ತಂದಿದ್ದಾರೆ!

ಅಂದ ಮೇಲೆ ಈ ಧರ್ಮಗಳೆಲ್ಲ ಹುಟ್ಟುವಾಗಿನ ಕ್ರಾಂತಿಕಾರಕ ಗುಣಗಳನ್ನು ಕಳೆದುಕೊಂಡು ಉಳ್ಳವರ ಸೊತ್ತಾಗಿ, ಬಡವರ ಸುಲಿಗೆಗೆ ಕಾರಣವಾಗುತ್ತದೆಂದು ಬೇರೆ ಹೇಳಬೇಕಾಗಿಲ್ಲವಲ್ಲಾ?

ಈ ಧರ್ಮಕ್ಕೆ ದೇವರದೊಂದು ರಕ್ಷಣೆ. ಈ ದೇವರು ಧರ್ಮಕೊಡಿ ಶ್ರೀಮಂತರಿಗೂ, ರಾಜಕಾರಣಿಗಳಿಗೂ ರಕ್ಷಣೆ. ಹಿಂದೂ ಧರ್ಮದಲ್ಲಂತೂ ಧರ್ಮ ಬ್ರಾಹ್ಮಣರಿಗೂ ಅವರ ಹತ್ತಿರದ ಜಾತಿಯವರಿಗೂ ಗುತ್ತಿಗೆ.

ಈ ದೇವರ ಮೂಲವನ್ನು ಎಲ್ಲಿ ಹುಡುಕುವ? ನಿಸರ್ಗದ ಕೂಸಾಗಿದ್ದಾಗಿನ ಮುಗ್ಧ, ಭೀತ ಮನಸ್ಸಿನಲ್ಲಿಯೇ ಹುಡುಕ ಬೇಕಾಗುತ್ತದೆ. ಮನುಷ್ಯ ನಾಗರಿಕತೆ ಬೆಳೆದ ಹಾಗೆ ದೇವರ ಸ್ವರೂಪವೂ ಬದಲಾಗುತ್ತ ಬಂತು. ನಮ್ಮ ದೇವರಿಗೆ ನಮ್ಮದೇ ಸ್ವರೂಪ, ನಮ್ಮ ನಮ್ಮ ದೇವರಿಗೆ ನಮ್ಮದೇ ಸ್ವಭಾವ. ನಮ್ಮದೇ ರೊಚ್ಚು ಕೆಚ್ಚು. ಒಟ್ಟಾರೆಯಾಗಿ ಮನುಷ್ಯನ ಮನಸ್ಸಿನಲ್ಲೆ ದೇವರನ್ನು ಅರಸಬೇಕಾಗುತ್ತದೆ.

ನಮ್ಮ ವೇದಾಂತಿಗಳನ್ನು ಕೇಳಿದರೆ ದೇವರು ಇಂದ್ರಿಯಾತೀತ ಎಂದು ಬಿಡುತ್ತಾರೆ. ಕೊನೆಗೆ ಅದು ನಿಮ್ಮಂಥ ಪೋಕರಿಗಳಿಗೆ ಸಿಕ್ಕಲು ಸಾಧ್ಯವೇ ಎಂದು ಮೋಕಳಿಕ ಆಗುತ್ತಾರೆ.

ಈ ಎಲ್ಲಾ ಕಾರಣಗಳಿಂದ ಈ ಧರ್ಮ, ದೇವರು ಎಷ್ಟು ಬೇಗ ಇಲ್ಲಿಂದ ಜಾಗ ಖಾಲಿ ಮಾಡುತ್ತವೆಯೋ ಅಷ್ಟು ಮಾನವ ಕುಲಕ್ಕೆ ಒಳ್ಳೆಯದು. ಈ ಪಟ್ಟಭದ್ರರ ಕುತರ್ಕ, ಕುಯುಕ್ತಿಗೆ ಮರುಳಾಗದೆ ಜನಸಾಮಾನ್ಯರು ಸ್ವಂತ ವಿಚಾರ ಮಾಡುವಂತೆ, ತಮ್ಮ ಬದುಕಿಗೆ ತಾವೇ ಜವಾಬ್ದಾರರಾಗುವಂತೆ ಆಲೋಚನೆ ಮಾಡಿದರೆ ಆಗಲೇ ವಿಶ್ವ ಒಂದು ಕುಟುಂಬ ಆಗುವುದು, ಆಗಲೇ ಮಾನವೀಯತೆ ಮನುಷ್ಯರ ಮಧ್ಯೆ ನೆಲೆಸುವುದು.

*

ಸಂಘ ಪರಿವಾರ ಹಾಗೂ ಜಾತಿ ವ್ಯವಸ್ಥೆ

ರಾಷ್ಟ್ರಭಾಷೆ ಸಂಸ್ಕೃತ ಆಗಬೇಕೆಂಬುದೇ ಸಂಘ ಪರಿವಾರದ ನಿರ್ದಿಷ್ಟ ನಿಲುವು. ಇದಕ್ಕೂ ಅಪಾಯಕಾರಿಯಾದ ಸಂಗತಿಯೆಂದರೆ ಆರ್ಯ ಜನಾಂಗದ ಶ್ರೇಷ್ಠತೆಯ ಕುರಿತಾದದ್ದು. ಆರ್ಯ ಜನಾಂಗವು ಅನಾದಿಯೆಂದೂ ಬೇರೆ ಜನಾಂಗ ಎರಡು ಕಾಲಿನ ಪ್ರಾಣಿಗಳಾಗಿರುವಾಗ ತಾವು ಹಿರಿದೊಂದು ನಾಗರಿಕತೆಯನ್ನು, ಒಂದು ಹಿರಿಯ ಸಂಸ್ಕೃತಿಯನ್ನು ಅದ್ವಿತೀಯ ಸಾಮಾಜಿಕ ವ್ಯವಸ್ಥೆಯನ್ನು ಕಟ್ಟಿದ್ದೆವು" ಎನ್ನುತ್ತಾರೆ. ನಿಜ ಸಂಗತಿಯೇನೆಂದರೆ ಆರ್ಯರು ಭಾರತಕ್ಕೆ ಬರುವ ಮೊದಲೇ ಸಿಂಧೂ ನದಿಯ ದಡದಲ್ಲಿ ಅತ್ಯುಚ್ಚ ಸಂಸ್ಕೃತಿಯೊಂದು ಇತ್ತು. ಆಗಿನ್ನೂ ಕಾಡು ಜನಾಂಗವಾಗಿದ್ದ ಆರ್ಯರು ಅದನ್ನು ಧ್ವಂಸ ಮಾಡಿದರು ಎನ್ನುವುದಕ್ಕೆ ಋಗ್ವೇದದಲ್ಲಿ ಸಾಕಷ್ಟು ಪುರಾವೆ ದೊರಕುತ್ತದೆಂದು ಪ್ರಾಜ್ಞರು ಸಿದ್ಧಪಡಿಸಿದ್ದಲ್ಲದೆ ಹರಪ್ಪಾ ಮಹಂಜೊದಾರೊ ಉತ್ಖನನದಿಂದ ಪ್ರತ್ಯಕ್ಷ ತೋರಿದ್ದಾರೆ. ಅದನ್ನು ಸಂಘ ಪರಿವಾರ ಗ್ರಹಿಸುವುದಿಲ್ಲ. ಆ ಮೊದಲ ನಾಗರಿಕತೆ ದ್ರಾವಿಡವಾಗಿತ್ತು. ಅದೇನೇ ಇದ್ದರು ಆರ್ಯರು ಭಾರತಕ್ಕೆ ಬರುವ ಮೊದಲೇ ಇಲ್ಲೊಂದು ಜನಾಂಗ (ದ್ರಾವಿಡ ಮತ್ತಿತರ) ಇತ್ತು. ಅವರನ್ನು 'ದಸ್ಯುಗಳು' ಎಂದು ಕರೆದರು. 'ರಾಕ್ಷಸರು' ಎಂದು ಚಿತ್ರಿಸಿದರು. ಇಲ್ಲಿಯ ಶೂದ್ರರಲ್ಲಿ ಸೇರಿದ ಶೇಕಡ ತೊಂಬತ್ತು ಜನ ದ್ರಾವಿಡರೇ ಆಗಿದ್ದಾರೆ. ಬ್ರಾಹ್ಮಣರಲ್ಲೂ ಶುದ್ಧ ಆರ್ಯ ಎಂಬುದು ಇಲ್ಲ. ಈ ಜನಾಂಗೀಯ ಶ್ರೇಷ್ಠತೆಯ ಪ್ರತಿಪಾದನೆ ಎಷ್ಟು ಭಯಂಕರವಾಗುತ್ತದೆಂದರೆ ಅವರು ಹಿಟ್ಲರನ ಜನಾಂಗ ಶ್ರೇಷ್ಠತೆಯ ಕೃತಿಗಳನ್ನು ಮಾದರಿಯಾಗಿ ಪ್ರತಿಪಾದಿಸುತ್ತಾರೆ. ಹಿಟ್ಲರ ಆರ್ಯ ಜನಾಂಗದ ಶ್ರೇಷ್ಠತೆಯನ್ನು ಪ್ರತಿಪಾದಿಸುತ್ತ ಲಕ್ಷಾಂತರ ಯಹೂದಿಗಳನ್ನು ಕೂಡುದಟ್ಟಿಗೆ ದಬ್ಬಿ, ಅನ್ನಾಹಾರ-ವಸತಿ ಕೊಡದೆ ಕೊಲ್ಲಿಸಿದ. ಅಂಥ ಕೃತಿ ನಮಗೆ ಹಿಂದೂಸ್ತಾನದಲ್ಲಿ ಮಾದರಿ ಪಾಠ (ಗುಡ್‌ಲೆಸನ್ ಅಸ್) ಎಂದು ಹೇಳಿರುವುದನ್ನು ಸೀತಾರಾಮ ಯಚೊರಿ ಉದ್ಧರಿಸುತ್ತಾರೆ" ಇದೆಂಥ ವಿಕೃತ ತತ್ವಜ್ಞಾನ ಎಂದು ಬೇರೆ ಹೇಳಬೇಕಾದುದಿಲ್ಲ. ಇದನ್ನು ಯಾವ ಶೂದ್ರನೂ, ಮಹಿಳೆಯೂ, ಬ್ರಾಹ್ಮಣನೂ ಒಪ್ಪಲಾರರು.

ಇಷ್ಟಾಗಿಯೂ ಅದ್ವಾನಿಯವರ ಪಾಲಕಿ ಹೊರಲು ಬಹು ಸಂಖ್ಯೆಯಲ್ಲಿ ಶೂದ್ರರೇ ಹೋಗುತ್ತಾರೆ. ಇದು ಆಶ್ಚರ್ಯವಲ್ಲವೇ? ಇದಕ್ಕೆ ಕಾರಣವೇನು? ಇದಕ್ಕೆ ಕಾರಣ ಸಂಘ ಪರಿವಾರದವರ ಮತ್ತು ಬಿ.ಜೆ.ಪಿ ಯವರ ಪ್ರಚಾರ ತಂತ್ರ ಮತ್ತು ವೈಖರಿ. ಈ ಪ್ರಚಾರದಲ್ಲಿ

'ಜನವಾಹಿನಿ' ಮತ್ತು 'ವಿಚಾರ ಸಾಹಿತ್ಯ ೧೯೯೬' ಕರ್ನಾಟಕ ಸಾಹಿತ್ಯ ಆಕಾಡೆಮಿಯಲ್ಲಿ ಪ್ರಕಟಿತ

ಮುಖ್ಯವಾಗಿ ಎರಡು ಸಂಗತಿಗಳಿವೆ. ಮುಸಲ್ಮಾನ ದ್ವೇಷ. ಮುಸಲ್ಮಾನರು ಹೊರಗಿನಿಂದ ಬಂದವರು. ಈ ದೇಶದ ವೈಭವಯುತ ಸಂಸ್ಕೃತಿಯನ್ನು ಹಾಳುಗೆಡಹಿದರು. ಇಲ್ಲಿ ದೇವಸ್ಥಾನಗಳನ್ನು ನಾಶಮಾಡಿದರು. ಅವರು ಹಿಂದುಗಳನ್ನು ಮತಾಂತರಿಸಿದರು. ಹಿಂದುಗಳನ್ನು ಕೊಂದರು. ನಮ್ಮದು ಅತಿ ಶ್ರೇಷ್ಠ ಸಂಸ್ಕೃತಿಯಾಗಿತ್ತು. ಈಗ ಇವರನ್ನು ನಮ್ಮ ಆಳನ್ನಾಗಿ ಮಾಡಿಕೊಳ್ಳಬೇಕು. ಅಥವಾ ಕೊಂದು ಮುಗಿಸಬೇಕು. ಪಾಕಿಸ್ತಾನ ಆದ ಮೇಲೆ ಇಲ್ಲಿ ಅವರಿಗೆ ಹಕ್ಕಿಲ್ಲ. ಅವರು ದೇಶ ದ್ರೋಹಿಗಳು, ಅವರು ಮತಾಂಧರು, ಹಿಂದೂ ವಿರೋಧಿಗಳು ಎಂದು ಗೂಬೆಕೂಡಿಸಿ ಯುವಕರನ್ನು ಕೆಳಜಾತಿಗಳನ್ನು ಉದ್ರೇಕಿಸಿ ಹಿಂದೂ ಧರ್ಮ ಮುಸ್ಲಿಮರಿಂದಾಗಿ ಗಂಡಾಂತರದಲ್ಲಿದೆ, ನಮ್ಮ ಸಂಸ್ಕೃತಿಗೆ ಅವರ ಕೊಡುಗೆ ಇಲ್ಲ ಎಂದು ಹುಯಿಲೆಬ್ಬಿಸುವುದು.

ಇದರಲ್ಲಿ ಎಷ್ಟು ನಿಜ?

ಇತಿಹಾಸದಲ್ಲಿ ನಡೆದದ್ದು ಕರಾರುವಕ್ಕಾಗಿ ಎಲ್ಲ ಸರಿಯಾಗಿತ್ತು ಎಂದು ಹೇಳುವುದು ಸರಿಯಲ್ಲ. ದಾಳಿಕೋರರಾಗಿ ಬಂದಾಗ ತಮ್ಮ ನೆಲೆ ಸ್ಥಾಪಿಸುವುದಕ್ಕೆ ಬಂದ ಸ್ಥಳದಲ್ಲಿ ತಮ್ಮ ಬಲತೋರುವುದು ನಡೆಯುವ ಸಂಗತಿಯೇ. ಆರ್ಯರು ಭಾರತಕ್ಕೆ ಬಂದಾಗ ಸಂಪದ್ಭರಿತವಾದ ಮತ್ತು ಮುಂದುವರಿದ ಸಿಂಧೂ ಸಂಸ್ಕೃತಿಯನ್ನು ಬರ್ಬರವಾಗಿ ನಾಶ ಮಾಡಿದರು. ಅದಕ್ಕೆಂತಲೇ ಇಂದ್ರನಿಗೆ ಪುರಂದರ (ಪುರ ನಾಶಮಾಡುವವನು) ಎಂಬ ಹೆಸರು ಬಂತು. ಹಾಗೆಯೇ ಬೌದ್ಧ ವಿಹಾರಗಳನ್ನು ಹಿಂದೂ ರಾಜರು ನಿರ್ದಯವಾಗಿ ನಾಶ ಮಾಡಿದರು. ಶ್ರವಣರನ್ನು ಹಿಡಿಹಿಡಿದು ಕೊಂದರು. ಬಂಗಾಳದ ರಾಜ ಶಶಾಂಕ ಬೌದ್ಧರಿಗೆ ಪವಿತ್ರವಾದ ಬೋಧಿವೃಕ್ಷ ಕಡಿಸಿದ. ಹಾಗಂತ ಈಗ ಬೌದ್ಧರು ಹಿಂದುಗಳ ತಲೆ ಕಡಿಯುತ್ತೇವೆಂದರೆ ಎಷ್ಟು ಸರಿ? ಅಷ್ಟಲ್ಲದೆ ಅದು ರಾಜರಾಜರ ಮಧ್ಯೆ ನಡೆದ ಯುದ್ಧ. ಲೋಹಿಯಾ ಹೇಳುತ್ತಾರೆ ತೈಮೂರಲಿಂಗನು ನಾಲ್ಕೈದು ಲಕ್ಷ ಸೈನಿಕರ ಕೊಲೆ ಮಾಡಿಸಿದ. ಅದರಲ್ಲಿ ಮೂರು ಲಕ್ಷ ಜನ ಸೈನಿಕರು ಮುಸ್ಲಿಮರೇ ಆಗಿದ್ದರು.[೬] ಶಿವಾಜಿಯ ಪರ ಮುಸ್ಲಿಮರೂ ಯುದ್ಧ ಮಾಡಿದ್ದಾರೆ. ಔರಂಗಜೇಬನ ಪರ ಹಿಂದೂ ಸೈನಿಕರು ಯುದ್ಧ ಮಾಡಿದ್ದಾರೆ. ಇದು ರಾಜಕೀಯದ ಸಂದರ್ಭವೇ ಹೊರತೂ ಧಾರ್ಮಿಕ ಅಲ್ಲ. ಔರಂಗಜೇಬ ಪಟ್ಟಕ್ಕೆ ಬರುವಾಗ ತನ್ನ ಅಣ್ಣ ತಮ್ಮಂದಿರನ್ನು ನಿರ್ದಯವಾಗಿ ಕೊಲೆ ಮಾಡಿಸಿದ. ತಂದೆಯನ್ನೇ ಸೆರೆಯಲ್ಲಿಟ್ಟ. ಇದೆಲ್ಲ ಅಧಿಕಾರಗ್ರಹಣದ ವ್ಯವಹಾರವೇ ಹೊರತೂ ಧರ್ಮೀಯವಾದುದಲ್ಲ. ೧೯೬೬ ರಿಂದ ೭೬ ರವರೆಗೆ ೪೦,೦೦೦ ದಲಿತರ ಮೇಲಿನ ಅತ್ಯಾಚಾರ ಕೇಸು ದಾಖಲಾಗಿದೆ. ೧೯೭೭-೭೮ರಲ್ಲಿ ೧೦೦ಕ್ಕೂ ಹೆಚ್ಚು ದಲಿತರು ಕೊಲ್ಲಲ್ಪಟ್ಟರು ಇದನ್ನು ಯಾವ ಮುಸ್ಲಿಮನೂ ಮಾಡಿದ್ದಲ್ಲ. ಸವರ್ಣ ಹಿಂದೂಗಳೇ ಮಾಡಿದ್ದು ಎಂದು ಡಾ. ರಾಜಾರಾಮ ಹೆಗಡೆ ಹೇಳುತ್ತಾರೆ.[೭]

ಕುರಾನು ಅಮಾನವೀಯತೆಯನ್ನು ಬೋಧಿಸುವುದಿಲ್ಲ. ದೇವರಿಗೆ ಅತ್ಯಂತ ಪ್ರಿಯನಾದವನು ಯಾರು? ಆತ (ದೇವರು) ಸೃಜಿಸಿದ ಜೀವಿಗಳಿಗೆ ಯಾರಿಂದ ಅತ್ಯಧಿಕ

ಹಿತವಾಗುತ್ತದೊ ಅವನು. ಹಸಿದವರಿಗೆ ಉಣಬಡಿಸು, ಅಸ್ವಸ್ಥನಾಗಿರುವವನನ್ನು ಸಂತಯಿಸು, ಬಂಧಿಯನ್ನು ಅವನು ಅನ್ಯಾಯಕೊಳ್ಳಗಾಗಿದ್ದರೆ ಬಿಡುಗಡೆ ಮಾಡು, ಪೀಡಿತನಾದವ ಯಾರೇ ಆಗಿರಲಿ ಅವನು ಮುಸ್ಲಿಮನಾದರೂ ಮುಸ್ಲೀಮನಲ್ಲವಾದರೂ ಸಹಾಯ ಮಾಡು, ಸ್ತ್ರೀಯರ ವಿಷಯದಲ್ಲಿ ಚೆನ್ನಾಗಿ ನಡೆದುಕೋ, ಏಕೆಂದರೆ ಅವರು ನಿನ್ನ ತಾಯಂದಿರು, ಪತ್ನಿಯರು, ಸೋದರಿಯರು ಎಂದು ಹೇಳಿದೆ."

ಸಂಸ್ಕೃತಿಯ ವಿಷಯದಲ್ಲಿಯೂ ಮುಸ್ಲಿಂ ಸೌಹಾರ್ದತೆ ಮತ್ತು ಕೊಡುಕೊಳ್ಳುವಿಕೆಯ ಬಗ್ಗೆ ಅನೇಕ ಉದಾಹರಣೆಗಳನ್ನು ವಿದ್ವಾಂಸರು ಎತ್ತಿ ತೋರಿದ್ದಾರೆ. ಸಂಸ್ಕೃತಿಯ ವಿಷಯದಲ್ಲಿ ಮಹಾಕವಿ ಕುವೆಂಪು ಅವರ ಒಂದು ಮಾತನ್ನು ಇಲ್ಲಿ ಹೇಳುವುದು ಸೂಕ್ತವಾಗಿದೆ. "...ಸಮನ್ವಯ ಸೌಹಾರ್ದಗೀತವನ್ನು ಅಮಿರಖುಸ್ರು, ರಮಾನಂದ, ಕಬೀರ, ನಾನಕ, ಚೈತನ್ಯರ ಜೀವನಗಳು ಹಾಡಿವೆ. ಸೂಫಿ ಪಂಥದಲ್ಲಿಯೂ ಬಂಗಾಳ ಮಹಾರಾಷ್ಟ್ರಗಳಲ್ಲಿ ಮೈದೋರಿದ ಭಕ್ತಿಪಂಥಗಳಲ್ಲಿಯೂ ಪ್ರಕಟವಾದ ಸಮಾನತಾಭಾವಗಳು ಪೂರ್ವೋಕ್ತ ಸಮನ್ವಯ ದೃಷ್ಟಿಯ ಪ್ರತಿಬಿಂಬಗಳಾಗಿವೆ. ಅಕ್ಬರನ ಫತೇಪೂರ್ ಸಿಕ್ರಿಯಲ್ಲಿ ಕಾಣುವ ರಾಜಪೂತರೀತಿ, ಲೋಕವನ್ನೇ ಸೂರೆಗೊಂಡಿರುವ ಅದ್ಭುತ ಕಲಾಕೃತಿ ತಾಜಮಹಲ್‌ನಲ್ಲಿ ಮೈತಳೆದ ಹಿಂದೂ ಪಂಚರತ್ನ ರೀತಿಯ ವಿನ್ಯಾಸ ಇವು ಮುಸ್ಲಿಮರ ಇರಾನಿ ಶಿಲ್ಪರೀತಿಗೆ ತೊಡಿಸಿದ ಭಾರತೀಯ ಶಿಲ್ಪಕಲೆಯ ಮುಕುಟಗಳು, ಈ ಭಾರತೀಕರಣದ ಮತ್ತೊಂದು ಕಾಣಿಕೆಯೆಂದರೆ, ಅಖಂಡ ಭಾರತಕ್ಕೆ ಸಂಯುಕ್ತ ಭಾಷೆಯಾಗಬಹುದಾದ ಹಿಂದೂಸ್ಥಾನಿ."[೩]

ಇಸ್ಲಾಂ ಧರ್ಮದೊಳಗಿನ ಬಹಳ ಮುಖ್ಯವಾದ ಶಕ್ತಿಯೆಂದರೆ ಭ್ರಾತೃತ್ವದ ಸಮಭಾವ. ಭಾರತ ಸಂಸ್ಕೃತಿಯ ನವೋದಯದ ಹರಿಕಾರರಾದ ರಾಜಾರಾಮ ಮೋಹನರಾಯರು ಸಂಸ್ಕೃತದಲ್ಲಿ ಪಂಡಿತರಾದಂತೆ ಫಾರಸಿಯಲ್ಲಿಯೂ ಪಂಡಿತರಾಗಿದ್ದಾರೆ. ಅವರ ಏಕೇಶ್ವರವಾದ ಮತ್ತು ಜಾತಿ ಸಮಾನತೆ ಇವೆಲ್ಲ ರಾಜಾರಾಮ ಮೋಹನರಾಯರ ಬ್ರಹ್ಮ ಸಮಾಜಕ್ಕೆ ಪ್ರೇರಣೆಯನ್ನೊದಗಿಸಿದೆ.

ಹಿಂದೂ ಧರ್ಮದಲ್ಲಿ ಅತ್ಯಂತ ದೈನ್ಯಕ್ಕೆ ಒಳಗಾದ, ಅತ್ಯಂತ ಅಪಮಾನಿತರಾದ, ಅತ್ಯಂತ ಕೀಳು ಎಂದು ಹೀಗಳೆಯಲ್ಪಟ್ಟ ಜನ ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಮರಾದರು. ಈ ಶೂದ್ರರು ಮುಸ್ಲಿಮರಾಗಿ ಒಂದು ವೇಳೆ ಅವರು ಹಿಂದುರುಗಿ ಬರುವುದಾದರೂ ಹಿಂದೂ ಧರ್ಮದಲ್ಲಿ ಅವರ ಪೂರ್ವಜರು ಯಾವ ಜಾತಿಯಲ್ಲಿದ್ದರೋ ಅದೇ ಜಾತಿಗೆ ಮರಳಬೇಕಾಗುತ್ತದೆ. ಯಾಕೆಂದರೆ ಸಂಘ ಪರಿವಾರದವರು ಜಾತಿ ಪದ್ಧತಿ ಶಾಶ್ವತ ಮತ್ತು ಸಮಾಜದ ಉತ್ತಮ ಲಕ್ಷಣ ಎಂದು ಪ್ರತಿಪಾದಿಸುತ್ತಾರೆ.

ಇದನ್ನಲ್ಲ ಅರಿಯದವರೆದುರು ಇವರು ನಿಲ್ಲಿಸುವ ಅವರ ಇನ್ನೊಂದು ಭೂತವೆಂದರೆ ಸರಕಾರ ಅವರಿಗೆ (ಮುಸಲ್ಮಾನರಿಗೆ) ಹೆಚ್ಚಿನ ಸೌಲತ್ತು ಕೊಡುತ್ತದೆ ಎಂಬುದು. ಇದರ ಸತ್ಯಾಸತ್ಯತೆಯನ್ನು ಪರಿಶೀಲಿಸಬಹುದು. ಮುಸ್ಲಿಮರಲ್ಲೂ ಬಡವರು, ಅನಕ್ಷರಸ್ಥರು ಜಾಸ್ತಿ.

ಹೀಗಾಗಿ ಮುಸ್ಲಿಮ ಪುರೋಹಿತರ ಹಿಡಿತ ಅವರ ಮೇಲೆ ಹೆಚ್ಚು, ಹಿಂದುಗಳಿಗೆ ರಾಜಾರಾಮ ಮೋಹನರಾಯರಂಥ ಸುಧಾರಣಾವಾದಿಗಳು ಸಿಕ್ಕ ಐವತ್ತು ವರ್ಷಗಳ ನಂತರ ಮುಸ್ಲಿಮರಿಗೆ ಮಹ್ಮದಖಾನರಂಥ ಸುಧಾರಣಾವಾದಿಗಳು ಸಿಕ್ಕಿದರು. ಅಂದರೆ ಸಹಜವಾಗೇ ಅವರ ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ವೈಜ್ಞಾನಿಕ ಪ್ರಗತಿ ಹಿಂದುಳಿದಿದೆ. ಅಂಥವರಿಗೆ ವೋಟ್‌ಬ್ಯಾಂಕ್ ಮಾಡಿಕೊಳ್ಳಲು ಕೆಲವು ತೋರಿಕೆಯ ಆದರೆ ನಿಜವಾಗಲೂ ಪ್ರಗತಿಪರವಲ್ಲದ ಸೌಲತ್ತನ್ನು ಸರಕಾರ ತೋರಿದೆ. ಉದಾಹರಣೆಗಾಗಿ ಶಾಬಾನು ಪ್ರಕರಣದಲ್ಲಿ ದಿ. ರಾಜೀವಗಾಂಧಿಯವರು ಸರ್ವೋಚ್ಚನ್ಯಾಯಾಲಯದ ತೀರ್ಪನ್ನು ತಿದ್ದಿದ್ದು. ಸರ್ವೋಚ್ಚನ್ಯಾಯಾಲಯ ಕೊಟ್ಟತೀರ್ಪು, ವಿಚ್ಛೇದಿತ ಮಹಿಳೆಗೆ ಪರಿಹಾರಧನ ಕೊಡಿಸುವುದನ್ನು ಮುಸ್ಲಿಂ ಮಹಿಳೆಯರು ಮತ್ತು ಪ್ರಗತಿಪರ ಮುಸ್ಲಿಮರು ಸ್ವಾಗತಿಸಿದ್ದರು. ಆದರೆ ಅಲ್ಲಿಯ ಮೂಲಭೂತವಾದಿಗಳ ಹಿಡಿತಕ್ಕೆ ಮಣಿದು ಆ ಉತ್ತಮ ತೀರ್ಪನ್ನು ತಿದ್ದಲಾಯಿತು. ಇದರಿಂದ ಇಡೀ ಮುಸ್ಲಿಮ ಮಹಿಳೆಯರಿಗೆ ಅನ್ಯಾಯವಾಯಿತು. ಆ ಮುಖಾಂತರ ಇಡೀ ಮುಸ್ಲಿಂ ಸಮಾಜಕ್ಕೇ ಹಾನಿಯಾಯಿತು. ಆದರೆ ಮುಸ್ಲಿಮರ ಬಡತನ ನಿವಾರಣೆ, ಶಿಕ್ಷಣ ಸೌಲಭ್ಯ ವಿಸ್ತಾರ, ಸರಕಾರಿ ನೌಕರಿಯಲ್ಲಿ ಹೆಚ್ಚಿನ ಸೌಲಭ್ಯ ಯಾವುದೂ ಪ್ರತ್ಯೇಕ ದೊರಕಲಿಲ್ಲ. ಶಿಕ್ಷಣ ಸಂಸ್ಥೆಯಲ್ಲಿ ಕೊಡುವ ಸೌಲತ್ತಿಗಾಗಿ ಮುಸ್ಲಿಮರನ್ನು ಕೈ ಮಾಡಿ ತೋರಿಸುವ ಜನ ಭಾಷೆ ಅಲ್ಪಸಂಖ್ಯಾತರೆಂದು ಕರ್ನಾಟಕದಲ್ಲೇ ಕೊಂಕಣಿ ಭಾಷಿಕರು ಪಡೆಯುವ ವಿಶೇಷ ಸೌಲತ್ತನ್ನು ಯಾಕೆ ಬೊಟ್ಟು ಮಾಡಿ ತೋರುವುದಿಲ್ಲ? ಯಾಕೆ ಖಂಡಿಸುವುದಿಲ್ಲ?

ಇದರ ಅರ್ಥ ಮುಸ್ಲಿಮರಲ್ಲಿ ಮತಾಂಧರು ಇಲ್ಲವೆಂದಾಗಲಿ, ಅವರಿಂದ ಆಗುವುದೆಲ್ಲವೂ ಸರಿ ಎಂದಾಗಲಿ ಮಾಡುವ ವಕೀಲಿಯಲ್ಲ. ಇದು ಸಂವಿಧಾನದಲ್ಲಿ ಅಲ್ಪಸಂಖ್ಯಾತರಿಗೆ ಕೊಡಮಾಡಿದ ಸೌಲಭ್ಯ. ಅವರಿಗೆ ದೊರಕಲೇಬೇಕು. ಮತ್ತು ಅದನ್ನಷ್ಟೇ ಅವರು ಪಡೆದುಕೊಳ್ಳುತ್ತಿದ್ದಾರೆ. ಆದರೆ ಅವರೂ ತಮ್ಮನ್ನು ಹೆಚ್ಚಿನ ಸುಧಾರಣೆಗೆ ತೆರೆದುಕೊಳ್ಳಬೇಕಾಗಿದೆ. ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಬೇಕಾಗಿದೆ ಧಾರ್ಮಿಕ ಸಂಕುಚಿತೆಯಿಂದ ಹೊರಬಂದು ಹೊಸಕಾಲದ ಸೌಲಭ್ಯವನ್ನು ಸರ್ವರಿಗೂ ದೊರಕಿಸಿಕೊಡಬೇಕಾಗಿದೆ. ಯಾವುದೇ ಪಕ್ಷ ಶಾಶ್ವತವಾಗಿ ರಕ್ಷಣೆ ಕೊಡಲಾರದು. ಅವರಿಗೂ ಇರುವುದು ಸೌಹಾರ್ದತೆಯೇ ನಿಜವಾದ ಹಾದಿ. ಆದರೆ ಅದಕ್ಕೆ ಬೇರೆ ದಾರಿಯಿದೆ. ಅದು ಸಂಘ ಪರಿಹಾರ ಹೇಳುವ ಮುಸ್ಲಿಂ ದ್ವೇಷ ಪರಿಹಾರ ಮಾರ್ಗವಲ್ಲ.

ಜನತೆಯಲ್ಲಿ ಹರಡಿರುವ ನಿರುದ್ಯೋಗ ಇನ್ನೊಂದು ಸಮಸ್ಯೆ, ಇದಕ್ಕೆ ಮುಸ್ಲಿಮರು ಕಾರಣವಲ್ಲ. ಮುಸ್ಲಿಮರನ್ನೂ ಈ ಸಮಸ್ಯೆ ಕಾಡುತ್ತಿದೆ. ಇದಕ್ಕೆ ಸರಕಾರದ ತಪ್ಪು ನೀತಿಗಳು ಕಾರಣ. ದೇಶದಲ್ಲಿ ಹಬ್ಬಿದ ಭ್ರಷ್ಟತೆಗೆ ರೊಚ್ಚಿಗೆದ್ದ ಯುವಜನಾಂಗವನ್ನು ಮುಸ್ಲಿಂ ದ್ವೇಷಿಗಳನ್ನಾಗಿ ಪರಿವರ್ತಿಸಿ ನಮ್ಮ ಎಲ್ಲ ಅಪಾಯಕ್ಕೂ ಮುಸ್ಲಿಮ ಕಾರಣ ಎಂದು, ಹಿಂದೂ ಧರ್ಮ ಅಪಾಯದಲ್ಲಿದೆ, ಅದು ಮುಸ್ಲಿಮರಿಂದ ಎಂದು, ಮತ್ತೆ ಮತ್ತೆ ಸಾರುತ್ತ, (ಯಾಕೆಂದರೆ ಒಂದು ಸುಳ್ಳನ್ನು ನೂರು ಸಲ ಹೇಳಿದರೆ ಅದೆ ಖರೆಯಾಗುತ್ತದೆ) ಯುವ ಜನತೆಯನ್ನು ತಪ್ಪು

ದಾರಿಗೆಳೆಯುವ ಕೆಲಸವನ್ನು ಸಂಘ ಪರಿವಾರ ಮಾಡುತ್ತಿದೆ. ಧರ್ಮ ದೇವರ ಕುರಿತು ಶ್ರೀಮಂತರಿಗಿಂತ ಮೇಲುವರ್ಗ-ಜಾತಿಯವರಿಗಿಂತ ಕೆಳಜಾತಿಯವರು ಮತ್ತು ಕೆಳವರ್ಗದವರು ಹೆಚ್ಚು ನಂಬಿಗೆಯನ್ನೂ ಭಾವುಕ ಭಕ್ತಿಯನ್ನು ಹೊಂದಿರುವುದರಿಂದ ಇಟ್ಟಂಗಿ ಪೂಜೆ, ರಾಮ ರಥ ಯಾತ್ರೆ, ತೀರ್ಥಸ್ನಾನ ಇತ್ಯಾದಿ ಆಚರಣೆಯಿಂದ ಅಂಥವರನ್ನು ಪ್ರಚೋದಿಸಿ ಸುಳ್ಳು ಧರ್ಮ ಪ್ರಜ್ಞೆಯನ್ನು ಮೂಡಿಸಿ ಅವರಿಗೆ ತಮ್ಮ ಆರ್ಥಿಕ ಉನ್ನತಿಯ ಮತ್ತು ಸಾಮಾಜಿಕ ಸ್ಥಾನಮಾನಗಳ ಉನ್ನತಿ ಸಾಧಿಸುವಿಕೆಯ ಬಗ್ಗೆ ಇರಬೇಕಾದ ಶ್ರಮವನ್ನು ತಪ್ಪಿಸಿ, ಜನಾಂಗೀಯ ದ್ವೇಷ ಸಾಧಿಸಲು ಮತ್ತು ಅವರಿಗೆ ಗೊತ್ತಾಗದೆ ಇರುವಂತೆ, ಪ್ರತಿಗಾಮಿ ವಿಚಾರವನ್ನು ಬಿತ್ತಿ ಬೆಳೆಯುವಂತೆ ಮಾಡುತ್ತಾರೆ. ಅಂಥ ಸಾಧನೆಗೆ (ನಿರುದ್ಯೋಗ ನಿವಾರಣೆಗೆ) ಮುಸ್ಲಿಮ ದ್ವೇಷವಾಗಲಿ, ಮಸೀದಿ ಒಡೆಯುವುದರಿಂದಾಗಲಿ ಸಾಧ್ಯವಲ್ಲ. ಬದಲಾಗಿ ಸೌಹಾರ್ದತೆಯನ್ನು, ಸಮಾನತೆಯನ್ನು, ಸ್ವಾತಂತ್ರ್ಯವನ್ನು, ಪ್ರಜಾಪ್ರಭುತ್ವವನ್ನು, ಮತ್ತು ಧಾರ್ಮಿಕ ಸುರಕ್ಷತೆಯನ್ನು ಒದಗಿಸುವ ಸರಕಾರವನ್ನು ಆಡಳಿತಕ್ಕೆ ತರಬೇಕಾಗುತ್ತದೆ. ಆದಕ್ಕೆ ಸಮಾಜವಾದ, ಸಮಾನತೆಯನ್ನೇ ಸಂಪೂರ್ಣವಾಗಿ ವಿರೋಧಿಸುವ, ಜಾತಿವ್ಯವಸ್ಥೆ ಮತ್ತು ಅಸಮಾನತೆ, ಲಿಂಗ ಅಸಮಾನತೆ ನೈಸರ್ಗಿಕವಾದುದು, ಶಾಶ್ವತವಾದುದು ಎಂದು ಪ್ರತಿಪಾದಿಸುವ ಸಂಘ ಪರಿವಾರದವರ ಪಲ್ಲಕ್ಕಿಯನ್ನು ಹೊರುವುದರಿಂದಲ್ಲ. ಅವರ ಗುರಿ ಶಾಶ್ವತವಾಗಿ ಜನಾಂಗೀಯ ದ್ವೇಷವನ್ನು ಜ್ವಲಂತವಾಗಿಟ್ಟು ಯುವಕರನ್ನು ಸೆಳೆಯುವುದು. ನಂತರ ಅದು ಮುಸ್ಲಿಮರಿಂದ ದಲಿತರ ಕಡೆಗೆ ತಿರುಗುತ್ತದೆ. ಹಾಗೆಯೇ ಯಾರು ಯಾರು ಸಮಾನತೆಯನ್ನು, ಮತೀಯ ಸಹಬಾಳುವೆಯನ್ನು ಎತ್ತಿ ಹಿಡಿಯುತ್ತಾರೊ ಅವರ ನಾಶದ ಕಡೆ ತಿರುಗುತ್ತದೆ. ಒಟ್ಟಾರೆಯಾಗಿ ಅತ್ಯಂತ ಪ್ರತಿಗಾಮಿಯಾದ, ಅಮಾನವೀಯವಾದ ಚಾತುರ್ವರ್ಣ, ಮನುಸ್ಮೃತಿ ಬೆಂಬಲಿತ ಸಮಾಜ ವ್ಯವಸ್ಥೆಯನ್ನು ತರುವ ಕಡೆ ನಡೆಯುತ್ತದೆ. ಆಗ ಈ ದುಷ್ಟಹೇತುವಿಗೆ ತಿಳಿಯದೆ ಸಹಾಯ ಮಾಡಿದ ಜನಸಾಮಾನ್ಯ ಬೇರೆಯವರು ಓದಿ ಹೇಳಿದ ಹಾಳೆಯ ಮೇಲೆ ಹೆಬ್ಬೊಟ್ಟು ಒತ್ತಿದ ಹೆಡ್ಡರಂತೆ ಬಾಯಿ ಬಾಯಿ ಬಿಡಬೇಕಾಗುತ್ತದೆ.

ನಮಗೆ ಪಾಕಿಸ್ತಾನವೊ ಇನ್ಯಾವುದೊ ಮಾದರಿಯಾಗಬೇಕಾಗಿಲ್ಲ. ವೈದಿಕ ಧರ್ಮ ಅಥವಾ ಹಿಂದು ಧರ್ಮ ಪ್ರಾಚೀನದಿಂದಲೂ ಪ್ರತಿಪಾದಿಸುತ್ತ ಬಂದ ಅಸಮಾನತೆಯ ವಿರುದ್ಧ ಪ್ರತಿಭಟಿಸಿದ ಸುದೀರ್ಘವಾದ ಚರಿತ್ರೆಭಾರತಕ್ಕೆ ಇದೆ. ಬುದ್ಧ, ಮಹಾವೀರರಿಂದ ಹಿಡಿದು ಆಧುನಿಕ ಕಾಲದ ಮಹಾತ್ಮ ಫುಲೆ, ಡಾ. ಬಿ.ಆರ್. ಅಂಬೇಡ್ಕರ್ ತನಕವೂ ನಡೆದದ್ದು ಇದೇ. ಬ್ರಿಟಿಷ್ ಬಂಡವಾಳಶಾಹಿಯ ಹೊಡೆತದಿಂದ ಏಳಲಾರದ ಹೊಡೆತ ತಿಂದ ಹಳೆಯ ಜಾತಿ ಮತ್ತು ಅಸಮಾನತೆಯ, ಅಸ್ಪೃಶ್ಯತೆ ಇತ್ಯಾದಿಯನ್ನೊಳಗೊಂಡ ಹಿಂದೂ ವ್ಯವಸ್ಥೆ ಅಂತಿಮವಾಗಿ ಬೊಬ್ಬೆ ಹಾಕುತ್ತಿದೆ. ಅದರ ಮರ್ಮವನ್ನು ತಿಳಿದು ಸರಿಯಾಗಿ ಎದಿರೇಟು ಹಾಕಿದರೆ ಕೊನೆಯ ಗುಂಡಿಗೆ ಸತ್ತು ಬೀಳುವ ಹುಲಿಯಂತೆ ಬಿದ್ದು ಹೋಗುತ್ತದೆ. ಇದನ್ನು ನಮ್ಮ ಯುವಜನ, ಮೇಲು ಮತ್ತು ಕೆಳಜಾತಿಗಳು ಸಮಾನತೆಯನ್ನ ಬಯಸುವ ಎಲ್ಲಜನ ತಿಳಿಯಬೇಕು. ಹತ್ತಾರು ಧರ್ಮ, ಅನೇಕ ಸಂಸ್ಕೃತಿ, ಭಾಷೆ ಇರುವಂತಹ ನಮ್ಮ ದೇಶದಲ್ಲಿ

ಸಹಬಾಳ್ವೆ, ಕೋಮುಸೌಹಾರ್ದತೆ ನಮ್ಮ ಪ್ರಗತಿಗೆ ಮತ್ತು ಭದ್ರತೆಗೆ ಅವಶ್ಯವಾಗಿದೆ. ಈ ವೈವಿಧ್ಯತೆಯ ನಮ್ಮ ಸಾಂಸ್ಕೃತಿಕ ಭಾಗ್ಯ.

ಅಡಿಟಿಪ್ಪಣಿಗಳು

೧. ಚಿಂತನಗಂಗಾ, ಪು. ೫೨.

೨. What is this Hindu Rastra, 1993; 14.

೩. ಸಂಕ್ರಮಣ ೧೯೯೩, ಏಪ್ರಿಲ್

೪. ಅರಿವು ಬರಹ-೧; ೧೯೯೧.

೫. ಕೋಮುಸೌಹಾರ್ದ, ಎಚ್.ಎಸ್. ದೊರೆಸ್ವಾಮಿ, ೧೯೯೧.

೬. ಇಸ್ಲಾಂಸಂಸ್ಕೃತಿ: ಪ್ರೊ. ಮಹಮ್ಮದ ಪೂಡ್ರಿ ಅನು: ಬಿ.ಎಂ. ಶ್ರೀಕಂಠಯ್ಯ ೧೯೭೦ - ಮುನ್ನುಡಿ.

*

ಹಿಂದೂ ಸಂಪ್ರದಾಯದಲ್ಲಿ ದಲಿತರು

'ಹಿಂದೂ ಸಂಪ್ರದಾಯದಲ್ಲಿ ದಲಿತರು' ಎಂಬ ಪ್ರಬಂಧ ಮಂಡಿಸುತ್ತಿರುವ ಈ ಕ್ಷಣದಲ್ಲೂ ನನಗೆ, ನನ್ನ ಬಗ್ಗೆ ಒಂದು ರೀತಿಯ ಹೇಯಭಾವನೆ ಮೂಡುತ್ತಿದೆ. ಯಾವ ಧರ್ಮದ ಬೆನ್ನೆಲುಬಾದ ದರ್ಮಶಾಸ್ತ್ರಗಳು, ಅಂಥ ಆಚರಣೆ, ಬಕಪಕ್ಷಿ ವೇದಾಂತದ ಥಾನುಥಾನು ಉಪದೇಶದ ಹೊರೆಗಳನ್ನು ಅರಚಿಕೊಳ್ಳುತ್ತ, ಜಗತ್ತಿನ ದಾರಿದೀಪ -ಶಾಂತಿದೂತ ಎಂಬಂಥ ಗಿಲೀಟಿನ ಬಣ್ಣದ ಥಳಕನ್ನು ಮೆರೆಸುತ್ತ ಬಂದ ಸಮೂಹ, ದೇವಸ್ಥಾನ, ಧರ್ಮ ಗುರುಗಳನ್ನೆಲ್ಲ ಮತ್ತು ಬೇಕು ಬೇಕಾದ ವೇದಿಕೆಯನ್ನಷ್ಟು ಸಂಘಟಿಸಿ, ನೋಡಿದರಾ, ನಾವು ಹೇಗೆ ಭದ್ರವಾಗಿದ್ದೇವೆ, ಎಂದೇ ಮನಸ್ಸಿನ ಮಂಡಿಗೆಯನ್ನು ಪಠಿಸಲು ಅನುಕೂಲವಾದವರನ್ನೆಲ್ಲ ಹಿಡಿದು ಭಸ್ಮ ಮಾಡದೆ, ನಮ್ಮ ಹೇಡಿತನಕ್ಕೆ ಸಂಭಾವಿತ ರೂಪು ಕೊಡಲು ಸುಸಂಸ್ಕೃತ ಹೊದಿಕೆಯನ್ನು ಹೊದ್ದು ಬಂದ ಅಸಹ್ಯಭಾವನೆ ನನ್ನನ್ನು ಕಾಡುತ್ತದೆ. ಆದರೂ ಪುಣ್ಯಕೋಟಿಯ ವ್ಯಥೆಯನ್ನು, ಪ್ರಾಮಾಣಿಕತೆಯನ್ನು ಅನುಭೋಗಿಸಿಕೊಂಡು ವ್ಯವಸ್ಥೆಯ ಮುಷ್ಟಿಯಲ್ಲಿ ಸಿಕ್ಕ ಹುಲಿ ಏನೂ ಮಾಡಲಾಗದೆ ತನ್ನನ್ನೇ ತಾನು ಬಲಿದಾನ ಮಾಡಿಕೊಳ್ಳುವ ಹಾಗಿನ ಮನಸ್ಥಿತಿಯ ಸಭ್ಯರು, ಪ್ರಾಮಾಣಿಕ ನೋವುಳ್ಳವರು ಅಲ್ಲಲ್ಲಿಯಾದರೂ ಇದ್ದಾರೆಂಬ ಅನ್ನಿಸಿಕೆಯಿಂದ ನಾನು ಧೈರ್ಯ ಹೊಂದಬೇಕಾಗಿದೆ. ಹೀಗೇ ಹೇಳುತ್ತ, ತಾನು ಹೇಳಿದ್ದನ್ನೆಲ್ಲ ಕೇಳುತ್ತ ಕಿವುಡಾಗೇ ಇರುವ ಸಮಾಜವನ್ನು ಭಸ್ಮಮಾಡುವ ಸನ್ನಿವೇಷವೂ ಬಂದರೆ, ಅದೇನೂ ಆಶ್ಚರ್ಯವಲ್ಲ. ಅಂಥ ಸ್ಥಿತಿಯೂ ತರ್ಕಬಾಹಿರವಾಗಲಿಕ್ಕಿಲ್ಲ. ಅದೂ ಅಸಹ್ಯ ಅಲ್ಲ ಎಂಬುದನ್ನು ಸಾದರಪಡಿಸಲಿಕ್ಕಾದರೂ ಇದೊಂದು ಅವಕಾಶ ಎಂದೇ ಭಾವಿಸುತ್ತೇನೆ. ಇನ್ನೊಂದು ಕಾರಣವೂ ಉಂಟು. ಇಂದಿನ ಪ್ರಜಾಪ್ರಭುತ್ವವಾದೀ ಸಾಮಾಜಿಕ ಬದುಕಿನಲ್ಲಿ ಸಮಾನತೆಯ ಅನಿವಾರ್ಯತೆ ನಮ್ಮದಾದ್ದರಿಂದ ಆ ದಾರಿಯಲ್ಲಿ ಮುಳ್ಳಾಗಿ ನಿಲ್ಲುವ ಜಾತಿಪದ್ಧತಿ, ದಲಿತರ ಕುರಿತು ನಾವು ನಡೆದುಕೊಂಡ ಕಾರುಣ್ಯಹೀನ ಸಂಪ್ರದಾಯಗಳ ಅವಲೋಕನೆ, ವಿಶ್ಲೇಷಣೆ, ವಿವರಣೆ ಅಗತ್ಯವಾಗಿದೆ ಎಂಬುದೂ ಹೌದು.

ಆದ್ದರಿಂದಲೇ ನನ್ನಿಂದ ಸಂಪ್ರದಾಯಕ ಸಾಹಿತ್ಯದ ಸಭ್ಯ ಸುಸಂಸ್ಕೃತ ವೀಣಾ ಗುಂಜರದ ಧ್ವನಿಯನ್ನು ನಿರೀಕ್ಷಿಸುವುದೇ ತಪ್ಪು. ಹೊಲೆ ಮಾದಿಗರು ವೇದವನ್ನು ಓದುವುದನ್ನು ಕೇಳಿದರೂ

೧೯೮೦ರಲ್ಲಿ ಬೆಳಗಾವಿಯಲ್ಲಿ ಬಸವರಾಜ ಕಟ್ಟೀಮನಿಯವರ ಅಧ್ಯಕ್ಷತೆಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಓದಿದ ಪ್ರಬಂಧ: ಸಂಕಲನ: ಕನ್ನಡ ಸಾಹಿತ್ಯ ಪರಿಷತ್ತು, ೧೯೮೦.

ಕಿವಿಯಲ್ಲಿ ಕಾದ ಎಣ್ಣೆಯನ್ನು ಹೊಯ್ಯಬೇಕೆಂಬ ಪದ್ಧತಿಯಲ್ಲೇ ಬೆಳೆದುಬಂದು ಬಹು ಸಮುದಾಯದ ಕಿವಿಗೆ ಹೊಕ್ಕ ಈ ಮಂಡನೆ ಒಂದು ಕಾದ ತೈಲದ ಸ್ಥಾನವಾದರೆ ಆಶ್ಚರ್ಯವಾಗಲಾರದು. ಇಷ್ಟು ಹೇಳುತ್ತಲೇ ನಾನು 'ಸಂಪ್ರದಾಯದಲ್ಲಿ ದಲಿತ'ನ ಕುರಿತು ಪ್ರಬಂಧ ಮಂಡಿಸಲು ತೊಡಗಿಬಿಟ್ಟಿದ್ದೇನೆ. ಅಂದರೆ ಸುತ್ತಲಿನ ಜೀವನಕ್ಕೆ ಮೂಗು ತೆರೆದುಕೊಂಡು ಉಸಿರಾಡಿಸಲು ಪ್ರಾರಂಭಿಸಿದ ವರ್ತಮಾನಕಾಲದ ದಲಿತ ಸಮಾಜ ತನ್ನನ್ನು ಇನ್ನೂತನಕ ನಡೆಸಿಕೊಂಡ ಅಮಾನವೀಯ ಸ್ಥಿತಿಯನ್ನು ವಿಶ್ಲೇಷಿಸುವಾಗಲೇ ಈ ಸ್ವಾತಂತ್ರ್ಯವನ್ನು ಅನುಭೋಗಿಸುವುದು ಸಹಜವಾಗಿದೆ. ಹಾಗಾದರೆ ಇಂಥ ಆಕ್ರೋಶಗಳಿಗೆ ಆಗರವಾದ ಈ ದಲಿತ ಯಾರು?

ಈ ಪ್ರಶ್ನೆ ತೀರಾ ಸಕಾಲಿಕವಾದುದು. ಯಾಕೆಂದರೆ ಎಲ್ಲ ಜಾತಿಗಳಲ್ಲೂ ಶೋಷಿಸಲ್ಪಟ್ಟವರು, ಬಡವರು ಅಂದರೆ ದಲಿತರು ಇದ್ದಾರೆ ಎಂಬ ಮತ್ತೊಂದು ವಾದವೂ ಸುಸಂಸ್ಕೃತ ವೇದಿಕೆಯಲ್ಲಿ ಆಗೀಗ ಕೇಳಿಬರುತ್ತಿದೆ. ಹೀಗೆ ಶೋಷಣೆಗೆ ಒಳಗಾದವರೆಲ್ಲ ದಲಿತರಲ್ಲ ಎಂದು ಹೇಳುವುದೇ ನನ್ನ ಉದ್ದೇಶ. ಉದಾಹರಣೆಗಾಗಿ, ಬ್ರಾಹ್ಮಣರಲ್ಲಿ ಅಥವಾ ಅದಕ್ಕೆ ಹತ್ತಿರವಾದ ಶೂದ್ರರಲ್ಲಿ ಒಬ್ಬ ಬಡವ ಇದ್ದಾನೆ ಎಂದ ಮಾತ್ರಕ್ಕೆ ಆತ ದಲಿತ ಆಗಲಾರ. ಅವನ ಶೋಷಣೆ ಸಾರ್ವಕಾಲಿಕವೂ ಅಲ್ಲ. ಸಾಮಾಜಿಕವಾದ ಮನ್ನಣೆ ಅಲಭ್ಯವೂ ಅಲ್ಲ. ಆದರೆ ಕಾಲಾಂತರದಿಂದ ಧಾರ್ಮಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಶೋಷಣೆ ಗೊಳಗಾದ ಪಂಗಡ ಅಥವಾ ಜಾತಿ ಇದೆಯೋ ಅದು ಮಾತ್ರ ದಲಿತ ಎಂಬ ಪಟ್ಟಿಯಡಿಯಲ್ಲಿ ಬರುತ್ತದೆ. ಅಂಥವರು ಹೊಲೆ ಮಾದಿಗರು, ಭಂಗಿಗಳು, ಮುಕ್ರಿ, ಆಗೇರ ಮುಂತಾದ ಅಸ್ಪೃಶ್ಯರೇ ಆಗಿದ್ದಾರೆ. ಅವರೇ ದಲಿತರು.

ಈ ದಲಿತನ ಅಥವಾ ದಲಿತರ ಬದುಕಿನ ಅಸಹಾಯಕತೆ, ನಿರಾಶೆಯ ನೋವನ್ನು ಗುರುತಿಸಲು ಸಂಪ್ರದಾಯದ ಕಡೆ ನೋಡಬೇಕಿದೆ. ಸಂಪ್ರದಾಯ ಎಂಬುದು ಧರ್ಮಶಾಸ್ತ್ರದ, ರೂಢಿಯ, ಆರ್ಥಿಕ ವ್ಯವಹಾರದ, ಮುಖ್ಯವಾಗಿ ಆಚರಣೆಯ ಮೊತ್ತವೇ ಆಗಿದೆ. ಸಾಮಾಜಿಕ ಅಂತಸ್ತುಗಳ ಏರು ಪೇರುಗಳೆಲ್ಲ ಆರ್ಥಿಕ ಮೂಲವಾಗಿರುವುದರಿಂದ ಅದರ ಪರಿಣಾಮ ಧರ್ಮಶಾಸ್ತ್ರಗಳ ಮೇಲೆ, ನಿತ್ಯ ಬದುಕಿನ ವ್ಯವಹಾರ ನಿಯಮಗಳ ಮೇಲೆ ಬೀರದೇಹೋಗುವುದಿಲ್ಲ. ಈ ಆರ್ಥಿಕ ಫಲಿತವೇ ಹಿಂದೂ ಧರ್ಮಶಾಸ್ತ್ರದ ಮೊತ್ತವೂ ಹೌದು. ಕೆಲವೊಂದು ಮೇಲುಜಾತಿಗಳು ಮಾಡಿದ ಶೋಷಣೆಗೆ ಧರ್ಮವೇ ವಜ್ರಕವಚ, ರಕ್ಷಕವಾಗಿದೆ. ಒಬ್ಬ ದಲಿತನ ನೋವಿನಿಂದ, ನಿಜಸ್ಥಿತಿಯಿಂದ ಇದೇ ಈ ಧರ್ಮ ಹಾಗೂ ಸಂಪ್ರದಾಯದ ಮೊತ್ತವನ್ನು ನೋಡಿದರೆ, ಅದೊಂದು ಸುಲಿಗೆಯ ವಿಧಾನವೆಂದೇ ತೋರುತ್ತದೆ.

ವೇದಕಾಲದಿಂದಲೆ ಇಂಥ ಸಂಪ್ರದಾಯದ ಉಗಮ. ಒಂದು ಕಾಲದಲ್ಲಿ ಧರ್ಮ ಶಾಸ್ತ್ರ, ಸ್ಮೃತಿಗಳೇ ರಾಜಕೀಯವನ್ನೊಳಗೊಂಡ ಶಕ್ತಿಯಾದುದರಿಂದ ಧರ್ಮಶಾಸ್ತ್ರಗಳನ್ನು ಕೆಣಕದೇ ದಲಿತನ ಸ್ಥಿತಿ ಅರಿವಾಗಲಿಕ್ಕಿಲ್ಲ.

ಹಿಂದೂಧರ್ಮ ಜಾತಿನಿಷ್ಠವಾದುದು. ನಾಲ್ಕು ವರ್ಣಗಳೆಂದು ವಿಭಾಗಿಸಲ್ಪಟ್ಟು ೩೦೦೦ ಜಾತಿಗಳಿಗೂ ಗಂಗೋತ್ರಿಯಾದ ಈ ವರ್ಣಧರ್ಮದ ಅಡಿಯಲ್ಲಿ ಅವರ್ಣ ಜಾತಿ ಅಥವಾ ಪಂಚಮ ಜಾತಿಯೊಂದು ಅಸ್ತಿತ್ವದಲ್ಲಿ ಬಂತು. ಇವರೇ ಅಸ್ಪೃಶ್ಯರು. ಅದು ಹೇಗೆ ಉಂಟಾಯಿತೆಂಬ ತರ್ಕ ನನ್ನದಲ್ಲ; ಆದರೆ ಇಲ್ಲಿ ದಲಿತ ಹೇಗೆ ದೌರ್ಜನ್ಯಕ್ಕೆ ಗುರಿಯಾದ ಎಂಬುದು.

ಶೂದ್ರಜಾತಿಗೆ ವೇದಾಧಿಕಾರ ಅಂದರೆ ವಿದ್ಯಾಧಿಕಾರ ಇಲ್ಲವಾಯಿತು. ಮನುಷ್ಯನಿಗೆ ಕಣ್ಣನಂತಿರುವ ವಿದ್ಯಾರ್ಥಿಕಾರವನ್ನೆ ಶೂದ್ರರಿಂದ ಕಿತ್ತುಕೊಂಡಿತು. ಅದಕ್ಕಿಂತಲೂ ಹೀನಾಯವಾದುದು ದಲಿತನ ಸ್ಥಿತಿ. ಒಬ್ಬ ಅಸ್ಪೃಶ್ಯ, ಬ್ರಾಹ್ಮಣ ತಿರುಗುವ ಬೀದಿಯಲ್ಲಿ ತಿರುಗಲೂ ಬಾರದು. ಒಮ್ಮೆ ಆಕಸ್ಮಾತ್ ಬ್ರಾಹ್ಮಣನ ಕಣ್ಣಿಗೆ ಬಿದ್ದರೆ ಪ್ರಾಯಶ್ಚಿತ ಅಸ್ಪೃಶ್ಯನಿಗೆ! ಆದ್ದರಿಂದ ಅಸ್ಪೃಶ್ಯನು ಸರ್ವಮಾನವೀಯ ಸೌಹಾರ್ದದಿಂದಲೇ ವಂಚಿತನು.

ಯಾವ ಇತಿಹಾಸಕ್ಕೂ ಒಂದು ಏರು ಪೇರು ಇದೆ, ವೈಭವದ ಕಾಲವಿದೆ. ಆದರೆ ದಲಿತನ ಸ್ಥಿತಿಯಲ್ಲಿ ಮಾತ್ರ ಇಂಥ ತಿರುವು ಸಿಕ್ಕುವುದೇ ಇಲ್ಲ. ಅಲ್ಲಲ್ಲಿ ನಡೆದ ಘರ್ಷಣೆ ವ್ಯವಸ್ಥೆಯ ರಾವಣ ಹೊಟ್ಟೆಯಲ್ಲಿ ಭಸ್ಮವಾಗಿ ಹೋಗಿದೆ.

"ಹಿಂದೂ ಸಮಾಜದಲ್ಲಿ ಅಸ್ಪೃಶ್ಯತೆ ಎಂಬುದು ಸತ್ಯಸಂಗತಿ. ಕಾಯ್ದೆಯಿಂದ ಇಂದು ಅದನ್ನು ಅಲ್ಲಗಳೆದರೂ ಅಸ್ಪೃಶ್ಯತೆ ಇಲ್ಲ ಎನ್ನುವುದು ಅಸಂಗತವಾಗುತ್ತದೆ. ಹಿಂದೂಗಳಲ್ಲಿ ನಾಲ್ಕು ವರ್ಣದವರೂ ಮಾಡಲಾಗದ ಕೆಲ ಕೆಲಸಗಳಿವೆ. ಬೀದಿ ಹೊಲಸಾದರೆ, ಗಂಟಿಗಳು ಸತ್ತುಬಿದ್ದರೆ, ಹೇಲು ರಾಶಿಬಿದ್ದರೆ ತೆಗೆಯಲು, ಜೋಡು ಹೊಲಿಯಲು ಈ ಜಾತಿ ಬೇಕು. ಇದು ಊರ ಹೊರಗಿನ ಜಾಗದಲ್ಲಿ ಮನೆ ಮಾಡಿ ಇರುತ್ತದೆ. ಈ ಪದ್ಧತಿ ಜೀತದಲ್ಲಿ ಇರುವ ಗುಲಾಮಗಿರಿಗಿಂತ ಕ್ರೂರವಾದುದು. ಗುಲಾಮನಿಗೆ ತನ್ನ ಒಡೆಯನ ಸಾಮಿಪ್ಯವಾದರೂ ಉಂಟು. ಒಮ್ಮೆ ಮುಕ್ತ ಜೀವನವೂ ಅನಿರೀಕ್ಷಿತವಲ್ಲ. ಆದರೆ ಈ ಅಸ್ಪೃಶ್ಯತೆ ವೈಯಕ್ತಿಕ ಗುಲಾಮಗಿರಿಯಲ್ಲ, ಸಾಮೂಹಿಕ ಗುಲಾಮಗಿರಿ" ಎಂದು ಕೆ.ಎಂ. ಪಣಿಕರ್ ತಮ್ಮ 'Hindu Society at Cross Roads' ಎಂಬ ಪುಸ್ತಕದಲ್ಲಿ ಹೇಳುತ್ತಾರೆ.

ಜಾತಿ ವ್ಯವಸ್ಥೆಗೆ ಅತ್ಯಂತ ಕಾಂಕ್ರೀಟನ್ನು ಭಗವದ್ಗೀತೆ ವಹಿಸುತ್ತದೆ. ಗೀತೆಯಲ್ಲಿ "ಸ್ವಧರ್ಮೆ ನಿಧನಂ ಶ್ರೇಯಃ" ಎಂಬ ಮಾತು ಸ್ವಜಾತಿಯ ಕುರಿತೇ ಹೇಳಿದೆ. ಈ ಸ್ವಧರ್ಮವೆಂದರೆ ಜಾತಿ ಅಲ್ಲ ಎಂಬ ಬಹಳ ಬುದ್ಧಿವಂತಿಕೆಯ ವ್ಯಾಖ್ಯಾನ ನನಗೆ ಅಪರಿಚಿತವಲ್ಲ. ಅವರ ವಾದವೆಲ್ಲ ಒಬ್ಬನನ್ನು ಬಾವಿಯಲ್ಲಿ ಕೆಡಹಿ ನಾವು ಮೇಲೆ ನಿಂತು ನಿನಗೂ ಹೋರಾಡಲು ಸ್ವಾತಂತ್ರ್ಯ ಉಂಟು. ನಾನು ಧರ್ಮಯುದ್ಧ ಸಾರುತ್ತೇನೆ, ಎಂದಹಾಗೆ. ಜೀವಕ್ಕೆ ಬೇಕಾಗುವ ಸಂಸ್ಕಾರ, ವಿದ್ಯೆ, ಆರ್ಥಿಕ ಮೂಲವನ್ನೇ ಕಸಿದುಕೊಂಡ ಗೀತೆ ಹೇಳುವ ಸ್ವಧರ್ಮ, ಸ್ವಜಾತಿಯಲ್ಲದೆ ಬೇರೆ ಅಲ್ಲ. 'ನೀವು ದಲಿತರು ಸುಲಿಯಲ್ಪಡಲೇ ಹುಟ್ಟಿದವರು, ಅದೇ ಧರ್ಮ' ಎಂದೇ ಇದರ ತಾತ್ಪರ್ಯ.

ಅದಕ್ಕೆ ಧರ್ಮವ್ಯಾಧನ ಕತೆಯೊಂದಿದೆ. ಇಂದಿನ ಪಠ್ಯಪುಸ್ತಕದಲ್ಲೂ ಅಚ್ಚಾಗಿ ಜಾತ್ಯಾತೀತ ರಾಷ್ಟ್ರದ ಪ್ರಜೆಗಳಾಗಿಬೆಳೆಯುವ ಮಕ್ಕಳ ಕೈಗೆ ಹೋಗುವ ಕತೆ ಹೀಗೆ: ಧರ್ಮವ್ಯಾಧ ಒಬ್ಬ ಕಟುಕ. ಮಾಂಸವನ್ನು ಕೊಚ್ಚುವುದು ಅವನ ಕೆಲಸ. ಅವನ ಬಳಿ ಅಹಂಕಾರ ಹೊಂದಿದ ಬ್ರಾಹ್ಮಣ ವಟು ಬ್ರಹ್ಮವಿದ್ಯೆ ಕಲಿಯಲು ಹೋಗುತ್ತಾನೆ. ಅವನಿಗೆ ಬ್ರಹ್ಮವಿದ್ಯೆ ಕರಗತವಾಗಿದೆ. ಯಾಕೆಂದರೆ ತನ್ನ ಉದ್ಯೋಗದಲ್ಲೇ ಇದ್ದು ತಂದೆ ತಾಯ್ಗಳ ಸೇವೆಯಲ್ಲಿ ನಿರತ. ಇದು ಪರಿಚಿತ ಕತೆ. ಆದ್ದರಿಂದ ವಿವರಣೆ ಬೇಕಿಲ್ಲ. ಇಲ್ಲಿಯ ಅಂಶ ಇಷ್ಟೆ. ಧರ್ಮವ್ಯಾದ ಕಟುಕನಾಗೇ ಇರಬೇಕು. ವೇದ ವಿದ್ಯೆಗಳ ಸಂಸ್ಕಾರ ಇಲ್ಲದಿದ್ದರೂ ಆತನಿಗೆ ಕೃಷ್ಣ ಹೇಳುವ ಕರ್ಮದಲ್ಲಿ ಕುಶಲತೆಯಿದೆ. ಒಮ್ಮೆ ಆತನ ಉದ್ಯೋಗ ಬದಲಿ ಆದರೆ, ಕೊಚ್ಚುವುದನ್ನು ಬಿಟ್ಟರೆ ಈ ಉಪದೇಶ ಮಾಡುವವರ ಪಾಲಿಗೆ ಬರದಿದ್ದೀತೆ? ಇದೊಂದು ಉಪಾಯವಾದ. ಬುದ್ಧಿವಂತನಾದ ದಲಿತನನ್ನೆ ಬುದ್ಧಿಯಿಂದ ಸುಲಿದು ಅವನನ್ನೇ ಹೀರೊ ಮಾಡಿ, ಅವನ ಜಾತಿಯವರಿಗೆ ನಿಮ್ಮ ಉದ್ಯೋಗ ಮತ್ತು ಸ್ಥಿತಿ ಇದೇ ಎಂದು ಗಟ್ಟಿಮಾಡುವ ವಿಧಾನ. ದಲಿತನ ದೃಷ್ಟಿಯಲ್ಲಿ ಒಂದು ಖಂಡನಾರ್ಹ ಮತ್ತು ಫ್ಯಾಸಿಸ್ಟ್ ಕೃತಿ.

ಈ ದಲಿತನ ಜೀವನದಲ್ಲಿ ಒಂದು ಉಸಿರಾಟ ಸಿಕ್ಕಿದ್ದು ಬಸವಣ್ಣನವರ ಕ್ರಾಂತಿಯಲ್ಲಿ. ಕಲ್ಯಾಣ ಮಂಟಪದ ಆಶ್ರಯದಲ್ಲಿ ಹೊಲೆಯ ಮಾದಿಗರೂ ಹೆಂಗಸರೂ ಸಮಾನತೆಯಿಂದ ಭಾಗವಹಿಸಿದರು. ಧಾರ್ಮಿಕ ಕ್ರಿಯೆಯಲ್ಲಿ ಭಾಗವಹಿಸಿದರು. ಆದರೆ ಅಸ್ಪೃಶ್ಯನಾದ ಹರಳಯ್ಯನ ಮಗ ಬ್ರಾಹ್ಮಣನಾದ ಮಧುರಸನ ಮಗಳ ವಿವಾಹ ಸಂದರ್ಭದಲ್ಲಿ ಕ್ರಾಂತಿ ವಿಫಲವಾಯಿತು. ವೀರಶೈವ ಧರ್ಮಕ್ಕೆ, ಹಾಗೆಯೇ ಮೊದಲು ಜೈನ ಧರ್ಮಕ್ಕೆ ಮತಾಂತರ ಹೊಂದಿದ ಬ್ರಾಹ್ಮಣರು, ಅದಕ್ಕೆ ಸಮೀಪ ಜಾತಿಯ ಉಚ್ಚವರ್ಣೀಯರು ತಮ್ಮ ಜಾತಿ ಸ್ವಭಾವವನ್ನು ಹಾಗೇ ಇಟ್ಟುಕೊಂಡು, ಅಲ್ಲಿ ಹತ್ತಾರು ಜಾತಿ ಉಂಟುಮಾಡಿ, ಸಾಮಾಜಿಕ ಸ್ಥಾನಮಾನಗಳನ್ನು ತಾವೇ ಇಟ್ಟು ಕೊಂಡರು. ದಲಿತನು ಸಮಾಜಭ್ರಷ್ಟನಾಗಿಯೇ ಉಳಿದ.

ಮುಂದೆ ಆ ಸವರ್ಣೀಯರು ಉಂಡೊಗೆದ ಎಂಜಲು ಬಾಳೆಯನ್ನು ನೆಕ್ಕುವ, ಎಲ್ಲೊ ಕರುಣೆ ಬಂದರೆ ಹಿತ್ತಲ ತುದಿಗೆ ಬಂದು ತೊಟ್ಟಿಯಲ್ಲಿ ಒಗೆದ ಪದಾರ್ಥಗಳನ್ನಷ್ಟೆ ಉಣ್ಣುವ ಸ್ಥಿತಿ ಬದಲಾಗಲಿಲ್ಲ.

ಮುತ್ತು ರತ್ನಗಳನ್ನು ಬಳ್ಳದಿಂದ ಅಳೆದು ಮಾರುವ ವೈಭವೋಪೇತ ವಿಜಯನಗರದ ವೈಭವದ ಕಾಲದಲ್ಲಿ ಹೊಲೆಯರು ಬೀದಿಯಲ್ಲಿ ಬರುವಾಗ ತಾವೇ ಜಾಗಟೆ ಬಾರಿಸಿಕೊಳ್ಳಬೇಕಿತ್ತಂತೆ! ಅಂದರೆ ಹೊಲೆಯ ಬರುತ್ತಾನೆಂದು ಜನರಿಗೆ ತಿಳಿಯಬೇಕು. ಮತ್ತು ಅವರು ಮುಖ್ಯವಾಗಿ ಬ್ರಾಹ್ಮಣರು ಅಸ್ಪೃಶ್ಯನಿಂದ ದೂರ ಹೋಗಲು ಅನುಕೂಲವಾಗಬೇಕು. ಗುಪ್ತರ ವೈಭವದ ಕಾಲದಲ್ಲಿ ದಲಿತನ ಅಸ್ಪೃಶ್ಯತೆ ಹಾಗೇ ಇತ್ತು. ಅವನ ಜೀವನದಲ್ಲಿ ಯಾವ ಬದಲಾವಣೆಯೂ ಇದ್ದಿರಲಿಲ್ಲ.

ಭಕ್ತಿಪಂಥದ ಕಾಲದಲ್ಲಿ ಈ ವೈದಿಕ ಧರ್ಮದ ಕ್ರೌರ್ಯ ಮುಷ್ಟಿಯಿಂದ ಸಡಿಲಿಸಿಕೊಳ್ಳುವ ಕೆಲಸ ಸ್ವಲ್ಪಮಟ್ಟಿಗೆ ನಡೆಯಿತು. ಕನಕದಾಸನಂಥ ಕುರುಬ ವ್ಯಾಸರಾಯರ ಶಿಷ್ಯನಾಗಿ ಮುಂದೆ

ಬಂದ. ಆದರೆ ಅವನು ಸಮಾಜದಲ್ಲಿ ಉನ್ನತ ಸ್ಥಾನ ಹೊಂದಿದ್ದು ಅವನ ಕಾವ್ಯದಲ್ಲಿ ಕಂಡುಬರುವುದಿಲ್ಲ. ಕೊನೆತನಕ ಜಾತಿಯಲ್ಲಿ ಢಾಂಬಿಕರನ್ನು ವಿಡಂಬಿಸಿದ. ಆದರೆ ಅವನಿಗೆ ದೇವಸ್ಥಾನದ ಒಳಗೆ ಸ್ಥಾನ ಸಿಕ್ಕಲಿಲ್ಲ. ಕನಕದಾಸ ಉಡುಪಿಯ ಕೃಷ್ಣದರ್ಶನಕ್ಕೆ ಬಂದಾಗ ಕಲ್ಲಿನ ಕೃಷ್ಣ ಗೋಡೆ ಕನ್ನಮಾಡಿ ಖಿಡಲ್ ಎಂದು ಮುಖ ತಿರುಗಿಸಿ ಕನಕನಿಗೆ ಹೊರಗೇ ದರ್ಶನ ಕೊಟ್ಟನಂತೆ! ಈ ಕತೆಯ ಹಿಂದೆ ಇರುವ ಮರ್ಮ ತಿಳಿಯದ್ದಲ್ಲ. ಅಸ್ಪೃಶ್ಯರಲ್ಲಿಯೇ ಮುಂದೆ ಬಂದ ಕನಕನಿಗೆ ಕಿಟಕಿಯಿಂದ ಹೊರಗೆ ದರ್ಶನಮಾಡಿಸಿ ತಾವು ಒಳಗೆ ಇದ್ದವರು ಇಲ್ಲಿಯೇ ಇರುತ್ತೇವೆ, ನೀವು ಹೊರಗೆ ನಿಂತ್ಕೊಂಡು ಅಲ್ಲಿಯೇ ಇರಿ ಎಂಬ ತಾತ್ವಿಕ ನಿಲುವಿನ ಮುಖಾಂತರ ಅಸ್ಪೃಶ್ಯರನ್ನು ಹೊರಗೇ ಇಟ್ಟು, ಅವರು ಕ್ರಾಂತಿ ವಿಳದಂತೆ ಮಾಡಿದ ಉಪಾಯ. ಸೋತ ಜನ ಅದನ್ನೇ ನಂಬಿದರು. ಕನಕನಿಗಿಂತ ಹೆಚ್ಚಿನ ಧೈರ್ಯ ಅವರಿಗೆ ಬಂದೀತೆ? ಆತನೇ ಒಪ್ಪಿದಮೇಲೆ ಉಳಿದವರ ಪಾಡೇನು?

ಪೌರಾಣಿಕ ಕಾಲದಲ್ಲಿ ದ್ರೋಣಾಚಾರ್ಯನನ್ನು ಅಪ್ರತ್ಯಕ್ಷವಾಗಿಯಾದರು ಗುರುವೆಂದು ಸ್ವೀಕರಿಸಿ ಬಿಲ್ಲು ವಿದ್ಯೆಯನ್ನು ಕಲಿತ ಏಕಲವ್ಯನಿಗೆ ಈ ಗುರು ದಕ್ಷಿಣೆಯಾಗಿ (ಇಂಥ ಸಂಭಾವಿತ ವಿಧಾನವೂ ಉಂಟೆ!) ಹೆಬ್ಬೆರಳನ್ನೇಕೊಂಡು ಅವನನ್ನು ಮೂಲೆಗುಂಪು ಮಾಡಿದ ಕತೆ ಕೇವಲ ದ್ರೋಣಾಚಾರ್ಯನ ವೈಯಕ್ತಿಕ ಪ್ರತಿ ಕ್ರಿಯೆಯಾಗಿರದೆ, ಆಗಿನ ಸಮಾಜದ ಹಿಡಿತ ದಲಿತನಮೇಲೆ ಎಷ್ಟು ಇತ್ತು ಎಂಬುದನ್ನು ತೋರಿಸುತ್ತದೆ. ಬಹುಶಃ ಈ ಕಥೆಯನ್ನು ಆಧರಿಸಿ ನಾಟಕ ರಚಿಸಿ ಮಾಡಿದವರಲ್ಲಿ ದಿವಂಗತ ಗೋವಿಂದ ಪೈಗಳು ಮಾತ್ರ ನ್ಯಾಯಸಲ್ಲಿಸಿ, ಇದು ವರ್ಣಧರ್ಮದ ಅನ್ಯಾಯ ಎಂಬುದನ್ನು ತೋರಿಸಿದ್ದಾರೆ. ಉಳಿದವರೆಲ್ಲ ದ್ರೋಣನನ್ನು ಆದರ್ಶನನ್ನಾಗಿ ಮಾಡಿ, ಏಕಲವ್ಯನನ್ನು ಗುರುಭಕ್ತಿಶೀಲನನ್ನಾಗಿಸಿ, ತ್ಯಾಗದ ವರ್ಣನೆಯನ್ನು ಮಾಡಿದ್ದಾರೆ.

ವೀರಶೈವ ಚಳವಳಿಯಲ್ಲೇ ಮುಂದುವರಿದ ರಾಘವಾಂಕ ಸಹ ತನ್ನ ಹರಿಶ್ಚಂದ್ರ ಕಾವ್ಯದಲ್ಲಿ, ಹರಿಶ್ಚಂದ್ರನ ಸತ್ಯ ಕೆಡಿಸಲು ವಿಶ್ವಾಮಿತ್ರ 'ಕಾರಿರುಳ ಕನ್ನೆಯರು ಹಗಲಂ ನೋಡಲೆಂದು ಬಂದರೋ' ಎಂಬಂತೆ ಹೊಲೆಯರನ್ನೇ ಕಳಿಸುತ್ತಾನೆ. ಅವರಲ್ಲಿ ಗುಣ, ಯವ್ವನ, ರೂಪ ಇದ್ದರೂ "ಅಕ್ಕಕು ಬಚ್ಚಲುದುಕಂ ತಿಳಿದಡಾರ ಮಿಾಹಕ್ಕೆ ಯೋಗ್ಯಂ?" ಎಂದೂ ನಾಯಿಯ ಹಾಲು ಊಟಕ್ಕೆ ಯೋಗ್ಯವಲ್ಲವೆಂದೂ ತನ್ನ ಪ್ರಸ್ತುತ ಸಂಪ್ರದಾಯದ ಧ್ವನಿಯನ್ನೇ ಎತ್ತಿ ಹೇಳಬೇಕಾಯಿತು. "ಸತ್ಯವನ್ನು ಆಡುವ ಹೊಲೆಯನಿಗಿಂತ ಅಸತ್ಯವಾಡುವವನೇ ಹೆಚ್ಚಿನ ಹೊಲೆಯ" ಎಂದು ವೀರ ಬಾಹುವಿನಿಂದ ಹೇಳಿಸಿ ಕೈತೊಳೆದುಕೊಳ್ಳಬೇಕಾಯಿತು.

ಮಹಾತ್ಮಾ ಗಾಂಧಿಯವರ ಕಾಲದಲ್ಲಿ ಈ ದಲಿತ 'ಹರಿಜನ'ನಾದ. ಆದರೆ ಗಾಂಧಿಯವರಿಗೆ ಈ ಸಾವಿರ ಜಾತಿಗಳ ಮೂಲಸ್ಥಾನವಾದ ವರ್ಣಧರ್ಮದಲ್ಲೇ ಅಪಾರವಾದ ನಂಬಿಕೆ. ಅಸ್ಪೃಶ್ಯತೆಯ ನಿವಾರಣೆಗಾಗಿ ಅವರು ಮನಸಾ ಹಾರೈಸಿದರೂ ಜಗಜೀವನರಾಮರು ಕಾಶಿಯಿಂದ ಹಿಂದಿರುಗಿದ ಮೇಲೆ ಅವರು ಉದ್ಘಾಟಿಸಿದ ದೇವರ ಮೂರ್ತಿಗಳನ್ನು ತೀರ್ಥಹಾಕಿ ಶುದ್ಧೀಕರಿಸುವ ಸಂಪ್ರದಾಯ ಜೀವಂತವಾಗಿಯೇ ಉಳಿಯಿತು.

ವರ್ಣೀಯರಲ್ಲೇ ಬೇಕಾದಷ್ಟು ಜಾತಿಭೇದವಿದ್ದರೂ ಅಸ್ಪೃಶ್ಯನ ಪ್ರಶ್ನೆಬಂದಾಗ ಈ ಎಲ್ಲ ಜಾತಿಯವರೂ ಹೇಗೆ ಹರಿಹಾಯುತ್ತಾರೆ ಎಂಬುದು ಸಧ್ಯದ ಒಂದು ನಿದರ್ಶನ ಸಾಕು.

ಹರಿಜನ ಮಂತ್ರಿಗಳಾದ ಬಸವಲಿಂಗಪ್ಪ ಅವರು ತಲೆಯ ಮೇಲೆ ಹೇಲು ಹೊರುವುದನ್ನು ನಿಷೇಧಿಸುವ ಕಾಯ್ದೆ ಮಾಡಿದಾಗ ಬ್ರಾಹ್ಮಣರು, ಶೂದ್ರರು, ವೀರಶೈವರು, ಗೌಡರು ಎಲ್ಲರೂ ತಾವು ಬುಟ್ಟಿಗಟ್ಟಲೆ ಹೇಲುತ್ತೇವೆ ಮತ್ತು ಅದರಲ್ಲಿ ಗಂಧ ಗಮಗಮಿಸುವುದಿಲ್ಲ ಎಂಬ ಅರಿವಾಗಿ ಬಸವಲಿಂಗಪ್ಪರನ್ನು ಮಂತ್ರಿ ಪದವಿಯಿಂದ ಮನೆಗೆ ಕಳಿಸಲು ಎಲ್ಲರೂ ಒಟ್ಟಾದರು. ಒಂದು ವಿಶ್ವವಿದ್ಯಾನಿಲಯಕ್ಕೆ ಡಾ. ಅಂಬೇಡ್ಕರ್‌ರವರ ಹೆಸರಿಡಲು ಸೂಚನೆ ಬಂದಾಗ ಮುಂಬೈಯಲ್ಲಿ ನಡೆದ ಹಿಂಸಾಚಾರ ಎಲ್ಲರಿಗೂ ಗೊತ್ತು.

ಅಸ್ಪೃಶ್ಯನಿಗೆ ಜಮೀನು ಮಾಡುವ ಅಂದರೆ ಬೇಸಾಯ ಮಾಡುವ ಅಧಿಕಾರವಿಲ್ಲ. ಡಾ. ಶಿವರಾಮಕಾರಂತರ 'ಚೋಮನದುಡಿ'ಯ ಸಮಸ್ಯೆ ನಿಂತಿದ್ದೇ ಇದರ ಮೇಲೆ. ಅವರು ಸ್ವತಃ ಜಮೀನು ಮಾಡಬಾರದು. ಒಮ್ಮೆ ಜಮೀನು ಮಾಡಿದರೆ ಸವರ್ಣೀಯರ ಕೆಲಸಕ್ಕೆ ಯಾರು ಸಿಕ್ಕುತ್ತಾರೆ? ಮತ್ತೆ ಅವರು ಊಟ ಮಾಡಿದರೆ 'ಹೊಟ್ಟೆಗೆ ಹಿಟ್ಟು ಸಿಕ್ಕಿದರೆ ಜುಟ್ಟಿಗೆ ಮಲ್ಲಿಗೆ' ಬೇಕೆನ್ನಿಸುತ್ತದೆ. ಆಗ ಉಳಿದ ಜಾತಿಗಳ ಫಜೀತಿ ಪಾವನ ಆದೀತು. ಹಿಂದೂಧರ್ಮದ ಪದ್ಧತಿಯಲ್ಲಿ ಶೂದ್ರನಿಗೂ ಸೇವೆಯೇ ಧರ್ಮ. ಮೇಲಿನ ಮೂರು ವರ್ಣಗಳ ಸೇವೆ ಅವನ ಸ್ವಧರ್ಮ. ಅಸ್ಪೃಶ್ಯ ಅತಿಶೂದ್ರ. ಆತ ಮಾಡಿದ ಸೇವೆಗೆ ಪ್ರತಿಫಲ ಕೇಳಬಾರದು. ಬ್ರಾಹ್ಮಣ ಮತ್ತು ಅಂಥವರು ಕೊಟ್ಟರೆ ಮಾತ್ರ ಸ್ವೀಕರಿಸಬೇಕು.

ಊರಿನ ಒಳಗೆ ವಾಸ ಸಲ್ಲ. ಮುರುಕು ಗುಡಿಸಲು. ಉಡಲು ಬಟ್ಟೆ ಇಲ್ಲ. ಎಂಜಲು ತಿಂದು ಬದುಕಬೇಕು. ಬಾವಿಯ ನೀರು ಮುಟ್ಟುವಂತಿಲ್ಲ. ಇಂಥ ಹೀನ ಸ್ಥಿತಿಯನ್ನು 'ಮುಂಜಾವದಲೇ ಹರಿಜನ ಮುದುಕಿಯು ಬಾವಿಯ ದಡದಲ್ಲಿ ನಿಂತಿಹಳು' ಎಂಬ ಕವಿತೆಯಲ್ಲಿ ಸಂಜೆಯಾದರೂ ಒಬ್ಬರೂ ನೀರು ಹನಿಸದೆ 'ಮುದುಕಿಯ ಹಿಟ್ಟಿಗೆ ಒಣಗಿದ ಬಾಯಿಗೆ ಅವಳದೆ ಬಿಸಿ ಕಂಬನಿ ಬಿತ್ತು' ಎಂದು ಕರುಣಾಜನಕವಾಗಿ ಕವಿ ಹೇಳಿದ್ದಾನೆ. 'Untouchable' ಎಂಬ ಕಾದಂಬರಿಯಲ್ಲಿ ಮುಲ್ಕ್‌ರಾಜ ಆನಂದ ಇಂಥ ಹೀನ ದೃಶ್ಯವನ್ನು ಚಿತ್ರಿಸುತ್ತಾರೆ.

ಯುಗ ಯುಗದಿಂದ ಯಾವ ಬದಲಾವಣೆ ಬಂದರೂ ದಲಿತನ ಬದುಕಿನಲ್ಲಿ ಬದಲಾವಣೆ ಕಾಣದು. ಬಹುಶಃ ಈ ಮಧ್ಯೆ ಕೆಲವರು ಮುಸ್ಲಿಮರ ಉಚ್ಛ್ರಾಯ ಕಾಲದಲ್ಲಿ ಮತ್ತು ಇಂಗ್ಲಿಷರ ಕಾಲದಲ್ಲಿ ಧರ್ಮಾಂತರ ಹೊಂದಿ (ಈ ಧರ್ಮಾಂತರವನ್ನು ಹಿಂದುಗಳು ಧರ್ಮಭ್ರಷ್ಟತೆ ಎಂದು ವರ್ಣಿಸುತ್ತಾರೆ). ಈ ನರಕದಿಂದ ಮುಕ್ತರಾಗಿರಬಹುದು. ಅವರೇ ಭಾಗ್ಯಶಾಲಿಗಳು. ಆದರೆ ದುರ್ದೈವದಿಂದ ದಲಿತರಲ್ಲಿ ದೈವಪ್ರಜ್ಞೆ, ಧರ್ಮಪ್ರಜ್ಞೆ ಇದೆ. ಅವರು ಮೇಲು ಜಾತಿಯವರಿಗಿಂತ ಹೆಚ್ಚು ನಿಷ್ಠಾವಂತರು. ಅವರು ಹಿಂದು ಧರ್ಮದ ಅವಿಭಾಜ್ಯ ಅಂಗವಾಗೇ ಬೆಳೆದು ಬಂದವರು. ಆ ಕಾರಣದಿಂದಲೇ ಹಿಂದು ಸಮಾಜದ ದೌರ್ಜನ್ಯವನ್ನು ಸಹಿಸಿಕೊಳ್ಳುತ್ತಿದ್ದಾರೆ.

ಇದೇ ಸಂಪ್ರದಾಯದ ವರ್ತಮಾನ ದಲಿತ ತನ್ನ ಸಂಪ್ರದಾಯದ ದೈನ್ಯವನ್ನು ಕೊಡಹಿ ಮೇಲೇಳುತ್ತಿದ್ದಾನೆ. ಅದಕ್ಕೆ ಡಾ. ಅಂಬೇಡ್ಕರರಂಥ ಹರಿಜನ ಮುಂದಾಳುವಿನ ಹೋರಾಟವೂ ಕಾರಣವಾಗಿದೆ. ಇಂದಿನ ಯುವಕರಿಗೆ ಅವರೇ ದಿವ್ಯಜ್ಯೋತಿಯಾಗಿದ್ದಾರೆ. ಎಚ್ಚತ್ತ ಆತ ತನ್ನನ್ನು ಕುರುಡನನ್ನಾಗಿ, ಕಿವುಡನನ್ನಾಗಿ, ಪಶುವನ್ನಾಗಿ ಯುಗಪರ್ಯಂತ ಹೀನ ಮನೋಭಾವದಿಂದ

ಬಳಲುವಂತೆ ಮಾಡಿದ ಭ್ರಷ್ಟ ಹಿಂದೂಧರ್ಮೀಯರ ಬಗ್ಗೆ ತೀವ್ರ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಿದ್ದಾನೆ. "ತೂರಲೇನು ಕೆಂಡವ ನಿಮ್ಮ ಮೇಲೆ?" ಎಂದು ಘೋಷಿಸುತ್ತಿದ್ದಾನೆ.

ದಲಿತನ ಸ್ಥಿತಿ ಸುಧಾರಣೆಗೆ ಯಾರೂ ಕೈಹಾಕಲಿಲ್ಲ ವೆಂದಲ್ಲ. ಮೊದಲು ಜ್ಯೋತಿಬಾಫುಲೆ ಅಂಥವರು ಹರಿಜನರಿಗಾಗಿ ಶಾಲೆಗಳನ್ನು ತೆಗೆದು ಈ ಸ್ಥಿತಿಯ ಬದಲಾವಣೆಗಾಗಿ ಪ್ರಯತ್ನಿಸಿದ್ದಾರೆ. ಆದರೆ ಅದು ಸಂಪ್ರದಾಯವಾಗಿ ಬರಲಿಲ್ಲ. ಮನುಷ್ಯರನ್ನೇ ಮನುಷ್ಯರನ್ನಾಗಿ ನೋಡದೆ, ಪಶುವಿಗಿಂತಲೂ ಕೀಳಾಗಿ ನೋಡುತ್ತ ಪ್ರಸ್ತುತ ಹಿಂದೂ ಸಂಪ್ರದಾಯ ದಲಿತರನ್ನು ಅಮಾನವೀಯವಾಗಿ ನಡೆಸಿಕೊಂಡಿದೆ. ಮೂಲನಿವಾಸಿಗಳೇ ಆದ ಈ ಜನರ ದೇವರು, ಧರ್ಮ, ಸಾಮರ್ಥ್ಯಗಳನ್ನೆಲ್ಲ ದೋಚಿಕೊಂಡು ಬಾಯಲ್ಲಿ "ಅಹಿಂಸಾ ಪರಮೋ ಧರ್ಮಃ" ಎಂದು ಬೊಬ್ಬೆ ಹಾಕುತ್ತ ದಲಿತನ ರಕ್ತ ಹೀರಿ ಸಂಪ್ರದಾಯ ನಡೆದುಬಂದಿದೆ. ಇಂದು ರಾಜ್ಯಘಟನೆ ನೀಡಿದ ಸೌಲಭ್ಯದಿಂದ ಸಿಕ್ಕುವ ಸೌಲತ್ತನ್ನು ಅನುಭೋಗಿಸಬಹುದೆಂಬ ಮೇಲ್ಜಾತಿಯವರ ಹೊಟ್ಟೆಯುರಿಯೇ ದೇಶದಲ್ಲಿ ಹರಿಜನರ ಮೇಲೆ ಅಮಿತ ದೌರ್ಜನ್ಯ ನಡೆಸುತ್ತಿದೆ. ಇದು ಸಂಪ್ರದಾಯ. ಇದು ಸನಾತನ ಸಂಪ್ರದಾಯ. ಈ ಮಾನವೀಯ ಗುಣ ಉಳ್ಳವರು ಮಾನವೀಯ ಸಂಬಂಧಕ್ಕಾಗಿ ಮನಸ್ಸು ತೆರೆದವರು ನೋಡಿಕೊಳ್ಳಬೇಕು. ತಮ್ಮ ತಮ್ಮ ಅಂತಃ ಸಾಕ್ಷಿ ತೆರೆದು ದಲಿತನ ಶೋಷಣೆಗೆ ಸಮಾಜದ ಎಲ್ಲ ಸೌಲಭ್ಯವನ್ನು ಉಣ್ಣುತ್ತ ಬಂದ, ತಾವು ಎಷ್ಟು ಕರ್ಮಚಂಡಾಲರು ಎಂದು ಈಗ ನೋಡಿಕೊಳ್ಳಬೇಕು. ದಲಿತನಿಗಾಗಿ, ಆತನ ಮಾನವೀಯ ಹೋರಾಟಕ್ಕಾಗಿ ತಾವೇನು ಮಾಡಬೇಕೆಂಬುದನ್ನು ಈಗ ನೋಡಿಕೊಳ್ಳಬೇಕು. ಸರಕಾರ ಪ್ರಜಾಪ್ರಭುತ್ವದ ಸಮ್ಮತವಾದ ಸಮಾನತೆಯ ಹಾದಿಯಲ್ಲಿ ದಲಿತನು ತೀವ್ರವಾಗಿ ಕ್ರಮಿಸುವ ಕಾರ್ಯಯೋಜನೆಯನ್ನು ಹಾಕಿಕೊಳ್ಳಬೇಕು. ಈಗ ಭಾರತದ ಕೋಟಿ ಜನತೆ ಸತ್ತ ಸಂಪ್ರದಾಯವನ್ನು ಸುಟ್ಟುಹಾಕಿ ವೈಜ್ಞಾನಿಕವಾದ ಮತ್ತು ಮಾನವೀಯತೆಯ ಪ್ರೀತಿ ಪುರಸ್ಸರವಾದ ಹೊಸ ಸಂಪ್ರದಾಯಕ್ಕೆ ಹುಟ್ಟುಹಾಕುವ ಹೊಸ ಮನೋಭಾವವನ್ನು ತೋರಬೇಕು. ಈಗ ಈ ಮಠದವರನ್ನು ಮನ್ನಿಸುವ, ಗುರುವಿಗೆ ಗುಲಾಮವಾಗುವ ಆತ್ಮಹೀನ ನಡತೆಯನ್ನು ಧಿಕ್ಕರಿಸಿ, ಅವರ ಮೇಲೆ ಮುತ್ತಿನ ಸೇಸೆಯನ್ನು ತೋರುವ ರೀತಿಯನ್ನು ಬಿಟ್ಟು ಬೆಂಕಿ-ಕೆಂಡವನ್ನು ತೋರುವ ಸಂಘಟನೆಯನ್ನು ದಲಿತ ಅರಸಿಕೊಳ್ಳಬೇಕು. ಅಂದರೆ ಅವನು ನಿಜವಾಗಿಯೂ ಸಂಪ್ರದಾಯಕ್ಕೆ ಜವಾಬ್ದಾರನಾಗಿ ಉತ್ತರಿಸುತ್ತಾನೆ.

*

ವಿಶ್ವವಿದ್ಯಾಲಯಗಳಲ್ಲಿ ಜ್ಯೋತಿಷ್ಯ ಶಾಸ್ತ್ರ

ಈಗ ಎಲ್ಲ ಪತ್ರಿಕೆಗಳಲ್ಲೂ ಸುದ್ದಿ. ಜ್ಯೋತಿಷ್ಯ ಶಾಸ್ತ್ರವನ್ನು ವಿಶ್ವವಿದ್ಯಾನಿಲಯಗಳಲ್ಲಿ ಪದವಿ ಪರೀಕ್ಷೆಗೆ ಹಚ್ಚಲಾಗುವುದು. ಹಾಗೆಯೇ ವೈದಿಕ ಕರ್ಮಕಾಂಡಗಳನ್ನು ಡಿಪ್ಲೋಮಾ ಅರ್ಹತೆಗೆ ಅನುಗೊಳಿಸಲಾಗುವುದು.

ವಿಶ್ವವಿದ್ಯಾನಿಲಯಗಳು ದೇಶದ ಮಿದುಳು ಇದ್ದ ಹಾಗೆ. ದೇಶಕ್ಕೆ ಅತ್ಯುನ್ನತವಾದ ಶಿಕ್ಷಣವನ್ನು ಒದಗಿಸುವ ಕ್ಷೇತ್ರ. ಅದು ದೇಶದ ಯುವಪೀಳಿಗೆಯನ್ನು ದೇಶದ ಉಪಯುಕ್ತ, ಅಭಿವೃದ್ಧಿಪರ, ವೈಚಾರಿಕ ಸಂಪನ್ಮೂಲಗಳನ್ನಾಗಿಸುವ ವಿದ್ಯಾಕೇಂದ್ರ ಆಗಬೇಕಾದುದು. ವೈಚಾರಿಕತೆ, ಪ್ರಯೋಗಶೀಲತೆ, ಪರಿಶ್ರಮ; ಪ್ರಾಮಾಣಿಕತೆಯೇ ಮೊದಲಾದ ಗುಣಗಳಿಗೆ ವೇಗವರ್ಧಕವಾಗಬೇಕು. ಕೇವಲ ಭಾವನೆ ನಂಬಿಕೆಗಳ ಬಲವನ್ನು ಮಾತ್ರ ಹೊಂದಿದ, ವೈಜ್ಞಾನಿಕವಲ್ಲದ ಜ್ಯೋತಿಷ್ಯವನ್ನು ಮತ್ತು ಧಾರ್ಮಿಕ ಕರ್ಮಕಾಂಡವನ್ನು ವಿಶ್ವವಿದ್ಯಾನಿಲಯದ ಪದವಿ, ಡಿಪ್ಲೋಮೊಗಳಿಗೆ ಹಚ್ಚಬಾರದು ಎಂಬುದು ನನ್ನ ಮತ್ತು ನನ್ನಂಥವರ ಅಭಿಮತವಾಗಿದೆ. ವೈಜ್ಞಾನಿಕ ಮನೋಭಾವವನ್ನು ಬೆಳೆಸಬೇಕೆಂಬ ನಿರ್ದೇಶನ ಕೊಡುವ ನಮ್ಮ ಸಂವಿಧಾನದ ಆಶಯಕ್ಕೆ ಇದು ವಿರುದ್ಧವಾದುದು. ಎಂತಲೇ ನಮ್ಮ ಸಂವಿಧಾನ ಅಸ್ಪೃಶ್ಯತೆಯನ್ನು ನಿರ್ಬಂಧಿಸಿದೆ. ಆದರೆ ಅವರವರ ಧಾರ್ಮಿಕ ಹಕ್ಕುಗಳನ್ನೇನೂ ನಿರ್ಬಂಧಿಸಿಲ್ಲ. ಆದರೆ ಈ ಮೇಲಿನ ವಿಷಯಗಳು ಧರ್ಮದ ಸೆರಗನ್ನು ಹೊಕ್ಕಿ ಆಶ್ರಯ ಪಡೆದ ಮೂಢನಂಬಿಕೆಗಳು. ಖಗೋಲ ವಿಜ್ಞಾನ, ಬೇರೆ ಮತ್ತು ಫಲಜ್ಯೋತಿಷ್ಯ ಬೇರೆ. ಖಗೋಲ ವಿಜ್ಞಾನಕ್ಕೆ ಅಸ್ಟ್ರೊನೊಮಿ ಎಂದರೆ ಜ್ಯೋತಿಷ್ಯಕ್ಕೆ ಅಸ್ಟ್ರೋಲಾಜಿ ಎನ್ನುತ್ತಾರೆ. ಇಂದು ಖಗೋಲ ವಿಜ್ಞಾನದ ಅಭಿವೃದ್ಧಿ ನಮ್ಮನ್ನು ಆಶ್ಚರ್ಯಗೊಳಿಸುತ್ತದೆ. ಅದನ್ನು ಯಾರೂ ನಿರಾಕರಿಸುವಂತಿಲ್ಲ. ಅದಕ್ಕೂ ಗಣಿತಕ್ಕೂ ಸಂಬಂಧವಿದೆ. ನಮ್ಮ ಪ್ರಾಚೀನ ಖಗೋಲಶಾಸ್ತ್ರಜ್ಞರು, ಗಣಿತಜ್ಞರು ಆ ಕ್ಷೇತ್ರಕ್ಕೆ ಕೊಟ್ಟ ಕೊಡುಗೆ ಅಮೂಲ್ಯವಾದುದು. ಖಗೋಳ ವಿಜ್ಞಾನವು ಜ್ಯೋತಿಷ್ಯ ಎಂದೂ ಆಗ ಕರೆಯಲ್ಪಡುತ್ತಿತ್ತು. ಅಂಥ ಸಂಗತಿಯನ್ನು ಛಾಂದೋಗ್ಯಉಪನಿಷತ್ತಿನಲ್ಲಿ ಕಾಣಬಹುದೆಂದು ವಿದ್ವಾಂಸರು ಹೇಳುತ್ತಾರೆ. ಇದು ಉಪನಿಷತ್ ಕಾಲಕ್ಕಿಂತ ಹಿಂದಿನಿಂದಲೇ ವೇದಕಾಲದಿಂದಲೇ ಬೆಳೆದು ಬಂದುದು ಎಂಬುದು ತಿಳಿಯದೇ ಇರದು. ಅದೇನೇ ಇರಲಿ, ಮುಂದೆ ಅದು ಖಗೋಳ ವಿಜ್ಞಾನವಾಗಿ ಬೆಳೆಯಲಿಕ್ಕೆ ಬದಲಾಗಿ ಫಲಜ್ಯೋತಿಷ್ಯವಾಗಿ ಬೆಳೆಯಿತು. ಗ್ರಹಣ ಕಾಲವನ್ನು ನಿಖರವಾಗಿ ಹೇಳುವವರೆಗೆ ಅದಕ್ಕೆ ಗಣಿತ ಮತ್ತು ನಿರೀಕ್ಷಣೆಯ ಸಹಾಯ ಇದ್ದಿತಾದರೂ ಮುಂದೆ ಅದು ವಿಜ್ಞಾನವಾಗಿ ಬೆಳವಣಿಗೆಯಿಲ್ಲದ ಸ್ಥಿರ ಶಾಸ್ತ್ರವಾಗಿ ಬಿಟ್ಟಿತು. ಇಂಥ ಬೆಳವಣಿಗೆಯನ್ನು

ಗಮನಿಸಿಯೇ ವೈದಿಕಕ್ಕೆ ವಿರೋಧವನ್ನು ಒಡ್ಡಿದ ಬುದ್ಧ ಜ್ಯೋತಿಷ್ಯವನ್ನು ಕೀಳುಮಟ್ಟದ ವಿದ್ಯೆ ಎಂದು ಹೇಳಬೇಕಾಯಿತು.

ನಾವು ನಮ್ಮ ಪರಂಪರೆಯನ್ನು ಗುರುತಿಸುವಾಗ ಯಾವುದು ಗೌರವಾರ್ಹ ವಾದುದು; ಯಾವುದು ತಿರಸ್ಕಾರಾರ್ಹವಾದುದು ಎಂದು ಗ್ರಹಿಸಬೇಕು. ಗೌರವಾರ್ಹವಾದುದರ ಬಗ್ಗೆ ಅಭಿಮಾನ ಪಟ್ಟುಕೊಳ್ಳ ಬೇಕು. ತಿರಸ್ಕರಿಸಬೇಕಾದುದರ ಬಗ್ಗೆ ಯಾಕೆ ಹಾಗಾಯಿತು? ಆಗಿನ ಸನ್ನಿವೇಶ ಏನು? ಎಂದೆಲ್ಲ ವಿಶ್ಲೇಷಿಸಬೇಕು. ಯಾರ ಮೇಲೂ ವಿನಾಕಾರಣ ದೋಷರೋಪಣೆ ಸಲ್ಲದು. ಎಲ್ಲ ಸಂಸ್ಕೃತಿಯೂ ಚಲನಶೀಲವಾದುದು. ಖಗೋಳ ವಿಜ್ಞಾನದಲ್ಲಿ ನಮ್ಮ ಪೂರ್ವಿಕರು ಸಾಧಿಸಿದ ಪ್ರಗತಿ ಆಶ್ಚರ್ಯಕರವಾದುದು ಕ್ರಿ.ಶ. ಐದನೇ ಶತಮಾನದ ಆರ್ಯಭಟ ಭೂಮಿಯು ತನ್ನ ಅಕ್ಷದ ಮೇಲೆ ಸುತ್ತುತ್ತದೆ ಎಂದು ಹೇಳಿದ. ಆಕಾಶವು ಸ್ಥಿರ, ಭೂಮಿಯು ತನ್ನ ಭ್ರಮಣದಿಂದಾಗಿ ನಕ್ಷತ್ರಗಳು ಹಾಗೂ ಗ್ರಹಗಳು ಹುಟ್ಟಿದಂತೆ ಮತ್ತು ಮುಳುಗಿದ ಹಾಗೆ ತೋರುತ್ತದೆ ಎಂದು ಹೇಳಿ ನಾವು ನಾವೆಯಲ್ಲಿ ವೇಗವಾಗಿ ಹೋಗುವಾಗ ನಾವು ಸ್ಥಿರವಾಗಿದ್ದು ದಡದ ವಸ್ತುಗಳು ಚಲಿಸದಂತೆ ಕಾಣುತ್ತವಲ್ಲವೇ? ಎಂದು ಕೊಡುವ ಆತನ ಉದಾಹರಣೆ ಇಂದಿಗೂ ಪ್ರಯೋಗದಲ್ಲಿದೆಯಲ್ಲವೆ? ಇದನ್ನು ಪಾಶ್ಚಾತ್ಯರು ಅರಿಯಬೇಕಾದರೆ ಕೋಪರ್ನಿಸ್, ಗೆಲಿಯೋ ಬರುವವರೆಗೆ ಕಾಯಬೇಕಾಯಿತು. ಕಾಮನಬಿಲ್ಲಿನಲ್ಲಿಯ ಬಣ್ಣಗಳ ಬಗ್ಗೆ ವರಾಹಮಿರ ಎಂಥ ವೈಜ್ಞಾನಿಕ ವಿವರಣೆ ಕೊಡುತ್ತಾನೆ ನೋಡಿ. 'ಸೂರ್ಯನ ಕಿರಣಗಳಲ್ಲಿ ಹಲವು ಬಣ್ಣಗಳಿವೆ. ಮೋಡಕವಿದಾಗ ಆ ಕಿರಣಗಳು ಗಾಳಿಯಿಂದ ಹಿಂದಕ್ಕೆ ದೂಡಲ್ಪಡುತ್ತವೆ. ಅದು ಬಿಲ್ಲಿನಾಕಾರದ ಕಾಮನಬಿಲ್ಲಾಗುತ್ತದೆ'. ಇಲ್ಲಿ ಕಿರಣಗಳಲ್ಲಿ ಹಲವು ಬಣ್ಣಗಳಿರುತ್ತವೆ ಎನ್ನುವದು ಮುಖ್ಯ. ಆದರೆ ಈ ವಿಜ್ಞಾನಿ ಕೂಡಲೇ ಎಂಥ ಅವೈಜ್ಞಾನಿಕ ಕೊಡುತ್ತಾನೆ ನೋಡಿ! 'ಪೂರ್ವದಲ್ಲಿ ಕಾಮನಬಿಲ್ಲು ಕಾಣಿಸಿಕೊಂಡರೆ ರಾಜನಿಗೆ ಅನಾರೋಗ್ಯ' ಇತ್ಯಾದಿ ಹಾಗೆಯೇ ಬೇರೊಂದು ಕಡೆ ಅವನೇ ಹೇಳುವ ಮಾತು, ಹೆಂಗಸೊಬ್ಬಳ ಮೇಲ್ತುಟಿಯು ಎತ್ತರದಲ್ಲಿದ್ದು ಅವಳ ಕೂದಲ ತುದಿ ಒರಟಾಗಿದ್ದರೆ ಅವಳು ಜಗಳ ಗಂಟಿಯಾಗುತ್ತಾಳೆ. ಇಂಥ ಅನೇಕ ಉಕ್ತಿಗಳಿವೆ. ಬ್ರಹ್ಮ ಗುಪ್ತನು ದೊಡ್ಡ ಗಣಿತಜ್ಞ. ಅಲ್‌ಬೆರೋನಿ ಬ್ರಹ್ಮಗುಪ್ತನನ್ನು ತಜ್ಞ, ಅಪಾರ ಜ್ಞಾನ, ಪ್ರಬಲವಾದ ಬುದ್ಧಿವಂತಿಕೆಯುಳ್ಳವ ಎಂದು ಹೊಗಳಿದ್ದಾನೆ. ಹಾಗೆಯೇ ಅವನ ಅವೈಜ್ಞಾನಿಕ ಹೇಳಿಕೆಯ ಬಗ್ಗೆ ಸಿಟ್ಟು ಗೊಂಡಿದ್ದಾನೆ. ಕೆಲವು ಜನ ಗ್ರಹಣವು ರಾಹುವಿನಿಂದ ಸಂಭವಿಸುವುದಿಲ್ಲವೆಂದು ಹೇಳುತ್ತಾರೆ. ಆದರೆ ಇದೊಂದು ಮೂರ್ಖತನ. ಏಕೆಂದರೆ ಗ್ರಹಣವು ಸಂಭವಿಸುವುದೇ ರಾಹುವಿನಿಂದ ಮತ್ತು ಪ್ರಪಂಚದ ಬಹುಮಂದಿ ಅದನ್ನೇ ಸಮರ್ಥಿಸಿದ್ದಾರೆ. ಬ್ರಹ್ಮನ ಬಾಯಿಂದ ಬಂದಿರುವ ಭಗವಂತನ ವಾಣಿಯಾದ ವೇದವು ರಾಹುವಿನಿಂದ ಗ್ರಹಣವು ಸಂಭವಿಸುತ್ತದೆಂದು ಹೇಳಿದೆ. ಮನು ಮತ್ತು ಗರ್ಗರಸ್ಮೃತಿ ಸಂಹಿತೆಗಳು ಅದನ್ನೇ ಹೇಳಿದೆ. ರಾಹುವು ಗ್ರಹಣಕ್ಕೆ ಕಾರಣವಲ್ಲದಿದ್ದರೆ ಬ್ರಾಹ್ಮಣರು ಗ್ರಹಣ ಕಾಲದಲ್ಲಿ ಮಾಡುವ ಕ್ರಿಯೆಗಳಿಗೆ ಅರ್ಥವೇ ಇಲ್ಲದಂತಾಗುತ್ತದೆ? (ಭಾರತೀಯ ವಿಜ್ಞಾನದ ಹಾದಿ ಜಿ. ರಾಮಕೃಷ್ಣ ೧೯೯೭ ; ೨೬೦) ಎಂತಲೇ ಕೋಲ್ ಬ್ರೂಕ್ ಎಂಬ ಆಂಗ್ಲ ವಿದ್ವಾಂಸ ಈ ಬ್ರಹ್ಮಗುಪ್ತನನ್ನು ಅಂಧಶ್ರದ್ಧೆಯಿಂದ ಅನುಕರಿಸಿದ ಮುಂದಿನ ಸಿದ್ಧಾಂತಿಗಳು ಪ್ರಗತಿಯ ಮಾರ್ಗವನ್ನು ಬಿಟ್ಟು ಶಾಸ್ತ್ರವನ್ನು ಅಧೋಗತಿಗೆ

ಇಳಿಸಿದರು ಎಂದು ಹೇಳಿದ್ದಾನೆ. ಇದು ಜ್ಯೋತಿಷ್ಯ ಮುಂದೆ ಹಿಡಿದ ದಾರಿಯನ್ನು ತೋರಿಸುತ್ತದೆ. ಇವೆಲ್ಲದರಿಂದ ನಮಗೆ ಗೊತ್ತಾಗುವುದೇನೆಂದರೆ ವಿಜ್ಞಾನದ ಕ್ಷೇತ್ರದಲ್ಲಿ ನಮಗೆ ಶ್ರೀಮಂತವಾದ ಪರಂಪರೆ ಇದೆ ಎನ್ನುವುದು, ಹಾಗೆಯೇ ಅದರಲ್ಲಿ ಅಪಹಾಸ್ಯಕ್ಕೆ ತಕ್ಕಾದ ಅವೈಜ್ಞಾನಿಕ ಸಂಗತಿಗಳೂ ಇವೆ ಎಂಬುದು ಕೂಡ. ಈಗ ನಮ್ಮ ಮುಂದಿರುವ ಆಯ್ಕೆಯೆಂದರೆ ವೈಜ್ಞಾನಿಕವಾದ ಆ ಶ್ರೀಮಂತ ಪರಂಪರೆಯನ್ನು ಎತ್ತಿಹಿಡಿದು ಅವೈಜ್ಞಾನಿಕವಾದ, ಹಾಸ್ಯಾಸ್ಪದವಾದ ಸಂಗತಿಗಳನ್ನು ಗುರುತಿಸಿ ಕೈಬಿಡುವುದೇ ಆಗಿದೆ.

ಆಧುನಿಕ ವಿಜ್ಞಾನಿಗಳ ಅಭಿಪ್ರಾಯ ಕೂಡ ಇದಕ್ಕೆ ಹೊರತಾಗಿಲ್ಲ. ೨೦ನೆಯ ಶತಮಾನದ ೧೮೬ ವಿಜ್ಞಾನಿಗಳು ಒಂದು ಹೇಳಿಕೆ ಹೊರಡಿಸಿದ್ದಾರೆ. ಈ ವಿಜ್ಞಾನಿಗಳಲ್ಲಿ ೧೯ ಜನ ನೋಬಲ್ ಪ್ರಶಸ್ತಿ ಪುರಸ್ಕೃತರು. ಭಾರತದ ಸಂಜಾತ ವಿಜ್ಞಾನಿ ಎಸ್. ಚಂದ್ರಶೇಖರ ಕೂಡ ಸೇರಿದ್ದಾರೆ. ಅವರ ಹೇಳಿಕೆ ಹೀಗಿದೆ. 'ಫಲಜ್ಯೋತಿಷ್ಯಕ್ಕೆ ಇಂದು ಪ್ರಪಂಚದ ಎಲ್ಲ ಕಡೆಗಳಲ್ಲಿ ತೀರ ಅತಿಯಾದ ಪುರಸ್ಕಾರ ಲಭಿಸುತ್ತಿರುವುದನ್ನು ಕಂಡ ವಿವಿಧ ಕ್ಷೇತ್ರದಲ್ಲಿರುವ ವಿಜ್ಞಾನಿಗಳು ಆತಂಕಗೊಂಡಿದ್ದಾರೆ. ಫಲಜ್ಯೋತಿಷಿಗಳು ಖಾಸಗಿಯಾಗಿ ಮತ್ತು ಸಾರ್ವಜನಿಕವಾಗಿ ನುಡಿಯುವ ಭವಿಷ್ಯವನ್ನು' ನೀಡುವ ಸಲಹೆಯನ್ನು ಜನ ಪ್ರಶ್ನೆಗೆ ಒಳಪಡಿಸದೇ ಅಂಗೀಕರಿಸುವುದರ ವಿರುದ್ಧ ನಾವು ಈ ಕೆಳಗೆ ರುಜು ಹಾಕಿರುವ ಖಗೋಳ ವಿಜ್ಞಾನಿಗಳು, ಖಭೌತ ವಿಜ್ಞಾನಿಗಳು ಹಾಗೂ ಇತರ ಕೇತ್ರಗಳಲ್ಲಿಯ ವಿಜ್ಞಾನಿಗಳು ಸಾರ್ವಜನಿಕರಿಗೆ ಎಚ್ಚರಿಕೆ ನೀಡ ಬಯಸುತ್ತೇವೆ. ಫಲಜ್ಯೋತಿಷವನ್ನು ನಂಬಬೇಕೆಂದಿರುವವರು ಅದರ ಸಿದ್ಧಾಂತಗಳಿಗೆ ಯಾವುದೇ ವಿಜ್ಞಾನದ ಅಡಿಪಾಯ ಇಲ್ಲ ಎಂಬುದನ್ನು ಮನಗಾಣಬೇಕು. (ಹೆಚ್ಚಿನ ವಿವರಕ್ಕೆ ಜುಲೈ ೨೦೦೧ರ ಹೊಸತು ಪತ್ರಿಕೆಯ ಜಿ.ಟಿನಾರಾಯಣರಾವ್ ಅವರ ಲೇಖನ ನೋಡಿ) ಮಂಗಳೂರಿನ ವಿಚಾರ ವೇದಿಕೆಯ ಕಾರ್ಯದರ್ಶಿ, ನರೇಂದ್ರ ನಾಯಕ, (ವಿಜ್ಞಾನಿ) ಫಲಜ್ಯೋತಿಷಿಗಳಿಗೆ ಈ ಕೆಳಗಿನ ಸವಾಲು ನೀಡಿದ್ದಾರೆ. ಅದು ಹೀಗಿದೆ. 'ಕೊಟ್ಟ ಹತ್ತು ಜನ್ಮ ದಿನಾಂಕ, ಸ್ಥಳ ಮತ್ತು ಸಮಯವನ್ನು ಉಪಯೋಗಿಸಿ ಜಾತಕವನ್ನು ರಚಿಸಿ, ಯಾರು ಗಂಡು, ಯಾರು ಹೆಣ್ಣು, ಯಾರು ಬದುಕಿದ್ದಾರೆ, ಯಾರು ಸತ್ತಿದ್ದಾರೆಂದು ಶೇ ೯೫ ನಿಖರತೆಯ ಮಿತಿಯಲ್ಲಿ ಫಲಜ್ಯೋತಿಷ್ಯದ ಸೂತ್ರಗಳಂತೆ ತಿಳಿಸಿದವರಿಗೆ ಐವತ್ತು ಸಾವಿರ ರೂಪಾಯಿ ನೀಡಲಾಗುವುದು.' ಈ ಸವಾಲನ್ನು ೧೯೮೯ನೇ ಇಸ್ವಿಯಲ್ಲೇ ನೀಡಲಾಗಿದೆ. ಆದರೆ ಯಾರೂ ಈ ಆಹ್ವಾನವನ್ನು ಸ್ವೀಕರಿಸಲಿಲ್ಲ. ಇನ್ನು ಜಾತಕಗಳ ಸಾಮಾಜಿಕ ದುಷ್ಪರಿಣಾಮವನ್ನು ನೋಡುವ. ಇದರ ಸೂತ್ರ ಸ್ಥಿರವಾದುದು; ಮುಂದೆ ಆಚಂದ್ರಾರ್ಕ ಸತ್ಯವಾಗಿರುತ್ತದೆ ಎಂಬುದು ಮೊದಲ ಅಂಶ. ಇದು ಮನುಷ್ಯರ ಸ್ವಂತ ಪ್ರಯತ್ನವನ್ನೇ ಅಲ್ಲಗಳೆಯುತ್ತದೆ. ಇದನ್ನು ವಿದ್ಯಾರ್ಥಿಗಳ ಕೈಗೆ ಕೊಟ್ಟರಂತೂ ವಿದ್ಯಾರ್ಥಿಗಳ ಆತ್ಮಹತ್ಯೆಯ ಪ್ರಕರಣವೇ ಹೆಚ್ಚಾದೀತು. ಹಾಗೆಯೇ ಭವಿಷ್ಯವನ್ನೇ ಬದಲಿಸಿ ಸೌಭಾಗ್ಯವನ್ನು ತರುವೆವೆಂದು ನಂಬಿಸುವ ಪಂಡಿತರ ಖಜಾನೆ ತುಂಬಿಕೊಳ್ಳಬಹುದು. ನಮ್ಮ ನಾಡಿನ ಪ್ರಸಿದ್ಧ ವಿಜ್ಞಾನಿಗಳು ಭೂಪ್ರಳಯವಾಗುತ್ತದೆಂದು ಹೇಳಿದ ಭವಿಷ್ಯ ಎತಹು ಸಂದರ್ಭದಲ್ಲೂ ಸುಳ್ಳಾದ ಉದಾಹರಣೆ ನಮ್ಮೆದುರಿಗೇ ಇದೆ. ಇದರಲ್ಲಿ ಅತ್ಯಂತ ಅಮಾನುಷವಾದ ಸಂಗತಿಯೆಂದರೆ ಇದು ಕರ್ಮ ಸಿದ್ಧಾಂತವನ್ನು ಮನ್ನಿಸುತ್ತದೆ.

ಹಸ್ತ ಸಾಮುದ್ರಿಕ ಕೂಡ ಇದನ್ನೇ ಹಿಂಬಾಲಿಸುತ್ತದೆ. ಕರ್ಮಸಿದ್ಧಾಂತ ಮಾಡುವ ಪರಿಣಾಮ ಭೀಕರವಾದುದು. ಅದು ಒಂದು ಕಡೆ ಕೆಳಜಾತಿಗಳ, ಬಡವರ, ಕಾರ್ಮಿಕರ, ಮಹಿಳೆಯರ, ಕುರೂಪಿಗಳ, ಅಂಗವಿಕಲರುಗಳ ಜೀವಶಕ್ತಿಯನ್ನು ಹಿಂಡಿ ಬಿಡುತ್ತದೆ. ತಮ್ಮ ಸೌಭಾಗ್ಯದ ವಿರುದ್ಧ ಅಂತೆ ತಮ್ಮ ಮೇಲಾಗುತ್ತಿರುವ ಶೋಷಣೆಯ ವಿರುದ್ಧ ಹೋರಾಡುವ ಕೆಚ್ಚನ್ನು ನಾಶ ಮಾಡುತ್ತದೆ. ನನ್ನ ಇಂದಿನ ಸ್ಥಿತಿಗೆ ನನ್ನ ಹಿಂದಿನ ಜನ್ಮದ ಪಾಪವೇ ಕಾರಣ ಎಂದು ಅದು ಸಾವಿರಾರು ವರ್ಷಗಳಿಂದ ನಂಬಿಸುತ್ತ ಬಂದಿದೆ. ಶೋಷಕರಿಗೆ ಅದೇ ಬೇಕಾಗಿದೆ. ಇದರ ಹಿಂದೆ ಬಂಡವಾಳಶಾಹಿಗಳ, ರಾಜಕೀಯ ಪ್ರಭುಗಳ. ಪುರೋಹಿತರ ಕೈವಾಡವಿದೆ. ಸಮಾಜದಲ್ಲಿ ತಮ್ಮಿಂದ ಶೋಷಣೆಗೆ ಒಳಗಾದವರ ಪ್ರತಿಭಟನೆಯನ್ನು ದುರ್ಬಲಗೊಳಿಸಲು ನಾಶ ಮಾಡಲು ಈ ಕರ್ಮಸಿದ್ಧಾಂತ ಪೂರಕವಾಗಿದೆ. ಹಾಗೆಯೇ ಮಹಿಳೆಯರನ್ನು ಸತತವಾಗಿ ಹತ್ತಿಕ್ಕಲಾಗುತ್ತದೆ. ಹಸ್ತಸಾಮುದ್ರಿಕದ ಉದಾಹರಣೆಯೊಂದನ್ನು ಕೊಡುವುದಾದರೆ ಅವರು ಮಹಿಳೆಯರ ಎಡಗೈ ಹಸ್ತವನ್ನು ಲೆಕ್ಕಕ್ಕೆ ಹಿಡಿಯುತ್ತಾರೆ 'ಎಡ' ಎನ್ನುವದರ ಹಿಂದೆ ದುರ್ಬಲ; ಗಂಡು ಬಲ, ಹೆಣ್ಣು ಎಡ ಎಂಬ ಮನೋವಿಜ್ಞಾನದ ಆಯಾಮ ಕೆಲಸ ಮಾಡುತ್ತದೆ. ವಿಶ್ವವಿದ್ಯಾಲಯಗಳ ಪದವಿ ಅಥವಾ ಡಿಪ್ಲೋಮಾಕ್ಕೆ ಕರ್ಮಕಾಂಡವನ್ನು ನಿರ್ಧರಿಸಲು ಮತ್ತೊಂದು ಒಳ ಒತ್ತಾಯವಿದೆ. ಈ ಕರ್ಮಕಾಂಡವೇ, ಅದು ಯಾವುದೇ ಧರ್ಮದ್ದಿರಲಿ, ನಂಬಿಗೆಯ ಮೇಲೆ ನಿಂತಿರುವಂತಹದು. ಆದರೂ ಅವರವರ ಮನಸ್ಸಿಗೆ ಅದನ್ನು ಬಿಡಲಾಗಿದೆ. ಆದರೆ ಈಗ ಅದಕ್ಕೆ ವಿಶ್ವವಿದ್ಯಾಲಯದ ಸ್ಥಾನಮಾನ ದೊರಕಿಸುವುದರ ಮೂಲಕ ಅದು ಭಾರತೀಯ ಸಂಸ್ಕೃತಿಯ ಏಕಮೇವ ಲಕ್ಷಣವಾಗಲಿದೆ.

ಇಲ್ಲಿ ಉದ್ದೇಶಿಸಿದ ಕರ್ಮಕಾಂಡವಾದರೂ ಯಾವುದು? ಅದು ವೈದಿಕ ಕರ್ಮಕಾಂಡವಾಗಿದೆ. ಹಾಗಾದರೆ ಭಾರತದಲ್ಲಿ ವೈದಿಕ ಮಾತ್ರವೇ? ಜೈನ, ಬೌದ್ಧ, ಶೀಖ್, ಕ್ರಿಶ್ಚಿನ್ನ, ಮುಸ್ಲಿಂ ಮೊದಲಾದವುಗಳಿಗೆ ಸಂಬಂಧಿಸಿದ ಕರ್ಮಕಾಂಡಗಳೂ ಇವೆಯಲ್ಲಿವೇ? ಮೊದಲು ವೈದಿಕವನ್ನು ವಿಶ್ವವಿದ್ಯಾಲಯಕ್ಕೆ ಏರಿಸಿದೊಡನೆ ಇತರ ಧರ್ಮಿಯರೂ ಸಹ ಒತ್ತಾಯಿಸುತ್ತಾರೆ. ಸರ್ವೋಚ್ಚ ನ್ಯಾಯಲಯಕ್ಕೆ ಹೋಗುತ್ತಾರೆ. ಅದು ನ್ಯಾಯವೂ ಹೌದು. ಅದನ್ನು ಅಲ್ಲಗಳೆದರೂ ಹಿಂದುಗಳಲ್ಲೇ ಅನೇಕ ಜಾತಿ, ಪಂಗಡ, ಬುಡಕಟ್ಟುಗಳಲ್ಲಿ ಹುಟ್ಟಿದ, ಸತ್ತ, ಮದುವೆಯ, ಹಾಗೆಯೇ ಬೇರೆ ಬೇರೆ ಆಚರಣೆ ಆರಾಧನೆಗಳಿವೆ. ಆದರೆ ಅವೆಲ್ಲಕ್ಕೂ ಬೇರೆ ಬೇರೆಯದೇ ಡಿಗ್ರಿ ಡಿಪ್ಲೋಮಾ ಮಾಡಿ ಪುರೋಹಿತಶಾಹಿಯನ್ನು ಹಬ್ಬಿಸಲಾಗುತ್ತದೆಯೇ? ಆದರೆ ಅದಕ್ಕಿಂತ ಇಲ್ಲಿರುವ ರಹಸ್ಯವೆಂದರೆ ಭಾರತದಲ್ಲಿ ವೈವಿಧ್ಯಮಯವಾದ ಸಂಸ್ಕೃತಿಯ ಇರುವಿಕೆಯನ್ನು ಅಲ್ಲಗಳೆದು ನಾಶ ಮಾಡಿ ವೈದಿಕ ಮಾತ್ರ ಅಧಿಕೃತವನ್ನಾಗಿ ಮಾಡುವದು ಹಾಗೂ ಸಂಸ್ಕೃತೀಕರಣದ ಆಯಾಮದಲ್ಲಿ ಉಳಿದವರೂ ಇದನ್ನು ಸ್ವೀಕರಿಸುವ ಮಾನಸಿಕ ಒತ್ತಡ ಹೇರುವುದಾಗಿದೆ. ಇದು ಹಿಂದುತ್ವ ವಾದಿಗಳ ಮರ್ಮ ರಹಸ್ಯವಾಗಿದ್ದು ಬಿಜೆಪಿಯ ಹಿಡನ್ ಅಜೆಂಡಾ ಆಗಿದೆ. ಸಂಘ ಪರಿವಾರದವರ ರಾಜಕೀಯ ಮುಖವಾಡವೇ ಬಿ.ಜೆ.ಪಿ. ಎನ್ನುವುದು ಈಗ ರಹಸ್ಯವಾದ ಸಂಗತಿಯೇನೂ ಅಲ್ಲ. ಹಿಂದು, ಹಿಂದುತ್ವ, ಬ್ರಾಹ್ಮಣ, ಬ್ರಾಹ್ಮಣ್ಯ ಇತ್ಯಾದಿ ಪದಗಳನ್ನು ಬಳಸಿದೊಡನೆ ಅದರ ಹಿಂದಿರುವ ಅರ್ಥಕ್ಕೆ ಸ್ವಾರ್ಥದ

ರೂಪವನ್ನು ಕೊಡಲಾಗುತ್ತದೆ. ಹಿಂದೂ=ಬ್ರಾಹ್ಮಣ, ಬಿ.ಜೆ.ಪಿ=ಬ್ರಾಹ್ಮಣ, ಹಿಂದೂ ಧರ್ಮ, ಹಿಂದೂಗಳೆಲ್ಲಾ ಒಂದು, ಇಂತೆಲ್ಲ ಸಮೀಕರಣ ಮಾಡಿ ಇಡೀ ಬ್ರಾಹ್ಮಣ ಸಮೂಹವನ್ನೇ ಇವರು ಹೇಳಿದ್ದೇ ಹೌದು ಎಂಬ ಸಮ್ಮೋಹನದಲ್ಲಿ ಕೆಡುಹಲಾಗುತ್ತದೆ. ಇದಕ್ಕೆ ವಿರುದ್ಧ ಹೇಳಿದರೂ ಹಿಂದೂ-ಬ್ರಾಹ್ಮಣ ವಿರೋಧಿ ಎಂದು ಬಿಂಬಿಸಲಾಗುತ್ತದೆ. ಯಾಕೆಂದರೆ ಮೂಲಭೂತವಾದಿ ಮತ್ತು ಕೋಮುವಾದಿಗಳಿಗೆ ಇದು ಬಹಳ ಮುಖ್ಯವಾಗಿದೆ. ಹಿಂದು ಧರ್ಮವನ್ನೋ ಬ್ರಾಹ್ಮಣ್ಯದ ಆಚರಣೆಯನ್ನೋ ಅನುಸರಿಸುವರೆಲ್ಲ ಅಥವಾ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದವರೆಲ್ಲ ಮತಾಂಧರು, ಮೂಲಭೂತವಾದಿಗಳು ಎಂದು ತಿಳಿಯುವುದು ಮೂರ್ಖತನ. ತನ್ನ ನಂಬಿಗೆಯಂತೆ ಅವರು ಬಾಳಿಯೂ ಉಳಿದವರಿಗೂ ಹಾಗೆ ಇರಗೊಡುವ ಮತ್ತು ಇತರರ ಬಗ್ಗೆ ಕರುಣಾಳುಗಳಾಗಿರುವ ಅನೇಕರು ಬ್ರಾಹ್ಮಣರಲ್ಲೂ ಶೂದ್ರರಲ್ಲೂ ಇದ್ದೇ ಇದ್ದಾರೆ. ಆದ್ದರಿಂದ ಇಲ್ಲಿ ಅಂಥ ಹಿಂದು=ಬ್ರಾಹ್ಮಣ ಜಾತಿ ಇತ್ಯಾದಿ ಸಮೀಕರಣಗಳಿಗೆ ಇಂಬಿಲ್ಲ ಎನ್ನುವುದನ್ನು ಹೇಳಬೇಕಾಗುತ್ತದೆ. ಇಲ್ಲಿಯ ಯೋಚನೆ, ಜನಾಂಗೀಯ ದ್ವೇಷ, ಮಹಿಳೆಯರ ಅಸಮಾನತೆ, ಬಡವರ ಸುಲಿಗೆ ಒಟ್ಟಾಗಿ ಮಾನವೀಯತೆಗೆ ವಿರೋಧಿ ಇದ್ದವರ ವಿರುದ್ಧವಿದೆಯೇ ಹೊರತು ಯಾವುದೇ ಧರ್ಮ ಜಾತಿಯ ಬಗ್ಗೆ ಅಲ್ಲ. ಆದರೆ ಸಂಘ ಪರಿವಾರ ಮತ್ತು ಅದರ ರಾಜಕೀಯ ಮುಖವಾಣಿಯಾದ ಬಿ.ಜೆ.ಪಿ ಹುನ್ನಾರು ಅತ್ಯಂತ ಆಳವಾದುದು ಮತ್ತು ಅಮಾನವೀಯವಾದುದು. ಇದನ್ನು ಅರಿಯ ಬೇಕಾದರೆ ಇವರ ಕಾರ್ಯಕ್ರಮವನ್ನೂ ಚರಿತ್ರೆಯನ್ನು ಅರಿಯಬೇಕಾಗುತ್ತದೆ.

ಈಗ ಆರ್.ಎಸ್.ಎಸ್., ವಿ.ಹಿಂ.ಪ, (ವಿಎಚ್‌ಪಿ) ಮೊದಲಾದವುಗಳ ಕಾರ್ಯ ವಿಸ್ತಾರ ಹಳ್ಳಿಗಳಿಗೂ ವ್ಯಾಪಿಸಿದೆ. ಹಳ್ಳಿ ಹಳ್ಳಿಗಳಲ್ಲಿ ಇದರ ಶಾಖೆ ತೆರೆಯಲಾಗಿದೆ. ಅಲ್ಲಿ ವಿದ್ಯಾರ್ಥಿಗಳಿಗೆ 'ಕ್ಲಾಸ್' ನಡೆಸಲಾಗುತ್ತದೆ. ಇತಿಹಾಸದ ತಿರುಚಿದ ಪಾಠದ ಮುಖಾಂತರ ಜನಾಂಗೀಯ ದ್ವೇಷವನ್ನು ಬೆಳೆಸಲಾಗುತ್ತದೆ. ಆದರೆ ಇದು ಯಾರಿಗೂ ತಿಳಿಯದ ಮಾರ್ಗವಾಗಿರುತ್ತದೆ. ಕೆಳಹಂತದಲ್ಲಿ ಈ ರೀತಿ ಮಾಡಿದರೆ ಶಿಕ್ಷಣ ಕ್ಷೇತ್ರದ ಮೇಲು ಹಂತದಲ್ಲಿ ಬೇರೆಯೇ ಇದೆ. ಕೇಂದ್ರಿಯ ಇತಿಹಾಸ ಸಂಶೋಧನಾ ಸಂಸ್ಥೆಯಲ್ಲಿ ಸೆಕ್ಯುಲರ್, ವೈಜ್ಞಾನಿಕ ಮನೋಭಾವದವರಾದ ಡಾ. ರೋಮಿಲಾಥಾಪರ್, ಬಿಪಿನಚಂದ್ರ, ಆರ್.ಎಸ್. ಶರ್ಮ , ಇರ್ಫಾನ್‌ಹಬೀಬ್ ಮೊದಲಾದ ಇತಿಹಾಸ ತಜ್ಞರನ್ನು ತೆಗೆದು ಬಿ.ಜೆ.ಪಿ ಬೆಂಬಲಿಗರನ್ನು ತುಂಬಲಾಗುತ್ತದೆ. ಕೇಂದ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಕೇಂದ್ರದಲ್ಲೀಗ ಹತ್ತು ವರ್ಷ ಕಾಲ ಆರ್.ಎಸ್.ಎಸ್.ದ ಸ್ವಯಂ ಸೇವಕನಾದ ರೊಸ್ತೋವಿ ಎಂಬುವರನ್ನು ನೇಮಿಸಲಾಗಿದೆ. ಇವೆಲ್ಲದರ ಪರಿಣಾಮವೆಂದರೆ ಪಠ್ಯ ಪುಸ್ತಕದಲ್ಲೇ ಹಿಂದುತ್ವವನ್ನು ತುಂಬುವುದು. ಸುಳ್ಳು ಚರಿತ್ರೆಯನ್ನು ತುಂಬಿ ಹಿಂದೂ ಮತಾಂಧತೆಯನ್ನು ಬೆಳೆಸುವದು, ಬಾಲ್ಯದಿಂದಲೇ ಮುಸ್ಲಿಂ, ಕ್ರಿಶ್ಚನ್ ದ್ವೇಷವನ್ನು ಬೆಳೆಸುವದು. ಇನ್ನೊಂದು ಕಡೆ ಸಂಸ್ಕೃತ ಕಲಿತವನೇ ಸುಸಂಸ್ಕೃತ ಎಂಬ ಭ್ರಮೆ ಹುಟ್ಟಿಸಿ ಬ್ರಾಹ್ಮಣ ಮೇಲ್ಮೆಯನ್ನು ಕಾಪಾಡುವುದು, ಇದರಿಂದ ಆರ್.ಎಸ್.ಎಸ್‌ನ ಕೆಲಸ ಸುಲಭವಾಗುತ್ತದೆ. ಹಾಗಂತ ಇವೆಲ್ಲ ಇಂದೆ ನಾಳೆಯೇ ಫಲ ಕೊಡುವ ಬೀಜವೇನೂ ಅಲ್ಲ.

ಅದಕ್ಕೆ ನೂರಾರು ವರ್ಷಗಳೇ ಬೇಕಾದೀತು. ಅದು ದೂರದ, ಆದರೆ ನಿಶ್ಚಯದ ಗುರಿ. ಇದು ದುರದೃಷ್ಟಿ ಮತ್ತು ದೂರದೃಷ್ಟಿ ಉಳ್ಳದ್ದು. ಆರ್.ಎಸ್.ಎಸ್. ಹುಟ್ಟಿದ್ದು ಮಹಾರಾಷ್ಟ್ರದಲ್ಲಿ. ಆ ಹುಟ್ಟಿನ ಸಂದರ್ಭದಲ್ಲಿ ಮಹಾರಾಷ್ಟ್ರದ ಚರಿತ್ರೆ ಸಂಘರ್ಷದಿಂದ ತುಂಬಿತ್ತು. ಒಂದು ಕಡೆ ಬ್ರಾಹ್ಮಣ ವಿರೋಧಿ ಚಳವಳಿ, ಇನ್ನೊಂದು ಕಡೆ ದಲಿತ ಚಳವಳಿ, ಮತ್ತೊಂದು ಕಡೆ ಮಹಿಳಾ ಚಳುವಳಿ, ಇನ್ನೊಂದು ಕಡೆ ಶೂದ್ರ ಚಳುವಳಿ. ಆಗ ಆರ್.ಎಸ್.ಎಸ್.ನ ಸಂಸ್ಥಾಪಕರಲ್ಲಿ ಒಬ್ಬರಾದ ಹೆಡ್ಗೆವಾರ ಅವರು "ಕೆಳಜಾತಿಗಳವರು ಮೇಲು ಜಾತಿಗಳ ವಿರುದ್ಧ ತಿರುಗಿ ಬೀಳುವುದನ್ನು ನೋಡಿದರೆ ಮುಸ್ಲಿಂ ವಿಷಸರ್ಪಗಳನ್ನು ಸವರಿ ಹಾಕಲಿಕ್ಕೆ ಕೆಳಜಾತಿಯವರ ಸಹಕಾರ ನಿರೀಕ್ಷಿಸುವ ಹಾಗಿಲ್ಲ. ಈ ಕಾರಣದಿಂದ ನಾವು ಯಾರನ್ನು ನಂಬಿಕೂರದೆ ಸ್ವಂತದ ತಯಾರಿ ಮಾಡಿಕೊಳ್ಳಬೇಕಿದೆ" ಎಂದಿದ್ದರು. ಆದರೆ ಈ ಎಪ್ಪತ್ತೈದು ವರ್ಷಗಳಲ್ಲಿ ಪರಿಸ್ಥಿತಿ ಬದಲಾಗಿದೆ. ಈಗ ಆರ್.ಎಸ್.ಎಸ್. ಅಥವಾ ಹಿಂದುತ್ವ ಎನ್ನುವುದು ಪಟ್ಟಣಗಳಿಗೆ ಮೀಸಲಾಗಿಲ್ಲ. ಅದು ಹಳ್ಳಿಯನ್ನು ವ್ಯಾಪಿಸಿದೆ. ಹಾಗೆಯೇ ಅದು ಶೂದ್ರರಲ್ಲೂ ವ್ಯಾಪಿಸಿದೆ. ಅಂದರೆ ಪ್ರಾರಂಭದಲ್ಲಿ ಕೇವಲ ಬ್ರಾಹ್ಮಣ ಸಂಘಟನೆಯಾದುದು ಇದು. (ಆಗಲೂ ಎಲ್ಲ ಬ್ರಾಹ್ಮಣರೂ ಇದನ್ನು ಸೇರಿರಲಿಲ್ಲ ಎಂಬುದನ್ನು ಮರೆಯಬಾರದು) ಈಗ ಕ್ಲಾಸು, ಶಿಕ್ಷಣ ಪ್ರಚಾರದ ಮೂಲಕ ಇಡಿಯಾಗೇ ಹಿಂದೂ ಸಮಾಜವನ್ನು (ಬ್ರಾಹ್ಮಣ ಮತ್ತು ಶೂದ್ರ ಎರಡನ್ನೂ) ಮುಸ್ಲಿಂ ಕ್ರಿಸ್ತರಂಥ ಅನ್ಯ ಧರ್ಮದವರ ವಿರುದ್ಧ ಸಂಘಟಿಸುತ್ತದೆ. ಪ್ರಾರಂಭದಲ್ಲಿ ಹೇಳಿದ ಹೆಡ್ಗೆವಾರ ಮಾತು ಕೆಳ ಜಾತಿಯವರ ಸಹಕಾರ ನಂಬುವಂತಿಲ್ಲ, ಎಂಬುದು ಈಗ ಬದಲಾಗಿ ಎಲ್ಲರೂ ಹಿಂದುತ್ವದ ತೆಕ್ಕೆಯಲ್ಲಿ ಸಿಕ್ಕಿ ಬೀಳುತ್ತಿದ್ದಾರೆ. ಇದರಿಂದ ಮುಸ್ಲಿಂ, ಕ್ರಿಶ್ಚನ್, ಹಾಗೆಯೇ ಮತಾಂಧತೆಯನ್ನು ಮತ್ತು ಆರ್.ಎಸ್.ಎಸ್. ಅನ್ನು ವಿರೋಧಿಸುವ ಬುದ್ಧಿ ಜೀವಿಗಳು, ಎಂಡಂಥೀಯ ಕವಿ ಕಲಾವಿದರನ್ನು ತರಿದು ಹಾಕಲು ಈ ಶೂದ್ರುರು ಕೂಡ (ಬಾಬ್ರಿ ಮಸೀದಿ ಕೆಡಗುವಲ್ಲಿ ಶೂದ್ರರ ಸಹಾಯ ಸಾಕಷ್ಟು ಇತ್ತಲ್ಲ?) ಸಹಕರಿಸುತ್ತಾರೆ. ಇದರಿಂದ ಅನ್ಯಧರ್ಮಿಯರ ಕೊಲೆ ಹಾಗೆಯೇ ವೈದಿಕ ಸಂಸ್ಕೃತಿಯನ್ನು ಭಾರತದ ಸಂಸ್ಕೃತಿ ಎಂದು ಪ್ರತಿಷ್ಠಾಪಿಸುವದು, ಶೂದ್ರರಲ್ಲಿ, ಹೆಂಗಸರಲ್ಲಿ ಕೀಳರಿಮೆಯನ್ನು ಬೆಳೆಸಿ ವೈದಿಕ ಮತ್ತು ಬ್ರಾಹ್ಮಣ ಮೇಲ್ಮೈಯನ್ನು ಸ್ಥಾಪಿಸುವುದೇ ಅಂತಿಮ ಉದ್ದೇಶವಾಗಿದೆ. ಆದ್ದರಿಂದ ಏನೋ ಒಂದು ಜ್ಯೋತಿಷ (ಹಾರಸ್ಕೋಪ್) ಇತ್ಯಾದಿಗಳ ಪ್ರಶ್ನೆಯಾಗಿಲ್ಲ. ಇವರ ರಹಸ್ಯ ಪಾತಾಳಕ್ಕೆ ಇಳಿದದ್ದು ಸಂಪೂರ್ಣವಾಗಿ ಗತಕಾಲಕ್ಕೆ ತಳ್ಳುವಂತಹದು.

ಜ್ಯೋತಿಷ್ಯವೊ, ಕರ್ಮಕಾಂಡವೊ ವಿಶ್ವ ವಿದ್ಯಾಲಯಗಳಲ್ಲಿ ಬೇಡ ಎಂದ ಮಾತ್ರಕ್ಕೆ ಹಿಂದಿನ ಕಾಲಕ್ಕೆ ಸೇರಿದ ವೈದಿಕ, ಜೈನ ಬೌದ್ಧ, ಇತ್ಯಾದಿ ಸಂಸ್ಕೃತಿಗಳ ಮತ್ತು ಭಾಷೆಗಳ, ತತ್ವಜ್ಞಾನಗಳ ಅಭ್ಯಾಸ ಬೇಡ ಎಂದರ್ಥವಾಗುವುದಿಲ್ಲ. ವಿಶ್ವವಿದ್ಯಾಲಯಗಳಲ್ಲಿ ಸಂಸ್ಕೃತ ಇಂಗ್ಲೀಷ್ ಉರ್ದು, ಕನ್ನಡ, ಇತ್ಯಾದಿ ಭಾಷೆಗಳ ಪ್ರಾಚೀನ, ಆಧುನಿಕ ಸಾಹಿತ್ಯ, ಸಂಸ್ಕೃತಿಗಳ ಅಭ್ಯಾಸ ನಡೆಯುತ್ತದೆ. ಹಾಗೆಯೇ 'ಜಾನಪದ'ದ ಅಭ್ಯಾಸವೂ ನಡೆಯುತ್ತದೆ. ಈ ಎಲ್ಲದರ ಅಭ್ಯಾಸವು ನಮ್ಮ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವ, ನಮ್ಮ ಜ್ಞಾನಗಳನ್ನು ಬೆಳೆಸಿಕೊಳ್ಳುವ ಮತ್ತು ನಾಳೆಯನ್ನು ನಿರೂಪಿಸಿಕೊಳ್ಳುವ ಪ್ರಕ್ರಿಯೆಯ ಆಶಯವನ್ನೇ ಹೊಂದಿದೆ. ಅಂತಹದು

ಜೋತಿಷ್ಯವಾಗಲಿ, ಕರ್ಮಕಾಂಡವಾಗಲಿ ಅಲ್ಲ. ಅದನ್ನು ಅವರವರ ವೈಯಕ್ತಿಕಕ್ಕೆ ಬಿಡುವ. ಇಂಥ ಒಂದು ಮುಖ್ಯ ನಿರ್ಣಯ ತೆಗೆದುಕೊಳ್ಳುವಾಗ ಸರಕಾರ ಯಾರೊಡನೆ ವಿಚಾರ ವಿನಿಮಯ ಮಾಡಿತು? ವಿಜ್ಞಾನಿಗಳ, ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಪರಿಣತರಾದವರ, ಸಂವಿಧಾನ ತಜ್ಞರ ಸಮಾವೇಶವನ್ನು ಕರೆದು ತಿಳಿದುಕೊಂಡಿತೆ? ಏನೂ ಇಲ್ಲ. ಇದಾವುದೂ ಇಲ್ಲದೆ ಏಕಾಏಕಿ ಜ್ಯೋತಿಷ್ಯವನ್ನು ಮತ್ತು ಹಿಂದು ಕರ್ಮಕಾಂಡ (ಅದರಲ್ಲಿ ವೈದಿಕ ಕರ್ಮಕಾಂಡವನ್ನು ಮಾತ್ರ) ಪದವಿ ತರಗತಿಗೆ, ಡಿಪ್ಲೋಮಾಕ್ಕೆ ಹಚ್ಚಲು ಸರಕಾರಕ್ಕೆ ಯಾಕೆ ತರಾತುರಿ ಬಂತು? ಇದ್ದ ವಿಷಯಗಳಿಗೇ ಸಂಪನ್ಮೂಲದ ಕೊರತೆಯಾಗಿ ಶಿಕ್ಷಣವನ್ನು ಡ್ಪೊನೇಶನ್ ಸುಲಿಗೆಗಾನ್‌ರರ ಕೈಗೆ ಒಪ್ಪಿಸುತ್ತಿರುವಾಗ ಅಕ್ಕಿಯಿಲ್ಲದ ಮನೆಯ ಮಕ್ಕಳು ಊಟ ಮಾಡುವುದನ್ನು ಕಲಿತರು ಎಂದ ಹಾಗೆ ಆಗಲಿಲ್ಲವೇ? ಎಂತಲೇ ತಿಳಿಯಬೇಕಾದುದೆಂದರೆ ಇವೆಲ್ಲ ಮೇಲೆ ತಿಳಿಸುವಂತೆ, ತಿಳಿದಂತೆ ಸಾಚಾ ವಿಷಯವಾಗಿಲ್ಲ. ನೀರ ಮೇಲಕ್ಕೊಂದು ಮಡಿ; ಕೆಳಕ್ಕೇಳು ಮಂಜನ ಶಿಖರಿ. ಆ ಕೆಳಕ್ಕಿರುವ ಏಳುಮಡಿ ಬಿ.ಜೆ.ಪಿ.ಯ 'ಹಿಂದುತ್ವದ'ದ ರಾಜಕೀಯ ಮತ್ತು ಬಿ.ಜೆ.ಪಿ.ಯ ಹಿಡನ್‌ಅಜೆಂಡಾ (ಗುಪ್ತ ಕಾರ್ಯಸೂಚಿ)ಯೇ ಆಗಿದೆ.

ಇದು ವಿವೇಚನೆಯ ವಿಷಯ. ಇಲ್ಲಿ ಹಿಂದು, ಬ್ರಾಹ್ಮಣ-ಶೂದ್ರ ಇತ್ಯಾದಿಗಳ ಪಕ್ಷಪಾತವಿಲ್ಲ. ಇದನ್ನು ಶುದ್ಧ ವೈಚಾರಿಕವಾಗೇ ಗ್ರಹಿಸಬೇಕು. ಮತ್ತು ಇಂಥ ಅವೈಜ್ಞಾನಿಕ, ಪ್ರಜಾಪ್ರಭುತ್ವದ ವಿರೋಧಿಯಾದ ಸರಕಾರದ ಕಾರ್ಯಕ್ರಮವನ್ನು ಜನ ಸಂಘಟಿತರಾಗಿ ವಿರೋಧಿಸಬೇಕು. ಈ ಕುರಿತು ಜನರಲ್ಲಿ ಜಾಗೃತಿಯನ್ನು ಮೂಡಿಸಬೇಕು.

(ಕಾರವಾರದಲ್ಲಿ ಎಸ್.ಎಫ್.ಐ. ಆಶ್ರಯದಲ್ಲಿ ಮಂಡಿಸಿದ ಭಾಷಣದ ಪ್ರಬಂಧ ರೂಪವನ್ನು ಹೊನ್ನಾವರದ 'ನಾಗರಿಕ' ವಾರ ಪತ್ರಿಕೆ ದಿ: ೧೦.೯.೨೦೦೧ ಸಂಚಿಕೆಯಲ್ಲಿ ಪ್ರಕಟಿಸಿತು).

*

ಜಾನಪದ ಅಧ್ಯಯನವೂ ಸಾಂಸ್ಕೃತಿಕ ಪುನರುಜ್ಜೀವನವೂ

ಜಾನಪದ ಅಧ್ಯಯನದ ಜೊತೆಗೆ ಸಾಂಸ್ಕೃತಿಕ ಪುನರುಜ್ಜೀವನವನ್ನು ಗಂಟು ಹಾಕಿದಾಗ ಇದೆಂಥ ಅಸಂಬದ್ಧ ಎಂದು ತೋರಬಹುದು. ಆದರೆ ಒಂದು ಬಹುಮುಖ್ಯವಾದ ಅಧ್ಯಾಯ ಸಾಮಾಜಿಕ- ಜನಜೀವನದಲ್ಲಿ ಇದು ತೆರೆಯುತ್ತದೆ ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ.

ಹಾಗಾದರೆ ಪುರನುಜ್ಜೀವನ ಎಂದರೇನು? ಯಾವ ಸಾಂಸ್ಕೃತಿಕ ಪುನರುಜ್ಜೀವನ ಎಂಬ ಪ್ರಶ್ನೆ ಕುತೂಹಲಕಾರಕವಾಗಿದೆ. ನಮ್ಮ ಸ್ವಾತಂತ್ರ ಹೋರಾಟದ ಹೊತ್ತಿಗೆ ನಮ್ಮ ಸಾಂಸ್ಕೃತಿಕ-ಪುನರುಜ್ಜೀವನ ನಡೆಯಿತೆಂಬುದು ಈಗ ಇತಿಹಾಸವಾಗಿದೆ. ಇಂಗ್ಲೀಷರು ವ್ಯಾಪಾರಕ್ಕಾಗಿ ರೈಲು ನಿರ್ಮಿಸಿ ನಾಡನ್ನೆಲ್ಲಾ ವ್ಯಾಪಿಸಿ ನಂತರ ದೇಶದ ಆಡಳಿತವನ್ನು ಅವರೇ ಹಿಡಿದರು. ಇವರ ಸಂಬಂಧಿಯಾಗೇ ಮುಂದುವರಿದ ಪಾಶ್ಚಾತ್ಯ ಮತ್ತು ಭಾರತದ ಕೊಡು ಪಡೆಯಿಂದಾಗಿ ಭಾರತೀಯರ ಆಲೋಚನೆಯ ಮೇಲೆ ಹೊಸ ಪ್ರಭಾವ ಬಲಿಯಿತು. ಮುಖ್ಯವಾಗಿ ಇಡೀ ದೇಶ ಒಂದು ಅಡಳಿತದಲ್ಲಿ ಬಂದುದು. ಇಂಗ್ಲಿಷ್ ಸಾರ್ವತ್ರಿಕ ಶಿಕ್ಷಣ ಇಲ್ಲಿಯ ಸಂಸ್ಕೃತಿಯೆಂಬ ಬಂಡೆಗಳನ್ನು ಒಡೆಯಿತು. ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಮತ್ತು ರಾಜಕೀಯವಾಗಿ ಚಲನಶೀಲತೆ ಪ್ರಾರಂಭವಾಯಿತು. ಇದರ ಅತ್ಯುತ್ತಮ ಪರಿಣಾಮವೆಂದರೆ ದೇಶದ ಸ್ವಾತಂತ್ರ್ಯದ ಕನಸು ಸಾರ್ವತ್ರಿಕವಾಗಿ ಬಲಿತು ಬಂದುದು. ಇಂಗ್ಲಿಷ್‌ರು ಹೇಳಿದ್ದೆಲ್ಲ ಮೊದಲು ಒಪ್ಪಿಕೊಂಡ, ಒಡೆಯನೆಂದು ಪೂಜಿಸಿದ ಇಲ್ಲಿಯ ಜನರಲ್ಲಿ ಸಾವಕಾಶ ಅದರ ವಿರುದ್ಧವೇ ದ್ವೇಷ (ತಿರಸ್ಕಾರ) ಬೆಳೆಯಲಾರಂಭಿಸಿತು. ಆಗಲೇ ಪರಿಚಿತವಾಗಿದ್ದ ಹೇಳಿಕೆ ಭಾರತೀಯರು ಆಳಲ್ಪಡಲು ಯೋಗ್ಯರೇ ಹೊರತು ಆಳಲು ಅಲ್ಲ ಎಂಬುದನ್ನು ಅಲ್ಲಗೆಳೆಯುವಾಗ 'ನಾವು ನಿಮಗಿಂತ ಕಡಿಮೆಯಲ್ಲ' ಎಂದು ಸಾಧಿಸಿ ತೋರಿಸಬೇಕಿತ್ತು. ಆ ದಿಸೆಯಲ್ಲಿ ನಮ್ಮ ತನದ ಶೋಧ ನಡೆಯಿತು. ಈ ಶೋಧದಲ್ಲಿ ಆಳದಲ್ಲಿ ಹೊಳೆದ ಚಿನ್ನದ ಗೆರೆ ಭಾರತೀಯ ಸಂಸ್ಕೃತಿ. ಹಾಗಾದರೆ ಭಾರತೀಯ ಸಂಸ್ಕೃತಿ ಎಂದರೇನು? ವೇದ ಸಂಸ್ಕೃತಿಯೇ ಭಾರತೀಯ ಸಂಸ್ಕೃತಿ. ಮತ್ತು ಇದು ಪಾಶ್ಚಾತ್ಯಕ್ಕಿಂತ (ಜಗತ್ತಿನಲ್ಲೇ) ಶ್ರೇಷ್ಠವಾದ ಸಂಸ್ಕೃತಿ. ಇದು ಇಡೀ ಭಾರತದ ವ್ಯಾಪ್ತಿ ಉಳ್ಳದ್ದು, ಇದು ಅಧಿಕೃತ ದಾಖಲೆ ಹೊಂದಿದೆ. ವೇದವೇ ಅದರ ಆಕರ. ನಂತರ ಉಪನಿಷತ್ತು, ದ್ವೈತ-ಅದ್ವೈತ ಇತ್ಯಾದಿ. ಹೀಗೆ ಒಂದು ಭಾರತೀಯ ಸಂಸ್ಕೃತಿ ಸಿದ್ಧವಾಯಿತು. ಇದರಡಿಯಲ್ಲೇ

ಮರು ಪ್ರಕಟನೆ: ಜಾನಪದ ಗಂಗೋತ್ರೀ ಕರ್ನಾಟಕ-ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು. ೧೯೯೬ ಮಾರ್ಚ್

ಇಡೀ ಭಾರತವನ್ನು ತರುವ ಪ್ರಯತ್ನ ನಡೆಯಿತು. ಆದರೆ ಮುಸ್ಲಿಂ ಸಂಸ್ಕೃತಿಯನ್ನು ಇದರಡಿಯಲ್ಲಿ ತರಲಾಗಲಿಲ್ಲ ಎಂಬುದು ಬೇರೆ ಸಂಗತಿ. ಅಲ್ಲೂ ಕುರಾನ್ ಸಂಸ್ಕೃತಿಯ ಪುನರುಜ್ಜೀವನ ತುಸು ತಡವಾಗಿಯಾದರೂ ನಡೆಯಿತು. ಹೀಗೆ ಪುನರುಜ್ಜೀವನ ನಡೆಯಬೇಕಾದರೆ ಹಾಗೆ ಹೀಗೆ ಬದಲಾವಣೆ, ಹೊಂದಾಣಿಕೆ ನಡೆಯಲೇ ಬೇಕಿತ್ತು, ನಡೆಯಿತು. ಇದರ ಪರಿಣಾಮವನ್ನು ನಾವು ನಮ್ಮ ನವೋದಯ ಸಾಹಿತ್ಯದಲ್ಲಿ ಕಾಣುತ್ತೇವೆ. ಅಂದರೆ ನಮ್ಮ ನವೋದಯ ಕಾಲ ಭಾರತೀಯ ಸಂಸ್ಕೃತಿಯ ಪುನರುಜ್ಜೀವನ ಕಾಲ ಮತ್ತು ಪರಿಣಾಮ ಎಂಬುದು ಈಗ ಗೃಹೀತವಾದ ಸಂಗತಿ.

ಆದರೆ ಈ ಒಂದು ವೃತ್ತದಿಂದ ಕೆಲವರು ಸಿಡಿದು ಹೋದರು. ಅವರಲ್ಲಿ ಮಹಾತ್ಮರಾದ ಜ್ಯೋತಿಬಾಪುಲೆ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಅತಿ ಮುಖ್ಯರು. ಹಾಗೆಯೇ ಪೆರಿಯಾರ್ ರಾಮಸ್ವಾಮಿ ದಕ್ಷಿಣದಲ್ಲಿ ಪ್ರಸಿದ್ಧರು. ಕನ್ನಡದ ಸಾಂಸ್ಕೃತಿಕ ಸಂದರ್ಭದಲ್ಲಿ ಸಿಡಿದು ಹೋದವರು ಮಹಾಕವಿ ಕುವೆಂಪು. ಈ ವೇದೋಪನಿಷತ್ತಿನ ಪುನರುಜ್ಜೀವನದ ಗಾಢವಾದ ಪ್ರಭಾವ ಕುವೆಂಪು ಅವರ ಮೇಲೆ ಇತ್ತಾದರೂ ಅದರ ವಿರುದ್ಧ ಸಂಘರ್ಷ ಕಡಿಮೆಯಾಗಿಲ್ಲವಾಗಿತ್ತಾದ್ದರಿಂದಲೇ ಶಂಕರಾಚಾರ್ಯರ ಬಗ್ಗೆ ಕವಿತೆ ಬರೆಯುತ್ತಿದ್ದಂತೆಯೆ 'ಕರಿಸಿದ್ದನ' ಬಗ್ಗೆ ಬಹಳ ಅಚ್ಚೆಯಿಂದ ಬರೆಯಬೇಕಾಯಿತು. ಆಧ್ಯಾತ್ಮವನ್ನು ಒಪ್ಪಿಕೊಳ್ಳುತ್ತಲೇ 'ಶೂದ್ರ ತಪಸ್ವಿ'ಯನ್ನು, 'ಬೆರಳ್‌ಗೆ ಕೊರಳ್'ಅನ್ನು, 'ಜಲಗಾರ'ನನ್ನು ಬರೆಯಬೇಕಾಯಿತು, ಅದೇನೇ ಇರಲಿ ನಿಜಸಂಗತಿಯೇನು?

ನಿಜ ಸಂಗತಿಯೆಂದರೆ ಭಾರತೀಯ ಸಂಸ್ಕೃತಿ ಎಂಬುದು ಭಾರತದ ಏಕಮೇವ- ದ್ವಿತೀಯ ಸಂಸ್ಕೃತಿಯಾಗಿರಲಿಲ್ಲ. ಭಾರತದಲ್ಲಿ ವೇದಕ್ಕಿಂತ ಹಳೆಯದಾದ, ವೇದಕ್ಕಿಂತ ಬೇರೆಯಾದ, ವೇದಕ್ಕಿಂತ ಹೆಚ್ಚು ವಿಸ್ತಾರವಾದ ಜನಪದವನ್ನು ಹೊಂದಿರುವ ಸಂಸ್ಕೃತಿ ಇತ್ತು. ಇಷ್ಟು ಮಾತ್ರವಲ್ಲ ಅದು ವಿವಿಧವಾಗಿಯೂ ಇತ್ತು. ಆದರೆ ಇಂಗ್ಲಿಷ್ ಹೇಗೆ ಭಾರತೀಯ ಸಂಸ್ಕೃತಿ ಕೀಳು-ದಾಸಸಂಸ್ಕೃತಿ ಎಂದು ಬಗೆದಿದ್ದರೋ ಹಾಗೆಯೇ ವೇದಸಂಸ್ಕೃತಿ ಇಲ್ಲಿಯ ಮೂಲ ಸಂಸ್ಕೃತಿಯಾದ ಶೂದ್ರ ಸಂಸ್ಕೃತಿಯನ್ನು ಕೀಳುಗೈದಿತ್ತು. ಅಲ್ಲಗಳೆದಿತ್ತು. ಮತ್ತು ಅದು ಕ್ಷೀಣವಾಗಿತ್ತು.

ಯಾವ ಸಾಮಾಜಿಕ ವ್ಯವಸ್ಥೆ ಮಠಾಧಿಪತ್ಯ ಹೊಂದಿರುತ್ತದೊ ಜಮೀನುದಾರಿ ಮತ್ತು ಬಂಡವಾಳಶಾಹಿ ವಿಧಾನ ಹೊಂದಿರುತ್ತದೊ ಅಲ್ಲಿ ಮೊದಲು ಅಧಿಕಾರ ಹಣ ಮತ್ತು ವಿದ್ಯೆಯನ್ನು ಗಳಿಸುವವರು ಮೇಲು ಅಂತಸ್ತಿನ ಜನರಾಗಿರುತ್ತಾರೆ. ಭಾರತದಂಥ ವರ್ಣಾಧಾರಿತ ಜಾತಿ ವ್ಯವಸ್ಥೆಯುಳ್ಳ ಸಮಾಜ ರಚನೆಯಲ್ಲಿ ಇದರ ಮೊದಲ ಲಾಭ ಹೊಂದುವವರು ಬ್ರಾಹ್ಮಣರು, ಬನಿಯಾಗಳು. ಈ ವರ್ಗದಿಂದಲೇ ಯೋಗಿಗಳೂ, ಭೋಗಿಗಳೂ, ಸುಧಾರಣಾವಾದಿಗಳೂ, ರಾಜಕೀಯ ಮುಂದಾಳು ಗಳೂ ಮತ್ತು ಕ್ರಾಂತಿಕಾರಿಗಳೂ ಬರುತ್ತಾರೆ. ಆದರೆ ಚರಿತ್ರೆಯಲ್ಲಿ ಕ್ರಾಂತಿ ಕಾರಿಗಳಿಗಿಂತ ಸಂಪ್ರದಾಯವಾದಿಗಳೇ ಹೆಚ್ಚಿರುತ್ತಾರೆ ಎಂಬುದು ಇಲ್ಲಿಯವರೆಗೆ ನಮಗೆ ಗೊತ್ತಿರುವ ಸಂಗತಿಯಾಗಿದೆ. ಇಂಥ ಹೊತ್ತಿನಲ್ಲೇ ನಡೆದದ್ದು ನಮ್ಮ ಸಂಸ್ಕೃತಿ ಪುನರುಜ್ಜೀವನ.

ಆದರೆ ಈ ಸ್ತರ ಹೀಗೇ ಸ್ಥಿರವಾಗಿರುವುದಿಲ್ಲ. ಯಾಕೆಂದರೆ ಒಂದು ಸಮಾಜ ಚಲನಶೀಲತೆಗೆ ಪಕ್ಕಾಗಿದೆಯೆಂದರೆ ಅದು ಕೆಳಗಿನ ಸ್ಥಳಕ್ಕೆ, ಆಳಕ್ಕೆ, ತಳಕ್ಕೆ ಇಳಿಯುತ್ತ ಹೋಗುತ್ತದೆ. ಅಂದರೆ ಬ್ರಾಹ್ಮಣ-ಬನಿಯಾ ಹಂತದಿಂದ ಅದಕ್ಕೆ ಹತ್ತಿರವಾದ ಜಾತಿಗೆ ಅದು ವಿಸ್ತರಿಸುತ್ತದೆ-ವಿದ್ಯೆ, ಹಣ, ಅಧಿಕಾರ ಇತ್ಯಾದಿಗಳಲ್ಲಿ. ಈಗಿನ ಸಂದರ್ಭ ಸಂಪೂರ್ಣವಲ್ಲದಿದ್ದರೂ ಈಗ ದಲಿತಸ್ತರ (ತಳ)ದ ವರೆಗೆ ವಿಸ್ತರಿಸಿದೆ. ಈ ಜಾಗ್ರತಿಯ ಒಂದು ಸಾಂಸ್ಕೃತಿಕ ಪರಿಣಾಮವೆಂದರೆ ಜಾನಪದ ಜ್ಞಾನದ-ತತ್ವ ಜ್ಞಾನದ ಮತ್ತು ಜನಪದ ಸಂಸ್ಕೃತಿಯ ಪುನರುಜ್ಜೀವನ. ಇದು ಲಿಖಿತ ಪರಂಪರೆಯ ಪುನರುಜ್ಜೀವನವಲ್ಲ. ತೋಂಡಿ ಸಂಪ್ರದಾಯ ಸಂಸ್ಕೃತಿಯ ಪುನರುಜ್ಜೀವನ. ಇದು ಏಕಮುಖಿವಾದುದಲ್ಲ; ಇದು ಬಹುಮುಖೀ ಸಂಸ್ಕೃತಿಯ ಪುನರುಜ್ಜೀವನ. ಇದು ಸರ್ವಾಧಿಕಾರಿಯಲ್ಲ; ಇದು ಪ್ರಜಾಪ್ರಭುತ್ವವಾದಿ; ಇದು ಮನು ಸಂಸ್ಕೃತಿಯಲ್ಲ; ಇದು ಜನಪದ ಸಂಸ್ಕೃತಿಯ ಪುನರುಜ್ಜೀವನ. ಅಂದರೆ ನಿಜವಾದ ಸಂಸ್ಕೃತಿಯ ಪುನರುಜ್ಜೀವನ ಇದೀಗ ಶುರುವಾಗಿದೆ. ಇದರ ಪ್ರಮುಖ ಪಾತ್ರವನ್ನು ಜಾನಪದ ವಿದ್ವಾಂಸರು ವಹಿಸುತ್ತಿದ್ದಾರೆ.

ಮೊದಲ ಹಂತದಲ್ಲಿ ಇಲ್ಲಿಯ ವಿದ್ವಾಂಸರು ಜನಪದ ಸಾಹಿತ್ಯ (ಕಾವ್ಯ, ಕತೆ ಇತ್ಯಾದಿ)ಗಳ ಕಡೆಗೇ ಒಲವು ತೋರಿಸಿದರು. ಮತ್ತು ವಿವರಣೆಯಲ್ಲಿ ರಸಾತ್ಮಕ ಒಲವೇ ಹೆಚ್ಚಾಗಿತ್ತು. ವ್ಯಾಖ್ಯಾನಕ್ಕಿಂತ ವಿವರವೇ ಮುಖ್ಯವಾಗಿತ್ತು. ಮುಂದೆ ಅದು ಅಷ್ಟಕ್ಕೇ ನಿಲ್ಲದೇ ಆಚರಣೆ ಆರಾಧನೆಗಳ ಕಡೆಗೆ ವಿಸ್ತರಿಸಿತು. ಇಂಥ ಸಂದರ್ಭದಲ್ಲಿ ಜಾನಪದ ವಿದ್ವಾಂಸರನ್ನು ಕೇವಲ ಸಂಗ್ರಹಕಾರರೆಂದೂ, ಸಂಗ್ರಹ ವಿದ್ವಾಂಸರೆಂದೂ, ತಲೆ ಇಲ್ಲದವರು ಮಾಡುವ ಕೆಲಸವೆಂದೂ ಹಂಗಿಸಲಾಯಿತು. ಆದರೆ ಈಗಿನ ಒಂದು ದೂರದಲ್ಲಿ ಕುಳಿತು ಅವರು ಮಾಡಿದ ಸಂಗ್ರಹಕಾರ್ಯ, ಅದರ ವಿಸ್ತಾರ, ಕ್ಷೇತ್ರ ಕಾರ್ಯ ಮತ್ತು ತಮ್ಮ ವಿವರಣೆಯಲ್ಲಿ ತೆಗೆದುಕೊಳ್ಳುವ ಜನಪದ ನಿಲುವನ್ನು ನೋಡಿದರೆ ಅವರ ಸಾಹಸ, ತಾಳ್ಮೆ, ಪ್ರಾಮಾಣಿಕತೆ, ಕಷ್ಟ ಸಹಿಷ್ಣುತೆ ನನಗೆ ಆಶ್ಚರ್ಯವಾಗುತ್ತದೆ ಮತ್ತು ಅವರ ಬಗೆಗೆ ಗೌರವ ಜಾಸ್ತಿಯಾಗುತ್ತದೆ. ಅವರಲ್ಲಿ ಜಾನಪದವನ್ನು ಸಾರಾಸಗಟಾಗಿ ವೈಭವೀಕರಿಸುವ ಹಠ ಕೂಡ ಸೇರಿಕೊಂಡಿದ್ದರೂ ಈಗನ ಸಾಂಸ್ಕೃತಿಕ- ಪುನರುಜ್ಜೀವನದಲ್ಲಿ ಅವರ ಸ್ಥಾನ ಉನ್ನತವಾಗೇ ಇದೆ ಎಂಬುದನ್ನು ದಾಖಲಿಸಬೇಕಾಗಿದೆ.

ಈ ತಲೆಮಾರಿನ ವಿದ್ವಾಂಸರು ಮೊದಲ ಮತ್ತು ಎರಡನೇ ತಲೆಮಾರಿನವರು ಕಟ್ಟಿದ ಕಟ್ಟೆಯ ಮೇಲೆ ನಿಂತು ಅವರು ನೋಡಿದ್ದಕ್ಕಿಂತ ಹೆಚ್ಚು ವಿಸ್ತಾರ ಕ್ಷಿತಿಜವನ್ನು ನೋಡಲು ಸಾಧ್ಯವಾಗಿದೆ. ಇದು ಮೊದಲಿನವರೊಟ್ಟಿಗೆ ಸಂಗ್ರಹ, ಕ್ಷೇತ್ರ ಕಾರ್ಯದೊಟ್ಟಿಗೆ ಹೊಸ ವ್ಯಾಖ್ಯಾನವನ್ನು ಪ್ರಸ್ತಾಪಿಸುವ, ಪ್ರಸ್ತುತಪಡಿಸುವ ಕಾಲ ಕೂಡ ಆಗಿದೆ.

ಇಲ್ಲಿಯ ವಿವಿಧ ಜಾತಿ, ಜನಾಂಗ, ಭೌಗೋಲಿಕ ನಿವಾಸಿಗಳು, ಬುಡಕಟ್ಟಿ ನವರು ಹೊರೆದುಕೊಂಡು ಬಂದ ಸಾಮಾಜಿಕ ಮತ್ತು ಸಾಂಸ್ಕೃತಿಕ ಜ್ಞಾನ ಸಂಪತ್ತು ಮತ್ತು ಅದರ ವೈವಿಧ್ಯತೆ ಅಗಾಧವಾಗಿದೆ. ಈಗ ಅದರ ಸಂಗ್ರಹ, ಸಂಶೋಧನೆ ಇನ್ನೂ ಹೆಚ್ಚು ಮಹತ್ವ

ಗಳಿಸುತ್ತಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ೧೯೯೩ರಲ್ಲಿ ತನ್ನ ಉಪಸಂಸ್ಕೃತಿ ಅಧ್ಯಯನ ಎಂಬ ಮಾಲಿಕೆಯನ್ನು ಪ್ರಾರಂಭಿಸಿ ಸುಮಾರು ನಲ್ವತ್ತು ಉಪಸಂಸ್ಕೃತಿಗಳ ಪುಸ್ತಕವನ್ನು ಹೊರತರುವ ಮೂಲಕ, ಈ ಸಾಂಸ್ಕೃತಿಕ- ಅಧ್ಯಯನದ ಮಹತ್ವವನ್ನು ಅಭಿವೃದ್ಧಿಗೊಳಿಸಿದೆ. ಒಂದು ಕಡೆಗೆ ದೊರಕುವ ಈ ಮಾಹಿತಿ ಅನೇಕ ಸಾಂಸ್ಕೃತಿಕ ಒಳನೋಟಗಳನ್ನು ಕೊಡುವಂತಹದ್ದಾಗಿದೆ. ಈ ಬಗೆಯ ಆಸಕ್ತಿ ಇನ್ನೂ ಬೆಳೆಯುತ್ತಿರುವುದಕ್ಕೆ ನಿದರ್ಶನವಾಗಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರೂ, ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷರೂ ಅದ. ಡಾ. ಯು.ಆರ್. ಅನಂತಮೂರ್ತಿಯವರ ಈ ಮಾತನ್ನು ಗಮನಿಸಬಹುದು:

"ಇನ್ನು ಮುಂದೆ ಸಾಹಿತ್ಯ ಅಕಾಡೆಮಿಯು ಲಿಪಿರಹಿತ ಭಾಷೆಗಳ ಸಾಹಿತ್ಯಕ್ಕೂ ಫೆಲೊಶಿಪ್ ನೀಡುವ ಯೋಜನೆ ರೂಪಿಸಲಿದೆ. ಪುಸ್ತಕ ಬಹುಮಾನ ಘೋಷಿಸುವ ಕಾಲಕ್ಕೆ ಇದನ್ನು ಘೋಷಿಸಲಾಗುವುದು. ಸಾಹಿತ್ಯ ಅಕಾಡೆಮಿಗೆ ಭಾಷೆಗಿಂತ ಆ ಭಾಷೆಯಲ್ಲಿರುವ ಲಿಖಿತ ಅಥವಾ ಅಲಿಖಿತ ಸಾಹಿತ್ಯ ಮುಖ್ಯ. ಅದನ್ನು ಹೆಕ್ಕುವ ಕಾರ್ಯ ಆರಂಭವಾಗಲಿದೆ. ಅಂಥ ಸಾಹಿತ್ಯ ಗುರುತಿಸಿ ಎರಡು ವರ್ಷಕ್ಕೊಮ್ಮೆ ಅದರ ಸಂಪುಟವೊಂದನ್ನು ಹೊರತರಲೂ ನಿರ್ಧರಿಸಿದೆ." [ವರದಿ: ಸಂಯುಕ್ತ ಕರ್ನಾಟಕ ೧೭-೨-೧೯೯೬]

೨

ಮೇಲಿನ ನನ್ನ ವಿವರಣೆಯಲ್ಲಿ ಪುನರುಜ್ಜೀವನ ಮತ್ತು ಚಲನಶೀಲತೆ ಎಂಬ ಎರಡು ಪದಗಳೂ ಬಂದಿವೆ. ಈ ಎರಡು ಪದಗಳು ತನ್ನೊಳಗೆ ಪರಸ್ಪರ ವಿರುದ್ಧ ಅರ್ಥವನ್ನು ಹೊಂದಿದೆ ಎಂಬುದು ಇಣುಕಿ ನೋಡಿದರೆ ಹೊಳೆಯದೇ ಹೋಗುವುದಿಲ್ಲ. ಪುನರುಜ್ಜೀವನ ಎನ್ನುವುದಕ್ಕೆ ರಾಹುಗನ್ನಡಿ ಹಿಡಿದು ನೋಡಿದರೆ ಭೂತ ಕಾಲಕ್ಕೆ ಮರಳುವದೇ ಮುಖ್ಯವಾಗಿ ಕಾಣುತ್ತದೆ. ಮತ್ತು ಚಲನಶೀಲ ಎನ್ನುವುದು ಸಮಾಜವನ್ನು ಸಂಸ್ಕೃತಿಯನ್ನು ಮಾರ್ಪಡಿಸುತ್ತ ಮುಂದೊಯ್ಯುವುದಾಗಿದೆ. ಯಾವುದೇ ಸಂಸ್ಕೃತಿ ಪೋಷಣೆಗೊಂಡು ಇರುವುದು ಮತ್ತು ಬೆಳೆಯುವುದು ಆಯಾಕಾಲದ ಆರ್ಥಿಕ, ಸಾಮಾಜಿಕ ಮತ್ತು ವೈಜ್ಞಾನಿಕ ಬೆಳವಣಿಗೆಯ ಸ್ಥಿತಿಯನ್ನು ಅವಲಂಬಿಸಿದೆ. ಆದ್ದರಿಂದಲೇ ಯಾವುದೇ ಸಂಸ್ಕೃತಿ ಕಾಲಕಳೆದಂತೆ ಪ್ರಸ್ತುತತೆಯನ್ನು ಕಳೆದುಕೊಳ್ಳತ್ತ (ಔಟ್ ಡೇಟಡ್ ಆಗುತ್ರ) ಹೋಗುತ್ತದೆ. ಆದರೆ ಬೇರೆ ಜೀವಧಾತುವನ್ನ ಕೂಡಿಸಿಕೊಳ್ಳತ್ತ ಮಾರ್ಪಡುತ್ತ ಹೋಗುತ್ತದೆ. ಆದರೆ ಪುನರುಜ್ಜೀವನದ ಹಠ 'ಬಾಬರಿ ಮಸೀದಿಯನ್ನು' ನಾಶಮಾಡುವಂಥ ಪ್ರತಿಗಾಮಿ ಮತ್ತು ಅಮಾನುಷಕ್ರಿಯೆಗೆ ಪ್ರೋತ್ಸಾಹ ಕೊಡುತ್ತದೆ. ಜನಪದ ಸಂಸ್ಕೃತಿಯ ಪುನರುಜ್ಜೀವನದ ಸಂದರ್ಭ ಕೂಡ ಇಂತಹದ್ದಾಗುವ ಸಂಭವವಿದೆ. ಪಾಶ್ಚಾತ್ಯ ತತ್ವಜಾನಕ್ಕಿಂತ ವೇದೋಪನಿಷತ್ತಿನ ತತ್ವಜ್ಞಾನವೇ ಶ್ರೇಷ್ಠ ಎಂದು ಸಿದ್ಧಮಾಡುವ ಹಠದಂತೆ ವೈದಿಕಕ್ಕಿಂತ ಜಾನಪದ ಶ್ರೇಷ್ಠ ಎಂದು ಸಿದ್ಧ ಮಾಡಲು ಹೊರಟಾಗ ಅದನ್ನು ಇಡಿಯಾಗಿ ಅಪ್ಪಿಕೊಳ್ಳುವ, ಪ್ರತಿಷ್ಠಾಪಿಸುವ ಹಠ ಕೂಡ ಅಪಾಯಕಾರಿಯಾಗುತ್ತದೆ.

ಇಂದು ಶಿಕ್ಷಣ ಪ್ರಸಾರ ಎಲ್ಲ ಜಾತಿಗಳಿಗೆ ಹಬ್ಬಿದೆ. ಸಂಪತ್ತಿನ ಗಳಿಕೆಯ ವಿಧಾನ ಬದಲಾಗುತ್ತಿದೆ. ವಿಜ್ಞಾನದ ಬೆಳವಣಿಗೆ ಹೆಚ್ಚಾಗಿದೆ. ಜಾಗತಿಕ-ಸಂಬಂಧ ಹತ್ತಿರವಾಗಿದೆ. ಇಂಥ ಸಂದರ್ಭದ ಜೀವನ ಶತಮಾನದ ಹಿಂದೆ ನಮ್ಮ ವಿವಿಧ ಪಂಗಡಗಳು ಆಚರಿಸುತ್ತಿದ್ದ ಆಚರಣೆ, ಆರಾಧನೆ, ನಂಬಿಕೆ ಮುಂತಾದವುಗಳೇ ನಮ್ಮ ವೈಶಿಷ್ಟ್ಯ. ಅದನ್ನು ಬಿಡುವುದೆಂದರೆ ನಮ್ಮ ಸಂಸ್ಕೃತಿಯನ್ನೊ ಸ್ವಂತ ಸಂಬಂಧವನ್ನೊ ತೊರೆದಂತೆ ಎಂದು ಕೂಡುವುದು ಗ್ರಾಹ್ಯವಾಗುವುದಿಲ್ಲ. ಹಿಂದೆ ಮೈಲಿ ಬಂದರೆ ಮಾರಮ್ಮನಿಗೆ ಹರಕೆ ಹೊರುತ್ತಿದ್ದೆವು. ಅದು ನಮ್ಮ ಸಂಸ್ಕೃತಿ. ಅದರ ಪ್ರತಿರೋಧವಾದ 'ದೇವಿ' ಹಾಕಿಸಿಕೊಳ್ಳುವುದಿಲ್ಲ ಎಂದರೆ ಅವೈಜ್ಞಾನಿಕವಾಗುತ್ತದೆ. ಇಂಥ ಅನೇಕ ಸಂಗತಿಗಳ ಬಗ್ಗೆ ಹೇಳಬಹುದು. ಒಂದು ವೇಳೆ ಈ ಸಂಸ್ಕೃತಿಯ ಹಠ ಜಾಸ್ತಿಯಾಯಿತೆಂದರೆ ಅಪಾಯವಾಗುವುದು ಈ ಹಿಂದುಳಿದ ಮತ್ತು ದಲಿತ ಜಾತಿಗಳಿಗೇ. ಹಿಂದೆ ರಾಜಾರಾಮ ಮೋಹನರಾಯರಂಥ ಪುನರುಜ್ಜೀವನವಾದಿಯಾದರೂ ಸುಧಾರಣಾವಾದಿ ಮುಂದಾಳತ್ವ ಮುಸ್ಲಿಂರಿಗೆ ಸಿಕ್ಕಲಿಲ್ಲವಾದ್ದರಿಂದ, ಅದಕ್ಕಾಗಿ ಮುಂದೆ ಅವರು ಸರ್ ಸೈಯದ್ ಅಹ್ಮದಖಾನ್ ಬರುವವರೆಗೆ ಸುಮಾರು ಐವತ್ತು ವರ್ಷ ಕಾಯಬೇಕಾಯಿತು. ಇದರ ಪರಿಣಾಮವೆಂದರೆ ಮುಸ್ಲಿಂ ಜನಾಂಗ ಐವತ್ತು ವರ್ಷ ಹಿಂದುಳಿಯಬೇಕಾಗಿ ಬಂದಿದೆ; ಇಂದಿಗೂ ಅದರ ಕರಿಛಾಯೆ ಕರಗಲಿಲ್ಲ ಎಂಬುದನ್ನು ಗಮನಿಸಬಹುದು. ಇಂಥ ಇತಿಹಾಸದ ಎದುರಿನಲ್ಲೂ ಹಿಂದುಳಿದ ವರ್ಗ ತಮ್ಮ ಪ್ರಗತಿಯ ವೇಗವನ್ನು ಕುಂಠಿತಗೊಳಿಸಬಾರದು. ಈ ದಿಸೆಯಲ್ಲಿ ಬರಗೂರು ರಾಮಚಂದ್ರಪ್ಪನವರ ಈ ಮಾತು ಗಮನಾರ್ಹವಾಗಿದೆ:

"....ಈ ಸಿದ್ಧ ಸಂಸ್ಕೃತಿಗೆ ಬದ್ಧವಾಗಿ ಬೆಳೆಯುವ ಬಹಿರಂಗ ಮತ್ತು ಅಂತರಂಗಗಳಲ್ಲಿ ಪ್ರಶ್ನೆಗಳು ಪ್ರತೀಕವಾಗುವ ಸಂದರ್ಭ ಸೃಷ್ಟಿಯಾಗಬೇಕಾದರೆ ಉಪಸಂಸ್ಕೃತಿಯೇ ಸವಾಲಾಗಿ ನಿಲ್ಲಬೇಕು. ಆದರೆ ಉಪಸಂಸ್ಕೃತಿಯೇ ಕಟ್ಟಕಡೆಯ ಜೀವನ ವಿಧಾನವಾಗಬಾರದು. ಬದಲಾಗದ ಭೂತಕ್ಕೆ ತಳ್ಳಲ್ಪಟ್ಟ ಉಪ ಸಂಸ್ಕೃತಿಯು ಪ್ರಧಾನ ಅಥವಾ ಯಜಮಾನ ನೆಲೆಗೆ ಬರುವ ಮೂಲಕ ಸಮಾನ ಸಮಾಜದ ಆಶಯಕ್ಕೆ ಪೂರಕವಾಗುವ ಪ್ರಕ್ರಿಯೆ ಮುಖ್ಯವಾದುದು. ಈ ಪ್ರಕ್ರಿಯೆಯಲ್ಲಿ ಉಪಸಂಸ್ಕೃತಿಗಳ ಜೀವನ ವಿಧಾನ ವರ್ತಮಾನದ ಹೊಸ ಬಣ್ಣ ಪಡೆದು ಪ್ರಧಾನವಾಗಬೇಕು: ಇದ್ದ ಹಾಗೆಯೇ ಭೂತದ ಬದುಕಿನಲ್ಲಿ ಪ್ರತಿಷ್ಠಾಪಿಸಬಾರದು."[೧]

ಇಷ್ಟಾಗಿಯೂ ನಾವು ಎಲ್ಲವನ್ನೂ ದಾಖಲಿಸಬೇಕಾಗುತ್ತದೆ. ವ್ಯಾಖ್ಯಾನಿಸುವಲ್ಲಿ ವೈಜ್ಞಾನಿಕತೆ ಬೇಕು. ಪ್ರಸಿದ್ಧ ಇತಿಹಾಸಕಾರ ಡಿ.ಡಿ. ಕೋಸಾಂಬಿಯವರ

"ಇತಿಹಾಸಕಾರನ ಕೆಲಸವೆಂದರೆ ಭೂತವನ್ನು ಪ್ರೀತಿಸುವುದೇ ಆಗಲಿ, ಅಥವಾ ಭೂತ ಸಂಬಂಧವನ್ನು ಪೂರ್ಣ ಕಡಿದುಕೊಳ್ಳುವುದಾಗಲಿ ಅಲ್ಲ. ಆದರೆ ಭೂತಕಾಲದ ದೃಷ್ಟಿಕೋನದಿಂದ ವರ್ತಮಾನವನ್ನು ಅರಿಯುವುದು ಕೂಡ ವರ್ತಮಾನದ ದೃಷ್ಟಿಯಿಂದ ಭೂತವನ್ನು ಅರಿಯುವುದೇ ಆಗಿದೆ"[೨] ಎನ್ನುವ ಮಾತು ಸಂಸ್ಕೃತಿ ವ್ಯಾಖ್ಯಾಕಾರರಿಗೂ ಕೂಡ ಅನ್ವಯಿಸಿಕೊಳ್ಳಬೇಕಾದುದು.

ಜಾನಪದ ಸಂಸ್ಕೃತಿ ಬಹಳ ಮುಖ್ಯವಾಗಿ ಶ್ರಮಿಕ-ಸಂಸ್ಕೃತಿ. ಆದ್ದರಿಂದ ಊಹೆಗಿಂತ ಕ್ರಿಯೆಗೆ ಮಹತ್ವ. ಅದೃಶ್ಯಕ್ಕಿಂತ ದೃಶ್ಯಕ್ಕೆ ಮಹತ್ವ, ಪರಕ್ಕಿಂತ ಇಹಕ್ಕೆ ಮಹತ್ವ. ಅಂದರೆ ಅದು

ಇಹಕ್ಕೆ ಪರವಾಗಿ ಬೆಳೆದ ಸಂಸ್ಕೃತಿ. ಆದ್ದರಿಂದಲೇ ಅಲ್ಲಿ ವಾಸ್ತವಕ್ಕೆ ಆ ಮುಖಾಂತರ ನಿಸರ್ಗ ಜೀವನಕ್ಕೆ ತೀರ ಹತ್ತಿರವಾದುದು. ಹಾಗೆ ಹತ್ತಿರುವಾಗುವ ಮುಖಾಂತರ ಹೆಚ್ಚು ಸರಳವೂ, ಪ್ರಾಮಾಣಿಕವೂ ಆದುದು. ತನ್ನ ಶ್ರಮದ ಮೂಲಕವಾಗೇ ಊರನ್ನೂ, ನಾಡನ್ನೂ ಕಟ್ಟುವ ಸಂಸ್ಕೃತಿ ಆಗಿದ್ದು ಒಟ್ಟಂದದಲ್ಲಿ ಮಾನವ ಸಂಸ್ಕೃತಿ ಮತ್ತು ನಾಗರಿಕತೆಯಲ್ಲೇ ಅದು ಮಹತ್ವದ ಸ್ಥಾನವನ್ನು ಸ್ಥಾಪಿಸಿಕೊಳ್ಳುತ್ತದೆ.

ಇದು ಶ್ರಮ ಸಂಸ್ಕೃತಿಯಾದುದರಿಂದಲೇ ಇದರ ಸದಸ್ಯ ಸದಸ್ಯರ ಮಧ್ಯೆ ಸಮಾನತೆಯಿದೆ. ಇವರ ಪೂಜಾರಿ ಪುರೋಹಿತನಾಗುವುದಿಲ್ಲ. ಕೋಲುಕಾರನೊ ಮುಖಂಡನೊ ಸರ್ವಾಧಿಕಾರಿಯಾಗುವುದಿಲ್ಲ. ಸಾಂಘಿಕ-ಜೀವನ, ಸಮಾಜವಾದಿ ನೆಲೆಯ ಜೀವನಸ್ಫೂರ್ತಿ ಇವು ಮುಖ್ಯವಾದುದು. ಇದರ ಕಲೆ, ಹಲಿ, ಶಿಲ್ಪ, ವಾಸ್ತುಮೂರ್ತಿ, ಹಾಡು, ಕುಣಿತ, ವೈದ್ಯ ಇತ್ಯಾದಿಗಳೆಲ್ಲ ತ ನ್ನತನವನ್ನೇ ಹೊಂದಿರು ವಂತಹದು ಮತ್ತು ಮೂಲ ಮೆಟ್ಟಲುಗಳಾಗಿದ್ದಂಥವು.

ಈ ಜನಪದ ಏಕ ಪ್ರಕಾರವಾದುದಲ್ಲ. ಆದ್ದರಿಂದಲೇ ಏಕ ಶಿಲ್ಪ ಆಡಳಿತ ಆಕೃತಿಯನ್ನು ಇದು ಒಡೆಯಬಲ್ಲದು. ಪ್ರಜಾಪ್ರಭುತ್ವದ ಮೂಲತತ್ವ ಕೂಡ ಇದೇ ಆಗಿದೆ.

ವೈವಾಹಿಕ ಜೀವನದಲ್ಲಿಯ ಒಂದು ಸಾಮಾಜಿಕ ನಡವಳಿಕೆಯನ್ನು ನಾನು ಎತ್ತಿಹೇಳಬಯಸುತ್ತೇನೆ. ಇಲ್ಲಿ ಬಹಳ ಕಡೆ ತಾರುಣ್ಯದಲ್ಲಿಯೇ ವಿಧವೆಯಾದವಳ ಮರುಮದುವೆ ಮಾಡಿಕೊಳ್ಳುವ ಹಕ್ಕನ್ನು ಹೊಂದಿರುತ್ತಾಳೆ. ಇದು ವೈದಿಕ ವಿಧಾನದಲ್ಲಿ ಅವಕಾಶವಿಲ್ಲ. ವೈದಿಕ ವಿಧಾನದಲ್ಲಿ ವಿಧವೆಯಾದವಳ ಜೀವನ ನರಕ ಸದೃಶವಾಗುತ್ತದೆ. ಆದರೆ ಈ ಯಜಮಾನ ಮನ್ನಣೆ ಪಡೆದ ಸಂಸ್ಕೃತಿಯ ಪ್ರಭಾವದಿಂದ ಕುಗ್ಗಿಹೋದ ಜಾನಪದ ಸಂಸ್ಕೃತಿ ಕೂಡ ಇಂಥ ಮರುಮದುವೆ ಕೀಳುತನದ್ದಾಗಿರ ಬಹುದೆಂದು ಬಗೆದಿದೆ. ಅದಕ್ಕೆಂತಲೇ ಅಂಥ ಮರು ಮದುವೆಯನ್ನು, 'ಉಡುಕಿ' ಎಂದು ಕರೆದು ಕಡೆಗಣಿಸಲಾಗುತ್ತದೆ. ಅಂದರೆ ಜಾನಪದ ಸಂಸ್ಕೃತಿಯಲ್ಲಿರುವ ಆರೋಗ್ಯಯುಕ್ತವಾದ ಮತ್ತು ತುಂಬ ಮಾನವೀಯವಾದ ನಡವಳಿಕೆಗಳು ಹೇಗೆ ಮಾರ್ಯಾದೆ ಕಳೆದುಕೊಂಡಿವೆ ಎಂಬುದನ್ನು ನೋಡಬಹುದು. ಆದರೆ ಅದರ ಮಹತ್ವವನ್ನು ಆಧುನಿಕ ಸಮಾಜದಲ್ಲಿ ಪ್ರಸ್ತಾಪಿಸಬೇಕಾದ ಮತ್ತು ಅದಕ್ಕೆ ಒಂದು ತಾತ್ವಿಕ ಸ್ಥಾನವನ್ನು ನಿರ್ಮಿಸಿಕೊಡಬೇಕಾದ, ಅಂಥ ನಡವಳಿಕೆಯ ಕುರಿತು ಅಭಿಮಾನ ಪಡಬೇಕಾದ ಸಂದರ್ಭವನ್ನು ಪುನಃ ನಿರ್ಮಿಸಿಕೊಡಬೇಕಾಗಿದೆ. ಇಂಥ ಅನೇಕ ಪ್ರಸ್ತಾವನೆ ಈ ಸಾಂಸ್ಕೃತಿಕ ಪುನರುಜ್ಜೀವನದ ಒಡಲಲ್ಲಿ ಅಡಗಿದೆ.

೩

ಜನಪದ ತತ್ವಜ್ಞಾನ

ಜನಪದ ಜ್ಞಾನಕ್ಕೂ ಲಿಖಿತ ತತ್ವಜ್ಞಾನಕ್ಕೂ ಎಲ್ಲಿಯ ಸಂಬಂಧ ಎಂದು ಮೇಲುನೋಟಕ್ಕೆ ಕಾಣಬಹುದು. ತತ್ವಜ್ಞಾನವೆಂದೊಡನೆ ನಮ್ಮ ಎದುರು ನಿಲ್ಲುವುದು ಬ್ರಹ್ಮಸತ್ಯ ಜಗನ್ಮಿಥ್ಯಾ

ಎಂಬುದೇ ಆಗಿದೆ. ದ್ವೈತ, ಅದ್ವೈತ, ಶೈವ ಇತ್ಯಾದಿ ಮತಮಾನ್ಯಗಳೇ ಆಗಿವೆ. ಈ ದೃಷ್ಟಿಯಿಂದ ಕೇವಲ ಮಾಸ್ತಿ, ಜಟ್ಟಿಗ, ಚೌಡಿ, ರಾವು, ಭೂತಗಳನ್ನು ಪೂಜಿಸುವ, ಕೋಳಿಕುರಿಗಳನ್ನು ನೈವೇದ್ಯಿಸುವ ಜನಪದ ಜನಕ್ಕೆ ಮತ್ತು ಆ ಜ್ಞಾನಕ್ಕೆ ತತ್ವಜ್ಞಾನ ಎಂಬ ಭಯಗ್ರಸ್ತವಾದ ಸಿದ್ಧಾಂತವೊಂದು ಇದೆಯೇ ಎಂದು ಹುಬ್ಬೇರಿಸಲೂಬಹುದು. ಆದರೆ ಭಯಗ್ರಸ್ತವಲ್ಲದ ಒಂದು ಕೃಷಿಕ ತತ್ವಜ್ಞಾನ, ಜನಪರವಾದ ತತ್ವಜ್ಞಾನ ಅದಕ್ಕಿದೆ ಎಂಬುದು ಈಗಿತ್ತಲಾಗಿನ ಅಭ್ಯಾಸದಲ್ಲಿ ಕಂಡು ಬರುವ ಸಂಗತಿಯಾಗಿದೆ. ಈ ಜಗತ್ತಿನ ಹುಟ್ಟು, ಬೆಳವಣಿಗೆಯ ಬಗ್ಗೆ, ದೇವರ ಬಗ್ಗೆ, ದೇವರನ್ನು ವಶಪಡಿಸಿಕೊಳ್ಳುವ ತಂತ್ರದ ಬಗ್ಗೆ ವೈದಿಕ ತತ್ವಜ್ಞಾನ ಮತ್ತು ಕರ್ಮಕಾಂಡಕ್ಕೆ ಪ್ರತಿಯಾಗಿ ಜನಪದ ತತ್ವಜ್ಞಾನವೂ ಇದೆ. ಅದರ ಸ್ವತಂತ್ರ ಅಸ್ತಿತ್ವವನ್ನು ತೋರಿಂಡಿ ಸಂಪ್ರದಾಯದಿಂದಲೇ ಪುನರ್ವ್ಯಾಖ್ಯಾನ ಮಾಡಬೇಕಾಗಿದೆ. ಅಂಥ ಒಂದು ಕೂಲಂಕಷವಾದ ಅಭ್ಯಾಸ ಇದಲ್ಲವಾದರೂ ಆ ಕಡೆ ಒಂದು ಕಿರು ನೋಟ ಹಾಯಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

ಜನಪದ ಸಂಸ್ಕೃತಿ ಎಂಬುದು ಕಾಯಕದವರ, ಅಥವಾ ಶ್ರಮಿಕರ ಸಂಸ್ಕೃತಿ ಎಂದು ಮೊದಲೇ ಹೇಳಿದ್ದೇನೆ. ಅಂದ ಮೇಲೆ ಅದರ ಆಲೋಚನೆ ಕೂಡ ಶ್ರಮ ಪರವಾದ ಮತ್ತು ಇಹಪರವಾದ ಮತ್ತು ಅದರಿಂದಲೇ ಪೋಷಣೆಗೊಂಡ ತತ್ವಜ್ಞಾನವಾಗಿದೆ. ಅದರ ಆಲೋಚನೆ, ಕಲೆ, ಕಾವ್ಯಗಳಲ್ಲಿ ಕತೆ ಪುರಾಣಗಳಲ್ಲಿ ಇದೇ ಅಡಿಪಾಯದ ಮೇಲೆ ಬೆಳೆದ ಆಲೋಚನೆಯನ್ನೇ ಕಾಣಬಹುದು.

ವೈದಿಕ ಸಂಸ್ಕೃತಿ ಪುರುಷ ಪ್ರಧಾನವಾದರೆ ಜನಪದ ಸಂಸ್ಕೃತಿ ಸ್ತ್ರೀಪ್ರಧಾನವಾದುದು. ಇದಕ್ಕೆ ಕಾರಣ ಜನಪದ ಸಂಸ್ಕೃತಿ ಕೃಷಿಪ್ರಧಾನವಾದುದೇ ಆಗಿದೆ. ವಲಸೆ-ಬೇಟೆಗಾರ ಜೀವನದ ಸಂದರ್ಭದ ನಂತರ ಕೃಷಿಕ ಜೀವನ ಪ್ರಾರಂಭವಾಯಿತೆಂದು ನಾವು ಚರಿತ್ರೆಯ ಅಭ್ಯಾಸದಿಂದ ಕಂಡುಕೊಂಡಿದ್ದೇವೆ. ಹೀಗೆಂದೊಡನೆ ಇದು ಹಣ್ಣು ಕಡಿದು ತುಂಡು ಮಾಡಿದಂತೆ ಅಲ್ಲ. ಒಂದರ ಸಂಗಡ ಒಂದು ನಡದೇ ಇದೆ. ಆದರೆ ಪ್ರಧಾನವಾದ ಜೀವನದ ರೀತಿಯನ್ನು ಗಮನಿಸಿ ಮಾತ್ರ ಈ ಘಟ್ಟವನ್ನು ಗುರುತಿಸಲಾಗುತ್ತದೆ.

ಕೃಷಿ ಹೆಣ್ಣಿನ ಸಂಶೋಧನೆ ಎಂಬುದನ್ನು ಈಗಿನ ಎಲ್ಲ ಸಮಾಜಶಾಸ್ತ್ರಜ್ಞರು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಕೃಷಿಕ ಜೀವನ ಘಟ್ಟದಿಂದಲೇ ಸಂಘಜೀವನ, ಕುಟುಂಬ ಜೀವನ ಇತ್ಯಾದಿಗಳು ಬೆಳವಣಿಗೆ ಹೊಂದುತ್ತವೆ. ಹೀಗೆ ಬೆಳವಣಿಗೆ ಹೊಂದುವ ಆಲೋಚನೆಗೆ ಗಂಟುಬಿದ್ದೇ ಅದರ ಆಚಾರ ವಿಚಾರ, ಇಹ ಪರದ ವಿಚಾರ, ಪೂಜೆ ಪುನಸ್ಕಾರ, ಆರಾಧನೆ-ಆವಿಷ್ಕಾರಗಳೆಲ್ಲ ನಡೆಯುವುದೇ ಸಹಜ.

> "ನಮ್ಮ ಹಳ್ಳಿ ಊರುಗಳಲ್ಲಿ ಹೆಣ್ಣು ದೇವರುಗಳ ಸಂಖ್ಯೆ ಹೆಚ್ಚು; ಗಂಡು ದೇವರು ಕಡಿಮೆ. ಕೃಷಿ ಸಮಾಜದಲ್ಲಿ 'ಅಮ್ಮ' ರೂಪಗಳಲ್ಲಿ ಪೂಜಿಸಲ್ಪಡುತ್ತಿದ್ದಳು. ಇವು ಹೊಲದ ಅಮ್ಮಗಳು, ಊರ ಅಮ್ಮಗಳು, ಗುಡಿಯ ಅಮ್ಮಗಳು, ರೋಗದ ಅಮ್ಮಗಳು ಇತ್ಯಾದಿ. ಈ ಹಂತದಲ್ಲಿ ಪ್ರಕೃತಿ ಶಕ್ತಿಗಳೆಲ್ಲವನ್ನು ಅಮ್ಮನ (ಹೆಣ್ಣಿನ)

ರೂಪದಲ್ಲೇ ಗ್ರಹಿಸುವ ರೂಢಿ ಬೆಳೆದಿತ್ತು. ವೈದಿಕರಲ್ಲಿ ಇದು ಪುರುಷ ರೂಪದಲ್ಲಿತ್ತು. ಹಾಗಾಗಿ ವೈದಿಕರಲ್ಲಿ ಅಗ್ನಿ, ವಾಯು, ವರುಣ, ಇಂದ್ರರು ಪುರುಷ ದೇವತೆಗಳಾದರೆ ದ್ರಾವಿಡರಲ್ಲಿ ಗಾಳೆಮ್ಮ, ಜೋತೆಮ್ಮ, ಎಲ್ಲಮ್ಮರಿದ್ದಾರೆ" ಎಂದು ಪ್ರೊ. ಎಸ್.ಎಸ್. ಹಿರೇಮಠ ದಾಖಲಿಸುತ್ತಾರೆ. ಇದ ರೊಟ್ಟಿಗೆ ಈ ಆರಾಧಕರಲ್ಲಿ ಹೊಲೆಮಾದಿಗರು ಪ್ರಥಮ ಸ್ಥಾನದಲ್ಲಿದ್ದು ವೈದಿಕದಲ್ಲಿ ಇವರು ಕನಿಷ್ಠ ಸ್ಥಾನದಲ್ಲಿರುವುದನ್ನು ಗಮನಿಸಬಹುದು.

ದೇವಿ ಪ್ರಸಾದ ಚಟ್ಟೋಪಾಧ್ಯಾಯ ತಮ್ಮ ಲೋಕಾಯತ [Lokayata] ಗ್ರಂಥದಲ್ಲಿ 'ಗೌರಿವ್ರತ' ಆಚರಣೆಯನ್ನು ವಿವರವಾಗಿ ಕೊಡುತ್ತಾರೆ (೧೯೮೧; ೨೩೩). ಗಣೇಶ ಚತುರ್ಥಿಗಿಂತ ಹಿಂದೆ ಆಗುವ ವ್ರತವಿದು. ಇಲ್ಲಿಯ ಗೌರಿ ವೈದಿಕ ಗೌರಿ ಅಲ್ಲ; ಬದಲಾಗಿ ಸಸಿ ಮತ್ತು ಕಟ್ಟಿಗೆಯ ಹಿಡಿಮುಷ್ಠಿಯಿಂದ ಮಾಡಿದ್ದಾಗಿದೆ. ಇದರ ಆರಂಭಕರು ಹೆಂಗಸರು. ಇದು ಕೃಷಿದೇವತೆ. ಇದರಂತೆ ಪ್ರೊ. ಎಸ್. ಎಸ್. ಹಿರೇಮಠ 'ಹಬ್ಬಗಳು' ಎಂಬ ಗ್ರಂಥದಲ್ಲಿ ಕರ್ನಾಟಕದ ಭಾಗಗಳಲ್ಲಿರುವ 'ಗೌರಿಹಬ್ಬ'ದ ಬಗ್ಗೆ ವಿವರಿಸುತ್ತಾರೆ. ಇಲ್ಲಿ ಸಗಣಿಯಿಂದ ಮೂರ್ತಿಯನ್ನು ಮಾಡಲಾಗುತ್ತದೆ ಮತ್ತು ಇದು ಹೆಂಗಸರ ಆರಾಧನೆಯೇ ಆಗಿ ಕೃಷಿಕ ದೇವತೆಯೇ ಆಗಿದೆ.

ಭೂಮಿಯ ಮತ್ತು ಒಟ್ಟು ವಿಶ್ವದ ಹುಟ್ಟು ಬ್ರಹ್ಮನಿಂದಾಯಿತೆಂದು ವೈದಿಕ ದೃಷ್ಟಿ ಹೇಳುತ್ತದೆ. ನಿರ್ಗುಣನಾದ ಬ್ರಹ್ಮನಿಗೆ 'ಬಹು' ಆಗಬೇಕೆಂಬ ಆಸೆ ಆದಾಗ (ನಿರ್ಗುಣನಿಗೆ ಆಸೆ ಹೇಗುಂಟಾಯಿತು ಎಂಬುದು ಬೇರೆ ಪ್ರಶ್ನೆ) ಸೃಷ್ಟಿಯಾಯಿತು. ಆದರೆ ಜನಪದ ದೃಷ್ಟಿ ಬೇರೆಯದನ್ನೇ ಹೇಳುತ್ತದೆ. ಜಡದಿಂದ ಚೇತನವೊ, ಚೇತನದಿಂದ ಜಡವೊ ಎಂಬ ವಾದ ಪುರಾತನವಾದುದೇ. ಜಡವೇ ಚೇತನಕ್ಕೆ ಮೂಲ ಎಂಬುದು ಭೌತಿಕ ದೃಷ್ಟಿಕೋನ. ಇದೇ ಲೋಕಾಯುತ ದೃಷ್ಟಿಕೋನ. ಇದು ವೈದಿಕಕ್ಕೆ ಪ್ರತಿಯಾದುದು. ಇಂಥ ದೃಷ್ಟಿಯನ್ನು ಎತ್ತಿಹಿಡಿಯುವ ಅಥವಾ ಆಧಾರಿತವಾಗಿ ಪೋಷಿಸುವ ಕತೆ,ಪುರಾಣಗಳು ಜನಪದ ಸಾಹಿತ್ಯದಲ್ಲಿ ಸಿಕ್ಕುತ್ತವೆ. ಇಂಥ ಲೋಕ ಗೀತೆಗಳು ಜನಪದ ತತ್ವಜ್ಞಾನ ಮತ್ತು ಸಂಸ್ಕೃತಿಯ ಪುನರ್ ನಿರ್ಮಿತಿಯಲ್ಲಿ ಎಷ್ಟು ಮಹತ್ವದ್ದಾಗಿದೆಯೆಂದು ದೇವಿ ಪ್ರಸಾದ ಚಟ್ಟೋಪಾಧ್ಯಾಯರೇ ಹೀಗೆ ಹೇಳುತ್ತಾರೆ:

"ಮೊದಲೇ ಹೇಳಿರುವ ಹಾಗೆ, ಒಳಗಡೆ ದಾರ್ಶನಿಕ ಸಾರವಿರುವ ಕೆಲವು ಜನಪ್ರಿಯ ಗೀತೆಗಳು ಹಿಂದಿನ ಕಾಲದಿಂದ ನಮಗೆ ಬಂದಿವೆ. ಆ ಗೀತೆಗಳ ನಿಜವಾದ ಕರ್ತೃಗಳು ಯಾರೆಂಬುದು ನಮಗೆ ಗೊತ್ತಿಲ್ಲ. ಆದುದರಿಂದ ಅವುಗಳು ಒಂದು ತರದ ಜಾನಪದ ಗೀತೆ (ಲೋಕಗಾಥ)ಗಳೆಂದು ಪರಿಗಣಿಸುವ ಪ್ರವೃತ್ತಿ ನಮ್ಮಲ್ಲಿ ಇದೆ. ಇವುಗಳಿಂದ ತಲೆಮೊರೆಯಿಂದ ತಲೆಮೊರೆಗೆ ಹರಿದು ಬರುತ್ತವೆ. ಇವುಗಳ ಮೂಲವು ಬಹಳ ಪುರಾತನವಾದುವಾದರೆ, ಇವುಗಳಿಗೆ ತಮ್ಮದೇ ಆದ ಒಂದು ರೀತಿಯ ಅಧಿಕೃತ ಸ್ವಭಾವ ಪ್ರಾಪ್ತವಾಗಿ ಇವುಗಳು ಪ್ರಾಮಾಣಿಕ ಎನಿಸುತ್ತವೆ. ದೀರ್ಘ ಕಾಲದಿಂದ ಜನರ ಮನಸ್ಸುಗಳಲ್ಲಿ ಬೇರು ಬಿಟ್ಟಿರುವ ಈ

ಗೀತೆಗಳು ಸ್ವಾಭಾವಿಕವಾಗಿ ನಮ್ಮ ಚರ್ಚೆಗೆ ಪ್ರಸ್ತುತವಾದವು ಗಳಾಗಿರುತ್ತವೆ. ಪ್ರಾಮುಖ್ಯವಾದವುಗಳಾಗಿವೆ. ಬೇರೆ ಯಾವ ಕಾರಣಕ್ಕಾಗಿ ಯಾದರೂ 'ಲೋಕಾಯತ'ಎಂಬ ಪದವು ಜಾನಪದ ಮೂಲವನ್ನೂ ಜನರೊಳಗೆ ವ್ಯಾಪಕವಾಗಿರುವುದನ್ನೂ ಸೂಚಿಸುತ್ತದೆ. ಅಷ್ಟೇ ಅಲ್ಲದೆ ಈ ಗೀತಗಳ ಅಂತಸ್ಸರವು ಕಟ್ಟಾ ಭೌತವಾದಿಯಾಗಿರುವುದೂ ಸ್ಪಷ್ಟವಾಗುತ್ತದೆ."

ಇಂಥ ಒಂದು ಲೋಕ ಕಥೆಯನ್ನು ಇಲ್ಲಿ ಕೊಡುವುದು ಸೂಕ್ತವಾದೀತು.

ಮಾದೇವರಾಯನ ಕತೆ

"ಸ್ವಾಮಿ ಹುಟ್ಟಾಕಿನ ಮೊದಲಯೆ ಭೂಮಿ ಹುಟ್ಟಾಕಿನ ಮೊದಲಯೆ
ಸ್ವಾಮಿ ಮಾದೇವರಾಯ ಹುಟ್ಟಿ ಬಂದಾನೋ ಕೋಲೆ!"

"ಹೀಗೆ" ಭೂಮಿ ಹುಟ್ಟುವ ಮೊದಲೇ ಹುಟ್ಟಿದ ಮಾದೇವರಾಯನು ಅಂತರಾಳದ ಮೇಲೆ ಸ್ವಲೀಲಾಲೋಲನಾಗಿದ್ದಾಗ ಅಂಗೈ ಮೇಲೆ ಹೋಮ ಸುಟ್ಟು ನೇಮದಿಂದ ಬಸವೇಶನನ್ನು ಪಡೆದು ಭೂಮಿಯ ಹುಟ್ಟಿನ ಹೊಳವರಿತು ಬರಲು ಕಳಿಸುವನು. ಬಸವೇಶನು ಮೂಡಲ ದಿಕ್ಕಿನಲ್ಲಿ ಒಬ್ಬ ಪತಿವ್ರತೆ ಅಶ್ವತ್ಥ ಎಲೆಯಷ್ಟು ಭೂಮಿಯನ್ನು ಪಡೆದು ಸೂಜಿಯ ಮೊನೆಯ ಮೇಲೆ ಕುಳಿತು ತಪಗೈಯುವುದನ್ನು ನೋಡಿದನು. ಬಸವೇಶ ಅವಳ ಮುಂದೆ ಗಿಟ್ಟಲ ಇಟ್ಟ ಹೊಡೆಯಲಾಗಿ ಆ ಹೆಣ್ಣು ಜಲವಾಗಿ ಹೋದಳು. ಇದನ್ನು ಬಸವೇಶನು ಮಾದೇವರಾಯನಿಗೆ ತಿಳಿಸಲು ಆತ "ಹೆಂಗುಸು ಪಡೆದ ಭೂಮಿ ನಮಗೆ ಬೇಡ ನಾವು ನಮ್ಮ ಸತ್ಯದಿಂದಲೇ ಭೂಮಿಯನ್ನು ಪಡೆಯೋಣ" ಎಂದು ಹೇಳಿದನು. ಆ ಕ್ಷಣದಲ್ಲಿ ಬಸವೇಶ ಇನ್ನೊಂದು ಗಿಟ್ಟಲ ಹೊಡೆದ. ಕೂಡಲೇ ಪಾತಾಳದಿಂದ ಪಾರಿವಾಳ ಹಕ್ಕಿ ಹಾರಿ ಬಂದು ಬಸವನ ಹಿಣಿಯ ಮೇಲೆ ಮೂರು ಮೊಟ್ಟೆ ಹಾಕಿತು. ಮಾದೇವರಾಯನು ಒಂದೊಂದೇ ಮೊಟ್ಟೆಯನ್ನು ತೆಗೆದುಕೊಂಡು ಭೂಮಿ, ಆಕಾಶ, ದೇವತೆಗಳು ಹಾಗೂ ಜೀವಕೋಟಿಗಳು ಹುಟ್ಟಿಬರಲೆಂದು ಒಗೆದನು. ಆಗ ಸೃಷ್ಟಿ ರೂಪಗೊಂಡಿತು. ಜೀವಕೋಟಿ ಹಿಗ್ಗಿ ನಲಿಯಲೆಂದು ಮಾದೇವರಾಯನು ಕೋಲಾಟ ಸೃಷ್ಟಿ ಮಾಡಿದನು. ಅವನು ಸೃಷ್ಟಿಸಿದ ಚಿನ್ನದ ಮದಲೆ, ಚಿನ್ನದ ಕೋಲುಗಳನ್ನು ಹಿಡಿದು ದೇವತೆಗಳು ಕೋಲಾಟಕ್ಕೆ ನಿಂತರು. ಅದು ದೇವತೆಗಳಿಗೆ ದಕ್ಕಲಿಲ್ಲ. ಆ ಕೋಲುಗಳೂ ಕೋಲಾಟಕ್ಕೆ ಒಗ್ಗಲಿಲ್ಲ. ಆಗ ಮಾದೇವರಾಯನು ಹಾಲಿನ ಕೆರೆಯಿಂದ ಹಾಲಕ್ಕಿ ಒಕ್ಕಲಿಗರನ್ನು ಸೃಷ್ಟಿಸಿ ಅವರಿಗೆ ಆ ಮದಲೆ, ಕೋಲು ಕೊಟ್ಟನು. ಆದರೆ ಹಾಲಕ್ಕಿ ಗೌಡ ಅವನಿಂದ ಮಣ್ಣಿನ ಗುಮಟೆ, ಕೋಲುಗಳನ್ನು ಮಾತ್ರ ಬೇಡಿದನು."

ಇದೇ ಪುಟದಲ್ಲಿ ಡಾ. ನಾಯಕರು ಎಸ್. ಸಿಲ್ವಾರು ಸಂಗ್ರಹಿಸಿದ ಹಾಡಿನ ಪಾಠವನ್ನು ಕೊಟ್ಟಿದ್ದಾರೆ. ಅದರಲ್ಲಿ

"ಮಾದೇವರಾಯನು ತನ್ನ ಸತ್ಯದಿಂದ ಬಾಳೆಯನ್ನೂ ಚಿನ್ನದ ಚೂರಿಯನ್ನೂ ಪಡೆದುಕೊಂಡನು. ಬಾಳೆಯ ಕುಡಿಯನ್ನು ಕೊಯ್ದು ಅದನ್ನು 'ಗಂಗೆ ಸಮುದ್ರ'ದ ಮೇಲೆ ಹಾಸಿ, ತೇಲಾಡುವ ಎಲೆಯ ಮೇಲೆ ಕುಳಿತನು. ತನ್ನ ಅಂಗೈ ಮೇಲೆ ಚಂದನ ಮರವನ್ನು, ಸತ್ಯದಿಂದ ಬಸವೇಶನನ್ನು, ಪಾರಿವಾಳ ಹಕ್ಕಿಯನ್ನು ಪಡೆಯುವನು. ಪಾರಿವಾಳವನ್ನು ಭೂಶೋಧನಕ್ಕೆ ಕಳಿಸುವನು. ಪಾರಿವಾಳ ಹಕ್ಕಿ ಪ್ರಪಂಚವನ್ನು ಸುತ್ತಿ ಬಂದು **ಹೊಲತಿಯೊಬ್ಬಳು ಎಳ್ಳಿನಷ್ಟು ಭೂಮಿ ಪಡೆದು, ಸೂಜಿ ತುದಿಯಲ್ಲಿ ತಲೆಕೆಳಕು ಮಾಡಿ ತಪಗೈಯುವ ವಿಚಾರ ತಿಳಿಸುವನು.** ಆಗಲೇ ಪಾರಿವಾಳ ಮೊಟ್ಟೆಗೆ ಬಂದಿತ್ತು ಮಾದೇವರಾಯನ ಆದೇಶದಂತೆ ಚಂದನ ವೃಕ್ಷದ 'ಜಿಗ್ಗು' ಮುರಿದು ಬಸವನ ಮೇಲೆ ಗೂಡುಕಟ್ಟಿ ಮೊಟ್ಟೆಯಿಟ್ಟಿತು. ಆ ಮೊಟ್ಟೆ ಬಸವ 'ಇಟ್ಟ' ಹೊಡೆಯುವಾಗ ಬಿದ್ದು ಒಡೆದು ಹೋಯಿತು. ಮೊಟ್ಟೆಯ ಮೇಲಿನ ಓಡು ಬೋನ್ (ಬಾನ್) ಆಯಿತು. ನೀರು ಕೆಂಗರ್ಕ (ಬಿಳಿಯ ಲೋಳೆ) ನೀರಾಯಿತು. ನಡುವಿನ ಕೆಂಗರ್ಕ ಭೂಮಿಯಾಯಿತು. ಭೂಮಿ ಹುಟ್ಟಿದ ಪ್ರಾರಂಭದಲ್ಲಿ ಗಟ್ಟಿಯಾಗಿರಲಿಲ್ಲ.

"ಅಲ್ಲಾಡುತಾ ತಾನೆ ಇದಾಳೊ ಭೂಮಾತೆ ತಾಯಿ
ಹೆದರಲು ಬೇಡ ಭೂಮಿ ನೆಡಗಾಲು ಬೇಡ ಭೂಮಿ
ಕಲ್ಲುಕಣರಾ ಬಲುಮಿ ಕೊಡ್ತೇನೆ ಭೂಮಿತಾಯಿ

"ಮಾದೇವರಾಯನ ಭೂಮಿಗೆ ಕಲ್ಲುಕಣಾದ ಬಲುಮೆಯನ್ನು ಕೊಟ್ಟು ಜೀವ ಕೋಟಿಯನ್ನು ಪಡೆದನು."

ಇನ್ನೊಂದು ಪಾಠವನ್ನು ಅವರೇ ಕೊಡುತ್ತಾರೆ.

"ಇನ್ನೊಂದು ಪಾಠವು ಮಾದೇವರಾಯನು ಗಂಗೆಯ ಹೊಕ್ಕುಳಿಂದ ಬಂದವನೆಂದು ಹೇಳುತ್ತದೆ. ಆತ ಹುಟ್ಟಿದಾಗ ನಿಲ್ಲಲು ನೆಲವಿರಲಿಲ್ಲ. ತನ್ನ ರೋಮಕಿತ್ತು ಗಂಟು ಹಾಕಿ 'ಆತಾಳ' ಪಾತಾಳ ನಿಲ್ಲಿಸಿದನು. ಅಂಗುಜನ ಹಕ್ಕಿಯನ್ನು ಪಡೆದು ಭೂಮಿ, ಮನುಷ್ಯರಿರುವ ಸ್ಥಳವನ್ನ ಶೋಧಿಸಲು ತಿಳಿಯುವನು. ಹಕ್ಕಿಯಿಂದ ಶೋಧಿಸಲಿಕ್ಕಾಗದೇ ಮಾದೇವರಾಯನ ಅಂಗೈ ಮೇಲೆ ಮೊಟೆಯಿಟ್ಟಿತು. ಆಗ ಮಾದೇವರಾಯ ಮೊಟ್ಟೆ ಹಿಡಿದು ಕೆಂಪೀನ ಫಲವೇ ಭೂಮ್ಯಾಗೆಲ್ಲ, ಬಿಳಿಯ ಫಲವೇ ಶಮಾದರುಗಾಗ್ಲೋ ಮೇನಿನ ಹುರುಬಲು ಗುಡ ಮಂಚಗಾಗ್ಲೊ ಎಂದೆನ್ನವನು. ಅಂತೆಯೇ, ಭೂಮಿ, ಆಕಾಶ, ಸಮುದ್ರಗಳು ಹುಟ್ಟಿದವು. ಭೂಮಿ ಹಸುಮಕ್ಕಳ ನೆತ್ತಿಯಂತೆ ಮೆತ್ತಗಿತ್ತಂತೆ:

"ಹಸೀಮಕ್ಕೇ ನೆತ್ತಿಯ ಅಳಿದಂಗೇ
ಅಳದಾವಲೋ ಈವಾಲೇ ಭೂಮಿ
ಈ ಭೂಮಿ ಯಾಕಾಗಿ ಬಲೆನೆಲೊ

"ಭೂಮಿ ಗಟ್ಟಿಯಾಗದ್ದಕ್ಕೆ ಮಾದೇವರಾಯನಿಗೆ ಚಿಂತೆ. ಬಸವೇಶನನ್ನು ಲೋಕ ಸುತ್ತಿ ಬರಲು ಕಳುಹಿಸುತ್ತಾನೆ. ಅವನಿಂದ ಭೂಮಿ ಗಟ್ಟಿಯಾಗದುದಕ್ಕೆ ಕಾರಣ ಹೊಲತಿ ಮಾಡುವ ತಪಸ್ಸೆಂದು ತಿಳಿದು, ಅವಳನ್ನು ಕೊಲ್ಲಿಸಿ, ಕೊಚ್ಚಿ ಭಾಗ ಮಾಡಿ ಒಂದೊಂದು ವಿಭಾಗದಿಂದ ಒಂದೊಂದು ಜಾತಿಯನ್ನು ಪಡೆಯುತ್ತಾನೆ."

ಈ ಮೇಲಿನವು ಒಂದೇ ಕತೆಗೆ ಸಂಬಂಧಿಸಿದ್ದು. ಆದರೆ ಪಾಠಾಂತರ ಸೇರಿ ಮೂರು ಕತೆಗಳಾಗಿವೆ. ಈ ಎಲ್ಲದರಲ್ಲೂ ಮೊದಲು ಮಾದೇವರಾಯನೇ ಇದ್ದು ಸೃಷ್ಟಿಗೆ ಕಾರಣವಾಗುತ್ತಾನೆ ಎಂಬಂತೆ ಇದೆ. ಆದರೆ ಇಡೀ ಕತೆ ಇದನ್ನೇ ಪೋಷಿಸುವುದಿಲ್ಲ. ಮೂರೂ ಕತೆಯಲ್ಲಿ ಸೃಷ್ಟಿ ಹೆಣ್ಣಿನಿಂದಲೇ ಆಯಿತೆಂಬ ಮೂಲ ಕಲ್ಪನೆಯನ್ನು ತಿರಸ್ಕರಿಸಲು ಆಗಲಿಲ್ಲ. ಪುರುಷ ಯಾಜಮಾನ್ಯ ಅಸ್ತಿತ್ವಕ್ಕೆ ಬರುತ್ತಿದ್ದಂತೆ ಇಲ್ಲಿ ಪುರುಷ ಪಕ್ಷಪಾತಿಯಾಗಿ ಪರಿವರ್ತನೆ ಆದಂತಿದೆ. ಒಕ್ಕಲುತನ ನೇಗಿಲ ಸಂಶೋಧನೆ ಮತ್ತು ಉಪಯೋಗದಿಂದ ತನ್ನ ಎರಡನೆ ಹಂತವನ್ನು ತಲುಪುತ್ತದೆ. ಎತ್ತು, ಕೋಣಗಳ ಬಳಕೆ ಪಶುಪಾಲನೆಗೆ ಹೆಚ್ಚಿನ ಮಹತ್ವಕೊಡುತ್ತದೆ. ಇದರಿಂದ ಪುರುಷ ಸ್ವಾಮಿತ್ವವನ್ನು ಹೊಂದುತ್ತಾನೆ. ಹೀಗೆ ಸ್ತ್ರೀ ಸ್ವಾಮಿತ್ವದಿಂದ ಪುರುಷ ಸ್ವಾಮಿತ್ವಕ್ಕೆ ಪರಿವರ್ತನೆಯ ನಿಯಮವಾದ ಪ್ರತಿಕ್ರಿಯೆ ಮತ್ತು ಪ್ರಕ್ರಿಯೆ ಅವರ ವೈಚಾರಿಕತೆಯ ಮೇಲೆ ಆಗಿದೆ. ಅಂತೆಯೇ ಸಾಹಿತ್ಯ, ತತ್ವಜ್ಞಾನದ ಮೇಲೂ ಆಯಿತು. ಹೀಗಾಗಿ ಸ್ತ್ರೀ ಮೂಲದಿಂದ ಪುರುಷ ಮೂಲಕ್ಕೆ ಪರಿವರ್ತನೆಯಾದದ್ದು ಕಾಣುತ್ತದೆ. ಇಷ್ಟಾದರೂ ಭೂಮಿಯ ಹುಟ್ಟಿಗೆ ಹೆಣ್ಣೇ ಮೂಲವಾಗಿರುವುದನ್ನು ಬಿಡಲಾಗಲಿಲ್ಲ. ಈ ಮೇಲಿನ ಮೂರು ಕತೆಗಳೂ ಅದನ್ನು ಹೇಳುತ್ತವೆ.

ಇಂಥ ಪರಿವರ್ತನೆಯ ಕುರುಹನ್ನು ಸಾಂಖ್ಯದರ್ಶನದಲ್ಲಿ ಬರುವ ಪುರುಷ ಸಾಕ್ಷಿ ಭೂತ (ನಿಷ್ಕ್ರಿಯ) ವಾಗಿ ಪ್ರಕೃತಿಯ ಆಟವನ್ನು ನೋಡುತ್ತಾನೆ ಎನ್ನುವ ತಾತ್ವಿಕ ನೆಲೆಯಲ್ಲಿ ಸಂಶೋಧಕರು ಗುರುತಿಸುತ್ತಾರೆ. ಹೀಗೆ ಮೊದಲ ತತ್ವಜ್ಞಾನದಿಂದ ವೈದಿಕವೂ, ವೈದಿಕದಿಂದ ಜಾನಪದವೂ ಪರಿಣಾಮಕ್ಕೊಳಗಾಗಿರುವುದು ಸಹಜ ಕೂಡ ಆಗಿದೆ. ವೈಧಿಕ ಸಂಪೂರ್ಣವಾಗಿ ಪುರುಷ ಸ್ವಾಮಿತ್ವಕ್ಕೆ ಒಳಗಾದಾಗಲೂ ಮೂಲ ತಾತ್ವಿಕ ನೆಲೆಯಾದ (ಸ್ತ್ರೀ ಸ್ವಾಮಿತ್ವದ ಅಡಿಪಾಯವನ್ನು) ನಾಶಪಡಿಸಲಾರದ್ದನ್ನು ಕಂಡುಕೊಳ್ಳಬೇಕಿದೆ.

ಮೇಲಿನ ಕತೆ (ಪುರಾಣ-ಐತಿಹ್ಯ)ಗಳಲ್ಲಿ ಇನ್ನೂ ಒಂದು ಮಹತ್ವದ ಸಂಗತಿ ಇದೆ. ಸೃಷ್ಟಿಗೆ ಮೂಲವಾದ ಹೆಣ್ಣು ಸವರ್ಣೀಯಳಲ್ಲ, ಅವಳು ಹೊಲೆಮಾದಿಗರವಳು. ಅಂದರೆ ಏನು ಅರ್ಥ? ಮಾನವನ ಮೂಲ ಮಂಗ ಎಂದ ಹಾಗೆ ನಾಗರಿಕತೆಯ ಮೂಲ ಹೊಲೆಮಾದಿಗರೆ? ಎನ್ನುವುದು ಕೂಡ ಪ್ರಸ್ತುತವಾಗುವ ವಿಷಯವಾಗಿದೆ. ಈ ದಿಸೆಯಲ್ಲಿ ಪ್ರೊ. ಎಸ್.ಎಸ್. ಹಿರೇಮಠರು ಹೀಗೆ ಆಲೋಚಿಸುತ್ತಾರೆ.

"ಕೃಷಿಕರಾಗಿದ್ದ ಪ್ರಧಾನ ಸಮಾಜದ ಹೊಲೆ ಮಾದಿಗರು ಶಾಕ್ತರಾಗಿದ್ದರು. ಯೋನಿಪೂಜಕ ತಾಂತ್ರಿಕ ಪಂಥೀಯರಾಗಿದ್ದರು. ವಲಸೆಗಾರ ಕುರುಬ, ಬೇಡ, ಒಕ್ಕಲಿಗ, ಗೊಲ್ಲ ಕುಲಗಳು ಶಿವ-ಶಿಶ್ನ ಆಧಾರಕರಾಗಿದ್ದರು. ಸಿದ್ಧ

ಪರಂಪರೆಯವರಾಗಿದ್ದರು. ಈ ಎರಡು ಜನವರ್ಗಗಳ ನಡುವೆ ಪ್ರಥಮದಲ್ಲಿ ಸಂಘರ್ಷ ಮತ್ತು ಕೊನೆಯಲ್ಲಿ ಸಮನ್ವಯ ಸಾಧಿತವಾಗಿ ಲಾಕುಳ ಪಾಶುಪತ, ಕಾಳಾಮುಖಾದಿ ಶೈವ ಪಂಥಗಳು ಬೆಳೆದವು. ಹೀಗಾಗಿ ಒಂದು ಅಖಂಡ ದ್ರಾವಿಡ ಪರಂಪರೆ ಉದ್ಭವಿಸಿತು. ಪ್ರತ್ಯೇಕವಾಗಿ ಬತ್ತಲೆ ಗೌರಿ ಮತ್ತು ಭೈರವರ ವಿಗ್ರಹಗಳು ನಮ್ಮ ನಾಡಿನಲ್ಲಿ ಅಲ್ಲಲ್ಲಿ ಕಂಡು ಬರುವುದು. ಈ ಎರಡು ಸಂಸ್ಕೃತಿಗಳ ಅಸ್ತಿತ್ವಕ್ಕೆ ಸಾಕ್ಷಿಯಾಗುತ್ತದೆ. ಲಿಂಗ ಮತ್ತು ಕವಡಿ ಸರಗಳನ್ನು ಪ್ರತ್ಯೇಕ ಜನವರ್ಗಗಳು ಶಿಶ್ನ ಮತ್ತು ಯೋನಿ totemಗಳಾಗಿ ಸಾಂಕೇತಿಕವಾಗಿ ಧರಿಸುವುದು ವ್ಯಾಪಕವಾಗಿ ರೂಢಿಯಲ್ಲಿದೆ. ಭಾರತ ದೇಶದ ಪ್ರಾಕ್ ಚಾರಿತ್ರಿಕ ಯುಗದ ಜಾಗತಿಕ ಮನ್ನಣೆಯನ್ನು ತಂದುಕೊಟ್ಟಿರುವ ಸಿಂಧೂ ಕೊಳ್ಳದ ನಾಗರಿಕತೆಯಲ್ಲಿ ಕೃಷಿಕ ಮತ್ತು ವಲಸೆಗಾರ ದ್ರಾವಿಡರಿಬ್ಬರಲ್ಲೂ ಸಮನ್ವಯ ಸಾಧಿತವಾಗಿತ್ತು. ಮತ್ತು ಅವರಲ್ಲಾಗಲೇ ವರ್ಗ ಸಮಾಜ ಬೆಳೆಯುವ ಲಕ್ಷಣಗಳು ಕಂಡು ಬಂದಿದ್ದವು. ಈ ಎರಡು ದ್ರಾವಿಡ ಜನವರ್ಗಗಳಲ್ಲಿ ಮೊದಲಿಗರು ಮತ್ತು ಕೃಷಿಕರು ಹೊಲೆ ಮಾದಿಗರೇ ಆಗಿದ್ದರು. ಅವರು ಮಾತೃ ಆರಾಧಕರಾಗಿದ್ದರು. ಇಡೀ ದೇಶದಲ್ಲಿ ಮಾತೃ ಆರಾಧನೆ ಹಬ್ಬಿ ಹರಡಲು ಕಾರಣರಾದವರು. ವಲಸೆಗಾರ ದ್ರಾವಿಡರು ಪಶುಪತಿ ಶಿವಾರಾಧಕರಾಗಿದ್ದರು. ಇದರ ಸ್ಪಷ್ಟವಾದ ಚಿತ್ರವನ್ನು ಮತ್ತು ಆಧಾರವನ್ನು ದ್ರಾವಿಡನಾಡುಗಳ ದಲಿತರ ಸಂಸ್ಕೃತಿಯ ಅಧ್ಯಯನದಿಂದ ಕಟ್ಟಿಕೊಡಲು ಸಾಧ್ಯವಿದೆ.”[೬]

ಡಾ. ಎನ್.ಆರ್. ನಾಯಕರು ಸಂಪಾದಿಸಿದ ಕಾರವಾದ ಜಿಲ್ಲೆಯ ಜಾನಪದ ಹಾಡುಗಳಲ್ಲಿಯ ಆಧಾರದಿಂದ ಹೇಳುವುದಾದರೆ ವಿವಿಧ ಜಾತಿಗಳ ಶೂದ್ರರಲ್ಲಿ ಹುಟ್ಟಿನಿಂದ, ಚೌಳದಿಂದ ಮದುವೆ ಮತ್ತು ಮಸಣದವರೆಗಿನ ಯಾವ ವಿಧಿಯಲ್ಲೂ ಬ್ರಾಹ್ಮಣ ಪುರೋಹಿತರ ಪ್ರವೇಶವೇ ಇಲ್ಲದಿರುವುದು ಮತ್ತು ಅವೆಲ್ಲ ಗಂಡಸು ನಿಮಿತ್ತ ಮಾತ್ರವಾಗಿ ಎಲ್ಲವೂ ಹೆಂಗಸರ ಹಾಡು ಮತ್ತಿತರ ಚೆಡಂಗಗಳಿಂದೇ ನಡೆಯುತ್ತಿದ್ದುದು, ಸ್ತ್ರೀ ಹಿರಿಮೆ (ಯಾಜಮಾನ್ಯ) ಮತ್ತು ಪುರೋಹಿತ ನಿರಾಕರಣೆಯ ಅಂಶ ನಿಚ್ಚಳವಾಗುತ್ತದೆ. ಈ ಕೃಷಿಕರ ಮತ್ತು ಶ್ರಮಜೀವಿಗಳ ಜೀವನ ರೀತಿನೀತಿಗಳು ನಿಸರ್ಗವನ್ನೇ ಅವಲಂಬಿಸಿದ್ದಕ್ಕೆ ಡಾ. ಪುರುಷೋತ್ತಮ ಬಿಳಿಮಲೆಯವರು ತಮ್ಮ “ಕರಾವಳಿ ಜಾನಪದ” (೧೯೯೦)ರಲ್ಲಿ ವಿಸ್ತಾರವಾಗಿ ವಿವರಿಸುತ್ತಾರೆ.

ಇಷ್ಟಾಗಿಯೂ ಇದು ಎಲ್ಲೋ ಒಂದೆರಡು ಕಡೆಯ ಸಂಗತಿಗಳಿಂದ ಎತ್ತಿ ಹಿಡಿಯಬೇಕಾದ ಸಂಗತಿಯಲ್ಲ, ನಾಡಿನ (ದೇಶದ) ಉದ್ದಕ್ಕೂ ಹರಡಿರುವ ಅನೇಕ ಸಂಗತಿಗಳ ಸಂಶೋಧನೆಯಿಂದಲೇ ಆಗಬೇಕು. ಜನಪದ ಜ್ಞಾನಕ್ಕೆ ಸಂಬಂಧಿಸಿದ ಸಾವಿರ ಸಂಗತಿಗಳು ಚದುರಿಬಿದ್ದಿವೆ. ಅವು ಸ್ಥಳಿಕವಾಗಿ ಬೇರೆ ಬೇರೆಯಂತೆ ಕಂಡು ಬಂದರೂ ಅಂಥ ಅನೇಕದರ ಆಳದಲ್ಲಿ ಅಡಗಿರುವ ಚರಿತ್ರೆಯನ್ನು ಕಂಡು ಹಿಡಿಯುವುದು ಮಾತ್ರ ಸೂಕ್ತವಾಗುತ್ತದೆ. ಈ ಕುರಿತು ಡಾ. ಹಿ.ಶಿ. ರಾಮಚಂದ್ರೇಗೌಡರು ಹೇಳುವ ಮಾತು ಮನನೀಯವಾಗಿದೆ.

"ಈಗ ಎಷ್ಟು ಜನಪದಗಳಿವೆಯೊ ಅಷ್ಟು 'ಜನಪದ ಪರಿಕಲ್ಪನೆ'ಗಳಿವೆ. ಜನಪದಗಳೂ ಅಷ್ಟೇ ಇರಬಹುದು. ನಮ್ಮದು ಆ ತರಹದ ಜಾನಪದವಲ್ಲ, ಅದು ಈ ಥರ, ನಮ್ಮದು ಬೇರೆಯದೆ ಜಾನಪದ. ನಮ್ಮದು ಈ ಥರ, ಅವರದು ಆ ಥರ -ಹೀಗೆ ತಮ್ಮ ತಮ್ಮಲ್ಲೇ ಜನಪದ-ಜಾನಪದಗಳನ್ನು ರಕ್ಷಿಸಿಕೊಂಡ ಜನರುಂಟು. ಇದನ್ನು ಅರಾಜಕ ಜಾನಪದ ಧೋರಣೆ ಎಂದು ಕರೆಯಬಹುದು. ವಿಶಿಷ್ಟತೆಯ ದೃಷ್ಟಿಯಿಂದ ಆಯಾ ಸಮೂಹ, ಸಂಸ್ಕೃತಿಗೆ ಸಂಬಂಧಿಸಿದ ಜಾನಪದ ಸ್ವಭಾವಗಳು ಪ್ರತ್ಯೇಕವಾಗಿಯೇ ಇರುವುದುಂಟು. ಆದರೆ ಇರುವುದೆಲ್ಲವೂ ಪ್ರತ್ಯೇಕವೆ ಎಂದು ಹೇಳಲು ಬರುವುದಿಲ್ಲ. ಅಂಥದೊಂದು 'ಜಾನಪದ' ಆದರ ಜಾನಪದ ಇರುವುದಾದರೆ ಅದು ಈ ಭೂಮಿಯ ಹೊರಗೆ ಹುಟ್ಟಿರಬೇಕು. ಇದೇ ಭೂಮಿ, ಇದೇ ನೀರು, ಇದೇ ಗಾಳಿಯ ಒಳಗೆ ಹುಟ್ಟುವ ಜನಪದಗಳೆಲ್ಲ ಸಂಬಂಧಾತ್ಮಕವಾಗಿಯೇ ಹುಟ್ಟಬೇಕು, ಬಾಳ ಬೇಕು. ಈ ನೈಸರ್ಗಿಕ ಮತ್ತು ಸಾಂಘಿಕ ಸಮಾನತೆಯ ದೃಷ್ಟಿಯಿಂದ ಲಕ್ಷಾಂತರ ಜನಪದಗಳಿದ್ದರೂ ಹಲವು ಸಮಾನ ಸ್ವಭಾವಗಳನ್ನು ಹೊಂದಿವೆ. ಈ ಸಮಾನ ಅಂಶಗಳ ಆಧಾರದ ಮೇಲೆ ಜನಪದವನ್ನು ಪರೀಕ್ಷಿಸಿದಾಗ ಅದರ ಪರಿಕಲ್ಪನೆ ಸಮಗ್ರವೂ, ವೈಜ್ಞಾನಿಕವೂ, ಸರ್ವಕಾಲಿಕವೂ ಆಗುತ್ತದೆ. ನಾವು ಅಂತಾರಾಷ್ಟ್ರೀಯ ಆಗಬೇಕು ಎನ್ನುವ ಕಾರಣಕ್ಕೆ ಈ ಬಗೆಯ ಸಮಾನತೆಗಳನ್ನು ಗುರುತಿಸಿಕೊಳ್ಳಬೇಕು ಎಂದಲ್ಲ. ಇರುವ ಸಮಾನ ಅಂಶಗಳ ಮೇಲೆ ಸತ್ಯವನ್ನು ಶೋಧಿಸಬೇಕೆಂಬುದ ಸರಿಯಾದ ಮಾರ್ಗ. ಈ ನಿಟ್ಟಿನಲ್ಲಿ ಆಧುನಿಕ 'ಜನಪದ' ಪರಿಕಲ್ಪನೆ ನಡೆದಿದೆ."[೭]

[ಜನಪದರು ನಾವು; ೧೯೮೭, ೧೯-೨೦]

ಡಾ. ರಾಮಚಂದ್ರೇಗೌಡರ ಈ ಮೇಲಿನ ಮಾತು ಜಾನಪದ ಸಂಸ್ಕೃತಿಯ ಪುನರುಜ್ಜೀವನ ಹಾಗೂ ಜನಪದ ತತ್ವಜ್ಞಾನವನ್ನು ವೈಜ್ಞಾನಿಕವಾಗಿ ಕಟ್ಟಿ ನಿಲ್ಲಿಸುವಲ್ಲಿ ಬಹಳ ಪೂರಕ ಮತ್ತು ಮಹತ್ವದ ಮಾತಾಗಿದೆ ಎಂಬುದಕ್ಕೆ ನಾನು ಇಲ್ಲಿ ಒಂದು ಉದಾಹರಣೆಯನ್ನು ಮಾತ್ರ ಕೊಡಬಯಸುತ್ತೇನೆ.

ಈ ಮೇಲೆ ಸೃಷ್ಟಿಯ ಹುಟ್ಟು, ನಾಗರಿಕತೆಯ ಹುಟ್ಟು, ಸ್ತ್ರೀ ಮೇಲ್ಮೆ, ಹೊಲೆಮಾದಿಗರ ಶ್ರೇಷ್ಠತೆ ಮತ್ತು ಸ್ವಂತಿಕೆ, ಇತ್ಯಾದಿಗಳ ಕುರಿತಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿಯ ಜನಪದ ಪುರಾಣಗಳ ಉದಾಹರಣೆ (ಡಾ. ಎನ್.ಆರ್. ನಾಯಕರ ಪುಸ್ತಕ) ಕೊಟ್ಟಿರುವುದರೊಂದಿಗೆ ಆಂಧ್ರ ಪ್ರದೇಶ ಮೂಲವಾದ ಆಂಧ್ರ-ಕರ್ನಾಟಕದಲ್ಲಿ ಹರಡಿರುವ ಸಿಂದ್ ಮಾದಿಗರ ಸಂಸ್ಕೃತಿಯ ವಿವರಗಳನ್ನು ಇಟ್ಟು ಪರಿಶೀಲಿಸುವುದರಿಂದ ಅನೇಕ ಕುತೂಹಲಕಾರಿ ವಿಷಯಗಳು ಹೊಳೆಯುತ್ತವೆ ಮತ್ತು ಜಾನಪದ ಸಂಸ್ಕೃತಿಯ ಒಟ್ಟಂದದ ಕುರಿತು, ವೈಜ್ಞಾನಿಕತೆಯ ಕುರಿತು ಕೆಲವು ಒಳನೋಟಗಳು ಸಿಕ್ಕುತ್ತವೆ.

"ಭೂಮಿ, ಆಕಾಶ, ಗಾಳಿ ಬೆಳಕುಗಳಿಲ್ಲದ ಅನಂತ ಕಾಲದಲ್ಲಿ ಓಂಕಾರ ನಾದ ದೊಂದಿಗೆ ಒಂದು ಶಂಖ ಹುಟ್ಟಿತು. ಆ ಶಂಖದಿಂದಲೇ ತಾತ ಆದಿ ಜಾಂಬವಂತ ಹುಟ್ಟಿಬಂದು ಊರಗಲ ತಾವರೆಯ ಎಲೆಯ ಮೇಲೆ ಕೂತು ತಪಸ್ಸು ಮಾಡತೊಡಗಿದ. ಆತ ಹುಟ್ಟಿದ ಆರು ಗಳಿಗೆಗೆ ಆದಿಶಕ್ತಿ ಅದೇ ಶಂಖದಿಂದ ಹುಟ್ಟಿದಳು. ತಾತನ ಬಳಿ ಬಂದು 'ನನ್ನ ಕಾಮವನ್ನು ತೀರಿಸು' ಎಂದು ಒತ್ತಾಯ ಮಾಡಿದಳು. ಆಗ ತಾತ 'ಈ ರೂಪದಲ್ಲಿ ಸಾಧ್ಯವಿಲ್ಲ. ನಾವು ರೂಪ ಬದಲಾಯಿಸಿ ಕೂಡೋಣ' ಎಂದು ಇಬ್ಬರು ಎರಡು ನವಿಲಾದರು. ಒಂದು ಹೆಣ್ಣು ನವಿಲು, ಒಂದು ಗಂಡು ನವಿಲು 'ಜಗನ್ನಾಟಕವನ್ನಾಡಿದರು'. "ಕೂಡಿದ ಪರಿಣಾಮವಾಗಿ ಹೆಣ್ಣು ನವಿಲು ನಾಲ್ಕು ಮೊಟ್ಟೆಯನ್ನಿಟ್ಟಿತು. ಎಷ್ಟು ಕಾವು ಕೊಟ್ಟರೂ ಒಡೆದು ಮರಿಯಾಗಲಿಲ್ಲ. ಆಗ ತಾತ ಒಂದು ಮೊಟ್ಟೆಯನ್ನು ಒಡೆದು ಅದರ ಮೇಲ್ಭಾಗವನ್ನು ಆಕಾಶ ಮಾಡಿದ. ಕೆಳಗಿನ ಭಾಗವನ್ನು ಭೂಮಿ ಮಾಡಿದ. ಇನ್ನೊಂದು ಮೊಟ್ಟೆಯನ್ನು ಒಡೆದು ಒಂದು ಭಾಗವನ್ನು ಸೂರ್ಯ ಮಾಡಿದ, ಇನ್ನೊಂದು ಭಾಗವನ್ನು ಚಂದ್ರ ಮಾಡಿದ. ಮೂರನೆಯ ಮೊಟ್ಟೆಯಿಂದ ನಕ್ಷತ್ರಲೋಕ ಸೃಷ್ಟಿಸಿದ. ನಾಲ್ಕನೆಯ ಮೊಟ್ಟೆಯಿಂದ ವಿಷ್ಣು, ಪರಮೇಶ್ವರ, ವಿಶ್ವಬ್ರಹ್ಮ ಈ ಮೂವರು ತ್ರಿಮೂರ್ತಿಗಳು ಹುಟ್ಟಿದರು."

"ತ್ರಿಮೂರ್ತಿಗಳು ಬೆಳೆದು ದೊಡ್ಡವರಾದಾಗ ಅವರನ್ನು ಕಂಡು ಮತ್ತೆ ಆದಿ ಶಕ್ತಿಗೆ ಕಾಮಾತುರವಾಯಿತು. ಮದುವೆಯಾಗುವಂತೆ ಒತ್ತಾಯಿಸಿದಳು. ವಿಷ್ಣು ವಿಶ್ವಬ್ರಹ್ಮ ಒಪ್ಪಲಿಲ್ಲ. ಶಿವ ತಾತ ಹೇಳಿಕೊಟ್ಟ ಉಪಾಯದಂತೆ ಹಣೆಯಲ್ಲಿನ 'ಉರಿಗಣ್ಣು', ಕೈಯಲ್ಲಿನ 'ಉರಿಅಸ್ತ್ರ' ಕೊಡುವುದಾದರೆ ಮದುವೆಯಾಗುತ್ತೇನೆ ಅಂದ. ಆದಿಶಕ್ತಿ ಆನಂದದಿಂದ ಕೊಟ್ಟಳು. ಶಿವ ಉರಿಗಣ್ಣನ್ನು ನೆತ್ತಿಯಲ್ಲಿಟ್ಟುಕೊಂಡು ಅವಳನ್ನು ದಿಟ್ಟಿಸಿದ. ಆದಿಶಕ್ತಿ ಉರಿದು ಬೂದಿಯಾದಳು. ಬೂದಿಯ ಗುಡ್ಡೆಯನ್ನು ನಾಲ್ಕು ಭಾಗ ಮಾಡಿದಾಗ ನಾಲ್ಕುಜನ ಸುಂದರ ಸ್ತ್ರೀಯರು ಹುಟ್ಟಿಬಂದರು. ಅವರೇ ಲಕ್ಷ್ಮಿ, ಸರಸ್ವತಿ, ಪಾರ್ವತಿ ಮತ್ತು ಶ್ಯಾಮಲಾಶಕ್ತಿ. ಮೊದಲ ಮೂವರು ತ್ರಿಮೂರ್ತಿಗಳಿಗೆ ಜೋಡಿಯಾದರೆ ಶ್ಯಾಮಲಾಶಕ್ತಿ ಸರ್ವಶಕ್ತಿಗಳ ಸಮ್ಮೇಳನವಾಗಿ 'ಎಲ್ಲಮ್ಮ' ಆದಳು."[೮] [ಸಿಂದ್ ಮಾದಿಗರ ಸಂಸ್ಕೃತಿ, ಸಾಹಿತ್ಯ ಅಕಾಡೆಮಿ, ಉಪಸಂಸ್ಕೃತಿ ಮಾಲೆ, ಲೇ: ಕೋಟಗಾನಹಳ್ಳಿ ರಾಮಯ್ಯ. ೧೯೯೩: ೧೩೦]

ಈ ಮೇಲಿನ ವಿವರಗಳನ್ನು ಗಮನಿಸಿದಾಗ ಸೃಷ್ಟಿಕ್ರಿಯೆ ಮತ್ತು ಎಲ್ಲರ ಅಮ್ಮ 'ಎಲ್ಲಮ್ಮ' ಆಗುವಿಕೆ ಮುಂತಾದವು ಸ್ತ್ರೀಮೂಲವನ್ನೇ ಹೇಳುತ್ತವೆ. ಅಲ್ಲದೆ ವೈದಿಕ ವಿಚಾರಧಾರೆಗಿಂತ ಭಿನ್ನವಾದ ಕ್ರಮವೇ ಇಲ್ಲಿ ಕಾಣುತ್ತದೆ. ಅಲ್ಲದೆ ವಿಶ್ವ ಸೃಷ್ಟಿಯ ಸಂದರ್ಭದಲ್ಲಿ ನಾನು ಮೊದಲು

ಕೊಟ್ಟ ಕತೆಗಳ ಮತ್ತು ಇವುಗಳ ಅಂತರಾಳದಲ್ಲಿ ಎಲ್ಲೋ ಒಂದು ಸಮಾನ ಸಂಬಂಧ ಕರುಳ ಸಂಬಂಧ ಕಾಣುತ್ತದೆ. ಕೆ. ರಾಮಯ್ಯ ಇನ್ನೂ ಒಂದು ಅದ್ಭುತವಾದ ಕತೆಯನ್ನು ಸಂಗ್ರಹಿಸಿಕೊಡುತ್ತಾರೆ:

> "ತಾತ ಆದಿಜಾಂಬವ ತನ್ನ ಮಗಳಾದ ಮತಂಗ ಕನ್ಯೆಯ ಬೆನ್ನು ಚರ್ಮವನ್ನೇ ಸಿಗಿದು ತುಂಡು ತುಂಡುಗಳನ್ನಾಗಿ ಕತ್ತರಿಸಿ ಒಂದೊಂದು ಗುಂಪಿಗೂ ಹಂಚಿದನಂತೆ. ಇದು ಮೂಲವಾರ (ಹೊಲೆಯರ ತುಂಡು) ಇದು ಮಾದಿಗವಾರ (ಮಾದಿಗರ ತುಂಡು), ಇದು ಕಾಮವಾರ (ಒಕ್ಕಲಿಗರ ತುಂಡು), ಇದು ಗಾಂಡ್ಲವಾರ (ಗಾಣಿಗರ ತುಂಡು), ಇದು ಬಲಿಜವಾರ (ಬಲಿಜಿಗರ ತುಂಡು), ಇದು ಬಾಪುನಿವಾರ (ಬ್ರಾಹ್ಮಣನ ತುಂಡು) ಎಂದು ಒಂದೊಂದು ಕುಲದವರಿಗೂ ಹಂಚಿಬಿಟ್ಟನಂತೆ".[೯] (ಅದೇ ಪುಸ್ತಕ, ಪು. ೧೬-೧೭)

ಈ ಕತೆಯ ಮೂಲಕ ಇಡಿ ಮಾನವಕುಲ ಒಂದೇ ಕುಟುಂಬದಿಂದ (ಅದು ಮೂಲವಾ/ಹೊಲೆಮಾದಿಗರದು) ಎಂಬ ಅದ್ಭುತವಾದ ವೈಜ್ಞಾನಿಕ ಸತ್ಯವನ್ನು ಹೊರಗೆಡಹುತ್ತದೆ. ಬಳಿಗಳನ್ನು ಅಭ್ಯಾಸ ಮಾಡುತ್ತ ಡಾ. ಎನ್. ಆರ್. ನಾಯಕರು ಇದೇ ನಿರ್ಣಯಕ್ಕೆ ಬರುವುದು ಕುತೂಹಲಕಾರಿಯಾಗಿದೆ. ಮತ್ತು ಇಲ್ಲಿಯೂ ಕೂಡ ಸ್ತ್ರೀ ಮುಖ್ಯತೆಯನ್ನೇ ಎತ್ತಿ ಹೇಳಿದಂತಿದೆ. ಆದಿ ಜಾಂಬವ ಆದಿ ಪುರುಷನಾದರೂ ಆತ ಹುಟ್ಟಿಬಂದುದು ಶಂಖದಿಂದ (ಯೋನಿ) ಎಂಬುದು ಇದಕ್ಕೆ ಪೋಷಕವಾಗೇ ಇದೆ.

ಸಿಂದ್‌ಮಾದಿಗರ ಸಂಸ್ಕೃತಿಯನ್ನು ಅಭ್ಯಾಸ ಮಾಡಿದ ಕೋಟಗಾನಹಳ್ಳಿ ರಾಮಯ್ಯ ಬರುವ ನಿರ್ಣಯ ಕೂಡ ಮಹತ್ವದ್ದಾಗಿದೆ.

> "ಸಿಂದ್ ಮಾದಿಗರ ಮದುವೆ ಮತ್ತು ಸಾವಿನ ಆಚರಣೆಗಳಂತೂ ಅವರ ಆದಿ ಮೂಲ ಸಂಸ್ಕೃತಿಯ ಅಪ್ಪಟ ಪ್ರತೀಕಗಳೇ ಆಗಿವೆ. ಧಾರೆಯ ಹಿಂದಿನ ರಾತ್ರಿ ನಡೆಸುವ ಮೂಲ ಗಂಗೆಯ ಉಪವಾಸದ ಬಲಿ ಆಚರಣೆ, ಸಾವಿನ ಸಂದರ್ಭದಲ್ಲಿಯ ಬಲಿಯೂ, ಆ ಸತ್ತವನ ಸಮಾಧಿಗೆ ಅರ್ಪಿಸುವ ಮಾಂಸ ಮದ್ಯಗಳ ನೈವೇದ್ಯ ಇವೆಲ್ಲವೂ ಅವರು ಶಾಕ್ತಾರಾಧನೆಯ ತಂತ್ರ ಪಂಥ ಮೂಲದವರೆನ್ನುವುದನ್ನು ನಿರೂಪಿಸುತ್ತದೆ."[೯] (ಅದೇ ಪುಸ್ತಕ, ಪು; ೩೪)

ಇಂಥ ಒಂದು ಎಚ್ಚರಿಕೆಯ ಪ್ರಜ್ಞೆಯಿಂದ ನಡೆಯುವ ಅನೇಕ ಸಂಸ್ಕೃತಿಯ ಅಧ್ಯಯನ ಮತ್ತು ಮರು ವ್ಯಾಖ್ಯಾನ ಸದ್ಯದ ಸಾಂಸ್ಕೃತಿಕ ಪುನರುಜ್ಜೀವನಕ್ಕೂ, ಜನಪದ ತತ್ವಜ್ಞಾನದ ಮರು ನಿರ್ವಚನಗಳಿಗೂ ಮಹತ್ವದ ಕಾಣಿಕೆಯನ್ನು ಸಲ್ಲಿಸ ಬಹುದಾಗಿದೆ.

ಅಡಿಟಿಪ್ಪಣಿಗಳು

೧. ಉಪಸಂಸ್ಕೃತಿ ಮಾಲೆ: ಸಾಹಿತ್ಯ ಅಕಾಡೆಮಿ ಪ್ರಕಟನೆ ೧೯೯೩; ಮುನ್ನುಡಿ.

೨. The culture and the civilisation of ancient India in historical outline

೩. ಜಾತ್ರೆಗಳು: ೧೯೯೩; ೧೮೩.

೪. ಪ್ರಾಚೀನ ಭರಾತದಲ್ಲಿ ಭೌತನಾದ. ತಿನ. ಬಿ.ವಿ ಕಕ್ಕಿಲ್ಲಾಯ ೧೯೮೯; ೯೮

೫. ಡಾ. ಎನ್. ಆರ್. ನಾಯಕ; ಕಾರವಾರ ಜಿಲ್ಲೆಯ ಜನಪದ ಗೀತಗಳು; ೧೯೮೨; ೧೫೪.

೬. ಜಾತ್ರೆಗಳು. ಪೂರ್ವೋಕ್ತ

೭. ಜನಪದರು ನಾವು; ೧೯೮೭; ೧೯-೨೧.

೮. ಸಿಂದ್ ಮಾಡಿಗರ ಸಂಸ್ಕೃತಿ: ಸಾಹಿತ್ಯ ಆಕಾಡೆಮಿ; ಕೋಟಗಾನಹಳ್ಳಿ ರಾಮಯ್ಯ ೧೯೯೩; ೧೩೦.

೯. ಅದೇ, ೧೬-೧೭.

೧೦. ಅದೇ, ೩೪.

*

ಬಂಡಿಹಬ್ಬ : ಒಂದು ಸಾಂಸ್ಕೃತಿಕ ಅಧ್ಯಯನ

ಸಮುದಾಯದ ಯಾವುದೇ ಹಬ್ಬ, ಜಾತ್ರೆ ಅದರ ಸಾಂಸ್ಕೃತಿಕ ಅಭಿವ್ಯಕ್ತಿಯೂ ಆಗಿರುತ್ತದೆ. ಒಂದು ಕಾಲದಲ್ಲಿ ಆ ಬದುಕಿನ ಸಾಮೂಹಿಕ ಸಂಸ್ಕೃತಿ, ಶೈಕ್ಷಣಿಕ ಅಂಗವೂ ಆಗಿರುತ್ತದೆ. ಆದರೆ ಕಾಲ ಕಳೆದಂತೆ ಅದು ತನ್ನ ಮೂಲಸ್ವರೂಪವನ್ನು ಕಳಕೊಂಡು ಸಮಕಾಲೀನವಾಗುತ್ತ ಆ ಕಾಲದ ಅಭಿರುಚಿ, ದೌರ್ಬಲ್ಯತೆಯನ್ನು ಕೂಡಿಕೊಂಡೇ ಪ್ರಕಟವಾಗುತ್ತದೆ. ಒಂದು ಕಾಲದ ಸಾಮೂಹಿಕ ಉತ್ಪಾದನೆ, ಅವುಗಳ ಸಂಬಂಧದಲ್ಲಿ ಉಂಟಾಗುವ ಈ ಸಮುದಾಯ ಸಂಸ್ಥೆ ಅಂದರೆ ಆರ್ಥಿಕ ಮತ್ತು ಪೌರಾಣಿಕ ರಚನಾತ್ಮಕ ಪರಿಣಮದಿಂದಾಗಿ [Result of total relationship of the economics and mythical structure] ಅದರ ಉತ್ಪಾದಿತ ಸ್ವರೂಪವಾದ ಮೇಲ್‌ರಚನೆಯ (Super structure)ದ ಅಡಿಯಾಳಾಗಿ, ಅದರಲ್ಲಿ ಒಂದಾಗಿ ತಾನೇ ನಿರ್ದೇಶಕವಾಗಿ ಬಿಡುವುದು ಉಂಟು. ಉದಾಹರಣೆಗೆ, ದ್ರಾವಿಡ ಜನಾಂಗ ಸತ್ತವರನ್ನು ಹೂಳಿದ ಸಮಾಧಿಯ ಮೇಲೆ ಇಡುವ ಕಲ್ಲು ನಂತರ ಲಿಂಗವಾಗಿ, ಸ್ಥಾಪಿತವಾಗಿ ಬಿಡುತ್ತದೆ.

ಭಾರತದಲ್ಲಿ ಸಾಂಸ್ಕೃತಿಕ ಸಂಘರ್ಷ ಸತತವಾಗಿ ನಡೆದೇ ಇದೆ. ಉಳಿದ ದೇಶಗಳ ಈ ಸಂಘರ್ಷಕ್ಕೂ ಭಾರತಕ್ಕೂ ವಿಶೇಷವಾದ ವ್ಯತ್ಯಾಸವೆಂದರೆ ಇಲ್ಲಿಯ ಜನಾಂಗಗಳ ಮಿಶ್ರಣವನ್ನು ಸೇರಿ ಉಂಟಾದ ಜಾತಿ ಪದ್ಧತಿ. ಜಾತಿಗಳು ಮುಚ್ಚಿದ ವರ್ಗವೇ ಆಗಿ ಇಲ್ಲಿಯ ಸಮುದಾಯ ಸಂಸ್ಕೃತಿಯನ್ನು ಮೇಲ್ವರ್ಣ ಹಾಗೂ ವರ್ಗವನ್ನೊಳಗೊಂಡ ಸಂಸ್ಕೃತಿ ಸದಾ ಕಬಳಿಸುತ್ತಲೇ ಬಂದಿದೆ. ಇಲ್ಲಿ ಇಲ್ಲಿಯ 'ದುರ್ಗಿ' ಆರ್ಯಾದುರ್ಗಾ ಆಗಿ, 'ಅಮ್ಮ' ಶಿವೆಯೊ, ಶಾಂತಿಕಾ ಪರಮೇಶ್ವರಿಯೋ ಆಗಿ ಪರಿವರ್ತನೆ ಹೊಂದಿಬಿಡುತ್ತವೆ.

ಧಾರ್ಮಿಕ-ದೈವಿಕ ಪ್ರಭಾವದಿಂದ ಈ ಮೇಲುವರ್ಗದ ಜನಕೆಳವರ್ಗದ ಮತ್ತು ದಲಿತ ಜನಾಂಗವನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಎಂಥಾ ಸಂಸ್ಕೃತಿಯನ್ನುಂಟು ಮಾಡುತ್ತಾರೆನ್ನಲು 'ಮಹಿಷಾಸುರ ಮರ್ದಿನಿ' ಪುರಾಣವೇ ಸಾಕ್ಷಿ.

ಮಹಿಷಾಸುರ ಮರ್ದಿನಿ ಓರ್ವ ಬ್ರಾಹ್ಮಣ ಕನ್ಯೆ. ಅವಳು ಕಾರಣಾಂತರದಿಂದ ಓರ್ವ ಹೊಲೆಮಾದಿಗನನ್ನು ಮದುವೆಯಾಗುತ್ತಾಳೆ. ಆದರೆ ಆಕೆಗೆ ಇದು ತಿಳಿದಿರುವುದಿಲ್ಲ. ಆತ ತನ್ನ

ಮೊದಲ ಪ್ರಕಟನೆ: 'ಸಾಧನೆ' ಬೆಂಗಳೂರು ವಿ.ವಿ. ಸಂಪುಟ-೨೧-೨೨ ಸಂಚಿಕೆ ೧-೪, ೧-೨; ಜನವರಿ ಡಿಸೆಂಬರ ೧೯೯೨ ಜನವರಿ-ಜೂನ್ ೧೯೯೩.

ಹೆಂಡತಿಗೆ ತಿಳಿಯದ ಹಾಗೆ ಅಡಗಿ ತನ್ನ ಜನರ ಮಧ್ಯ ಮಾಂಸಭಕ್ಷ ಮಾಡಿ ಬರುತ್ತಿದ್ದ. ಅವರಿಗೆ ಮಕ್ಕಳಾಗಿ ಮಗ ದೊಡ್ಡವನಾಗುತ್ತಾನೆ. ಅಪ್ಪನ ಸಂಗಡ ಅವರ ಹಟ್ಟಿಗೇ ಹೋಗಿರುತ್ತಾನೆ. ಹೀಗೆ ಒಂದು ದಿನ ಬಡಿಸುವಾಗ ಪಲ್ಯದಲ್ಲಿ ಬಂದ ಹೋಳನ್ನು ತಿಂದು ಇದು ಯಾವುದರ ಮಾಂಸ ಎಂದು ಕೇಳುತ್ತಾನೆ. ಅವ್ವನಿಗೆ ಸಂಶಯ ಬರುತ್ತದೆ. ಆದರಿಂದ ಅವಳು ತನ್ನ ಗಂಡನ ಚಲನವಲನದ ಮೇಲೆ ನಿಗಾ ಇಟ್ಟಿರುತ್ತಾಳೆ. ನಂತರ ಅವಳಿಗೆ ತನ್ನ ಗಂಡ ಹೊಲೆ ಮಾದಿಗ ಎಂದು ತಿಳಿಯುತ್ತದೆ. ಅವಳು ಗಂಡನ ಕೊಲೆ ಮಾಡುತ್ತಾಳೆ. ಇವಳೇ ಮುಂದೆ ಮಹಿಷಾಸುರ ಮರ್ದಿನಿ ಪುರಾಣವಾಗಿ ಬಿಡುತ್ತಾಳೆ.

ಈ ಘಟನೆಯ ಹಿಂದೆ ಆಗಿನ ಬ್ರಾಹ್ಮಣ ವರ್ಗದ ಪಿತೂರಿ ಏನೆಂದು ಅರ್ಥ ಮಾಡಿಕೊಳ್ಳಬಹುದು. ಯಾವ ವೈದಿಕ ಸಂಸ್ಕೃತಿ ಓರ್ವ ಮಹಿಳೆ ತನ್ನ ಗಂಡ ಕುಷ್ಠ ರೋಗಿಯಾಗಿದ್ದರೂ, ವೇಶ್ಯಾಸಹವಾಸಿಯಾಗಿದ್ದರೂ ಪತಿಯೇ ದೇವರೆಂದು ತಿಳಿಯ ಬೇಕೆಂದು ಉಪದೇಶಿಸುತ್ತದೋ ಅದೇ ಸಂಸ್ಕೃತಿ ಗಂಡನನ್ನು ಕೊಂದವಳನ್ನು ದೇವತೆಯಾಗಿ, ಶಿವೆಯಾಗಿ ಪೂಜೆ ಮಾಡುತ್ತದೆ! ಈ ವಿಪರ್ಯಾಸ ಏಕೆ? ಕಾರಣ ಇಷ್ಟೆ, ಕೆಳವರ್ಗದವರು ಮೇಲುವರ್ಗದ ಹೆಣ್ಣುಗಳನ್ನು ಮದುವೆಯಾದರೆ ಎಂತಹ ಭಯಾನಕ ಶಿಕ್ಷೆಗೆ ಒಳಗಾಗಬೇಕಾಗುತ್ತದೆಂದೂ, ಅದಕ್ಕೆ ಈಕೆಯೇ ಉದಾಹರಣೆಯೆಂದು ಮನದಟ್ಟು ಮಾಡಲು ಈ ಕತೆ ಇದೆ. ನಂತರ ಆತ ರಾಕ್ಷಸ ವಗೈರೆ ಎಂಬುದು ಕತೆ.

ಆದರೂ, ಈ ಎಲ್ಲ ಅಮಾನುಷ ಶೋಷಣೆಯ ಮಧ್ಯದಲ್ಲಿಯೂ ಕೆಳವರ್ಗದ ಮತ್ತು ದಲಿತ ಸಂಸ್ಕೃತಿ ನಾಶವಾಗದೆ ಉಳಿದು ಬಂದಿದೆ.

ಇಲ್ಲಿ ನಾವು ಗಮನಿಸಬೇಕಾದ ಅಂಶವೆಂದರೆ, ಸಮಾಜದ ಮೇಲು ಸ್ತರದಲ್ಲಿದ್ದು ಯಜಮಾನನಂತೆ ನಿಯಂತ್ರಿಸುತ್ತಿದ್ದ ಈ ಸಂಸ್ಕೃತಿಗೆ ಹೊರತಾದ ಪ್ರತ್ಯೇಕವಾದ ಸಂಸ್ಕೃತಿ-ನಮ್ಮ ಸಮಾಜದ ಕೆಳಸ್ತರದಲ್ಲಿ ಬಹಳ ಆದಿಯಿಂದಲೂ ಇತ್ತು ಎಂಬುದು.

"ಬಂಡಿ ಹಬ್ಬ ಒಂದು ಜನಪದ ಹಬ್ಬ, ಗ್ರಾಮದೇವತೆಯ ಹೆಸರಿನಲ್ಲಿ ಈ ಹಬ್ಬವನ್ನು ಕೆಲವು ಕಡೆ ಹಸಿರು ಬಂಡಿ ಎಂದೂ ಕರೆಯುತ್ತಾರೆ."

"ಬಂಡಿ ಹಬ್ಬವು ಸಾಮಾನ್ಯವಾಗಿ ಅಮ್ಮನವರ ದೇವಾಲಯಗಳಲ್ಲಿ ಜರುಗುವ ವಿಶೇಷ ಹಬ್ಬ... ಅಮ್ಮನವರ ದೇವಾಲಯದಲ್ಲಿ ಬ್ರಾಹ್ಮಣರು ಪೂಜಾರಿಗಳು. ಆದರೆ ಸಾಮಾನ್ಯವಾಗಿ ಬ್ರಾಹ್ಮಣೇತರರು ಪೂಜಾರಿಗಳಾಗಿರುವುದು ಈ ಬಂಡಿ ಹಬ್ಬ ಜರುಗುವಲ್ಲಿನ ದೇವಾಲಯದ ಪದ್ಧತಿ.

ತನ್ನ ಮೇಲೆ ಎಷ್ಟೇ ಸಾಂಸ್ಕೃತಿಕ ಅಭಿಶೋಷಣೆ ನಡೆದರೂ ತನ್ನ ಪ್ರತಿಭಟನೆಯನ್ನು ಅಂತರ್ಗತಗೊಳಿಸಿಕೊಂಡೇ ಈ ಕಿರು ಸಂಸ್ಕೃತಿ ಅಥವಾ ಶೂದ್ರ-ದಲಿತ ಸಂಸ್ಕೃತಿ ಅಭಿವ್ಯಕ್ತಗೊಳ್ಳುತ್ತದೆ."

ಈ ಒಂದು ಸಾಂಸ್ಕೃತಿಕ ಅನುಸಂಧಾನವನ್ನು ಬಂಡಿಹಬ್ಬದ ಆಚರಣೆಯಲ್ಲಿ ಕಾಣಬಹುದು.

ಬಂಡಿ ಹಬ್ಬ ಎಂಬ ಹೆಸರು ಹೇಗೆ ಬಂತು? ಎಂದು ಬಲ್ಲವರು ವಿಚಾರಿಸಿದ್ದಾರೆ. ನಾಲ್ಕು ಚಿಕ್ರ ಇರುವ ಗಾಡಿ (ಬಂಡಿ) ಮೇಲೆ ದೇವಿ ಮೂರ್ತಿಯನ್ನು ಕೂಡ್ರಿಸಿ ಮೆರವಣಿಗೆ ಒಯ್ಯುತ್ತಿದ್ದರು. ಆದು ಬಂಡಿ ಹಬ್ಬವೆಂದೇ ಹೆಸರಾಯಿತು. ಏನಿದ್ದರೂ ಇದು ಬಂಡಿಯ ಕಲ್ಪನೆ ಬರುವ ಮೊದಲೆ ಆಚರಣೆಯಲ್ಲಿದ್ದ ಹಬ್ಬವಾಗಿರಬೇಕು. ಬಂಡಿಯ ಆಕಾರ ರಚನೆಯೇ ಮುಂದೆ ತೇರು (ರಥ)ನ ರಚನೆಗೆ ಕಾರಣವಾದಂತೆ ಬಂಡಿಯ ರಚನೆಗೆ ಬೇಟೆಯ ಜೀವನ ಕಾಲದಲ್ಲಿ ಜನರು ರಚಿಸಿಕೊಳ್ಳುತ್ತಿದ್ದ ಮರದ ಮೇಲಿನ ಮನೆ ನಂತರ ಕಿರು ಚಪ್ಪರವೂ ಕಾರಣವಾಗಿರಬಹುದು. ಅಂದರೆ 'ಬಂಡಿ' ಎಂಬ ಭಾಷಾತ್ಮಕ ಸಂಕೇತ ಉಂಟಾಗುವ ಪೂರ್ವದಲ್ಲೇ ಬಂಡೆ ಹಬ್ಬ ಇದ್ದಿರಬಹುದು, ಇದು ಭೂಮಿ ತಾಯಿಯ (ಅಂಕೋಲೆಯ "ಆರ್ಯಾದುರ್ಗ"ಕ್ಕೆ "ಭೂಮಿ ತಾಯಿ" ಎಂದೇ ಮೂಲ ಹೆಸರು). ಹಬ್ಬವಾಗಿದೆ. ಅಂದರೆ ಅದು ಬಂಡೆ ಹಬ್ಬವಾಗಿರಲೂ ಬಹುದು. ಬಂಡೆ ಅಂದರೆ ಕಲ್ಲು. ಗಟ್ಟಿ ಮಣ್ಣು. ಭೂಮಿ ಜಾನಪದದಲ್ಲಿ 'ಏ'ಯು 'ಇ' ಆಗುವುದು ಸಾಮಾನ್ಯ. 'ಮನೆ' 'ಮನಿ' ಆದ ಹಾಗೆ 'ಬಂಡೆ', 'ಬಂಡಿ' ಆಗಲೂ ಸಾಧ್ಯ. ಯಾಕೆಂದರೆ ಕಾಲಾಂತರದಲ್ಲಿ ಅಂತರ್ಗತಗೊಂಡ ಒಂದು ಆಚರಣೆ (ಬಂಡಿಯ ಮೇಲೆ ದೇವಿ ಕೂಡ್ರಿಸುವುದು) ಅದರ ಪೂರ್ವವನ್ನು ಮರೆಸಿಬಿಡುವುದುಂಟು ಕಲ್ಲನ್ನು ಪೂಜೆ ಮಾಡುವುದು ದ್ರಾವಿಡ (ಸತ್ತವರನ್ನು ಹೂಳಿದಲ್ಲಿ ಕಲ್ಲು ಇಡುವುದು. ವೀರರ ಸ್ಮಾರಕವಾಗಿ ಕಲ್ಲು ಇಟ್ಟು ಜಟ್ಟಿಗೆ ಮುಂತಾಗಿ ಪೂಜಿಸುವುದೂ ಸತಿ ಹೋದವಳ ಸ್ಮಾರಕವಾಗಿ ಮಾಸ್ತಿಕಲ್ಲು ಮಾಡಿ ಪೂಜಿಸುವುದು). ಜನಾಂಗದಲ್ಲಿ ಇತ್ತು. ಇದು ಊಹೆ. ಅದೇನೇ ಇದ್ದರೂ ಇದು ಭೂಮಿ ತಾಯಿಯ ಅಥವಾ ಗ್ರಾಮ ದೇವತೆಯ ಪೂಜೆಯೇ ಆಗಿದೆ.

"ದೇವತೆಯನ್ನು ಬಂಡಿಯ ಮೇಲೆ ಮೆರವಣಿಗೆಯಲ್ಲಿ ಕೊಂಡೊಯ್ಯುವಾಗ ಅಕ್ಕಪಕ್ಕದಲ್ಲಿ ದಾಸ ಮತ್ತು ಪುರುಷ (ಧಾರ್ಮಿಕ ಪೂಜಾರಿ) ಇರುತ್ತಾರೆ. ದಾಸ ಹೆಗಲ ಮೇಲೆ ಕಿರುಗಂಟೆ ಕಟ್ಟಿದ ಒಂದು ವನಕೆ, ಎಡ ಕಂಕುಳಲ್ಲಿ ಕಡಾಸು, ಬಲಕಂಕುಳಲ್ಲಿ ತುತ್ತೂರಿ, ಬಾಂಕಿ, ಶಂಖ, ಎದೆಯ ಮೇಲೆ ಆನೆಯ ವಿಗ್ರಹ, ಬಲಗೈಯಲ್ಲಿ ಜಾಗಟೆ ಹಿಡಿದಿರುತ್ತಾನೆ. ಪುರುಷ ಭೈರವನ ಶಿಷ್ಯ. ಈತ ಕಬ್ಬಿಣದ ದೊಡ್ಡ ತ್ರಿಶೂಲ ಮತ್ತು ಬೆಳ್ಳಿಯ ಸಣ್ಣ ತ್ರಿಶೂಲಗಳನ್ನು ಸೇರಿಸಿ ನವಿಲುಗರಿ ಕಟ್ಟನ್ನು ಹೆಗಲ ಮೇಲೆ ಇಟ್ಟುಕೊಂಡು, ಕಂಕುಳಲ್ಲಿ ವಿಭೂತಿ ಚೀಲ, ಕೈಯಲ್ಲಿ ಜಿಂಕೆಯ ಕೊಂಬಿನ ವಾದ್ಯ, ತೀರ್ಥದ ಬಟ್ಟಲನ್ನು ಹಿಡಿದಿರುತ್ತಾನೆ."

ಇಲ್ಲಿ ರೂಪುಗೊಂಡ ಸಂಸ್ಕೃತಿ ಆದಿ ಮಾನವನದ್ದು. ಆತನ ಬೇಟೆಗಾರಿಕೆಯನ್ನೆಲ್ಲ ಇದು ವ್ಯವಸ್ಥಿತವಾಗಿ ಹೇಳುತ್ತದೆ.

ಬೇಟೆಗಾರಿಕೆಯ ಜೀವನದಲ್ಲಿ ಮನುಷ್ಯ ತನ್ನ ಆಯುಧವಾಗಿ ಬಾಣ, ತ್ರಿಶೂಲವನ್ನೇ ಉಪಯೋಗಿಸುತ್ತಿದ್ದ. ಮತ್ತೆ ಅವನು ದೇವರಿಗೆ ಅದನ್ನೆ ಕೊಡದೆ ಏನು ಮಾಡಿಯಾನು? ಮನುಷ್ಯನ ಮನಸ್ಸು ವಿಸ್ತಾರವಾದಂತೆ ಅವನ ದೇವರ ಕಲ್ಪನೆ ವಿಸ್ತಾರವಾಗುತ್ತದೆ" ತಾನು ಬೇಟೆಯಾಡಿದ ಪ್ರಾಣಿ, ಪಕ್ಷಿಗಳ ಚರ್ಮ, ಕೋಡು, ಮೂಳೆ, ಗರಿಗಳೇ ಅವನ

ಆಭರಣವಾಗಿದ್ದವು. ಬಹುಶಃ ಆನೆಯಂಥ ಪ್ರಾಣಿಯನ್ನು ಕೊಲ್ಲುವುದು ಸಾಮಾನ್ಯ ವೀರತ್ವದ ಕೆಲಸವಾಗಿರಲಿಕ್ಕಿಲ್ಲ. ಆನೆಯ ವಿಗ್ರಹವನ್ನು ಎದೆಯಲ್ಲಿ ಧರಿಸುವುದು ತನ್ನ ವೀರದೇವರಿಗೆ ತೊಡಿಸುವುದು ಒಂದು ಅಭಿಮಾನದ ಸಂಕೇತವೇ. ಅದೊಂದು ಒಲಂಪಿಕ್ ಕ್ರೀಡೆಯ ಚಿನ್ನದ ಪದಕವಾಗಿದ್ದಂತಿದ್ದರೆ ಆಶ್ಚರ್ಯವೇನು? ಇಂದು ನಾವು ನಮ್ಮ ದೇವರುಗಳಿಗೆ ತೊಡಿಸುವ ಆಭರಣ ನಮ್ಮ ಆಭರಣಗಳೇ ಅಲ್ಲವೆ? ಚಲುವಾದ ನವಿಲ ಸೋಗೆ ಸೌಂದರ್ಯ ಸಾಧನವಾಗುವಲ್ಲೇ ಆ ಮಾನವರ ಕಲಾತ್ಮಕ ಕಣ್ಣು ತೆರೆದಿರಲಿಕ್ಕಿಲ್ಲವೆ? ಇಂದಿಗೂ ನಮಗೆ ನವಿಲಗರಿ ಧರಿಸಿದ ಕೃಷ್ಣ ಮುದ್ದು ಕನ್ನಯ್ಯನಲ್ಲವೆ? ಈ ವಿಧಿಯ ಎಲ್ಲ ಸಂಕೇತಗಳೂ ಆದಿ ಮಾನವನ ಬೇಟೆಗಾರಿಕೆಯ ಜೀವನವನ್ನೇ ಹೇಳುತ್ತವೆ. ಹಬ್ಬದಾಚರಣೆಯ ಅಂಗವಾಗಿ ಕುರಿಕೋಣಗಳನ್ನು ಕಡಿಯುವುದು ಇದಕ್ಕೆ ಸಾಕ್ಷಿಯೂ ಹೌದು.

ಉತ್ತರ ಕನ್ನಡದ ಅಂಕೋಲೆಯಲ್ಲಿ ನಡೆಯುವ ಬಂಡಿಹಬ್ಬ ಸಾಂಸ್ಕೃತಿಕವಾಗಿ ಬಹಳ ಶ್ರೀಮಂತವಾದುದು. ಹನ್ನೆರಡು ದಿನಗಳ ಕಾಲ ನಡೆಯುವ ಉತ್ಸವ ಇದು.

ಪ್ರತಿನಿತ್ಯ ಗುನಗ ಕಲಶ ಹೊರುತ್ತಾನೆ. ಹೀಗೆ ಕಲಶ ಹೊರುವವರು ಗುನಗರು, ಕುಂಬಾರರು, ಹಾಲಕ್ಕಿ ಒಕ್ಕಲು, ವಾಲಗದವರು, ಆಗೇರು ಮತ್ತು ಹಳ್ಳೇರು; ಮೊಕ್ತೇಸರ ಮಾಡುವವರು ನಾಡವರು.

ಹೆಗಡೆ, ಮಾನೀರು, ಬಾಡಗಳಲ್ಲಿ 'ಹೇರೇಬಿರು,' 'ನೊಲಬೀರು,' 'ಬಟ್ರು' ಮೊದಲಾದ ಒಕ್ಕಲಿಗರೂ, 'ನೌರಂಗ'ಮೊದಲಾದ ಮುಕ್ರಿಗಳು ವೀರರೇ ಆಗಿ ಊರು ಗಡಿ ರಕ್ಷಿಸುತ್ತಿದ್ದರು.

ನಾಡವರು ಸೈನಿಕರಾದಂತೆ ಒಕ್ಕಲಿಗರೂ ಹೌದು. ಭೂವ್ಯವಸಾಯದ ಅಭಿವೃದ್ಧಿಯ ಕಾಲದಲ್ಲಿ ಭೂಮಿಯ ಸ್ವಾಮಿತ್ವ ವೀರರಿಗೆ ಸಾಧ್ಯವಾದಂತೆ ನಾಡವರಿಗೂ ಸಾಧ್ಯವಾಯಿತು. ಅಂಕೋಲೆಯಲ್ಲಿ ಭೂ ಒಡೆಯರು ಇತರರಂತೆ ನಾಡವರೂ ಹೌದು. ಉತ್ಪಾದನೆಯ ಸಾಧನೆಗಳು ಯಾರ ಕೈ ಸೇರುತ್ತದೊ ಅವರು ಸಾಮಾಜಿಕ ಯಾಜಮಾನ್ಯವನ್ನು ವಹಿಸುತ್ತಾರೆ. ಹೀಗಾಗಿ ಒಕ್ಕಲುತನ ಸಂಸ್ಕೃತಿಯಲ್ಲಿ ಅದಕ್ಕೆ ವಿಶಿಷ್ಟವಾದ ಹಬ್ಬದ ಯಜಮಾನಿಕೆ ನಾಡವರ ಕೈ ಸೇರಿತು. ಆದ್ದರಿಂದಲೇ ಕುಂಬಾರ, ಗೌಡ, ಹಳ್ಳೇರುಗಳ ಸ್ಥಾನ ಕೆಳಸ್ತರಕ್ಕೆ ಇಳಿಯಬೇಕಾಯಿತು. ಮತ್ತೆ ಮೇಲಾಗಿ ಈ ಆರ್ಥಿಕ ಹಿಡಿತ ನಮ್ಮಲ್ಲಿ ಜಾತಿಪದ್ಧತಿಯನ್ನು ಉದಾರವಾಗಿ ಪೋಷಿಸಿತು. ಹೀಗಾಗಿ ಕೆಳಜಾತಿಯ ಜನ ಮೇಲು ಜಾತಿಗೆ ಅಧೀನವಾಗಿಯೂ ಇರುವಂತಾಗಿದೆ. ಹಿಂದೂ ಸಂಸ್ಕೃತಿಯ ಉಸಿರು ಇದೇ ಆಗಿದೆ. ಹೀಗೆ ಅತ್ಯಂತ ಕೆಳಸ್ತರದಲ್ಲಿರುವ ಹೊಲೆ ಮಾದಿಗರು, ಮುಕ್ರಿಗಳೇ ಮುಂತಾದ ಜಾತಿಗಳು ಪ್ರತಿಯೊಂದು ಮೇಲು ಜಾತಿಯಿಂದ ಶೋಷಿಸಲ್ಪಟ್ಟಿದ್ದಾರೆ.

ಈ ಬಂಡಿ ಹಬ್ಬದ ಪೂರಾ ಪೂರಾ ಜನಪದ ಹಬ್ಬದಲ್ಲಿ ಜಾನಪದ ಸಂಸ್ಕೃತಿ ಸಂಪ್ರದಾಯವನ್ನು ರಕ್ಷಿಸಿಕೊಂಡೇ ಬಂದಿದ್ದಾರೆ.

ಸಮುದಾಯದ ಹಬ್ಬದಲ್ಲಿ ಆ ಕಾಲದ ವ್ಯವಸಾಯೀ ಬದುಕಿನ ಪ್ರತಿಬಿಂಬವನ್ನು ತಪ್ಪದೇ ಕಾಣಬಹುದು.

ಹೀಗೆ ದೇವರ ಮೆರವಣಿಗೆ ಆದ ಮೇಲೆ ದೇವರ ಪೂಜಾವಿಧಿ ನಡೆಯುತ್ತದೆ, ನಂತರ "ತಗರಣ." (ಹಗಣ)

"ಮೊತ್ತಮೊದಲಿನ ಹಗರಣ ಬೇಸಾಯಕ್ಕೆ ಸಂಬಂಧಿಸಿದಂತೆ ಇರುತ್ತದೆ. ನೇಗಿಲು ಕಟ್ಟಿ ಉಳುವುದು, ಬೀಜ ಬಿತ್ತುವುದು, ಹಕ್ಕಿ ಕಾಯುವುದೂ ಇತ್ಯಾದಿ ಅನುಕರಣೆ ಮಾಡಲಾಗುತ್ತದೆ. ಊರಿನ ವಿದ್ಯಮಾನಗಳನ್ನು ಅತಿ ರಂಜಿಸುವುದರ ಮೂಲಕ ಹಾಸ್ಯಪೂರ್ಣವಾಗಿಯೂ ವಿಡಂಬನಾತ್ಮಕವಾಗಿಯೂ ಅನುಕರಿಸಿ ತೋರಿಸುತ್ತಾರೆ".

ಇಲ್ಲಿ ಬೇಸಾಯದ ಕ್ರಿಯೆ ಭೂಮಿಯ ಪೂಜೆಯಾಗಿದೆ. ನಂತರ ಕೊಂಡ ಹಾಯುವುದು (ಕೆಂಡ ಹಾಯುವುದು) ಹರಕೆ ನಡೆಯುತ್ತದೆ. ನಿಗಿ ನಗಿ ಉರಿಯುವ ಬೆಂಕಿ ಕೆಂಡಗಳನ್ನು ರಾಶಿ ಹಾಕಿರುತ್ತಾರೆ. ಅದರ ಮೇಲೆ ಹರಕೆ ಹೊತ್ತವರು ಅಥವಾ ಪ್ರತವರ್ಷದ ಪದ್ಧತಿಯವರು ವ್ರತಸ್ಥರಾಗಿದ್ದು ಬರಿಗಾಲಿನಿಂದ ನಡೆಯುತ್ತಾರೆ. ಇದೊಂದು ಬೆರಗುಗೊಳಿಸುವ ಸನ್ನಿವೇಶ. ಹೀಗೆ ಕೆಂಡ ಹಾಯುವುದನ್ನೇ ಸತಿ ಹೋಗುವ ಸಂಕೇತ ಎಂದು ವಿದ್ವಾಂಸರು ತೀರ್ಮಾನಿಸಿದ್ದಾರೆ.

ಈ ಕೆಂಡದ ರಾಶಿ (Camp Fire) ಆದಿ ಮಾನವನು ರಾತ್ರಿ ತನ್ನ ವಿಶ್ರಾಂತಿ ಸಂದರ್ಭದಲ್ಲಿ ಬೆಂಕಿಯ ಮುಂದೆ ಕುಳಿತು ಚಳಿಯನ್ನು ಕಳೆಯುತ್ತ, ವಿವಿಧ ರಂಜನೆಯಲ್ಲಿ ತೊಡಗಿರುವುದರ ಗುರುತೂ ಆಗಿರಬಹುದು. ಕಾಲಾನಂತರ ಬೇರೊಂದು ಸ್ತರದ ಆಚರಣೆಗೆ ಅದು ತನ್ನ ಜಾಗ ಬಿಟ್ಟುಕೊಟ್ಟಿರಬಹುದು. ಈಗಂತೂ ಅದು ಸತಿ ಹೋಗುವ ಸಂಕೇತದ ರಿಚ್ಯುವಲ್ ಆಗಿದೆ.

ಡಾ. ಎನ್.ಆರ್. ನಾಯಕರು ತಮ್ಮ "ಉತ್ತರ ಕನ್ನಡದ ಜಾನಪದ ಗೀತೆಗಳು" ಪ್ರಬಂಧದಲ್ಲಿ ಮಾಸ್ತಿ ಕುಣಿತವನ್ನು ವಿವರಿಸಿದ್ದಾರೆ. "ಅದರಲ್ಲಿ ಮಾಸ್ತಿಯಮ್ಮನಾಗುವ ಕಥಾನಕವನ್ನು ಸಾಭಿನಯವಾಗಿ ಹಾಡಿ ಕುಣಿವ ಸಂದರ್ಭವನ್ನು ವಿವರಿಸುತ್ತ, 'ಸುತ್ತೇಳು ದೇಸಕ್ಕೆ ಕುಳ್ಳಿನೇ ಒಗೆದಾಳು" ಎಂಬ ಸಾಲು, "ಅದೇ ಸಂದರ್ಭದಲ್ಲಿ ಕುಣಿಕುಣಿದು ಕೊಂಡಕ್ಕೆ ಬೀಳುವ'ವಳು ಮಾಸ್ತಿ, ಕೊಂಡ ಕಡಿದು ಕುಳ್ಳಿ ಬೀರಾಯಿತು' ಎಂಬ ಗಾದೆ ಮಾತುಗಳನ್ನು ವಿವರಿಸುವುದು ಮೇಲಿದನ್ನೇ ಪೋಷಿಸುತ್ತದೆ.

ಸತಿ ಹೋಗುವುದೆಂದರೆ ಗಂಡ ಸೈನ್ಯದಲ್ಲಿ ಹೋರಾಡಿ ಮಡಿದಾಗ ಹೆಂಡತಿ ಚಿತೆಯಲ್ಲಿ ಹಾರಿಕೊಳ್ಳುವುದು. ಇದಕ್ಕೆ ಹೊರತಾದುದೂ ಉಂಟು. ಉದಾಹರಣೆಗಾಗಿ ಧಾರೇಶ್ವರ-ಬೆತ್ತಗೇರಿ ಸಮೀಪ ಬಾಗ್ಮಾಸ್ತಿ ಎಂಬೊಂದು ದೇವರುಂಟು. ಆ ಮಾಸ್ತಿಕಲ್ಲು ಬಾಗಿ ನಿಂತುದರಿಂದ ಆ ಹೆಸರು ಬಂತೊ ಅಥವಾ ಅವಳ ಹೆಸರೇ ಬಾಗಿ ಎಂದಾಗಿತ್ತೋ ತಿಳಿಯದು. ಅವಳು ಒಬ್ಬ ಮುಕ್ರಿ ಮಹಿಳೆ. ತಾನು ದನ ಕಾಯಲು ಬೆಟ್ಟಕ್ಕೆ ಬಂದಾಗ ಅಲ್ಲಿರುವ ಒಂದು ಹೂವಾದ ಸಂಪಿಗೆ ಮರ ನೋಡಿ ಅವಳಿಗೆ ಹೂ ಮುಡಿವ ಆಸೆಯಾಗುತ್ತದೆ. ಅದೇ ಹೊತ್ತಿಗೆ ಒಬ್ಬ ಬ್ರಾಹ್ಮಣನೂ ಅಲ್ಲಿ ಬರುತ್ತಾನೆ. ಅವನೊಡನೆ ತನ್ನ ಆಸೆಯನ್ನು ಅವಳು ಹೇಳಿದಾಗ ಮರ ಹತ್ತಿ ಹೂ ಕೀಳುತ್ತಾನೆ. ಆಗ ಆತ ಮರದಿಂದ ಜಾರಿ ಬಿದ್ದು ಸತ್ತು ಹೋಗುತ್ತಾನೆ. ಆತ

, ತನಗಾಗಿ ಸತ್ತದ್ದರಿಂದ ಬಾಗಿ 'ಸತಿ' ಹೋಗುತ್ತಾಳೆ. ಅಲ್ಲಿ ಇಬ್ಬರದೂ ಗುತ್ತು ಇದೆ. ವರ್ಷವಿಡೀ ಅಲ್ಲಿ ಬ್ರಾಹ್ಮಣ ಪೂಜೆ ಮಾಡಿದರೂ ಒಂದು ದಿನ ಮುಕ್ರಿಗಳಿಗೆ ಬಿಟ್ಟುಕೊಡುತ್ತಾರೆ.

ಇನ್ನೊಂದು, ಹೊನ್ನಾವರ ತಾಲೂಕಿನ ಮಾಡಗೇರಿ ಅಲ್ಲಿ ನಡೆಯುವ ಬಂಡಿ ಹಬ್ಬಕ್ಕೆ ಸಂಬಂಧಿಸಿ ಕೊಂಡ ಹಾಯುವ ವಿಧಿ ನಡೆಯುತ್ತದೆ. ಅಲ್ಲಿಯ ಪೂಜಾರಿಗಳು ನಾಮಧಾರಿಗಳು. ನಮ್ಮ ಊರಿನ (ಸಾಲಕೋಡು) ಶ್ರೀ ಲಕ್ಷ್ಮಣ ನಾಯ್ಕರೇ ಅಲ್ಲಿಯ ಪೂಜಾರಿಗಳು. ಅಂಕೋಲೆಯದನ್ನುಳಿದರೆ ಇದೇ ಜಿಲ್ಲೆಯಲ್ಲಿ ಪ್ರಸಿದ್ಧವಾದ ಬಂಡಿ ಹಬ್ಬ.

ಅಲ್ಲಿ ರಾಮನಾಥ ಗುಡಿ ಇದೆ. ಆತ ಒಬ್ಬ ವೀರ. ಯುದ್ಧದಲ್ಲಿ ಮಡಿಯುತ್ತಾನೆ. ಅವನಿಗ ಒಬ್ಬ ಪ್ರೇಯಸಿ ಇದ್ದಳು. ಇದು ಮದುವೆಯ ಹೊರಗಿನ ಸಂಬಂಧ. ಬಹುಶಃ ಎರಡು ಪಂಗಡ (ಇಬ್ಬರೂ ಶೂದ್ರ ಜಾತಿಗಳೇ) ಪೊಡೆದಾಟವಾಗಿ ಆತ ಸತ್ತಿರಲೂ ಬಹುದು. ಆದರೆ ಆತನ ಹೆಂಡತಿ 'ಸತಿ' ಹೋದಳೂ ಇಲ್ಲವೊ ತಿಳಿಯದು. ಈಕೆ ಮಾತ್ರ ತನ್ನ ಪ್ರಿಯಕರನ ಸಾವನ್ನು ಸಹಿಸಲಾರದೆ ಸತಿ ಹೋಗುತ್ತಾಳೆ. ಅವಳ ಮಾಸ್ತಿಯೂ ರಾಮನಾಥ ಗುಡಿಯ ಎದುರಿಗೇ ಇದೆ. ಅಲ್ಲಿ ಆ ಜಾತಿಯವರು ಪೂಜಿಸುತ್ತಾರೆ.

ಈ ಎರಡನ್ನೂ ನನಗೆ ಡಾ. ಎಲ್.ಆರ್. ಹೆಗಡೆಯವರು ಹೇಳಿದ್ದು. ಇದೊಂದು ನಮ್ಮ ಜನಪದ ಸಮುದಾಯ ನಿಚ್ಚಳವಾದ ಮಾನವೀಯ ಪ್ರೇಮಕ್ಕೆ ಬೆಲೆ, ದಿವ್ಯತೆಯನ್ನು ಕೊಟ್ಟಿತೇ ಹೊರತು ಕೃತ್ರಿಮವಾದ ಜಾತಿಪದ್ಧತಿಗೇ ಅಲ್ಲ. ಈ ಕೆಟ್ಟ ಜಾತಿ ಪದ್ಧತಿ ಮಾನವೀಯ ಬದುಕನ್ನೇ ಹಿಸುಕಿ ಹಾಕಿತಾದರೂ ನಮ್ಮ ಜನಪದ ಜನ ಅದನ್ನೆಲ್ಲ ಮೀರಿ ಪ್ರೀತಿಯನ್ನೂ ಜಾತಿಯ ಕಟ್ಟನ್ನು ಮೀರಿಯೂ ಸಮುದಾಯ ಸಂಪ್ರದಾಯವನ್ನು ಮನ್ನಿಸಿತು.

ಆದರೆ ಮಹಾಸತಿ (ಮಾಸ್ತಿ) ಆದವರೆಲ್ಲ ಹಾಗೆಯೇ ಆದುದಲ್ಲ. ವಿದೇಶಿ ಪ್ರವಾಸಿಗರ ಪ್ರವಾಸ ಚರಿತ್ರೆಯಲ್ಲಿ ಕರ್ನಾಟಕದ ಮೂಲೆ ಮೂಲೆಯಲ್ಲಿ ಗಂಡ ಸತ್ತಾಗ ಮಹಿಳೆಯರನ್ನು ಒತ್ತಾಯದಿಂದ ಚಿತೆಗೇರಿಸುತ್ತಿದ್ದ ದೃಶ್ಯವನ್ನು ನಮೂದಿಸಿದ್ದಾರೆ.

ಜಾತಿ ಕಟ್ಟುಪಾಡನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗಲು ಹೀಗೆ ವಿಧವೆಯಾದ ಮಹಿಳೆಯರನ್ನು ಚಿತೆಗೇರಿಸುತ್ತಿದ್ದರು. ಯಾಕೆಂದರೆ ಒಬ್ಬ ವಿಧವೆ ಮತ್ತೊಬ್ಬನನ್ನು ಮದುವೆಯಾದರೆ ವರ್ಣ ಸಂಕರ.ಆಗುತ್ತದೆ. ಈ ಮೇಲಿನವರ ಆದರ್ಶವನ್ನು ಕೆಳಗಿನವರು ಅನುಕರಣೆ ಮಾಡುತ್ತಿದ್ದರು. ಈ ಅನುಕರಣೆಯ ಸ್ವಭಾವ ಜಾತಿಯ ಬಿಗಿಯನ್ನು ಇಟ್ಟುಕೊಳ್ಳುವಲ್ಲಿ ಪ್ರಬಲ ಪಾತ್ರ ವಹಿಸಿದೆ ಎಂದು ಡಾ. ಅಂಬೇಡ್ಕರ ಒಂದೆಡೆ ಹೇಳುತ್ತಾರೆ.

ಈ ಅನುಕರಣೆಯ ಸ್ವಭಾವವನ್ನು ಇವತ್ತಿಗೂ ನೋಡಬಹುದು. ಇಂದು ಅನೇಕ ಶೂದ್ರ ಜಾತಿಗಳು ತಾವೂ ಜನ್ನಾವರ ಧರಿಸುತ್ತಾರೆ. ಇದರ ಉದ್ದೇಶವೆಂದರೆ ತಾವು ಮೇಲಿನವರೆಂದು ಗುರುತಿಸಲ್ಪಡಬೇಕೆಂಬುದು. ಜನ್ನಾವರ ಧಾರಣೆಯಿಂದ ತಮ್ಮ ಮೇಲ್ಮೆಯನ್ನು ಸಾರಿಕೊಳ್ಳುವ ಬ್ರಾಹ್ಮಣ್ಯದ ಅನುಕರಣೆಯೇ ಆಗಿದೆ.

ಹೀಗೆ ಸತಿ ಹೋಗುವುದೂ ಒಂದು ಒತ್ತಾಯದ ಅನುಕರಣೆಯಾಗಿ ಪುರುಷ ಯಾಜಮಾನ್ಯವನ್ನು ಎತ್ತಿ ಹೇಳುವಂತಹದೇ ಆಗಿದೆ.

'ಸತಿ' ಹೋದವರನ್ನು ದೇವರನ್ನಾಗಿ ಮಾಡಿ ಅವರ ಸುತ್ತ ಪುರಾಣವನ್ನು ಹೆಣೆದು ಉಳಿದವರೂ ಅದಕ್ಕೆ ಮರುಳಾಗುವಂತೆ ಮಾಡಲಾಗಿದೆ. ಆದರೆ ಈಗ ಅವುಗಳನ್ನು ವಿಂಗಡಿಸಿ ನೋಡಲು ಸಾಧ್ಯವಾಗುತ್ತಿಲ್ಲ. ಒಟ್ಟಾರೆ ಹೆಣ್ಣಿನ ತ್ಯಾಗವನ್ನೇ ಒಪ್ಪಿಯೋ, ಅಥವಾ ತಮ್ಮ ಒತ್ತಾಯಕ್ಕೆ ಬಲಿ ಪಶುವನ್ನಾಗಿ ಮಾಡಿದ ಪಾಪ ಪ್ರಜ್ಞೆಯ ಭಯವೊ ಅವರನ್ನು ದೇವರನ್ನಾಗಿಸಿ, ಆರಾಧನೆ ಮಾಡಲಾಗುತ್ತದೆ. ಇದರಲ್ಲಿ ಮಾತೃಸ್ಥಾನದ ಹಿರಿಮೆ ಅಥವಾ ಮಹಿಳಾ ಯಾಜಮಾನ್ಯದ ಕುರುಹುಗಳೂ ಮಿಳಿತವಾಗಿವೆ ಎನ್ನಬಹುದಾಗಿದೆ.

ಮಾಸ್ತಿ ಕೊಂಡ ಹಾದ ದಿನ ಹುಲಿದೇವರು ದನವನ್ನು ಮುರಿಯುವ ದೃಶ್ಯ ಅಭಿನಯಿಸಲಾಗುತ್ತದೆ. ದನವನ್ನು ಕೊಂದು ರಕ್ತ ಕುಡಿದು ಹೋದ ಮೇಲೆ ದನ ಕೊಯ್ಯುವ ಜಾತಿಯವನೊಬ್ಬ ಬಂದು ಅದನ್ನು ಸುಲಿದು ಎತ್ತಿಕೊಂಡು ಹೋದಂತೆ ಅಭಿನಯಿಸಲಾಗುತ್ತದೆ.

ಆದಿಮಾನವ ತನ್ನ ಮೇಲೆ ಎರಗುವ ಹುಲಿಯನ್ನು ದೇವರನ್ನಾಗಿ ಮಾಡಿ ಪ್ರಾರ್ಥಿಸಿ ತನ್ನ ಕಷ್ಟ ನಿವಾರಣೆ ಮಾಡಿಕೊಳ್ಳುವ ಹಾಗೂ ಇದರಲ್ಲೇ ಜಾತಿಭೇದದ ಉಗ್ರ ಕಟ್ಟುಪಾಡುಗಳ ಅಭಿವ್ಯಕ್ತಿಯೂ ಸೇರಿ ಕೊಂಡಿದೆ.

ಆದಿಮಾನವ ತಾನು ಬೇಟೆಗೆ ಹೋಗುವ ಸಮಯದಲ್ಲಿ ಅಥವಾ ಬೇಟೆ ಆಡಿ ಬಂದ ಉಮೇದಿಯಲ್ಲಿ ತನ್ನವರಿಗೆ ತನ್ನ ಸಾಹಸವನ್ನು ವರ್ಣಿಸುವ, ಆ ಮುಖಾಂತರ ತಮ್ಮ ಪೀಳಿಗೆಗೆ ತಮ್ಮ ಬದುಕು, ಹಾಗೂ ಬೇಟೆ ಜೀವನದ ಪರಿಚಯ ಮಾಡಿಕೊಡುವ ವಿಧಾನ ಇದೇ ಆಗಿದೆ.

ಈ ಅನುಕರಣೆಯೇ ಮೊದಲ ರಂಗಭೂಮಿಯಾಗಿರಬೇಕು. ರಂಗಭೂಮಿಯ ಹುಟ್ಟು ಆದಿ ಮಾನವನಿಂದಲೇ ಉಂಟಾಗಿ ಅದರ ಬೆಳವಣಿಗೆಯನ್ನು 'ಹಗರಣ'ದಲ್ಲಿ ನೋಡಬಹುದಾಗಿದೆ.

ಈ ಗುಂಪು ಸಂಸ್ಕೃತಿಯ (Primitive communism) ಪೂಜಾವಿಧಿಯೇ ಕಲಾತ್ಮಕ ಅಭಿವ್ಯಕ್ತಿಯಾಗಿದೆ. ಮೂಲ ಸಮುದಾಯಕ್ಕೆ ಕಲೆ ಬೇರೆ, ಶಿಕ್ಷಣ ಬೇರೆ, ಮತ್ತು ಪೂಜಾವಿಧಿ ಬೇರೆ ಆಗಿರಲಿಲ್ಲ. ಮೂಲತ ಕಲೆಯ ಉದ್ದೇಶವೇ ಬದುಕಿನ ಕುರಿತಾಗಿದೆ. ಆದಿ ಜನಾಂಗಕ್ಕೆ ಕಲೆ ಅವರ ಬದುಕಿನ ಕುರಿತಾದ ಮತ್ತು ಬದುಕಿನಿಂದಲೆ ಅರಳಿ ಬಂದ ಕನಸಿನ ಸಹಜ ಸೃಷ್ಟಿಯಾಗಿದೆ.

ಕಲೆ ಮೂಲತ ನಮ್ಮ ಜನಪದದ ಗೆಯ್ಮೆಯಲ್ಲಿಯೇ ಅರಳಿದ್ದು ಎನ್ನಲು ನಮ್ಮಲ್ಲಿಯ ಹೆಂಗಸರು ಬತ್ತ ಕುಟ್ಟುವಾಗ ಪದ ಹಾಡಿ ಹಂSS ಹಂ ಹಂSS ಹಂ ಎಂಬ ಸೊಲ್ಲಿಗೆ ಒನಕೆ ಕುಟ್ಟುತ್ತ ಶ್ರಮ ನಿವಾರಣೆ ಮಾಡಿಕೊಳ್ಳುವುದೂ ಕೂಲಿಕಾರ ಗಂಡಸರು ಕಂಡಿ ಎಳೆಯುವಾಗ ಹೋSS ಹೋSS ಎಂದು ಪಲ್ಲ ಹಾಡಿ ಹಾಡಿ ಪದ ಹೇಳುವುದೇ ಸಾಕ್ಷಿಯಾಗಿದೆ. ಹೀಗೆ

ಕಾವ್ಯ ಬದುಕಿನ ಮಧ್ಯೆ ಹೇಗೆ ಹುಟ್ಟಿಬೆಳೆಯಿತು ಎಂಬದನ್ನು ಜಾರ್ಜ್ ಥಾಮ್‌ಸನ್ ಎಂಬುವರು ವಿವರಿಸುತ್ತಾರೆ. ದಲಿತರ ಕಲೆ ಸೃಷ್ಟಿಯ ಔದಾರ್ಯವಾಗಿದೆ. (ಅನು: ಎಚ್.ಕೆ. ರಾಮಚಂದ್ರಮೂರ್ತಿ, ೧೯೮೩)

ಈ ಸಮುದಾಯದ ಕಲಾ ಪ್ರಜ್ಞೆಗೆ ಗುನಗರ ಅಥವಾ ಮುಕ್ರಿಗಳು ಹೊರುವ ಕಲಶವೇ ಸಾಕ್ಷಿ. ಕಲಶವನ್ನು ಕಟ್ಟುವಾಗಿನ ಚೆಬ್ಬು ನಂತರ ಅವುಗಳನ್ನು ಹೂಗಳಿಂದ ಅಲಂಕರಿಸುವುದು ಆತನ ಸೌಂದರ್ಯಾಕಾಂಕ್ಷೆಯ ಪ್ರತೀಕವಾಗಿದೆ.

ಈ ಸುಂದರವಾದ ಕಲಶದ ಅನುಕರಣೆಯೇ ಯಕ್ಷಗಾನ ಮೇಳದ ಪಡೆಗೆ ಅಥವಾ ಮುಂಡಾಸ. ಈ ಸೌಂದರ್ಯ ದೃಷ್ಟಿ ಮದುಮಕ್ಕಳಿಗೆ ಕಟ್ಟುವ ಬಾಸಿಂಗದಲ್ಲೂ ಕಾಣಬಹುದು. ಸಾಮಾನ್ಯವಾಗಿ ಕೆಳಜಾತಿ ಜನಗಳು ತಮ್ಮ ಮದುಮಗನಿಗೆ ದೊಡ್ಡ ಬಾಸಿಂಗ ಕಟ್ಟುವುದನ್ನು ನೋಡಬಹುದು. ಇದು ಜಾನಪದ ಸಂಸ್ಕೃತಿಯ ಪ್ರಶಂಸ ನೀಯವಾದ ಸೌಂದರ್ಯಾಭೀಪ್ಸೆಯಲ್ಲದೆ ಮತ್ತೇನು?

ಬಂಡಿ ಎಳೆಯುವಾಗ ಸಿಡಿಕಟ್ಟೆ ಅಥವಾ ಮನುಷ್ಯರನ್ನು ತೂಗುಹಾಕಿ ಎಳೆಯೂವುದೂ ಇತ್ತಂತೆ. ಇದನ್ನು ಹರಕೆ ಹೋರುತ್ತಿದ್ದರು. ಇದೇ ರೀತಿ ಅಂಕೋಲೆ ಬಂಡಿಹಬ್ಬದಲ್ಲಿ 'ಉಲಿ ಚಪ್ಪರ' ಏರುವಾಗ ಹರಕೆ ಹೊತ್ತವರು ಕೈಯಲ್ಲಿ ಕತ್ತಿ ಹಿಡಿದು ಕೊಂಡು 'ಅಯ್ಯಯ್ಯೊ' ಎಂದು ಅರಚುತ್ತ ಬರುತ್ತಾರೆ. ಇದೂ ಸಹ ಜನಾಂಗಗಳ ಘರ್ಷಣೆಯನ್ನೇ ಸೂಚಿಸುತ್ತದೆ.

ಎರಡು ಗುಂಪುಗಳ ಘರ್ಷಣೆಯಲ್ಲಿ ಗೆದ್ದವರು ಕೊಲ್ಲಲ್ಪಟ್ಟವನ ಶವ ಮೆರವಣಿಗೆ ಮಾಡಿ ತಮ್ಮ ಮೇಲ್ಮೆಯನ್ನು ಸಾರುತ್ತಿರಬಹುದು. ಅಥವಾ ಈ ಎರಡೂ ಸನ್ನಿವೇಶಗಳು ನರಬಲಿಯನ್ನು ಸಾರುತ್ತವೆಯೆ?

ಕತ್ತಿಯ ಆಯುಧ ಹಿಡಿದು ಬಂದು 'ಅಯ್ಯಯ್ಯೊ' ಎಂದು ಕೂಗುವಾಗ 'ಉಲಿಚಪ್ಪರ'ದ ಮೇಲೆ ದೇವರು ಮೇಲಕ್ಕೆ ಏರುತ್ತದೆ. ಇದನ್ನು ಸ್ವರ್ಗಾರೋಹಣ ಸಂಕೇತವಾಗಿರಬಹುದೆಂದು ಶ್ರೀ ವಿ.ಜೇ. ನಾಯಕರು ಹೇಳುತ್ತಾರೆ. ಸತಿಯ ಆತ್ಮಸ್ವರ್ಗವೇರಿದ ಸಂಕೇತ ಇರಬಹುದೆಂದು ಡಾ. ಎನ್.ಆರ್. ನಾಯಕರು ಹೇಳುತ್ತಾರೆ. ಇರಲೂ ಬಹುದು ಅಥವಾ ಅದಕ್ಕೆ ಇನ್ನೊಂದು ವೈಚಾರಿಕ ಆಯಾಮವೂ ಇದೆ.

ಜನಪದ ಹಬ್ಬದ ವಿಧಿಗಳು ತನ್ನ ಪ್ರತಿಭಟನೆಯನ್ನು ಅಂತರ್ಗತ ಮಾಡಿಕೊಂಡೇ ಅಭಿವ್ಯಕ್ತಗೊಳ್ಳುತ್ತವೆ ಎಂದು ನಾನು ಮೊದಲೇ ಹೇಳಿದ್ದೇನೆ. ಇದಕ್ಕೆ ಉದಾಹರಣೆ ಹೆಗಡೆಯ ಜಾತ್ರಿಯ ಮೊದಲು ನಡೆಯುವ (ಅಂದರೆ ಜಾತ್ರೆಯ ಹದಿನೈದು ದಿನ ಮೊದಲಿನಿಂದ ಅಲ್ಲಿ ಕಲಸದ ಹಬ್ಬ ನಡೆಯುತ್ತದೆ) ಕಲಸದ ಮೆರವಣಿಗೆಯಲ್ಲಿ ಕಾಣಬಹುದು.

ಕಲಸಗಳಲ್ಲಿ 'ಸೂಲ ಬೀರ' ಕಲಸವೂ ಒಂದು. ಇದು ಅತ್ಯುಗ್ರ ಸ್ವಭಾವದ ತರುಣ ಕೆಲಸ. ಇದನ್ನು ಹೊರುವವರೂ ತರುಣರೇ ಇರುತ್ತಾರೆ. ಊರು ಸುತ್ತು ಬಂದ ನಂತರ ಅಮ್ಮನವರ (ಶಾಂತಿಕಾ ಪರಮೇಶ್ವರಿ) ದೇವಸ್ಥಾನಕ್ಕೆ ಹೋಗುತ್ತದೆ. ಸಾಮಾನ್ಯವಾಗಿ ಕಲಸಗಳೆಲ್ಲ

ಮುಖ ಮಂಟಪದ ಮಧ್ಯೆ ತಾಗುಳ್ಳ ಜಾಗದಲ್ಲಿ ನಿಲ್ಲುವುದು ರೂಢಿ. ಆದರೆ ಈ ಸೂಲಬೀರ ಮಾತ್ರ ಇದಕ್ಕೆ ಹೊರತು. ತಾನು ಅಮ್ಮನ ಬಳಿಗೆ ಹೋಗಬಯಸುತ್ತದೆ. ಆದರೆ ಇದರ ಪ್ರವೇಶವನ್ನು ನಿಷೇಧಿಸಲಾಗಿದೆ. ಈಗ ಕಲಸಕ್ಕೆ ಅತ್ಯುಗ್ರ ಸಿಟ್ಟು ಬರುತ್ತದೆ. ತಾನು ಬುಸುಗುಡುತ್ತ, ಹೊಂಕರಿಸುತ್ತ, ಮೊಣಕಾಲಿನಿಂದಲೇ ಮೆಟ್ಟಲನ್ನು ಧಡ ಧಡ ಹತ್ತಿ ಗಂಟೆ ಮಂಟಪಕ್ಕೆ ಹೋಗಿ ಬಾಗಿಲವರೆಗೂ ಧಾವಿಸುತ್ತದೆ. ಭಟ್ಟರು ಬಾಗಿಲನ್ನು ಮುಚ್ಚಿ ತಡೆದು ನಿಲ್ಲಿಸುತ್ತಾರೆ. ನಂತರ ಅಸಹಾಯಕ 'ಸೂಲಿ ಬೀರಟ' ಹಿಂದೇ ಬರುತ್ತದೆ.

ಇದು ಯಾಕೆ? ಇಲ್ಲಿ ನಾವು ಸಂಸ್ಕೃತಿಯ ಸಂಘರ್ಷವನ್ನು ಕಾಣಬಹುದು. ಸಮುದಾಯದ ದೇವರಾದ ಅಮ್ಮನನ್ನು ಸಂಸ್ಕೃತೀಕರಣ ಮಾಡಲಾಗಿದೆ. ಇದನ್ನು ಕೆಳ ಜನತೆ ಪ್ರತಿಭಟಿಸುತ್ತದೆ. ಅಂತಹ ಪ್ರತಿಭಟನೆಯಲ್ಲಿ ಮುಖ್ಯ ಪಾತ್ರವನ್ನು 'ಸೂಲಿ ಬೀರ' ಹೊತ್ತಿರಬೇಕು. ಅಥವಾ ಆ ಘರ್ಷಣೆಯಲ್ಲಿ ಆತ ಮಡಿದು ದೇವರಾಗಿರಲೂ ಬಹುದು. ಅಂತೂ ಈ ವಿಧಿಯಿಂದ ಯಜಮಾನ ಸಂಸ್ಕೃತಿ ನಡೆಸಿದ ಸಮುದಾಯ ಸಂಸ್ಕೃತಿ ಮೇಲಿನ ಹಲ್ಲೆಗೆ ಇದು ಪ್ರತಿಭಟನೆಯಾಗಿ ಹಬ್ಬದ ವಿಧಿಯಲ್ಲಿ ಜೀವಂತವಾಗಿದೆ.

ಅಂಕೋಲೆಯ 'ಉಲಿಚಪ್ಪರ' ಏರುವ ದೇವರ ಹಾಗೂ ಬಿಚ್ಚುಗತ್ತಿ ಹಿಡಿದು ಬರುವ ಯುವಕ-ವ್ರತಸ್ಥರ ಈ ಕ್ರಿಯೆ ತಮ್ಮ ದೇವರನ್ನು ಅಂದರೆ ಜನಸಾಮಾನ್ಯರ ದೇವರನ್ನು ಜಮೀನುದಾರ ಸಂಸ್ಕೃತಿ ತಮ್ಮಿಂದ ಅಪಹರಿಸಿಕೊಳ್ಳುತ್ತಿರುವಾಗಿನ ಪ್ರತಿಭಟನೆ, ಸೋಲು ಎರಡೂ ಇಲ್ಲಿ ಮಿಳಿತವಾಗಿ ಮೊತ್ತಗೊಂಡಿರುವಂತಿದೆ.

ಊಳಿಗ ಮಾನ್ಯ ಮತ್ತು ಬಂಡವಾಳಶಾಹಿ ಪದ್ಧತಿಯ ಸಾಮಾಜಿಕ ರಿವಾಜಿನ ಒಂದು ಹಂತದ ಬದಲಾವಣೆಯಲ್ಲಿ ಹಬ್ಬದ ಈ ಎಲ್ಲ ಅರ್ಥಗಳನ್ನು ಅವಜ್ಞೆಗೊಳಿಸಿರ ಬಹುದು. ಇಂತಹ ಹಬ್ಬಗಳ ಅಂತಸ್ಸತ್ವವನ್ನು ನಮ್ಮ ಯಜಮಾನ ಸಂಸ್ಕೃತಿ ನಾಶಮಾಡುತ್ತಲೇ ಬಂದಿದೆ. ಆದ್ದರಿಂದ ಈ ಹಬ್ಬದ ಧಾರ್ಮಿಕ ವಿಧಿಯ ಕ್ರಿಯೆಯ ಬೆಳವಣಿಗೆ ಒಂದು ಹಂತದಲ್ಲಿ ಸ್ಥಗಿತಗೊಂಡಿತು. ಇಲ್ಲದಿದ್ದರೆ ಈ ಜನಪದ ಜನ ತಾವೇ ಅದ್ಭುತವಾಗಿ ಅಂಕೋಲೆ ಹಾಗೂ ಸುತ್ತಮುತ್ತಲೂ ನಡೆಸಿದ ಭೂ ಚಳುವಳಿ ಅಂದರೆ ಭೂಮಾಲಿಕರ ವಿರುದ್ಧ ಪ್ರತಿಭಟನೆ ಬಂಡಿಹಬ್ಬದ ವಿಧಿಯಲ್ಲಿ ಸೇರಿ ಹೋಗ ಬೇಕಿತ್ತು. ಈಗ ಈ ಬಂಡವಳಶಾಹಿ ವ್ಯವಸ್ಥೆ ಜೀವನದ ರೀತಿನೀತಿಗಳ ಮೇಲೆ ಅನೇಕ ಗೊಂದಲಮಯ ಪ್ರಭಾವ ಬೀರುತ್ತಿದೆ. ಇದೊಂದು ಡೌಲಿನ ಹಬ್ಬವಾಗುತ್ತಿದೆ. ಅದು ಪುನಃ ಜನಪದದ ಕೈವಾರಿಯಾಗಬೇಕು.

ಇದು ಗಡಿ ಹಬ್ಬವೂ ಹೌದು. 'ಗಡ್ಗಾಲ' ಎಂದರೆ ಮಳೆಗಾಲ. ಇದು ಬಿತ್ತನೆಯ ಹಬ್ಬ. ಒಕ್ಕಲುಗಳ ಹಬ್ಬ ಸಮುದಾಯದ ಹಬ್ಬ. ಇದನ್ನು ಪುನಃ ಸಮುದಾಯ ಸಂಸ್ಕೃತಿಯ ಅಭಿವ್ಯಕ್ತಿಯನ್ನಾಗಿ ಮಾಡಬೇಕಿದೆ. ಭಾರತದ ಯಜಮಾನ ಸಂಸ್ಕೃತಿಯ ಅಭಿಶೋಷಣೆಗೆ ತುತ್ತಾಗಿ ಈ ಸಂಸ್ಕೃತಿ ಪ್ರಭಾವಹೀನವಾಗಿದೆ. ಆದರೆ ಇದು ಜನಪದದ ಅಚ್ಚಗಾರಿಕೆಯನ್ನೇ [illegible]ರಯಬೇಕು. ಜಾನಪದ ಧಾರ್ಮಿಕ-ಕ್ರಮ ಗಯ್ಮೆಯ ಮಧ್ಯೆ, ಗೆಯ್ಮೆಯ ಕಸು ಕಲಾತ್ಮಕತೆಯ

ಮಧ್ಯೆ ಅಂದರೆ ಮೈಮನಗಳ ಸಹಭಾಗಿತ್ವದಲ್ಲಿ, ಶ್ರಮ ಚಿಂತನೆಗಳ ತೆಕ್ಕೆಯಲ್ಲಿ ಮೂಡಿ ನಿಂತದ್ದು. ಬೌದ್ಧಿಕ-ದೈಹಿಕ; ಬ್ರಾಹ್ಮಣ-ಶೂದ್ರ ಎಂಬಂತಹ ಕೃತ್ರಿಮ ವಿಭಜನೆಯ ಕೂಸು ಅಲ್ಲ.

ಬಂಡಿ ಹಬ್ಬದ ಸಂದರ್ಭದಲ್ಲಿ ಜಿಲ್ಲೆಯ ಜಾನಪದ ಕಲೆಗಳೆಲ್ಲ ಪ್ರದರ್ಶಿತವಾಗಬೇಕು. ಹಗರಣ, ಕೋಲಾಟ, ಗುಮ್ಟೆಪಾಂಗ್, ಸುಗ್ಗಿ ಕುಣಿತ ಮುಂತಾದವುಗಳ ಮೂಲರೂಪದಲ್ಲಿ, ಕಸಿಗೊಂಡ ರೂಪದಲ್ಲಿ ಪ್ರದರ್ಶಿತವಾಗಬೇಕು. ಬಂಡಿ ಹಬ್ಬದ ಕ್ರಿಯಾಚರಣೆಯ ಆಧಾರದಿಂದಲೇ ಮಾನವನ ಮೂಲ ಸಮುದಾಯ ಸಂಸ್ಕೃತಿಯಿಂದ ಆಧುನಿಕ ಸಂಸ್ಕೃತಿಯವರೆಗಿನ ಸ್ಥಿತ್ಯಂತರವನ್ನು ನಾಟಕವನ್ನಾಗಿ ಆಡಬಹುದು. ಕಲೆಯಾಗಿ ಹಾಡಬಹುದು.

ಅವರಂತೆ ಬೇಸಾಯಕ್ಕೆ ಸಂಬಂಧಿಸಿದ ವಸ್ತು ಪ್ರದರ್ಶನ, ದನಗಳ ಜಾತ್ರೆ, ಬೀಜಗಳ ಪ್ರದರ್ಶನ ಮೊದಲಾದವು ಏರ್ಪಡಬೇಕು. ಅದು ಸಮುದಾಯದ ಕಲಾತ್ಮಕ, ಶೈಕ್ಷಣಿಕ-ಸಂಸ್ಕೃತಿಯ ಮಾಧ್ಯಮವೂ ಆಗಬೇಕು. ಅಂಕೋಲೆಯ ಬಂಡಿ ಹಬ್ಬಕ್ಕೆ 'ಉತ್ತರ ಕನ್ನಡದ ದಿಸರಾ' ಎಂದು ಬಿರುದು ಇದೆ. ಅಂದಮೇಲೆ ಇದು ಮೈಸೂರು ದಸರಾದಂತೆ ಉತ್ತರಕನ್ನಡದ ದಸರಾ ಆಗಬೇಡವೇ?

ಇದನ್ನು ಯಾರು ಮಾಡಬೇಕು? ಈಗಂತೂ ಸದ್ಯವೇ ಜಿಲ್ಲಾ ಪರಿಷತ್, ಪಂಚಾಯತ ಜಾರಿಯಲ್ಲಿ ಬರುತ್ತದೆ. ಜಿಲ್ಲಾ ಪಂಚಾಯತ ಬಹುಪಾಲು ಜಿಲ್ಲೆಯ ಘಟಕವಾಗಿದೆ. ಜಿಲ್ಲೆಯ ಉಸ್ತುವಾರಿ ಅದರ ಉದ್ದೇಶ, ಜಿಲ್ಲೆಯೊಂದು ಸ್ವತಂತ್ರ ಘಟಕವಾಗಿ ಅದು ಕರ್ನಾಟಕ-ಭಾರತದ ಐಕ್ಯದ ರಚನೆಗೆ ಹೊಂದಿದ ಕೊಂಡಿಯಾಗಿರುತ್ತದೆ.

ಹೀಗೆ ಅಂಕೋಲಾ ಬಂಡಿ ಹಬ್ಬವನ್ನು ಉತ್ತರ ಕನ್ನಡದ ದಸರಾವನ್ನಾಗಿ ಮಾಡುವ ಜವಾಬ್ದಾರಿ ಜಿಲ್ಲಾ ಪಂಚಾಯತದ್ದೂ, ಜಿಲ್ಲೆಯ ಧೀಮಂತ ಜನದ್ದೂ ಆಗಿದೆ.

*

ಯಕ್ಷಗಾನ ಮತ್ತು ಜೀವನ ಮೌಲ್ಯ

ಯಕ್ಷಗಾನ ರಂಗ ಪ್ರದರ್ಶನದ ಕಲೆಯಾಗಿ, ತಾಳ ಮದ್ದಳೆಯ ಕೂಟವಾಗಿ ಬಹಳ ಪ್ರಸಿದ್ಧಿಯಲ್ಲಿರುವ ಕಲೆ. ಜನಪದ ಕಲೆಗಳ ದೃಷ್ಟಿಯಿಂದ ಹೇಳುವುದಾದರೆ ಅದು ಎಲ್ಲಾ ಜಾನಪದ ಕಲೆಗಳಲ್ಲೇ ಹೆಚ್ಚು ಸುಧಾರಣೆಗೆ ಒಗ್ಗಿಕೊಂಡದ್ದಾಗಿದೆ. ಹಾಗೆಯೇ ರಂಗಪ್ರದರ್ಶನದ ದೃಷ್ಟಿಯಿಂದ ಅದೊಂದು ಪರಿಪೂರ್ಣ ಕಲೆಯಂತಿದೆ. ಆದ್ದರಿಂದಲೇ ಇದರ ಬೇರೆ ಬೇರೆ ಅಂಗಗಳ ಕುರಿತು ಅನೇಕ ಚರ್ಚೆ ಪ್ರಯೋಗ ವಿಮರ್ಶೆ ಬರುತ್ತಿವೆ. ಇದು ಸ್ವಾಗತಾರ್ಹವಾದುದು. ಆದರೆ ಇವುಗಳ ಪ್ರತಿಪಾದಿಸುವ ಜೀವನದೃಷ್ಟಿಯ ದಿಕ್ಕಿನಿಂದ ನಡೆದ ವಿಶ್ಲೇಷಣೆ ವಿಮರ್ಶೆ ತೀರ ಎಂದರೆ ತೀರ ವಿರಳ. ಇದಕ್ಕೆ ಕಾರಣವೆಂದರೆ ಯಕ್ಷಗಾನ ವಿಮರ್ಶಕರು ಹೆಚ್ಚಾಗಿ ಅವರ ಕಲಾತ್ಮಕತೆಗೆ ಪ್ರಾಧಾನ್ಯವಿತ್ತಿದ್ದಾರೆ. ಅಂದರೆ ಅದರ ಜೀವನ ದೃಷ್ಟಿಯನ್ನು ಒಪ್ಪಿಕೊಂಡವರೇ ಆಗಿದ್ದಾರೆ. ಏನಿಲ್ಲವೆಂದರೂ ಅದನ್ನು ಪ್ರಶ್ನಿಸದ ಮನೋಭಾವದವರಾಗಿದ್ದಾರೆ. ಆದ್ದರಿಂದ ಅದರ ಜೀವನದೃಷ್ಟಿಯ ಕುರಿತು ವಿವೇಚಿಸುವುದು ಅನೇಕ ಕುತೂಹಲಕಾರಕ ಅಂಶಗಳನ್ನು ಹೊರಗಡೆಬಹುದಾಗಿದೆ.

ಯಕ್ಷಗಾನದ ಬಣ್ಣ ಮತ್ತು ವೇಷ ಭೂಷಣಗಳನ್ನು ಗಮನಿಸಿದಾಗ ಕುತೂಹಲದ ಸಂಗತಿಗಳು ಮನವರಿಕೆಯಾಗುತ್ತವೆ. ಪಾತ್ರಗಳ ಉಡುಗೆಯಲ್ಲಿ ನಿಸರ್ಗದಲ್ಲಿ ಸಿಕ್ಕುವ ಸಾಮಾನುಗಳೇ ಜಾಸ್ತಿ. ಅದರ ರಚನೆಯಲ್ಲಿ ಕೂಡ ನಿಸರ್ಗದ ಅನುಕರಣೆಯಿದೆ. ಹಾಗೆಯೇ ಬಣ್ಣಗಳ ಕಡೆ ಗಮನಿಸಿದರೂ ಮೂಲದಲ್ಲಿ ಉಪಯೋಗಿತವಾದ ಬಣ್ಣ ಬಣ್ಣದ ಕಲ್ಲುಗಳು, ಅಕ್ಕಿ ಚಿಟ್ಟೆ ಇತ್ಯಾದಿ ಇವುಗಳನ್ನು ಗಮನಿಸಿದಾಗ ನಮಗೆ ಕಾಣುವ ಅಂಶವೇನೆಂದರೆ ನಿಸರ್ಗವನ್ನು ಅತ್ಯಂತ ಸೂಕ್ಷ್ಮವಾಗಿ ನೋಡುವ ದೃಷ್ಟಿ ಹೊಳೆಯುತ್ತದೆ. ಕುತೂಹಲದಿಂದ ನೋಡುವದು ಮಾತ್ರವಲ್ಲ, ಅದು ಕ್ರಿಯಾಪೂರ್ಣವಾಗಿ ನೋಡುತ್ತದೆ. ಅಂದರೆ ಯಕ್ಷಗಾನದ ಒಳನೋಟವೇ ಸೃಷ್ಟಿಶೀಲವಾದುದು ಎಂದು ಅರ್ಥ. ಒಂದು ಬಗೆಯಿಂದ ನೋಡಿದರೆ ಕಲೆಗಳ ಲೋಕವೇ ಕನಸಿನ ಲೋಕ. ಆದರೆ ಯಕ್ಷಗಾನದಲ್ಲಿ ಇದು ಢಾಳಾಗಿ ಕಾಣುವಂತಹ ಅದರ ಬಣ್ಣ ಬೆಡಗುಗಳಲ್ಲೇ ಇದು ಹೊರ ಹೊಮ್ಮುತ್ತದೆ. ಕನಸು ಸೃಷ್ಟಿಶೀಲತೆಗೆ ಅತ್ಯಂತ ಅವಶ್ಯವಾದುದು. ಇವೆಲ್ಲವುಗಳನ್ನು ಗಮನಿಸಿದಾಗ ಯಕ್ಷಗಾನದ ಬಹಳ ಮುಖ್ಯವಾದ ಜೀವನ ಮೌಲ್ಯ ಸೃಜನಶೀಲತೆಗೆ, ನಿಸರ್ಗಕ್ಕೆ ಸುತ್ತಲ ಪರಿಸರಕ್ಕೆ ನಿಷ್ಠವಾಗಿರುವತಂಹದು ಎಂದೆನ್ನಿಸುತ್ತದೆ. ಇದನ್ನೇ

ಮೊದಲ ಪ್ರಕಟಣೆ: ಯಕ್ಷಗಾನ ದರ್ಶಿ ಸಾಧನಾ ಸ್ಮರಣ ಸಂಚಿಕೆ, ೧೯೯೫.

ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಯಕ್ಷಗಾನದ ಜೀವನ ಮೌಲ್ಯ ಜಾನಪದ ಸಂವಾದಿಯಾದುದು. ಅಂದರೆ ಜೀವನ ಪ್ರೀತಿ ಯಕ್ಷಗಾನದ ಜೀವನ ಮೌಲ್ಯ ಎನ್ನುವುದನ್ನು ಒಪ್ಪಿಕೊಂಡೇ ನಾವು ಬೇರೆ ಕಡೆ ಹೊರಳಬೇಕಾಗುತ್ತದೆ.

ಹೀಗೆ ಯಾಕೆ ಎಂದರೆ ಯಕ್ಷಗಾನ ಎಂದರೆ ಏನು, ಎಂಬ ಪ್ರಶ್ನೆ ಹಾಕಿಕೊಂಡಾಗ ಕೆಲ ಹೊಸ ವಿವರಗಳು ಬಂದು ಸೇರುತ್ತವೆ. ಉದಾಹರಣೆಗೆ ನಮ್ಮ ಮುಂದೆ ಒಂದು ತೇರು ನಿಂತಿದೆ ಎಂದು ಊಹಿಸುವ ಚಕ್ರವನ್ನು ಮುಟ್ಟಿ ಉತ್ತರ ಬರುತ್ತದೆ. ಇದು ತೇರೆ? ಅಲ್ಲ ಅದು ತೇರಿನ ಕೀಲು ಇದು ತೇರೆ? ಅಲ್ಲ ಅದು ದುಂಡಿ. ಹಾಗಾದರೆ ತೇರು ಎಂದರೇನು? ತೇರು ಎಂದರೆ ಇವೆಲ್ಲವೂ ಒಂದು ವ್ಯವಸ್ಥಿತ ರೀತಿಯಲ್ಲಿ ಸಂಘಟಿಸಲ್ಪಟ್ಟಿದ್ದು ಎಂದು ಉತ್ತರ ಹೊಳೆಯುತ್ತದೆ. ಹಾಗೆಯೇ ಯಕ್ಷಗಾನ. ಕೇವಲ ಬಣ್ಣವಲ್ಲ. ಕೇವಲ ಭೂಷೆಯಲ್ಲ ಕೇವಲ ಅಲಂಕಾರವಲ್ಲ. ಕೇವಲ ಹಾಡೂ ಅಲ್ಲ. ಇವೆಲ್ಲ ಒಂದು ವ್ಯವಸ್ಥಿತ ರೂಪದಲ್ಲಿ ಸಂಘಟಿಸಲ್ಪಟ್ಟಿದ್ದು ಯಕ್ಷಗಾನ. ಆದರೆ ಈ ವ್ಯವಸ್ಥೆಯಲ್ಲಿ ಯಕ್ಷಗಾನದ ಪಠ್ಯ ಮತ್ತು ಅದನ್ನು ಅವಲಂಬಿಸಿದ ಮಾತುಗಾರಿಕೆ ಬಹಳ ಮುಖ್ಯವಾದುದು. ಯಕ್ಷಗಾನದ ಜೀವನ ಮೌಲ್ಯಕ್ಕೆ ಮೂರ್ತಿರೂಪ ಕೊಡುವುದೇ ಅದರ ಪಠ್ಯ. ಆದ್ದರಿಂದಲೇ 'ಪಠ್ಯವು' ಯಾವ ಜೀವನ ಮೌಲ್ಯವನ್ನು ಪ್ರತಿಪಾದಿಸುತ್ತದೆ ಎಂಬುದರ ಮೇಲಿಂದಲೇ ಯಕ್ಷಗಾನದ ಜೀವನ ಮೌಲ್ಯವನ್ನು ಲೆಕ್ಕ ಹಾಕಬೇಕಾಗುತ್ತದೆ. ಅಂದರೆ ಇಲ್ಲಿಯ ಎಲ್ಲಾ ಸಾಹಿತ್ಯವೂ (ಬಣ್ಣ, ಬಟ್ಟೆ ಹಾಡಿನಮಟ್ಟು) ಜಾನಪದಿಯವುಳ್ಳದಾದರೂ ಜನಪರ ಎನ್ನುವಂತಿಲ್ಲ. ಜಾನಪದವೆಲ್ಲವೂ ಜನಪರವಾಗೇ ಇರುತ್ತವೆ ಎಂಬ ನಿಯಮವೇನೂ ಇಲ್ಲ. ಯಕ್ಷಗಾನದ ಪ್ರಸಂಗಗಳೆಂದರೆ ಲಕ್ಷ್ಮೀಶನ ಮತ್ತು ತೊರವೆ ರಾಮಾಯಣ, ಕುಮಾರವ್ಯಾಸನ ಮಹಾಭಾರತ, ರಾಘವಾಂಕನ ಹರಿಶ್ಚಂದ್ರ ಕಾವ್ಯ ಮತ್ತು ಇತರ ಪುರಾಣ ಕಥೆಗಳೇ ಆಗಿವೆ. ಆದ್ದರಿಂದ ಯಕ್ಷಗಾನದ ಜಾನಪದೀಯ ಗುಣಗಳೇನೇ ಇದ್ದರೂ. ಅದು ಪ್ರತಿಪಾದಿಸುವ ಜೀವನ ಮೌಲ್ಯ ಈ ಮಹಾಕಾವ್ಯ ಮತ್ತು ಪುರಾಣಗಳದ್ದೇ ಆಗಿವೆ. ಮತ್ತು ಮಹಾಕಾವ್ಯಗಳೂ ಕಥೆಯಾಗಿ ಬಂದು ಭಾಗವತ ಪಂಥ ಪ್ರಚಾರದಲ್ಲಿ ಪಾಕಗೊಳ್ಳುವುದರಿಂದ ಅದು ಪ್ರತಿಪಾದಿಸುವ ಜೀವನ ಮೌಲ್ಯ ಭಕ್ತಿ ಪಾರಮ್ಯದ್ದೂ, ಮಧ್ಯಕಾಲೀನದ್ದೂ ಆಗಿದ್ದು, ಬಹಳ ಮಟ್ಟಿಗೆ ಪ್ರತಿಗಾಮಿ ಧೋರಣೆಯನ್ನು ಹೊಂದಿದೆ.

ಯಕ್ಷಗಾನ ಭಕ್ತಿಪಂಥದ, ಅದರಲ್ಲೂ ವೈಷ್ಣವ ಮತದ ಮುಖ್ಯ ಪ್ರಚಾರ ಮಾಧ್ಯಮವಾಗಿ ಕೆಲಸ ಮಾಡಿದೆ. ಇದಕ್ಕೆ ಉದಾಹರಣೆಯಾಗಿ ಕೆಲವು ಸಂದರ್ಭಗಳನ್ನು ಗಮನಿಸಬಹುದು. ಯಕ್ಷಗಾನದ ಬಹಳಷ್ಟು ಪ್ರಸಂಗಗಳಲ್ಲಿ ಎಲ್ಲೆಲ್ಲಿ ಈಶ್ವರ ಬರುತ್ತಾನೋ ಅಲ್ಲೆಲ್ಲ ಆತ ಒಬ್ಬ ಬುದ್ಧಿಗೇಡಿ ಮತ್ತು ಬೋಳೆ ಎಂಬಂತೆ ಚಿತ್ರಿಸಲ್ಪಟ್ಟಿದೆ. ಪ್ರಹ್ಲಾದ ಚರಿತ್ರೆ ಒಳ್ಳೆಯ ಮತ್ತು ಕೆಟ್ಟನಡತೆಯ ಚಿತ್ರವಾಗಿರದೆ ಈಶ್ವರನಿಗಿಂತ ವಿಷ್ಣು ಶ್ರೇಷ್ಠ ಎಂಬಂತೆ ಜಾಣತನದಿಂದ ಚಿತ್ರಿಸಲಾಗಿದೆ. ಹಿರಣ್ಯಕಶುಪುನ ಬಹಳ ಮುಖ್ಯ ತಪ್ಪೆಂದರೆ ಆತ ತನ್ನ ಮಗನನ್ನು ವೈಷ್ಣವನನ್ನಾಗಲು ಬಿಡದಿರುವುದೇ ಆಗಿದೆ. ಈ ಶೈವ ಮತ್ತು ವೈಷ್ಣವದ ಆಳದಲ್ಲಿ ಈ ಎರಡು ಪಂಥಗಳ ಮಾತ್ರವಲ್ಲ, ಜನಾಂಗಿಯ ಸಂಘರ್ಷ ಕೂಡ ಅಡಕವಾಗಿರಬಹುದಾಗಿದೆ. ಭಸ್ಮಾಸುರ ಮೋಹಿನಿ ಪ್ರಸಂಗದಲ್ಲಿ ಈಶ್ವರನೊಬ್ಬ ಬುದ್ಧಿಗೇಡಿಯೂ ಮತ್ತು ಕಾಮಾತುರನೂ ಆಗಿರುವಂತೆ ಚಿತ್ರಿತವಾಗುತ್ತದೆ.

ವಿಷ್ಣುವೇ ಮೋಹಿನಿಯಾಗಿ ರೂಪಾಂತರಗೊಂಡಿದ್ದಾನೆ ಎಂಬುವುದನ್ನು ಕೆಲವೇ ನಿಮಿಷಗಳ ಕೆಳಗೆ ಕಂಡ ಈಶ್ವರ ಮೋಹಿನಿಯನ್ನು ನೋಡಿದ ಕೂಡಲೇ ಕಾಮಾತುರನಾಗುತ್ತಾನೆ ಮಾತ್ರವಲ್ಲ ವೀರ್ಯಸ್ಖಲನಕ್ಕೂ ಒಳಗಾಗುತ್ತಾನೆ. ಹೀಗೆ ಬಹಳಷ್ಟು ಪ್ರಸಂಗದಲ್ಲಿ ಈಶ್ವರನು ಸೋತು ವಿಷ್ಣುವಿನ ಮಹಿಮೆ ಸಾರಲ್ಪಡುತ್ತದೆ. ವಿಷ್ಣುವಿನ ಮಹಿಮೆಯನ್ನು ವಿಜೃಂಭಿಸುವ ಪ್ರಸಂಗಗಳೇ ಮುಕ್ಕಾಲಿಗಿಂತ ಹೆಚ್ಚಿನವುಗಳು ಪ್ರಚಾರದಲ್ಲಿವೆ. ಇದರ ಅತಿರೇಕ ಎನ್ನುವಷ್ಟು ಸುಧನ್ವಾರ್ಜುನದಲ್ಲಿ ಕೃಷ್ಣಭಕ್ತಿ ಪ್ರತಿಪಾದಿತವಾಗಿದೆ. ಯಜ್ಞಾಶ್ವವನ್ನು ಕಟ್ಟಿಸಿ ತಾರುಣ್ಯದ ವಸಂತದ ಹೊಸ್ತಿಲಲ್ಲಿ ನಿಂತ ಮಗ ಸುಧನ್ವನನ್ನು ಯುದ್ಧದಲ್ಲಿ ಬಲಿಕೊಡಿಸಿ ನಂತರ 'ಹಣಕಾಯಿ' ಹಿಡಿದು ಕೃಷ್ಣಾರ್ಜುನರ ಸ್ವಾಗತಕ್ಕೆ ಹೊರಡುವ ಹಂಸಧ್ವಜನ ಕೃತ್ಯ ಒಂದು ಅತಿರೇಕದ್ದಾಗಿದೆ. ಇದು ಹಂಸಧ್ವಜನ ಅತಿರೇಕವಾಗಿರದೆ ಯಕ್ಷಗಾನದ ಜೀವನದೃಷ್ಟಿಯ ಅತಿರೇಕದ್ದಾಗಿದೆ. ಆದರೆ ಕಲಾವಿದರಿಗೆ ಅರ್ಜುನ ಮತ್ತು ಸುಧನ್ವ ಪಾತ್ರಧಾರಿಗಳಾಗಿ ರಂಗಸ್ಥಳದಲ್ಲಿ ಕೆಲಸ ಮಾಡಲು ಅತ್ಯುತ್ತಮ ಅವಕಾಶವಿದೆ ಎಂಬ ಕಾರಣದಿಂದ ಇದು ಬಹಳ ಪ್ರಸಿದ್ಧ ನಟರ ಕಣವಾಗಿದೆ. ಅಂದರೆ ನಮ್ಮ ಪ್ರಸಿದ್ಧ ನಟರಿಗೂ ವೈಚಾರಿಕತೆಗೂ ಏನೂ ಸಂಬಂಧವಿಲ್ಲ ಎನ್ನುವುದಕ್ಕೆ ಇದು ಸಾಕ್ಷಿಯಾಗಿರಬಹುದೆ? ಹಾಗಿರಲಿಕ್ಕಿಲ್ಲ. ಆದರೆ ಆ ದೃಷ್ಟಿಕೋನದಿಂದ ಹೊರಬರಲಾರದವರು ಮತ್ತು ಹೊರ ಬರಬಾರದೆನ್ನುವ ವೈಚಾರಿಕತೆಯನ್ನು ಹೊಂದಿದವರೇ ಹೆಚ್ಚಿನ ಜನ ಅದರಲ್ಲಿದ್ದಾರೆ ಎನ್ನುವುದು ಬಹಳ ಮುಖ್ಯ ಅಂಶವಾಗಿದೆ. ಹೀಗೆ ಹೇಳುವಾಗ ನಟ ಪಠ್ಯಕ್ಕೆ ಬದ್ಧನಾಗೇ ಇರಬೇಕಾಗುತ್ತದೆಂಬ ಎಚ್ಚರ ನನಗೆ ಇದ್ದೇ ಇದೆ. ಇದನ್ನು ಮುಂದೆ ಪ್ರಸ್ತಾಪಿಸುತ್ತೇನೆ.

ಭಾಗವತದ ಎರಡನೆಯ ಅಂಶವೆಂದರೆ ಜೀವನ ಪರಮಾತ್ಮನ ಆಟ ಎಂಬುದಾಗಿದೆ. ಮೊದಲ ಹಂತದಲ್ಲಿ ದೇವರೆಂದರೆ ವಿಷ್ಣು ಎಂಬುದು ಸ್ಪಷ್ಟವಾದ ಮೇಲೆ ಈಗ ಜೀವನವೆಂದರೆ ವಿಷ್ಣುವಿನ-ಪರಮಾತ್ಮನ ಆಟ ಎಂಬುದಕ್ಕೆ ವಿಸ್ತರಿಸಲಾಗುತ್ತದೆ. ಕೃಷ್ಣ ಸಂಧಾನ ಪ್ರಸಂಗದಲ್ಲಿ ಒಂದು ಉತ್ಕಟ ಕ್ಷಣದಲ್ಲಿ ಇದನ್ನು ಸ್ಥಾಪಿಸಲಾಗುತ್ತದೆ. ಯಾವ ಬುದ್ಧಿವಾದಗಳಿಂದಲೂ ಒಲಿಯದ, ಭಯದಿಂದಲೂ ಪಾಂಡವರಿಗೆ ರಾಜ್ಯದ ಪಾಲುಕೊಡಲೊಪ್ಪದ ಕೌರವ ಹೇಳುವ ಮಾತು 'ನೀನೇ ನನ್ನ ಒಳಗೆ ಕುಳಿತು ರಾಜ್ಯಕೊಡಬೇಡ ಎಂದು ಹೇಳಿಸುತ್ತಿ?' ಎಂಬುದು. ಅಂದರೆ ಮಾನವರ ಬದುಕು ದೇವರ ಲೀಲೆ. ದೇವರ ಆಟ. ಇಲ್ಲಿ ಎಲ್ಲರೂ ಪಾತ್ರಧಾರಿಗಳು. ಅದಕ್ಕೆ ತನ್ನದೇ ಆದ ಅಸ್ತಿತ್ವ ಇಲ್ಲ. ಮಹಿಳೆಯರ ಕುರಿತು ಇದರ ದೃಷ್ಟಿ ಪಾರಂಪರಿಕವಾದುದು. ಮತ್ತು ಪ್ರತಿಗಾಮಿಯಾದುದು. ಪಾತಿವ್ರತ್ಯದ ಮಹಿಮೆಯನ್ನು ಅದಕ್ಕೆ ಬಣ್ಣಿಸಿದಷ್ಟೂ ಸಾಲದು. ಒಂದು ಕಾಲದಲ್ಲಿ ಸಾಂಧರ್ಭಿಕವಾಗಿ ಮಹಿಳೆಗೆ ಒಂದಕ್ಕಿಂತ ಹೆಚ್ಚು ಗಂಡಂದಿರು ಇರುವುದರ ಸತ್ಯವನ್ನು ಯಕ್ಷಗಾನ ಒಪ್ಪುವುದಿಲ್ಲ. ದ್ರೌಪದಿಗೆ ಐವರು ಗಂಡಂದಿರು ಇರುವುದನ್ನು ಅದು ಋಷಿವಾಣಿಯಲ್ಲೂ, ಪೂರ್ವಜನ್ಮದ ಸಂದರ್ಭದಿಂದಲೂ ಈಶ್ವರ ದೇವಾಂಶ ಸಂಬಂಧದಿಂದಲೂ ಮುಚ್ಚಿಹಾಕುತ್ತದೆ. ಹಾಗೆಯೇ ಕೃಷ್ಣ ರಾಧೆಯರ ಸಂಬಂಧ. ರಾಧೆಗೆ ಬೇರೆ ಗಂಡನಿದ್ದರೂ ದೈವತ್ವದ ಹಿರಿಮೆಯಲ್ಲಿ ಮುಚ್ಚುತ್ತದೆ. ವೃಂದೆಯ ಪಾತಿವ್ರತ್ಯವನ್ನು ಕೆಡಿಸುವ ಪ್ರಸಂಗ ತೀರಾ ಕ್ಷುಲ್ಲಕತನದಿಂದ ಕೂಡಿರುವುದಾದರೂ ವಿಷ್ಣು ಭಕ್ತಿ ಎತ್ತಿ ಹಿಡಿಯುತ್ತದೆ. ರಾಕ್ಷಸರು

ಎಷ್ಟೇ ದುಷ್ಟರು ಎಂದು ಚಿತ್ರಿಸಿದರೂ ಅವರ ಹೆಂಡಂದಿರುಮಾತ್ರ ಪರಮ ಪತಿವ್ರತೆಯರೇ ಇರುತ್ತಾರೆ. ಉದಾಹರಣೆಗೆ ಭೀಮನ ರಾಕ್ಷಸ ಹೆಂಡತಿ ಹಿಡಂಬಿ. ಅಂಬೆ ಯಾಕೆ ಆತ್ಮಹತ್ಯೆ ಮಾಡಿಕೊಳ್ಳಬೇಕಾಯಿತೆಂದರೆ ಆಕೆ ಮದುವೆಯ ಮೊದಲೇ ಸಾಲ್ವನನ್ನು ಪ್ರೀತಿಸಿದ್ದರಿಂದ

ಯಕ್ಷಗಾನದ ಜೀವನ ಮೌಲ್ಯ ಚಾತುರ್ವರ್ಣೀಕೃತ ಬ್ರಾಹ್ಮಣ್ಯಕ್ಕೆ ಬದ್ಧವಾಗಿದೆ. ಯಕ್ಷಗಾನದ ಯಾವುದೇ ಸಂದರ್ಭದಲ್ಲೂ ಗೋ ಬ್ರಾಹ್ಮಣ್ಯ ಹಿರಿಮೆಯನ್ನು ಎತ್ತಿ ಹಿಡಿಯಲ್ಪಡುತ್ತದೆ. ಏಕಲವ್ಯ ಯಾಕೆ ದ್ರೋಣನಿಂದ ವಿದ್ಯೆ ಹೊಂದದವನಾದನೆಂದರೆ ಆತ ಶೂದ್ರ ಆದುದರಿಂದ. ಕರ್ಣ ಯಾಕೆ ಪರಶುರಾಮನಿಂದ ಶಾಪ ಹೊಂದಿದನೆಂದರೆ ಆತ ಬ್ರಾಹ್ಮಣ ಅಲ್ಲವ್ದರಿಂದ. ಬ್ರಾಹ್ಮಣ ಭೂಮಿಯ ಮೇಲಿನ ದೇವರು ಎಂದೇ ಚಿತ್ರಿಸಲ್ಪಡುತ್ತಾರೆ. ಹಾಗೆಯೇ ಭಾರತೀಯ ತತ್ವಜ್ಞಾನ ಇಡಿಯಾಗಿ ಶೂದ್ರ ವೃಕ್ಷದ ಮೇಲೆ ಬೆಳೆದ ಬ್ರಾಹ್ಮಣ ಬಂದಳಿಕೆಯಾದ್ದರಿಂದ ಯಕ್ಷಗಾನ ಗತಾನುಗತಕವಾಗಿದೆ. (ಗ್ರೀಸ್ ನಾಗರಿಕತೆ ಕೂಡ ಅಲ್ಲಿಯ ಗುಲಾಮರ ಗೆಯ್ಮೆಯ ಮೇಲೆ ಬೆಳೆದಿದ್ದು) ಆದ್ದರಿಂದ ಯಕ್ಷಗಾನದ ಪ್ರತಿಗಾಮಿ ಜೀವನ ಮೌಲ್ಯವನ್ನು ಹೀಗೆ ಪಟ್ಟಿ ಮಾಡಬಹುದು.

೧. ವೈಷ್ಣವ ಪಂಥ ಹಿರಿಮೆ (ಧಾರ್ಮಿಕ ಮೂಲಭೂತವಾದದ ಅಂಕುರ ಇಲ್ಲೇ ಇದೆ)

೨. ಈ ಬದುಕು ದೇವರ ಲೀಲೆ (ಅಂದರೆ ಮನುಷ್ಯರ ಪೌರುಷಕ್ಕೆ ಬೆಲೆಯಿಲ್ಲ)

೩. ಪಾತಿವ್ರತ್ಯದ ಹಿರಿಮೆ (ಪುರುಷ ಯಾಜಮಾನ್ಯದ ಶ್ರೇಷ್ಠತೆ)

೪. ಗೋ ಬ್ರಾಹ್ಮಣ ಹಿರಿಮೆ (ಜಾತಿಯ ತರತಮತೆಯನ್ನು ಪ್ರತಿಪಾದಿಸುವದು)

ಇವುಗಳ ಹೊರತಾಗಿ ಪ್ರತಿಪಾದಿತ್ಯವಾದ ಇನ್ನೆರಡು ಮೌಲ್ಯಗಳು ವಿವೇಚನೆಗೆ ಅರ್ಹವಾಗಿವೆ.

೧. ವಿಭಕ್ತ ಕುಟುಂಬ ಮತ್ತು ಕುಟುಂಬ ಪ್ರೀತಿ ಮತ್ತು ಸಂಘರ್ಷ

೨. ಸಾಧನೆ ಮತ್ತು ಸಾಧ್ಯದ ಸಂಬಂಧ. ಕುಟುಂಬ ಪ್ರತೀಯನ್ನು ಒಂದು ಜೀವನ ಮೌಲ್ಯವನ್ನಾಗಿ ಯಕ್ಷಗಾನ ಸ್ವೀಕರಿಸುತ್ತದೆ. ಪಾಂಡವರ ಕೌರವರ ಮಧ್ಯೆಯ ರಾಜ್ಯದ ಪಾಲುಗಾರಿಕೆ ಒಂದು ಅವಿಭಕ್ತ ಕುಟುಂಬ ವಿಭಕ್ತದ ಕಡೆ ಧಾವಿಸುವ ಚಿತ್ರಣವಾಗಿದೆ. ಒಂದು ಕಡೆ ಅವಿಭಕ್ತ ಕುಟುಂಬದ ಮೌಲ್ಯವನ್ನು ಪ್ರತಿಪಾದಿಸುವ ಧರ್ಮರಾಜ. ಇನ್ನೊಂದು ಕಡೆ ವಿಭಕ್ತ ಕುಟುಂಬವನ್ನು ಪ್ರತಿಪಾದಿಸುವ ಅವನ ತಮ್ಮಂದಿರು. ಸ್ವತಃ ಅವಿಭಕ್ತ ಕುಟುಂಬಿಯಾಗಿದ್ದು ಯುಗಪುರುಷನೆಂದೇ ಹೆಸರಾದ ಕೃಷ್ಣ ನಿಲ್ಲುವುದು ವಿಭಕ್ತ ಕುಟುಂಬದ ಕಡೆ. ನಿಶ್ಚಯವಾಗಿ ಕೌರವ ಪೌಂಡವ ಮಧ್ಯೆ ನಡೆಯುವ ಕುಟುಂಬ ಜಗಳದಲ್ಲಿ ಗೆಲ್ಲುವುದು ವಿಭಕ್ತ ಕುಟುಂಬದ ಪ್ರತಿಪಾದನೆ. ಆದರೆ ಕುಟುಂಬ ಪ್ರೀತಿ ಸಹ ಸಂಘರ್ಷಕ್ಕೆ ಒಳಗಾಗಿದೆ. ಚಿತ್ರಸೇನ ಗಂಧರ್ವ ಕೌರವನನ್ನು ಬಂಧಿಸಿ ಆಕಾಶಕ್ಕೆ ಒಯ್ದಾಗ ಆತನ ಹೆಂಡತಿ ಧರ್ಮರಾಜನ ಮೊರೆ ಹೋದಾಗ ಧರ್ಮರಾಜ ಕೌರವನನ್ನು ಬಿಡಿಸಿ ತರುವಂತೆ ಅರ್ಜುನನಿಗೆ ಆಜ್ಞಾಪಿಸುತ್ತಾನೆ. ತಮ್ಮ ವೈರಿಯೆ ಆಗಿದ್ದರೂ ಕೌರವನನ್ನು ಬಿಡಿಸಿ ತರುವುದು

ತಮ್ಮ ಧರ್ಮ ಎನ್ನುವುದಕ್ಕೆ ಧರ್ಮರಾಜ ಹೇಳುವ ಮಾತು 'ವಯಂ ಪಂಚಾಧಿಕ ಶತಂ.' ನಾವು ಯುದ್ಧ ಮಾಡುವಾಗ ನಾವು ಅಯ್ದು, ಕೌರವ ನೂರು ಆಗಿದ್ದರೂ ಹೊರಗಿನವರು ಮೇಲೆ ಬಿದ್ದಾಗ ನಾವು ನೂರು ಮತ್ತು ಐದು ನೂರಾ ಐದು ಎಂದು. ವಾಲಿವಧೆ ಪ್ರಸಂಗ ಕೂಡ ಈ ಕುಟುಂಬದ ವಿಚ್ಛಿದ್ರತೆಯನ್ನೇ ಪ್ರತಿಪಾದಿಸುತ್ತದೆ. ಪಾದುಕಾ ಪಟ್ಟಾಭೀಷೇಕದ ಪ್ರಸಂಗ ಅವಿಭಕ್ತ ಮತ್ತು ವಿಭಕ್ತ ಕುಟುಂಬದ ಮಧ್ಯೆಯ ಸಂಘರ್ಷವನ್ನೇ ಹೇಳುತ್ತದೆ. ರಾವಣನ ತಮ್ಮ ವಿಭೀಷಣ್ಣ ಅಣ್ಣನ ವೈರಿಯಾದ ರಾಮನ ಕಡೆಗೆ ಬರುವುದರೂ ಕೌರವನ ತಮ್ಮ ಪಾಂಡವರ ಕಡೆ ಬರುವುದೂ ಕುಟುಂಬ ವಿಚ್ಛಿದ್ರತೆಯನ್ನೇ ತೋರುತ್ತದೆ. ಆದರೆ ಆ ಛಿದ್ರತೆಯಲ್ಲೂ, ಕುಟುಂಬ ಪ್ರೀತಿ ಮುಂದುವರಿದಂತೆ ಕಾಣುತ್ತದೆ. ಆದರೆ ಈಗಿನಷ್ಟು ಕುಟುಂಬ ಛೀದ್ರಿಕರಣವನ್ನು ಅದು ಅಷ್ಟಾಗಿ ಚೆನ್ನಾಗಿ ಹೊಂದಿರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಕೌರವನಲ್ಲಿ ಸಂಧಿಗಾಗಿ ಕೃಷ್ಣ ಧರ್ಮರಾಜನಿಂದ ಅಜ್ಞಪ್ತನಾದ ಕೃಷ್ಣನೆದುರು ತಮಗೆ ಸಂಧಿ ಬೇಡ; ಸಂಗ್ರಾಮವೇ ಬೇಕು ಎಂದು ಭೀಮ ಮತ್ತು ಅರ್ಜುನ ಹಟ ಹಿಡಿಯುತ್ತಾರೆ. ಆಗ ಕೃಷ್ಣ 'ನಿಜವನುಡಿ ಮಾನನಿಧಿ ಸಂಧಿಯೇ, ಸಂಗ್ರಾಮವೊ' ಎಂದು ಧರ್ಮರಾಜನನ್ನು ಮರುಪ್ರಶ್ನಿಸಿದಾಗ ನಿರುಉಪಾಯನಾಗಿ ಧರ್ಮರಾಜ ಕೌರವ ಸಂಧಿಯ ಮುರಿದನಾದರೆ ಸಂಗ್ರಾಮವನ್ನು ಗಂಟಿಕ್ಕಿ ಬಾ ಎನ್ನುತ್ತಾನೆ. ಪಾಂಡವರಿಗೆ ಐವರಿಗೂ ದ್ರೌಪದಿಯನ್ನು ಹೆಂಡತಿಯನ್ನಾಗಿ ಮಾಡಿರುವ ಕುಂತಿಯ ವಿಚಾರದ ಹಿಂದೆ ಈ ಅವಿಭಕ್ತ ಕುಟುಂಬದ ಅಲೋಚನೆಯೇ ಇರಬಹುದು. ಆದೇನಿದ್ದರೂ ವಿಭಕ್ತಿ ಕುಟುಂಬದ ಮೊದಲ ಘಟ್ಟವನ್ನು ಇದು ಸಾರಿದೆ.

ಎರಡನೆಯದಾಗಿ ಮಾಧ್ಯಮ ಮತ್ತು ಗುರಿಗೆ ಸಂಬಂಧಿಸಿದ್ದು. ಗಾಂಧೀಜಿ ಗುರಿಯಂತೆ ಸಾಧನ ಸಹ ಅಷ್ಟೇ ಸಾಧುವಾಗಿರಬೇಕು ಎಂದರೆ, ಕೃಷ್ಣ ಗುರಿ ಸಾಧನೆಯಲ್ಲಿ ಅದರ ಮಾಧ್ಯಮ ಶುದ್ಧತೆಯ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಲೋಕ ಹಿತಕ್ಕಾಗಿ ಕೆಲಸ ಮಾಡುವಾಗ ಮಾಧ್ಯಮದ ಬಗ್ಗೆ ಪರಿಶುದ್ಧತೆಯನ್ನು ಕಾಯ್ದುಕೊಳ್ಳಬೇಕಿಲ್ಲ ಎನ್ನುವುದೇ ಆತನ ನಂಬಿದ ಮೌಲ್ಯ. ಯಕ್ಷಗಾನದ ಜೀವನ ಮೌಲ್ಯ ಕೂಡ ಇದೇ. ಬಲಿಚರಿತ್ರೆಯಲ್ಲಿ ಸಾತ್ವಿಕನಾದ ಬಲಿಯನ್ನು ಇಂದ್ರಪಟ್ಟರಿಂದ ಚ್ಯುತನನ್ನಾಗಿ ಮಾಡುವಾಗ, ವಾಲಿಯನ್ನು ರಾಮ ವಧಿಸುವಾಗ, ಪಾಂಡವ ಕೌರವರ ಯುದ್ಧದ ಅನೇಕ ಸಂದರ್ಭದಲ್ಲಿ, ಜರಾಸಂಧನನ್ನು ಕೊಲ್ಲುವಾಗ, ರುಕ್ಮಿಣಿಯನ್ನು ಮದುವೆಯಾಗುವಾಗ ಹೀಗೆ ಹಲವು ಹತ್ತು ಸಂದರ್ಭದಲ್ಲಿ ಯುಗಪುರುಷನಾದ ಕೃಷ್ಣ ಕಾರ್ಯ ಇದಕ್ಕೆ ಸ್ಪಷ್ಟ ನಿದರ್ಶನವಾಗಿದೆ.

ಈಗೀಗ ಕೆಲವು ಹೊಸ ಪ್ರಸಂಗಗಳು ರಚಿತವಾಗಿವೆ. ಇವುಗಳು ಯಾವ ಹೊಸ ನೋಟನ್ನೂ ಕೊಡವುದಿಲ್ಲ. ಯಾವುದೋ ನಟರನ್ನೂ ಯಾವುದೋ ರಸವನ್ನೋ ಉದ್ದೇಶಿಸಿ ರಚಿತವಾದವು. ಯಾವ ಹೊಸ ಮೌಲ್ಯಗಳ ನಿರೂಪಣೆಯಾಗಲೀ, ಹಳೆಯ ಮೌಲ್ಯಗಳ ಸಂಘರ್ಷವಾಗಲಿ ವ್ಯಕ್ತಿತ್ವದ ನೈತಿಕತೆಯ ಒಳತೋಟಿಯಾಗಲಿ ಇವುಗಳಲ್ಲಿ ಇಲ್ಲ. ಕೆಲವೊಂದು ಪ್ರಸಂಗಗಳಂತೂ ಕೊಮುದ್ವೇಷವನ್ನೇ ಹಬ್ಬಿಸಲೆಂದೇ ಬರೆದವು. ಇನ್ನು ಕೆಲವು ಸ್ಥಳ ಮಹಿಮೆಯ ಆಧಾರದಲ್ಲಿ ರಚಿತವಾದವು. ಬೇಕಾದರೆ ಅವು ಧರ್ಮಸ್ಥಳ ಮಹಿಮೆಯೇ ಇರಲಿ. ಇಡಗುಂಜಿ

ಮಹಾತ್ಮೆಯೇ ಇರಲಿ ಮೂಢನಂಬಿಕೆಯನ್ನು ಶಾಶ್ವತಗೊಳಿಸಲು ಮಾತ್ರ ಶಕ್ತಿ ಹೊಂದಿರುವಂಥವು. ಈ ಮಧ್ಯೆ ಅಲ್ಲೊಂದು ಇಲ್ಲೊಂದು ಉತ್ತಮ ಪ್ರಸಂಗ ಬಂದರೂ ಮಹತ್ವವೇ.

ಇಷ್ಟು ಹೇಳಿದ ಮೇಲೂ ಇನ್ನೊಂದಿಷ್ಟು ಮುಂದುವರಿಸುವ ಅವಶ್ಯಕತೆಯಿದೆ. ಯಾಕೆಂದರೆ.. ಈ ಮೇಲೆ ನಿರೂಪಿತವಾದದ್ದನ್ನು ಪರಮಮೌಲ್ಯಗಳು ಎಂದು ಕರೆಯಬಹುದು. ಇದರ ಹೊರತಾಗಿ ಎರಡು ಸಾಲುಗಳ ಮಧ್ಯಯ 'ಒದು ಅಂತಾರಲ್ಲ ಹಾಗಿನ' ಓದಿಗೆ ದೊರಕಬಹುದಾಗಿದೆ. ಇದಕ್ಕೆ ಸಂವಾದಿಯಾಗಿರುವ ಯಕ್ಷಗಾನದ ಖ್ಯಾತ ವಿಮರ್ಶಕ ಎಂ. ಪ್ರಭಾಕರ ಜೋಶಿಯವರ ಒಂದು ಮಾತನ್ನು ಇಲ್ಲಿ ನಮೂದಿಸಬಯಸುತ್ತೇನೆ. "ಪದ್ಯದ ಶಬ್ದಗಳಲ್ಲಿ ಇಲ್ಲದ, ಆದರೆ ವಸ್ತುವಿನಲ್ಲಿ ಇರುವ ಅಂಶಗಳನ್ನು ಸ್ವೀಕರಿಸಿ ಅರ್ಥಾತ್ ಬಗೆದು ನೋಡಿ, ಸ್ವಂತ ಕಲ್ಪನೆಯ ಅರ್ಥಗಳನ್ನು ಅದಕ್ಕೆ ನೀಡುತ್ತ ಅರ್ಥಗಾರಿಕೆ ಬೆಳೆದು ಬಂದಿದ್ದು. ಈ ಬೆಳವಣಿಗೆ ಕನ್ನಡ ವಾಙ್ಮಯ ಪ್ರಪಂಚದ ಉನ್ನತ ಸಿದ್ಧಿಗಳಲ್ಲಿ ಒಂದಾಗಿ ಗಣನೆಗೊಳ್ಳುವ ಅರ್ಹತೆ ಪಡೆದಿದೆ. ಹಾಗೆಯೇ ಪದ್ಯಗಳಿಗೆ ಅರ್ಥವನ್ನು ಹೇಳುವಾಗ ಪದ್ಯದ ಅರ್ಥವನ್ನು (ಅಂದರೆ ಸರಳ ಅನುವಾದವನ್ನು) ಮಾತ್ರ ಹೇಳದೆ ತನಗೆ ಅದರಿಂದ ಆಗುವ ಅರ್ಥವನ್ನು ಹೇಳುವುದು ಅರ್ಥಧಾರಿಯ ಕೆಲಸ. ಪ್ರಸಂಗ ನಿಷ್ಠೆಯೇ ಅರ್ಥಧಾರಿಯ ಮಾತುಗಾರಿಕೆಗೆ ಮಾನದಂಡವಲ್ಲ (ಮಾರುಮಾಲೆ, ೧೯೯೦ ಪು. ೧೨೭ ಮತ್ತು ೧೩೬)

ಯಕ್ಷಗಾನ ಪ್ರತಿಪಾದಿಸುವ ಬಹುಮುಖ್ಯವಾದ ಉಪಮೌಲ್ಯ ಯುದ್ಧ ವಿರೋಧಿ ಮನೋಭಾವ. ಈ ಮೌಲ್ಯವನ್ನು ನಾವು ಕಂಡುಕೊಳ್ಳುವುದು ಪ್ರಸಂಗದಲ್ಲಿ ಗೆಲುವಿನ ಸಂದರ್ಭದಿಂದ ಅಲ್ಲ. ಬದಲಾಗಿ ಸೋಲಿನ ಹಾಗೂ ಯುದ್ಧದಿಂದುಂಟಾದ ಸಾಮಾಜಿಕ ಪರಿಣಾಮದಿಂದಾಗಿ. ಇದನ್ನೇ ಕೃಷ್ಣಸಂಧಾನ, ಭೀಷ್ಮಪರ್ವ, ಗದಾಪರ್ವ. ಸುಧಾನ್ವಾರ್ಜುನ ಮುಂತಾದವು ಪ್ರತಿಪಾದಿಸುತ್ತದೆ. ಕೃಷ್ಣಸಂಧಾನದಲ್ಲಿ ಪ್ರಾರಂಭದಿಂದ ಕೊನೆಯತನಕವೂ ಇದಕ್ಕೆ ಅವಕಾಶವಿದೆ. ಸಂಜಯನ ಪ್ರಾರಂಭಿಕ ಸಭೆಯ ಸಂದಭದಲ್ಲೇ 'ಕೆಡಿಸದಿರಿ ಕಾರ್ಯವನು' ಎಂಬ ಧರ್ಮರಾಜನ ಪದ್ಯದಿಂದಲೇ ಸ್ಥಿರಶಾಂತಿ ಸ್ಥಾಪನೆಯ ಮಹ್ವವನನ್ನು ಎತ್ತಿಕೊಳ್ಳುವ ಧರ್ಮರಾಜನ 'ಮಾತು ಮುರಿದವಾದರೆ ಸಂಗ್ರಾಮದ ನಿಶ್ಚಯಿಸಿ ಬಾ' ಎಂಬ ತನಕವೂ ಅವಕಾಶವಿದೆ. ಮಂದೆ ಕೃಷ್ಣ ಇಡೀ ಭಾವವನ್ನು ಮುಂದುವರಿಸಬಹುದು. ಬಹಳ ಮುಖ್ಯವಾಗಿ ಕೌರವನೊಡನೆಯ ಸಂಭಾಷಣೆ ಇದಕ್ಕೆ ವಿಶಾಲವಾದ ಅವಕಾಶವನ್ನು ಒದಗಿಸಿಕೊಡುತ್ತದೆ. 'ಎಲವೋ ಪಾತಕಿ ಬರಿದೆ ಸಾಯದಿರು' ಎನ್ನುವಲ್ಲಿ ಯುದ್ಧದಿಂದಾಗುವ ಅನಾಹುತವನ್ನು ವಿಸ್ತರಿಸಬಹುದು 'ಭೀಷ್ಮಪರ್ವದಲ್ಲಿ ಭೀಷ್ಮನ ಅಂತರಂಗದ ತುಮುಲದ ಚಿತ್ರಣದೊಡನೆ ಯುದ್ಧ ಮತ್ತು ಯಾದವಿ ಕಲಹ ಮಾನವೀಯತೆಯನ್ನು ಹೇಗೆ ನಾಶ ಮಾಡುತ್ತದೆಂಬುದನ್ನು ಚಿತ್ರಿಸಬೇಕಾಗುತ್ತದೆ.

ಭೀಷ್ಮ ಪರ್ವದಲ್ಲಿ ತೀರ ಚಿಕ್ಕದಾಗಿ ಬರುವ ಭಗವದ್ಗೀತೆಯ ಪ್ರಸಂಗವನ್ನು ಉದ್ದೇಶಕ್ಕೆ ಬಳಸಿಕೊಳ್ಳಬಹುದು. ಇಂದು ನಡೆದ ಜಾಗತಿಕ ಒಂದನೇ ಮತ್ತು ಎರಡನೇ ಮಹಾಯುದ್ಧ

ಶ್ರೀಮಂತ ರಾಷ್ಟ್ರಗಳ ಆರ್ಥಿಕ ಪೈಪೋಟಿ (ಬಂಡವಾಳಶಾಹಿ ಸ್ಪರ್ಧೆ)ಯಲ್ಲಿ ನಡೆದರೆ ಮಹಾಭಾರತದ ಯುದ್ಧ ವರ್ಣಧರ್ಮದರಕ್ಷಣೆಗಾಗಿ ಅಂದರೆ ಬ್ರಾಹ್ಮಣ ಮತ್ತು ಕ್ಷತ್ರಿಯರ ಹಿತಾಸಕ್ತಿಯಿಂದಾಗಿ ನಡೆಯಿತೆಂಬುದನ್ನು ಸಾಬೀತು ಪಡಿಸಬಹುದು. ಆದ್ದರಿಂದ ಪ್ರಾರಂಭದಿಂದಲೂ ಆರ್ಥಿಕ ಪೈಪೋಟಿಯಿದ್ದು ಈ ಆರ್ಥಿಕ ಮತ್ತು ಧಾರ್ಮಿಕ ಪೈಪೋಟಿಯನ್ನು ನಿಲ್ಲಿಸುವ ವ್ಯವಸ್ಥೆಯೊಂದಿಗೆ ಮಾತ್ರ ಯುದ್ಧ ಕೊನೆಗೊಳ್ಳಬಹುದೆಂಬುದನ್ನು ಹೇಳಬಹುದು. ಗದಾಪರ್ವದಲ್ಲಿ ಸಹ ಯುದ್ಧದ ಸರ್ವನಾಶವನ್ನು ಬಣ್ಣಿಸಬಹುದಾಗಿದೆ.

ಪ್ರಾರಂಭದಲ್ಲಿಯೇ ಯಕ್ಷಾಗನದ ಬಣ್ಣ ಬಟ್ಟೆಗಳ ಬಗೆಗೆ ಹೇಳುತ್ತ ಇದು ಜಾನಪದೀಯವಾದ ಜೀವನ ಪ್ರೀತಿಯ ಮೌಲ್ಯದೊಡನೆ ಬದ್ಧವಾಗಿದೆ ಎಂಬ ಮಾತನ್ನು ನಮೂದಿಸಿದ್ದೆ. ಯಕ್ಷಗಾನದ ಗುಂಟ ಇಂಥ ಜಾನಪದೀಯ ಜೀವನ ಪ್ರೀತಿಯನ್ನು ಚಿತ್ರಿಸುವುದರಲ್ಲಿ ಗಾಢವಾಗಿ ತೊಡಗಿಸಿಕೊಳ್ಳುವ ಯಕ್ಷಗಾನ ಕವಿಗಳ ತನ್ಮಯತೆಯೇ ಅದನ್ನು ಮೌಲೀಕರಿಸುತ್ತದೆ. ಉದಾಹರಣೆಗಾಗಿ ಕರ್ಣಪರ್ವದಲ್ಲಿ ಕರ್ಣನ ದುರಂತ ಜೀವನವನ್ನು ಚಿತ್ರಿಸುವುದರಲ್ಲಿ ಇಡೀ ಕತೆಯನ್ನು ಕರುಣಾರಸದ ಮಹಾಪೂರವನ್ನಾಗಿಸುವಲ್ಲಿ ಅಂದಿನ ವರ್ಣ, ಜಾತಿ ವ್ಯವಸ್ಥೆಗಳು ಹೇಗೆ ಮಾನವತಾ ವಿರೋಧಿಯಾಗಿದ್ದವು ಎಂಬುದನ್ನು ಸಾಬೀತು ಪಡಿಸಿದ್ದಾರೆ. ಈ ಸಂಗತಿ ಎಷ್ಟು ತಾಜಾ ಇದೆಯೆಂದರೆ ರವೀಂದ್ರನಾಥ ಠಾಗೋರ' 'ಘೋರಾ' ಕಾದಂಬರಿಯ ಪ್ರಸ್ತುತತೆಯಷ್ಟು. ಆದರೆ ತನ್ಮಯುತೆ ಪ್ರಜ್ಞೆಯನ್ನು ಮರೆಸುತ್ತದೆ. ಕುಟುಂಬದಲ್ಲಿ ಸ್ತ್ರೀ ಪ್ರಾಮುಖ್ಯತೆಯನ್ನು ಸ್ಥಾಪಿಸುವ ಅನೇಕ ಸಂದರ್ಭಗಳು ಯಕ್ಷಗಾನದಲ್ಲಿವೆ. ಅಂಥವುಗಳಲ್ಲಿ ದ್ರೌಪದಿಯ ಚಿತ್ರಣ ಒಂದು. ದ್ರೌಪದಿಯ ಕುರಿತು ಪರೋಕ್ಷವಾದ ಕಥನ ಬೆಳೆಸುವುದರಿಂದ ಇದು ಸಾಧಿಸಬೇಕಾದುದು. ಕೆಲವೊಂದು ಪ್ರಸಂಗ ನೇರವೂ ಆಗಬಹುದು. ಉದಾಹರಣೆಗಾಗಿ 'ದ್ರೌಪದಿ. ಪ್ರತಾಪ'ದ ದ್ರೌಪದಿ. ಹಾಗೆಯೇ ಸಂಧಾನದಲ್ಲಿ ಬುದ್ಧಿಹೇಳುವ ಭಾನುಮತಿ. ಪಂಚವಟಿಯ ಮಂಡೋದರಿ ಮುಂತಾದವುಗಳಿಂದ ಸ್ತ್ರೀ ಸ್ವಾಂತಂತ್ರ್ಯದ ಕುರಿತಾದ ಕಲ್ಪನೆಯನ್ನು ನಿರೀಕ್ಷಿಸುವುದು ಅಸಾಧ್ಯವಾದರೂ ಮಹಿಳೆಯರಿಗೆ ಕುಟುಂಬದ ಸಂದರ್ಭದಲ್ಲಿ ಮಹತ್ವದ ಸ್ಥಾನ ಇರಬೇಕಿದೆ ಎಂಬ ಕಲ್ಪನೆಯನ್ನು ಸ್ಥಾಪಿಸುವುದು ಸಾಧ್ಯವಾಗುತ್ತದೆ.

ಯಕ್ಷಗಾನದ ಜನಸಾಮಾನ್ಯರನ್ನು ತಲುಪುವ ಪ್ರಭಾವಿ ಮಾಧ್ಯಮವಾಗಿದ್ದು ಅದು ಪ್ರತಿಪಾದಿಸುವ ಜೀವನ ಮೌಲ್ಯ ಜನರ ಮೇಲೆ ಮಹತ್ವಪೂರ್ಣ ಪ್ರಭಾವ ಬೀರುವುದಾಗಿದೆ. ಆದ್ದರಿಂದ ಅದರ ಮೌಲ್ಯದ ಕುರಿತು ಕೂಡ ಗಾಢವಾಗಿ ಚಿಂತಿಸಬೇಕಾದುದು ಇಂದಿನ ಅವಶ್ಯಕತೆಯಾಗಿದೆ. ಆದರೆ ಈಗ ಇದ್ದಂತೆ ಯಕ್ಷಗಾನ ಅತ್ಯಂತ ಪ್ರತಿಗಾಮಿ ಧೋರಣೆ ಮಾಧ್ಯಮಾದಂತೆ ಪ್ರದರ್ಶಿಸಲ್ಪಡುತ್ತದೆ ಎನ್ನುವುದು ಖೇದದ ಸಂಗತಿಯಾಗಿದೆ.

*

ಭಾಗ-೨

ಅನ್ಯ ಕಾವ್ಯಗಳ ಮುಖಾಂತರ ಸಾಮಾಜಿಕ ಚಿಂತನೆ

ಮಾನ್ಯ ಕೆ.ವಿ. ಸುಬ್ಬಣ್ಣ ಸಾಂಸ್ಕೃತಿಕ ಮತ್ತು ವೈಚಾರಿಕ ಸಂದರ್ಭದಲ್ಲಿ ನಮಗೆ ಬಹಳ ಮುಖ್ಯರಾಗುತ್ತಾರೆ. ಅವರ ವೈಚಾರಿಕ ಮತ್ತು ಸಾಂಸ್ಕೃತಿಕ ಕಾಳಜಿ ಕಣ್ಕಟ್ಟಿ ಕಟ್ಟಿಕೊಂಡಿರುವಂತಹದಲ್ಲ. ಬಹಳ ಸ್ವಾಭಾವಿಕ ಎನ್ನುವಾಗಲೂ ವಿದ್ರೋಹಾತ್ಮಕ ದ್ರವ್ಯವನ್ನು ಹುದುಗಿಸಿಕೊಂಡಿರುವಂತಹದು. ತಾನು ಸ್ವತಾ ಒಬ್ಬ ಅಡಿಕೆ ಬೇಸಾಯಗಾರ ಹವ್ಯಕರಾಗಿದ್ದು ಹವ್ಯಕರ ಸಮ್ಮೇಳನಕ್ಕೆ ಕಪ್ಪು ಧ್ವಜ ತೋರುವ, ಜಾಗ್ರತ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿಯೂ ಶ್ರೇಷ್ಠತೆಯ ಮೂರ್ತಿಯನ್ನು ಭಂಜಿಸುವ, ಕಾವ್ಯ-ಸಾಹಿತ್ಯದ ಮುಖಾಂತರ ಸೌಂದರ್ಯದ ಆರಾಧಕರಾಗಿದ್ದು 'ವಿಶ್ವಸುಂದರಿ ಸ್ಪರ್ಧೆ' ವಿರುದ್ಧ ಕೂಗಿಕೂಳ್ಳುವ ವಿಸ್ಫೋಟಕನಾಗುವುದು ಈ ವಿದ್ರೋಹಾತ್ಮಕ ದ್ರವ್ಯದ ಶಕ್ತಿಯಿಂದ.

ಸುಬ್ಬಣ್ಣನವರ ಕಾವ್ಯಚಿಂತನೆ ಕಾವ್ಯಕ್ಕೆ ಮಾತ್ರ ನಿಲ್ಲುವುದಿಲ್ಲ. ಯಾಕೆಂದರೆ ಕಾವ್ಯವನ್ನು ಒಂದು ಸಾಸ್ಕೃತಿಕ ವಿಲಾಸ, ಒಂದು ಸಾಂಸ್ಕೃತಿಕ ದುಂದು ಎಂದು ಅವರು ಗ್ರಹಿಸುವುದಿಲ್ಲ ಎಂದುಕೊಂಡಿದ್ದೇನೆ. ಆದ್ದರಿಂದಲೇ ಅವರ ಇತರ ಚಿಂತನೆಗೂ ಅಂದರೆ ಸಾಮಾಜಿಕ ಚಿಂತನೆಗೂ ಕಾವ್ಯ ಚಿಂತನೆಗೂ ಅವಿನಾಸಂಬಂಧ ಉಂಟು. ಅದನ್ನು ಗಮನಿಸಿಯೇ ಇರಬೇಕು. ಟಿ.ಪಿ ಅಶೋಕ, "ಸುಬ್ಬಣ್ಣನವರು ಬದುಕು ಮತ್ತು ಬರಹ ಅಭಿನ್ನ ಎನ್ನಿಸುವಂಥ ಜೀವನ ಶೈಲಿಯೊಂದನ್ನು ರೂಢಿಸಿಕೊಂಡವರು. ಹಾಗಾಗಿ ಅವರ ಎಲ್ಲ ಚಟುವಟಿಕೆಯ ಹಿಂದೆ ಒಂದು ಏಕಸೂತ್ರತೆಯನ್ನು ಯಾರಾದರೂ ಕಾಣಬಹುದು. ಈ ಚಟುವಟಿಕೆಗಳನ್ನು ಬಿಡಿಬಿಡಿಯಾಗಿ ನೋಡದೆ ಇಡಿಯಾಗಿ ಪರಿಭಾವಿಸಿಕೊಂಡಾಗ ಮಾತ್ರ ಅವರ ಬರವಣಿಗೆಯ ಅನನ್ಯತೆ ಅರಿವಿಗೆ ಬರಲು ಸಾಧ್ಯ" ಎಂದು ಹೇಳುತ್ತಾರೆ. ಇದು ನನಗೆ ಗ್ರಾಹ್ಯವಾದುದು. ಅವರು ಧ್ಯಾನಸ್ಥರಾಗುವುದೇ ಕಾವ್ಯಚಿಂತನೆ, ಅವರು ಕ್ರಿಯಾಶೀಲರಾಗುವುದೇ ರಾಜಕೀಯ ಮತ್ತು ಸಾಮಾಜಿಕ ಚಿಂತನೆ. ಎಂತಲೇ ಅವರು ವ್ಯಕ್ತಿ ವಿಶಿಷ್ಟ್ಯವನ್ನು ಎತ್ತಿಹಿಡಿಯುವಾಗ ಸಾಮಾಜಿಕತೆ ಮತ್ತು ಸಮಾನತೆಯನ್ನು ನಿರಾಕರಿಸುವುದಿಲ್ಲ. ಹಾಗೆಯೇ ಸಾಮಾಜಿಕತೆಯ ಕ್ರಿಯತ್ವದಲ್ಲಿ ವ್ಯಕ್ತಿ ವೈಶಿಷ್ಟ್ಯತೆಯನ್ನು ಮರೆಯುವುದಿಲ್ಲ. ಈ ಎಲ್ಲ ಹರವುಗಳಿಗೆ ಅವರ ಕೆಲವೇ ಲೇಖನಗಳನ್ನು ಒರೆಹಚ್ಚಿದಾಗ ಸಾಕ್ಷಿಸಿಗುತ್ತದೆ.

ಮೊದಲ ಪ್ರಕಟನೆ: ನಮ್ಮ ಪ್ರೀತಿಯ ಸುಬ್ಬಣ್ಣ ಸಂ: ಜಯಪ್ರಕಾಶ ಮಾವಿನಹಳಿ

ಈ ದಿಸೆಯಲ್ಲಿ ಅವರ 'ಪಂಪನ ಕವಿತೆ; ಅನುಸಂಧಾನ' ಲೇಖನ ಬಹಳ ಮಹತ್ವದಾಗಿದೆ ಎಂದು ನಾನು ಅಂದುಕೊಂಡಿದ್ದೇನೆ.

ಪಂಪನನ್ನು ಮೆಚ್ಚಿಕೊಳ್ಳುವ, ಅವನನ್ನು ಹಾಡಿಹೊಗಳುವ ಕವಿ ಮತ್ತು ವಿಮರ್ಶಕರು ಕೂಡ ಮಹಾಭಾರತದ ಅರ್ಜುನನ್ನು ತನ್ನ ಅರಸ ವೀರಕೇಸರಿಗೆ ತಗುಳ್ಚುವ ತಂತ್ರದಿಂದಾಗಿ ಪಂಪನು ತನ್ನ ತಗಳ್ಚುವ ತಂತ್ರದಲ್ಲಿ ತಾನೇ ಸಿಕ್ಕಿಹಾಕಿಕೊಂಡು ನಿಜವಾದ ಕಥೆಗೆ ಅಸಂಗತಿ, ಅಸಂಬದ್ಧತೆ, ಹಾನಿ ಹಾಸ್ಯಾಸ್ಪದಗಳನ್ನು ತಂದು ಕೊಳ್ಳುತ್ತಾನೆಂದು ಹೇಳಿದ್ದನ್ನು ಸುಬ್ಬಣ್ಣ ಒಪ್ಪಿಕೊಳ್ಳುವುದಿಲ್ಲ. ಇಂತಹ ತೀರ್ಮಾನಗಳಿಗೆ ಸಹಜವಾಗಿ ನವೋದಯದ ಹಿನ್ನೆಲೆಯಲ್ಲಿ ಲಭ್ಯವಾದ ಮತ್ತು ಸೇರಿ ಹೋದ ವಾಸ್ತವವಾದದ ಬಿರುಸೇ ಕಾರಣವೆಂದು ಹೇಳುತ್ತಾರೆ. ಪಂಪನ ಮಹೋನ್ನತಿಗೆ ಪಂಪನ ವರ್ಣನೆ, ಸೂಕ್ತಿಗಳು ಪಾತ್ರ ಸನ್ನಿವೇಶಗಳ ನಿರ್ಮಾಣ ಕಾರಣವಲ್ಲ ಎಂದು ಹೇಳುತ್ತಾ ಸುಬ್ಬಣ್ಣ ತಗುಳ್ಚಿಕೊಳ್ಳುವುದು ಮುಳಿಯ ತಿಮ್ಮಪ್ಪಯ್ಯನವರ ತೀರ್ಮಾನವನ್ನು. ಮುಳಿಯ ಅವರ, "ಅರಿಕೇಸರಿಯ ಇತಿಹಾಸವನ್ನು ಹೇಳುವುದು ಮತ್ತು ಅದನ್ನು ಮಹಾಭಾರತದಲ್ಲಿ ತಗುಳ್ಚಿ ಹೇಳುವುದು ಇವೇ ಪಂಪನ ಮೂಲ ಉದ್ದೇಶ. ಆತನು ಹೀಗೆ ಎರಡು ಕಥೆಗಳನ್ನು ಸಮಾಸಗೊಳಿಸಿ ಹೇಳಿದ್ದರಿಂದಲೇ ತನ್ನ ಕೃತಿಯನ್ನು 'ಸಮಸ್ತ ಭಾರತ' ಎಂಬ ಹೆಸರಿನಿಂದ ಕರೆದು ಕೊಂಡಿದ್ದಾನೆ. ಸಮಾನೋಕ್ತಿಯನ್ನು ವ್ಯಾಪಕವಾಗಿ ಇಡೀ ಕಥಾನಕ್ಕೆ ಅನ್ವಯಿಸಿ ಉಪಯೋಗಿಸಿಕೊಂಡಿದ್ದಾನೆ ಎನ್ನುವ ವಾದ ಸುಬ್ಬಣ್ಣನವರಿಗೆ ಗ್ರಾಹ್ಯವಾಗಿದೆ. ಅದಕ್ಕೆ ಅವರು ಕೊಡುವ ಕಾರಣ ಹೀಗೆ "ಪಾಶ್ಚಾತ್ಯ ಸಾಹಿತ್ಯದಿಂದ ನೇರವಾಗಿ ಪ್ರಭಾವಿತರಾಗದಿದ್ದ ಮುಳಿಯರಂಥವರಿಗೆ ಪಂಪನ ತಂತ್ರ ಅಸಂಬದ್ಧ ಎನ್ನಿಸಲಿಲ್ಲ."

ಈ ಒಂದು ಚಿಕ್ಕ ವಿಷಯವನ್ನು ನಾನು ಯಾಕೆ ಪ್ರಸ್ತಾಪಿಸಿದೆನೆಂದರೆ ಈ ಸಂಗತಿ ಅವರ ಕಾವ್ಯಚಿಂತನೆಯ ಎರಡು ಕವಲಾಗಿ ಮಹತ್ವದ ಪಾತ್ರವಹಿಸುತ್ತದೆ. ಅವರ ಚಿಂತನೆಗೆ ಕೀಲಿಕೈ ಇಲ್ಲಿದೆ ಎಂದು ನನಗನ್ನಿಸುತ್ತದೆ. ಒಂದು, ಸುಬ್ಬಣ್ಣ ಸಾಮಾಜಿಕ ಚಿಂತಕರಾಗಿ ಈಗೀಗ್ಗೆ ಬಹಳ ಮುಖ್ಯವಾಗಿ ಪ್ರತಿಪಾದಿಸುವ ದೇಶೀಯತೆ ಮತ್ತು ಗಾಂಧಿವಾದದ ಬಿಂದು ಇಲ್ಲಿದೆ. ಹಾಗೆಯೇ ಸುಬ್ಬಣ್ಣನವರ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಚಿಂತನೆಯ ವಿಧಾನ ಇಲ್ಲಿದೆ. ಬಹುಶಃ ಅವರ ಕಾವ್ಯಚಿಂತನೆಯ ಪ್ರಮುಖ ನೆಲೆ ಇಲ್ಲೇ ಇದೆ.

"ಪಂಪನು ಜೈನನಾಗಿದ್ದು ತನ್ನ ಧರ್ಮವನ್ನು ಕೀರ್ತಿಸಲಿಕ್ಕಾಗಿ ಆತನು ಆದಿಪುರಾಣವನ್ನು ಬರೆದ ಎಂಬುದು ಸಾರ್ವತ್ರಿಕವಾದ ನಂಬಿಕೆ" ಆದರೆ ಸುಬ್ಬಣ್ಣ ಇದನ್ನು ಒಪ್ಪುವುದಿಲ್ಲ. ಪೂರ್ವಪುರಾಣವನ್ನು ಅನುಸರಿಸುತ್ತಲೇ ಅವನು ಅದರ ಜತೆ ಸತತವಾಗಿ ಘರ್ಷಿಸಿಕೊಳ್ಳುತ್ತ ಹೋಗುತ್ತಾನೆ ಎನ್ನುವುದು ಹೊಳೆಯುತ್ತದೆ' ಎನ್ನುತ್ತಾರೆ. ಈ ಘರ್ಷಣೆ ಯಾವುದು? ಅದು ಸಾಮಾಜಿಕವಾದುದು. 'ಧರ್ಮವು ಜೀವಂತ ವಾಗಿರುವಾಗ ಮೇಲಕ್ಕೆ ಎಷ್ಟೇ ಘನವಾಗಿ ಕಂಡರೂ ಆಂತರಿಕವಾಗಿ ಪ್ರಾಯಶಃ ದ್ರವಗೊಂಡು ಕುದ್ದುಗೊಳ್ಳುತ್ತದೆ' ಎನ್ನುತ್ತಾರೆ. ಈ ಡೈಯಲೆಕ್ಟಿಕಲ್ ಒಳನೋಟ ಸುಬ್ಬಣ್ಣನವರಿಗೆ ಯಾವುದರಿಂದ ಪ್ರಾಪ್ತವಾಗಿದೆ? ಹೊರಗಿನ ಯಾವುದೇ ಸಂಗತಿ ಪ್ರಚೋದಿಸಿದ್ದರೂ ಅದಕ್ಕೆ ಅವರೇ, "ಜಿನಸೇನನ ಪುರಾಣದಲ್ಲಿ ಬರುವ ರಾಜ ಪರಿಸರಗಳು

ನಿಸಂದಿಗ್ಧವಾಗಿ ಆತನ ಕಾಲದ ರಾಷ್ಟ್ರಪತಿ ಚಾಲುಕ್ಯರ ರಾಜ ಪರಿಸರಗಳನ್ನೇ ಯಥಾವತ್ ಬಿಂಬಿಸುವಂಥವು. ಎಷ್ಟೋ ಕಥೆಗಳಲ್ಲಿ ಜನಸೇನನು ಧರ್ಮವ್ಯವಸ್ಥೆಯಲ್ಲಿ ತನಗಿರುವ ಆಸಕ್ತಿಯಷ್ಟೇ ತೀವ್ರವಾದ ಆಸಕ್ತಿಯಿಂದ ರಾಜ್ಯವ್ಯವಸ್ಥೆಯನ್ನು ಪರಿಗಣಿಸುತ್ತಿದ್ದಾನೆ ಅನ್ನಿಸಿಬಿಡುತ್ತದೆ. ಪಂಪನಿಗೆ ಇದು ಬೇಕಾಗಿತ್ತು" ಎನ್ನುವಲ್ಲಿ ಪಂಪನ ಆದಿಪುರಾಣದಲ್ಲಿ ಒಳಸೆಲೆಯಾಗಿ ಬಂದ ರಾಜಕೀಯವನ್ನು ಗುರುತಿಸುವ ಪರಿಯನ್ನು ನೋಡಬಹುದು.

ಆಮೇಲೆ ಮತ್ತೆ ಸುಬ್ಬಣ್ಣ ಪಂಪನ ಕಾಲದ ರಾಜಕೀಯ ಧಾರ್ಮಿಕ ಪರಿಸ್ಥಿತಿಗಳ ಅಭ್ಯಾಸಕ್ಕೆ ತಿರುಗುತ್ತಾರೆ. 'ಸ್ಥಿರವಾಗುತ್ತಿರುವ ರಾಜ ಶಕ್ತಿಯು ತನ್ನಲ್ಲಿ ತನ್ನದೇ ಆದ ಅಸ್ಥಿರತೆಯ ಬೀಜವನ್ನು ಕೂಡ ಹುದಿಗಿಟ್ಟುಕೊಂಡಿತ್ತು' ಎಂದು ಗುರುತಿಸುತ್ತಾರೆ. ಆದ್ದರಿಂದ ಪಂಪನಿಗೆ ಕಾವ್ಯ ಬರೆಯುವ ತುರ್ತು ತೆವಲೆಂದರೆ ತಾನು ತನ್ನ ಮತ್ತು ತನ್ನೆದುರಿನ ವಾಸ್ತವದ ಶೋಧನೆಯೇ. ಸುಬ್ಬಣ್ಣನವರ ಕಾವ್ಯಚಿಂತನೆ ಕಾವ್ಯಕ್ಕೊಂದು ಸಾಮಾಜಿಕ ಉದ್ದೇಶವಿದೆ ಎಂಬ ನಂಬಿಕೆಯಿಂದಲೇ ಹೊರಡುವಂತಹದು.

ಆದಿಪುರಾಣದಲ್ಲಿ ರಾಜಕೀಯ ಮತ್ತು 'ವಿಕ್ರಮಾರ್ಜುನ'ದಲ್ಲಿ ಧರ್ಮ ಇವು ಬೇರೆಬೇರೆಯಾಗಿರಲಿಲ್ಲ ಎಂಬ ಮಹತ್ವದ ನಿರ್ಣಯಕ್ಕೇನೆ ಬರುತ್ತಾರೆ. ಆದರೆ ಅವರು ಹಿಂದಿನ ವಿಮರ್ಶಕರ ಧರ್ಮಕ್ಕಾಗಿ 'ಆದಿಪುರಾಣ', ಲೌಕಿಕಕ್ಕಾಗಿ 'ವಿಕ್ರಮಾರ್ಜುನ ವಿಜಯ' ಎಂಬ ಮಾತನ್ನು ಅಲ್ಲಗಳೆಯುವುದಕ್ಕೆ 'ಅವನು ಧರ್ಮಾಭಿಮಾನಕ್ಕಾಗಿ ಒಂದು ಕಾವ್ಯವನ್ನು ರಾಜಾಭಿಮಾನಕ್ಕಾಗಿ ಇನ್ನೊಂದನ್ನು ಬರೆದ ಎನ್ನುವುದಾದರೆ ಯಾವ ಅಭಿಮಾನಕ್ಕೂ ಬಲಿಯಾಗದ ಮೂರನೆಯದೊಂದು ಸ್ವತಂತ್ರ ಕಾವ್ಯಬರೆದು ಕೃತಕೃತ್ಯನಾಗಬಹುದಿತ್ತಲ್ಲ' ಎಂದು ಒಡ್ಡುವ ತರ್ಕ ಸರಿಯಾದುದಲ್ಲ. ಧರ್ಮದ ಒಳಗೊಳಗೆ ಅದನ್ನು ದ್ರವಗೊಳಿಸುವ (ಲೌಕಿಕಕ್ಕೆ ಎಳೆಯುವ) ವೈಪರೀತ್ಯ ನೆಲೆಗೊಳ್ಳುತ್ತದೆ ಎಂದು ನಂಬುವ ಒಂದು ವೈಚಾರಿಕ ನೆಲೆ ರಾಜಾಸ್ಥಾನದ ಸೌಲಭ್ಯವನ್ನು ನಿರಾಕರಿಸುವಷ್ಟು ಸುಲಭವಾಗಿತ್ತು ಎಂದು ಖಚಿತವಾಗಿ ಹೇಳುವಷ್ಟು ಸರಳವೇನೂ ಅಲ್ಲ. ಈ ಮಾತನ್ನು ನಾನು ಯಾಕೆ ಹೇಳಿದ್ದೆಂದರೆ ಸುಬ್ಬಣ್ಣನವರು ಚಾರಿತ್ರಿಕ ದ್ವಂದ್ವಮಾನದ ಎಳೆಯನ್ನೇ ಹಿಡಿದು ತಮ್ಮ ಅನುಸಂಧಾನದ ಒಳನೋಟವನ್ನು ನೀಡುತ್ತಲೇ ತನ್ನ ಸಿದ್ಧಾಂತವನ್ನು ಕೂಡ ಕೃತಿಯ ಮೇಲೆ ಹೇರಿಬಿಡುವ ಧಾವಂತಕ್ಕೂ ಹೋಗುತ್ತಾರೆ ಎಂದು ತೋರಿಸಲು.

ಪಂಪನ 'ಸಮಸ್ತ ಭಾರತ'ದಲ್ಲಿ ಬರುವ ಬನವಾಸಿಯ ವರ್ಣನೆ ಬಹು ಪ್ರಸಿದ್ಧವಾದುದು. ಆ ಪ್ರಸಿದ್ಧಿಗೆ ಎರಡು ಕಾರಣಗಳುಂಟು. ಒಂದು, ಅಲ್ಲಿಯ ಭಾಷಾ ಪ್ರಯೋಗ ಮತ್ತು ಭಾವದೀಪ್ತಿ. ಎರಡು, ಕಳೆದುಹೋದ ವೈಭವದ ಹಳವಂಡ. ಸುಬ್ಬಣ್ಣನವರಿಗೆ ಇವು ಎರಡೂ ಅಲ್ಲ. ಬನವಾಸಿ ಎಂಬುದು ಒಂದು ಕನಸು ಮಾತ್ರವೇ? ಅಥವಾ ಎಲ್ಲೋ ಕಿರುಮೂಲೆಯಲ್ಲಿ ಅತ್ಯಪೂರ್ವ ನನಸಾಗಿ ಮನುಷ್ಯರ ಅಸೂಯೆಯನ್ನು ಕೆರಳಿಸಲಿಕ್ಕೆ ಮಾತ್ರವೇ ಕಾಣಿಸುವ ಆಭಾಸವೇ? ಎಂದು ಕೇಳುತ್ತಾರೆ. ಇಲ್ಲಿಯ ಚಿಂತನೆ ಸಂಕೀರ್ಣವಾದುದು. ಅದಕ್ಕೇ ಹೊಚ್ಚುಹೊಸದೂ. ಆದರೂ ಕೂಡ ಸುಬ್ಬಣ್ಣ ಹೆಚ್ಚು ಆತುರರಾಗಿದ್ದಾರೆಂದೇ ಹೇಳಬೇಕಾಗಿದೆ.

ಬನವಾಸಿಯ ವರ್ಣನೆ ಒಂದು ಸಮೃದ್ಧ ಗ್ರಾಮಜೀವನದ ಕನಸು. ಸುಬ್ಬಣ್ಣ ಇಂದು ಅಲ್ಲಲ್ಲಿ ಪ್ರಸ್ತಾಪಿಸುತ್ತಿರುವ, ಪ್ರತಿಪಾದಿಸುತ್ತಿರುವ ದೇಶೀಯತೆಯ ಕನಸು. ಈ ಕನಸನ್ನೇ ಪಂಪನ ಮೇಲೆ ಹೇರುತ್ತಿದ್ದಾರೆಯೆ? ಅಥವಾ ಅದನ್ನು ವಿಸ್ತರಿಸಿಕೊಳ್ಳುತ್ತಿದ್ದಾರೆಯೇ? ಯಾಕೆಂದರೆ 'ಬೆಟ್ಟ ಮತ್ತು ಸಿರಿವಂತ ಕಾಡು; ಮರ ಬಳ್ಳಿ ಹೂವು; ಹಕ್ಕಿ ಮತ್ತು ಕೀಟ; ಒಂದರೊಡನೊಂದು ಕೂಡಿಯಾಡುವ ನಲ್ಲರ ಚಂದ ಮುಖ ನಗು ಮುಖಗಳು ಜೀವನ ಸಮಸ್ತದ, ಜೀವ ಸಮತ್ವದ ಒಂದು ಪುಟ್ಟ ಬ್ರಹ್ಮಾಂಡ' ಎನ್ನುವುದು ಅದರ ವ್ಯಾಖ್ಯೆ. ಇದು ಪಂಪನ ಬನವಾಸಿಯ ವರ್ಣನೆಯಾಗಿರುವಂತೆ ಪಂಪನ ಆದರ್ಶ ಗ್ರಾಮ ಎನ್ನುವುದನ್ನೂ ಸುಬ್ಬಣ್ಣ ಹೇಳುತ್ತಾರೆ. ಬನವಾಸಿ ಪಂಪನ ಒಂದು 'ಹಳವಂಡ'ವಾಗದೇ ಕನಸನ್ನಾಗಿ ಮಾಡುವುದು ಸುಬ್ಬಣ್ಣನವರ ಒಳನೋಟ. ಇದೇ ಆದರ್ಶವಾದರೆ ಮತ್ತು ಸುಬ್ಬಣ್ಣನವರ 'ದೇಶೀಯತೆ'ಯ ವೈಚಾರಿಕತೆಯಾದರೆ ಇದನ್ನು ಸ್ವೀಕರಿಸುವ ವರ್ಗ ಮತ್ತು ವರ್ಣದ ಮನೋಭಾವ ಯಾವುದೆಂಬುದನ್ನು ಗ್ರಹಿಸಬೇಕು. ಪಂಪನ ಈ ಆದರ್ಶ ಗ್ರಾಮ ಜೀವನದಲ್ಲೂ ವರ್ಣದ ಕಲ್ಪನೆ ಇದ್ದೇ ಇದೆ. ಪಂಪನ ನಾಯಕ ಅರಿಕೇಸರಿಯೂ ಇದಕ್ಕೆ ಹೊರತಲ್ಲ. ಇದು ಪಂಪನ ಕನಸಿನ ಹಳ್ಳಿಯಾಗಿರುವಾಗಲೂ ಅದು ಅರ್ಜುನನಿಗೂ ಹೌದಾಗಿದೆ. ಪಂಪ ಜಾತಿಯನ್ನು ಕರ್ಣನ ಸಂದರ್ಭದಲ್ಲೆಲ್ಲ ಖಂಡಿಸುತ್ತಾನಾದರೂ ಅರ್ಜುನ ವರ್ಣಾನುಯಾಯಿಯೇ ಆಗಿದ್ದಾನೆ. ಅವನ ಮುಖಾಂತರದ ಕನಸು ಕೂಡ ಅಂದಿನ ಶ್ರೇಣೀಕೃತ ಸಮಾಜ ವ್ಯವಸ್ಥೆಯನ್ನು ಮೀರಿದ್ದು ಎನ್ನಲು ಆಧಾರ ಸಾಲದು ಎನ್ನಿಸುತ್ತದೆ. ಇದಕ್ಕೆ ಇನ್ನೂ ಒಂದು ಕಾರಣವೆಂದರೆ ಸುಬ್ಬಣ್ಣನವರ ದೇಶೀಯತೆಯ ವೈಚಾರಿಕ ತಳಹದಿಕೂಡ ಅಸ್ಪಷ್ಟವಾಗೇ ಇದೆ. ಆದರೆ 'ಅಂತಿಮವಾಗಿ ಸೂಸೂವ ನಲ್ಮೆ' ಸ್ಪಷ್ಟ ಸೃಜನವಂತಿಕೆಯಲ್ಲಿ ಕ್ರಿಯಾಶೀಲವಾಗಿರುವ ಒಂದು ಜೀವಜಾಲ. ಧರ್ಮವ್ಯವಸ್ಥೆ, ರಾಜ್ಯವ್ಯವಸ್ಥೆಗಳ ಸೂಚನೆಯೂ ಇಲ್ಲ. ಅವೆರಡನ್ನು ಪ್ರಾಯಶಃ ಕೊಡವಿಕೊಂಡ ಅವಸ್ಥೆ ಎನ್ನುವಂಥ ಕನಸು ಮತ್ತು ವೈಚಾರಿಕತೆ ಸಮಾಜವಾದಿ ರೋಮೆಂಟಿಸಿಸಂಗೆ ಮಾತ್ರ ಸಾಧ್ಯವಾದುದಲ್ಲವೇ? ಆದರೆ ಅದು ಅಷ್ಟಕ್ಕೇ ನಿಲ್ಲದೆ 'ಮನುಷ್ಯರ ಅಸೂಯೆಯನ್ನು ಕೆರಳಿಸುವುದಕ್ಕೆ ಮಾತ್ರವೇ ಕಾಣಿಸಿಕೊಳ್ಳುವ ಅಭಾಸವೇ?' ಎನ್ನುವ ಹತಾಶೆ, ಆಶಾಭಗ್ನತೆಯಲ್ಲಿ ವಿಷಾದನೀಯತೆಯಿದೆ.

'ಪಂಪನಿಗೆ ತನ್ನ ಕಾಲವನ್ನು ಆ ಎತ್ತರಕ್ಕೆ ಕೊಂಡೊಯ್ದಿದ್ದ ಧರ್ಮ ಮತ್ತು ರಾಜ್ಯವ್ಯವಸ್ಥೆಯಲ್ಲೂ ಅಪಾರ ನಂಬಿಕೆಯಿತ್ತು. ಅಪಾರವಾದ ಭಯ, ಸಂದೇಹವೂ ಇದ್ದವು. ಅವು ತರುವ ಯಾತನೆಯನ್ನು ಅವ ಬಲ್ಲವನಾಗಿದ್ದ. ವ್ಯವಸ್ಥೆಗಳೇ ಇಲ್ಲದ, ಸಂಘಟಿತ ಧರ್ಮ, ಸಂಘಟಿತ ರಾಜ್ಯಗಳೇ ಇಲ್ಲದ ಮನುಷ್ಯರು ತಂತಾನೇ ಅರಳಿ, ಅರಳಿ, ಅರಳಿಕೊಳ್ಳುತ್ತಲೇ ಅಂಟಿಕೊಳ್ಳುತ್ತಾ, ನಂಟಿನಲ್ಲಿ ಬಾಳಿಕೊಂಡಿರಬಹುದಾದ ಒಂದು ಸ್ಥಿತಿ ಹಿಂದ ಇದ್ದಿರಬಹುದೇ? ಈಗ ಉಂಟೇ, ಮುಂದೆ ಬಂದೀತೆ' ಎನ್ನುವ ಮಾತಿನಲ್ಲಿ ಕೂಡ ಈ ಸಮಾಜವಾದಿ ಒಳನೋಟದ ಕಾಣ್ಕೆಯನ್ನು ಕಾಣಬಹುದಾಗಿದೆ.

ಈ ಸಂಗತಿಗಳು ಕೃತಿಯ ಹೊರಗೆ ನಿಂತು ಕೈಯ್ಯಾಡಿಸುವ ಪ್ರೇರಣೆಯಲ್ಲ. ಅವರು ಕೃತಿಯನ್ನು ಚರಿತ್ರೆಯ ಮಧ್ಯದಲ್ಲಿಟ್ಟು ಅದರ ಒಳಪ್ರವೇಶಕ್ಕೆ ದಾರಿ ಮಾಡಿಕೊಡುವ ಮಟ್ಟಿಗೆ

ಅದನ್ನು ಅನುಸರಿಸುವುದಾದರೂ ಆ ಚರಿತ್ರೆಯಲ್ಲಿ ಕೃತಿಯೊಳಗಿಂದಲೇ ಸಾಬೀತು ಆಗಬೇಕೆಂಬ ನಿಷ್ಠೆಯುಳ್ಳವರು. ಆದ್ದರಿಂದಲೇ ಸುಬ್ಬಣ್ಣನವರ ಕಾವ್ಯಚಿಂತನೆ ಸಾಮಾಜಿಕ ಚಿಂತನೆಯಾಗಿ, ಸಾಮಾಜಿಕ ಚಿಂತನೆ ಕಾವ್ಯಚಿಂತನೆಯಾಗಿ ಆಯಾಮ ಪಡೆಯುತ್ತದೆ.

'ಆದಿಪುರಾಣ'ದಲ್ಲಿ ಲೌಕಿಕ ಮತ್ತು ಧರ್ಮಗಳ ಘರ್ಷಣೆಯನ್ನು ಸಾಧಿಸುತ್ತಲೇ ಹೋಗಿದ್ದಾನೆ ಎಂದು ಮೊದಲು ಹೇಳಿದೆ. 'ಆದಿಪುರಾಣ'ದಲ್ಲಿ ಬರುವ ಅತಿಬಳನ ಮಗ ಮಹಾಬಳನಿಗೆ ದುರ್ಮಂತ್ರಿಗಳು ಬೋಧಿಸಿದ ನಾಸ್ತಿಕವಾದ ತತ್ವಜ್ಞಾನದ ಕುರಿತು ದಾಖಲಿಸುತ್ತಾರೆ. 'ಒಡಲೊಳೆ ಜೀವಮಿರ್ದುಗಡ ಸತ್ತನೆ ಮತ್ತು ಪುಟ್ಟುಂಗಡ. ಬಸಂತದೊಳ್ ಕಳಿಕೆಗರ್ಚಿದ ಕೋಗಿಲೆಯಂತೆ ನಲಿವುದು'. ಅಂಥ ಶಕ್ತಿಯುತವಾದ ಮಾತುಗಳು ಮುಂದಿನ ದೀರ್ಘವಾದ ಧರ್ಮ ಬೋಧನೆಯ ನಂತರವೂ ನಮಗೆ ಮಾತ್ರ ಹಿಂದೆ ಹೇಳಿದ್ದರ ಝೇಂಕೃತಿ ಅನುಕರಣಿಸುತ್ತಲೇ ಇರುತ್ತದೆ" ಎನ್ನುತ್ತಾರೆ. ಅದರಂತೆ ಭರತ ಬಾಹುಬಲಿಯ ಯುದ್ಧದ ಅರಿಕೆಯು ಇಲ್ಲಿ ಉದಾಹರಣೆಯಾಗ ಬಹುದು. ಈ ಭಟಖಡ್ಗಮಂಡಲೋತ್ಪಲವನ ವಿಭ್ರಮರಿಯಪ್ಪಾ ಮನೋಹರಿ ರಾಜಲಕ್ಷ್ಮಿ ಅನ್ನುತ್ತಾನೆ. ನಿನ್ನ ವಕ್ಷದೊಳೆ ನೆಲಸುಗೆ ರಾಜ್ಯ ಲಕ್ಷ್ಮಿ ಎಂದ. ಅಷ್ಟೇ ಅಲ್ಲ 'ನಿಶ್ಚಲಂ' ಅಂದ ಅದೇ ವೈರಾಗ್ಯ ಪಡೆದ ಅವನಿಗೆ ಗೊತ್ತಿಲ್ಲವೆ. ಅದು ನಿಶ್ಚಲವಲ್ಲ ಅಂತ. ನೀನೊಲಿದ ಲತಾಂಗಿಗಂ (ಅಥವಾ) ಧರೆಗಮ್ (ನಾನು) ಅಟಸಿದರೆ (ಇಚ್ಛಿಸಿದರೆ)ನನ್ನ ನೆಗಳ್ತೆ (ಕೀರ್ತಿ) ಮಾಸದೆ? ಎಂದು ತಾನು ಆರ್ದ್ರವಾಗಿ ಅಣ್ಣನನ್ನು ಕರಗಿಸಿಬಿಟ್ಟಿರುವ ಸನ್ನಿವೇಶ. ಅಥವಾ ಮಂಡಲೋತ್ಪಲವನ ವಿಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿಯನ್ನು ಶಬ್ದಮಾಡಿ ತಾನೇ ಆಸೆಗೊಂಡು ಚಪ್ಪರಿಸುತ್ತಿದ್ದನೋ? 'ನೆಗಳ್ತೆ ಮಾಸೀತು' ಎನ್ನುತ್ತಾನಲ್ಲ. ಬಾಹುಬಲಿಗೆ ಉಂಟಾದದ್ದು ವೈರಾಗ್ಯವೋ ಅಥವಾ ನೆಗಳ್ತೆಯ ಆಸೆಯೊ?' ಎಂದು ಕೇಳುತ್ತಾರೆ.

ಲೋಕ ಶಕುಂತಲದಲ್ಲಿ ದುಷ್ಯಂತನ ಜೀವನದ ಕುರಿತು ಹೀಗೆ ಹೇಳುತ್ತಾರೆ. 'ಒಬ್ಬರಾಜ ಸೂಕ್ಷ್ಮ ಸಂವೇದನಿಯಾಗಿದ್ದ ಪಕ್ಷದಲ್ಲಿ ಒಂದಲ್ಲ ಒಂದು ಸಂದರ್ಭದಲ್ಲಿ ತನ್ನ ವಿರುದ್ಧ ತಾನೇ ಪ್ರತಿಭಟಿಸಬೇಕಾಗುತ್ತದೆ. ಅವನ ಮನುಷ್ಯತ್ವ ಅವನ ರಾಜತ್ವವನ್ನು ಪ್ರತಿಭಟಿಸಿ ಧಿಕ್ಕರಿಸಿ ನಿಲ್ಲುತ್ತದೆ. ಬೇಟೆಗೆ ಹೊರಟ ರಾಜ ದುಷ್ಯಂತ ಅನಿರೀಕ್ಷಿತವಾಗಿ ತನ್ನ ರೂಢಜೀವನಕ್ಕೆ ಅಪರೂಪವೆನ್ನಿಸುವ ಆಶ್ರಮ ಪರಿಸರದಲ್ಲಿ ಮಾಯಕವೊ ಎನ್ನುವ ಹಾಗೆ ಹೊಕ್ಕು ನಿಂತಾಗ, ಪ್ರತ್ಯಕ್ಷವಾಗಿ ಶಕುಂತಲೆಯಂಥ ಮುಗ್ಧಬಾಲಕಿಯನ್ನು ಕಂಡು ತಟ್ಟನೆ ಮನುಷ್ಯತ್ವಕ್ಕೆ ಮಗುಚಿಕೊಂಡುಬಿಡುತ್ತಾನೆ.' ಎಂದು ಹೇಳಿ, 'ಅನಂತ ಮೂರ್ತಿಯವರ 'ಸಂಸ್ಕಾರ' ಕಾದಂಬರಿಯ ಪ್ರಾಣೇಶಾಚಾರ್ಯ 'ಚಂದ್ರಿಯ' ಸನ್ನಿಧಿಯ ಆಕಸ್ಮಿಕದಲ್ಲಿ ತಟ್ಟನೆ ಹಸುಳೆ ಹಸುಳೆ ಮನುಷ್ಯನಾಗಿ ಬಿಡುವುದರ ನೆನಪನ್ನು ಹತ್ತಿಕ್ಕಿಕೊಳ್ಳುತ್ತಾರೆ' ಎನ್ನುತ್ತಾರೆ. 'ಆದಿಪುರಾಣ'ದ ಅತಿಬಳ ತನ್ನ ಹಣ್ಣುಗೂದಲನ್ನು ನೋಡಿ ವೈರಾಗ್ಯ ಹೊಂದುವುದು, ಭರತನಿಂದ ಗೆದ್ದ ಬಾಹುಬಲಿ ಮನೋಹರಿಯಾದ ರಾಜ್ಯಲಕ್ಷ್ಮಿಯನ್ನು ತೊರೆಯುವುದು ರಾಜತ್ವವನ್ನು ತೆಗೆದುಹಾಕಿ ಮನುಷ್ಯತ್ವಕ್ಕೆ ಮುಗಿಚಿಕೊಂಡದ್ದಾಗಿ ಅಥವಾ ಸೂಕ್ಷ್ಮ ಸಂವೇದಿಯಾದ ರಾಜ ತನಗೆ ತಾನೆ ಪ್ರತಿಭಟಿಸಿದ್ದಾಗಿ

ಅನ್ನಿಸಿದ ಸುಬ್ಬಣ್ಣನವರಿಗೆ ಶಕುಂತಲೆಯ ಮುಂದೆ ತಟ್ಟನೆ ಮಗುಚಿಕೊಳ್ಳುವ ದುಷ್ಯಂತ, ಚಂದ್ರಿಯ ಸನ್ನಿಧಿಯಲ್ಲಿ ಹಸುಳೆಯಂತಾದ ಪ್ರಾಣೇಶಾಚಾರ್ಯನ ನೆನಪಾಗುವುದು, ಅದು ಹತ್ತಿಕ್ಕಿಕೊಳ್ಳದ ನೆನಪಾಗುವುದು ಅವರ ಮೇಲಿನ ಕನ್ನಡ ನವ್ಯದ ಸಂಕೀರ್ಣ ಪ್ರಭಾವವನ್ನು ತೋರುತ್ತದೆ.

ತನ್ನ ರಾಜ್ಯಲಕ್ಷ್ಮಿಯನ್ನು ಭರತನಿಗೆ ದಾನಮಾಡುವ ಬಾಹುಬಲಿಯ ಕುರಿತು ಹೇಳುವ ಮಾತು 'ಬಾಹುಬಲಿಗೆ ಉಂಟಾದುದು ನೆಗಳ್ತೆಯ ಆಶೆಯೋ ಅಥವಾ ವೈರಾಗ್ಯವೋ ಎಂಬುದು ಸಹ ಜೀವನ ಹದಗೊಂಡು ವೈರಾಗ್ಯ ಮೈತಾಳಲು 'ನೆಗಳ್ತೆ'ಯನ್ನು' ತೊರೆಯುವುದು ಒಂದು ಸಂಸ್ಕಾರ ಎನ್ನುವುದನ್ನು ಸುಬ್ಬಣ್ಣ ಗ್ರಹಿಸುವುದಿಲ್ಲ. ಬದಲಾಗಿ ಅಲ್ಲಿ ಮೂಲ ಪ್ರವೃತ್ತಿಯ ಕಡೆಗೇ ಹೆಚ್ಚಿನ ಒಲವು.

ಲೋಕಶಾಕುಂತಲ

ಲೋಕಶಾಕುಂತಲ ಸುಬ್ಬಣ್ಣನವರ (ಕಾವ್ಯಮತ್ತು ಸಾಮಾಜಿಕ) ಚಿಂತನೆಗೆ ಮೂಡಿದ ಕೋಡು. ಲೋಕ ಶಾಕುಂತಲ ಕಾಳಿದಾಸನ ಅಭಿಜ್ಞಾನ ಶಾಕುಂತಲವೇ. ಅದೇ ಕಥೆ; ಘಟನೆಗಳೂ ಹಾಗೇ. ಆದರೆ ಇದು ಅಭಿಜ್ಞಾನ ಶಾಕುಂತಲವಲ್ಲ. ಬದಲಾಗಿ ಇದು 'ಲೋಕಶಾಕುಂತಲ' ಇದು ಅಂದಿನ ಮತ್ತು ಇಂದಿನ ಶಾಕುಂತಲ ಕೂಡ. ಕಾಳಿದಾಸನಿಗೆ ತನ್ನ ಕಾಲದ ಕೌಟುಂಬಿಕ ಹಾಗೂ ವ್ಯವಸ್ಥೆಯ ಉತ್ತಮಿಕೆಯನ್ನು ಕಟ್ಟಿಕೊಡಬೇಕಾಗಿದ್ದರೆ ಸುಬ್ಬಣ್ಣನವರಿಗೆ ಆ ಕಾಲದ ಸಾಮಾನ್ಯರ ಬದುಕಿಗೆ ಸಾಣೆಗೆ ಹಿಡಿಯಬೇಕಾಗಿದೆ. ಕಾಳಿದಾಸನಿಗೆ ಗುಪ್ತಕಾಲದ ಸಮೃದ್ಧಿಯನ್ನು ಹಿಡಿದಿಡಬೇಕೆಂದಿದ್ದರೆ ಸುಬ್ಬಣ್ಣನವರಿಗೆ ಆ ಸಮೃದ್ಧಿಯ ಅಡಿಯಲ್ಲಿ ಮಡುಗೊಳ್ಳುವ ಶೋಷಣೆಯನ್ನು ಹಿಡಿಯಬೇಕಾಗಿದೆ. ಕಾಳಿದಾಸನಿಗೆ ವೈದಿಕ ಸಂಸ್ಕೃತಿಯ ಚೆಲುವಿನ ಕಡೆಗೆ ಕಾಳಜಿಯಾದರೆ ಸುಬ್ಬಣ್ಣನವರಿಗೆ ಅದರ ಬಿರುಕಗಳ ಕಡೆಗೆ ಗಮನ. ಒಟ್ಟಾರೆ ಕಾಳಿದಾಸ ಯಾವುದನ್ನು ಮರೆಗೊಳಿಸುತ್ತಾನೆಯೊ ಸುಬ್ಬಣ್ಣ ಅದನ್ನು ತೆರೆಸಲೆಳೆಸುತ್ತಾರೆ. ಕಾಳಿದಾಸನಿಗೆ ಕಲಾತ್ಮಕತೆ ಮುಖ್ಯವಾದರೆ ಸುಬ್ಬಣ್ಣನವರಿಗೆ ಚರಿತ್ರೆ ಮುಖ್ಯ. ಎಂತಲೇ 'ಅಭಿಜ್ಞಾನ ಶಾಕುಂತಲ'ದಿಂದ 'ಲೋಕ ಶಾಕುಂತಲ' ಬೇರೆಯಾಗಿದೆ.

ಇಂಥ ಚಾರಿತ್ರಿಕ ಅಂಶ ಸುಬ್ಬಣ್ಣನವರಿಗೆ 'ಅಭಿಜ್ಞಾನ ಶಾಕುಂತಲ'ದಲ್ಲಿ ಅಲ್ಲಲ್ಲಿ ಕಾಣಸುತ್ತದೆಯೆಂದು ತೋರುತ್ತದೆ.

'ಆಹಾಹಾ! ನೋಡೆ ರಹಸ್ಯದೊಳ್ ಬಳಕೆ ವೆತ್ತೀಚಿತ್ರದಭ್ಯಾಸದಿಂ ಮಹನಾಕ್ರಾಂತವೆನಿಪ್ಪ ಮಂದಿರದವೋಲ್ ಕಾಣ್ಬಂ ಜನಾಕೀಯರ್ಣಮಂ' ಹಾಗೆಯೇ ಐದು ಮತ್ತು ಆರನೇ ಅಂಕಗಳ ಮಧ್ಯದಲ್ಲಿ ಪ್ರವೇಶಕ'ದಲ್ಲಿ ದೊರೆಯುವ ಮೀನುಗಾರನಿಗೆ ಉಂಗುರ ಸಿಕ್ಕುವ ವೃತ್ತಾಂತ, ವಿದೂಷಕನ ಅನೇಕ ಪ್ರಸಂಗ ಇತ್ಯಾದಿಗಳೇ ಆಗಿವೆ.

ಶಕುಂತಲೆಗೆ ಗುರುತಿಗಾಗಿ ಕೊಟ್ಟ ಉಂಗುರ ಶಾಪಕ್ಕೆ ಗುರಿಯಾದುದು ಒಂದು ತಾಂತ್ರಿಕ ಪ್ರಯೋಜನ ಮಾತ್ರ ಎಂದು ಸುಬ್ಬಣ್ಣ ಹೇಳುತ್ತಾರೆ. ಅದಕ್ಕಿಂತ ದುಷ್ಯಂತ ಆಶ್ರಮದ ರಕ್ಷಣೆಗಾಗಿ ತಾನು ನಿಂತು ರಾಜಮಾತೆಯ ಅಪ್ಪಣೆಯನ್ನು ಪರ್ಯಾಯವಾಗಿ ನಿರ್ವಹಿಸಲು ವಿದೂಷಕನನ್ನು ಕಳಿಸುವಾಗ ಹೇಳುವ

ಹರಣಂಗಳೊಡನೆ ಕಾಮನ
ಪರಿಯರಿಯದೆ ಬಳೆದಳಲ್ಲಿ ನಾವೆಲ್ಲಿ ಕರಂ
ಪರಿಹಾಸಕುಸಿರ್ದುದಂ ನೀಂ

ಪರಮಾರ್ಥಮಿದೆಂದು ಬಗೆಯ ಬೇಡ ಮಿತ್ರಾ' (ಕನ್ನಡ ಅನುವಾದ ಬಸಪ್ಪಶಾಸ್ತ್ರಿ) ಇಂಥ ಕೆಲವು ಕಡೆ ಕಾಳಿದಾಸನ ಸಾಮಾಜಿಕ ಇಂಗಿತ ಎಂದು ಅವರು ಗ್ರಹಿಸುತ್ತಾರೆ. 'ಕಾಳಿದಾಸ ಚಿತ್ರಿಸಿರುವ ಹಸ್ತಿನಾವತಿಯಂಥ ಪ್ರಬಲ ರಾಜ್ಯ ವ್ಯವಸ್ಥೆ ಸಾಧಿತವಾಗುವುದು ಪ್ರಾಯಃ ಎರಡು ದಿಕ್ಕುಗಳಿಂದ ಒಂದು-ಆಳುವವರ ಶಕ್ತಿ, ಸಾಮಾರ್ಥ್ಯ, ಜನಪ್ರೀತಿ, ವಿಚಕ್ಷಣೆ ಮುಂತಾದವುಗಳಿಂದ; ಇನ್ನೊಂದು ಇನ್ನೂ ಮುಖ್ಯವಾದ್ದುದು, ಮೊದಲಿದ್ದ ಚಿಕ್ಕಪುಟ್ಟ ಬುಡಕಟ್ಟು ಆದಿ ಜನಾಂಗಗಳ ರಾಜ್ಯವ್ಯವಸ್ಥೆ ವಾಣಿಜ್ಯ ಸಂಪರ್ಕಗಳಿಗೂ ಆ ಮೂಲಕ ಒಟ್ಟಿನ ಪ್ರಗತಿಗೂ ಆತಂಕವೆನ್ನಿಸಿ ಅದರ ಸ್ವಯಂನಾಶ ಅನಿವಾರ್ಯವಾದುದರಿಂದ ಅಥವಾ ಇತಿಹಾಸದ ಒಂದು ವಿಶಿಷ್ಟ ಹಂತದಲ್ಲಿ ಒಟ್ಟು ಜನಪದ ಆಕಾಂಕ್ಷೆಯ ಕೇಂದ್ರೀಕರಣ, ನಗರೀಕರಣ, ಹೆಚ್ಚು ಹೆಚ್ಚು ಸಮೃದ್ಧ ಜೀವನ ಇತ್ಯಾದಿಗಳ ಕಡೆ ಧಾವಿಸತೊಡಗಿದಾಗ ಇಂಥ ವ್ಯವಸ್ಥೆ ರೂಪುಗೊಳ್ಳುತ್ತದೆ ಎನ್ನಬಹುದು. ಈ ಬಗೆಯ ಬೃಹತ್ ರಾಜ್ಯ ಸಂಘಟನೆಗೆ ಅಸ್ತಿವಾರ ಸೋಪಾನಗಳಂತಿರುವ ಅಂಶಗಳೆಂದರೆ ವಿಶಿಷ್ಟ ವಿವಾಹಪದ್ಧತಿ; ಅದರ ಪರಿಣಾಮವಾದ ವಿಶಿಷ್ಟ ಕುಟುಂಬ ವ್ಯವಸ್ಥೆ. ವೈಯಕ್ತಿಕ ಹಕ್ಕುಗಳ ಕಲ್ಪನೆ, ವಂಶ ಪಾರಂಪರ್ಯ ಅನುಭೋಗದ ಹಕ್ಕಿನಲ್ಲಿ ನಂಬಿಗೆ.... ವ್ಯವಸ್ಥೆಯು ಹಲವು ಸತ್ಫಲಗಳನ್ನ ಕೊಡುವ ಹಾಗೆಯೇ ಅನಿವಾರ್ಯವಾಗಿ ಹಲವು ದುಷ್ಫಲಗಳನ್ನೂ ಹುಟ್ಟಿಸಿಕೊಡುತ್ತದೆ. ದುರಾಸೆ, ಸ್ಪರ್ಧೆ, ದ್ವೇಷ, ಅಸೂಯೆ, ಹಿಂಸೆ, ಶೋಷಣೆ, ದಮನ ಇತ್ಯಾದಿ ಅಮಾನವೀಯ ಅಂಶಗಳು ಬೋಧಿತವಾಗುತ್ತದೆ ಒಟ್ಟಾರೆ ಸಾಮ್ರಾಜ್ಯ ನಾಶದ ಬೀಜ ಅಲ್ಲೇ ಹುಟ್ಟಿಕೊಳ್ಳುತ್ತದೆ. ಈ ಹಿನ್ನಲೆ ಅವರ ಚಾರಿತ್ರಿಕ ನೋಟವಾಗಿದೆ.

ಈ 'ಹಿನ್ನೆಲೆಯಲ್ಲಿ' ಲೋಕಶಾಕುಂತಲ'ದ ತಾತ್ವಿಕ ಬೆಳವಣಿಗೆಯನ್ನು ಮೂರು ಹಂತದಲ್ಲಿ ನಡೆಸುತ್ತಾರೆ. ಒಂದು ಕಣ್ವಾಶ್ರಮ. ಅವರ ಪ್ರಕಾರ ಇದು 'ಇಲ್ಲಿನದು ಹಸ್ತಿನಾವತಿಗಿಂತ ಭಿನ್ನವಾದ, ಹೋಲಿಕೆಯಲ್ಲಿ ತುಂಬ ಸರಳವಾದ ಧಾರ್ಮಿಕ ಜೀವನಪದ್ಧತಿ. ಮಿತವಾದ ಆಸೆ, ಅಷ್ಟಾಗಿ ಸ್ಪರ್ಧೆಯಿಲ್ಲದ ಆದಿಮ ಆರ್ಯರ ಪಶುಪಾಲಕ ಸಂಸ್ಕೃತಿಯ ಮುಂದಿನ ಹಂತ ಇದು ಎನ್ನಬಹುದೇನೊ. ಆದರೆ ಈ ಬದುಕಾದರೂ ನಿಂತ ನೀರಿನ ಹಾಗಾಗಿ ಕ್ರಮೇಣ ನಾಗರಕದ ಕಡೆ ಆಶ್ಚರ್ಯ, ಆಕರ್ಷಣೆ, ಆಶೆಗಳನ್ನು ಹುಟ್ಟಿಸುವ ಸೂಚನೆ ಕಾಣುತ್ತದೆ.'

ಎರಡನೆಯದು ನಗರ. ಸಾಂಸ್ಕೃತಿಕ ಸಾಮ್ರಾಜ್ಯದ ವಿಸ್ತರೀಕರಣದ ಧಾವಂತ ಮತ್ತು ಮೂರನೆಯದು 'ಆರ್ಯ ಸಾಂಸ್ಕೃತಿಗಿಂತ ಅತ್ಯಂತ ಭಿನ್ನವಾದ ಜೀವನಕ್ರಮವನ್ನು ರೂಢಿಸಿಕೊಂಡ ಶ್ರಮಣ ಸಂಸ್ಕೃತಿ. ಪ್ರಾಯಃ ಆರ್ಯಸಂಸ್ಕೃತಿಯ ಜಾಯಮಾನಕ್ಕೆ ಒಗ್ಗದಂಥ, ಸುಲಭವಾಗಿ ಅರ್ಥವಾಗದಂಥ, ಆಶ್ಚರ್ಯ ಹುಟ್ಟಿಸುವಂಥ ವಿಲಕ್ಷಣ ಜೀವನಪದ್ಧತಿ.' ಇದೂ ಕೂಡ ಮತ್ತೊಂದು ಸಾಮ್ರಾಜ್ಯದ ಕುಡಿಯನ್ನೇ ಹೊರೆಯುವಂತಹದು.

ಈ ಎಲ್ಲ ಹಿನ್ನೆಲೆಯಲ್ಲಿ 'ಲೋಕಶಾಕುಂತಲ'ದ ರಚನೆ ಒಂದು ಪ್ರಯೋಗವಾಗಿದೆ. ಇಲ್ಲಿ ಕಲಾತ್ಮಕತೆ ಮತ್ತು ಸಾಮಾಜಿಕತೆಯ ಚಿಂತನೆ ಒಂದನ್ನೊಂದು ಮೇಲಾಟವಾಡುತ್ತ ಅಪ್ಪಿಕೊಳ್ಳುತ್ತ, ದೂರಸರಿಯುತ್ತಾ ಸಾಗುತ್ತದೆ. ಇಂಥ ಹಿನ್ನೆಲೆಯಲ್ಲಿ ಕಲಾಕೃತಿಯ ರಚನೆ ಒಂದು ಸವಾಲು. ಅದರಲ್ಲಿ ಸುಬ್ಬಣ್ಣ ಎಷ್ಟು ಯಶಸ್ವಿಯಾಗಿದ್ದಾರೆ ಎನ್ನುವ ಪರಿಶೋಧನೆಯ ಉದ್ದೇಶ ಇಲ್ಲಿಯದಲ್ಲ.

ಅವರು ಕಾವ್ಯಕೃತಿಯನ್ನು ಚರಿತ್ರೆಯ ಮಧ್ಯದಲ್ಲಿಟ್ಟು ಅದರ ಒಳ ಪ್ರವೇಶಕ್ಕೆ ಚಾರಿತ್ರಿಕ ದ್ವಂದ್ವಮಾನದ ದಾರಿಯನ್ನು ಕಂಡುಕೊಳ್ಳುತ್ತಾರೆ. ಕೃತಿಯ ಸಾಕ್ಷಿಯಲ್ಲಿ ರೂಪನಿಷ್ಠರಾಗುತ್ತಾರೆ. ಆದರೆ ಇದಕ್ಕಿಂತ ಹೆಚ್ಚಿನ ಕುತೂಹಲವನ್ನು ಶ್ರೇಷ್ಠತೆಯ ವ್ಯಸನದಲ್ಲೂ ತೋರುತ್ತಾರೆ. ಅಂದರೆ ರೂಪನಿಷ್ಠರಿಂದ (ನವ್ಯರು) ಹೆಚ್ಚಾಗಿ ಪಡೆದುಕೊಂಡ ಕ್ರಿಟಿಕಲ್ ರಿಯಾಲಿಸಂ ತಾತ್ವಿಕತೆಗೆ ಗಂಟುಬಿದ್ದುದಾಗಿದೆ. ಆದರೆ ಸುಬ್ಬಣ್ಣನವರಲ್ಲಿ ಇನ್ನೂ ಹೆಚ್ಚು ಕುತೂಹಲಕಾರಿಯವಾಗಿದೆ. ಇದಕ್ಕೆ ಅವರ 'ಶ್ರೇಷ್ಠತೆಯ ವ್ಯಸನ' ಎಂಬ ಬರಹವನ್ನು ನೋಡಬಹುದು.

ಶ್ರೇಷ್ಠತೆಯ ವ್ಯಸನ ಬರೆದದ್ದು ಬೆಂಗಳೂರಿನಲ್ಲಿ ನಡೆದ ಜಾಗ್ರತ ಸಾಹಿತ್ಯ ಸಮ್ಮೇಳನದ ಹೊತ್ತಿಗೆ. ನವ್ಯಕ್ಕೆ ಪ್ರತಿರೋಧವಾಗಿ ಬಂದ ದಲಿತ ಬಂಡಾಯದವರು ಸಾಹಿತ್ಯದ ನವ್ಯದ ಶ್ರೇಷ್ಠತೆಯನ್ನು ಕಳೆದುಬಿಟ್ಟಿದ್ದಾರೆ. ಈಗ ಮತ್ತೆ ಅದನ್ನು ಎತ್ತಿ ಸ್ಥಾಪಿಸಬೇಕಾದುದು ಕರ್ತವ್ಯ ಎಂಬ ಧೋರಣೆಯಿಂದ ನಡೆಸಿದ ಸಮ್ಮೇಳನ ಅದು. ಆದರೆ ಜೀವನ ಎಂತೋ ಹಾಗೆ ಕಾವ್ಯ ಚಿಂತನದಲ್ಲೂ ವಿಕೇಂದ್ರೀಕರಣಕ್ಕೆ ಬದ್ಧರಾದ ಸುಬ್ಬಣ್ಣ 'ಶ್ರೇಷ್ಠತೆ ಮೆರವಣಿಗೆಗೆ ಕಪ್ಪು ಧ್ವಜ ಹಾರಿಸುತ್ತಾರೆ. ಅವರೆನ್ನುತ್ತಾರೆ, ಶ್ರೇಷ್ಠತೆ ಸಹಜ ಗುಣವಾಗಿ ಕ್ರಮೇಣ ವಿಕಾಸಗೊಳ್ಳುವುದು ಒಂದು ರೀತಿ. ಶ್ರೇಷ್ಠತೆ ಅಪೇಕ್ಷಣೀಯ, ಗೌರವಾರ್ಹವಾದದ್ದು ಅಂತ ಒಪ್ಪಿ, ನಚ್ಚಿ ಅದನ್ನು ಸಾಧಿಸಲು ಹೆಣಗುವುದು ಇನ್ನೊಂದು. ಒಂದು ಗುಣವಾದರೆ ಇನ್ನೊಂದು ವ್ಯವಸವಾಗುತ್ತದೆ'. ಈ ಶ್ರೇಷ್ಠತೆಯ ಕುರಿತು ಸುಬ್ಬಣ್ಣ ಮೂರು ಉದಾಹರಣೆ ಕೊಡುತ್ತಾರೆ. ಒಂದು, ಶ್ರೇಷ್ಠತೆಯನ್ನು ಅರಸಲು ಹೋಗಿ ಕೋಟ್ಯಾಂತರ ಡಾಲರ್ ಖರ್ಚುಮಾಡಿ ಅಮೇರಿಕದ ಒಂದು ವಿಶ್ವವಿದ್ಯಾನಿಲಯ ಕೊನೆಗೆ ಐದು ಜನರ ಮುಂದೆ ಒಂದು ಶ್ರೇಷ್ಠನಾಟಕವನ್ನು ಪ್ರದರ್ಶಿಸಿದ್ದು. ಎರಡು, ಒಬ್ಬ ಹತ್ತಾರು ಎಂ.ಎ. ಇತ್ಯಾದಿ ಪಡೆದು ಶ್ರೇಷ್ಠ ಹಾಗೆಯೇ ಮುದುಕನಾದುದು ಮತ್ತು ಮೂರು, ಎತ್ತರದ ಗೊಮ್ಮಟದಲ್ಲಿ ಒಬ್ಬನೇ ಕುಳಿತು ತನಗೆ ತಕ್ಕಂಥ ಇನ್ನೊಬ್ಬನಿಗಾಗಿ ಕಾದುಕೂತ ಶ್ರೇಷ್ಠತೆಯ ಬ್ರಹ್ಮರಾಕ್ಷಸಶಾಸ್ತ್ರ ಜ್ಞಾನಿಯದು.

ಇವು ಮೂರೂ ಕಾಲ್ಪನಿಕ. ಆದರೆ ಇರುವ ಸತ್ಯವೆಂದರೆ ಜನವಿದೂರ ವಾದ ಶ್ರೇಷ್ಠತೆ ಅರ್ಥಹೀನ ಎಂಬುದು. ಶ್ರೇಷ್ಠತೆಯನ್ನು ಸಾಧಿಸುವುದು ಜನ ಮಧ್ಯೆ ಎಂಬುದು. ಸತ್ಯ ಮತ್ತು ಸಾಮಾನ್ಯ ಎರಡನ್ನು ಒಂದು ಲೋಕದಲ್ಲಿ ಹಿಡಿಯಬೇಕಾಗುತ್ತದೆ ಎನ್ನುವುದು ಇಲ್ಲಿಯ ಚಿಂತನೆ. ಈಮಧ್ಯೆ ಸಂಸ್ಕೃತಿಯ ವಿಶ್ಲೇಷಣೆ ನಡೆಸುತ್ತಾರೆ.

ರಾಜಕೀಯ ಬೇರೆ, ಸಾಹಿತ್ಯ ಬೇರೆ ಎಂಬುದನ್ನು ಅವರು ಒಪ್ಪುವುದಿಲ್ಲ. ಇನ್ನೂ ಎರಡು ಮಾತುಗಳನ್ನು ಅವರು ಹೇಳುತ್ತಾರೆ. "ನನಗೆ ಹೂವಯ್ಯ ಬಹುಮುಖ್ಯ. ಅವನನ್ನು ಜಗತ್

ಸಾಹಿತ್ಯದ ಸ್ಪರ್ಧೆಯಲ್ಲಿ ನಿಲ್ಲಿಸುವುದು ನನಗೆ ಅಗತ್ಯವಿಲ್ಲ. ಒಬ್ಬ ಜಗತ್ ಶ್ರೇಷ್ಠ ಸಾಹಿತಿ ಉದ್ಭವಿಸುವುದಕ್ಕಿಂತ ಇಲ್ಲಿನ ಜನರಲ್ಲಿ ನೂರಕ್ಕೆ ನೂರು ಸಾಮಾನ್ಯ ಅಕ್ಷರಸ್ಥರಾಗುವುದು ಮುಖ್ಯ. ನಮ್ಮ ಸಾಹಿತ್ಯ ಪರಿಷತ್ತು ಸ್ವಚ್ಛವಾಗಿರಬೇಕು ಎನ್ನುವ ಕಾಳಜಿಗಿಂತ ನಮ್ಮ ಹೋಟೆಲುಗಳು ಸ್ವಚ್ಛವಾಗಿರಬೇಕು ಅನ್ನುವ ಕಾಳಜಿ ತೀರ ಕಡಿಮೆಯಾಗಿ ಹೋದರೆ ನನಗೆ ಹೆದರಿಕೆ". ಸುಬ್ಬಣ್ಣ ಇಲ್ಲಿ ಎಷ್ಟು ಆಶ್ಚರ್ಯಕರವಾಗಿ ಸಾಮಾಜಿಕ ಚಿಂತನೆಯನ್ನು ಮತ್ತು ಕಾವ್ಯಚಿಂತನೆಯನ್ನು ಒಂದಾಗಿಸಿಕೊಳ್ಳುತ್ತಾರೆ ಎಂಬುದನ್ನು ನೋಡಬಹುದು.

ಇವೆಲ್ಲಕ್ಕೆ- ನಮ್ಮ ಜಾತಿವಂತಿಕೆ, ಸಾಂಸ್ಕೃತಿಕ ಶ್ರೇಷ್ಠತೆ ಇತ್ಯಾದಿಗಳಿಗೆ ಮದ್ದು ಎಂಬಂತೆ ಸುಬ್ಬಣ್ಣ ಗಾಂಧಿವಾದವನ್ನು ಮುಂದೊಡ್ಡುತ್ತಾರೆ. ಗಾಂಧಿವಾದ ಎನ್ನುವುದು ಅಹಿಂಸಾತ್ಮಕ, ಸರಳ ಜೀವನ ವಿಧಾನ, ದೇಸೀಯತೆ ಎಂದೆಲ್ಲ ಅರ್ಥ ಕೊಡುತ್ತಿದ್ದುದರಿಂದ ಅರ್ಥದ ಗೊಂದಲವಿದೆ. ಅಂತಿಮವಾಗಿ ಇದು ಯಥಾಸ್ಥಿತಿವಾದುದನ್ನೇ ಮುಂದಿಡುತ್ತದೆಯೇ? ಚಿಂತಿಸಬೇಕಾದುದು; ಉತ್ತರ ಸರಳವಾದುದಲ್ಲ.

*

ಪ್ರಾಚೀನ ಕನ್ನಡ ಕವಿಗಳು ಮತ್ತು ವ್ಯವಸ್ಥೆ -ಒಂದು ವೈಚಾರಿಕ ನೋಟ

> "ಅಪಾರವಾದ ಕಾವ್ಯ ಜಗತ್ತಿನಲ್ಲಿ ಕವಿಯೇ ಸೃಷ್ಟಿಕರ್ತ
> ತನಗೆ ಹೇಗೆ ರುಚಿಸುತ್ತದೊ ಹಾಗೆ ವಿಶ್ವವನ್ನು
> ರೂಪಾಂತರಗೊಳಿಸುತ್ತಾನೆ"
>
> (ಭಾರತೀಯ ಕಾವ್ಯಮೀಮಾಂಸೆ ತೀ.ನಂ.ಶ್ರೀ ೧೯೭೩)

ಕವಿಯ ಗರಿಷ್ಠ ಸ್ವಾತಂತ್ರ್ಯವನ್ನು ಇದು ಹೇಳುತ್ತದೆ. ಕವಿಗೆ ಅಭ್ಯಾಸ, ಲೋಕಾನುಭವ ಬೇಕೆಂದು ಭಾರತೀಯ ಕಾವ್ಯಮೀಮಾಂಸೆ ಹೇಳುತ್ತದೆಯಾದರೂ ಮೇಲಿನ ಹೇಳಿಕೆಯ ಹಿನ್ನೆಲೆಯಲ್ಲಿ ಕವಿ ನಿರಂಕುಶ, ಸರ್ವಸ್ವತಂತ್ರ ಎಂತಲೇ ಗ್ರಹಿಸಲಾಗುತ್ತದೆ. ಸಾಹಿತ್ಯಕ್ಕೆ ಬದ್ಧತೆಯ ವಿಷಯಬಂದಾಗೆಲ್ಲ ನಮ್ಮ ಎಷ್ಟೋಜನ ಲೇಖಕರು ತಮ್ಮ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದಿತೆಂದು ಉರಿದುಬೀಳುವುದು ಹೆಚ್ಚಾಗಿ ಇದೇ ಹಿನ್ನೆಲೆಯಿಂದ. ಆದರೆ ನಮಗೆ ಇಂದು ದೊರಕಿರುವ ಸಾವಿರಾರು ವರ್ಷಗಳ ಕಾವ್ಯ ಕಲಾಕೃತಿಗಳು, ಸಾವಿರಾರು ವರ್ಷದ ಚರಿತ್ರೆ ಮತ್ತು ನಮಗೆ ಲಭ್ಯವಾದ ವೈಜ್ಞಾನಿಕ ರೀತಿಯ ವಿಶ್ಲೇಷಣಾ ಜ್ಞಾನವು ಕವಿಯ ಈ ಸ್ವಾತಂತ್ರ್ಯ ನಿರಂಕುಶವೂ ಅಲ್ಲ, ನಿಸ್ಸೀಮವೂ ಅಲ್ಲ ಎಂಬುದನ್ನು ಸಾಬೀತು ಪಡಿಸುತ್ತದೆ. ಅಂದರೆ ಈ ಪರಮ ಸ್ವಾತಂತ್ರ್ಯ ಕೂಡ ಸಾಂದರ್ಭಿಕವಾದುದು, ಆಯಾ ಕಾಲದ ಚಾರಿತ್ರಿಕ ಸಂಗತಿಗಳಿಂದ ಪರಿಣಾಮಗೊಂಡಿದ್ದು ಎಂಬುದು ನಿಚ್ಚಳವಾಗುತ್ತದೆ. ಈ ನನ್ನ ನಿಲುವನ್ನು ನಮ್ಮ ಪ್ರಾಚೀನ ಕವಿಗಳು ಬದುಕಿನ ವ್ಯವಸ್ಥೆಯ ಮಧ್ಯೆ ಇಟ್ಟು ಪುಷ್ಟಿಕರಿಸಲಾಗುತ್ತದೆ.

ಇಲ್ಲಿ "ವ್ಯವಸ್ಥೆ" ಎಂದರೇನು ಎಂಬುದನ್ನು ಒಂದು ಅಂದಾಜಿನಷ್ಟಾದರೂ ಸ್ಪಷ್ಟಪಡಿಸಿಕೊಳ್ಳುವುದು ಸೂಕ್ತ. ನಾನು ಇಲ್ಲಿ ಉಪಯೋಗಿಸಿರುವ "ವ್ಯವಸ್ಥೆ" ಎಂಬ ಪದಕೂಡ ರೂಢಿಗತ ಅರ್ಥಕ್ಕಿಂತ ವಿಶೇಷವಾದ ಅರ್ಥವನ್ನೇನೂ ಹೊಂದಿಲ್ಲ. ಆದರೆ ಅದಕ್ಕೆ ತುಸು ವಿಸ್ತಾರವನ್ನು ನೀಡಲಾಗಿದೆ. "ವ್ಯವಸ್ಥೆ" ಎಂದರೆ ರಾಜಕೀಯ ವ್ಯವಸ್ಥೆಯೇ. ಆದರೆ ಈ "ರಾಜಕೀಯ" ಕೂಡ ಸ್ವಯಂಭೂ ಅಲ್ಲ. ಅದು ಅಂದಂದಿನ ಸಾಂಪತ್ತಿಕ ಉತ್ಪಾದನೆ ಮತ್ತು ವಿತರಣೆಯೊಡನೆ ಸಂಬಂಧ ಹೊಂದಿಯೇ ಇರುತ್ತದೆ. ಅಂದರೆ ಕಾಲದ ಅವಶ್ಯಕತೆಯನ್ನು ಪೂರೈಸುವ ನಡವಳಿಕೆಗಳನ್ನು ಒಳಗೊಂಡೇ ಇರುತ್ತದೆ. ಅಥವಾ ಇಂತೆಲ್ಲ ಇರುವ ಈ ರಾಜಕೀಯ ವ್ಯವಸ್ಥೆ ಸಾಮಾಜಿಕ ಬದುಕಿನಲ್ಲಿ ವಿಶಿಷ್ಟವಾದ ನಡುವಳಿಕೆಯನ್ನು ರೂಢಿಗೊಳಿಸಲು ಬಲವಂತ

ಮೊದಲ ಪ್ರಕಟನೆ: ಬಾಗಲಕೋಟದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳಲ ಸಂಚಿಕೆ.

ಮಾಡುತ್ತದೆ. ಇದು ಒಂದಾದರೆ ಇದರಷ್ಟೇ ಶಕ್ತಿಯುತವಾದ ಇನ್ನೊಂದು ವ್ಯವಸ್ಥೆ "ಧಾರ್ಮಿಕ ವ್ಯವಸ್ಥೆ." ಧಾರ್ಮಿಕ ವ್ಯವಸ್ಥೆ ವೈಯಕ್ತಿಕ ಬದುಕಿನ ಒಳನೆಯ್ಗೆಯನ್ನು ಇಕ್ಕಟ್ಟಾಗಿ ನೆಯ್ದಿರುತ್ತದೆ. ಮತ್ತು ಇದೇ ನೆಯ್ಗೆ ಸಾಮಾಜಿಕವಾಗಿ ಜೋಡಿಸಲ್ಪಟ್ಟಿರುತ್ತದೆ. ಆದ್ದರಿಂದ ಧರ್ಮ ಮತ್ತು ಅದರಿಂದ ಮನಸ್ಸಿನ ಮೇಲೆ ಉಂಟಾಗುವ ಸಾಂಸ್ಕೃತಿಕ ಪರಿಣಾಮ ಒಂದು 'ಸಾಂಸ್ಥಿಕ' ಪರಿಣಾಮವೇ ಆಗಿರುತ್ತದೆ. ಮತ್ತು ಇಂಥ ಸಾಂಸ್ಕೃತಿಕ ಒತ್ತಡಕ್ಕೆ ರಾಜಕೀಯ ವ್ಯವಸ್ಥೆ ಕೂಡ ಕಾರಣವಾಗಿರುತ್ತದೆ. ಒಟ್ಟಾರೆಯಾಗಿ ಈ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಯ ಶಕ್ತಿಯನ್ನು ಇಲ್ಲಿ ಊಳಿಗಮಾನ್ಯ ಪ್ರಭುತ್ವದ ಹಿನ್ನೆಲೆಯಲ್ಲಿಯೇ ಗ್ರಹಿಸಲಾಗಿದೆ. ಇಂಥ ಒಂದು ಧೋರಣೆ ರೂಪುಗೊಳ್ಳಲು ನಮ್ಮ ಪ್ರಾಚೀನ ಕವಿಗಳು ಕಾವ್ಯಕೃತಿ ಸಾಕಷ್ಟು ವಸ್ತುವನ್ನೊದಗಿಸುತ್ತವೆ. ಮಹಾಕವಿ ಪಂಪನನ್ನೇ ಗಮನಿಸಬೇಕು.

ಪಂಪನ ಕೃತಿ ಎರಡು. ಒಂದು ಆದಿಪುರಾಣ. ಎರಡು, ವಿಕ್ರಮಾರ್ಜುನ ವಿಜಯ ಅಥವಾ ಪಂಪಭಾರತ. ಆದಿಪುರಾಣ ಧಾರ್ಮಿಕ ಕಾವ್ಯವಾಗಿದೆ. ಮಹಾಧಾರ್ಮಿಕ ವ್ಯಕ್ತಿಯಾದ ಆದಿನಾಥನ ಚರಿತ್ರೆಯನ್ನೇ ಮೊದಲು ಮಾಡಿಕೊಂಡು ಜೈನಧರ್ಮದ ನೆಲೆಯಲ್ಲಿ ಜೀವ ಭಾವಾವಳಿಯನ್ನು ಚಿತ್ರಿಸುತ್ತದೆ. ಇದು ಧಾರ್ಮಿಕ ಕಾವ್ಯವಾಗಿದ್ದರೂ ಅದು 'ಧರ್ಮಜಡ'ವಾಗಿಲ್ಲ ಎನ್ನುವ ಮಾತು ಬೇರೆ. ಈ ಧಾರ್ಮಿಕ ಕಾವ್ಯವನ್ನು ಬರೆಯುವ ಹೊತ್ತಿಗೆ ಕವಿಗೆ ಧರ್ಮ ಮುಖ್ಯವೆನಿಸಿತ್ತು. ಬಡವರೇ ಹೆಚ್ಚು ಧರ್ಮಾವಲಂಬಿಗಳು ಎಂಬುದನ್ನು ವ್ಯವಹಾರದಲ್ಲಿ ಇಂದೂ ಕಾಣುವ ಸತ್ಯವಾಗಿದೆ. ಪಂಪನಿಗೆ ಬದುಕಿನಲ್ಲಿ ಮುಖ್ಯವೆನಿಸಿದ್ದು ಆಧ್ಯಾತ್ಮಿಕಸಿದ್ಧಿ, ಕೈವಲ್ಯಸಿದ್ಧಿ. ಇದೇ ಮನುಷ್ಯನ ಚರಮಗುರಿ. ಆ ಮಹೋನ್ನತಿಗೆ ಸಾಧನವಾಗುವುದು ಜೈನಧರ್ಮ. ಕವಿಗೆ ಕಾವ್ಯದಿಂದ ಉಂಟಾಗುವ ಪ್ರತಿಫಲವನ್ನು ಆಗಲೇ ಸಂಸ್ಕೃತ ಕವಿಗಳು ಕಲ್ಪಿಸಿದ್ದರು. ಆದರೆ ಪಂಪನಿಗೆ ಅಂಥವೆಲ್ಲ ಜಿನಸ್ತುತಿಗಿಂತ ಮಿಗಿಲಾಗಿರಲಿಲ್ಲ. ಆದ್ದರಿಂದ ಹೀಗೆ ಕಾವ್ಯರಚನೆ ಮಾಡುವ ತನ್ನ ಉದ್ದೇಶ ಜಿನಸ್ತುತಿಗಿಂತ ಬೇರೆಯಲ್ಲ ಎಂಬುದನ್ನು ತೋಡಿಕೊಂಡ ಕವಿತೆ ಪ್ರಸಿದ್ಧ ಎಂಬುದನ್ನು ತಿಳಿಸುವ ಈ ಕೆಳಗಿನ ಸಾಲುಗಳು ಎಲ್ಲರಿಗೂ ಪರಿಚಿತವಾದುದೇ.

> "ಕವಿತೆಯೊಳಾಸಗೆಯ್ದ ಫಲ ಮಾವುದೋ ಪೂಜೆನೆಗಟ್ಟಿ ಲಾಭಮಂ
> ಬಿವೆ ವಲಮಿಂದ್ರ ಪೂಜೆ ಭುವನಸ್ತುತಮಪ್ಪ ನೆಗಟ್ಟೆ ಮುಕ್ತಿಸಂ
> ಭವಿಸುವ ಲಾಭಮಂಬಿವು ಜಿನೇಂದ್ರ ಗುಣಸ್ತುತಿಯಿಂದೆ ತಾಮಸಾ
> ರವೆ ಪೆಱರೀವುದೇಂ ಪೇಱರ್ ಮಾಡುವುದೇಂ ಪೆಱರಿಂದಪ್ಪುದೇಂ"

ಇಲ್ಲಿ ಪಂಪ ತನ್ನ ಕವಿಕರ್ಮವನ್ನು ಜೈನಧರ್ಮದ ಸಾಮಾಜಿಕ ಮತ್ತು ಆಧ್ಯಾತ್ಮಿಕ ಸಿದ್ಧಾಂತಕ್ಕಾಗಿ ದುಡಿಯುತ್ತಾನೆ. ಪಂಪ ಒಬ್ಬ ಮಹಾವಿದ್ವಾಂಸ ಮಾತ್ರವಲ್ಲ ಅವನ ಸ್ಥಾನವೂ ವಿದ್ವಾಂಸರಲ್ಲಿ ಎತ್ತರಮಟ್ಟದಲ್ಲಿದೆ. ಸಾಮಾನ್ಯವಾಗಿ ಎಲ್ಲ ಧರ್ಮಗಳು ರಾಜಾಶ್ರಯದಲ್ಲಿಯೇ ಹೆಚ್ಚು ಬೆಳವಣಿಗೆಯನ್ನು ಹೊಂದಿದವು. ಇದಕ್ಕೆ ವೀರಶೈವ ಧರ್ಮವೊಂದೇ ಅಪವಾದವಾಗಿರ ಬಹುದು. ಹೀಗೆ ಕಾವ್ಯ ವ್ಯವಸ್ಥೆಯ ಮೂಲಕವೇ ಧಾರ್ಮಿಕ ಸಿದ್ಧಿ ಕೂಡ ಆಗಬೇಕಾದ ಕಾಲದಲ್ಲಿ ರಾಜರೂ, ಮಹಾತ್ಮರೂ ಆಗಿರುವ ವ್ಯಕ್ತಿಗಳನ್ನೇ ತನ್ನ ಕಾವ್ಯದ ನಾಯಕರನ್ನಾಗಿ

ಆಯ್ಕೆ ಮಾಡಿಕೊಳ್ಳಬೇಕಾದದ್ದು ಒಂದು ಚಾರಿತ್ರಿಕವಾದ ಸತ್ಯವಾಗಿದೆ. ಅಲ್ಲದೇ ಮಹಾ ಕಾವ್ಯದ ಕಥಾ ನಾಯಕರುಎಂಥವರಿರ ಬೇಕೆನ್ನುವುದು ಆಗಲೇ ನಿರ್ಧಾರವಾಗಿ ಹೋದ ಶಾಸ್ತ್ರ ಸಂಗತಿ ಕೂಡ ಆಗಿದೆ. ಅದೇನೇ ಇದ್ದರು "ಆದಿಪುರಾಣ"ವನ್ನು ರಚಿಸುವಾಗಿನವರೆಗೆ ಇದ್ದ ಪಂಪನ ಹಾದಿ 'ವಿಕ್ರಮಾರ್ಜುನ ವಿಜಯ'ವನ್ನು ರಚಿಸುವ ಕಾಲಕ್ಕೆ ಬದಲಾಯಿತು. 'ವಿಕ್ರಮಾರ್ಜುನ ವಿಜಯ' ರಚಿಸುವ ಕಾಲಕ್ಕೆ ಪಂಪ ರಾಜಾಶ್ರಯವನ್ನು ಹೊಂದಿದ್ದಾನೆ. ಈಗ 'ಜನಕ್ಕಿಂತ ಪೇಅರೀವುದೇಂ' ಎನ್ನುವ ಮನಸ್ಥಿತಿ ಅವನದಲ್ಲ. ಬದಲಾಗಿ ತನ್ನ ರಾಜನಿಗೆ ಸಕಲ ಸಂಪತ್ತು ಸದಾ ಇರಲೆಂದು ಹಾರೈಸುತ್ತಾನೆ. ಅರಿಕೇಸರಿಯೇ ಉದಾತ್ತ ನಾರಾಯಣನೆಂದೂ ಹೇಳುತ್ತಾನೆ. ಜೈನ ನಾದ ಪಂಪ ವೈದಿಕ ದೇವರನ್ನು ನೆನೆಯುತ್ತಾನೆ. ಇಂಥ ಪರಿವರ್ತನೆಯನ್ನು ಸಾಧ್ಯವಾಗಿಸಿದ ಪವಾಡ ಯಾವುದೆಂದರೆ ಪಂಪನಿಗೆ ಸಿಕ್ಕ ರಾಜಾಶ್ರಯ. ಅಂದರೆ ಅರಿಕೇಸರಿಯಿಂದ ಸಿಕ್ಕ ಉಂಬಳಿ, ಸಂಪತ್ತು, ಚಾಮರ- ಪಲ್ಲಕ್ಕಿ, ಒಟ್ಟಾರೆಯಾಗಿ ಐಹಿಕ ಸಿರಿವಂತಿಕೆ ಮತ್ತು ಸಾಮಾಜಿಕವಾದ ಮೇಲ್ಮಟ್ಟದ ಅಂತಸ್ತು. ಇದಕ್ಕನುಗುಣವಾಗಿ ಪಂಪ ತನ್ನ ಕಾವ್ಯವನ್ನು ಮೀಟಿದಿದ್ದಾನೆ.

ಪಂಪನ ಕಾಲ 'ವೀರಯುಗ'ವೆಂದೇ ಪ್ರಸಿದ್ಧವಾಗಿದೆ. ರಾಜ್ಯ ರಕ್ಷಣೆ ಕೂಡ ಮಹತ್ವವಿದ್ದ ಹಾಗೆ ರಾಜ್ಯ ವಿಸ್ತರಣೆ ಕೂಡ ಆಗಿನ ರಾಜರ ಪರಾಕ್ರಮ ಪ್ರಕಾಶದ ಹವ್ಯಾಸವಾಗಿದೆ. ಅಲ್ಲದೇ ಅರಿಕೇಸರಿಯ ಅಧಿಕಾರಾವಧಿ ಸುಖದ್ದೇನೂ ಆಗಿರಲಿಲ್ಲ. ಒಂದು ಲೆಕ್ಕ ನೋಡಿದರೆ ಪಂಪನ ಮಹಾಭಾರತದ ಅಂತಃಕಲಹ ಅರಿಕೇಸರಿಯದೂ ಆಗಿತ್ತು. ಅರಿಕೇಸರಿ ಕೇವಲ ರಾಜ್ಯ ರಕ್ಷಣೆಗಾಗಿ ಮಾತ್ರ ಹೋರಾಡಿದವನಲ್ಲ. ರಾಷ್ಟ್ರಕೂಟರ ಕೃಷ್ಣನ ಸಂದರ್ಭದಲ್ಲಿ ಅವನು ಅತಿಯಾಗಿ ಹೋರಾಡಿದ್ದಾನೆ. ಹೀಗಾಗಿ ಆತ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಆದರ್ಶಸಾಮಂತ ಕೂಡ ಆದಂತಿದೆ. ಕಾಲದ ಈ ಸಂದರ್ಭದಲ್ಲಿ ಭಾಗಿಯಾದ ಪಂಪ ತನ್ನ ಕಾವ್ಯ ರಚನೆಯಲ್ಲಿ ಕರ್ಣನನ್ನು ಆದರ್ಶ ಆಳನ್ನಾಗಿ ಮಾಡಿ ಕರ್ಣನ ಚರಿತ್ರೆಯನ್ನು ಕರ್ಣ ರಸಾಯನವನ್ನಾಗಿ ಮಾಡಿದ್ದಾನೆ.

ಪಂಪನ ಕಾಲದಲ್ಲಿ ಕರ್ನಾಟಕದಲ್ಲಿ ಯುದ್ಧಗಳು ಅನೇಕ. ಈ ಯುದ್ಧಕ್ಕಾಗಿ ವ್ಯಯವಾಗುವ ಧನಧಾನ್ಯವೇ ಮೊದಲಾದ ಸಂಪತ್ತು ಅಧಿಕ. ಈ ಅಧಿಕವಾದ ಸಂಪತ್ತು ಪ್ರಜೆಗಳಿಂದಲೇ ಕೂಡಿಸಬೇಕಷ್ಟೇ? ಮೇಲಿಂದ ಯುದ್ಧ ನಡೆದರೆ ಆರ್ಥಿಕ ಪರಿಸ್ಥಿತಿಯ ಹದಗೆಡುವಿಕೆ, ಅದರಿಂದ ಜನಗಳಿಗಾಗುವ ಕಷ್ಟಕೋಟಲೆಗಳು ವರ್ಣನೆಗೆ ಮೀರಿದ್ದಿರುತ್ತದೆ. ಅಂದ ಮೇಲೆ ಪಂಪನ ಕಾಲದಲ್ಲಿಯ ಆರ್ಥಿಕ ವ್ಯವಸ್ಥೆ ಸಮೃದ್ಧವಾಗದೆ ಪ್ರಜೆಗಳು ಗೋಳು ಹೊಯ್ದು ಕೊಳ್ಳುತ್ತಿರಬಹುದಾಗಿದೆ. ಆದರೆ ಪಂಪ ನಿಲ್ಲುವುದು ಯಾರ ಬಳಿ? ಪಂಪ ರಾಜರ ಬಳಿ ನಿಲ್ಲುತ್ತಾನೆ. ಯಾಕೆಂದರೆ ಆತ ರಾಜನ ಸಂಪತ್ತಿನಲ್ಲಿ ಪಾಲುಗೊಳ್ಳುತ್ತಾನೆ. ರಾಜ್ಯದ ರಕ್ಷಣೆ ಅವನ ಆದ್ಯಕರ್ತವಾಗುತ್ತದೆ. ಇದೆಲ್ಲದರ ಮೊತ್ತವೇ ಕರ್ಣನ ಪಾತ್ರದ ಚರಿತ್ರೆಯಾಗಿದೆ.

ಗೆಲ್ಲಲು ಸಾಮರ್ಥ್ಯವಿದ್ದರೆ ಕೊಂದು ಗೆಲ್ಲಬೇಕು. ಅಂಥಾದ್ದು ಸಾಧ್ಯವಾಗದಿದ್ದರೆ ಹೋರಾಡಿ ಸಾಯಬೇಕು. ಇದೇ ಆಗಿನ ಧರ್ಮ. ಎಂದು ಪಂಪ ಆಗಿನ ಧರ್ಮವನ್ನು ಎತ್ತಿ ಹಿಡಿಯುತ್ತಾನೆ.

ಜೋಳದ ಪಾಳಿಯ ಹಂಗಿನಲ್ಲಿ ಬಿಗಿದು ಯುದ್ಧದಲ್ಲಿ ಸತ್ತವನು ವೀರಮರಣವನ್ನು ಹೊಂದಿ ದೇವಲೋಕದ ದೇವಸ್ತ್ರೀಯ ತೋಳತೆಕ್ಕೆಗೆ ಪಾತ್ರನಾಗುತ್ತಾನೆ ಎಂಬ ಭ್ರಮೆಯನ್ನು ಮುಂದಿಡುತ್ತಾನೆ.

ಜೈನಧರ್ಮ ಹುಟ್ಟಿದ್ದೇ ವೈದಿಕ ಧರ್ಮವನ್ನು ವಿರೋಧಿಸಿ. ವೈದಿಕ ಧರ್ಮದ ಪ್ರಕಾರ ಇರುವ ಚಾತುರ್ವರ್ಣವನ್ನು ಜೈನಧರ್ಮ ಮನ್ನಿಸುವುದಿಲ್ಲ. ಆದರೆ ಪಂಪನ ಆದಿಪುರಾಣದಲ್ಲಿ ಜೈನರಿಂದ ಸಹ ಚಾತುರ್ವರ್ಣ್ಯ ವ್ಯವಸ್ಥೆಯ ಅಂಗವಾಗುತ್ತದೆ. ಆದರೆ ಒಂದು ವ್ಯತ್ಯಾಸವೆಂದರೆ ಮೊದಲ ವರ್ಣ ಬ್ರಾಹ್ಮಣ ಆಗುವ ಬದಲು ಕ್ಷತ್ರಿಯ ಆಗುತ್ತದೆ. ಯಾಕೆಂದರೆ ಜೈನ ರಾಜರುಗಳು ಕ್ಷತ್ರಿಯರು ತಾನೆ? ಪಂಪನಿಗೆ ಈ ವರ್ಣ ವ್ಯವಸ್ಥೆ ಸಮ್ಮತವಲ್ಲ ಎಂಬುದನ್ನು ಆತ ಬೇರೆ ಪ್ರಸಂಗದಲ್ಲಿ ಕಾಣಿಸಿಕೊಳ್ಳುತ್ತಾನೆ. ಮುಖ್ಯವಾಗಿ ಕೌರವನ, ಕರ್ಣನ ಮಾತಿನಲ್ಲೇ ಬಂದಿದೆ.

ಕುಲಮೆಂಬುದುಂಟೆ ಬೀರಮೆ
ಕುಲಮಲ್ಲದೆ ಕುಲಮನಿಂತು ಪಿಕ್ಕದಿರಿಂದ ನೀ
ಮೊಲಿದೆಲ್ಲಿ ಪುಟ್ಟಿ ಬಳೆದಿರೊ
ಕುಲಮಿರ್ದುದೆ ಕೂಡದೊಳಂ ಶರಸ್ತಂಬದೊಳಂ

ಎಂದು ದ್ರೋಣನೊಡನೆ ಕೌರವ ಹೇಳುವ ಮಾತಿನಲ್ಲಿ; ಅದರಂತೆ ದ್ರೋಣನೊಡನೆ ಕರ್ಣ ಸಿಟ್ಟಿನಿಂದುಗ್ಗಡಿಸುವ

ಕುಲಮನೆ ಮುನ್ನ ಮುಗ್ಗಡಿಪಿರೇಂಗಳ ನಿಮ್ಮ ಕಾಲಗಳಾಂತುಮಾ
ರ್ಮಲೆವನನಟ್ಟಿ ತಿಂಬವೆ ಕುಲಂ ಕುಲಮಲ್ತು ಚಲಂಕುಲಂ ಗುಣಂ
ಕುಲಮಭಿಮಾನಮೊಂದೆಕುಲಮಣ್ಮು ಕುಲಂ ಬಗೆವಾಗಳೀಗಳೀ
ಕಲಹದೊಳಣ್ಣ ನಿಮ್ಮ ಕುಲವಾಕುಲಮಂ ನಿಮಗುಂಟು ಮಾಡುಗುಂ

ಪ್ರಸಿದ್ಧವಾದ ಈ ಪದ್ಯದಲ್ಲಿ ಪಂಪ ಆಶ್ಚರ್ಯಕರವಾಗಿ ವೈಧಿಕ ಧರ್ಮದ ವೈಶಿಷ್ಟವಾದ ಚಾತುರ್ವರ್ಣವನ್ನು ಪ್ರತಿಭಟಿಸುತ್ತಾನೆ. ಜಾತಿ ವ್ಯವಸ್ಥೆಯ ಅತ್ಯಂತ ಭಾರವಾದ, ಚಲನರಹಿತವಾದ ಸಾಂಸ್ಕೃತಿಕ ಒತ್ತಡವನ್ನು ಭೀಮಶಕ್ತಿಯಿಂದ ಪಂಪ ಝಾಡಿಸುವ ರೀತಿಯಲ್ಲಿ ಪಂಪ ಕಾಲವನ್ನೇ ಮೀರಿ ಮೆರೆಯುತ್ತಾನೆ. ಆದರೇನು ಜೈನ, ವೈದಿಕ ವಿದ್ವಾಂಸರಿಂದಲೂ, ರಾಜ ಮಾನ್ಯರಿಂದಲೂ ಆರಾಧಿಸಲ್ಪಡುವ, ಅಗ್ರಹಾರದ ಮಧ್ಯದಲ್ಲೇ ಬದುಕುತ್ತಿರುವ, ಪೂರ್ವಾಶ್ರಮವಾಗಿ ಬ್ರಾಹ್ಮಣನೇ ಆಗಿರುವ ಪಂಪ ಎತ್ತಿ ಹಿಡಿಯುವುದು.

“ಜಾತಿಯೊಳೆಲ್ಲಮುತ್ತಮದ ಜಾತಿಯ ವಿಪ್ರರುವಂಗೆ ನಂಬಲೇ:” ಎಂದು ಉತ್ತಮಜಾತಿ ಬ್ರಾಹ್ಮಣ ಜಾತಿಯೇ ಎಂದು ನಂಬುತ್ತಾನೆ. ಆದರೂ ಜೈನ ಧರ್ಮವನ್ನು ಎತ್ತಿಹಿಡಿಯುತ್ತಾನೆ. ಯಾಕೆ ಈ ಸಂಘರ್ಷ? ಯಾಕೆ ಈ ನಿರ್ಧಾರ? ಅದಕ್ಕೆ ಪ್ಲೆಖನೋವ್ ಹೇಳುವ ಒಂದು ಮಾತು ಸಮಂಜಸವೆಂದು ತೋರುತ್ತದೆ. ಅವರೆನ್ನುತ್ತಾರೆ.

“ಒಂದು ನಿರ್ದಿಷ್ಟ ದೇಶದ ಕಲಾವಿದರು ಒಂದು ನಿರ್ದಿಷ್ಟಕಾಲದಲ್ಲಿ ಜೀವನದ ಜಂಜಾಟವನ್ನು ಕದನವನ್ನು ತೊರೆದಲ್ಲಿ ಮತ್ತು ಬೇರೊಂದು ಕಾಲದಲ್ಲಿ, ಇದಕ್ಕೆ ವಿರುದ್ಧವಾಗಿ

ಕದನಕ್ಕಾಗಿಯೂ ಅದರೊಂದಿಗೆ ಅವಶ್ಯವಾಗಿಯೇ ಹೋಗುವ ಜಂಜಾಟಕ್ಕಾಗಿಯೂ ಹಾತೊರೆದಲ್ಲಿ ಬೇರೆ ಬೇರೆ ಕಾಲಗಳಲ್ಲಿ ಅವರಿಗೆ ಯಾರೊ ಬೇರೆ ಬೇರೆ ಕಾರ್ಯಭಾರಗಳನ್ನು ಗೊತ್ತುಪಡಿಸಿರುತ್ತಾರೆ ಎಂಬುದು ಅದಕ್ಕೆ ಕಾರಣವಲ್ಲ; ಆದರೆ ಒಂದು ಸಾಮಾಜಿಕ ಪರಿಸ್ಥಿತಿಯಲ್ಲಿ ಅವರು ಒಂದು ಮನೋಧರ್ಮದ ಪ್ರಭಾವಕ್ಕೊಳಗಾಗಿರುತ್ತಾರೆ. ಮತ್ತು ಬೇರೊಂದು ಸಾಮಾಜಿಕ ಪರಿಸ್ಥಿತಿಯಲ್ಲಿ ಬೇರೊಂದು ಮನೋಧರ್ಮದ ಪ್ರಭಾವಕ್ಕೊಳಗಾಗಿರುತ್ತಾರೆ, ಎಂಬುದು ಅದಕ್ಕೆ ಕಾರಣ" (ಕಲೆ ಮತ್ತು ಸಾಮಾಜಿಕ ಜೀವನ ಅನು: ಕೆ.ಎಲ್. ಗೋಪಾಲಕೃಷ್ಣರಾವ್ ೧೯೮೩; ೯) ಪೊನ್ನನ "ಪುರಾಣ ಚೂಡಾಮಣಿ" ಎಂದು ಹೆಸರಾದ ಶಾಂತಿಪುರಾಣದಲ್ಲಿ ಜನಸಾಮಾನ್ಯರಿಗೆ ತೆರೆದುಕೊಡುವ ಭ್ರಾಮಕ ಜಗತ್ತಿನ ಕುರಿತು ಸೀ. ವೀರಣ್ಣ ಹೀಗೆ ದಾಖಲಿಸುತ್ತಾರೆ.

> "ಎನಿಲ್ಲೆಂದರೂ ಜನ ಸನ್ಯಾಸಿಯಾದರೆ ತಿರಿದುಂಡು
> ಬದುಕುತ್ತಾ, ಯುದ್ಧದಲ್ಲಿ ಸಾಯದೆ, ಬಿಟ್ಟಿ ಕೆಲಸ ಮಾಡದೆ
> ಉಳಿಯುವ ಅವಕಾಶ ದೊರೆಯುತ್ತಿತ್ತು. ಕಲ್ಪನೆಯ ಸುಖದ
> ಜೊತೆಗೆ ವಾಸ್ತವವಾಗಿ ಬಾಧೆಗಳನ್ನು ತಪ್ಪಿಸುತ್ತಿದ್ದ
> (ಜೈನ) ಧರ್ಮವನ್ನು ಜನಸಾಮಾನ್ಯರು ಅಪ್ಪಿಕೊಂಡರು"

ಆದರೆ ತೀರದ ಕಷ್ಟ ಜನರ ಪಾಲಿಗೆ ಇತ್ತು. ಅವರಿಗೆ ಜೈನಧರ್ಮ ಕೂಡ ಮಾಡಿದ ಪರಿಹಾರವೆಂದರೆ ಈಗ ದಾನಮಾಡಿ ಮುಂದಿನ ಜನ್ಮದಲ್ಲಿ,

> "ಕಳ್ಳಕಾಕರ ಭಯವಿಲ್ಲ, ಕ್ಷಾಮಡಾಮರವಿಲ್ಲ, ಒಡೆಯ ಆಳು
> ಎಂಬ ಭೇದವಲ್ಲ... ಬೆಳಗುವ ಚಿನ್ನದ ಪಾತ್ರೆಯಲ್ಲಿ
> ದಿನಕ್ಕೊಂದು ರೀತಿಯಲ್ಲಿ ಇಷ್ಟಾನುಸಾರ ಆಹಾರವನ್ನು ಕೊಡುವ ಮರ
> ಮನಸ್ಸಿಗೆ ಮತ್ತನ್ನು ಕೊಡದೆ ಸುಖವನ್ನು ಕೊಡುವ ಮದ್ಯ,
> ಶಯ್ಯಾಸೃಹ, ಸುರತ ಕ್ರೀಡಾಲಯ....
> (ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ ೧೯೮೬; ೨೩೧-೩೨)"

ಇತ್ಯಾದಿಗಳನ್ನು ಪಡೆಯಬಹುದಾದ ಹಗಲುಗನಸನ್ನು ತೆರೆಯುತ್ತಿತ್ತು. ಇದರ ಅರ್ಥ ಅಂಥ ವರ್ಣನೆಗಳು ಪುರಾಣಕ್ಕೆ ಸಹಜವಾಗಿ ಬಂದದ್ದು ತಪ್ಪು ಎಂದಲ್ಲ. ಅಂಥ ಲೋಲುಪತೆಯಿಂದ ಕವಿ ಮುಂದಿಡುವಾಗ ಅವನ ಪಕ್ಷಪಾತ ಧರ್ಮ ಮತ್ತು ರಾಜರಕಡೆಗೆ ಇತ್ತು ಎಂಬುದು ಮುಖ್ಯ.

"ಅಗ್ನಿಭೂತಿ, ವಾಯುಭೂತಿ" ಎಂಬ ಕಥೆಯನ್ನು ನಾನು ಪಾಠಮಾಡಬೇಕಿತ್ತು ಈ ಕಥೆ ಪ್ರಸಿದ್ಧವಾಗಿದೆ. ಅದು ಸಂಕ್ಷಿಪ್ತವಾಗಿಯೂ, ಹೊಸಗನ್ನಡದಲ್ಲಿಯೇ ಇತ್ತು. ಕಥೆಯ ಸಾರಾಂಶವನ್ನು ಹೇಳುವ ಅವಶ್ಯವಿಲ್ಲ. ಯಾಕೆಂದರೆ ಅದು ಜನಜನಿತವಾಗೇ ಇದೆ. ವಾಯುಭೂತಿಯು ತನ್ನ ಸೋದರ ಮಾವನೂ ಗುರುವೂ ಆದ ಜೈನಮುನಿಯನ್ನು ಅಪಮಾನಗೊಳಿಸಿದ್ದರಿಂದ ಆತ ಅನೇಕ ಜನ್ಮ ತಳೆದು ಕಷ್ಟವನ್ನು ಅನುಭೋಗಿಸುತ್ತಾನೆ. ಕೊನೆಗೆ

ಆತ ಒಬ್ಬ ಹೊಲೆಯ ಹೆಣ್ಣುಮಗುವಾಗಿ ಹುಟ್ಟುತ್ತಾನೆ. ಆ ಕೂಸೋ ಅತಿ ಕುರೂಪಿಯಾಗಿರುತ್ತಾಳೆ. ಅಂದರೆ ಇಲ್ಲಿ ಅರ್ಥವಿಷ್ಟೆ ಹೊಲೆಯರು ಎಂಬ ಜಾತಿ ಕೀಳು. ಅದು ಮುಟ್ಟಲಿಕ್ಕೂ ಅಯೋಗ್ಯ. ಹಾಗೆ ಹೊಲೆಯರಾಗಲು ಯಾವ ಸಾಮಾಜಿಕ ಕಾರಣವೂ ಇಲ್ಲ. ಪೂರ್ವಜನ್ಮದ ಕರ್ಮವೇ ಕಾರಣ. ಇದು ಒಂದು. ಎರಡನೆಯದೆಂದರೆ ಹೆಣ್ಣಾಗಿ ಹುಟ್ಟುವದು ಪಾಪದ ಫಲ. ಯಾವ ಜೈನಧರ್ಮ ವೈಧಿಕ ಧರ್ಮದ ಸಿದ್ಧಾಂತವನ್ನು ವಿರೋಧಿಸಿತೊ ಅದೇ ಧರ್ಮ ಮತ್ತು ಪುನಃ ಅದಕ್ಕೇ ಅಂಟಿಕೊಂಡ ಚಿತ್ರಣವನ್ನು ವಡ್ಡಾರಾಧನೆ ಧರ್ಮೋಪದೇಶದ ಮಾಧ್ಯಮವನ್ನಾಗಿ ಮಾಡಿಕೊಳ್ಳುತ್ತದೆ. ಅಷ್ಟಲ್ಲದೆ ವಾಯುಭೂತಿಯ ಉದ್ಧಟತನವನ್ನು ಪ್ರತಿಭಟಿಸಿದ ಕಾರಣಕ್ಕೆ ಅವನ ಅತ್ತಿಗೆ ಅನುಭೋಗಿಸಬೇಕಾದ ಕೋಟಲೆ ವಾಯುಭೂತಿಗಿಂತ ಹೆಚ್ಚಿನದಾಗಿದೆ. ಇದು ಹೆಣ್ಣೆಂಬ ಕಾರಣಕ್ಕೆ ಎನ್ನುವ ಆಂತರಿಕ ಧೋರಣೆ ಕೂಡ ಇದೆ. ಜೈನಧರ್ಮ ಸಹ ಹೆಣ್ಣು ಮುಕ್ತಿಗೆ (ಏಳಿಗೆಗೆ) ಅಡ್ಡಿ ಕೋಟಲೆಗೆ ಕಾರಣ ಎಂದೂ ನಂಬುತ್ತದೆ.

ನಾಗವರ್ಮನ ಕಾದಂಬರಿಯ ಕಾವ್ಯೋದ್ದೇಶವೇ ಬದಲಾಗಿಬಿಟ್ಟಿದೆ. ಕಾದಂಬರಿಯ ಕಥೆ ಜನ್ಮದಿಂದ ಜನ್ಮ ಹರಿಯುವಂತಿದೆಯಾದರೂ ಇಲ್ಲಿ ಜನ್ಮಾಂತರ ಶಾಪ ಮುಕ್ತಿ ಪಡೆದು ಪುನಃ ಸಂಸಾರಿಯಾಗುವುದಕ್ಕಾಗಿ ಹತ್ತನೇ ಶತಮಾನದಲ್ಲಿ ಕೊನೆ ಕೊನೆಗೆ ಬದುಕಿದ- ಈತ ತೀರ ಪ್ರಚಲಿತವಾಗಿದ್ದ ಜೈನ ಪುರಾಣ ಪರಂಪರೆಯಿಂದ ಯಾಕೆ ಹೊರಬಂದ ಎನ್ನುವದು ಬಹು ಮುಖ್ಯ ಪ್ರಶ್ನೆಯೇ ಆಗಿದೆ. ಶೃಂಗಾರ ಭರಿತವಾದ ಬಾಣ "ಕಾದಂಬರಿ"ಯನ್ನು ನಾಗವರ್ಮ ಆಯ್ದುಕೊಳ್ಳಬೇಕಾದರೆ ಒಂದು ಅಂತಸಂಬಂಧ ಇದ್ದಿರಬಹುದು. ನಾಗವರ್ಮ ಬ್ರಾಹ್ಮಣನಾಗಿದ್ದು ಅವನ ರಾಜನೂ ಬ್ರಾಹ್ಮಣನೇ ಆಗಿರಬಹುದಾದ್ದರಿಂದ ಪಂಪ, ರನ್ನರಂತೆ ಧರ್ಮಕ್ಕಾಗಿ ಒಂದು, ರಾಜನಿಗಾಗಿ ಒಂದು ಕಾವ್ಯ ಬರೆಯುವ ದ್ವಂದ್ವಕಾಡಿರಲಿಕ್ಕಿಲ್ಲ. ಅದು ಅಲ್ಲದೇ 'ವೀರಯುಗ'ವೆಂದು ಹೆಸರಾದ ಹತ್ತನೇ ಶತಮಾನದಲ್ಲಿ ನಾಗವರ್ಮ ಪ್ರೇಮ ಕಾವ್ಯವನ್ನು ಆರಿಸಿಕೊಂಡಿರುವುದಕ್ಕೆ ಬೇರೆ ಕಾರಣವೂ ಇರಬಹುದು. ಅಥವಾ ಕಾರಣ ಇಲ್ಲದೆಯೂ ಇರಬಹುದು. ಆದರೆ ಜಾತಿ ವ್ಯವಸ್ಥೆಯನ್ನು ಪೋಷಿಸುವಲ್ಲಿ ಮುಖ್ಯವಾಗಿ ಶೂದ್ರ ಜನಾಂಗಗಳ ಕುರಿತು ವೈದಿಕದ ವ್ಯವಸ್ಥೆಯನ್ನೇ ಮುಂದುವರಿಸಿದ್ದಾನೆ.

ಕಾದಂಬರಿಯಲ್ಲಿ ಗಿಳಿಯನ್ನು ಪಂಜರದಲ್ಲಿ ಹಿಡಿದು ಶೂದ್ರರ ರಾಜನಿಗೆ ಕೊಡಲು ಓರ್ವ ಚಾಂಡಾಳ ಕನ್ಯೆ ಬರುತ್ತಾಳೆ. ಅವಳು ಚಾಂಡಾಲಳಾದ್ದರಿಂದ ವೈದಿಕ ಧರ್ಮದ ವ್ಯವಸ್ಥೆಯಂತೆ ಅಸ್ಪೃಶ್ಯಳು. ಆದರೆ ಕವಿ ಅವಳ ಸೌಂದರ್ಯವನ್ನು ಅತಿ ಚಪಲತೆಯಿಂದ ವರ್ಣಿಸುತ್ತಾನೆ. ಅವಳು ಲಕ್ಷ್ಮಿಯಂತೆ, ಅಕ್ಷತ ರೂಪ ಸಂಪನ್ನೆ, ಮಧುಮಾಸ ಕುಸುಮ ಸಮೃದ್ಧಿಯಂತೆ, ಮದನ ಚಾಪಲತೆಯಂತೆ -ಹೀಗೆ ಅವಳನ್ನು ವರ್ಣಿಸುತ್ತಾನೆ. ಮಧ್ಯೆಯೇ ಮಾತುಂಗ ಕುಲದೂಷಿತೆ' ಎಂದು ಹೇಳುವುದನ್ನು ಮರೆಯುವುದಿಲ್ಲ. ಅವಳು ಬ್ರಹ್ಮನ ಶ್ರೇಷ್ಠ ಶೃಂಗಾರ ಕೃತಿ ಎಷ್ಟೆಂದರೆ ಅವನು ಮುಟ್ಟದೇ ನಿರ್ಮಿಸಿದ್ದಾನೆ. ಮುಟ್ಟಿದರೆ ಮಾಸಿ ಬಿಡುತ್ತಿತ್ತು. ಇಷ್ಟೆಲ್ಲ ಮಾಡಿದ ಬ್ರಹ್ಮ ಒಂದರಲ್ಲಿ ತಪ್ಪಿದ್ದಾನೆ. ಅದೆಂದರೆ ಅವಳನ್ನು ಅಂತ್ಯಜರಲ್ಲಿ ಹುಟ್ಟಿಸಿದ್ದಾನೆ.

ಇಲ್ಲಿ ಮುಖ್ಯವಾದ ಎರಡು ವಿಚಾರಗಳಿವೆ. ಚಾಂಡಾಲ ಕನ್ಯೆ ಸ್ಪರ್ಶಯೋಗ್ಯ ವಲ್ಲದಿದ್ದರೂ ಕುರೂಪಿಯಲ್ಲ. ಆದರೆ ಅಷ್ಟೊಂದು ಸೌಂದರ್ಯ ಸ್ಪರ್ಶ ಸಂಭೋಗಕ್ಕೆ ಯೋಗ್ಯವಲ್ಲ ಎಂಬುದನ್ನು ಹೇಳಿದಾಗ ನೇತ್ರ ಮತ್ತು ಶ್ರೋತ್ರ ಸಂಭೋಗ ತ್ಯಾಜ್ಯವಾಗುವುದಿಲ್ಲ. (ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿ ಚಾಂಡಾಳ ಕನ್ಯೆಯರು ನೋಡಿದ ಕಣ್ಣಿಗೆ ಹೊಲೆಯಿಲ್ಲ ಕೇಳಿದ ಕಿವಿಗೆ ಹೊಲೆಯಿಲ್ಲ ವಾಸಿಸಿದ ನಾಸಿಸಕೆ ಹೊಲೆಯಿಲ್ಲ ಎಂದು ಮುಟ್ಟಲು ಮಾತ್ರ ಹೊಲೆಯೇ ಎಂದು ಪ್ರತಿಭಟಿಸಿದ್ದನ್ನು ನೋಡಬಹುದು) ಇವೆಲ್ಲಾ ನಡೆದಿವೆ ಎಂದೇ ಅರ್ಥ. ಅಂದರೆ ಹೀಗೆ ಮುಟ್ಟಬಾರದ ಜಾತಿಯಲ್ಲಿ ಬ್ರಹ್ಮ ಅವಳನ್ನು ಹುಟ್ಟಿಸಿದ್ದು ಈಗ ತೊಂದರೆಗೆ ಕಾರಣವಾಗಿದೆ. ಯಾಕೆಂದರೆ ಈ ಎಲ್ಲ ಸೌಂದರ್ಯ ಮೇಲು ವರ್ಣದವರಿಗೇ ಇರಬೇಕೇ ಹೊರತು ಅಸ್ಪೃಶ್ಯರಿಗೆಲ್ಲ ತಕ್ಕುದಲ್ಲ. ಹೆಣ್ಣು ಭೋಗದ ವಸ್ತುವಲ್ಲದೇ ಬೇರೆಯಿಲ್ಲ. ಇಲ್ಲಿಯೂ ಹೊಲೆತನಕ್ಕೆ ಒಳ್ಳೆಯ ರೂಪವೂ ಸಲ್ಲ ಎಂಬ ಅಭಿಪ್ರಾಯವಿದೆ. ಹಾಗಾದರೆ ವೈದಿಕದ ವ್ಯವಸ್ಥೆಯ ವಿಧಿಯಾಗಿರುವ ಬ್ರಹ್ಮ ಅಸ್ಪೃಶ್ಯರಲ್ಲಿ ಅಂಥ ರೂಪವನ್ನು ತುಂಬುವಷ್ಟು ದಡ್ಡನೇ? ಅಥವಾ ರೂಪಕ್ಕೆ ಜಾತಿಯಿಲ್ಲ ಎಂದು ಜಾತಿಯ ಕಟ್ಟುಪಾಡುಗಳನ್ನು ಪ್ರತಿಭಟಿಸಿದ್ದಾನೆಯೇ? ಬ್ರಹ್ಮ ದಡ್ಡನಾದರೂ ನಾಗವರ್ಮ ದಡ್ಡನಲ್ಲ. ನಿಶ್ಚಯವಾಗಿ ಅವಳು ಚಾಂಡಲಳೇ ಅಲ್ಲ. ಅವಳು ಲಕ್ಷ್ಮಿದೇವಿಯೇ ಆಗಿದ್ದು ಕ್ಷತ್ರಿಯ ಚಾಂಡಾಲ ಕನ್ಯೆಯಾಗಿದ್ದಾಳೆ. ಆದ್ದರಿಂದಲೇ ಅವಳಿಗೆ ಉಚ್ಚವರ್ಣೀಯರಿಗೆ ಲಭ್ಯವಾಗಬೇಕಾದ ಸೌಂದರ್ಯ ಪ್ರಾಪ್ತವಾಗಿದೆ. ಈ ರಾಜನಿಗೂ ಸಭಾಸದ ಸದಸ್ಯರಿಗೂ, ಪಂಡಿತರಿಗೂ ಮನೋಲ್ಲಾಸಯುಕ್ತವಾದ ಕಾವ್ಯವನ್ನು ಹೆಣೆದಿದ್ದಾನೆ. ಬ್ರಾಹ್ಮಣ-ಕ್ಷತ್ರಿಯ ಮೈತ್ರಿಯನ್ನು ದೃಢ ಪಡಿಸಲಾಗಿದೆ. ರನ್ನ ಜೈನಧರ್ಮದಲ್ಲಿ ಹೆಚ್ಚು ನಿಷ್ಠೆ ಹೊಂದಿದವನಾದರೂ ಉಭಯ ಕವಿ ರತ್ನವಾಗಲು ರಾಜಾಶ್ರಯವನ್ನು ಹೊಂದಿ ಬಾಳಿದ್ದಾನೆ. ರನ್ನನ ಕಾಲ ಕೂಡ ಅಂದರೆ ಬಹುಶಃ ಪ್ರಾದೇಶಿಕವಾಗಿ ಹೋರಾಟದ ಯುಗವೇ ಆಗಿದೆ. ರಾಷ್ಟ್ರಕೂಟರ, ಗಂಗ, ಚಾಲುಕ್ಯರ ಕಾಳಗದ ಕಣ ಅದಾಗಿದೆ. ಇವನ ದಾರಿಯೂ ಪಂಪನದೇ ಆಗುತ್ತದೆ. ಆದರೆ ಜೈನಧರ್ಮ ನಶಿಸುತ್ತಿರುವ ನೋವು ಪಂಪನಿಗಿರಲಿಲ್ಲವೆಂದು ತೋರುತ್ತದೆ. ಆದರೆ ರನ್ನನ ಕಾಲಕ್ಕೆ ಆ ಘಟ್ಟ ಸಮೀಪಿಸಿತ್ತೆನ್ನ ಬಹುದಾಗಿದೆ. ಪಂಪ ಹೇಗೆ ಪ್ರಾರ್ಥನೆಯಲ್ಲಿ ರಾಜನನ್ನೇ ದೇವರಿಗೆ ತಗಲಿಸಿ ಸ್ತುತಿಸುತ್ತಾನೋ ಹಾಗೆಯೇ ರನ್ನನೂ ಮಾಡುತ್ತಾನೆ. ಇದಕ್ಕೆಲ್ಲ ಆತನ ಜೈನನಿಷ್ಠೆ ಅಡ್ಡಬರುವುದಿಲ್ಲ. ನೆನಪಿಡಬೇಕಾದ ಸಂಗತಿಯೆಂದರೆ ಈಗ ಆತ ರಾಜಾಶ್ರಯವನ್ನು ಹೊಂದಿದ್ದಾನೆ.

ಹನ್ನೆರಡನೇ ಶತಮಾನದವನೆಂದು ತಿಳಿದ ಬ್ರಾಹ್ಮಣ ದುರ್ಗಸಿಂಹ ತನ್ನ ಕರ್ನಾಟಕ ಪಂಚತಂತ್ರದಲ್ಲಿ

"ಬ್ರಾಹ್ಮಣನಿಗೆ ಅಗ್ನಿಯೇ ಗುರು
ಕ್ಷತ್ರಿಯ ವೈಶ್ಯ ಶೂದ್ರಗಳ ಬ್ರಾಹ್ಮಣನೇ ಗುರು"

ಎಂದು ಹೇಳಿರುವ ವಿಚಾರದ ವಿವರಣೆಯನ್ನು ಡಾ.ಮ.ನ. ಜವರಯ್ಯ ತಮ್ಮ ಪರಂಪರೆ ಹಾಗೂ ದಲಿತ ಬಂಡಾಯ ಸಾಹಿತ್ಯ ಸಮಗ್ರ ಅಧ್ಯಯನ' ಗ್ರಂಥದಲ್ಲಿ (೧೯೯೪; ೨೭ ವಿವರವಾಗಿ ಚರ್ಚಿಸುತ್ತಾರೆ.)

ಈ ಹಿನ್ನೆಲೆಯಲ್ಲಿ ವಚನಕಾರರನ್ನು ನೋಡಬೇಕು. ಒಂದು ಚಳುವಳಿಯ ಅಂಗವಾಗಿ ಮೂಡಿಬಂದ ನೇತಾರ ಬಸವಣ್ಣ ತನ್ನನ್ನು ಅಂತ್ಯಜರಲ್ಲಿ ಗುರುತಿಸಿ ಕೊಳ್ಳುತ್ತಾನೆ. ತಾನು ಅಂತ್ಯಜರ ಮಗ ಎಂದು ಕೂಡ ಹೇಳಿಕೊಳ್ಳುತ್ತಾನೆ.

ವಚನಕಾರರಲ್ಲಿ ರಾಜಾಶ್ರಿತರಿಲ್ಲ. ರಾಜಾಶ್ರಯ ಹೊಂದಿ ಕಾವ್ಯ ರಚನೆ ಮಾಡಿ ಸಂಪತ್ತು ಮತ್ತು ಕೀರ್ತಿಯನ್ನು ಗಳಿಸಲು ಹೊರಟವರಲ್ಲ. ಅವರಲ್ಲಿ ಹೆಚ್ಚು ಜನ ಕಾಯಕದವರು. ಕಾಯಕದ ಚಳುವಳಿ ಎಂದೇ ಅದರ ಹೆಸರು. ಆದ್ದರಿಂದ ಅವರು ಇಡೀ ವ್ಯವಸ್ಥೆಯ ವಿರುದ್ಧ ಸಿಡಿಯಲು ಸಾಧ್ಯವಾಯಿತು. ಬ್ರಾಹ್ಮಣ್ಯವನ್ನು ನಿರಾತಂಕವಾಗಿ ಖಂಡಿಸುತ್ತಾರೆ. ದೇವಾಲಯವನ್ನು ಖಂಡಿಸುತ್ತಾರೆ. ದೇವರನ್ನು ದೇಹದಲ್ಲೇ ಆಹ್ವಾನಿಸುತ್ತಾರೆ. ಯಾವ ಮಾತಿನಿಂದ ಅಂತ್ಯಜ, ಕನಿಷ್ಠ ಎನ್ನುತ್ತಾರೋ ಅದೇ ಪಾತ್ರೆಯಲ್ಲಿ ಅವರು ಅಳೆದು ತಿರುಗುಬಾಣ ಬಿಡುತ್ತಾರೆ. ಮೇಲ್ವರ್ಗದ ವಿಶ್ವಾಸಘಾತತನವನ್ನು ಸ್ಪಷ್ಟವಾಗಿ ಬಯಲು ಮಾಡುತ್ತಾರೆ.

ಇದರ ಅರ್ಥ ನಮ್ಮ ಪ್ರಾಚೀನ ಕವಿಗಳೆಲ್ಲ (ಕಾವ್ಯಗಳೆಲ್ಲ) ತಿರಸ್ಕಾರ ಯೋಗ್ಯರು ಎಂದರ್ಥವಲ್ಲ. ಅದು ಕನ್ನಡ ಕಾವ್ಯಗಳ ಮುತ್ತು ರತ್ನಗಳೇ; ಅಭ್ಯಾಸ, ಅನುಸ್ವಾದಯೋಗ್ಯವೆ. ಯಾಕೆಂದರೆ ಅಲ್ಲಿ ದುಡಿಯುವ ಮಾನವರ ಒಳತೋಟ, ಕಲಾಪರಾಕಾಷ್ಠೆ, ಪಾತ್ರ ಚಿತ್ರಣ, ಬದುಕಿನ ವಿವರ ಆ ಮುಖಾಂತರ ಮಾಡುವ ಸಾಂಸ್ಕೃತಿಕ ಪರಿಣಾಮ ಕೂಡ ಮುಖ್ಯವೆ. ಯಾಕೆಂದರೆ ಯಾವುದೇ ಕಾಲದ ಕೃತಿಯನ್ನು ಅದೇ ಚಾರಿತ್ರಿಕ ಸಂದರ್ಭದಲ್ಲಿಟ್ಟು ನೋಡಬೇಕೇ ಹೊರತು ತಿರಸ್ಕರಿಸುವುದಲ್ಲ. ಆದರೆ ಅದೇ ಹೊತ್ತಿಗೆ ಅದರ ಕೊರತೆ ಕೂಡ ಗಮನಿಸಬೇಕಾದುದು. ನಾನು ಇಲ್ಲಿ ತೆಗೆದುಕೊಂಡುದು ಕವಿಯ ನಿರಂಕುಶತ್ವಕ್ಕೆ ಸಂಬಂಧಿಸಿದ್ದು. ಯಾವುದೇ ಕಾಲದ ಸಾಹಿತ್ಯ ಆ ಕಾಲದ ಮುಖ್ಯ ವೈಚಾರಿಕ ವಾಹಿನಿಯಿಂದ ಪರಿಣಾಮಗೊಂಡು ರೂಪ ತಳೆಯುತ್ತದೆ. ಅಷ್ಟು ಮಾತ್ರವಲ್ಲ ಅದು ಕವಿ ನಿಂತ ನೆಲೆಯ ದರ್ಶನವನ್ನು ತೋರಿಸುತ್ತದೆ ಎಂಬುದಾಗಿದೆ. ವಚನಸಾಹಿತ್ಯವನ್ನು ಎಷ್ಟೇ ಪ್ರಶಂಸಿಸಿದರೂ ಅದರದ್ದೇ ಆದ ಮಿತಿಗಳಿವೆ. ಅಂದರೆ ಮಿತಿಗಳನ್ನು ಮೀರುತ್ತ ನಮ್ಮ ಸ್ವಾತಂತ್ರ್ಯವನ್ನು ವಿಸ್ತರಿಸಿಕೊಳ್ಳುತ್ತ ಹೋಗುವುದೇ ಜೀವದ ರೀತಿಯೂ, ವೈಜ್ಞಾನಿಕ ವಿಧಾನವೂ ಆಗಿದೆ. ನಮ್ಮ ಬದುಕಿನ ಸಾಹಿತ್ಯ ಮೌಲ್ಯ ನಿರ್ಧಾರವಾಗಬೇಕಾದುದೇ ನಾವು ನಮ್ಮ ಸ್ವಾತಂತ್ರ್ಯವನ್ನು ವಿಸ್ತರಿಸಿಕೊಳ್ಳಲು ನಮ್ಮ ಮಿತಿಯನ್ನು ಮೀರುವ ಸಂಘರ್ಷದ ದಾಖಲೆಯಿಂದ.

*

ಸಂಕ್ರಾಂತಿ, ತಲೆದಂಡ ಮತ್ತು ಮಹಾಚೈತ್ರದಲ್ಲಿ ಪ್ರತಿಫಲಿಸಿದ ವೈಚಾರಿಕತೆಯ ಸ್ವರೂಪ

ಸಂಕ್ರಾಂತಿ, ತಲೆದಂಡ ಮತ್ತು ಮಹಾಚೈತ್ರ ನಾಟಕಗಳ ವಸ್ತು ಹನ್ನೆರಡನೇ ಶತಮಾನದಲ್ಲಿ ಕರ್ನಾಟಕದಲ್ಲಿ ಜರುಗಿದ ವೀರಶೈವ ಧಾರ್ಮಿಕ ಚಳುವಳಿಗೆ ಸಂಬಂಧಿಸಿದ್ದಾಗಿದೆ. ೧೨ನೇ ಶತಮಾನ ಅನೇಕ ಕಾರಣಗಳಿಂದ ಕುತೂಹಲ ಕಾರಕವಾಗಿದೆ. ಅಂದರೆ ವಚನ ಚಳವಳಿಯ ಬೆನ್ನು ಹಿಡಿದು ಒಳಪ್ರವೇಶಿಸಿದರೆ ಒಂದು ರಾಜಕೀಯ ಕ್ರಾಂತಿಯ ಮೂಲಬಿಂದುವಿಗೆ ತಲ್ಪುಪುತ್ತೇವೆ. ಈಗಿನ ಅರ್ಥದಲ್ಲಿ ನಾನು ಅದಕ್ಕೆ 'ಕ್ರಾಂತಿ' ಎಂದು ಕರೆಯಲಾರೆನಾದರೂ ಒಂದು ಚಾರಿತ್ರಿಕ ಮಿತಿಯಲ್ಲಿ ನಡೆದ ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ಮಹಾಸಂಘರ್ಷವನ್ನು ವಿಶ್ಲೇಷಿಸಿದಾಗ ನಿಶ್ಚಯವಾಗಿಯೂ ಅಲ್ಲಿ ಕ್ರಾಂತಬಿಂದುವನ್ನು ಕಾಣುತ್ತೇವೆ.

ಒಂದು ಉನ್ನತವಾದ ಪರಂಪರೆಯನ್ನು ಹೊಂದಿದ ವರ್ತಮಾನ ತನ್ನ ಬಲವರ್ಧನೆಗಾಗಿಯೇ ತನ್ನ ವೈಚಾರಿಕ ದೃಷ್ಟಿಯ ಪೀನ ಮಸೂರದ ಮುಖಾಂತರ ಹಿಂದೆ ಹಿಂದೆ ನೋಡಲು ಬಯಸುತ್ತದೆ. ಆದರೆ ಇದು ಗತಕಾಲದ ಹಳವಂಡವಾಗಿಯಲ್ಲ, ಬದಲಾಗಿ ಒಂದು ಮಿತಿಯಲ್ಲಿ ವರ್ತಮಾನವನ್ನೇ ಹಿಂಜಿ ನೋಡಿದಂತೆ. ಇಂಥ ಒಂದು ದೃಷ್ಟಿ ಈ ಮೇಲಿನ ಮೂರು ನಾಟಕಗಳಲ್ಲಿ ಇವೆ. ಇವುಗಳ ಅಭ್ಯಾಸ ಸಾಹಿತ್ಯಿಕ ಮತ್ತು ಸಾಹಿತ್ಯೇತರವಾದ ಮೂಲಗಾಮಿ ನಮೂನೆಯನ್ನು ಪ್ರಸ್ತುತಪಡಿಸುತ್ತದೆ.

ಸಂಕ್ರಾಂತಿ

ಸಂಕ್ರಾಂತಿ ಪಿ. ಲಂಕೇಶರ ನಾಟಕ. ಐದು ದೃಶ್ಯಗಳನ್ನು ಹೊಂದಿದ ತೊಂಬತ್ತಾಲ್ಕು ಪುಟಗಳುಳ್ಳ ಪೂರ್ಣಪ್ರಮಾಣದ ನಾಟಕ. ನಾಟಕದ ಘಟನೆ ಶುರುವಾಗುವುದೇ ದಲಿತ ಮುದುಕನಾದ ಉಜ್ಜನ ಹಾಡು-ಸಂಭಾಷಣೆಯಿಂದ. ಈ ನಾಟಕದ ಘಟನಾವಳಿ ಬಸವ ಚಳವಳಿಯ ಪರಿಣಾಮವಾಗಿ ನಡೆದ ಹರಳಯ್ಯ- ಮಧುವರಸರ ಮಕ್ಕಳ ಮದುವೆಯ ಸುತ್ತ ಹಬ್ಬಿದೆ.

ಮೊದಲ ಪ್ರಕಟನೆ: ಮಂಗಳೂರಿನ ದೃಷ್ಟಿ ಮತ್ತು ಸಂಕ್ರಮಣದಲ್ಲಿ

ಉಜ್ಜನ ಮಗ ರುದ್ರ. ಉಜ್ಜ ಕುಡುಕ ಮತ್ತು ರಸಿಕ. ಅವನ ಮಗನಾದರೂ ಬಸವಣ್ಣನವರ ಮಹಾಭಕ್ತ. ಈ ರುದ್ರನಿಗೇ ಮಧುವರಸ (ಬ್ರಾಹ್ಮಣ)ನೆಂಬ ಶರಣನ ಮಗಳು 'ಉಷಾ' ಜೊತೆಗೆ ವಿಲೋಮ ವಿವಾಹ ನಿಶ್ಚಯವಾಗುತ್ತದೆ. ಇದೊಂದು ಅಸಾಮಾನ್ಯ ಘಟನೆ. ಇದರಿಂದ ಅಂದಿನ ವೈದಿಕ ಸಮಾಜ ಕೆರಳುತ್ತದೆ. ರಾಜಕೀಯವನ್ನು ತನ್ನ ಭದ್ರಮುಷ್ಟಿಯಲ್ಲಿ ಹಿಡಿದುಕೊಂಡಿರುವ ಪುರೋಹಿತಶಾಹಿ ಇದನ್ನು ರಾಜಕೀಯಗೊಳಿಸುತ್ತದೆ. ಹಾಗೂ ರಾಜನಾದ ಬಿಜ್ಜಳ ತನ್ನ ಅಧಿಕಾರ- ಮುಖ್ಯವಾಗಿ ಅದನ್ನು ಉಳಿಸಿಕೊಳ್ಳುವುದಕ್ಕೆ- ಅವಶ್ಯಕವಾಗಿ ಈ ವಿಲೋಮ ವಿವಾಹವನ್ನು ತಡೆಯುತ್ತಾನೆ. ಮಾತ್ರವಲ್ಲ ರುದ್ರನ ಹತ್ಯೆ ಮಾಡಿಸುತ್ತಾನೆ. ಇಲ್ಲಿಗೆ ನಾಟಕ ಮುಗಿಯುತ್ತದೆ.

ನಾಟಕ ಪ್ರಾರಂಭವಾಗುವುದು ಉಜ್ಜನ ಮತ್ತು ಕೆಂಚನ ಪ್ರವೇಶದಿಂದ, ಉಜ್ಜ, ಕೆಂಚ ಮತ್ತು ಇನ್ನು ಕೆಲವರು ಸಂಭಾಷಣೆಯಿಂದ ನಮಗೆ ಕತೆಯ ಜಾಡು ಪರಿಚಯವಾಗುತ್ತದೆ. ಇದರ ಸ್ವರೂಪ ಎರಡು ರೀತಿಯಲ್ಲಿ ಅಭಿವ್ಯಕ್ತವಾಗುತ್ತದೆ. ಒಂದು, ಬಸವಣ್ಣ ಅಸ್ಪೃಶ್ಯರೆನ್ನುವವರನ್ನು, ಬಹುಶಃ ಅಧಿಕ ಸಂಖ್ಯೆಯಲ್ಲಿ, ಶರಣರನ್ನಾಗಿ ಮಾಡಿದ್ದಾರೆ. ಶರಣನಾದವರು ಮಾಂಸ, ಹೆಂಡ, ಇಂಥವುಗಳನ್ನು ತ್ಯಜಿಸಿ ಅಹಿಂಸಾಪರರಾಗಿರಬೇಕು. ಆದರೆ ಉಜ್ಜ ಹೆಂಡ, ಮಾಂಸ ಮತ್ತು ಅವನ ಪ್ರಿಯ ಸಖಿ 'ಪಾರಕ್ಕನ'ನ್ನು ಬಿಡುವಹಾಗಿಲ್ಲ. "ಬಸಣ್ಣ ಬರ್‍ಲಿ ಕಸಣ್ಣ ಬರ್‍ಲಿ. ಮೂಡೋ ಹೊತ್ತು ಮೂಡೇ ಮೂಡ್ತತಿ. ರಾಗಿ ಬೀಸೊ ಕೈ ಬೀಸ್ತಾನೆ ಇರ್‍ತತಿ... ಹೇಳ್ರಪಾ ಹಂದಿ ಬಂತು, ಗದ್ದೆ ಹೊಗತು ಅಂತ ಇಟ್ಕೊ-ಏನಪಾ ಮಾಡ್ತಿ ಆವಾಗ? 'ಎಲಾ ಹಂದ್ಯಪ್ಪ, ಬಸಣ್ಣ ಕೊಲಬ್ಯಾಡ ಅಂದಾರೆ' ಅಂತಿಯಾ? 'ನನ್ನ ಬೇಕಾದರೆ ಕೊಲ್ಲು ಅಂತಿಯಾ?' (ಪುಟ. ೧೪) ಎನ್ನುತ್ತಾನೆ. ಇಡೀ ದೃಶ್ಯವೂ ರಂಜಕವಾಗಿ ನಡೆಯುತ್ತದೆ. ಇಲ್ಲಿ ನಾಟಕಕಾರನ ದೃಷ್ಟಿ ನಿರೂಪಣೆ ಹೀಗಿದೆ. ಅ, ಇಲ್ಲಿ ಒಂದು ಸಂಸ್ಕೃತೀಕರಣದ ಒತ್ತಾಯ ನಡೆಯುತ್ತದೆ. ಇಂಥದ್ದೊಂದು ಬಸವಣ್ಣರ ವ್ಯಕ್ತಿ ಪ್ರಭಾವದಿಂದ ನಡೆಯುತ್ತದೆಯೇ ಹೊರತು ನಿಜ ಪರಿವರ್ತನೆ ಅಲ್ಲ.

ಆ: ಇಂಥ ಬದಲಾವಣೆ ಜೀವನದಲ್ಲಿ ಯಾವ ಪರಿವರ್ತನೆಯನ್ನೂ ತರುವುದಿಲ್ಲ. ಹೆಚ್ಚೆಂದರೆ 'ರುದ್ರ'ನ ಹಾಗೆ ಶೂದ್ರಶಕ್ತಿಯನ್ನು ಕಳೆದುಕೊಂಡ ನಿರ್ವೀರ್ಯ ವ್ಯಕ್ತಿಯನ್ನಾಗಿ ಮಾತ್ರ ಮಾಡುತ್ತದೆ.

ಇ: ದಲಿತ ಯುವಕ ರುದ್ರನನ್ನು ಬ್ರಾಹ್ಮಣ ಹುಡುಗಿ ಪ್ರೀತಿಸಿದ್ದಾಳೆ. ಈ ಮೂರೂ ಒಂದು ಸಂಕೀರ್ಣ ಸಂದರ್ಭ. ಜಡವಾದ ವರ್ಣಸಮಾಜವೊಂದು ಚಲನಶೀಲವಾಗತೊಡಗಿದೆ. ಅದೇ ಹೊತ್ತಿಗೆ ಅದು ಆರ್ಥಿಕ ಶಕ್ತಿಯಿಂದ ಮತ್ತು ಸ್ವಯಂಜಾಗೃತಿಯಿಂದ ಪೋಷಣೆ ಪಡೆಯುತ್ತಿಲ್ಲ.

ಎರಡಯ ದೃಶ್ಯದಲ್ಲಿ ಉಷಾ ರುದ್ರರ ಸಾಮೀಪ್ಯ ಸಂಬಂಧವಿದೆ. ಅದೇ ಹೊತ್ತಿಗೆ ಅದರ ವಿರುದ್ಧ ಮುಂದೆ ನಡೆಯಬಹುದಾದ ಅನಾಹುತದ ಬೀಜವಿದೆ. ಉಷೆ ರುದ್ರನನ್ನು ಪ್ರೀತಿಸಿದ್ದು ಅವನ ಶೂದ್ರತ್ವಕ್ಕಾಗಿ. ಈ ಅಭಿವ್ಯಕ್ತಿಯನ್ನು ಪ್ರತಿಮಾ ವಿಧಾನದಿಂದ

ನಿರೂಪಿಸಲಾಗಿದೆ. ತುಂಬ ಕಲಾತ್ಮಕವಾದ ನಿರೂಪಣಾ ಸಂದರ್ಭ ಇದು. ಉಷೆ ರುದ್ರನ (ಶರಣು) ಪರಿವರ್ತನೆಯನ್ನು ಹೀಯಾಳಿಸುತ್ತ ಹೋಗುತ್ತಾಳೆ. ಅವನ ಸಿಟ್ಟನ್ನು ಕೆರಳಿಸುತ್ತಾಳೆ. ನಿಜ ರುದ್ರನನ್ನು (ಶೂದ್ರ ರುದ್ರನನ್ನು) ಹೊರಗೆಳೆಯುತ್ತಾಳೆ. ಅವರ ಸಂಭಾಷಣೆಯಲ್ಲಿ ಬರುವ ಮಾತುಗಳು ಹೀಗಿವೆ.

ರುದ್ರ : ನಿನಗೆ ಹ್ಯಾಂಗ ಗೊತ್ತಾಗಬೇಕು? ನಿನಗ ಹ್ಯಾಂಗಾದರೂ ಗೊತ್ತಾಗ ಬೇಕು? ಇವತ್ತು ಹೋದೀತು ಕತ್ತಲು, ನಾಳೆ ಬೆಳಕು ಹರದು ಎಲ್ಲ ಬೆಳ್ಳ ಬೆಳಗಾಗಿ ಎಲ್ಲ ನೋಡೇವು ಅಂತ ಕಾಯ್ತಿದ್ದೇವಿ; ನಾವೆದ್ದವೊ ಅಂದ್ರೆ ಕೆಳಗೆ ಹಾಕಿಹಾಕಿ ಅಮುಕ್ತೀರಿ ನೀವೆಲ್ಲ! ನಿಮ್ಮನ್ನೆಲ್ಲ ಗೊದ್ದ ಹೊಸಕಿದಂಗೆ ಹೊಸಕಿ ಹಾಕ್ತೀವಿ ನಾವು! ರಕ್ತ ಹೀರಿ...

ಉಷಾ : ರಕ್ತ ಹೀರಿ! ರಕ್ತ ಹಿರೋ ಜನ ನೋಡಿದ್ದೇನೆ ನಾನೂ! ವಿಭೂತಿ ಕಾವಿ ಹಾಕ್ಕೊಂಡು ಅನ್ನ ಛತ್ರದ ಹತ್ತಿರ ನಿಂತು ಬಸವಣ್ಣ ಬಸವಣ್ಣ ಅಂತ ಗೋಳಿಡೊ ಜನ ನೋಡಿದೆನೆ ನಾನು! ಸಂಸ್ಕೃತದ ಮಾತನ್ನೇ ಕನ್ನಡದಲ್ಲಿ ಹೇಳಿಕೊಂಡು ಕುಣಿದಾಡೊ ಜನ ನೋಡಿದೇನೆ ನಾನು! (ಪುಟ ೨೭)

ಈ ಸಂಭಾಷಣೆಯ ರುದ್ರನ ಮಾತಿನಲ್ಲಿ ಬದಲಾವಣೆಯ ಆಶಯ ವ್ಯಕ್ತವಾದರೆ ಉಷೆಯ ಮಾತಿನಲ್ಲಿ ಅದರ ವಿಫಲತೆಯ ಕಾರಣ ಚಿತ್ರವಿದೆ. ಹೀಗೆ ರೇಗಿಸುತ್ತ ಹೋಗುವ ಉಷೆ ರುದ್ರನ ಆಕ್ರಮಣದಲ್ಲಿ ನಿಜವನ್ನು ಕಾಣುತ್ತಾಳೆ. ಅಂದರೆ ಮೊದಲ ದೃಶ್ಯದ ವೈಚಾರಿಕತೆ ಇಲ್ಲಿ ಪ್ರಖರಗೊಂಡಿದೆ. ಮತ್ತು ನಾಟಕದ ವೈಚಾರಿಕ ನೆಲೆ ನಿಂತಿದೆ.

ಮೂರನೇ ದೃಶ್ಯದಲ್ಲಿ ವೈದಿಕರ ಪ್ರತಿರೋಧವಿದೆ. ಹಾಗೆಯೇ ಬಿಜ್ಜಳನ ಪ್ರವೇಶದಿಂದಾಗಿ ಸಮಸ್ಯೆ ರಾಜಕೀಯಕ್ಕೆ ಒಳಗಾಗುತ್ತದೆ.

ಬಿಜ್ಜಳ : ದಿನ ಬೆಳಗಾದರೆ ಬಂದು ಕಿರುಚಾಡುವುದು ನಿಮ್ಮ ಉದ್ಯೋಗವಾಗಿ ಹೋಗಿದೆ. ಮೊನ್ನೆ ಜೈನರು, ನಿನ್ನೆ ಶೈವರು, ಇವತ್ತು ನೀವು.....

ಬ್ರಾಹ್ಮಣ೩: ಪ್ರಭುಗಳು ಮನ್ನಿಸಬೇಕು. ಪ್ರಮಾದವಾಗಿದೆ, ಸನಾತನ ಧರ್ಮಕ್ಕೆ ಕಳಂಕ ಬಂದಿದೆ.

ಬಿಜ್ಜಳ : ಧರ್ಮ! ಧರ್ಮ! ಅದಕ್ಕೆ ಯಾವುದಾದರೂ ಒಂದು ಕಳಂಕ ಯಾವಾಗಲೂ ಬಂದೇ ಬರುತ್ತೆ. ಮನುಷ್ಯರಿಗೇನಾಗಿದೆ ಹೇಳು. (ಪು. ೩೬)

ಬಿಜ್ಜಳನ ಎರಡನೇ ಮಾತು ತುಂಬ ಧ್ವನಿಪೂರ್ಣವಾಗಿದೆ. ಥಟ್ಟನೆ ನಾಟಕದಿಂದ ಎಚ್ಚೆತ್ತು ನಮ್ಮ ಸುತ್ತಲು ನೋಡಿಕೊಳ್ಳುವಷ್ಟು ಪ್ರಭಾವಶಾಲಿಯಾಗಿದೆ. ನಾಲ್ಕನೇ ದೃಶ್ಯದಲ್ಲಿ ಇಡಿಯಾದ ರಾಜಕೀಯ ಸಮಸ್ಯೆಯ ಬೆಳವಣಿಗೆಯಾಗಿದೆ. ಬ್ರಾಹ್ಮಣರು ಶರಣರ ವಿರುದ್ಧ ರಾಜಕೀಯ ಪಿತೂರಿ ನಡೆಸುತ್ತಿದ್ದಾರೆ. ಇವರ ಅರಿವೂ ಬಿಜ್ಜಳನಿಗೆ ಇದೆ. ಆದರೆ ಅದು ಸರಳವಾದ

ಸಮ್ಮತಿಯಿಲ್ಲ. ಈಗ ಬಿಜ್ಜಳನ ಸಿಂಹಾಸನದ ಅಸ್ತಿತ್ವವೇ ಅಲುಗಾಡಹತ್ತಿದೆ. ಮುಂದಿನ ಎಲ್ಲ ಸಂಗತಿಗ ಬಸವಣ್ಣನವರ ಸಾಕ್ಷಿಯಲ್ಲೇ ನಡೆಯುತ್ತದೆ. ಇಲ್ಲಿಯೂ ಕೂಡ ಒಂದು ರೂಪಕದ ಮುಖಾಂತರ ಬಿಜ್ಜಳನ ಸಮಸ್ಯೆಯ ಸಂಕೀರ್ಣತೆಯನ್ನು ನಿರೂಪಿಸಲಾಗಿದೆ. ಅದೇ ಅಗ್ನಿರಾಜನ ಕತೆ.

ಇಲ್ಲಿ ಬಸವಣ್ಣನವರ ಚಳುವಳಿಯ ಹಿಂಸಾತ್ಮಕ ಸಂಗತಿಗಳ ದರ್ಶನ ಮಾಡಿಸಲಾಗಿದೆ. ಮತೀಯ ಗಲಭೆಯ ವಾರ್ತೆಯನ್ನು ರೂಪಿಸಲಾಗಿದೆ. ರುದ್ರ ಮತ್ತು ಉಷಾರ ಮದುವೆಯ ಪ್ರಕರಣ ಒಂದು ಪ್ರೇಮ ಪ್ರಕರಣವಾಗಿರದೆ ಜಾತಿಗಳ ದಬ್ಬಾಳಿಕೆ, ಅತ್ಯಾಚಾರ ಎಂದು ಬಿಜ್ಜಳ ಸಮಸ್ಯೆಗೆ ರೂಪಕೊಡುತ್ತಾನೆ. ಆದರೆ ಆ ವಿಕೃತಿಯನ್ನು ಬಸವಣ್ಣ ವಿರೋಧಿಸುತ್ತಾರೆ. ಬಸವಣ್ಣನವರ ಮಾತು ತುಂಬ ನಾಟಕೀಯವಾಗಿ ಮನಸ್ಸಿಗೆ ಕಿರಿಕಿರಿ ಕೊಡುತ್ತದೆ. ಮೇಲೆ ನಾನು ದಾಖಲಿಸಿದ ಬಿಜ್ಜಳನ ಮಾತು ವರ್ತಮಾನವನ್ನು ಗರ್ಭೀಕರಿಸಿಕೊಂಡು ಧ್ವನಿ ಪೂರ್ಣವಾಗಿದ್ದರೆ ಬಸವಣ್ಣನವರ ಇಲ್ಲಿಯ ಮಾತು ಬಿಸಿರಕ್ತದ ಕ್ರಾಂತಿಕಾರಿ ರಾಜಕಾರಣಿಯ ಭಾಷಣದಂತಿದ್ದು ಪ್ರಭಾವ ಹೀನವಾಗಿದೆ. ಸಮಸ್ಯೆಯ ಪ್ರಸ್ತುತತೆಯಿದ್ದರೂ ಬಸವಣ್ಣ ಮುಂದೆ ಸೋಲುತ್ತಾ ಹೋಗುತ್ತಾರೆ. ಒಂದು ಕಡೆ "ನಾನು ಜನರ ಜೊತೆಯಲ್ಲಿದ್ದೇನೆ, ನೆನಪಿರಲಿ, ಅವರ ಉಸಿರು ಲಯಬದ್ಧತೆ ಕೂಡ ನಾನು ಬಲ್ಲೆ" (೬೧) ಎಂದ ಬಸವಣ್ಣ ಇಲ್ಲಿ ಜನರನ್ನೇ ಅರಿಯದವರಾಗುತ್ತಾರೆ. ಬಿಜ್ಜಳ ಹೇಳುತ್ತಾನೆ "ನೀನು ಬ್ರಾಹ್ಮಣ! ಸಂಸ್ಕೃತದಿಂದ ರಾಜ ಮಹಾರಾಜರನ್ನು ಹತೋಟಿಯಲ್ಲಿಡುತ್ತಿ.... ಬ್ರಾಹ್ಮಣರ ಮಂತ್ರಗಳಂತೆಯೇ ಶರಣರ ವಚನಕೂಡ ಉತ್ತುಬೆಳೆಕೊಡಲಾರವು" (೬೩) ಮುಂದು ವರಿಯುತ್ತ "ಬಡವರ ಚಿಂದಿ ಬಟ್ಟೆಗಳನ ಮೇಲೆಕಣ್ಣು ನೆಟ್ಟ ನಿಮಗೆ ಅವರ ಗಂಧವತಿ ಪೃಥ್ವಿಯ ಇರುವು ಹೇಗೆ ತಿಳಿಯಬೇಕು!" (೭೧)

ಐದನೇ (ಕೊನೆ) ದೃಶ್ಯದಲ್ಲಿ ರುದ್ರ ಮತ್ತು ಉಷಾರ ಮಧ್ಯದ ಸಂಬಂಧದ ಬಗೆಗೆ ವಿಚಾರಣೆ ನಡೆಯುತ್ತದೆ. ವಿಚಾರಣೆಯ ಸಂದರ್ಭದಲ್ಲಿ ಹಿಂದೆ ಉಷಾ ರುದ್ರನ ಶೂದ್ರತ್ವವನ್ನು ಕೆರಳಿಸಿದ್ದ ಪ್ರತಿಮೆಯನ್ನೇ ಬಳಸಿಕೊಂಡಿದ್ದಾರೆ. ಬಿಜ್ಜಳ ಉಷೆಯನ್ನು ಕೇಳುತ್ತಾನೆ "ಹೇಳು, ರುದ್ರನದು ಪ್ರೇಮವೊ ಬಲತ್ಕಾರವೋ?"

ಉಷಾ : ಬಲತ್ಕಾರ.

ಇಲ್ಲಿಗೆ ರುದ್ರನಿಗೆ ಮರಣದಂಡನೆಯಾಗುತ್ತದೆ. ರುದ್ರನ ಅಪ್ಪ ಉಜ್ಜನ ಕರುಳ ವೇದನೆ ಚಿತ್ತವೇದಕವಾಗಿ ನಿರೂಪಿಸಲ್ಪಟ್ಟಿದೆ. ಬಸವಣ್ಣ ಅಧಿಕಾರ ಬಿಟ್ಟುಹೋಗುವ ವಿಚಾರ ಮೊದಲೇ ನಿರ್ಧಾರವಾಗಿದೆ. ಇಲ್ಲಿ ಮರು ವಿಚಾರವಿಲ್ಲ.

ಉಷೆ ಯಾಕೆ ಈ ಪ್ರೇಮ ಪ್ರಕರಣವನ್ನು 'ಬಲತ್ಕಾರ' ಎಂದಳು? ಅದನ್ನು ತುಂಬ ಕಲಾತ್ಮಕವಾಗಿ ಆಗು ಮಾಡಲಾಗಿದೆ. ಅವಳು ಅಪರಾಧಿಯಲ್ಲ. ಅವಳು ಹೇಳಿದ್ದು

ಇಷ್ಟೆ : ತಾನು ಶೂದ್ರನಾದ ರುದ್ರನನ್ನು ಪ್ರೀತಿಸಿದ್ದೆ. ಆದರೆ ಆತ ಸಂಸ್ಕೃತೀಕರಕ್ಕೆ ಅಂದರೆ ಶರಣತ್ವಕ್ಕೆ ಒಳಗಾಗಿದ್ದಾನೆ. ಆದ್ದರಿಂದ ಅವ ಬೇರೆ ಇವ ಬೇರೆ.

ಇವೆಲ್ಲ ಏಕೆ ಹೀಗಾಯಿತೆಂದರೆ ಇಲ್ಲಿಯ ಇಡೀ ಸಮಸ್ಯೆಯನ್ನು ವ್ಯಕ್ತಿವಾದಿ ನೆಲೆಯಲ್ಲಿ ನೋಡಲಾಗಿದೆ. ಆದ್ದರಿಂದಲೇ ಲೇಖಕರು ವ್ಯಕ್ತಿಯ ಮೇಲೆ ಅತಿಯಾದ ಹೊರೆಯನ್ನು ಹಾಕುತ್ತಾರೆ.

"ಎಷ್ಟರತನಕ ವಿವಿಧ ಶಾಸ್ತ್ರಗಳ ಸರ್ವಾಂಗೀಣವಾದ ಬೆಳೆವಣಿಗೆಯು ಆಗಿರುವುದಿಲ್ಲವೊ ಅಷ್ಟರತನಕ ಮಾನವನ ಯಾವ ಕ್ಷೇತ್ರದಲ್ಲೂ ಸಹ ಸಮಸ್ಯೆಗಳನ್ನು ವೈಜ್ಞಾನಿಕ ದೃಷ್ಟಿಯಿಂದ ಪರಿಶೀಲನೆ ಮಾಡುವ ಪ್ರವೃತ್ತಿಯು ಸಮಾಜದಲ್ಲಿ ದುರ್ಬಲ ವಾಗಿರುತ್ತದೆ. ಆಗ ಧರ್ಮ ಮತ್ತು ಧಾರ್ಮಿಕ ವಿಚಾರಗಳೇ ಸಮಾಜ ಸುಧಾರಣೆಯ ವೈಚಾರಿಕ ಪ್ರಣಾಲಿಗಳಾಗಿರುತ್ತವೆ. ಈ ಪರಿಸ್ಥಿತಿಯಲ್ಲಿ ಸಾಮಾಜಿಕ ಜೀವನದಲ್ಲಿ ಎಷ್ಟೇ ಮತಭೇದಗಳೂ ಸಂಘರ್ಷಗಳೂ ತಲೆದೋರಿದರೂ ಕೂಡ ಮಾನವನ ಮನಸ್ಸಿನಲ್ಲಿ ಅವುಗಳ ಧಾರ್ಮಿಕ ಭೇದಗಳ ಹಾಗೂ ಸಂಘರ್ಷಗಳ ಸ್ವರೂಪದಲ್ಲೇ ವ್ಯಕ್ತವಾಗುತ್ತದೆ. ಪ್ರತಿಗಾಮಿ ಮತ್ತು ಪುರೋಗಾಮಿ ನಿಲುವುಗಳ ನಡುವಿನ ತಿಕ್ಕಾಟವು ಪರಸ್ಪರ ವಿರೋಧಿಯಾದ ಧಾರ್ಮಿಕ ಹಾಗೂ ಮತೀಯ ವಾದ ವಿವಾದದ ಅಥವಾ ಘರ್ಷಣೆಯ ಸ್ವರೂಪದಲ್ಲಿ ವ್ಯಕ್ತವಾಗುತ್ತದೆ. ತೊಳಲಾಡುವವರೂ ತೊಳಲಾಡಿ ಸುವವರೂ ಸಹ ಧರ್ಮದ ಅಥವ ಮತದ ಧ್ವಜದ ಅಡಿಯಲ್ಲೇ ನಿಂತು ಕಾದಾಡುತ್ತಾರೆ" ಎಂದು ಎಸ್. ಜಿ. ಸರದೇಸಾಯಿ ವಿವರಿಸುತ್ತಾರೆ. [ಭಾರತೀಯ ತತ್ವಜ್ಞಾನ ಅನು: ಡಾ. ಗೌರೀಶ ಕಾಯ್ಕಿಣಿ ೧೯೯೨; ೨೯] ವ್ಯಕ್ತಿವಾದಿ ದೃಷ್ಟಿ ಇದನ್ನು ಮರೆಯುತ್ತದೆ. ಆದ್ದರಿಂದಲೇ ಕೃತಿ ತನ್ನೊಡಲಿನಲ್ಲಿ ಆಧುನಿಕ ವೈಚಾರಿಕತೆಯನ್ನು, ಕಲಾಕುಶಲತೆಯನ್ನು ತುಂಬಿಕೊಂಡಿರುವಾಗಲೂ ಒಟ್ಟಾರೆಯಾಗಿ ಪ್ರತಿಗಾಮಿಯಾಗಿ ಪ್ರಕಟವಾಗಿಬಿಡುತ್ತದೆ.

ತಲೆದಂಡ

'ಸಂಕ್ರಾತಿ'ಯಲ್ಲಿ ಆಗುವುದು ಹಾಗೆ. ೧೯೮೨ರಲ್ಲಿ ಲಂಕೇಶರ ಸಂಕ್ರಾಂತಿ ಪ್ರಕಟವಾದರೆ ೧೯೯೦ರಲ್ಲಿ ಗಿರೀಶ ಕಾರ್ನಾಡರ 'ತಲೆದಂಡ' ಪ್ರಕಟವಾಗಿದೆ. ಈ ಮಧ್ಯೆ ಎಚ್. ಎಸ್. ಶಿವಪ್ರಕಾಶರ ಮಹಾಚೈತ್ರ ೧೯೮೬ರಲ್ಲಿ ಪ್ರಕಟವಾಗಿದೆ. ಹೀಗಿದ್ದರೂ 'ತಲೆದಂಡ' ಸಂಕ್ರಾಂತಿಗೆ ಸಾಹಿತ್ಯಿಕ ತಾತ್ವಿಕತೆಗೂ ವೈಚಾರಿಕ ಸೈದ್ಧಾಂತಿಕತೆಗೂ ಸಂವಾದಿಯಾಗಿದೆ. ತಲೆದಂಡ ಪದಿನಾರು ದೃಶ್ಯವುಳ್ಳ ಮೂರಂಕಿನಲ್ಲಿ ವಿಭಜನೆಗೊಂಡ ಪೂರ್ಣ ಪ್ರಮಾಣದ ನಾಟಕ. 'ತಲೆದಂಡ' ಹೆಚ್ಚಾಗಿ 'ಸಾಂಕ್ರಾಂತಿ'ಯಿಂದ ಪ್ರಭಾವಿತವಾಗಿದೆ ಎಂದು ನಮಗೆ ಅನ್ನಿಸಿದರೆ ಅದು ಲೇಖಕರ ವೈಚಾರಿಕತೆಯ ಸಾಮೀಪ್ಯದ ಪರಿಣಾಮದಿಂದ ಹೊರತು ಗಿರೀಶರ ಸ್ವಂತಿಕೆ ಮತ್ತು ಕಲಾಪರಿಣತಿಗೆ ಚ್ಯುತಿ ಬಂದಿಲ್ಲ.

'ತಲೆದಂಡ'ದ ವಸ್ತು ಕೂಡ ಭಿನ್ನವಾದುದಲ್ಲ. ಆದರೆ ಅದು 'ಸಂಕ್ರಾಂತಿ'ಯ ಘಟನೆಗಷ್ಟೇ ನಿಲ್ಲದೆ ಕಲ್ಯಾಣದಲ್ಲಿ ನಾಟಕೀಯ ದೊಂಬಿ ನಡೆದು [illegible] ತನಕವೂ ಮತ್ತೆ ವ್ಯಕ್ತಿ ಪ್ರಧಾನದ [illegible] ಬೆಳೆಯುತ್ತದೆ.

ಬಸವಣ್ಣ ಮತ್ತು ಬಿಜ್ಜಳ ರಾಜಧಾನಿಯ ಹೊರಗೆ ಹೋದಾಗ ಬಿಜ್ಜಳನ ಮಗ ಸೋವಿದೇವ ಖಜಾನೆ ತಪಾಸಣೆ ನಡೆಸುತ್ತಾನೆ. ಇದಕ್ಕೆ ಪ್ರೋತ್ಸಾಹ ದೊರಕುವುದು ಆಸ್ಥಾನದ ಪುರೋಹಿತರಿಂದ. ಆದರೆ ಜಗ್ಗಣ್ಣ ಎಂಬ ಶರಣ ಅದನ್ನು ಆಗಗೊಡು ವುದಿಲ್ಲ. ಬಸವಣ್ಣ ಬಂದನಂತರ ಎಲ್ಲ ಲೆಕ್ಕ ಒಪ್ಪಿಸುತ್ತಾರೆ. ಅದೇ ಮುಂದೆ ಪವಾಡ ಎಂದು ಕೂಡ ಕರೆಯಲ್ಪಡುತ್ತದೆ. ಒಟ್ಟಾರೆಯಾಗಿ ಸೋವಿದೇವ ಕೊನೆಯತನಕ ಪುರೋಹಿತರ ಕೈಯ್ಯ ಸಲಕರಣೆಯಾಗಿ ಸಲ್ಲುತ್ತಾನೆ.

ಹರಳಯ್ಯನ ಮಗ 'ಶೀಲ' (ದಲಿತ) ಮಾದರಸನ ಮಗಳು 'ಕಲಾವತಿ' (ಬ್ರಾಹ್ಮಣ) ಇವರ ಮದುವೆ ನಿಶ್ಚಿತವಾಗುತ್ತದೆ. ಬಸವಣ್ಣನವರ ಆಶೀರ್ವಾದ ಪಡೆಯುತ್ತಾರೆ. ಆದರೆ ಇವರ ವಿರುದ್ಧ ವೈದಿಕರ ಪಿತೂರಿ ನಡೆಯುತ್ತದೆ. ಬಿಜ್ಜಳನ ಮನಸ್ಸು ಇಬ್ಬಗೆಯದಾಗುತ್ತದೆ. ಆದರೆ ಆತ ಮದುವೆಗೆ ರಕ್ಷಣೆ ಕೊಡುತ್ತಾನೆ. ಹಾಗಾಗಿ ಸೋವಿದೇವನ ಮುಖಾಂತರ ರಾಜಕೀಯ ಪಿತೂರಿ ನಡೆದು ಕೋಲಾಹಲ ಉಂಟಾಗುತ್ತದೆ. ಬಿಜ್ಜಳ ಸೆರೆಯಾಗುತ್ತಾನೆ. ಒಬ್ಬ ಶರಣನಿಂದಲೇ ಬಿಜ್ಜಳನ ಕೊಲೆಯೂ ಆಗುತ್ತದೆ. ಮುಂದೆ ಮತ್ತೆ ರಾಜಕೀಯ ದೊಂಬಿ ಉಂಟಾಗಬಹುದಾದ ಸೂಚನೆಯೊಂದಿಗೆ ನಾಟಕ ಮುಗಿಯುತ್ತದೆ.

'ಸಂಕ್ರಾಂತಿ'ಯಲ್ಲಿ ಉಜ್ಜ ಮತ್ತು ಅವನ ಮಗ ದಲಿತರಾಗಿ 'ಶರಣತ್ವ'ಕ್ಕೆ ಕ್ರಿಯೆ ಪ್ರತಿಕ್ರಿಯೆ ತೋರಿದ್ದರೆ 'ತಲೆದಂಡ'ದಲ್ಲಿ ಶಾಸ್ತ್ರಿ ಮತ್ತ ಅವನ ಮಗ ಜಗದೇವ ಕ್ರಿಯೆ ಪ್ರತಿಕ್ರಿಯೆ ತೋರುತ್ತಾರೆ. ಅಲ್ಲಿ ದಲಿತರಿದ್ದರೆ ಇಲ್ಲಿ ಬ್ರಾಹ್ಮಣರಿದ್ದಾರೆ. ಈ ಸಂದರ್ಭ ಒಂದು ಹಂತದಲ್ಲಿ ತೋರಾಡುವ ಅರ್ಥ ಪರಸ್ಪರ ಸಂವಾದಿಯಾಗೇ ಇದೆ. ಎರಡೂ ಕಡೆ ಬಸವಣ್ಣನಿಂದ ಮುಂದಾಳತ್ವ ಕಲಿತ ಸಮಾಜದ ಚಿತ್ರವಿದೆ. ಆದರೆ ಜಗದೇವನ ಶರಣತ್ವದಲ್ಲಿ ಮತ್ತೊಂದು ವಿಶೇಷತೆಯಿದೆ. ಪ್ರಸಿದ್ಧ ವಿದ್ವಾಂಸ ಶಾಸ್ತ್ರಿಯ ಮಗ ಶರಣನಾಗಿದ್ದನಾದರೂ ಅವನ ಪೂರ್ವಾಶ್ರಮದ ಪ್ರಭಾವ ಹರಿದು ಹೋಗಿರುವುದಿಲ್ಲ. ಅವನು ಎಷ್ಟು ರೋಷದ ಶರಣನಾಗಿದ್ದನೋ ಅಷ್ಟೇ ಒಳಗೊಳಗೆ 'ಒಂಟಿತನ'ವನ್ನು ಅನುಭೋಗಿಸುತ್ತಾನೆ. ಸತ್ತ ತಂದೆಯ ಶ್ರಾದ್ಧಾದಿ ಕಾರ್ಯವನ್ನು ನೆರವೇರಿಸುತ್ತಿದ್ದ ಜಗದೇವನ ಮನೆಗೆ ಬಂದ ಬಸವಣ್ಣನವರನ್ನು ಕಂಡಾಗ ಜಗದೇವ ಹೇಳುವ ಮಾತು ಆತನ ವ್ಯಕ್ತಿತ್ವದಲ್ಲಿ ರೂಪುಗೊಂಡ ಅಸಂಗತತೆ (ಅಬ್ಸರ್ಡಿಟಿ)ಯನ್ನು ಹೊರತೋರುತ್ತದೆ.

"ಇದೆಲ್ಲ ನನ್ನ ತಾಯಿಯ ಸಮಾಧಾನಕ್ಕಾಗಿ. ಅಪ್ಪ ಜೀವದಿಂದ ಇದ್ದ ಕಾಲಕ್ಕೆ ಗಂಟಲು ನರ ಹರಿಯೋಹಾಂಗ ನನ್ನ ಹೆಸರು ಹಿಡಿದು ಕರದ. ನಾ ಕಿವಿಗೊಡಲಿಲ್ಲ. ಈಗ ಕಳೆದ ಹನ್ನೊಂದು ದಿವಸದಿಂದ ನಾ ಅವನ್ನ ಕರಿಲಿಕ್ಕೆ ಹತ್ತೇನಿ. ಎರಡು ಕಲ್ಲು ತಂದು ಅದರ ಮೇಲೆ ಅಂಗ ಅಂಗವಾಗಿ ಅವನ ಪ್ರೇತವನ್ನು ಆಹಾವನೆ ಮಾಡುತ್ತಿದ್ದೀನಿ. ನನ್ನದು ಯಾವಾಗಲೂ ಹಿಂಗಟ ಈಗೊಂದು ಆಮೇಲ ಅದರ ವಿರುದ್ಧ ಇನ್ನೊಂದ. (ತಡೆದು)ನನ್ನ ಅಪ್ಪನ ಹಾಂಗಟ ಅಲ್ಲೇನು? ಅವಯಜ್ಞ-ಯಾಗ-ಜಪ-ತಪ ಅಂತ ಜೀವಮಾನ ಕಳೆದರು. ಕೊನೆಯುಸಿರು ಎಳೆಯೂ ಕಾಲಕ್ಕ ಸಾವಿಗೆ ಹೆದರಿ ಅಳತಿದ್ದ. ಬಸವಣ್ಣ, ನನ್ನ ಬಾಳು ನನ ತಂದಿ ಹಂಗ ಆದೀತೇನು? ಏನು ಮಾಡಿದರೂ ಸೋಲು ಅಂಜಿಕೆ-ವೈಫಲ್ಯ (ಪು. ೬೮)"

ಇಲ್ಲಿ ಸೋವಿದೇವನಿಗೆ ಕಾಡುವುದು ತನ್ನ-ಐಡೆಂಟಿಟಿಯ ಪ್ರಶ್ನೆ.

ಬ್ರಾಹ್ಮಣ ಯಾವುದೇ ಕ್ಷೇತ್ರ (ಧರ್ಮ)ಕ್ಕೆ ಹೋದರೂ ತಾನೇ ಮುಂದಾಳ್ತನ ಕೊಡಲು ಹಾತೊರೆಯುವ ಸಾಯ್ಕಲಾಜಿಯನ್ನು ಹೇಳುವ ಒಂದು ವ್ಯಂಗ್ಯ ಇಲ್ಲಿರಬಹುದಾದರೂ ಮುಂದಿನ ಅವನ ವ್ಯಕ್ತಿತ್ವದ ಈ ಅಸಂಗತತೆ ಬಿಜ್ಜಳನ ಕೊಲೆ ಮಾಡುವುದರಲ್ಲಿ, ಹಾಗೆಯೇ ತಾನೇ ಇರಿದುಕೊಂಡು ಸಾಯುವ ಘಟನೆಯಲ್ಲಿ ಪರಾಕಾಷ್ಠೆ ಮುಟ್ಟುತ್ತದೆ. ಇಂಥ ಒಂದು ದೃಷ್ಟಿ 'ನವ್ಯ' ವೈಚಾರಿಕತೆಯ ಸ್ಪೆಶಾಲಿಟಿ ಕೂಡಾ ಆಗಿದೆ.

ಎರಡನೇ ಅಂಕದಲ್ಲಿ ಅಂದರೆ ಐದನೇ ದೃಶ್ಯದಲ್ಲಿ ಇಡೀ ನಾಟಕದ ವೈಚಾರಿಕ ನಿಲುವು ಸ್ಥಾಪಿತವಾಗುತ್ತದೆ. 'ಸಂಕ್ರಾಂತಿ'ಯ ಐದನೇ ದೃಶ್ಯಕೂಡ ಮಹತ್ವದ್ದಾಗಿರುವುದನ್ನು ಇಲ್ಲಿ ಗಮನಿಸಬಹುದು.

ಇಷ್ಟರಲ್ಲಿ ಬಸವಣ್ಣ ತಮ್ಮ ಭಾಂಡಾರಿಯ ಜವಾಬುದಾರಿಯಿಂದ ಹೊರಬಂದಿದ್ದಾರೆ. ಇಲ್ಲಿಯ ಸಂಭಾಷಣೆ ಸಾಮಾಜಿಕ ಪರಿವರ್ತನೆಯಲ್ಲಿ ರಾಜಕೀಯ ಆಧಿಕಾರದ ಕ್ರಿಯಾ ಶಕ್ತಿಯನ್ನು ಸೂಕ್ಷ್ಮವಾಗಿ ರೇಖಿಸುತ್ತಾರೆ. ಶರಣತ್ವ ಪ್ರಾಪ್ತವಾ ದೊಡನೆ ಜಾತಿ ಭಾವನೆ ಮಾಯವಾಗಲು ಸಾಧ್ಯವಿಲ್ಲ. ಆದ್ದರಿಂದಲೇ ಹೊರಗಿನಿಂದ ಬಡತನದಿಂದಾಗಿ ವಲಸೆ ಬಂದವರನ್ನು ಈ ಜನಗಳು ದೂರ ಇಡಬಯಸುತ್ತಾರೆ. ಆಗ ಬಸವಣ್ಣ "ಅಲ್ಲಿ ಬರಗಾಲವೆಂದು ಇಲ್ಲಿ ಬಂದರೆ ಅವರ ಜಾತಿ ಮಾತೆತ್ತಿ ನಮ್ಮ ಜನ ಊರ ಹತ್ತೀಲೆ ಹಾಯಗೊಡಲೊಲ್ಲರು" ಎನ್ನುತ್ತಾರೆ. ಅಲ್ಲಿಯೇ ಮಧುವರಸ "ನೀ ಭಂಡಾರಿಯಾಗಿದ್ದಾಗ ಇಂಥ ಕೆಲಸ ಒಂದು ಕ್ಷಣದಾಗ ಆಗಿಬಿಡುತ್ತಿದ್ದವಲ್ಲ?" (೧೮) ಎನ್ನುತ್ತಾನೆ.

ಮಧುವರಸ ತನ್ನ ಮಗಳನ್ನು ಹರಳಯ್ಯನ ಮಗನಿಗೆ ಕೊಡುವುದನ್ನು ನಿಶ್ಚಯಿಸಿ ಬಸವಣ್ಣನವರ ಆಶೀರ್ವಾದ ಪಡಿಯಲು ಬಂದಿದ್ದಾರೆ. ಈ ನಿಶ್ಚಯವನ್ನು ಕೇಳಿ ಬಸವಣ್ಣನವರಿಗೆ ಮನ ತುಂಬಿಬರುತ್ತದೆ. ಆದರೆ ಆಶೀರ್ವಾದಕ್ಕೆತ್ತಿದ ಕೈ ಒಂದು ಸಲ ಅಲ್ಲೇ ನಿಲ್ಲುತ್ತದೆ. ನಂತರದ ಸುಭಾಷಣೆಯಲ್ಲಿ ಅವರೆನ್ನುತ್ತಾರೆ:

> "ಮೊದಲು ಸುದ್ದಿ ಕೇಳಿ ಆನಂದ ಉಮ್ಮಳಿಸಿ ಬಂತು. ಅಳಲೊ ನಗಲೊ ಅಂತಾತು. ಶಿವನಿಃ ನಾವು ಆಡಿದ್ದು- ಬಯಸಿದ್ದು ಹೀಂಗ ಇದ್ದಕ್ಕಿದ್ದಾಂಗ ನನಸಾಗತದ ಅನಿಸಿದ್ದಿಲ್ಲ. ಶಿವಭೋ ಅನಿಸಿತು. ಆದರೆ ಅದೇ ವ್ಯಾಳ್ಯಾಕ್ಕ ಯಾಕೊ ಹೆದರಿಕಿ ಹೀಗೆ ಹೆದರಿಕೆ ಆತು" ಆಗಲು ಕಾರಣ:
>
> ಇದು ಬರೇ ಲಗ್ನ ಅಲ್ಲ. ಇದು ಕ್ರಾಂತಿ. ಕ್ರಾಂತಿಯಾಗೊ ಮುನ್ನ ಆದಕ್ಕಾಗಿ ತಕ್ಕ ಸಿದ್ಧತಿ ಆಗಿಲ್ಲ. ಸಾವಿರಾರು ವರ್ಷದಿಂದ ಬೇರೂರಿ ಬೆಳೆದುನಿಂತ ವ್ಯವಸ್ಥೆಯನ್ನ ನಿರ್ಮೂಲನಗೊಳಿಸಲಿಕ್ಕೆ ನಮ್ಮ ದುಟಿಮೆ ಸಾಲದು-ಸಿದ್ಧಾಂತ ಸಾಲದು-ನಾವು ಅವಸರ ಮಾಡಬಾರದು ಅಂತ ನನಗ ಅನಿಸತದ" (ಪು. ೬೦).

ಇಲ್ಲಿ ಲೇಖಕರು ೧೨ನೇ ಶತಮಾನದ ಕ್ರಾಂತಿಯ ವಿಫಲತೆಯ ಮೇಲೆ ತಮ್ಮ ವೈಚಾರಿಕ ವ್ಯಾಖ್ಯಾನವನ್ನು ದಾಖಲಿಸಿದ್ದಾರೆ.

ಬಸವಣ್ಣನವರಿಗೆ ಈ ವಿಲೋಮ ವಿವಾಹದಿಂದ ಆಗಬಹುದಾದ ಎಲ್ಲ ಕೋಲಾಹಲಗಳ ಮುನ್ನೋಟ ಇದೆ. ಕ್ರಾಂತಿಯ ಸಿದ್ಧತೆಯ ವಿಶಾಲವಾದ ನಕ್ಷೆ ಕೂಡ ಅವರಿಂದ ಸಾಧ್ಯ. ಆದರೆ ಘಟನೆಗಳು ತೆಗೆದುಕೊಳ್ಳುವ ಆಯಾಮ ಅವರ ಹಿಡಿತವನ್ನು ಮೀರಿ ನಡೆದುಬಿಡುತ್ತದೆ. ಅನಿವಾರ್ಯವಾಗಿ ಮಧುವರಸನ ಮತ್ತು ಹರಳಯ್ಯರ ಮಕ್ಕಳ ಮದುವೆಯ ಕೊನೆಯ ನಿರ್ಣಯವನ್ನು ಅವರೇ ಮಾಡಿಕೊಳ್ಳ ಬೇಕಾದ ಪರಿಸ್ಥಿತಿ ಪ್ರಾಪ್ತವಾಗುತ್ತದೆ. ಆದರೆ ಅದನ್ನು ಸಾಮೂಹಿಕವನ್ನಾಗಿ, ಶರಣತ್ವದ ಸಂಕೇತವನ್ನಾಗಿ ಮಾಡುವ ಒತ್ತಡ ಚಳುವಳಿಯ ಆತ್ಮಾಂಶದಲ್ಲೇ ಒಂದಾಗಿರುವುದು ಕೂಡ ಅದರ ಸಂಕೀರ್ಣ ಸ್ವರೂಪವನ್ನು ಹೊಳೆಯಿಸುತ್ತದೆ. ಬಸವಣ್ಣನವರಿಗೆ ಈ ಘಟನೆಯ ಅರಿವು ಕರುಳನ್ನು ತಟ್ಟುತ್ತದೆ.

"ಇದು ನಾಟಕದ ಸಂಭಾಷಣೆ ಆಡೋ ಹೊತ್ತಲ್ಲ. ನಮ್ಮ ಹೊಟ್ಯಾಗ ಹುಟ್ಟಿರೊ ಈ ಮಕ್ಕಳ ಬಾಳೇವಿನ ಮಾತದ. ನಾಳೆ ಅವರು ಮನಿ ಮಾಡಿದಲ್ಲಿ, ಒಲಿ ಹೂಡಿದಲ್ಲಿ ಸನಾತನಿಗಳ ಹಗೆ ಅವರನ್ನ ಬೆಂಬತ್ತಿ ಬರತದ ಹಾವಿನ ಹೆಡೆ ಬಂಧಾಂಗ. ಆಗ ಅವರಿಗೆ ಯಾರು ಕಾವಲು? ಹಿಂದಗಡೆ ಪಶ್ಚಾತ್ತಾಪ ಪಡೋದಕ್ಕಿಂತ ಮೊದಲಟ ಎಚ್ಚರ ವಹಿಸಿರೋದು ಉತ್ತಮ."

ಆದಕ್ಕೆ ಹರಳಯ್ಯನ ಮಾತು:

> "ಅಂದರ ನೀನನ್ನೋದು ಈ ಲಗ್ನ ಬ್ಯಾಡ ಅಂತ. ನನಗನಿಸಿತ್ತು, ಕಲ್ಯಾಣ,
> . ಬಸವಣ್ಣನಂತಾ ಬಸವಣ್ಣ ಇರವಲ್ಲನ್ಯಾಕ. ನಮ್ಮ ನಮ್ಮ ಕಕ್ಕಯ್ಯನಂತಾ ಕಕ್ಕಯ್ಯ
> ಇರಬಾರದ್ಯಾಕ? ಹಾರವರ ಸರಿಸಾಟ ಯಾಗಿ ಸಮಗಾರ ನಿಂತಾ ಅಂದರ
> ಶರಣರs ಮೊದಲು ಅಡ್ಡಗಾಲು ಹಾಕ್ಯಾರು" (೫೨)

ಈ ಎರಡು ಸನ್ನಿವೇಶ ಬಸವಣ್ಣನವರ ಸಂದರ್ಭದ ಸಂಕೀರ್ಣತೆಯನ್ನು ಸಾರುತ್ತವೆ. ಹರಳಯ್ಯನಿಗೆ ಜಾತಿ ಏಣಿಯಲ್ಲಿ ಏರುವ ಪ್ರಶ್ನೆಯಾಗಿದ್ದರ ಜಗದೇವನಿಗೆ ಇದು ಸಂಘರ್ಷದ ಮೂರ್ತ ಸಂಗತಿಯಾದರೆ ಬಸವಣ್ಣನವರಿಗೆ ಮಾನವೀಯ ಪ್ರಶ್ನೆಯಾಗಿ ಕರುಳನ್ನು ತಟ್ಟುತ್ತದೆ. ಹೀಗೆ ಸಂದರ್ಭದ ಒಂದು ಒಳ ಕರ್ಷಣವನ್ನು ಇದು ಶಕ್ತಿಯುತವಾಗಿ ಪ್ರತಿನಿಧಿಸುತ್ತದೆ.

ಆದರೆ ಇಲ್ಲಿಯೇ ಇನ್ನೊಂದು ಮಾತು ಕೂಡ ಬರುತ್ತದೆ. ಒಬ್ಬ ಶರಣೆ ಹೇಳುತ್ತಾಳೆ. "ಅದs ಯಾಳೇಕ ಹಳ್ಳಯ್ಯ ಇನ್ನೊಂದು ಸಮಾಧಾನ ಹೇಳಲಿ, ಬಸವಣ್ಣ, ಹಾರವರ ಹೆಣ್ಣನ್ನ ತಗಾಕ ಅವ ಹೌದ್ವಂತ ಒಪಿಗೊಂಡ ಕರೆ, ಅದಟ ನಮ್ಮ ಹಾಂಗಮೀಣ ಮಾದರ ಹೆಣ್ಣಾಗಿದ್ದರೆ ಒಪಿಗೊಂಡತಿದನs (೬೧)

ಈ ಮಾತಿನ ಅರ್ಥ ನಾಟಕದಲ್ಲಿ ಏನು? ಇದಕ್ಕೆ ಕೇವಲ ವಾಚ್ಯಾರ್ಥ ಮಾತ್ರವೇ? ಅಂದರೆ, ಸನ್ನಿವೇಶ ಪರಿಚಯಕ್ಕಾಗಿಯಷ್ಟೆಯೆ? ಯಾವಾಗಲೂ ಸಂಸ್ಕೃತೀಕರಣ ನಡೆಯುವುದು ಮೇಲ್ಮುಖವಾಗಿ ಹೊರತು ಕೆಳಮುಖವಾಗಿ ಅಲ್ಲ ಎಂಬ ಪರಿಜ್ಞಾನ ನಾಟಕ ಕರ್ತೃವಿಗೆ

ಇಲ್ಲ ಎಂದು ಹೇಳುವ ಧೈರ್ಯ ನನಗಂತೂ ಇಲ್ಲ. ಅದೇನೇ ಇದ್ದರೂ ಅದರ ಪರಿಣಾಮ 'ಚಳವಳಿ'ಯ ಹಿನ್ನೆಡೆಯನ್ನು ಗುರುತಿಸುವುದೇ ಆಗಿದೆ.

ಇಲ್ಲಿ ಬಿಜ್ಜಳನ ರಾಜಕೀಯ ನಿರ್ಧಾರ ಹಾಗೂ ಆತನ ವ್ಯಕ್ತಿತ್ವದ ಒಳಪದರು ಕೂಡ ವ್ಯಕ್ತವಾಗುತ್ತದೆ, ಮದುವೆಯನ್ನು ನಿಲ್ಲಿಸಲು ಬಸವಣ್ಣನವರನ್ನು ವಿವಿಧ ರೀತಿಯಿಂದ ಒತ್ತಾಯಿಸುತ್ತಾನೆ. ಆದರೆ ಬಸವಣ್ಣ ಅದನ್ನು ಒಂದು ಸಾಮಾನ್ಯ ವ್ಯವಹಾರ, ವೈಯಕ್ತಿಕ ಮಟ್ಟದ್ದು ಎಂದು ಸಾಮಾನ್ಯ ಸ್ಥಿತಿಗೆ ತರಲು ಪ್ರಯತ್ನಿಸಿದರೂ ಸಾಧ್ಯವಾಗುವುದಿಲ್ಲ. ಬಿಜ್ಜಳ ಕೊನೆಗೆ ಆಗಗೊಡುವುದಿಲ್ಲವೆಂದು ಹೇಳಿದಾಗ ಬಸವಣ್ಣ ಸಂಪೂರ್ಣವಾಗಿ ಮದುವೆಯ ಪರ ನಿಲ್ಲುತ್ತಾರೆ. ಬಿಜ್ಜಳನ ರಾಜಕ್ರೌರ್ಯ ಪ್ರತ್ಯಕ್ಷವಾದರೂ ಅವನ ರಾಜಕೀಯ ವಿವೇಕ ಬಸವಣ್ಣನವರ ಪರ ಆಗುತ್ತದೆ. ಆದರೆ ಬಿಜ್ಜಳನ ಮೇಲೆ ಜಗದೇವನಿಗೆ ಭರವಸೆ ಇಲ್ಲ. ಆತ ಬಿಜ್ಜಳನನ್ನು ವೈರಿ ಸ್ಥಾನದಲ್ಲೇ ಇಡುತ್ತಾನೆ. ಇದರಿಂದ ಬಸವಣ್ಣನವರ ವಿಷಾದ ಮಡುಗಟ್ಟುತ್ತದೆ. ಕೂಡಲ ಸಂಗಮನಲ್ಲಿ ಶರಣಾಗುವುದರಲ್ಲಿ ಅವರು ಸಮಾಧಾನ ತಂದುಕೊಳ್ಳುತ್ತಾರೆ.

ಬಸವಣ್ಣನವರ ಬಗೆಗೆ ಬಿಜ್ಜಳನಿಗಿರುವ ಸೌಹಾರ್ದತೆಯ ಮುಖ ಕೇವಲ ಹಾರ್ದಿಕವಾದುದು ಎನ್ನುವಂತಿಲ್ಲ. ಅದು ವ್ಯವಹಾರಿಕ, ರಾಜಕೀಯ ಕೂಡ ಆಗಿದೆ. ಬಸವರನ್ನು ಬಿಜ್ಜಳ ತನಗೆ ಬೇಕಾಗುವಷ್ಟು ಉಪಯೋಗಿಸಿಕೊಳ್ಳುವ ಚಾಣಾಕ್ಯನಾಗಿದ್ದರೂ ಕೂಡ ಅದಕ್ಕೆ ಸಾಂಸ್ಕೃತಿಕವಾದ ಇನ್ನೊಂದು ಮುಖವೂ ಇದೆ. ಬಸವಣ್ಣನವರ ಕುರಿತು ತನ್ನ ಹೆಂಡತಿಯೊಡನೆ ಬಿಜ್ಜಳ ಹೇಳುವ ಮಾತೊಂದು ಹೀಗಿದೆ.

> "ನೀವು ಹೊಯ್ಸಳರು- ಕ್ಷತ್ರಿಯರಿದ್ದೀರಿ. ಆದರೆ ನಾನು ಕಳಚೂರ್ಯ- ಕಟ್ಟಚೂರಿ ಅಂದರೆ ಕ್ಷೌರಿಕ! ನನ್ನ ಜಾತಿ ಕ್ಷೌರಿಕನದು. ಹತ್ತುತಲೆ ಪಾಳೇಗಾರರಾಗಿ ಆಳಿದ್ವಿ. ಐದು ತಲಿ ಮಂಗಳವಾಡದ ಮಹಾಮಂಡ ಲೇಶ್ವರರಾಗಿ ಆಳಿದ್ವಿ. ಚಾಲುಕ್ಯರಿಂದ ಹೆಣ್ಣು ತಂದಿವಿ. ಹೊಯ್ಸಳರಿಂದ ಹೆಣ್ಣು ತಂದಿವಿ. ಬ್ರಾಹ್ಮಣರಿಗೆ ಲಕ್ಷಾಂತರ ಗೋವುದಾನ ಮಾಡಿ ನಾವು ಕ್ಷತ್ರಿಯರು ಅನ್ನ ಹಣೆಪಟ್ಟಿ ಕಟ್ಟಿಕೊಂಡವಿ. ಆದರೆ ನನ್ನ ರಾಜ್ಯದಾಗಿನ ಸಣ್ಣಾತಿಸಣ್ಣ ಕೂಸಿಗೆ ಕೇಳಿದರೂ ಅದು ಥಟ್ಟಂತ ಹೇಳತೈತಿ: ಕಳಚೂರ್ಯ ಪೆರ್ಮಾಡಿಯ ಮಗ ಬಿಜ್ಜಳನ ಜಾತಿ ಯಾವುದು? ಕ್ಷೌರಿಕನದು... ಜಾತಿ ಅಂದರ ಮೈತೊಗಲಿದ್ದಂಗ. ಅದನ್ನು ಸುಲಿದು ಕಿತ್ತು ಒಕ್ಕೊಟ್ಟರೂ ಹೊಸ ತೊಗಲು ಬಂದಗಳಿಗ್ಗೆ ಎಲ್ಲರ ಕಣ್ಣಿಗೆ ಬೀಳೋದು ಅದೇ ಹಳೇ ಜಾತಿ. ಇವ ಹೊಲೆಯ, ಇವ ಕ್ಷತ್ರಿಯ, ಇವ ಕುರುಬ. ಇದು ಈ ನಾಡಿನ ಗುಣ. ಈ ನೀರಿನ ಗುಣ" (೨೧)

ಜಾತಿ ಎಷ್ಟು ಭೀಕರವಾಗಿದೆ! ಆದರೆ ಬಸವಣ್ಣನವರ ಧಾರ್ಮಿಕ ಕ್ರಾಂತಿ ಎಂಥ ಧೀಮಂತವಾಗಿದೆ! ಎಂಥ ಮಾನವೀಯವಾಗಿದೆ!

"ನನ್ನ ಅರವತ್ತೆರಡು ವರ್ಷ ಆಯುಷ್ಯದಾಗ ಜಾತಿಯ ಹಂಗಿಲ್ಲದs ನನ್ನನ್ನು ಕಣ್ಣಾಗ ಕಣ್ಣಿಟ್ಟು ನೋಡಿದಾವ ಅಂದರ ಬಸವಣ್ಣ. ಅವನ ಶರಣರು. ತಾಯಾಣೆ ಹೇಳತೀನಿ. ಅವರು

ಮಾತಾಡಿದರ ನಾನೂ ಮನುಶ್ಯ ಅನಸತ್ಯೆತಿ. ಜಾತಿ ಪದ್ಧತಿಯನ್ನು ಈ ನಾಡಿನಿಂದ ಸವರ ಬಿಡತೀನಿ ಅಂತಾನವ, ವರ್ಣಾಶ್ರಮ ಬೇರು ಸಹಿತ ಕಿತ್ತುಹಾಕತೀನಿ ಅನ್ನತಾನವ, ಎಂಥಾ ಕನಸು" (೨೦)

ಆದರೆ ಈ ಕನಸಿಗೆ ಬಿಜ್ಜಳನ ರಾಜಕೀಯ ನೆಚ್ಚನಿಲ್ಲುವುದಿಲ್ಲ. ಅಲ್ಲಿ ವ್ಯವಹಾರಿಕ ತೆಯೇ ಮುಖ್ಯ. ಅಲ್ಲಿ ಸನಾತನ ಶಕ್ತಿಗಳೇ ಮುಖ್ಯ. ಅವು ಅಷ್ಟು ಬಲಶಾಲಿಯಾಗಿದೆ. ಶರಣರಲ್ಲಿ ಮತ್ತು ಬಸವಣ್ಣನವರ ಕನಸಿನಲ್ಲಿ ಸಂಪೂರ್ಣ ಭರವಸೆ ಒಲವು ನಿಲ್ಲುವುದಿಲ್ಲ. ತಾನೇ ಸ್ವತಾ ಜೈನನಾದುದೂ ಕಾರಣವಿರಬಹುದು. ಆದ್ದರಿಂದ ಬಸವಣ್ಣನವರಿಗೆ ತಿಳಿಯುವ ಹಾಗೇ "ಆಸ್ಥಾನದ ಅಂತರಂಗದೊಳಗs ಗೊಂದಲ, ಸಂದೇಹ, ಗಾಳಿಸುದ್ದಿ, ಒಂದೊಂದು ಸರ್ತೆ ಮಹಾರಾಜರು ಇದನ್ನೆಲ್ಲ ಬೇಕಂತಾನs ಆಡಳಿತದ ಸಾಧನ ಮಾಡಿಕೊಂಡಾರೂ ಅಂತ ಅನುಮಾನ ಉಂಟಾಗತದ" ಅನ್ನುವಂತಾಗಿದೆ.

ಹಾಗಿದ್ದರೂ ಬಿಜ್ಜಳ ಮದುವೆಗೆ ರಕ್ಷಣೆ ಕೊಡುತ್ತಾನೆ. ಅದು ಒಂದು ರಾಜಕೀಯ ಸ್ವಾರ್ಥಕ್ಕಾಗೇ. ಇನ್ನೂ ಒಂದು ಅನುಕೂಲವೆಂದರೆ ಬಸವಣ್ಣನವರ 'ಕಾಯಕವೇ ಕೈಲಾಸ' ಎಂಬಂಥ ಕಲ್ಪನೆ ಕೂಡ ಬಿಜ್ಜಳನ ರಾಜಕೀಯಕ್ಕೆ ಅವಶ್ಯವಾದುದೇ. ಅಂದರೆ ಬಸವಣ್ಣನವರ 'ಕಾಯಕ'ದ ಪರಿಕಲ್ಪನೆ ಇಲ್ಲಿ ವ್ಯಂಗ್ಯಕ್ಕೆ ಒಳಗಾಗಿದೆ. ಅಥವಾ ವ್ಯವಹಾರದಲ್ಲಿ- ರಾಜಕೀಯದಲ್ಲಿ ವ್ಯಂಗ್ಯವಾಗುವ ರೀತಿಯನ್ನು ಗುರುತಿಸಲಾಗಿದೆ.

ಈ ಒಂದು ಸಾಂಸ್ಕೃತಿಕ ಕ್ರಾಂತಿ ರಾಜಕೀಯವಾಗಿ ಪರಿಣಾಮಗೊಳ್ಳುವುದು ಸ್ವಾಭಾವಿಕವಾಗಿದೆ. ಎರಡನೇ ಅಂಕದ ಕೊನೆಯ ದೃಶ್ಯದಿಂದ ಮೂರನೇ ಅಂಕದ ಕೊನೆಯ ತನಕ ರಾಜಕೀಯ ಪಿತೂರಿಯ ಚಿತ್ರಣವಿದೆ. ಬಿಜ್ಜಳನ ಮಗನಾದ ಸೋವಿದೇವನನ್ನೇ ಆಸ್ಥಾನ ಪುರೋಹಿತರು ಎತ್ತಿಕಟ್ಟುತ್ತಾರೆ. ಕೌಟುಂಬಿಕ ನಿರ್ಲಕ್ಷದಿಂದ ಉಂಟಾದ ಅಸಮಾಧಾನ ಹಾಗೆಯೇ ಅವಿವೇಕ ಇವೆರಡು ಸೋವಿದೇವನಲ್ಲಿ ಮಡುಗಟ್ಟುತ್ತದೆ. ಬಿಜ್ಜಳನ ಸೆರೆಯಾಗುತ್ತದೆ.

ಇದೊಂದು ನಿರ್ಣಾಯಕ-ಘಟ್ಟ. ತನ್ನನ್ನು ಬಿಡಿಸಿಕೊಳ್ಳಲು ಬಸವಣ್ಣ ಬರಬಹುದು ಎಂದು ಬಿಜ್ಜಳ ಬರಕಾಯುತ್ತಾನೆ. ಆದರೆ ಬಸವಣ್ಣ ಬರುವುದು ಬಿಜ್ಜಳನ ಬಿಡುಗಡೆಗಾಗಿ ಅಲ್ಲ. ಬದಲಾಗಿ ವಿದಾಯ ಹೇಳಲು. ಶಿವನಲ್ಲಿ ಅಚಲ ನಂಬಿಗೆಯಿದ್ದ ಪರಮ ಭಕ್ತ ಬಸವಣ್ಣನವರಿಗೆ ಮನಸ್ಸು ಚಂಚಲವಾಗುವುದಿಲ್ಲ. ಆದರೆ ಬಿಜ್ಜಳನ ಮನಸ್ಸು ಉಲ್ಲೋಲ ಕಲ್ಲೋಲದ ಕಡಲು. ಆದರೇನು, ಬಸವಣ್ಣ ಕಪ್ಪಡಿಗೆ ನಡೆದು ಬಿಡುತ್ತಾರೆ. ಶರಣರಿಂದಲೇ ಬಿಜ್ಜಳನ ಕೊಲೆಯಾಗುತ್ತದೆ. ಮತ್ತೆ ಸನಾತನ ಆಡಳಿತ ಮುಂದುವರಿಯುತ್ತದೆ.

ಈ ಮೇಲಿನ ಎರಡೂ ನಾಟಕಗಳು ಪ್ರಖರವಾದ ವೈಚಾರಿಕತೆಯನ್ನು ತೋರುತ್ತವೆ ಎಂದೆನ್ನಿಸಿದರೂ ಅವರ ನೆಟ್ಟನೋಟ ಚಳುವಳಿಯ ದುರ್ಬಲಾಂಶದ ಮೇಲೆ. ದೃಷ್ಟಿ ಕೋನದಲ್ಲಿ ದೋಷ ಅಡಗಿದೆ.

ಮಹಾಚೈತ್ರ

ಮಹಾಚೈತ್ರದ ಘಟನೆ ಪ್ರಾರಂಭವಾಗುವುದು ಬಸವಣ್ಣನವರು ಕಪ್ಪಡಿ ಸಂಗಮಕ್ಕೆ ನಡೆದ ನಂತರದಿಂದ. ಸಹಜವಾಗೇ ನಂತರದ ಘಟನೆಗೆ ಹೆಚ್ಚಿನ ಸ್ಥಾನ ಸಿಕ್ಕಿದೆಯಾದರೂ ಬಸಣ್ಣನವರ ಸಂದರ್ಭವನ್ನು ನಟನೆ ಮಾಡಿ ಅದಕ್ಕೆ ಮರು ಹುಟ್ಟನ್ನು ಕೊಡಲಾಗುತ್ತದೆ ಹೀಗೆ ನಡೆದುಹೋದ ಘಟನೆಯನ್ನು ಕಲಕೇತಯ್ಯ ಬಹುರೂಪಿ ಚೌಡಯ್ಯ, ನಗೆಯ ಮಾರಿತಂದೆ, ಮಾಚಿದೇವ ಮತ್ತು ಅಣ್ಣಪ್ಪ ಮೊದಲಾದವರು ಅಭಿನಯಿಸುತ್ತಾರೆ. ಈ ಎಲ್ಲರೂ ಬಸವಣ್ಣನವರ ಚಳವಳಿಯಲ್ಲಿ ಒಂದಾದವರು. ಇಡೀ ಚಳವಳವನ್ನು ತಮ್ಮದಾಗಿ ಮಾಡಿಕೊಂಡವರು. ಬಸವಣ್ಣರಲ್ಲಿ ಅಚಲ ಶ್ರದ್ಧೆಯುಳ್ಳವರು ಮತ್ತು ಜನಸಾಮಾನ್ಯರು.

ಮಧುವರಸ ಮತ್ತು ಹರಳ್ಳಯ್ಯರ ಮಕ್ಕಳ ಮದುವೆಯನ್ನು ಬಸವಣ್ಣನವರೇ ಮಾಡಿಸುತ್ತಾರೆ. ಇದರಿಂದ ಸನಾತನಿಗಳ ಪಿತೂರಿ ನಡೆಯುತ್ತದೆ. ಬಿಜ್ಜಳ ಅವರ ಪರವಾಗಿ ನಿಂತು ಬಸವಣ್ಣರನ್ನು ಅಧಿಕಾರದಿಂದ ತೆಗೆಯುತ್ತಾನೆ. ಬಸವಣ್ಣ ಸಂಗಮಕ್ಕೆ ಹೋಗುತ್ತಾರೆ. ಅಲ್ಲಿ ಜಲಸಮಾಧಿ ಹೊಂದುತ್ತಾರೆ. ಆ ವಾರ್ತೆಯನ್ನು 'ಮಹಾಮನೆ'ಗೆ ತಿಳಿಸಲಾಗುತ್ತದೆ. 'ಮಹಾಮನೆ'ಯಲ್ಲಿ ಎರಡು ಸಿದ್ಧಾಂತದ ದೃಷ್ಟಿಕೋನಗಳ ತಾಕಲಾಟ ನಡೆಯುತ್ತದೆ. ಇದು ನಾಟಕವನ್ನು ಮುನ್ನಡೆಸುತ್ತದೆ. ಚೆನ್ನಬಸವ ಅವನ ಸಂಗಡಿಗರು ಉಳುವಿಗೆ ನಡೆದು ಚಳವಳಿಯ ಆಧ್ಯಾತ್ಮರೂಪವನ್ನು ಸ್ಥಾಪಿಸಿಕೊಳ್ಳುತ್ತಾರೆ. ಆದರೆ ಹಡಪದ ಅಣ್ಣಪ್ಪ, ಮಾಚಿದೇವ ಚಳವಳಿಯ ಕ್ರಿಯಾರೂಪವಾಗಿ ಕ್ರಿಯೆ ಪ್ರತಿಕ್ರಿಯೆಯನ್ನು ಮುಂದುವರಿಸುತ್ತಾರೆ. ಪ್ರತಿಭಟನೆಯ ಮುಖ್ಯಸ್ಥರಾದ ಮಾಚಿದೇವ, ಅಣ್ಣಪ್ಪ ಇವರ ಸೆರೆಯಾಗುತ್ತದೆ. ಕಲಕೇತಯ್ಯ, ಚೌಡಯ್ಯ, ನಗೆಯ ಮಾರಿತಂದೆ ಯಜ್ಞಶಾಲೆಯನ್ನು ಹೊಕ್ಕಿ (ಆಗಲೇ ಬ್ರಾಹ್ಮಣರು ಬಿಜ್ಜಳನಿಗೆ ಒಳ್ಳೆಯ ದಾಗುವ ನೆಪದಲ್ಲಿ ಯಜ್ಞ ಪ್ರಾರಂಭಿಸಿರುತ್ತಾರೆ) ಬಿಜ್ಜಳನನ್ನು ಕೊಲ್ಲುತ್ತಾರೆ. ಹೊರಗೆ ಸಿಂಹಾಸನಕ್ಕಾಗಿ ಕದನ ನಡೆಯುತ್ತದೆ.

ನಾಟಕದ ಹೆಚ್ಚಳ ಇರುವುದು ಇಡೀ ಚಳವಳಿಯನ್ನು ಚರಿತ್ರೆಯ ಒಂದು ಕೊಂಡಿಯನ್ನಾಗಿ ಮಾಡಿ ಜನಸಾಮಾನ್ಯರನ್ನು ಅದರಜೀವ ನಾಡಿಯನ್ನಾಗಿ ಮಾಡಿರುವುದರಲ್ಲಿ ಮತ್ತು ಇದೊಂದು ಅಕಸ್ಮಾತ್ ನಡೆದ ಘಟನೆ ಎನ್ನುವಂತ ಚಿತ್ರಿಸಿದೆ ಅದು ಆಗಾಗ ಹುಟ್ಟುತ್ತ ಅಳಿಯುತ್ತ ಮತ್ತೆ ಬೆಳೆಯುತ್ತ ಹೋರಾಟದ ಪರಂಪರೆಯನ್ನು ಬೆಳೆಸುತ್ತಿರುವ ಚರಿತ್ರೆಯ ಶಕ್ತಿ ಎನ್ನುವಂತೆ ಚಿತ್ರಿಸಿರುವುದರಲ್ಲಿ. ಈ ನಾಟಕವನ್ನಾಡುವ ತಂಡದವರಲ್ಲೊಬ್ಬನಾದ ನಗೆಯ ಮಾರಿತಂದೆ ಹೇಳುವುದು ಹೀಗೆ:

"ಇಂಥ ಆಟಗಳನ್ನು ನಮ್ಮಂಥ ಬೀದೀ ನಟರು ಎಷ್ಟೋ ಸಲ, ಎಷ್ಟೋ ಕಡೆ ಎಷ್ಟೋ ವೇಷಗಳಲ್ಲಿ ಆಡಿದಾರೆ. ಮುಂದೇನು ಆಡ್ತಾರೆ" (ಪು. ೨)

ಹಾಗೆಯೇ ನಾಟಕದ ಮುಕ್ತಾಯದಲ್ಲಿ ಕೂಡ ನಗೆಯ ಮಾರಿತಂದೆ:

"ಮಾಚಿದೇವರೆ, ನಿಮ್ಮ ಮಾತಿನ ಪ್ರಕಾರ ಜಲಪಾತದವರೆಗೂ ಬಂದೆವು ನಾವು ಇಲ್ಲೇ ಎಲ್ಲಾದರೂ ತಂಗಿ ಇದೇ ನಾಟಕವನ್ನು ಆಡಿಸಿ ತೋರಿಸುತ್ತೇವೆ." (ಪು. ೯೧)

ಇದಕ್ಕೆ ಸಂವಾದಿಯಾಗಿ ಅಣ್ಣಪ್ಪ ಹೇಳಿರುವ ಮಾತು ಹೀಗಿದೆ:

> "ನಿಜ! ಮಹಾಮನೆ ಕಟ್ಟುವಾಗ ಒಂದು ಕನಸು ನಮ್ಮನ್ನು ಕಾಡಿತ್ತು ಇಹವನ್ನೇ ಮಹವನ್ನಾಗಿ ಮಾಡಬೇಕು. ಕಾಯವನ್ನೇ ಕೈಲಾಸವಾಗಿ ಸಬೇಕು. ಬಣ್ಣ ಬಣ್ಣದ ಪುಷ್ಪಗಳು ನಲಿಯುತ್ತಾ ನಗುತ್ತಾ ಇರೋ ಒಂದು ತೋಟ ಬೆಳಸಬೇಕು."

ಹಾಗೆಯೇ ಮಾಚಿದೇವ:

"ಆ ಕನಸಿನ ಬೀಜಗಳನ್ನು ಎದೆಯ ಹೊಲಗಳಲ್ಲಿ ಬಿತ್ತೋಣ ನಡೆಯಿರಿ (೪) ಹೀಗೆ ನಾಟಕದ ದೃಷ್ಟಿ ವಿಶ್ಲೇಷಣೆಗಿಂತ ಸಂಶ್ಲೇಷಣೆಯ ಕಡೆ, ನಿಲುವಿಗಿಂತ ನಡೆಯ ಕಡೆ, ಒಡೆಯುವಿಕೆಗಿಂತ ಕಟ್ಟುವಿಕೆಯ ಕಡೆ, ವ್ಯಕ್ತಿಗಿಂತ ಸಮೂಹ ಕಡೆ ನೆಟ್ಟಿದೆ. ಈ ಸಾಮಾಜಿಕ ಗೊಂದಲದಲ್ಲಿ ಕೊಲೆ ಸುಲಿಗೆ ರಕ್ತದ ಹರಿಯುವಿಕೆ ನಡೆದಿದೆ. ಇದರ ನಂತರ ಚೈತ್ರ ಕಾಲಿಡುತ್ತದೆ. ಇದು ನಿರಂಜನರ 'ಮೃತ್ಯುಂಜಯ' ಕಾದಂಬರಿಯ ಕೊನೆಯ "ಕತ್ತಲಾದ ಮೇಲೆ ಬೆಳಕು ಹರೀತದೆ. ಇದು ಸಾಮಾನ್ಯ ಅಂತ ತೋರುವ ಅಸಮಾನ್ಯ ವಿಷಯ. ನೆನಪಿಡಿ" ಎಂಬ ಸಾಲನ್ನು ನೆನಪಿಸುತ್ತದೆ.

ಇಡಿಯ ಚಳುವಳಿಯ ಸಾಂಸ್ಕೃತಿಕ ಸಂಘರ್ಷ ಹರಳಯ್ಯ ಮತ್ತು ಮಧುವರಸರ ಮಕ್ಕಳ ಮದುವೆಯ ರೂಪದಲ್ಲಿ ಮೂರ್ತಗೊಂಡು ರಾಜಕೀಯವಾಗಿ ಸ್ಫೋಟಗೊಳ್ಳುತ್ತದೆ. ಮಧ್ಯಮತರ ಎನ್ನಬಹುದಾದ ವ್ಯಾಪಾರಿಗಳಾದ ನಾಗಶೆಟ್ಟಿ, ಚಂದ್ರಶೆಟ್ಟಿ ಮಾತಾಡಿಕೊಳ್ಳುವುದು ಹೀಗೆ:

ಚಂ. ಶೆ. : ಆಮೇಲೆ ಆಗಬಾರದ್ದೆಲ್ಲ ಆಗಿಹೋಯಿತು. ವರ್ಣಸಂಕರದ ವಿವಾಹ,

ನಾ. ಶೆ : ವರ್ಣಸಂಕರ? ಯಾರೊಂದಿಗೆ ವಿವಾಹ?

ಚಂ. ಶೆ. : ಮಾದಿಗರ ಹರಳಯ್ಯನ ಮಗ ಶೀಲವಂತ, ವಿಪ್ರ ಮಧುವರಸನ ಮಗಳು ಮಾಧವಿ.

ನಾ. ಶೆ : ಏನಂದ್ರಿ? ಹುಡುಗ ಮಾದಿಗ, ಹುಡುಗಿ ಬ್ರಾಹ್ಮಣಳು. ಪ್ರತಿ ಲೋಮ ವಿವಾಹ, ಶಾಸ್ತ್ರವಿರುದ್ಧವಾದುದು? ಯಾರು ಯಾರು ಈ ನೀಚ ಕಾರ್ಯ ಮಾಡಿಸಿದವರು?

ಚಂ. ಶೆ. : ಬಸವಣ್ಣನವರು. ಅಷ್ಟೇ ಅಲ್ಲದೆ ಅದೇ ಸರಿ ಅಂತ ವಾದ ಹೂಡಿದರು.

ನಾ.ಶ. : ಯಾರೂ ಅಡ್ಡಬರಲಿಲ್ಲವೇನು?

ಚಂ.ಶೆ : ಅಡ್ಡ ಏನು? ಇಡೀ ನಗರವೇ ರಕ್ತದಲ್ಲಿ ಅದ್ದಿ ಹೋಗೊ ಹಾಗಿತ್ತು, ಸಿಟ್ಟಿಗೆದ್ದ ಮಠ, ಅಗ್ರಹಾರದ ಕಡೆಯೋರು ಕೆಳಜಾತಿ ಕೇರಿಯವರ ಮೇಲೆ ಹಲ್ಲೆ ಮಾಡಿದರು. ಆಯಗಾರರು ತಿರುಗಿ ಬಿದ್ದರು. ತ್ರಿಪುರಾಂತಕ ದೇವಾಲಯದ ತಾಳೆಯೋಲೆಗಳಿಗೆ ಬೆಂಕಿ ಬಿತ್ತು. (೭)

ಇದು ಮುಂದೆ ಭೀಕರವಾದ ಹಿಂಸೆಗೆ ಕಾರಣವಾಗುತ್ತದೆ. ಸನಾತನ ಶಕ್ತಿಗಳ ಕೈ ಮೇಲಾಗುತ್ತದೆ. ಬಿಜ್ಜಳನಿಂದ ಬಸವಣ್ಣನವರ ಪದಚ್ಯುತಿ. ಆದರೆ ಪ್ರತಿಭಟನೆ ಬೇರೆ ರೂಪ ತೆಗೆದುಕೊಳ್ಳುತ್ತದೆ.

ಚೆನ್ನಬಸವಣ್ಣ ಆಯುಧಪಾಣಿಗಳಾಗಿ ಯುದ್ಧಮಾಡುವದನ್ನು ಒಪ್ಪುವದಿಲ್ಲ. ಆದರೆ ಮಾಚಿದೇವನಂಥವರು ಆ ದಾರಿ ಹಿಡಿಯುತ್ತಾರೆ. ಆಳುವ ವರ್ಗವೊಂದರ ಹಿಂಸೆಯ ಸ್ವಾಭಾವಿಕ ಪರಿಣಾಮ ಇದಾಗಿದೆ. ಬಸವಣ್ಣ ಇದನ್ನು (ಹಿಂಸೆ) ಒಪ್ಪುತ್ತಿರಲಿಲ್ಲವೆಂದು ಚೆನ್ನಬಸವ ಹೇಳಿದಾಗ ಮಾಚಿದೇವ:

"ಅವರು ನಮ್ಮನ್ನು ನಡುನೀರಿನ ತನಕ ಬಿಟ್ಟು ಹೋಗಿದ್ದಾರೆ. ದಡ ಸೇರಬೇಕಾದುದು ನಮ್ಮ ಕೆಲಸ" (೧೪) ಎನ್ನುತ್ತಾರೆ. ಸಂಘರ್ಷದ ರುವಾರಿ, ಶಕ್ತಿ ಎಲ್ಲಾ ಬಸವಣ್ಣನವರೇ ಆದರೂ ಅದನ್ನು ಅರ್ಧನೀರಿನ ತನಕ ತಂದಿದ್ದಾರೆ. ಮುಂದೆ ಸಂಘರ್ಷ ಹಿಂಸಾತ್ಮಕವಾದಾಗ ಅದನ್ನು ನಿಲ್ಲಿಸಿದ್ದಾರೆ. ಆದರೆ ನಾಟಕಕಾರನ ಒತ್ತು ಬೀಳುವುದು ಸಂಘರ್ಷವನ್ನು ಮುಂದುವರಿಸುವುದರ ಕಡೆ. ಯಾಕೆಂದರೆ ನಡು ನೀರಿನಲ್ಲೇ ನಿಲ್ಲುವಂತಿಲ್ಲ. ಮುಂದೆ ನಡೆವುದೊ ಹಿಂದೆ ನಡೆವುದೊ ಎಂದು ನಿರ್ಧರಿಸಬೇಕಾದವರು ನಿಂತವರು. ಇಂಥ ಸಂಘರ್ಷ ಸಾಮೂಹಿಕ ಹೊಣೆಗಾರಿಕೆಯಿಂದಲೇ ನಡೆಯುವಂಥದ್ದು ಮತ್ತು ಆ ಸಂದರ್ಭವೇ ಅದರ ಮಾರ್ಗದರ್ಶಿ ಇಂಥ ಒಂದು ಹೊಣೆಗಾರಿಕೆಯನ್ನು ಮಾಚಿದೇವ ಹೊರಬೇಕಾಗುತ್ತದೆ. ಆ ಹೊಣೆಯನ್ನು ಬಸವ ತನ್ನ ಮೇಲೆ ಹೊರಿಸಿದ್ದಾರೆ ಎಂದು ಕೂಡ ತಿಳಿಯುತ್ತಾರೆ. ಬಸವ ಕಟ್ಟಿದ ಮಹಾಮನೆ ಹೊತ್ತಿಸಿದ ದೀಪ ಆರಿಹೋದರೆ ಎಂದು ಚಿಂತಿಸುವಾಗ ಮಾಚಿದೇವ

"ನಮ್ಮ ಕಣ್ಣಲ್ಲಿ ಆ ದೀಪವಿದೆ. ಜಗತ್ತನ್ನೇ ಬೆಳಗಿಸುತ್ತೇವೆ. ಈ ಮಹಾಮನೆ ಕುಸಿದರೂ ಚಿಂತೆಯಿಲ್ಲ ಇಹದ ತುಂಬಾ 'ಮಹಾಮನೆ'ಯನ್ನು ಕಟ್ಟುತ್ತೇವೆ" (೧೬) ಎನ್ನುತ್ತಾರೆ. ಇಲ್ಲಿ ಸ್ಥಾವರ ಜಂಗಮವಾಗುವ ನೋಟವನ್ನು ಕಾಣಬಹುದು. ಆದರೆ ಇಲ್ಲಿಯವರೆಗೆ ಜಂಗಮ ಎನಿಸಿಕೊಂಡ ಕೆಲ ನೀತಿಗೇಡಿ ಶರಣ ಜಂಗಮರು ಬಸವಣ್ಣರ ತತ್ವಕ್ಕೆ ದ್ರೋಹ ಬಗೆದು ಪುರೋಹಿತರ ಶರಣುಹೋಗಿ ಸ್ಥಾವರವಾಗಿ ಹೋಗುವ ದುರಂತ ಕೂಡ ಇಲ್ಲಿದೆ. ಆದರೆ ಅದನ್ನು ಚಲನೆಗೆ ಒಡ್ಡುವುದು ಜನಸಮೂಹವೇ. ಆಳುವ ಗುಂಪು ಬೇಕು ಬೇಕಾದ ಅನ್ಯಾಯವನ್ನು ಜನರ ಮೇಲೆ ಎಸಗುತ್ತದೆ.

> "ಎಲ್ಲಾ ಕೊಳೆಯಾಯಿತು. ಕಲಿದೇವನ ಉಡುಗೆಯಲ್ಲಿ ರಕ್ತದ ಕಲೆ. ನೀರಿನಲ್ಲಿ ತೊಳೆಯಬೇಕು. ಉಬ್ಬೆಮನೆಗೆ ಹಾಕಬೇಕು. ಅಪ್ಪಣ್ಣೋರೆ ನಮ್ಮವರ ಬಂಡೆಬ್ಬಿಸಿ, ಇದಕ್ಕೆ ಬೆಲೆ ಬಿಜ್ಜಳನ ತಲೆ." (೮೨)

ಎಂಬ ನಿರ್ಣಯಕ್ಕೆ ಮಾಚಿದೇವ ಬರುತ್ತಾರೆ. ಮುಂದೆ ಯಜ್ಞಶಾಲೆ ಹೊಕ್ಕು ಯಜ್ಞ ನಡೆಸುತ್ತಿರುವ ಬಿಜ್ಜಳನ ಕೊಲೆ ಮಾಡುವ ದೃಶ್ಯವನ್ನು 'ದಕ್ಷಯಜ್ಞ'ದ ರೂಪಕದಲ್ಲಿ ಚಿತ್ರಿಸಲಾಗಿದೆ. ಪುರಾಣ ಇತಿಹಾಸ, ವರ್ತಮಾನಗಳು ತಳಕು ಹಾಕಿಕೊಂಡು ಒಂದು ಸಂಕೀರ್ಣ ಲೋಕವನ್ನು ಫೆಂಟಸಿಯ ಮೂಲಕ ಮುಂದಿಡಲಾಗುತ್ತದೆ.

ಪುರಾಣೀಕರಣದ ರೀತಿಯಲ್ಲಿ ಹೆಣೆದಿರುವ ದೃಶ್ಯಾವಳಿಗಳು ಬೇರೆ ಬೇರೆ ಸಂದರ್ಭದಲ್ಲಿ ಬಸವಣ್ಣನವರ ಆಂತರಿಕ ತುಮುಲವನ್ನು, ಅವರ ಘನತೆಯನ್ನು ಚಿತ್ರಿಸುತ್ತವೆ. ಅಂಥ ದೃಶ್ಯವನ್ನು ನಟಿಸುತ್ತ ನಗೆಯ ಮಾರಿತಂದೆ:

ತೇವ ತುಂಬಿದ ಕಣ್ಣುಗಳಿಂದ
ಮೋರೆ ಕಿವುಚುವುದು ಕಳವಳದಿಂದ
ಒಮ್ಮೆ ಜನರ ಕಡೆ, ಒಮ್ಮೆ ಮುಗಿಲ ಕಡೆ
ನೋಡುತ ನೋಡುತ ನಿಡುಸುಯ್ಲಿಕ್ಕಿ
'ಕಾಲಲಿ ಕಟ್ಟಿದ ಗುಂಡು
ಕೊರಳಲಿ ಕಟ್ಟಿದ ಬೆಂಡು
ತೇಲಲೀಯದು ಗುಂಡ
ಮುಳಗಲೀಯದ ಬೆಂಡು
ಕಾಲಾಂತಕನೆ ಕಾಯೋ ಕೂಡಲಸಂಗಮದೇವ'

ಪುನರುಕ್ತಗೊಳಿಸುವಲ್ಲಿ ವಿಷಾದ ಮಡುಗಟ್ಟುವಂತೆ ಮಾಡುತ್ತಾರೆ. ನೀಲಾಂಬಿಕೆ ಹೇಳುವ

"ಬಸವರಸು ಹುಟ್ಟು ಸಾವುಗಳನ್ನು ಮೆಟ್ಟಿದವರು" ಎಂಬ ಮಾತಿನಲ್ಲಿ ಅವರ ಹಿರಿಮೆಯನ್ನು ಸಾರಿದ್ದಾರೆ, ಮಾಚಿದೇವ.

ನೀವು ಬರುವ ಈ ರುದ್ರಭೂಮಿಯಲ್ಲಿ ಸಿಡಿಲು ಬಡಿದ ಮರದ ಪಕ್ಕ ಧಾನಸ್ಥನಾಗಿದ್ದೆ. ಭ್ರೂ ಮಧ್ಯದಲ್ಲಿ ಏನೋ ಹಿಡಿದ ಹಾಗಾಗಿ ಒಳಹೊರಗೆಲ್ಲ ಬೆಳಕು. ಒಬ್ಬ ಪುಟ್ಟ ಹುಡುಗನ ರೂಪದಲ್ಲಿ ಬಸವರಸರು ನಿಂತಿದ್ದರು. ಅವರ ಪುಟ್ಟ ಕೈಗಳಲ್ಲಿ ಬೆಟ್ಟದಷ್ಟು ದೊಡ್ಡ ಹೊರೆ.

ಅವರೆಂದರು; 'ಮಾಚಿದೇವರೇ, ಇದು ಹೊರೆಯಲ್ಲ, ಶಿವನ ಕಂತೆ. ಇದರಲ್ಲಿ ಎಂಬತ್ತುನಾಲ್ಕು ಲಕ್ಷ ಜೀವರಾಶಿಗಳನ್ನು ಸಾಕಿದ್ದೇನೆ. ಹೊಟ್ಟೆಯಲ್ಲಿರಿಸಿಕೊಂಡು ಸಾಕಿದ್ದೇನೆ. ಇನ್ನು ಇದು ನಿಮ್ಮ ಪಾಲು.' ನೋಡು ನೋಡುತ್ತಿದ್ದ ಹಾಗೇ ಬಸವರಸರು ದೂರ ದಿಗಂತದ ಬಳಿ ಮರೆ ಯಾಗುತ್ತಿದ್ದರು. ಮತ್ತೆ ಕೂಗಿ ಹೇಳಿದರು. ಆ ಹೊರೆ ಎಷ್ಟು ಭಾರವೆಂದು ಹೊತ್ತು ಬಲ್ಲೆ. ಆದರೆ ಸ್ನೇಹವೇ ಹಾಗೆ, ಸ್ನೇಹವೇ ಹಾಗೆ..." (೬೪) ಎಂದು ಬಸವರನ್ನು ಅಲೌಕಿಕಗೊಳಿಸುತ್ತಾರೆ.

ಹೀಗೆ ಬಸವಣ್ಣ ವೇದಿಕೆಗೆ ಬರದಿದ್ದರೂ ಚಳವಳಿಯ ಎಲ್ಲ ಹಂತಗಳಲ್ಲಿ ಅವರ ಮಹತ್ವವನ್ನು ಸ್ಥಾಪಿಸಲಾಗಿದೆ. ಅಂದರೆ ಬಸವಣ್ಣ ಸಂಘಟಿಸಿದ ಸಂಘರ್ಷ ಲೌಕಿಕ ಪಾರಲೌಕಿಕವಾಗಿ ವಿಸ್ತರಿಸಿಕೊಳ್ಳುವ ಮತ್ತು ಸಂಘರ್ಷದ ನಿರಂತರತೆಯನ್ನು ಕಾದುಕೊಳ್ಳುವ ಆಶಯವನ್ನು ಪ್ರಸ್ತುತಪಡಿಸುತ್ತದೆ.

ಈ ಆಶಯದ ಮೇಲೆ ಒತ್ತಾಸೆಯನ್ನಿಟ್ಟು ಲೇಖಕರ ದೃಷ್ಟಿ ತನಗೆ ತಾನೇ ಒಂದು ಮಿತಿಯನ್ನು ಹೇರಿಕೊಳ್ಳುತ್ತದೆ. ಅಂದರೆ ಹನ್ನೆರಡನೇ ಶತಮಾನದ ಕ್ರಾಂತಿಯ ವಿಫಲತೆಯ

ಕಾರಣವನ್ನು ಬಸವಣ್ಣನವರ ಸೈದ್ಧಾಂತಿಕ ಕೊರತೆಯ ಕಡೆ ಅಷ್ಟಾಗಿ ಗಮನ ಹರಿಸುವುದಿಲ್ಲ. ಇದನ್ನೇ ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ಚರಿತ್ರೆಯ ಸಂದರ್ಭದಲ್ಲಿ ಕ್ರಾಂತಿಯ ವಿಫಲತೆಯ ಅನಿವಾರ್ಯತೆಯನ್ನು ವಿಶ್ಲೇಷಣೆಗೆ ಗುರಿಪಡಿಸುವುದಿಲ್ಲ. ಬಿಜ್ಜಳನ ಎದುರು ನೀಲಾಂಬಿಕೆ ಹೇಳುವ,

> "ಚಿಂತೆ ಬೇಡ, ನೀವಲ್ಲದೆ ಯಾರು ಚಕ್ರವರ್ತಿಗಳಾಗುತ್ತಿದ್ದರೂ ಬಸವರ ಕಥೆ ನೀರಿನಲ್ಲೇ ಮುಗಿಯುತ್ತಿತ್ತು. ಕಲ್ಯಾಣದ ಕಥೆ ಹೀಗೇ ಮುಂದುವರಿಯುತ್ತಿತ್ತು" (೬೨) ಎಂಬ ಮಾತು ಧ್ವನಿಪೂರ್ಣವಾಗಿದ್ದರೂ (ಇಲ್ಲಿ ನೀರಿನಲ್ಲಿ ಚರಿತ್ರೆ ಸಂಕೇತಿಸುವುದನ್ನು ಗಮನಿಸಿದರೆ ಅದರ ಮಹತ್ವ ಅರಿವಾಗುತ್ತದೆ). ಅದರ ವಿಸ್ತಾರ ದಾಖಲಾಗಲಿಲ್ಲ. ಆದರೆ ಸಂಘರ್ಷದ ನಿರಂತರತೆಯನ್ನು ಮತ್ತು ಸಾಮಾನ್ಯ ಜನತೆಯ ಸುಪ್ತಶಕ್ತಿಯ ಚಾರಿತ್ರಿಕ ಪ್ರಖರತೆಯನ್ನು ದರ್ಶಿಸುವ ಮತ್ತು ಎತ್ತಿ ಹಿಡಿಯುವ ಕಲಾಕೃತಿಯಾಗಿ "ಮಹಾಚೈತ್ರ" ಹೆಸರು ಮಾಡಿದೆ.

*

ವೈಚಾರಿಕತೆಯ ಮೇಲೆ ಪರಿಸರದ ಪ್ರಭಾವ: ಕುವೆಂಪು ಮತ್ತು ದ.ರಾ. ಬೇಂದ್ರೆ

ಕುವೆಂಪು ಮತ್ತು ದ.ರಾ. ಬೇಂದ್ರೆ ಕಾವ್ಯ ನಿರೀಕ್ಷಿಸುವ ವಿಮರ್ಶೆ ಎಂಬ ತಲೆಬರಹದಿಂದ ಏನನ್ನು ನಿರೀಕ್ಷಿಸಲಾಗುತ್ತಿದೆ ಎಂದು ಆಲೋಚಿಸಿದಾಗ ಒಂದು ಚಾರಿತ್ರಿಕವಾದ ಸೂಕ್ಷ್ಮ ನನಗೆ ತೋರುತ್ತಿದೆ. ಇದನ್ನು ನಾನು ತುಸು ತಾತ್ವಿಕವಾಗಿ ವಿವರಿಸುವ ಅವಶ್ಯಕತೆಯಿದೆ.

ಒಂದೊಂದು ಕಾಲ ಘಟ್ಟದಲ್ಲಿ ಕೆಲವು ಕವಿಗಳು ವಿಮರ್ಶೆಗೆ ಪಕ್ಕಾಗುತ್ತಾರೆ. ಉಳಿದವರು ನಿರ್ಲಕ್ಷಕ್ಕೆ ಒಳಗಾಗುತ್ತಾರೆ. ಇದು ಯಾಕೆ? ಉತ್ತಮ ಕವಿ ಎಲ್ಲರ ಮನ ಸೆಳೆಯುತ್ತಾನೆ; ಅಥವಾ ಸೆಳೆಯುತ್ತಾಳೆ ಎಂದರೆ, ಕೇವಲ ಬೋಳೆತನದ ಉತ್ತರವಾಗುತ್ತದೆ. ಅಥವಾ ಬೇಕೆಂತಲೇ ಪ್ರಚಾರಪಡಿಸುವ ಮೋಸದ ಮಾತಾಗುತ್ತದೆ. ಯಾಕೆಂದರೆ ಈ 'ಉತ್ತಮ'ವನ್ನು ನಿರ್ಣಯಿಸುವ ಅಂಶಗಳು ಯಾವವು? ಈ ಅಂಶಗಳು ಸಾಕ್ಷೇಪವೆ ಅಥವಾ ಸ್ವಯಂ ಸ್ವತಂತ್ರವೆ? ಅಥವಾ ಕವಿಯ ಭಾಷೆ ತಂತ್ರ ಅಂದರೆ ಕಾವ್ಯಮೀಮಾಂಸೆಗೆ ಸಂಬಂಧಿಸಿದ ಅಂಶವೆ?

ಉತ್ತಮ ಕವಿತೆಯೆಂದು ನಿರ್ಣಯಿಸುವಾಗ ಕಾವ್ಯತತ್ವಕ್ಕೆ ಸಂಬಂಧಿಸಿದ ಅಂಶ ನಿಶ್ಚಯವಾಗಿ ಮುಖ್ಯ ಅಂಶವಾಗಿದೆ. ಆದರೆ ಅದಷ್ಟೇ ಅಲ್ಲ. ಅದಕ್ಕಿಂತ ಬಹುಮುಖ್ಯವಾದ ಅಂಶ ವರ್ಗ ಮತ್ತು ವರ್ಣ ಹಿತಾಸಕ್ತಿ. ಅದನ್ನೇ ನಾವು ಮುಖ್ಯ ವಿಚಾರಧಾರೆ ಎಂದು ಕರೆಯುತ್ತೇವೆ. ವರ್ಗ ಮತ್ತು ವರ್ಣ ಸಂಘರ್ಷದ ಸಂದರ್ಭದಲ್ಲಿ ಸಂಸ್ಕೃತಿಕ (ಸೈದ್ಧಾಂತಿಕ) ಸಂಘರ್ಷ ಕೂಡ ಪ್ರಸ್ತುತವಾಗುತ್ತದೆ.

ಬೇಂದ್ರೆ ಮತ್ತು ಕುವೆಂಪು ಇಬ್ಬರೂ ಒಂದೇ ಚಾರಿತ್ರಿಕ ಸಂದರ್ಭದಲ್ಲಿ ಬಂದವರು. ಆದರೆ ಇಬ್ಬರೂ ನಿರ್ವಹಿಸಿದ ಪಾತ್ರಗಳು ಬೇರೆ ಬೇರೆ. ಇಬ್ಬರ ಜವಾಬ್ದಾರಿಗಳೂ ಬೇರೆ ಬೇರೆ. ಹೀಗಾಗಿ ಆಗಿನ ಮುಖ್ಯ ವಿಚಾರಧಾರೆ ಕುವೆಂಪುವನ್ನು ನಿರಾಕರಿಸಿತು. ಇದರ ಅತಿರೇಕ ಎಂದರೆ ಸವ್ಯರು "ಕುವೆಂಪು ಒಬ್ಬ ಕವಿಯೇ ಅಲ್ಲ" ಅನ್ನುವ ಮಟ್ಟಿಗೆ ಹೋಯಿತು. "ಅವನು ಕವಿಯೇನಯ್ಯ?" ಎಂದು ನವ್ಯಕವಿಗಳ ಗುಂಪು ಆಡಿಕೊಳ್ಳುತಿತ್ತೆಂಬುದು ಜನಜನಿತವಾದ ಸಂಗತಿಯಾಗಿದೆ. ಹಾಗಂತ ಮೊದ ಮೊದಲು ಬೇಂದ್ರೆಯನ್ನು ಇವರು ಲೇವಡಿ ಮಾಡಿದರು. ಆದರೆ ಬರಬರುತ್ತ ಬೇಂದ್ರೆಯನ್ನು ಎತ್ತಿಕೊಳ್ಳಲಾಯಿತು. ಈಗ ತಕ್ಕಡಿಯ ಪರಡಿ ಕುವೆಂಪು ಕಡೆ ವಾಲುತ್ತಿದೆ. ಈಗ ಬೇಂದ್ರೆಯನ್ನು ಬಚಾವ ಮಾಡಿಕೊಳ್ಳಬೇಕಾದ ಅರ್ಜೆನ್ಸಿ ನಮ್ಮೆಲ್ಲರ

ಮನಸ್ಸನ್ನು ಕಾಡುತ್ತಿದೆಯೇ? ಹಾಗೆ ಮಾಡುವಾಗ ಕುವೆಂಪುವನ್ನು ನಿರಾಕರಿಸಲು ಸಾಧ್ಯವಿಲ್ಲ. ಅವರನ್ನೂ ಎತ್ತಿಕೊಳ್ಳಬೇಕು. ಬೇಂದ್ರೆಯ ಸ್ಥಾನಚ್ಯುತಿಯಾಗದ ಹಾಗೆ ಮತ್ತೊಂದು ಬಿಂದುವಿನಲ್ಲಿ ನಿಲ್ಲಿಸಬೇಕು. ಇದೊಂದು ಸಾಂಸ್ಕೃತಿಕ ವ್ಯೂಹ (Strategy) ಭಗವದ್ಗೀತೆಯಲ್ಲಿ ಕೃಷ್ಣಪರಮಾತ್ಮ ನೀಚಯೋನಿಜರಾದ ಸ್ತ್ರೀಯರೂ, ಶೂದ್ರರೂ ಭಕ್ತಿಯಿಂದ ಒಂದು ತುಳಸೀದಳವನ್ನು ತನಗೆ ಅರ್ಪಿಸಿದರೂ ಅವರು ನನ್ನನ್ನು (ಬ್ರಹ್ಮನನ್ನು) ಸೇರುತ್ತಾರೆ ಎಂದಂತೆ, ಇಂಥ ದಾರಿ ಬ್ರಾಹ್ಮಣರಿಗೂ, ಕ್ಷತ್ರೀಯರಿಗೂ, ತೆರೆದಿಲ್ಲ. ಅವರು ಜ್ಞಾನ ಮಾರ್ಗದ ಮುಖಾಂತರವೇ ಆತನನ್ನು ಸೇರಬೇಕು. ಇದು ನೀಚಜನ್ಮಿಗಳಿಗೆ ಮಾತ್ರ ಮಿಾಸಲಾತಿ. ಅಂದರೆ ದುಡಿಯುವ ವರ್ಗ ದುಡಿಯುತ್ತಲೇ ಇರಬೇಕು. ಅವರಿಗೂ ಮುಕ್ತಿ ಸಿಕ್ಕುತ್ತಲ್ಲ. ಕೊನೆಯಲ್ಲಿ ಪರಮಾತ್ಮನಲ್ಲಿ ಸೇರಿದ ಮೇಲೆ ಸಮುದ್ರವನ್ನು ಸೇರುವ ನದಿ ನೀರಿನಂತೆ ಎಲ್ಲಾ ಒಂದೇ ಆಗುತ್ತದಲ್ಲ. ಹೀಗೆ ವರ್ಣಧರ್ಮವನ್ನು ಬಚಾವ ಮಾಡಬೇಕಾದರೆ ಕೃಷ್ಣ ಬೇರೊಂದೇ ಮಾನದಂಡವನ್ನು ನೀಡಿದಹಾಗೆ ಇಲ್ಲಿಯೂ ಕುವೆಂಪುವಿನ ಬಗ್ಗೆ ಕೃಷ್ಣಸಂತತಿಯವರಾಗಿ ನಾವು ಬೇರೆ ಮಾನದಂಡದ ರಿಯಾಯತಿ ನಿರ್ಮಿಸಬಯಸುತ್ತೇವೆಯೆ? ಯಾಕೆಂದರೆ ನವೋದಯ ವಿಮರ್ಶೆಯ ಕೇಂದ್ರ ಬೇಂದ್ರೆಯೇ ಆಗಿದ್ದರು. ನವ್ಯರಲ್ಲಿ ಅಡಿಗಮಾನದಂಡವಿದ್ದ ಹಾಗೆ. ಆದರೆ ಇದರ ಅವಶ್ಯಕತೆಯೇನೂ ಇಲ್ಲ. ಆ ಇಬ್ಬರೂ ನಿಶ್ಚಯವಾಗಿ ದೊಡ್ಡ ಕವಿಗಳೇ. ಇಬ್ಬರೂ ನಮಗೆ ಬೇರೆ ಬೇರೆ ಸಂಗತಿಗಳನ್ನು ಕಲಿಸುತ್ತಾರೆ. ಇವರಿಗಿಂತ ಇವರು ಮೇಲು ಎಂಬ ಆಟವನ್ನು ಈ ಕಾಲ ನಿರಾಕರಿಸಿದೆ, ಎಂಬ ನಿರ್ಣಯಕ್ಕೆ ಅಂಟಿಕೊಳ್ಳುವುದು ಸೂಕ್ತವೆಂದು ತೋರುತ್ತದೆ.

ನಾನು ಇಷ್ಟು ದೀರ್ಘವಾಗಿ ಚರ್ಚೆಯನ್ನು ಪ್ರಾರಂಭಿಸಬೇಕಾಯಿತೆಂದರೆ, ನನ್ನಲ್ಲಿ ಬೇಂದ್ರೆಗೆ ಬೇರೆ, ಕುವೆಂಪುಗೆ ಬೇರೆ ವಿಮರ್ಶಾ ರೀತಿಗಳಿಲ್ಲ. ಯಾಕೆಂದರೆ 'ಅವರವರ ಭಾವಕ್ಕೆ ಅವರವರ' ತೆರನಾಗಿ ತೋರುವ ಚಾಕಚಕ್ಯತೆಯಾಗಲೀ, ವಿಶ್ವವಿಶಾಲವಾದ ಒಳ್ಳೆತನವಾಗಲಿ ನನ್ನಲ್ಲಿ ಇಲ್ಲ.

ಇಬ್ಬರೂ ಒಂದೇ ಚಾರಿತ್ರಿಕ್ಕೆ ಘಟ್ಟಕ ಸೇರಿದ ಕವಿಗಳು ಎಂದು ಮೊದಲೇ ಹೇಳಿದ್ದೇನೆ. ಈಗ ಆ ಕಾಲ ಘಟ್ಟ ಈ ಇಬ್ಬರ ಮೇಲೂ ಮಾಡಿದ ಪ್ರಭಾವ ಮತ್ತು ಅವರು ನಿರ್ವಹಿಸಿದ ಜವಾಬ್ದಾರಿಯ ಕುರಿತು ಗಮನಿಸುವ.

ವಸಾಹತುಶಾಹಿ ಸಂದರ್ಭದಲ್ಲಿ ಉಂಟಾಗುವ ಸಾಂಸ್ಕೃತಿಕ ಸಂದರ್ಭದಲ್ಲಿ ಸಾಮಾಜಿಕವಾಗಿ ಆಗುವ ಮಾನಶಾಸ್ತ್ರೀಯವಾದ ಪರಿಣಾಮದ ಕುರಿತು ಹೆಚ್ಚಿನ ಚರ್ಚೆ ಇಲ್ಲಿ ಬೇಕಿಲ್ಲ. ಕುವೆಂಪು, ಬೇಂದ್ರೆ ಇಬ್ಬರೂ ಬರೆಯುವ ಕಾಲವೆಂದರೆ ಸ್ವಾತಂತ್ರ್ಯ ಹೋರಾಟ ಉತ್ಸಾಹಭರಿತ ಕಾಲ. ಸ್ವಾಭಾವಿಕವಾಗೇ ವಸಾಹತುಶಾಹಿಗೆ ಪ್ರಬಲವಾದ ವಿರೋಧವನ್ನು ಒಡ್ಡಬೇಕಾದ ಅನಿವಾರ್ಯತೆಯ ಹೊತ್ತು.

ಇಂಥ ಹೊತ್ತಿನಲ್ಲಿ ಎರಡು ಅಂಶಗಳು ಬಹಳ ಮುಖ್ಯವಾಗಿ ಕೆಲಸ ಮಾಡುತ್ತವೆ. ಒಂದು, ನಾನಿನಗಿಂತ ಕಡಿಮೆಯಲ್ಲ ಎಂದು ಹೊರಗಿನವರಿಗೆ ಹೇಳಿದರೆ, ನಾವು ಎಂಥ ಭವ್ಯ ಪರಂಪರೆಯನ್ನು, ಪುರಾತನ ಪರಂಪರೆಯನ್ನು ಹೊಂದಿದವರು ಎಂದು ಆತ್ಮಸ್ಥೈರ್ಯವನ್ನು

ಒಳಗಿನವರಿಗೆ ಉಂಟುಮಾಡುವುದು. ಎರಡು, ನಮ್ಮೊಳಗಿನ ಅನೇಕ ವರ್ಗ, ವರ್ಣ ಹೋರಾಟವನ್ನು ಅಂತರ್ಗತಗೊಳಿಸಿಕೊಂಡಿದ್ದರೂ ಸ್ವಾತಂತ್ರ್ಯ ಹೋರಾಟ ಶಿಥಿಲವಾಗದಂತೆ ಎಲ್ಲವನ್ನೂ ಮರೆಸಿ ಅಖಂಡವಾದ ವಿರೋಧವನ್ನು ಒಡ್ಡುವುದು. ಆದರೆ ಇದಕ್ಕೆ ಡಾ. ಅಂಬೇಡ್ಕರರು ಹೊರಗಾಗುತ್ತಾರೆ. ಯಾಕೆಂದರೆ ಸ್ವಾತಂತ್ರ್ಯ ಹೋರಾಟಕ್ಕೆ ತೊಡಗಿದ ಗುಂಪು ಅಂದರೆ ರಾಷ್ಟ್ರೀಯ ಕಾಂಗ್ರೆಸು ಹೊಸದೊಡ್ಡ ಉದ್ಯಮಿಗಳ, ಭೂಮಾಲಕರ ಹಾಗೂ ಇಂಗ್ಲೀಷ ಕಲಿತ ಮಧ್ಯಮವರ್ಗದವರ ಪ್ರಾಬಲ್ಯವನ್ನೆ ಹೊಂದಿತ್ತು. ಈ ಕಲಿತವರಲ್ಲೂ ಉಚ್ಚವರ್ಣೀಯರ ಪ್ರಾಬಲ್ಯವೇ ಹೆಚ್ಚಿನದಾಗಿತ್ತು.

ಹೀಗೆ ನಾವು ವಸಾಹತುಶಾಹಿಯ ಅಂದರೆ ಇಂಗ್ಲೀಷರ ಇಂಗ್ಲೀಷತ್ವವನ್ನು ನಿರಾಕರಿಸಲು ಮತ್ತು ಸ್ವರಕ್ಷಣೆಗಾಗಿ ಹಿಡಿದ ಡಾಲು ವೈದಿಕತ್ವವಾಗಿತ್ತು. ಪುನರುಜ್ಜೀವನದ ಈ ಸಂದರ್ಭದಲ್ಲಿ ಪ್ರಾಚೀನತೆಯ ವೈಭವವನ್ನು ನಾವು ಎತ್ತಿಹಿಡಿದೆವು. ಆದರೆ ಹೀಗೆ ಎತ್ತಿಹಿಡಿಯುವುದೆಂದರೆ ಬಹುಸಂಖ್ಯಾತ ಶೂದ್ರರಿಗೆ ದಮನಕಾರಿಯಾದ ಹಿಂದುತ್ವ ಅಥವಾ ಬ್ರಾಹ್ಮಣ್ಯವನ್ನು ಎತ್ತಿಹಿಡಿಯುವುದೇ ಆಗಿತ್ತು. ಈ ಇಬ್ಬರು ಕವಿಗಳಲ್ಲಿ ಸಾಂಪ್ರದಾಯಕವಾದ ಶಿಕ್ಷಣವನ್ನು ಬೇಂದ್ರೆ ಹೊಂದಿದ್ದರೆ, ಕುವೆಂಪು ರಾಮಕೃಷ್ಣ ಮಿಶನ್ ದಲ್ಲಿ ಶಿಕ್ಷಣ ಹೊಂದಿದ್ದರು. ರಾಮಕೃಷ್ಣ ಮಿಶನ್ನಿನ ಮುಖ್ಯಸ್ಥರಾದ ಸ್ವಾಮಿ ವಿವೇಕಾನಂದರು ವೈದಿಕದ ಅದ್ವೈತವನ್ನು ಎತ್ತಿಹಿಡಿಯುತ್ತಲೇ ಬ್ರಾಹ್ಮಣ್ಯದ ಮೇಲ್ಮೆಯನ್ನು ನಿರಾಕರಿಸುವುದು ಮಾತ್ರವಲ್ಲ, ತೀಕ್ಷಣವಾದ ಶಬ್ದಗಳಿಂದ ಖಂಡಿಸಿದ್ದರು. ಕುವೆಂಪುವಿನ ಮೇಲೆ ಸ್ವಾಮಿವಿವೇಕಾನಂದರ ಪ್ರಭಾವ ಅಪಾರವಾದುದು.

ಹೀಗೆ ಬ್ರಹ್ಮಸಮಾಜ, ರಾಮಕೃಷ್ಣ ಮಿಶನ್ ಇತ್ಯಾದಿಗಳು ಹಿಂದುತ್ವದಲ್ಲೆ ಉದಾರವಾದಿತ್ವವನ್ನು ಹೆಚ್ಚಿಸುತ್ತಿದ್ದರೂ ಬಾಲಗಂಗಾಧರ ತಿಲಕರಂಥವರು ಇನ್ನು ವರ್ಣಧರ್ಮಕ್ಕೆ ಅಂಟಿಕೊಂಡಿದ್ದರು. ಇಂಥ ಸಂದರ್ಭದಲ್ಲಿ ಬೇಂದ್ರೆ ಮತ್ತು ಕುವೆಂಪು ಇಬ್ಬರೂ ಬಂದರು. ಬೇಂದ್ರೆ ಬಡವರಾಗಿದ್ದರೂ ಬ್ರಾಹ್ಮಣರಾಗಿದ್ದರು. ಕುವೆಂಪು ಭೂಮಾಲಿಕರಾಗಿದ್ದರೂ ಶೂದ್ರರಾಗಿದ್ದರು. ಆದ್ದರಿಂದ ಬೇಂದ್ರೆಗೆ ವೈದಿಕ ಉಂಟು ಮಾಡಬಹುದಾದ ವಾತಾವರಣವನ್ನು ಮತ್ತು ಮಾನಸಿಕ ಸ್ವಾಸ್ಥ್ಯವನ್ನು ಕುವೆಂಪುವಿಗೆ ಮಾಡಲು ಸಾಧ್ಯವಿರಲಿಲ್ಲ. ಬೇಂದ್ರೆಗೆ ಸಿದ್ಧ ಸಮಾಜ ಕಣ್ಣೆದುರಿಗಿದ್ದರೆ ಕುವೆಂಪುವಿನ ಮನದಾಳದಲ್ಲಿ ಭಯಂಕರ ತುಮುಲಗಳಿದ್ದವು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಎಲ್ಲವನ್ನು ಮರೆಸಬಹುದಾದ ಧಾರ್ಮಿಕ ಪುನರುಜ್ಜೀವನದ ದಟ್ಟ ಪ್ರಭಾವ ಸಹ ಅದನ್ನು ಹತ್ತಿಕ್ಕಲು ಸಾಧ್ಯವಿರಲಿಲ್ಲ. ಅಂಥ ಸಂದರ್ಭದಲ್ಲಿ ಕುವೆಂಪು ಕಟ್ಟುವ ಕೆಲಸವನ್ನು ಅಂದರೆ ಇಡೀ ಶೂದ್ರ ಸಮಾಜವನ್ನು ಹಿತಾಸಕ್ತ ಬ್ರಾಹ್ಮಣ್ಯಕ್ಕೆ ಮುಖಾಮುಖಿ ಮಾಡುವ ಕೆಲಸವನ್ನು ಕೈಗೆತ್ತುಕೊಂಡರೆ, ಬೇಂದ್ರೆ 'ಅರ್ಥವಿಲ್ಲ, ಸ್ವಾರ್ಥವಿಲ್ಲ ಬರಿಯ ಭಾವಗೀತೆ'ಕ್ಕೆ ಒಲಿದರು. ಇದರಿಂದ ಕುವೆಂಪು ಕಾವ್ಯದ ಹಿಂದೆ ದಟ್ಟವಾಗಿರುವ ಒಂದು ಸಾಮಾಜಿಕ ಸಿದ್ಧಾಂತ ಅಥವಾ ಬದ್ಧತೆ ಬೇಂದ್ರೆ ಕಾವ್ಯಕ್ಕೆ ಇಲ್ಲವಾಯಿತು. ಇದರರ್ಥ ಬೇಂದ್ರೆ ಸಮಾಜವನ್ನು ಗಮನಿಸಲೇ ಇಲ್ಲ ಎಂದರ್ಥವಲ್ಲ. ಅವರು ಕವನ ಬರೆದೇ ಜೈಲಿಗೆ ಹೋದರು. ಆದರೆ ಅವರಲ್ಲಿ ಒಂದು ಸಾಮಾಜಿಕ ಸಿದ್ಧಾಂತದ ಸಾತತ್ಯ ಇಲ್ಲ. ಅದು ಭಾವಗೀತೆಯ ಹಾಗೇ ಭಾವಲಹರಿ.

ಬೇಂದ್ರೆ ಸಾಂಸ್ಥಿಕ ಧರ್ಮವನ್ನು ಒಪ್ಪಿಕೊಂಡವರು. ಆದ್ದರಿಂದ ಅವರು ತಮ್ಮೊಳಗೇ ತಾನು ಮಾತಾಡಿಕೊಂಡರು. ಅಂದರೆ ಅವರ ಕಾವ್ಯಕ್ಕೆ ಹೆಚ್ಚು ಅಂತರ್ಮುಖತೆ ಪ್ರಾಪ್ತವಾಯಿತು. ಆದರೆ ಕುವೆಂಪುವಿಗೆ ಆ ಬಿಡುವೂ, ಸ್ವಸ್ಥತೆಯೂ ಇದ್ದಿರಲಿಲ್ಲ. ಆದ್ದರಿಂದ ಸಂಬೋಧಿಸಿಯೇ ಬರೆದರು. ಅವರಿಗೆ ಕೂಗಿ ಕೂಗಿ ಹೇಳಬೇಕಾಗಿತ್ತು. ಒಂದು ಕಡೆ ಉಚ್ಚ ವರ್ಣಿಯರ ಜೊತೆ, ಮುಕ್ಕಾಲುಪಾಲು ಮೂಕವಾದ ಶೂದ್ರರಿಗೆ 'ಅವಕಾಶ ಸಿಕ್ಕರೆ ನಿಮಗೇನು ಕಡಿಮೆ' ಎಂದು ಪ್ರತಿಕಾರ ಮಾಡಬೇಕಿತ್ತು. ಅದರಿಂದ ಅವರು ಸಂಸ್ಕೃತಭೂಯಿಷ್ಠ ಹಳಗನ್ನಡ ಪ್ರಾಬಲ್ಯವುಳ್ಳ ಹೊಸ ಛಂದಸ್ಸನ್ನು ನಿರ್ಮಿಸಿಕೊಳ್ಳುತ್ತ ಭಾಷೆಯನ್ನು ಬಳಸಿದರು. ಇದೊಂದು ಶೂದ್ರ ಕಾಂಪ್ಲೆಕ್ಸ ಕೂಡ ಇರಬಹುದು. ಇನ್ನೊಂದು ಕಡೆ ಅವರು ಯಾರಿಗೆ ಅಂದರೆ ಶೂದ್ರ ಸಮಾಜಕ್ಕೆ ಕೊಡಬೇಕಾದ ಆತ್ಮಸ್ಥೈರ್ಯ ಇತ್ತು. ಒಂದು ಬಗೆಯಿಂದ ನೋಡಿದರೆ ಕುವೆಂಪುವಿನ ಸಂದರ್ಭ ದಲಿತ ಬಂಡಾಯ ಲೇಖಕರ ಸಂದರ್ಭದಂತೆಯೇ ಇತ್ತು. ಆದರೆ ಬಂಡಾಯದವರಿಗೆ ಚಾರಿತ್ರಿಕ ಗ್ರಹಿಕೆ ನಿರುಂಬಳವಾಗಿರುವಷ್ಟು ಆಗ ಇರಲಿಲ್ಲ. ಆದರೆ ಬೇಂದ್ರೆಯ ಪರಿಸರ ಬೇರೆಯಿತ್ತು. ಅವರ ಸುತ್ತಲಿನ ಭಾಷೆಗೂ ಉಚ್ಚ ಜಾತಿಯವರ ಭಾಷೆಗೂ ವ್ಯತ್ಯಾಸವಿರಲಿಲ್ಲ. ಅಲ್ಲದೆ ಬೇಂದ್ರೆಯ ಮುಂದೆ ಅಂಥ ಸಾಮಾಜಿಕ ಸವಾಲೇ ಇರಲಿಲ್ಲ. ಆದ್ದರಿಂದ ಅವರಿಗೆ ಆಯ್ಕೆಯ ಪ್ರಶ್ನೆಯೇ ಇರಲಿಲ್ಲ. ಅಲ್ಲದೆ ಆಗಲೇ ಜನಪದ ಭಾಷೆಯಲ್ಲೇ ತತ್ವ ಪದಗಳ ಸಾರ್ಥಕ್ಯವಿತ್ತು. ಆದ್ದರಿಂದ ಬೇಂದ್ರೆಗೆ ಭಾಷೆಯಲ್ಲಿ ಹೆಚ್ಚಿನ ಕುಸುರಿನ ಕೆಲಸ ಸಾಧ್ಯವಾಯಿತು. ಆದರೆ ಕುವೆಂಪುವಿನ ಮುಂದೆ ಇರುವ ಸವಾಲು ಕೇವಲ ಕಾವ್ಯದ್ದಾಗಿರಲಿಲ್ಲ. ಸಂಸ್ಕೃತಿಗೇ ಸಂಬಧಿಸಿದ್ದಿತ್ತು.

ಹಾಗಂದಾಕ್ಷಣ ಬೇಂದ್ರೆ ಕೇವಲ ಜನಪದ ಭಾಷೆಯಲ್ಲೇ ಬರೆದರು ಅನ್ನುವುದು ಸುಳ್ಳು. ಅವರು ಗ್ರಾಂಥಿಕ ಭಾಷೆಯನ್ನು ಬಳಸಿದ್ದಾರೆ. ಅವರ ಅತ್ಯುತ್ತಮ ಪದ್ಯ ಹೆಚ್ಚುಪಾಲು ಬಂದಿರುವುದು ಗ್ರಾಂಥಿಕ ಭಾಷೆಯಲ್ಲೇ. ಹಾಗೆಯೇ ಕುವೆಂಪು ಸಹಜ ಗ್ರಾಂಥಿಕ (ಬೇಂದ್ರೆ ಬಳಸಿದಂಥ) ಭಾಷೆಯನ್ನು ಬಳಸಿದ್ದಾರೆ. ಆದ್ದರಿಂದ ಭಾಷೆಯ ಕುರಿತು ಕುವೆಂಪುವಿನ ಮೇಲೆ ಮಾಡುವ ಆರೋಪ ಪೂರ್ಣ ಸತ್ಯವಲ್ಲ.

ಬೇಂದ್ರೆ ವಸಾಹತುಶಾಹಿಯ ಹಂತದಲ್ಲಿ ತನ್ನತನದ ಹುಡುಕಾಟದಲ್ಲಿ ಹಾಗೂ ಸ್ವಾತಂತ್ರ್ಯ ಹೋರಾಟದ ಭಾರತಮಾತೆಯದ ಕಲ್ಪನೆಯಲ್ಲಿ ಮಾತ್ರ ದೇವತೆಯನ್ನು ಕಂಡುಕೊಂಡರು. ಅವರು ಜಗನ್ಮಾತೆಯನ್ನು ನಾನಾ ರೀತಿಯಿಂದ ಆಹ್ವಾನಿಸಿದ್ದಾರೆ. ಇದು 'ಭಾರತಮಾತೆ'ಯ ಮಾತ್ರವಲ್ಲ, ಜಾನಪದ ನಿಷ್ಠವಾದ ಹೆಣ್ಣುದೇವತೆಯ ಪ್ರತಿಷ್ಠಾಪನೆ ಕೂಡ. ಆದರೆ ಇದು ದೈವಿಕ ಮಟ್ಟದಲ್ಲೇ ಇರುತ್ತದೆಯೇ ಹೊರತು ಸಾಮಾಜಿಕವಾಗುವುದಿಲ್ಲ. ಅವಳು ಸಹಾನುಭೂತಿಗೆ ಪಾತ್ರಳೂ, ಸಹನಾಶೀಲಳೂ ಆಗುತ್ತಾಳೆ. ಆದರೂ ತನ್ನತನದ ಹುಡುಕಾಟದ ಕಾಲ ಘಟ್ಟದಲ್ಲಿ ಕವಿಯೊಬ್ಬ, ಕಂಡುಕೊಂಡ ಕಾವ್ಯಾತ್ಮಕ ಪ್ರತಿಮೆ ಇದಾಗಿದೆ.

ಕುವೆಂಪು ನಿಸರ್ಗ ಕವಿ ಎಂದೇ ಹೆಸರಾಗಿದ್ದಾರೆ. ಅವರೆ ಕುವೆಂಪು ನಿಸರ್ಗ ಔದ್ಯೋಗೀಕರಣ ರುಕ್ಷತೆಗೆ ಬೇಸತ್ತ ಆಶ್ರಯ ಹುಡುಕಿಬಂದ ಕವಿಯಲ್ಲ. ಅವರ ನಿಸರ್ಗ ಪ್ರೀತಿಯ ಗುಟ್ಟು ಅವರು ನಿಸರ್ಗವನ್ನು 'ಪರಮನ ಪ್ರೀತಿ' ಎಂದು ಹೇಳುವುದರಲ್ಲಿದೆ. ಅಂದರೆ

ಊಳಿಗಮಾನ್ಯ ವ್ಯವಸ್ಥೆಯಿಂದ ಬಂದ ಕುವೆಂಪು ಅವರಿಗೆ ಸಹಜವೇ ಆಗಿರಬೇಕಾದ ಸಾಂಸ್ಥಿಕ ಧರ್ಮವನ್ನು ಅವರು ನಿರಾಕರಿಸಿದರು. ಅದಕ್ಕೆ ಪ್ರತಿಯಾಗಿ ನಿಸರ್ಗವನ್ನು 'ಸಾಂಸ್ಥಿಕ' ಗೊಳಿಸಿಕೊಂಡರು. ಅಂದರೆ ಸಾಂಸ್ಥಿಕ ಧರ್ಮವನ್ನು ನಿರಾಕರಿಸಿದರು. ಕುವೆಂಪು ನಿಸರ್ಗದಲ್ಲೇ ದೇವರು ಧರ್ಮ ಕಂಡು ಕೊಂಡರು. ಹೀಗಾಗಿ ಅವರ ನಿಸರ್ಗ ಪ್ರೀತಿ ಅಖಂಡವಾದುದಾಗಿದೆ. ಕಾವ್ಯದಲ್ಲಿ ಇದು ಹೆಚ್ಚು ಭಾವುಕವಾಗುವುದಕ್ಕೆ ಇದೂ ಕಾರಣವಾಗಿರಬಹುದು.

ಕುವೆಂಪು ಬೇಂದ್ರೆ ಇಬ್ಬರೂ ಕನ್ನಡ ಭಾಷೆಯನ್ನು ಬೆಳೆಸಿದವರೆ. ಇಬ್ಬರೂ ಸಮಕಾಲೀನರಾದ ದೊಡ್ಡ ಕವಿಗಳು. ಇಬ್ಬರಿಂದಲೂ ನಮ್ಮ ಇಂದಿನ ಕಾವ್ಯ ತೆಗೆದುಕೊಳ್ಳಬೇಕಾದ ಮಹತ್ವದ ಅಂಶಗಳಿವೆ. ಆದರೆ ಕುವೆಂಪು ಮುಖಾಮುಖಿಯಾದ ಸಾಮಾಜಿಕ ಸವಾಲು ನಮಗೆ ಹತ್ತಿರದ್ದಾಗಿದೆ ಮತ್ತು ಮಹತ್ವದ್ದಾಗಿದೆ.

ಬೇಂದ್ರೆಯನ್ನು ಚಿಂತಕ ಕವಿ ಎಂದು ಕರೆಯಬಹುದಾದರೆ ಕುವೆಂಪು ಚೈತನ್ಯದ ಕವಿ.

*

ಡಾ. ಗೌರೀಶ ಕಾಯ್ಕಿಣಿಯವರ ವೈಚಾರಿಕ ವಾಙ್ಮಯ

ಡಾ. ಗಾರೀಶ ಕಾಯ್ಕಿಣಿಯವರು ನಾಡಿನ ವಿರಳ ವಿಚಾರವಾದಿಗಳಲ್ಲಿ ಒಬ್ಬರು. ಕನ್ನಡ ಗದ್ಯ ಶೈಲಿಯಲ್ಲಿ ಹದಗೊಳಿಸಿದ ಮುಖ್ಯ ಲೇಖಕರಲ್ಲಿ ಅವರೂ ಒಬ್ಬರು. ಅವರ ವೈಚಾರಿಕತೆಯ ಗದ್ಯ ಒಣ ಗದ್ಯವಲ್ಲ. ಅದು ಕಾವ್ಯದಂತೆ ಕುಶಲ. ತಾರೆಗಳಂತೆ ಅಲ್ಲಲ್ಲಿ ಮಿಂಚುವ ಪರಿಹಾಸದ ಬೆಳದಿಂಗಳು. ಕೇವಲ ಪರಿಹಾಸವಲ್ಲ. ಕಟಕಿ, ವಿಡಂಬನೆಯೂ ಉಂಟು. ಇಷ್ಟಾಗಿಯೂ ನಿಶ್ಚಿತವಾದ ತರ್ಕ, ವಿಪುಲವಾದ ಉದಾಹರಣೆ, ತನ್ನದೇ ಆದ ಒಳನೋಟ, ಬಹುಶ್ರುತತ್ವದಿಂದ ಪುಷ್ಟಿಗೊಂಡ ತಿಳಿವಳಿಕೆಯ ಅಭಿವ್ಯಕ್ತಿ ಅವರ ಗದ್ಯ ವೈಶಿಷ್ಟ್ಯ. ಒಮ್ಮೊಮ್ಮೆ ಕಾವ್ಯದ ಮೋಡಿ ಜಾಸ್ತಿಯಾದಾಗ ವಿಷಯದ ಸುಲಭತೆಗೆ ಭಂಗ ಬರುತ್ತದಾದರೂ ವಿಷಯ ಗಾಂಭೀರ್ಯದ ಕೊರತೆಯಿಂದ ನರಳುವುದಿಲ್ಲ. ಇದೇ ವರ್ಷ ಈ ಮೇಧಾವಿಗೆ ವಿಶ್ವವಿದ್ಯಾನಿಲಯ ಡಿಲಿಟ್ (ಡಾಕ್ಟರೇಟ) ಪದವಿಯನ್ನು ಕೊಟ್ಟು ಎಲ್ಲರಿಗೂ ಸಂತೋಷವನ್ನು ತಂದಿದೆ. ಈ ಸಂದರ್ಭದಲ್ಲಿ ಅವರ ವೈಚಾರಿಕ ಭವ್ಯವಾದ ಒಂದು ಕಿರುನೋಟ.

ಡಾ. ಗೌರೀಶರು ತಮ್ಮ ವೈಚಾರಿಕ ಬರಹವನ್ನು ಪ್ರಕಟಿಸಲು ಹಮ್ಮಿಕೊಂಡ ಕಾಲ ವಿಶಿಷ್ಟವಾದುದು. ಅಂದರೆ ಈ ಶತಮಾನದ ನಲವತ್ತರ ಮತ್ತು ಐವತ್ತರ ಭಾರತದ ಸ್ವಾತಂತ್ರ ಸಂಗ್ರಾಮದ ಕಾಲ. ಅದು ವಿಚಾರಕ್ಕಿಂತ ಆವೇಶ, ಸಂಶಯಕ್ಕಿಂತ ಶ್ರದ್ಧೆ, ಜ್ಞಾನಕ್ಕಿಂತ ಭಕ್ತಿ, ವಿಶ್ಲೇಷಣೆಗಿಂತ ವೇಗೊತ್ಕರ್ಷತೆಗೆ ಪ್ರಾಮುಖ್ಯತೆ ಇರುವ ಕಾಲ. ಇದು ನಮ್ಮ ಸ್ವಾತಂತ್ರ್ಯ ಹೋರಾಟಕ್ಕೂ ಹೊರತಾಗಿರಲಿಲ್ಲ. ಗೌರೀಶರವರು ಮಾತಿನಲಿ ಹೇಳಬೇಕೆಂದರೆ "ಗಾಂಧಿವಾದ, ಬುದ್ಧಿವಾದವಲ್ಲ ಭಾವಾವೇಶ. ಇದು ಸ್ವಾಭಾವಿಕ. ಆದರೆ ಆಧ್ಯಾತ್ಮ ಆಳವಾದ ಶ್ರದ್ಧೆ ಒಂದು ಬಗೆಯ ಭಕ್ತಿಯ ಮಾರ್ಗ, ಅನೇಕ ವ್ರತ ದೀಕ್ಷೆ, ವಿಧಿಗಳ ಹೊಸದೊಂದು ಗುರುಪೀಠಪದ್ಧತಿ. ಮಹಾತ್ಮಾರಿಗೂ ಅರ್ಥವಾಗದ ಅವರ ಒಳದನಿಯ ಪ್ರೇರಣೆ. ಇವೆಲ್ಲದರ ಪರಿಣಾಮ ಧಾರ್ಮಿಕತೆ, ಗೂಢತೆ, ಮೂಢಭಾವನೆ, ಅಂಧಶ್ರದ್ಧೆ, ಬುದ್ಧಿಗೆ ನಿಲುಕದ ಹಟವಾದ ಇವೆಲ್ಲ ಗುಣಗಳಿಂದ ಯುಕ್ತವಾದ ಒಂದು ಭಾವೋದ್ವೇಗದ ವಾತವರಣ ಮಬ್ಬಿನಂತೆ ದೇಶದ ಚಿದಾಕಾಶದಲ್ಲಿ ಹಬ್ಬಿತು ಎನ್ನುವ ಅವರು ಮಹಾತ್ಮರ ಸಾಧನೆಯನ್ನು ಜನರ ಆವೇಶವನ್ನು ಅಗೌರವದಿಂದ ಕಾಣುವುದಿಲ್ಲ. ಗೌರೀಶರು ಮಹಾತ್ಮರ ಬಗ್ಗೂ ಅಂದಿನ ಚಾರಿತ್ರಿಕ ಸಂಗತಿಯ ಬಗ್ಗೂ ಅಪಾರವಾದ ಗೌರವವನ್ನು ಹೊಂದಿದವರೇ ಆದರೂ ಕಾಲ ವಸ್ತುಸ್ಥಿತಿಯನ್ನು

ಮೊದಲ ಪ್ರಕಟನೆ: ಮುಂಗಾರು ೯-೭-೧೯೯೫

ಮೂರ್ತಿಕರಿಸುವಲ್ಲಿ ದಾಕ್ಷಿಣ್ಯ ತೋರುವುದಿಲ್ಲ. ರಾಜಕೀಯ ಸ್ವಾತಂತ್ರ್ಯ ಬಂದೊಡನೆ ಬೌದ್ಧಿಕ ಸ್ವಾತಂತ್ರ್ಯ ಆರಂಭವಾಗಬೇಕು ಎಂಬುದು ಅವರ ನಿಲುವು. ಆದರೆ ನಮ್ಮಲ್ಲಿ ಅದಾಗಲಿಲ್ಲ. ನಾವು ಇತಿಹಾಸಕ್ಕೆ ಆಚೆಯ ಪುರಾಣ ಪುಣ್ಯಕಥೆಗಳಿಂದ ಸ್ಫೂರ್ತಿ ಪಡೆದು ಹೊಸದೊಂದು ಬಗೆಯ ಅಂಧಶ್ರದ್ಧೆ ಹುಟ್ಟಿಸಿಕೊಂಡಿದ್ದೇವೆ. ಇದರ ಅನಿಷ್ಟ ಫಲವೆಂದರೆ 'ನಮ್ಮ ಸುಶಿಕ್ಷಿತ ಮೇಧಾವಿಗಳಲ್ಲಿಯೂ ಒಂದು ಕೃತಕ ಧಾರ್ಮಿಕತೆ, ಅಪ್ರಾಮಾಣಿಕವಾದ ಧಾರ್ಮಿಕತೆ, ಹೊಸ ಬಗೆಯ ಕರ್ಮಠತ ತಲೆಯೆತ್ತಿದೆ. ಇದು ಅನುಭಾವವೆಂದು, ಆಧ್ಯಾತ್ಮವೆಂದು, ಯೋಗವೆಂದು, ಹಿಂದೂ ಸಂಸ್ಕೃತಿಯ ಪುನರುಜ್ಜೀವನವೆಂದು ಆವಿರ್ಭವಿಸಿದೆ. ವಿಚಾರವಾದ ಅದರಲ್ಲೂ ಕರ್ನಾಟಕದಲ್ಲಿ ಅಂದರೆ "ಹನುಮದಿಸಿದ ಈ ನಾಡಿನ ಸ್ವತಂತ್ರ ಪ್ರತಿಭೆ ಪ್ರಕಟವಾದದ್ದು ಸೇವಾ ಸಂಘಟನೆಯಲ್ಲಿ. ನಾವು ಭಾವ ಜೀವನದ ಎತ್ತರವನ್ನು ಕಂಡವರು. ಈಗ ಅದರ ದೈನ್ಯವನ್ನು ಉಣ್ಣುತ್ತಿದ್ದೇವೆ." ಇದಾಗಬಾರದೆಂದು ಡಾ. ಗೌರೀಶರು ಬಯಸಿದ್ದರು. ಆದ್ದರಿಂದಲೇ ಶ್ರದ್ಧೆಯ ಮಧ್ಯದಲ್ಲಿ ಸಂಶಯದ ಪಂಜು ಹಿಡಿದು ನಡೆದವರು ಅವರು. 'ನಾಬುದ್ಧಿ ಭೇದಂ ಜನತೆ' ಎಂಬ ಭಗವದ್ಗೀತೆಯ ಮಾತಿನ ವಿರುದ್ಧ ಜನರ ಬುದ್ಧಿಯನ್ನು ಕೆಣಕ ಹೋದರು. ಬುದ್ಧಿವಾದವೆಂದರೆ ಭೌತಿಕವಾದವೆಂದರೆ ಭ್ರಮೆಯ ವಿರುದ್ಧ ಯುದ್ಧ ಎಂಬುದು ಡಾ. ಗೌರೀಶರ ಖಚಿತ ಅಭಿಮತ. ಆಗಲೇ ಪ್ರಗತಿಶೀಲ ಸಾಹಿತ್ಯ ಚಳುವಳಿ ನಡೆದಿತ್ತು ಎಂಬುದನ್ನು ಮರೆಯುವಂತಿಲ್ಲ. ಅವರು ೧೯೪೩ ರಲ್ಲಿ (ಬಾಳಿನಗುಟ್ಟು) ಜೀವನ ವಿಜ್ಞಾನ ಎಂಬ ಗ್ರಂಥ ಬರೆದರವರು. ಮನುಷ್ಯರು, ಮಕ್ಕಳು ಕುರಿತಾಗಿ ವೈಜ್ಞಾನಿಕ ದೃಷ್ಟಿಯ ಅತ್ಯಂತ ಕೊರತೆಯಿರುವ ಸಂದರ್ಭದಲ್ಲಿ ಅವರು 'ಜೀವನ ವಿಜ್ಞಾನ' ಬರೆದರು. ಆ ಮೂಲಕ ಮಕ್ಕಳ ಬೆಳವಣಿಗೆಯ ಭೌತಿಕ ತತ್ವವನ್ನು ಪ್ರಸ್ತಾಪಡಿಸಿದರು. ಮಗು, ಆನುವಂಶಿಕತೆ, ಪರಿಸರದ ಪ್ರಭಾವ, ಆಹಾರದ ಕೊರತೆ, ಹದಿಹರಿಯ, ಅಣ್ಣ, ತಂಗಿಯರಲ್ಲಿಯ ಮಾನಸಿಕ ರೀತಿ ವ್ಯಕ್ತಿತ್ವ ನಿರ್ಮಾಣದಲ್ಲಿ ಪರಿಣಾಮ, ಅಪರಾಧಿ ಮನೋವೃತ್ತಿಯ ಬೆಳವಣಿಗೆ ನ್ಯೂನತೆ, ಅನಾರೋಗ್ಯ, ಸುಧಾರಣೆ ಹೆಚ್ಚುವದು, ಅವರ ಶಿಕ್ಷಣ ಕ್ರಮ, ಸ್ವಾವಲಂಬನೆಯ ಬೆಳವಣಿಗೆ, ಮಾನಸಿಕ ಒಲವಿನ ಬೆಳವಣಿಗೆ, ಮಕ್ಕಳ ಸಮಸ್ಯೆ ಮತ್ತು ಶಿಕ್ಷಣ, ಶಿಕ್ಷಣ ಪದ್ಧತಿಯ ವಿಕಾಸ, ಲೈಂಗಿಕತೆಯ ವಿಕಾಸ, ಲೈಂಗಿಕ ವಿಕೃತಿ, ಹೀಗೆ ಹಲವಾರು ಸಮಸ್ಯೆಯ ವಿಶ್ಲೇಷಣೆ. ವಿವೇಚನೆಯ ಕಡೆ ತನ್ನಟಿಸಿಲನ್ನು ಚಾಚಿದ ಈ ಗ್ರಂಥ ಆಗಿನ ಕಾಲದಲ್ಲಿ ಮಾತ್ರ ಈಗಲೂ ನಮಗೆ ಪ್ರಸ್ತುತವಾಗಿದೆ. ಮಕ್ಕಳ ಬೆಳವಣಿಗೆಯನ್ನು ದೇವರ ಪಾಲಿಗೆ ಬಿಟ್ಟ, ವ್ಯಕ್ತಿತ್ವ ನಿರ್ಮಾಣವನ್ನು ಪೂರ್ವಜನ್ಮ ಸಂಚಿತ ನಿಧಿಯ ಲೆಕ್ಕಕ್ಕೆ ಹಿಡಿದ ಬಹು ಸಂಖ್ಯೆಯಿಂದ ತುಂಬಿದ ನಮ್ಮ ಸಮಾಜದಲ್ಲಿ ಮನುಷ್ಯನ ಬೆಳವಣಿಗೆಯನ್ನು ವೈಜ್ಞಾನಿಕ ವಿಶ್ಲೇಷಣೆಗೆ ಗುರಿಪಡಿಸುವ ಕೆಲಸ ಕಡಿಮೆ ಮಹತ್ವದಲ್ಲ.

ಇದಕ್ಕೂ ಒಂದು ವರ್ಷ ಮೊದಲೇ ಅಂದರೆ ೧೯೪೨ ರಲ್ಲಿ ಮನೋವಿಜ್ಞಾನ ರೂಪರೇಷೆ ಎಂಬ ಗ್ರಂಥವನ್ನು ಬರೆದಿದ್ದರು. ಈ ಮೂಲಿಕ ಮನುಷ್ಯರ ಮನಸ್ಸನ್ನು ಭೌತಶಾಸ್ತ್ರದ ಅಡಿಯಲ್ಲಿ ಅವರು ವಿಶ್ಲೇಷಿಸುವದು ಒಂದು ಬೌದ್ಧಿಕ ವ್ಯವಹಾರವಾಗಿದೆ. ಮನೋವಿಜ್ಞಾನದ ಪ್ರಾಚೀನ ಪರಂಪರೆಯ ಬೆಳವಣಿಗೆಯನ್ನು ವಿವರಿಸುತ್ತಾರೆ. ಹಾಗೆಯೇ ಆಧುನಿಕ ಮಾನಸ ಶಾಸ್ತ್ರದ ಶೋಧನೆ ಬೆಳವಣಿಗೆಯನ್ನು ವಿವರಿಸುತ್ತಾರೆ. ಮುಖ್ಯ ಮನಶಾಸ್ತ್ರಜ್ಞರ ಸಿದ್ಧಾಂತದ

ಬಗ್ಗೂ ಸಂಕ್ಷಿಪ್ತವಾಗಿ ವಿವರಿಸುತ್ತಾರೆ. ಅರಿಸ್ಟಾಟಲ್, ಪ್ಲೋಟೋರಿಂದ ಹಿಡಿದು ಫ್ರಾಯ್ಡ್ ಯೂಂಗರ ತನಕವು ವಿಸ್ತಾರವಾಗಿ ಬೆಳೆದು ಮಾನಸ ಶಾಸ್ತ್ರದ ಸಂಸ್ಕೃತಿಗಳನ್ನು ವಿವರಿಸುತ್ತಾರೆ. ಇಂತಹ ಪುಸ್ತಕಗಳು ಈಗೀಗ ಕನ್ನಡದಲ್ಲಿ ಬರುತ್ತವಾದರೂ ೧೯೪೦ ರಲ್ಲಿ ಮಹತ್ವ ಇಂದಿನಕ್ಕಿಂತ ನೂರು ಪಾಲು ಹೆಚ್ಚಿನದಾಗಿತ್ತು.

೧೯೪೮ರಲ್ಲಿ ಗಂಡು ಹೆಣ್ಣು ಎಂಬ ಪುಸ್ತಕವನ್ನು ಪ್ರಕಟಿಸಿದರು ಇದೊಂದು ಬಲು ಆಕರ್ಷಕವಾದ ವಿಷಯ. ಸಾಕ್ಷಿಗಿಂತ ಊಹೆಯದೇ, ವಿಶ್ಲೇಷಣೆಗಿಂತ ವಿಜೃಂಭಣೆಯದೇ, ಭೌತಿಕತೆಗಿಂತ ಆಧ್ಯಾತ್ಮಕತೆಯೇ ಮೆರವಣಿಗೆ ಯಾಗುತ್ತಿದ್ದ ಕಾಲದಲ್ಲಿ ಇಂತಹ ವಿಷಯವನ್ನು ತೆಗೆದುಕೊಂಡು ವೈಜ್ಞಾನಿಕವಾಗಿ ಬರೆಯುವದು ಒಂದು ಸಾಹಸದ ಮಾತು. ಇದರ ಪ್ರಾರಂಭವೆ ಬಹಳ ಆಕರ್ಷಣೆವಾಗಿ ರೂಪು ಗೊಂಡಿದೆ. ಗಾರ್ಕಿ, ಚೆಕಾವ್ ಮತ್ತು ಟಾಲಸ್ಟಾಯ್ ಈ ಮೂವರು ಒಮ್ಮೆ ಹೆಣ್ಣಿನ ಚರ್ಚೆಯಲ್ಲಿ ತೊಡಗಿದ್ದರಂತೆ (ಇದು ಕಥೆ) ಗಾರ್ಕಿ ಮತ್ತು ಚೆಕಾವ್ ಬಹಳ ಹುರುಪಿನಿಂದ ಹೆಣ್ಣಿನ ಕುರಿತು ಮಾತಾಡುತ್ತಿದ್ದರಂತೆ. ಆದರೆ ವಯಸ್ಸಾದ ಟಾಲ್‌ಸ್ಟಾಯ್ ಕೊನೆಗೆ ಹೇಳಿದನಂತೆ "ಮತ್ತೆ ನಾನುಹೆಣ್ಣಿನ ಕುರಿತು ದಿಟವನ್ನೇ ಹೇಳಬೇಕೆ? ಅದು ಈಗಲ್ಲ ನನ್ನ ಒಂದು ಹೆಜ್ಜೆ ಗೋರಿಯಲ್ಲಿರಬೇಕು. ಆಗ ಹೇಳುವುದನ್ನೆಲ್ಲ ಹೇಳಿ ಪೆಟ್ಟಿಗೆಯೊಳಗೆ ಮುಚ್ಚಳ ಇಕ್ಕಿಕೊಳ್ಳುವೆನು." ಒಮ್ಮೆ ಬರ್ನಾಡ್‌ಶಾ ಹೇಳಿದಂತೆ ಯಾವ ಗಂಡನೂ ತನ್ನ ಹೆಂಡತಿಯ ಜೀವಮಾನದಲ್ಲಿ ಮದುವೆ ಕುರಿತು ಸತ್ಯವನ್ನು ಬರೆಯಲು ಧೈರ್ಯ ಪಡನು. ಇಂಥ ಭಯಂಕರ ಅಥವಾ ಭೋಮ ಅಥವಾ ಗಂಡಸರಿಂದಲೇ ಹಾಗೆ ಮಾಡಲ್ಪಟ್ಟ ವಿಷಯವನ್ನು ತೆಗೆದುಕೊಂಡು ಗೌರೀಶರು ವೈಜ್ಞಾನಿಕ ವಿಶ್ಲೇಷಣೆ ನಡೆಸುತ್ತಾರೆ. ಈ ವಿಶ್ಲೇಷಣೆಗೆ ವಸ್ತು ಒದಗಿಸುವ ಸಮಾಜ ಇಲ್ಲಿಯವರೆಗಿನದು. ಪುರುಷ ಪ್ರಧಾನವಾದ ಸಮಾಜದ್ದು. ಹಾಗೆಯೇ ನೈಸರ್ಗಿಕವಾದ (ಮೂಲ) ಮೈತ್ರಿಯದು. ಈ ಹಿನ್ನೆಲೆಯಲ್ಲಿ ಎರಕಗೊಂಡ, ಬೆಳೆಸಿಕೊಂಡ ಗಂಡು ಹೆಣ್ಣಿನ ಸ್ವಭಾವ ಪರಿಚಯವನ್ನು ಮಾಡುತ್ತಾರೆ. ಆದರೆ ಗೌರೀಶರು ಮೂಲ ಪ್ರವೃತ್ತಿ ಶಾಶ್ವತವೆಂದು ನಂಬುವುದಿಲ್ಲ. ವೈಜ್ಞಾನಿಕ ದೃಷ್ಟಿಕೋನ ಉಳ್ಳವರು ಹಾಗೆ ನಂಬುವುದಿಲ್ಲ. ಆದ್ದರಿಂದಲೇ ಅವರು ಈ ವಿಶ್ವಾಸವೆಲ್ಲ ಗಂಡು ಹೆಣ್ಣುಗಳು ಮೂಲ ಪ್ರವತ್ತಿಗಳ ಶಾರೀರಿಕ ರಚನೆಯು ದೇಹ ಧರ್ಮಗಳ ಹುಚ್ಚು ಚಟಗಳೊಡನೆ ಕೂಡಿ ಬಂದಿವೆಯಾದರೂ, ಅವು ಬಹುಭಾಗ ಸಾಮಾಜಿಕ ಸಂಸಾರದ ಫಲವಾಗಿ ವೈಯಕ್ತಿಕವಾಗಿ ಸಂಪಾದಿಸಲ್ಪಟ್ಟಿರುವುದು. ಹೆಣ್ಣಿಗೆ ಶತಮಾನಗಳಿಂದ ವಿಧೇಯತೆ, ವಿನಯ, ಬರೇ ನೆನಪು, ವೈಯಾರಗಳನ್ನೇ ಕಲಿಸಲಾಗಿದೆ. ಸ್ತ್ರೀ ಸ್ವಾಂತಂತ್ರಕ್ಕೆ ಅನರ್ಹಳು ಎಂಬುವುದು ಕೇವಲ ಮನುವಿನದೇ ಅಲ್ಲ, ಎಲ್ಲಾ ಮಾನವಸಮಾಜದ ಶಾಸನವಾಗಿ ಬಂದಿದೆ. ಆದರೆ ಈ ವಿಷಮ ಸ್ಥಿತಿಯು ಪಲ್ಲಟಿಸಿದಲ್ಲಿ ಗಂಡು ಹೆಣ್ಣಿನಲ್ಲಿಯೂ ವೈಷಮ್ಯ ತಾರತಮ್ಯಗಳು ಇಲ್ಲವಾಗುತ್ತದೆ. ಔದ್ಯೋಗೀಕರಣದ ಆಧುನಿಕ ಸಮಯದಲ್ಲಿ ಸಾಮಾಜಿಕ ಸಮಾನತೆಯ ಅಧಿಕಾರ ಯುಗದಲ್ಲಿ ಹೆಣ್ಣು ಗಂಡಿನೊಡನೆ ನಿಜವಾಗಿಯೂ ಸಹಚಾರಣೆಯಾಗುತ್ತಿದ್ದಾಳೆ ಎನ್ನುವ ನಿರ್ಣಯ ಅವರ ಸಮತೂಕದ ಮತ್ತು ವೈಜ್ಞಾನಿಕ ನೋಟದ ವೈಚಾರಿಕತೆಗೆ ವಿಶಿಷ್ಟವಾಗಿದೆ.

ಅದೇ ಸಮಯದಲ್ಲಿ ೧೯೫೦ರಲ್ಲಿ ಬರೆದ 'ಪ್ರೀತಿ'ಯನ್ನು ಓದಬೇಕು. 'ಒಲವೆಂಬ ಹೊತ್ತಿಗೆಯ ಓದ ಬಯಸುವ ನೀನು ಬೆಲೆ ಎಷ್ಟು ಎಂದು ಕೇಳುವೆಯೋ ಹುಚ್ಚ, ಹಗಲಿರುಳು ದುಡಿದರೂ ಹಲ ಜನುಮ ಕಳೆದರೂ ನೀನೆತ್ತಲಾರೆ ಅಂಚೆಯ ವೆಚ್ಚ' ಎಂಬ ಅಂಬಿಕಾತನಯದತ್ತರ ಕವಿತೆಯ ಸಾಲಿನಿಂದಲೇ ಈ ಪುಸ್ತಕ ಪ್ರಾರಂಭ ಗೊಂಡಿದೆ. ತನ್ನ ೭೫ ಪುಟಗಳನ್ನು ದೀರ್ಘವಾಗಿಯೂ ಅಷ್ಟೇ ಲವಲವಿಕೆಯಿಂದ, ಸರಸದಿಂದ, ರಸಿಕತೆಯಿಂದ, ಸಜ್ಜನಿಕೆಯಿಂದ, ಸೌಂದರ್ಯದ ಆಕರ್ಷಣೆಯ ಮೂಲವನ್ನು ಅರಸುವ, ನಿಸರ್ಗದ ರಹಸ್ಯವನ್ನು ಅರ್ಥೈಸುವ ಶೋಧನಾತ್ಮಕ ಸದಭಿರುಚಿಯದು ಪ್ರಧಾನ ಪಾತ್ರ. ಅದೊಂದು ಉಲ್ಲಾಸದ ವಿಹಾರದಂತಿದೆ. ಆದರೆ ರುಚಿಯನ್ನು ಓದಿಯೇ ತಿಳಿಯಬೇಕು! ಅದೊಂದು ಬೆಳದಿಂಗಳ ವಿಹಾರ. ಆದರೂ ಅಲ್ಲಿ ಆಹಾರವಾಗುವುದು ವೈಜ್ಞಾನಿಕ ಶೋಧನೆಯೇ. ಇದೊಂದು ಲೈಂಗಿಕ ಶಿಕ್ಷಣವೂ ಹೌದು. ಅದೊಂದು ಪ್ರೀತಿಯ ವೈಜ್ಞಾನಿಕ ಕಾವ್ಯ. ಅದೊಂದು ಪ್ರತ್ಯೇಕ ಪುಸ್ತಕವಾಗಿ ಈಗ ಪ್ರಕಟವಾದರೆ, ಹಾಟ್ ಕೇಕ್ ಅಂತಾರಲ್ಲ ಹಾಗೆ ಖರ್ಚಾದೀತು.

೧೯೪೯ ರಲ್ಲಿ ಅವರು 'ಮಾರ್ಕ್ಸವಾದ' ಬರೆದಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ ಹೊಸದರಲ್ಲಿ ಬಂದ ಈ ಪುಸ್ತಕ ಸಾಮಾಜಿಕವಾಗಿ ಆರ್ಥಿಕವಾಗಿ, ರಾಜಕೀಯವಾಗಿ, ವೈಚಾರಿಕವಾಗಿ ಮಹತ್ವದ ಅವಶ್ಯಕತೆಯನ್ನು ಪೂರೈಸಿದೆ. ಇದರಲ್ಲಿ ಎರಡು ಭಾಗ. ಮೊದಲನೆಯದರಲ್ಲಿ ಕಾರ್ಲ್‌ಮಾರ್ಕ್ಸರ ವ್ಯಕ್ತಿ ಚಿತ್ರಣವಿದೆ. ಮಾರ್ಕ್ಸರ ಆರಂಭಜೀವನ, ವಿದ್ಯಾಭ್ಯಾಸ, ಪ್ರೇಮ, ಮದುವೆ, ಸಂಸಾರ ಸಂಕಷ್ಟ, ಎಂಗೆಲ್ಸ ರೊಡನೆಯ ಸ್ನೇಹ, ಸಾಮಾಜಿಕ ತೊಡಗಿಕೊಳ್ಳುವಿಕೆ, ವೈಚಾರಿಕ ಬೆಳವಣಿಗೆ ಮತ್ತು ಅವರೊಟ್ಟಿಗಿನ ಮಾರ್ಕ್ಸರ ಉಜ್ವಲ ವ್ಯಕ್ತಿತ್ವದ ಚಿತ್ರಣವಿದೆ. ಎರಡನೆ ಭಾಗದಲ್ಲಿ ಮಾರ್ಕ್ಸ್ ಸಿದ್ಧಾಂತದ ನಿರ್ದಿಷ್ಟವಾದ ನಿರಾಡಂಬರವಾದ ನಿರೂಪಣೆ ಇದೆ. ಸಮಾಜದ ಭೌತಿಕ ಸ್ಥಿತಿಯ ಕಾರಣದಿಂದಾಗಿ ಬೆಳವಣಿಗೆಯಿಂದಾಗಿ ಗಿಡಕ್ಕೆ ಎಲೆಗಳು ಸಹಜವಾಗಿ ಕುಡಿಯೊಡದು ಬೆಳಗುವ ರೀತಿಯಲ್ಲಿ ವರ್ಗ ಸೃಷ್ಟಿ ಬೆಳದು ಬಂದ ಅನಿವಾರ್ಯತೆಯ ಸಹಜ ಚಿತ್ರಣವಿದೆ. ಮಾರ್ಕ್ಸ್ ವಾದವನ್ನು ಅಷ್ಟು ಮೊದಲೇ ಕನ್ನಡದಲ್ಲಿ ಇಷ್ಟು ತಿಳಿಯಾಗಿ ತಿಳಿವಳಿಕೆಯಾಗಿ ಬಂದ ಗ್ರಂಥ ಇದೊಂದೇ ಇದ್ದಿತೊ ಏನೋ. ಬೇರೆ ಇದ್ದರೂ ಇದೊಂದು ಅನಗತ್ಯವಲ್ಲ. ಕನ್ನಡದಲ್ಲಂತೂ ಇಂದಿಗೂ ಇದು ಪ್ರಸ್ತುತವಾಗಿದೆ. ಸಮಾಜದ ಪರಿವರ್ತನೆಯ ಗುಣಾತ್ಮಕ ಬೆಳವಣಿಗೆ, ಸಾಮ್ಯವಾದ ಅದರಲ್ಲಿ ಅತಿರೇಕವಿಲ್ಲದ ಸಮಾನತೆಯ ಕಲ್ಪನೆ ಇದನ್ನೆಲ್ಲ ಅಚ್ಚುಕಟ್ಟಾಗಿ ಈ ಪುಸ್ತಕದಲ್ಲಿ ನಿರೂಪಿಸಲಾಗಿದೆ.

ಇದೇ ಹೊತ್ತಿಗೆ ಅವರು ಪಶ್ಚಿಮದ ಪ್ರತಿಭೆ ಎಂಬ ಗ್ರಂಥ ಬರೆದರು. ಈ ಪ್ರತಿಭೆಗಳಲ್ಲಿ ವಿಜ್ಞಾನ, ಕಲೆ, ಸಾಹಸ, ರಾಜಕೀಯ ತತ್ವಜ್ಞಾನಗಳಿಗೆ ಸಂಬಧಿಸಿದ ವ್ಯಕ್ತಿಗಳ ಜೀವನ ಚರಿತ್ರೆಗಳಿವೆ. ಜೀವನ ಚರಿತ್ರೆಯೆಂದರೆ ಹುಟ್ಟು, ಸಾವು, ಉಂಡು ತಿಂದು ಎದ್ದು ಮಲಗಿದ ದಾಖಲೆಗಳಲ್ಲ. ಅವೆಲ್ಲ ಅವರ ಸಾಹಸದ ಶೋಧಕ, ಶ್ರದ್ಧೆಯ, ತಾತ್ವಿಕತೆಯ ಮಾನವೀಯತೆಯ, ವಿಜ್ಞಾನದ ಚರಿತ್ರೆಯೇ ಆಗಿದೆ.

ಸೊಕ್ರೆಟಿಸ್, ನಿಕೊಲೊ ಮ್ಯಾಕಿಯಾವೆಲ್ಲಿ, ಮೈಕಲಿಂಜೆಲೊ, ರೂಸೋ, ಥೊಮಸ್ ಎಡಿಸನ್, ಅಬ್ರಾಂಹಲಿಂಕನ್, ಗ್ಯಾರಿಬಾಲ್ಡ, ಲೂಯಿಪಾಶ್ಚರ್, ಐಸಾಕ್ ನ್ಯೂಟನ್,

ಚಾರ್ಲಸ್ ಡಾರ್ವಿನ್ ಇಂಥ ಅನೇಕರ ಚಿತ್ರಣವಿದೆ. ಈ ಸಾಹಸಿಗಳ, ವಿಜ್ಞಾನಿಗಳ, ರಾಜನೀತಿ ತಜ್ಞರ ಜೀವನ ಚಿತ್ರಣ, ಸಾಹಸದ ಸಮರ, ವೈಜ್ಞಾನಿಕ ಚಿಂತನೆ ನಮ್ಮ ಯುವ ಪೀಳಿಗೆಗಂತೂ ಆಪ್ಯಾಯಮಾನವಾಗಿದೆ. ಭಾವಾತ್ಮಕತೆಯಲ್ಲಿ, ಆಧ್ಯಾತ್ಮದಲ್ಲಿ ತೇಲಾಡುವ ಪರಿಸರದಲ್ಲಿ ಈ ಭೌತಿಕ ಸಾಹಸಗಳ ಲೌಕಿಕ ಸಾಧನೆಗಳ, ಸಮಾನತೆ, ಸೋದರತೆ, ಸ್ವಾತಂತ್ರ್ಯ ದಂಥ ಮಾನವೀಯತೆಯ ಮೂಲಸ್ರೋತವಾದ ಪ್ರತಿಭೆಗಳ ಪರಿಚಯದ ದೊಂದಿಯನ್ನು ಹೊತ್ತಿಸಿ ಹಿಡಿಯುವ ಡಾ. ಗೌರೀಶರೂ ಒಬ್ಬ ಸತ್ಯಾರ್ಥಿಗಳೆ (ವಿಜ್ಞಾನಿಗಳ ಪರಿಚಯಕ್ಕೆ ಅವರಿಟ್ಟ ಹೆಸರು ಸತ್ಯಾರ್ಥಿ) ಅವರ ಇನ್ನೊಂದು ಮಹತ್ವದ ಚಿಕ್ಕ ಕೃತಿ, 'ವಿಚಾರವಾದ'. ವಿಚಾರ ಪ್ರಚೋದನೆಯ ವಿಶ್ಲೇಷಣೆ, ಪ್ರತಿಕ್ರಿಯೆ, ಸಮನ್ವಯ, ನವೀಕರಣವೂ ಕೂಡಿಯೇ ಬುದ್ಧಿ ಎನಿಸಿಕೊಳ್ಳುತ್ತದೆ. ಸತ್ಯವನ್ನು ಅರಸಲು ಪ್ರತ್ಯಕ್ಷ, ಉಪಮಾನ, ಅನುಮಾನ ಮತ್ತು ಶಬ್ದ ಸಾಧನೆಯೇ ಉಪಕರಣ. ಉಪಮಾನ ಎಷ್ಟು ಉಚಿತವೆನಿಸಿದರೂ ಸತ್ಯವನ್ನರಸುವಲ್ಲಿ ಹೆಚ್ಚಿನದಲ್ಲ. ಶಬ್ದ ಎಂದರೆ ಆಪ್ತವಾಕ್ಯ, ವೇದ-ಪುರಾಣ, ಕುರಾನ, ಬೈಬಲ್, ಭಗವದ್ಗೀತೆ. ಇವೆಲ್ಲ ಸರಿಯಲ್ಲ. ಆದರೆ 'ಅನುಮಾನವು ಪ್ರಮಾಣಗಳಿಗೂ ಪ್ರಮಾಣ' ಎನ್ನುತ್ತಾರೆ ಅವರು. ಬುದ್ಧಿವಾದಕ್ಕೆ ಸರ್ವಧರ್ಮ ಸಮನ್ವಯಕ್ಕಿಂತ ಸರ್ವಧರ್ಮ ಸಹಿಷ್ಣುತೆಯ ಹಂಬಲಕ್ಕೆ ಹೆಚ್ಚಿನ ಪ್ರಾಶಸ್ತ್ಯ ಎನ್ನುತ್ತಾರೆ. ಬುದ್ಧಿವಾದಕ್ಕೆ ವೈರಿಗಳು ಭಯ, ಲೋಕಾಪವಾದ, ಪೂರ್ವಾಗ್ರಹ, ಅರೆಬರೆಜ್ಞಾನ, ಸಮಯ ಸಾಧಕ ರಾಜಕಾರಣದ ಸ್ವಾರ್ಥ, ಆತ್ಮ ವಚಂಕತನ, ಮನೋದೌರ್ಬಲ್ಯ, ಅಪೇಕ್ಷಾಕೃತಿ, ಅನುಮಾನ ಇಂಥವುಗಳು ಎಂದು ಗುರುತಿಸುತ್ತಾರೆ. ಬುದ್ಧಿ ಅಂದೇನು? ಬುದ್ಧಿವಾದ ಯಾಕೆ ಬೇಕು? ಮತ್ತು ಜೀವನೋತ್ಪತ್ತಿಯಲ್ಲಿ ಅದರ ಬೆಳವಣಿಗೆಯ ಹಂತ ಇತ್ಯಾದಿಗಳನ್ನು ವಿವರಿಸುತ್ತಾರೆ. ವಿಜ್ಞಾನದ ಅವ್ಯವಸ್ಥಿತ ಬಳಕೆ, ಕೆಟ್ಟ ರಾಜಕೀಯ, ಜನಾಂಗವಾದ ಇತ್ಯಾದಿಗಳಿಂದಾದ ನಿರಾಶೆಯವನ್ನು ಬುದ್ಧಿವಾದದಿಂದಲೇ ಗೆಲ್ಲ ಬೇಕು ಎಂದು ಸ್ಪಷ್ಟವಾಗಿ ಶ್ರುಪಡಿಸುತ್ತಾರೆ.

'ನಾಸ್ತಿಕ ಮತ್ತು ದೇವರು' ಎಂದು ಕುತೂಹಲಕರವಾದ ಗ್ರಂಥ. ಮೂರ್ತಿರಾಯರ 'ದೇವರು' ಪ್ರಶಸ್ತಿ ಗೌರವ ಪಡೆದ ಕೃತಿ. ಆದರೆ 'ನಾಸ್ತಿಕ ಮತ್ತು ದೇವರು' ಗಂಭೀರವಾದ, ಆಳವಾದ ಚಿಂತನೆಗೆ ಒಡ್ಡಿಕೊಂಡ ಕೃತಿ. 'ನವಮಾನವತಾವಾದ'ದಲ್ಲಿ ನಾಲ್ಕು ಅಧ್ಯಾಯಗಳಿವೆ. ಎರಡು ಅಧ್ಯಾಯಗಳ ತನಕ ಮಾನವೀಯತೇ ಪ್ರಾಚೀನದಿಂದ ಬೆಳೆದು ಬಂದ ಬಗೆಯನ್ನು ಹೇಳಿರುತ್ತಾರೆ. ಮಾನವನು ಸ್ವಭಾವತ: ಬುದ್ಧಿವಾದಿಯು. ಆದ್ದರಿಂದಲೇ ನೀತಿಪರನು, ಮನುಷ್ಯತ್ವದ ಸಾರಭೂತ ಸಂಗತಿಯೂ ಇದೇ. ಹಾಗಿದ್ದರೆ ಮಾನವತಾವಾದವು ಇತಿಹಾಸದ ಕೆಲವೊಂದೇ ಕಾಲ ಖಂಡಕ್ಕೆ ಮಾತ್ರ ಹೊಂದಿಕೊಂಡಿದ್ದಲ್ಲ. ಅದು ಎಲ್ಲ ಮಾನವೀಯ ವಿಚಾರದ ಸಾರವು ಎನ್ನುತ್ತಾರೆ. ನವಮಾನವತಾವಾದವು ನಮ್ಮ ಕಾಲಕ್ಕೆ ಅತ್ಯಂತ ವೈಚಾರಿಕ ಅವಶ್ಯಕತೆಯನ್ನು ಪೂರೈಸಬಲ್ಲದು ಎಂಬುದು ಅವರ ದೃಢವಾದ ನಿಲುವು. ಮೂರನೇ ಅಧ್ಯಾಯದಿಂದ ಎಂ. ಎನ್. ರಾಯ್‌ರವರ 'ರ್‍ಯಾಡಿಕಲ್ ಹ್ಯೂಮನಿಸಂ' ದವಿವರಣೆಗೆ ತೊಡಗುತ್ತಾರೆ. ಎಂ.ಎನ್. ರಾಯ ಮೊದಲು ಮಾರ್ಕ್ಸವಾದಿ. ಅವರಿಗೆ ಲೆನಿನ್‌ರೊಡನೆ ಸಹಯೋಗಿತ್ವವಿತ್ತು. ಆದರೆ ರಾಯ್ ಅವರಿಗೆ ಸ್ಟಾಲಿನ್ನನ ವ್ಯವಹಾರ ನೋಡಿದ ಮೇಲೆ ಮಾರ್ಕ್ಸವಾದದಲ್ಲಿ ಸಂಶಯ

ತಲೆಹಾಕುತ್ತದೆ. ಸರ್ವಾಧಿಕಾರದ ಮೂಲಗಾಮಿ ದೋಷ ಮಾರ್ಕ್ಸವಾದದಲ್ಲೇ ಇದೆ ಎಂದು ಅವರಿಗೆ ಅನಿಸುತ್ತದೆ. ಆದರೂ ರಾಯ್ ಅವರಿಗೆ ಮಾರ್ಕ್ಸವಾದದ ಮೂಲತತ್ವದಲ್ಲಿ ಭಿನ್ನಾಭಿಪ್ರಾಯವಿಲ್ಲ. ನವಮಾನವತಾವಾದಕ್ಕೆ ಮಾರ್ಕ್ಸ ಸಿದ್ಧಾಂತವೇ ಪ್ರಸ್ತುತವೆಂದು ಮಾರ್ಕ್ಸವಾದದ ತತ್ವಗಳಾದ ವಿರೋಧ ವಿಕಾಸ ತತ್ವ, ವರ್ಗಕಲಹ, ಸಮುದಾಯದ ಕ್ರಾಂತಿಕಾರಿ ಶಕ್ತಿ, ಬಂಡವಾಳಶಾಹಿ ಹಾಗೂ ಮೇಲಿನ ಮಧ್ಯಮವರ್ಗಗಳ ಸಂಯುಕ್ತ ಬೂರ್ಜ್ವಾಶಾಹಿ, ಅತಿರಿಕ್ತ ಮೌಲ್ಯ ಇತ್ಯಾದಿಗಳನ್ನು ಒಪ್ಪಿಕೊಂಡಿದ್ದಾರೆ. ಆದರೂ ಅದಕ್ಕಿಂತ ಮುಂದಿನ ಪ್ರಸ್ತಾನ ಇದು (ನವಮಾನವತಾವಾದ) ಎನ್ನುತ್ತಾರೆ. ಇದು ಗಾಂಧಿವಾದವನ್ನು ಒಪ್ಪಿಕೊಳ್ಳುವುದಿಲ್ಲ. ಆದರೆ ಅದನ್ನೂ ಒಳಗೊಳ್ಳುತ್ತವೆ ಎನ್ನುತ್ತಾರೆ. ರಾಯವಾದದ ರಾಜಕೀಯ ಆರ್ಥಿಕ ಮತ್ತು ನೈತಿಕ ಶಿಸ್ತನ್ನು ವಿಸ್ತಾರವಾಗಿ ವಿವರಿಸುತ್ತಾರೆ. ವಿವಾದಾತ್ಮಕವಾದ ಸಂಗತಿಯೂ ಇಲ್ಲಿ ಇದೆ. ಅಂದರೆ ರಾಯ್‌ವಾದವನ್ನು ತೀವ್ರವಾದ ವಿಮರ್ಶೆಗೆ ಒಡ್ಡುವುದು ಅವರ ಉದ್ದೇಶವಲ್ಲ. ಆದರೂ ಇದು ವಿಚಾರಾರ್ಹ ಕೃತಿಯಾಗಿದೆ. ಕನ್ನಡದ ಖ್ಯಾತ ಲೇಖಕರಾದ ಯಶವಂತ ಚಿತ್ತಾಲ, ಶಾಂತಿನಾಥ ದೇಸಾಯಿ ಮೊದಲಾದವರು ಕಾಯ್ಕಿಣಿ ಇದರಿಂದ ಸ್ವತಃ ಪ್ರಭಾವಿತರಾದ್ದರು ಎನ್ನುವದನ್ನು ಮರೆಯುವಂತಿಲ್ಲ.

ಗೌರೀಶರ ಇನ್ನೊಂದು ಮುಖ್ಯ ಗ್ರಂಥ ವಾಲ್ಮೀಕಿ "ತೂಕಡಿಸಿದಾಗ ರಾಮ ತಪ್ಪಿಬಿದ್ದ" ವಾಲ್ಮೀಕಿ ತೂಕಡಿಸಿದಾಗ ಎನ್ನುವದೇ ನಮ್ಮ ಪರಂಪರೆಯಲ್ಲಿ ಒಂದು ದಿಟ್ಟ ನಿಲುವು ಎನ್ನುತ್ತಾರೆ ಮುನ್ನುಡಿಕಾರ ಪೋಲಂಕಿ ರಾಮಮೂರ್ತಿ. ಅವರು ವಾಲ್ಮೀಕಿಯ ಹುಟ್ಟಿನ ಬಗ್ಗೆ ಆದಿ ಕಾವ್ಯ ಇತ್ಯಾದಿಗಳ ಬಗ್ಗೆ ಪ್ರಾರಂಭವಲ್ಲಿ ವಿಮರ್ಶಿಸಿದ್ದಾರೆ. ರಾಮನು ೧೪ ವರ್ಷಗಳ ನಂತರ ತಿರುಗಿ ಬಂದು ಪಟ್ಟವೇರಿದ್ದು ತಪ್ಪು ಎಂಬುದು ಇಲ್ಲಿಯ ವಸ್ತು. ಡಾ. ಗೌರೀಶರ ವಾದ ತಾತ್ಪರ್ಯವೇನೆಂದರೆ 'ಈ ಮರ್ಯಾದಾ ಪುರುಷೋತ್ತಮ ಮರ್ಯಾದೆಯಂತ ನಡೆದುಕೊಳ್ಳಲಿಲ್ಲ.' ಭರತನು ಸಕಲ ಪರಿಜನ ಪರಿವಾರ ಸಮೇತವಾಗಿ ಬಂದು ಕಾಲಿಗೆ ಬಿದ್ದು ಅಂಗಲಾಚಿ ಬೇಡಿಕೊಂಡಿದ್ದ. ಅದು ಅವನ ಭ್ರಾತೃಪ್ರೇಮದ ಪ್ರತೀಕ. ರಾಮನು ವನವಾಸ ಮುಗಿಸಿ ತಿರುಗಿ ಪಟ್ಟವೇರಲು ಅಯೋಧ್ಯೆಗೆ ಹೋಗುವುದಾಗಲಿ ಆ ತನಕ ತನ್ನ ಪಾದುಕೆಗಳನ್ನು ಗದ್ದುಗೆಯಲ್ಲಿ ಇರಿಸಿ ತನ್ನ ಪ್ರಭುತ್ವವನ್ನು ಸಾಂಕೇತಿಕವಾಗಿ ಸ್ಥಾಪಿಸಿ ತನ್ನ ಪರವಾಗಿ ರಾಜ್ಯವಾಳಲು ಭರತನಿಗೆ ನೇಮಿಸುವುದಾಗಲಿ ಹೇಗೋ ಸಮರ್ಥನಿಯವಲ್ಲ ಎನ್ನುತ್ತಾರೆ. ಹಾಗೆಯೇ ಶೂರ್ಪನಖಿ ಪ್ರಸಂಗದಲ್ಲಿ ಸಹ ರಾಮ ತಪ್ಪಿಬಿದ್ದ ಎನ್ನುತ್ತಾರೆ. ರಾಮಾಯಣದ ಮೂಲ ಶ್ಲೋಕಗಳ ಆಧಾರದಿಂದ ರಾಮನಿಗೆ ಪಟ್ಟ ಕಟ್ಟಲು ಧೂರ್ತ ದಶರಥನ ಸಂಚು ನಡೆಸಿದ ರಾಜಕೀಯವನ್ನು ವಿವರಿಸುತ್ತಾರೆ. ದಶರಥನ ರಾಜ್ಯ ಕನ್ಯಾಶುಲ್ಕವಾಗಿ ಕೈಕೆಯ ತಂದೆಗೆ ಕೊಟ್ಟ ಮಾತಿನ ಪ್ರಕಾರ ರಾಜ್ಯ ಭರತನಿಗೆ ಬರತಕ್ಕದ್ದು. ಹೀಗೆ ಕೈಕೆಯ ತಂದೆಗೆ ಮಾತು ಕೊಟ್ಟದ್ದು ರಾಮನಿಗೂ ಗೊತ್ತಿತ್ತು. ಆದರೆ ಈ ಪುರುಷೋತ್ತಮ ಬಾಯಿ ಬಿಚ್ಚಲಿಲ್ಲ ಎನ್ನುತ್ತಾರೆ.

ಹಾಗೆ ಸುಮಿತ್ರೆಯ ಹೆಸರಿನ ಹಿಂದೆ ಇರಬಹುದಾದ ಅಂತಸ್ಸಿನ ಅಂಶವನ್ನು ಬಹು ಕುಶಲತೆಯಿಂದ ವಿಶ್ಲೇಷಿಸುತ್ತಾರೆ. ಕೋಸಲ ದೇಶದ ಅರಸನ ಮಗಳು ಕೌಶಲ್ಯೆ ಕೈಕೇಯಿಯು ರಾಜ್ಯದ ಅರಸನ ಮಗಳು ಕೈಕೆಯಿ ಅಂದರೆ ಸುಮಿತ್ರೆ ಯಾವ ರಾಜ್ಯದ ಮಗಳು? ಎನ್ನುತ್ತಾರೆ.

ರಾಮಾಯಣದ ಕುರಿತು ಇನ್ನು ಅನೇಕ ಲೇಖನಗಳಿವೆ ಇದರಲ್ಲಿ, ಕಾಳಿದಾಸನ ನಾಮನಿಷ್ಪತ್ತಿ, ರಸರಾಜ 'ಶೃಂಗಾರವಲ್ಲ, ಹಾಸ್ಯ' 'ಸತ್ಯಮೇವ ಜಯತೇ' 'ಭಗವಂತನ ಮೂಲ' 'ಅಗ್ನಿಹಂಸ' ಮುಂತಾದ ವಿಚಾರ ಪ್ರಚೋದಕ ಲೇಖನಗಳು ಗೌರೀಶರ ತೀಕ್ಷ್ಣಮತಿಗೆ ಸಾಕ್ಷಿ ನುಡಿಯುತ್ತವೆ.

ಗೌರೀಶರ ಅತ್ಯಂತ ಮೌಲಿಕವಾದ (ಅನುವಾದ) ಗ್ರಂಥ 'ಭಾರತೀಯ ತತ್ವ ಜ್ಞಾನ'. ಮೂಲ, ಎಸ್.ಜಿ.ಸರ್. ದೇಸಾಯಿ. ಎಡಪಂಥೀಯ ದೃಷ್ಟಿಯಿಂದ ನೋಡಿದಾಗ ಈ ಗ್ರಂಥ ಭಾರತದ ತತ್ವಜ್ಞಾನನ್ನು ಮೇಲೆ ಹೊಸ ಬೆಳಕನ್ನು ಕೆಡಹುತ್ತದೆ. ಈ ಗ್ರಂಥದಲ್ಲಿ ಚಾರಿತ್ರಿಕ ಭೌತವಾದಿ ದೃಷ್ಟಿಯಿಂದ ತತ್ವಜ್ಞಾನದ ಬೆಳವಣಿಗೆಯನ್ನು ವಿಶ್ಲೇಷಿಸಲಾಗುತ್ತದೆ. ತತ್ವಜ್ಞಾನದ ನಿರೂಪಣೆಯಲ್ಲಿ ಅಂತರ್ಗತವಾದ ವರ್ಗ ಸ್ವಭಾವವನ್ನು ಮನಮುಟ್ಟಿಸುತ್ತದೆ. 'ಲೋಕಾಯುತ (ಚಾರ್ವಕವಾದ)' ತತ್ವವನ್ನು ಪ್ರಸ್ತುತ ಪಡಿಸುತ್ತದೆ. ಇದರ ಮೂಲ ವಿಚಾರಣಾಶರೀರ ಗೌರೀಶರದಲ್ಲದಿದ್ದರೂ ಅದಕ್ಕೆ ಸಂವಾದಿ ವೈಚಾರಿಕರು ಅವರಾದ್ದರಿಂದಲೇ ಅದನ್ನು ಅನುವಾದಿಸಿದ್ದಾರೆ. ಈ ಅನುವಾದದಿಂದ ಕನ್ನಡ ವೈಚಾರಿಕ ಕ್ಷಿತಿಜ ವಿಸ್ತರಿಸಿಕೊಂಡಿದೆ. ಈ ಎಲ್ಲ ವೈಚಾರಿಕತೆಯ ಹಿಂದೆ ಡಾ. ಗೌರೀಶರ ಮಾನವೀಯ ಮನೋಭಾವದ ಮಿಡಿತವಿದೆ ಎನ್ನುವದನ್ನು ಮರೆಯುವಂತಿಲ್ಲ. ಇದನ್ನು ಚೆನ್ನಾಗಿ ಗ್ರಹಿಸಿದ ಯಶವಂತ ಚಿತ್ತಾಲ ಹೀಗೆನ್ನುತ್ತಾರೆ.

ಇಲ್ಲಿ ಕೆಲಸ ಮಾಡಿದ್ದು ಅಸಾಧಾರಣ ಧೀಶಕ್ತಿಯ ಸೃಜನಶೀಲ ಮನಸ್ಸೊಂದು ಬದುಕಿನ ಬಗೆಗೆ ತಳೆದ ಬೆರಗು ತುಂಬಿದ ಕುತೂಹಲವೇ ಹೊರತು ಶುಷ್ಕ ಪಾಂಡಿತ್ಯ ಪ್ರಿಯತೆಯಲ್ಲ. ಅಂಥದ್ದರ ಸೋಂಕೂ ಇಲ್ಲಿಲ್ಲ. ಇಲ್ಲಿಯ ಕುತೂಹಲಕ್ಕೆ ಆಸಕ್ತಿಯಿದ್ದುದು ವಾಸ್ತವ್ಯದ ಬಗೆಗೆ 'ಮಾಹಿತಿ' ಸಂಗ್ರಹಿಸುವುದರಲ್ಲಲ್ಲ. ಬುದ್ಧಿಗೆ ಆ ಶಕ್ತಿಯೂ ಇದೆ. ಬುದ್ಧಿ ತನ್ನನ್ನು ಅಂತಹ ಸಂಗ್ರಹ ಕಾಲದಲ್ಲೇ ತೊಡಗಿಸಿಕೊಂಡು ಬಿಟ್ಟರೆ ಅದು ಕೇವಲ ಬುದ್ಧಿವಂತಿಕೆಯನ್ನು ಮೆರೆಸಬಹುದೇ ಹೊರತು ಬೌದ್ಧಿಕ ಸಾಹಸದ ಅಂತಿಮ ಲಕ್ಷ್ಯವಾದ ಪ್ರಜ್ಞಾವಂತಿಕೆಯನ್ನಲ್ಲ. ಕೇವಲ ಮಿದುಳು (ಪ್ರವೃತ್ತಿ) ಆಗಿದ್ದದ್ದು ಮನಸ್ಸು (ಬುದ್ಧಿ) ಆಗಿ; ಮನಸ್ಸು ಕೊನೆಯಲ್ಲಿ ಪ್ರಜ್ಞೆಯಾಗಿ ವಿಕಾಸಗೊಳ್ಳಬೇಕು ಎನ್ನುವುದರ ಕಡೆಗೆ ಗೌರೀಶರ ಸಾಹಿತ್ಯದ ತುಡಿತವಿದೆ ಎನ್ನುವುದರಲ್ಲೇ ಅದರ ಹೆಚ್ಚುಗಾರಿಕೆಯಿದೆ. (ಉದ್ಧರಣೆ : ಗೌರೀಶ ಕಾಯ್ಕಿಣಿಯವರ ಸಮಗ್ರ ಸಾಹಿತ್ಯ-ಸಂಪುಟ ೧.೧೯೯೩, ರಾಘವೇಂದ್ರಾ ಪ್ರಕಾಶನ ಅಂಕೋಲಾ, ಉ.ಕ)

*

ಶೋಷಣೆ ಮತ್ತು ಪ್ರತಿಭಟನೆ

ಪ್ರಗತಿಯ ರಥಕ್ಕೆ ಶೋಷಣೆ ಮತ್ತು ಪ್ರತಿಭಟನೆ ಎಂಬ ಎರಡು ಗಾಲಿಗಳು ಎಂದು ಹೇಳಿದರೆ ಮಾತು ಅಲಂಕಾರಿಕವಾದೀತಾದರೂ ಅಸತ್ಯವಾಗಲಾರದು. ಇದರ ಅರ್ಥ ನಾಗರಿಕತೆಗೆ ಶೋಷಣೆ ಅಗತ್ಯವೆಂದಲ್ಲ. ಚರಿತ್ರೆ ಹಾಗೆ ನಾಗರಿಕತೆಯ ದಾರಿಯನ್ನು ದಾಖಲಿಸಿದೆ ಎಂಬುದಷ್ಟೇ ಅರ್ಥ.

ಶೋಷಣೆ ಅತ್ಯುಗ್ರತೆಗೆ ತಲ್ಪಿದಾಗೆಲ್ಲ ಪ್ರತಿಭಟನೆಯ ಬೆಂಕಿ ಭುಗಿಲೆನ್ನುವುದನ್ನು ನಾವು ಚರಿತ್ರೆ ಗುಂಟ ಕಾಣುತ್ತೇವೆ. ಈ ತಿಳುವಳಿಕೆಯಿಂದಲೇ ಭಾರತದ ವರ್ತಮಾನ ಸ್ಥಿತಿಯನ್ನು ನಿರೀಕ್ಷಿಸಿದಾಗ ಇಂದಿನ ಸುಲಿಗೆಯ ಯಜ್ಞವನ್ನು ನೋಡಿ ನಾವು ದಿಗ್ಭ್ರಾಂತರಾಗುತ್ತೇವೆ. ಕಣ್ಣಿಗೆ ಕತ್ತಲೆ ಕವಿಯುತ್ತದೆ. ದೇಶದ ಒಂದಲ್ಲ ಒಂದು ಮೂಲೆಯಲ್ಲಿ ವರದಕ್ಷಿಣೆಗಾಗಿ ದಿನಾಲು ಹೆಣ್ಣು ಮಕ್ಕಳ ಕೊಲೆಯಾಗುತ್ತಿದೆ. ಮಾನವೀಯತೆಯನ್ನು ಪಡೆದು ಬದುಕಲು ಪಯತ್ನಿಸಿದ ದಲಿತರ ಗುಡಿಸಲುಗಳನ್ನು ಸುಡಲಾಗುತ್ತಿದೆ. ನಗರಗಳಲ್ಲಿ ಗಗನ ಚುಂಬಿ ಕಟ್ಟಡಗಳು ಎದ್ದಂತೆ ವಾಸಕ್ಕೆ ತುಸುವೇ ಜಾಗವಿಲ್ಲದೇ ಫುಟ್‌ಪಾತಿನ ಸಂಸಾರ ಹೆಚ್ಚಾಗುತ್ತಿದೆ. ದೇಶದ ಬೆನ್ನೆಲುಬಾಗಿರಬೇಕಾದ ರೈತ ಉಳಿಯಲು ಒಂದು ಸಾಧಾರಣ ಮನೆಯನ್ನೂ, ತನ್ನ ದನಕರುಗಳಿಗಾಗಿ ಒಂದು ಒಳ್ಳೆಯ ಕೊಟ್ಟಿಗೆಯನ್ನೂ ಹೊಂದಲಾಗುತ್ತಿಲ್ಲ. ಕಲಬೆರಕೆಯಿಲ್ಲದ ಆಹಾರ, ಶುದ್ಧ ನೀರು, ಗಾಳಿಯನ್ನೂ ಸಹ ನಾಗರಿಕ ಪಡೆಯಲಾರದ ಸ್ಥಿತಿ ನಮ್ಮದು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಮ್ರಾಜ್ಯಶಾಹಿಗಳ ಒತ್ತಡ ಬಡ ದೇಶಗಳನ್ನು ಅಡಕೊತ್ತಿನಲ್ಲಿ ಅಡಚುತ್ತಿದೆ. ಹಾಗಿರುವಾಗಲೂ ನಮ್ಮಲ್ಲಿ ಇವುಗಳನ್ನು ಬುಡಮೂಲ ಮಾರ್ಪಡಿಸುವ ಪ್ರತಿಭಟನೆ ಕಾಣುತ್ತಿಲ್ಲವೇಕೆ? ಅಥವಾ ನಾಗರಿಕ ಇತಿಹಾಸ ಈ ಶೋಷಣೆ ಮತ್ತು ಪ್ರತಿಭಟನೆ ಎಂಬ ಎರಡು ಬಿಂದುವಿನ ಮಧ್ಯದಲ್ಲೇ ಸ್ಥಿರಸ್ಥಾನ ಪಡೆಯುತ್ತಿದೆಯೇ? ಪ್ರತಿಭಟನೆ ಕೇವಲ ಸಾಂದರ್ಭಿಕ ಪ್ರತಿಕ್ರಿಯೆಯಾಗಿ, ಶೋಷಣೆಯೇ ಸ್ಥಿರವೇ? ಚರಿತ್ರೆಯನ್ನು ಹೇಗೆ ವ್ಯಾಖ್ಯಾನಿ ಸಬೇಕು ಎಂಬ ಗೊಂದಲ ನಮ್ಮನ್ನು ಮುತ್ತಿದರೆ ಅಸ್ವಾಭಾವಿಕವೇನೂ ಅಲ್ಲ.

ಇಂಥ ಸಂದರ್ಭದಲ್ಲಿ ದೊಡ್ಡ ಮೀನು ಸಣ್ಣ ಮೀನನ್ನು ನುಂಗುವುದೇ ನ್ಯಾಯ; ಶೋಷಣೆ ಎನ್ನುವುದೇ ಮೂಲಪ್ರವೃತ್ತಿ, ಆದ್ದರಿಂದ ಸಹಜ ಎಂದು ಯಥಾಸ್ಥಿತಿವಾದಿಗಳು ಇತಿಹಾಸವನ್ನು

ಆಕಾಶವಾಣಿ ಧಾರವಾಡದಿಂದ ಪ್ರಸಾರಿತ ಮತ್ತು ಲೋಕದರ್ಶನ ವಿಶೇಷಾ ೧೯೯೩

ವ್ಯಾಖ್ಯಾನಿಸುವ ಅಪಾಯವಿದೆ. ಆದರೆ ಶೋಷಣೆ ಎಂಬುದು ಸ್ವಾಭಾವಿಕ ಮತ್ತು ಸತ್ಯ ಅಲ್ಲ ಎಂಬುದನ್ನು ನಾವು ಚರಿತ್ರೆಯ ಅಭ್ಯಾಸದಿಂದಲೇ ಕಂಡು ಕೊಳ್ಳಬಹುದಾಗಿದೆ.

ಸಂರಕ್ಷಣೆಯ ಮೂಲ ಪ್ರವೃತ್ತಿ ಪ್ರಾಣಿಗಳಲ್ಲೂ ಇದೆ. ಮನುಷ್ಯರಲ್ಲೂ ಇದೆ. ಆದರೆ ಇದು ಸುಲಿಗೆಯ ಪ್ರವೃತ್ತಿಯಲ್ಲ. ಅದು ತನ್ನ ತನ್ನ ಗುಂಪಿನ ಬೆಳವಣಿಗೆಗಾಗಿ ನಿಸರ್ಗ ಹೂಡಿದ ಹೊಂಚು. ಆದರೆ ಮಾನವ ನಾಗರಿಕತೆ ಬುದ್ಧಿ ವಿಕಾಸದ ಪ್ರಕ್ರಿಯೆ. ಎಂದು ಮಾನವ ಆಹಾರಕ್ಕಾಗಿ, ಸಲಕರಣೆಗಳನ್ನು ಮಾಡಲು ಕಲಿತನೋ ಅಂದೇ ನಾಗರಿಕತೆ ಮೊದಲಾಯಿತು. ಸಾರಾಂಶ ಇಷ್ಟೇ, ಮನುಷ್ಯ ತನ್ನ ಪ್ರಭಾವ ಪ್ರಭುತ್ವವನ್ನು ನಿಸರ್ಗದ ಮೇಲೆ ಪಡಕೊಂಡಾಗಿನಿಂದಲೇ ನಾಗರಿಕತೆ ಮತ್ತು ಪ್ರಗತಿ ಮುಂದುವರೆಯಿತು.

ನಿಸರ್ಗವನ್ನು ಬಳಸಿ ಅಧಿಕ ಆಹಾರ ಉತ್ಪತ್ತಿಗೆ ತೊಡಗಿದಾಗ ಉಂಟಾದ ಮಿಗುತಾಯ ಧಾನ್ಯ, ಅದಕ್ಕೆ ಆಧಾರವಾದ ದನಕರು ಉಂಟಾದಾಗಲೇ ಈ ಅಧಿಕ ಸಂಗ್ರಹ ಯಾರು, ಯಾಕೆ ಮಾಡಬೇಕು ಎಂಬ ಪ್ರಶ್ನೆ ಉಂಟಾಯಿತು. ಅದಕ್ಕೂ ಮೊದಲು ಅಧಿಕ ಸಂಗ್ರಹವೂ ಇಲ್ಲ. ಶೋಷಣೆಗೆ ಅವಕಾಶವೂ ಇಲ್ಲ. ಆದರೆ ಇಂಥ ಸಮಾನತೆಯ ಆದಿ ಸಮಾಜದಲ್ಲಿ ಈ ಅಧಿಕ ಉತ್ಪತ್ತಿ ಹಾಕಿದ ಪ್ರಶ್ನೆಗೆ "ಈ ಸಂಗ್ರಹ ಕಾರ್ಯವನ್ನು ನಾವು, ಅಧಿಕಾರದ ಪ್ರಯೋಗದಿಂದ. ನಮಗೋಸ್ಕರವಾಗಿಯೇ ಮಾಡುತ್ತೇವೆ ಎಂದು ಗಣ ಸಮಾಜದ ಧಾರ್ಮಿಕ ಮತ್ತು ಸೈನಿಕ ಧುರೀಣರು ಉತ್ತರಿಸಿದರು ಎಂದು ಎಸ್.ಜಿ.ಸರ್. ದೇಸಾಯಿ (ಭಾರತೀಯ ತತ್ವ ಜ್ಞಾನಃ ಕನ್ನಡ, ಗೌರೀಶ ಕಾಯ್ಕಿಣಿ ೧೯೮೨ : ೭೨)" ಹೇಳುತ್ತಾರೆ. ಇದು ಜಾಗತಿಕ ಪ್ರಕ್ರಿಯೆ ಉಳ್ಳದ್ದಾಗಿದೆ.

ಹೀಗೆ ಈ ಸಮಾಜ ವರ್ಗಭೇದವನ್ನು ಪಡೆದು ಕೊಂಡಾಗ ಶೋಷಣೆ ಮೊದಲಿಟ್ಟಿತು. ಈ ಶೋಷಣೆ ಜನಸಮೂಹದ ಜೀವನ ದುರ್ಭರಗೊಳಿಸಿದಾಗ ಪ್ರತಿಭಟನೆಯ ಆವಿರ್ಭಾವವಾಯಿತು. ಈ ಶೋಷಣೆ ಮತ್ತು ಪ್ರತಿಭಟನೆಯ ತಿಕ್ಕಾಟವೇ ಸಮಾಜದ ಮುಂದಿನ ಮಾರ್ಪಾಟಿಗೆ, ಮುನ್ನಡೆಗೆ ಚಾಲಕ ಶಕ್ತಿಯಾಯಿತು.

ಯಂತ್ರ ನಾಗರಿಕತೆಯ ಆವಿರ್ಭಾವದಿಂದ ಪ್ರಖರಗೊಂಡ ಬಂಡವಾಳಶಾಹಿ ತನ್ನ ವಿರಾಟ ಮತ್ತು ವಿಕಾರ ಸ್ವರೂಪವನ್ನು ಜಗತ್ತಿಗೆ ತೋರಿತು. ಉತ್ಪಾದನೆಯ ವೈವಿಧ್ಯಗಳು, ಸಾಮಾಜಿಕತೆಯ ಜಾಗತಿಕ ಸಂಪರ್ಕವನ್ನು ಮತ್ತು ಸ್ವರೂಪ, ವೈಜ್ಞಾನಿಕ ತಾಂತ್ರಿಕ ಬೆಳವಣಿಗೆ ಇವುಗಳಿಂದ ಉಂಟಾದ ಸಮಾಜ ವ್ಯವಸ್ಥೆಯ ಸಂಕೀರ್ಣತೆ ಊಹಿಸಲಸಾಧ್ಯವಾಗಿವೆ. ಈ ಸಂಕೀರ್ಣತೆಯಿಂದ ಶೋಷಣೆಯ ಸ್ವರೂಪವೂ ಸೂಕ್ಷ್ಮವಾಗಿದೆ. ಅದೇನೇ ಇದ್ದರೂ ಆ ಸಾವಿರ ಸಾವಿರ ರೂಪದ ಶೋಷಣೆ ಆರ್ಥಿಕ ಮೂಲವಾದುದು; ಆಸ್ತಿಮೂಲವಾದುದು ಎನ್ನುವುದು ಮುಖ್ಯ ಸಂಗತಿ.

ಇದನ್ನನುಸರಿಸಿ ಉಂಟಾಗುವ ಪ್ರತಿಭಟನೆ ವೈಯಕ್ತಿಕವಾಗಿದ್ದಾಗ ಅವು ಹಿರಿಯರ ಆಕ್ರಮಣಕ್ಕೆ ಒಳಗಾದ ದುರ್ಬಲ ಮಕ್ಕಳು ಒಳಗೊಳಗೇ ಬಯ್ಯುವುದರಿಂದಲೋ, ಅವರ ಸಾಯ್ಕಲ್ ಗಾಳಿ ತೆಗೆಯುವುದರಿಂದಲೋ ಮಾಡುವ ಪ್ರತಿಭಟನೆಯಂತೆ ನಿರರ್ಥಕವಾಗುತ್ತದೆ.

ಆದರೆ ಪತ್ರಿಭಟನೆ ಸಾಂಘಿಕವಾದಾಗ ಆ ಮೂಲಕ ಅದೊಂದು ತಾತ್ವಿಕತೆಯನ್ನು ಹೊಂದಿ ಜನಪದದ ಮನಸ್ಸನ್ನು ಗಾಢವಾಗಿ ಆವರಿಸಿದಾಗ ಚಾರಿತ್ರಿಕವಾಗುತ್ತದೆ. ಚರಿತ್ರೆಯ ಚಲನೆಯ ಶಕ್ತಿಯಾಗುತ್ತದೆ. ಆ ಪ್ರತಿಭಟನೆ ಕೂಡ ಎಲ್ಲಾ ಕಾಲದಲ್ಲಿ, ಎಲ್ಲಾ ಸಮಾಜದಲ್ಲಿ ಒಂದೇ ವಿಧ, ಒಂದೇ ಹದ ಇರುತ್ತದೆಂದೇನೂ ಇಲ್ಲ. ಜಗತ್ತಿನ ವಿವಿಧ ಧರ್ಮಗಳ ಉದಯ, ವಿವಿಧ ಭಕ್ತಿ ಪಂಥಗಳ ಉದಯದ ಒಳಗಡೆ ಕೂಡ ಈ ಚಾರಿತ್ರಿಕ ಪ್ರತಿಭಟನೆ ಅಡಗಿದೆ.

ಆದರೆ ಈ ಪ್ರತಿಭಟನೆ ಆರ್ಥಿಕ ಮೂಲವಾದ ತಾತ್ವಿಕತೆಯಾಗಿ, ವರ್ಗ ಹೋರಾಟವಾಗಿ ಪ್ರಕಟವಾದುದು ಈ ಶತಮಾನದಲ್ಲೇ. ಅಂಥವುಗಳಲ್ಲೆ ರಷ್ಯಾದಲ್ಲಿ ಆದ ಕ್ರಾಂತಿ ಒಂದು ಮೈಲುಕಲ್ಲು; ಈ ಪ್ರತಿಭಟನೆ ಕೂಡ ಒಂದೇ ಸಲ ಜಯ ಪಡೆದದ್ದಲ್ಲ. ಇದರ ಹಿಂದೆ ಅನೇಕ ವೈಫಲಿತ ಪ್ರಯತ್ನ ನಡೆದಿದೆ. ಈ ಎಲ್ಲ ಸೋಲಿನಿಂದ ಕಲಿತ ಪಾಠ ಹುರಿಗೊಳಿಸಿದ ತಾತ್ವಿಕತೆ ಮತ್ತು ಕ್ರಿಯೆ ಚರಿತ್ರೆಯನ್ನು ಮುನ್ನಡೆಸುವ ಶಕ್ತಿಯಾಗಬೇಕಾಗುತ್ತದೆ.

ಈ ಶತಮಾನದಲ್ಲಿ ಪ್ರಪಂಚದ ಅನೇಕ ರಾಷ್ಟ್ರಗಳು ವಸಾಹತುಶಾಹಿ, ಬಂಡವಾಳಶಾಹಿ ನೊಗವನ್ನು ಕಳಚಿ ಒಗೆದವು. ಆದರೆ ಅವೂ ಪೂರ್ಣವಲ್ಲ. ಇಂದಿನ ಸಾಮ್ರಾಜ್ಯಶಾಹಿ ಉಂಟು ಮಾಡಿದ ನವ ವಸಾಹತುಶಾಹಿಯ ಪಡಿನೆರಳಲ್ಲಿ ಇಂಡಿಯಾದಂಥ ರಾಷ್ಟ್ರ ನಡೆಸಬೇಕಾದ ಪ್ರತಿಭಟನೆಯ ಸ್ವರೂಪ, ಅಂತೆಯೇ ಜಾಗತಿಕ ಸಂಬಂಧದ ಪ್ರಭಾವ ಅತ್ಯಂತ ಸಂಕೀರ್ಣತೆಯನ್ನು ಪಡೆದುಕೊಳ್ಳುತ್ತದೆ.

ಮೂರನೇ ಜಗತ್ತಿನ ಪ್ರಮುಖ ರಾಷ್ಟ್ರಗಳಲ್ಲಿ ಭಾರತ ಒಂದು. ಸ್ವಾತಂತ್ರ್ಯದ ನಂತರ ಅದು ತನ್ನ ಪ್ರಗತಿಯ ವೇಗವನ್ನು ಹೆಚ್ಚಿಸಿಕೊಂಡಿದೆ. ಆದರೆ ಅದೇ ಹೊತ್ತಿಗೆ ಇಲ್ಲಿ ನಡೆಯುತ್ತಿರುವ ಅಥವಾ ಶೋಷಣೆಯ ಕಾರ್ಯ ಕರುಳು ಮಿಡಿಸುವಂತಹುದು. ಆದರೆ ಅದನ್ನು ಹತ್ತಿಕ್ಕುವ ಅಥವಾ ಶೋಷಣೆಯನ್ನು ಅತ್ಯಂತ ಕಡಿಮೆ ಮಟ್ಟಕ್ಕೆ ತರುವಲ್ಲಿ ಇಲ್ಲಿಯ ಪ್ರತಿಭಟನೆ ಮೇಲುಗೈ ಪಡೆದಿಲ್ಲ. ಹಾಗಂತ ಇಲ್ಲಿ ಪ್ರತಿಭಟನೆಯೇ ಇಲ್ಲ ಎಂದೇನೂ ಇಲ್ಲ.

ಸ್ವಾತಂತ್ರ್ಯಾನಂತರವೂ, ಹಿಂದೆಯೂ ಭಾರತದಲ್ಲಿ ಇಂಥ ಪ್ರತಿಭಟನೆ ಪ್ರಚಂಡವಾಗಿಯೂ ಸಣ್ಣಪುಟ್ಟದಾಗಿಯೂ ನಡೆದದ್ದನ್ನು ನೋಡಬಹುದು.

೧೮೫೭ರಲ್ಲಿ ಬ್ರಿಟಿಷ ಆಡಳಿತಗಾರರ ವಿರುದ್ಧ ಭಾರತೀಯ ಸೈನಿಕ ಸಿಪಾಯಿಗಳು ನಡೆಸಿದ ಪ್ರತಿಭಟನೆಯನ್ನು ತೆಗೆದುಕೊಳ್ಳಬಹುದು. ೧೮೫೭ರ ಪ್ರತಿಭಟನೆಗೆ ಕೇವಲ ಬಂದೂಕಗಳಿಗೆ ಆಕಳ ಹಾಗೂ ಹಂದಿ ನೆಣವನ್ನು ಉಜ್ಜಿದ್ದಾರೆ ಎನ್ನುವುದು, ಅದನ್ನು ಉಪಯೋಗಿಸಲು ಬ್ರಿಟಿಷ ಕ್ಯಾಪ್ಟನ್‌ಗಳು ಆಜ್ಞೆ ಮಾಡಿದಾಗ ಸೈನಿಕರು ಆ ಆಜ್ಞೆಯನ್ನು ಪಾಲಿಸುವ ಬದಲು ಸಿಡಿದೆದ್ದರು ಎನ್ನುವುದು ಒಂದು ಪ್ರತ್ಯಕ್ಷ ಕಾರಣ. ಆದರೆ ಅದರ ಹಿಂದೆ ಸತತವಾಗಿ ಭಾರತೀಯ ಸೈನಿಕರ ಮೇಲೆ ಮತ್ತು ಜನತೆಯ ಮೇಲೆ ನಡೆಯುತ್ತಿದ್ದ ಬಿಳಿಯರ ದೌರ್ಜನ್ಯದ ಸಿಡಿಮದ್ದು ಕಿಡಿತಗಲಿಸಿಕೊಂಡಿತು ಎನ್ನುವುದು ಮುಖ್ಯ. ಅದನ್ನು ಸಿಪಾಯಿಗಳ ಬಂಡಾಯ ಎಂದು ಕರೆದು ಬಿಳಿಯರು ಹತ್ತಿಕ್ಕಿರಬಹುದು. ಆದರೆ ಅದೇ ಕಾರಣದಿಂದ ಮುಂದೆ

'ರಾಣೀರಾಜೀನಾಮೆ' ಪ್ರಕಟವಾಗಲು ಕಾರಣವಾಯಿತು. ಮಾತ್ರವಲ್ಲ, ತಾವು ಬಿಳಿಯರನ್ನೇ ನಡುಗಿಸಬಲ್ಲೆವು ಎಂಬ ಆತ್ಮವಿಶ್ವಾಸ ಕಂಡು ಬಂತು.

ನಮ್ಮ ಸ್ವಾತಂತ್ರ್ಯ ಸಂಗ್ರಾಮವಂತೂ ಅಂಥ ಪ್ರಚಂಡ ಪ್ರತಿಭಟನೆಯ ಪ್ರತೀಕವಾಗಿದೆ. ಆದರೆ ನಾವು ಇಲ್ಲಿ ಗಮನಿಸಬೇಕಾದುದೆಂದರೆ ಇದು ಕೇವಲ ಗಾಂಧಿಕಾಲದ ಪ್ರತಿಕ್ರಿಯೆಯಲ್ಲ; ಬದಲಾಗಿ ೧೮೮೫ರಲ್ಲಿ ಸ್ಥಾಪನೆಗೊಂಡ ಅಖಿಲ ಭಾರತ ಕಾಂಗ್ರೆಸ್ ಸ್ಥಾಪನೆಯಲ್ಲಿ ಮೂರ್ತಿಗೊಂಡು, ಅದು ವ್ಯಾಪಕ ವ್ಯಾಪಕವಾಗುತ್ತ ಗಾಂಧಿಕಾಲದಲ್ಲಿ ಸ್ವತಂತ್ರ್ಯ ಗಂಗೆಯ ಸಾವಿರ ತೊರೆಗಳಾಗಿ ಹರಿದು ಬಂತು ಎಂಬುದು. ನಗರ, ಗ್ರಾಮೀಣ ಪ್ರದೇಶ, ಕಾರ್ಮಿಕವರ್ಗ ಮಧ್ಯಮ ವರ್ಗ, ಭೂಮಾಲಿಕ, ರೈತ, ಭಾರತೀಯ ಬಂಡವಾಳಶಾಹಿಯ ವರ್ಗ, ಕ್ರಾಂತಿಕಾರಿಗಳು ಹೀಗೆ ಎಲ್ಲವಿಭಾಗದ ಜನರ ಹೃದಯದಲ್ಲಿ ಸ್ವಾತಂತ್ರ್ಯಕ್ಕಾಗಿ ಮಾಡಬೇಕು ಇಲ್ಲ ಮಡಿಯಬೇಕು ಎಂಬ ಪ್ರಜ್ಞೆ ಒಂದು ಸಾಮೂಹಿಕ ಪ್ರಜ್ಞೆಯಾಗಿ, ಪ್ರತಿಭಟನೆಯಾಗಿ ಭುಗಿಲೆದ್ದಾಗ ಅದರ ಫಲವಾಗಿ ಬ್ರಿಟಿಷರು ಭಾರತವನ್ನು ಬಿಟ್ಟು ತೊಲಗಬೇಕಾಯಿತು.

ಮಧ್ಯದಲ್ಲೇ ಡಾ. ಭೀಮರಾವ್ ಅಂಬೇಡ್ಕರ ಅಸ್ಪೃಶ್ಯರ ಉನ್ನತಿಗಾಗಿ, ಅಸ್ಪೃಶ್ಯತೆಯ ನಿವಾರಣೆಗಾಗಿ ನಡೆಸಿದ ಹೋರಾಟ ಒಂದು ಯುಗಾಂತರ ದಾಖಲೆಯಾಗಿದೆ. ಗಾಂಧಿಯಾದಿಯಾಗಿ ಭಾರತೀಯರ ಮನಸ್ಸು ಅಸ್ಪೃಶ್ಯತೆಯ ನಿವಾರಣೆ ಹಾಗೂ ದಲಿತರ ಪ್ರಗತಿಯ ಪರವಾಗಿ ಚಿಂತಿಸುವಂತಾದುದು, ಭಾರತೀಯ ರಾಜ್ಯ ಘಟನೆಯಲ್ಲಿ ದಲಿತರಿಗಾಗಿ ಸೌಲಭ್ಯಗಳು ಮೀಸಲಾದುದು ಈ ಪ್ರಪಂಡ ಪ್ರತಿಭಟನೆಯ ಪರಿಣಾಮವಾಗಿದೆ.

ಇಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದುದು ಇವೆರಡೂ ಸಂವಿಧಾನಾತ್ಮಕವಾದ ಪ್ರತಿಭಟನಾ ರೀತಿಯದಾಗಿವೆ. ಮತ್ತು ಇಂಥ ಪ್ರತಿಭಟನೆಯೇ ಭಾರತೀಯ ಪ್ರಜಾಪ್ರಭುತ್ವಕ್ಕೆ ಭದ್ರವಾದ ಬುನಾದಿಯಾಗಿದೆ. ಇಂದು ಜಗತ್ತಿನಲ್ಲಿ ಬೇಕಾದ ಮತ್ತು ಬೇಡಾದ ಕಾರಣಗಳಿಗೆಲ್ಲ ಪ್ರತಿಭಟನೆ ಹಿಂಸಾತ್ಮಕ ಸ್ವರೂಪ ಪಡೆಯುತ್ತಿರುವಾಗ ಇಂಥ ಸಂವಿಧಾನಾತ್ಮಕ ಹೋರಾಟ ಮಾತ್ರ ಮಾನವಕುಲಕ್ಕೆ ಶಾಂತಿಯನ್ನು ಶಾಶ್ವತಗೊಳಿಸುವಲ್ಲಿ ಮತ್ತು ಪ್ರಜಾಪ್ರಭುತ್ವಕ್ಕೆ ನೈತಿಕ ಸ್ವರೂಪ ಕೊಡುವಲ್ಲಿ ಮಹತ್ವದ್ದಾಗಿದೆ ಎಂದೆನ್ನಿಸುತ್ತದೆ.

ಸ್ವತಂತ್ರ ಭಾರತದ ದಿನನಿತ್ಯದ ವ್ಯವಹಾರಗಳಲ್ಲಿಯೂ ಶೋಷಣೆಗೆ ತಕ್ಕ ಪ್ರತಿಭಟನೆ ಹುಟ್ಟಿ ಕೊಂಡಿರುವುದನ್ನು ಕಾಣುತ್ತೇವೆ.

ಅಂಥ ಪ್ರತಿಭಟನೆಗೆ ವೇದಿಕೆಯಾದುದು ಬಳಕೆದಾದರ ವೇದಿಕೆ ಒಂದು. ಇದು ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಚಟುವಟಿಕೆಯಲ್ಲಿದೆ. ವ್ಯಾಪಾರಿಗಳಿಂದ ಅಧಿಕಾರಿಗಳಿಂದ ಗ್ರಾಹಕರಿಗೆ ಜನಸಾಮಾನ್ಯರಿಗೆ ಆಗುವ ಅನ್ಯಾಯವನ್ನು ಪ್ರತಿಭಟಿಸು ವಲ್ಲಿ ಒಂದು ವೇದಿಕೆಯಾಗಿ ಕೆಲಸ ಮಾಡುತ್ತಿದೆ.

ವರದಕ್ಷಿಣೆಯಿಂದಾಗಿ ಹೆಣ್ಣು ಮಕ್ಕಳ ಜೀವನದ ಮೇಲೆ ಆಗುವ ದೌರ್ಜನ್ಯವನ್ನು ತಡೆ ಹಿಡಿಯುವಲ್ಲಿ, ಕಾಯ್ದೆಗಳು ಇದ್ದರೂ ಕೂಡ ಅನ್ಯಾಯ ಅವ್ಯಾಹತವಾಗಿಯೇ ಇದೆ. ಇದನ್ನು

ತಡೆಹಿಡಿಯಲೆಂದು ಅನೇಕ ಮಹಿಳಾ ಸಂಘಟನೆಗಳು ಹುಟ್ಟಿಕೊಂಡಿವೆ. ಆದರೆ ಇವು ಯಾಕೆ ಅಷ್ಟು ಯಶಸ್ವಿಯಾಗಿ ಕೆಲಸ ಮಾಡುತ್ತಿಲ್ಲ ಎನ್ನುವ ಜಿಜ್ಞಾಸೆಗೆ ಇಲ್ಲಿ ಅವಕಾಶವಿಲ್ಲ. ಆದರ ಅವೂಕೂಡ ಶೋಷಣೆಗೆ ಪ್ರತಿಕ್ರಿಯೆಯಾಗಿ ಹುಟ್ಟಿಕೊಂಡವು.

ನಮ್ಮ ವಿದ್ಯಾರ್ಥಿಗಳ ಪ್ರತಿಭಟನೆಯ ಸುದ್ದಿಯನ್ನು ಪತ್ರಿಕೆಯಲ್ಲಿ ಆಗಾಗ ಓದುತ್ತಿರುತ್ತೇವೆ. ಅವು ಎಷ್ಟೋ ಸಲ ಪರೀಕ್ಷೆ ಮುಂದುಹಾಕುವಂಥ ಕ್ಷುಲ್ಲಕ ಕಾರಣಕ್ಕೆ ಹುಟ್ಟಿಕೊಂಡಿರಬಹುದು. ಆದರೆ ಹೆಚ್ಚಿನದೆಲ್ಲ ತಮಗೆ ಸಂಸ್ಥೆಯಿಂದ, ಶಿಕ್ಷಕರಿಂದ, ಸರಕಾರದಿಂದ ಆಗುವ ಶೋಷಣೆಗೆ ಪ್ರತಿಕ್ರಿಯೆಯಾಗೇ ಹುಟ್ಟಿಕೊಂಡಿರುತ್ತದೆ.

ಪ್ರತಿಭಟನೆಯ ಸೊಲ್ಲು ಸಾಂಸ್ಕೃತಿಕ ರಂಗದಲ್ಲೂ ಕಾಣಿಸಿಕೊಳ್ಳುತ್ತದೆ. ಸಾಂಸ್ಕೃತಿಕ ಸಾಹಿತ್ಯಿಕ ರಂಗದಲ್ಲಿ ತಮಗಾದ ಯುಗಯುಗಾಂತರದ ನಿರ್ಲಕ್ಷ್ಯ, ಅನ್ಯಾಯಗಳನ್ನು ಪ್ರತಿಭಟಿಸಿ, ಅಲ್ಲಿ ತಮ್ಮ ಧ್ವನಿಯನ್ನು ಸ್ಥಾಪಿಸಿಕೊಳ್ಳಲು ಬಯಸಿದ್ದೇ ಬಂಡಾಯ ದಲಿತ ಸಾಹಿತ್ಯ ಚಳುವಳಿ. ವ್ಯವಸ್ಥೆಯು ಸ್ಥಾಪಿಸಿದ ಲಿಂಗ ತರತಮತೆ, ಜಾತೀಯತೆ, ಬಂಡವಾಳಶಾಹಿಯಿಂದಾಗುವ ಶೋಷಣೆ, ಜಮೀನುದಾರಿಯಿಂದಾಗುವ ಶೋಷಣೆಯನ್ನು ಪ್ರತಿಭಟಿಸುವ ಧ್ವನಿಯಾಗಿ ಇಂದು ಕೆಳವರ್ಗದವರು ಸಾಹಿತ್ಯವನ್ನು ಪ್ರತಿಭಟನೆಯ ವಾಹಕವನ್ನಾಗಿ ಮಾಡಿಕೊಳ್ಳುತ್ತಿದ್ದಾರೆ.

ತಮ್ಮ ಕ್ಷೇತ್ರಕ್ಕೆ ಬೇಕಾದ ಕೆಲಸಗಳನ್ನು ಮಾಡಿಕೊಡದಿದ್ದ ತಮ್ಮ ಪ್ರತಿನಿಧಿಗಳ ವಿರುದ್ಧ ಪ್ರತಿಭಟಿಸಲು ಈಗಿತ್ತಲಾಗಿ ಒಂದು ಹೊಸರೀತಿಯ ಪ್ರತಿಭಟನೆಯನ್ನು ನಮ್ಮ ಮತದಾರರು ತೋರುತ್ತಿದ್ದಾರೆ. ಇದನ್ನು ಪ್ರತಿಭಟಿಸಲು ಅವರು ಆರಿಸಿಕೊಂಡ ಅಸ್ತ್ರ ಎಂದರೆ ಚುನಾಣೆಯನ್ನು ಬಹಿಷ್ಕರಿಸುವದು. ರಾಜಕೀಯ ಪ್ರತಿನಿಧಿಗಳನ್ನು ಮಣಿಸುವಲ್ಲಿ ಈ 'ಮತ ಬಹಿಷ್ಕಾರ' ಒಂದು ಪ್ರಬಲವಾದ ಸಂವಿಧಾನಾತ್ಮಕ ಮತ್ತು ಅಹಿಂಸಾತ್ಮಕ ಪ್ರತಿಭಟನೆಯಾಗಬಲ್ಲದು.

ಆದರೆ ಇವೆಲ್ಲ ಒಂದು ಇಡಿಯಾದ ತಾತ್ವಿಕ ನೆಲೆಯಲ್ಲಿ ಪ್ರತಿಯೊಂದು ಜನಮನವನ್ನು ಗಾಢವಾಗಿ ಆವರಿಸಿದಾಗ ಮಾತ್ರ ಶೋಷಣೆಯ ಬುಡ ಮೂಲಕ್ಕೆ ಕೊಡಲಿ ಹಾಕಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ರಾವಣನ ಹೊಟ್ಟೆಗೆ ಕಾಸಿನ ಮಜ್ಜಿಗೆಯಂತೆ ಕ್ಷೀಣವಾಗುತ್ತದೆ ಎನ್ನುವದು ಮುಖ್ಯವಾಗಿದೆ.

ಆದರೆ ಇಂಥ ಪ್ರತಿಭಟನೆಯನ್ನು ಕ್ಷೀಣಗೊಳಿಸಲು ಮರ್ದಕರ ಕೈಯಲ್ಲಿ ನಮ್ಮ ವ್ಯವಸ್ಥೆ ಕೆಲವು ಆಯುಧಗಳನ್ನು ಕೊಟ್ಟಿದೆ. ಇಂಥ ಸಂಗತಿಗಳಲ್ಲಿ ನಮ್ಮ ಶ್ರೇಣೀಕೃತ ಜಾತಿ ವ್ಯವಸ್ಥೆ ಮುಖ್ಯ ಅಪಾಯಕಾರಿಯಾದುದು. ಬಹಳ ಕಾಲದಿಂದಲೂ ನಡೆದುಬಂದ ಜಾತಿ ವ್ಯವಸ್ಥೆ ಎಂಥ ಪ್ರತಿಭಟನೆಯನ್ನೂ ನುಂಗಿ ನೀರು ಕುಡಿಯಬಲ್ಲುದಾಗಿದೆ. ಎಂಥ ದೌರ್ಜನ್ಯವನ್ನೂ, ಶೋಷಣೆಯನ್ನೂ ಒಕ್ಕಟ್ಟಾಗಿ ಪ್ರತಿಭಟಿಸದೇ ದೇವರ ಮೇಲೆ ಭಾರಹಾಕಿ ಸಹಿಸುವ ಅಪಾಯಕಾರಿ ತಾಳ್ಮೆಯನ್ನು ಅದು ನಮಗೆ ಕಲಿಸಿದೆ. ಜಮೀನುದಾರಿ-ರೈತರ ಮಧ್ಯ ನಡೆಯುವ ಹೋರಾಟದಲ್ಲಿ ಯಾವುದೇ ಒಂದು ವರ್ಗದಲ್ಲಿ ಒಂದು ತಟ್ಟಿನ ಜನ ಬಹಳವಾಗಿದ್ದರೆ, ಅದು ಕೂಡಲೇ ಕೋಮುಗಲಭೆಯಾಗಿ ಮಾರ್ಪಾಡಾಗುವ ಪವಾಡ ಇಲ್ಲಿಯದು.

ಅಸ್ಪೃಶ್ಯರು ತಮ್ಮ ಮೇಲೆ ಆಗುತ್ತಿರುವ ಸಾಮಾಜಿಕ, ರಾಜಕೀಯ, ಶೋಷಣೆಯನ್ನು ಪ್ರತಿಭಟಿಸಿದರೆ ಸವರ್ಣೀಯ ಸಾವುಕಾರ ಕೂಲಿಕಾರಗಳನ್ನೇ ಒಟ್ಟಿಗೆ ಬೆಸೆದು ಜಾತಿ ದಂಗೆಯಾಗಿ ಪ್ರಕಟವಾಗಿ ಬಿಡುತ್ತದೆ.

ಈ ಜಾತಿ ಮತ್ತು ಧರ್ಮದ ಅಂಧತೆ ಎಷ್ಟು ಅಪಾಯಕಾರಿ ಸ್ಥಿತಿಗೆ ತಲುಪಿಸಬಹುದೆಂದರೆ ಅಕ್ಕ ಪಕ್ಕದಲ್ಲೇ ಬದುಕುತ್ತಿರುವ ನಿತ್ಯವ್ಯವಹಾರದಲ್ಲಿ ಸಹಾಯಕ, ಸಹಕಾರಿಗಳಾಗಿರುವ ತಮ್ಮ ಮನುಷ್ಯ ಸೋದರ ಸೋದರಿಯರ ಮಧ್ಯದಲ್ಲೇ ಒಡಕನ್ನು ತಂದು ಹಿಂಸೆಯಲ್ಲಿ ತೊಡಗುವ ವೈರಿಗಳನ್ನಾಗಿ ಮಾರ್ಪಡಿಸಿ ಬಿಡುತ್ತಿರುವ ಉದಾಹರಣೆಗಳು ನಮ್ಮ ಮುಂದಿವೆ.

ಮತಾಂಧತೆಯಂತೆ ಭಾಷಾಂಧತೆ ಕೂಡ ಭಾಷಾ ಪ್ರೇಮವನ್ನು ದಾಟಿ, ಜನಾಂಗ ದ್ವೇಷವಾಗಿ ಮಾರ್ಪಾಡಾಗಿ, ಒಟ್ಟಾರೆಯಾಗಿ ಮಾನವ ಪ್ರಗತಿಗೆ ಹಾನಿಯಾಗುವ ಸಂಭವವಿದೆ.

ನಮ್ಮ ದೇಶದ ಯುವ ನಿರುದ್ಯೋಗಿಗಳ ಸಮಸ್ಯೆಯೇ ಒಂದು ಪ್ರಬಲವಾದ ಪ್ರತಿಭಟನೆಯಾಗಿ ಹೊರಹೊಮ್ಮಲು ಸಾಧ್ಯವಿತ್ತು. ಆದರೆ ಈ ಯುವಕರು ಮತ್ತು ಇವರಿಗೆ ಮಾರ್ಗದರ್ಶನ ಮಾಡುವವರು ವಿವಿಧ ಜಾತಿ, ಧರ್ಮ ಹಾಗೂ ಮುಖ್ಯವಾಗಿ ವರ್ಗಗಳಲ್ಲಿ ಹಂಚಿ ಹೋಗಿದ್ದಾರೆ. ಇವೆಲ್ಲದರ ಭಾವ ಪ್ರಚೋದನೆಯಿಂದ ಇಂಥವರ್ಗ ಹೋರಾಟದ ಪ್ರತಿಭಟನೆ ಛಿದ್ರಗೊಂಡಿದೆ.

ನಮ್ಮ ದೇಶದ ಅನಕ್ಷರತೆ ಪ್ರಗತಿಗೆ ಒಂದು ಪ್ರಬಲವಾದ ಸವಾಲು. ಅನಕ್ಷರತೆಯ ಅವೈಜ್ಞಾನಿಕತೆ, ವ್ಯಕ್ತಿಪೂಜೆ, ಜಾತಿ, ಬಡತನ, ಅನೈಕ್ಯತೆ, ದಾಸ್ಯ ಇಂಥವುಗಳನ್ನು ಕಾಯ್ದಕೊಳ್ಳುವ ಒಂದು ದೊಡ್ಡ ಆಯುಧ.

ಜಾಗತಿಕ ಸಂಗತಿಗಳನ್ನು ಗಮನಿಸಿದಾಗ ಬಂಡವಾಳಶಾಹಿಯ ಕೈಯಲ್ಲಿ ಕೇಂದ್ರಿಕೃತವಾದ ವಿಜ್ಞಾನ ಜಗತ್ತನ್ನೇ ಸರ್ವನಾಶದ ಅಂಚಿಗೆ ತಂದು ನಿಲ್ಲಿಸಿದೆ ಎನ್ನಿಸದೇ ಇರದು. ಮನುಷ್ಯರನ್ನೇ ಕಾಣದೇ ಮನುಷ್ಯ ಹಿಂಡನ್ನೇ ಧ್ವಂಸಮಾಡಬಲ್ಲವು ಇಂದಿನ ಅಸ್ತ್ರಗಳು.

ತನ್ನ ಪ್ರಚಂಡ ಶಕ್ತಿಯಿಂದ ಕ್ರಾಂತಿಯನ್ನೆಸಗಿದ ರಷಿಯ ತನ್ನ ಆರ್ಥಿಕ ಹಿನ್ನಡೆಯಿಂದಾಗಿ ಬಂಡವಾಳಶಾಹಿಗಳ ಸ್ನೇಹ ಹಸ್ತವನ್ನು ಯಾಚಿಸುತ್ತದೆ. ತಾಂತ್ರಿಕ ತಪ್ಪು ಪ್ರಯೋಗದಿಂದ ಮತ್ತು ಪರಿಸ್ಥಿತಿಯ ವಿಷಮ ಒತ್ತಡದಿಂದ ಸಂಬಂಧಿಸಿದ ಸಮಾಜವಾದಿ ರಾಷ್ಟ್ರಗಳ ಆರ್ಥಿಕ ಹಿನ್ನಡೆ ಬಂಡವಾಳಶಾಹಿಗಳಿಂದಲೂ ಯಥಾಸ್ಥಿತಿ ವಾದಿಗಳಿಂದಲೂ ವರ್ಗ ಹೋರಾಟ ತಾತ್ವಿಕತೆಯ ಸೋಲು ಎಂದು ವ್ಯಾಖ್ಯಾನಿ ಸಲ್ಪಡುತ್ತದೆ. ಇದರಿಂದಲೂ ಹೋರಾಟದ ವ್ಯೂಹದ ಬಗ್ಗೆ ನಿಂತು ಚಿಂತಿಸುವಂತಾಗಿದೆ.

ಯಾವ ವ್ಯವಸ್ಥೆಗೂ ತನ್ನದೇ ಆದ ಶಿಸ್ತು, ಸಂಯಮ ಬೇಕಾಗುತ್ತದೆ. ಮತ್ತು ಅದು ಹಾಗೇ ಬೆಳೆದುಕೊಂಡು ಬಂದಿರುವದನ್ನು ಚರಿತ್ರೆ ಸಾರಿಹೇಳುತ್ತದೆ. ನಮ್ಮ ಭಾರತದ ಸ್ವಾತಂತ್ರ್ಯ ಹೋರಾಟ ಭಾರತದ ರಾಜಕೀಯಕ್ಕೆ ಇಂಥ ಒಂದು ತಾತ್ವಿಕತೆಯ ಬೆನ್ನೆಲುಬು ಆಗಿದೆ. ಆದರೆ ಇಂದು ಚಿಂತಕರ ಮನಸ್ಸು ಭಯಗೊಳ್ಳುವಷ್ಟು ಈ ಭ್ರಷ್ಟತೆ ಜೀವನದಲ್ಲಿ ಎಲ್ಲ ಮಗ್ಗುಲನ್ನು

ಆವರಿಸಿಬಿಟ್ಟಿದೆ. ಇದು ಪೀಳಿಗೆ ಪೀಳಿಗೆಯ ನೈತಿಕತೆಯನ್ನೂ ಧೈರ್ಯವನ್ನೂ ಭ್ರಷ್ಟಗೊಳಿಸಿದೆ. ತತ್ತ್ವರಾಹಿತ್ಯತೆ ದೇಶದಲ್ಲಿ ಅಧಿಕಾರಶಾಹಿಯನ್ನು ಬೆಳೆಸಿದೆ. ಇಂದು ಭ್ರಷ್ಟತೆ ಕಿಂಚಿತ್ತೂ ಅಗೌರವಕ್ಕೆ ಪಕ್ಕಾಗಿಲ್ಲ. ಇದರಿಂದಲೂ ಪ್ರತಿಭಟನೆಯ ಶಕ್ತಿ ಛಿದ್ರಗೊಂಡಿದೆ. ಅಲ್ಲಲ್ಲಿ, ಹಿಂಸೆ, ಭಯೋತ್ಪಾದನೆ ಕಾಣಿಸಿಕೊಳ್ಳುತ್ತಿದೆ.

ಹೀಗೆ ಭ್ರಷ್ಟತೆಯೇ ಜೀವನದ ಒಂದು ರಹದಾರಿಯಾಗಿರುವ ವಿಷವರ್ತುಲದಲ್ಲಿ ಪ್ರತಿಭಟನೆ ಬೇಡ, ರಾಜಿಯಿಂದ ಬದುಕುವ, ಹೇಗಾದರೂ ಮಾಡಿ ಸುಖ ಪಡುವ, ಅಧಿಕಾರ ಸಂಪತ್ತು ಪಡೆಯುವ ಎಂಬ ಸ್ಥಿತಿ ಜೀವನದ ಎಲ್ಲ ವರ್ಗದ ಜನರಲ್ಲಿ ಬಂದಿದೆ.

ಭಾರತದ ಶೋಷಣೆಯ ಪೂರ್ಣ ಸ್ಥಿತಿ ಬದಲಾಗಬೇಕಾದರೆ ಒಂದು ಸಾಮಾಜಿಕ ಕ್ರಾಂತಿಯಾಗ ಬೇಕು ಎನ್ನುತ್ತಾನೆ ನೋಬಲ್ ಪ್ರಶಸ್ತಿ ಸನ್ಮಾನಿತ ಖ್ಯಾತ ಅರ್ಥಶಾಸ್ತ್ರಜ್ಞ ಗುನ್ನಾರ ಮಿರ್ಡಾಲ್. ಈ ಕ್ರಾಂತಿಯನ್ನು ಯಾರು ಪೂರ್ತಿ ಮಾಡಬೇಕು? "ಬುದ್ಧಿಜೀವಿವರ್ಗ ಬಡ ಜನರ ಸಂಘಟನೆ ಮಾಡಿ ಕ್ರಾಂತಿಯ ಮುಂದಾಳ್ತನ ವಹಿಸಬೇಕು" (ಉದಾಹರಣೆ: ಪ್ರೊ. ಪ್ರಭಾಕರ ಶಿಶಿಲ್, ಆರ್ಥಿಕ ಚಿಂತನೆ ಧಾರೆ ೧೯೮೯, ಮೂರನೇ ಭಾಗ ೫೧) ಎನ್ನುತ್ತಾನೆ ಆತ. ಆದರೆ "ರಷಿಯಾದಲ್ಲಿ ಕ್ರಾಂತಿಯಾಗಲು ಕಾರಣ ಅಲ್ಲಿನ ಶ್ರಮಿಕ ವರ್ಗ, ಬುದ್ಧಿಜೀವಿಗಳು ಶೋಷಕರ ವಿರುದ್ಧ ಸಂಘಟಿತ ಹೋರಾಟ ನಡೆಸಿರುವುದು. ಆದರೆ ಭಾರತದಲ್ಲಿ ಬುದ್ಧಿಜೀವಿಗಳು ವ್ಯವಸ್ಥೆಯ ಪರವಾಗಿ ನಿಂತು ಶ್ರಮಿಕ ವರ್ಗದಿಂದ ದೂರವಾಗಿ ಕ್ರಾಂತಿಯ ಅವಕಾಶವನ್ನೇ ಇಲ್ಲವಾಗಿಸಿದ್ದಾರೆ ಎಂದು ಮಿರ್ಡಾಲ್ ಮುಂದೆ ವಿವರಿಸುತ್ತಾರೆ."

ಈ ಸನ್ನಿವೇಶದಲ್ಲಿ ಚರಿತ್ರೆಯನ್ನು ಶೋಷಣೆ ಶಾಶ್ವತ ಎಂಬಂತೆ, ಪ್ರತಿಭಟನೆ ಕೇವಲ ಪ್ರಕ್ರಿಯೆ ಎಂಬಂತೆ ವ್ಯಾಖ್ಯಾನಿಸದೇ, ಪ್ರತಿಭಟನೆಯು ಪಡೆದುಕೊಳ್ಳಬೇಕಾದ ಹೊಸ ವ್ಯೂಹ ಮತ್ತು ಆಯಾಮದ ಕುರಿತು ಚಿಂತಿಸಬೇಕಾಗಿದೆ. ಭಾರತದಲ್ಲಿ ಪ್ರತಿಭಟನೆಯ ಸೌಮ್ಯತೆ ಉಂಟಾಗಿದ್ದರೆ ಅದಕ್ಕೆ ಈ ಎಲ್ಲ ವಿಷಮ ಸಂಗತಿಗಳು ಕಾರಣವಾಗಿವೆ.

ನಮ್ಮ ಧರ್ಮ, ಜಾತಿ, ಭಾಷೆ ಪ್ರದೇಶ ಇಂಥ ಹತ್ತಾರು ಅಡತಡೆಗಳನ್ನು ಮೀರಿ ಪ್ರತಿಭಟನೆ ಒಂದು ವಿಶಾಲವಾದ ಮತ್ತು ಕ್ರಾಂತಿ ಪೂರ್ಣವಾದ ತಾತ್ವಿಕ ಲೋಕವನ್ನು ಪ್ರವೇಶಿಸಬೇಕೆಂದರೆ ನಮ್ಮ ಬುದ್ಧಿಜೀವಿಗಳು, ಯುವಕರು, ವಿದ್ಯಾರ್ಥಿಗಳು, ನಮ್ಮ ಸಂಕುಚಿತತೆ ಸ್ವಾರ್ಥ ಐಷಾರಾಮವನ್ನು ಸಂಯಮಿಸಿಕೊಂಡು, ಸಾಮಾನ್ಯ ಜನತೆಯಲ್ಲಿ ಬೆರೆತು ಮನುಷ್ಯತ್ವದ ಬೆಳವಣಿಗೆಗೆ ಕಾರಣವಾಗುವ ಕ್ರಾಂತಿಕಾರಕ ಪ್ರತಿಭಟನೆಗೆ ನೆಲವನ್ನು ಹದಗೊಳಿಸಬೇಕು. ಚರಿತ್ರೆ ಮನುಷ್ಯನನ್ನು ಪ್ರೇರೇಪಿಸುವಂತೆ, ಮನುಷ್ಯನೂ ಚರಿತ್ರೆಯ ಚಲನೆಗೆ ಶೀಘ್ರತೆಯನ್ನು ತರಬಲ್ಲನು ಎಂಬ ಮಾತನ್ನು ಮನನ ಮಾಡಿಕೊಳ್ಳಬೇಕಾದ ಅವಶ್ಯಕತೆಯಿದೆ.

*

ದಲಿತರು ಮತ್ತು ಸಾಮಾಜಿಕ ಮುನ್ನಡೆ

'ದಲಿತ' ಎನ್ನುವ ಪದಕ್ಕೆ ಎರಡು ಪರಿಕಲ್ಪನೆಗಳಿವೆ. ಮೊದಲನೆಯದಾಗಿ ಪಾರಂಪರಿಕವಾದುದು. ಅದರಲ್ಲೂ ದಲಿತ ಬಂಡಾಯದ ಸಂದರ್ಭದಲ್ಲಿ ಚಾಲನೆಗೆ ಬಂದ ಪ್ರಕಾರ 'ದಲಿತ' ಎಂದರೆ ಅಸ್ಪೃಶ್ಯ. ಇದಕ್ಕೆ ಚಾರಿತ್ರಿಕ ಕಾರಣ ಇಲ್ಲದೇ ಇಲ್ಲ.

ಧಾರ್ಮಿಕ-ಸಾಂಸ್ಕೃತಿಕ ದೃಷ್ಟಿಯಿಂದ ನೋಡಿದಾಗ ಹಿಂದೂ ಧರ್ಮದಲ್ಲಿ ನಾಲ್ಕು ವರ್ಣಗಳಿವೆ. ಅದರಲ್ಲಿ ನಾಲ್ಕನೆಯದು ಶೂದ್ರ ವರ್ಣ. ಈ ವರ್ಣಭೇದ ಶ್ರೇಣೀಕರಣಕ್ಕೆ ಒಳಗಾಗಿರುವುದರಿಂದ ಶೂದ್ರರು ಕೊನೆಯವರು. ಸಂಪತ್ತು ಹೀನರು. ಮೇಲಿನ ಮೂರು ವರ್ಗಗಳ ಸೇವೆ ಮಾಡಿ ಬದುಕಬೇಕಾಗುವವರು. ಅವರ ಬಗ್ಗೆ ನ್ಯಾಯ ಎಂದರೆ ಬ್ರಾಹ್ಮಣ ನಿರ್ಣಯವೇ ಆಗಿತ್ತು. ಅದೇ ಸ್ವಧರ್ಮ ಮತ್ತು ಸ್ವಧರ್ಮೇ ನಿಧನಂ ಶ್ರೇಯಃ. ಇದಕ್ಕೆ ಹೆಚ್ಚಿನ ವಿವರ ಬೇಡ. ಆದರೆ ಈ 'ಶೂದ್ರ' ವರ್ಣಕ್ಕೆ ಒಂದು ಅನುಬಂಧ ಎಂಬಂತೆ 'ಪಂಚಮವರ್ಣ' ವೊಂದು ಇದೆ. ಅದೇ ಅಸ್ಪೃಶ್ಯವರ್ಗ. ಇದರ ಸ್ಥಿತಿ ಹೇಗೆಂದು ಡಾ. ಅಂಬೇಡ್ಕರ ಮಾತಿನಲ್ಲಿ ಹೇಳುವುದಾದರೆ ಬ್ರಾಹ್ಮಣ್ಯ ಎಂದರೆ ಬೇರೆ ಬೇರೆ ವರ್ಗಗಳಲ್ಲಿ ಶ್ರೇಣಿಕೃತ ತರತಮತೆ, ಶೂದ್ರರ ಮತ್ತು ಅಸ್ಪೃಶ್ಯರ ಸಂಪೂರ್ಣ ಆಯುಧರಾಹಿತ್ಯತೆ (ಅಸಹಾಯಕತೆ) ಶೂದ್ರ ಮತ್ತು ಅಸ್ಪೃಶ್ಯರನ್ನು ಶಿಕ್ಷಣದಿಂದ ಸಂಪೂರ್ಣ ಹೊರಗಿಡುವಿಕೆ, ಶೂದ್ರ ಮತ್ತು ಅಸ್ಪೃಶ್ಯರಿಗೆ ಅಧಿಕಾರರಾಹಿತ್ಯತೆ ಮತ್ತು ಶೂದ್ರ ದಲಿತರಿಗೆ ಸಂಪತ್ತು ಗಳಿಕೆಯ ಬಹಿಷ್ಕಾರ. (ಡಾ. ಅಂಬೇಡ್ಕರ- ಆ ಕ್ರಿಟಿಕಲ್‌ಸ್ಟಡಿ-ಡಬ್ಲ್ಯೂ.ಎಸ್. ಕುಬೇರ ೧೯೭೯; ಪುಟ. ೫೬) ಮುಂದೆ ಶೂದ್ರರೂ ಜಮೀನುದಾರರು; ಆದರೆ ದಲಿತರು?

ಇವುಗಳೆಲ್ಲ ಶೂದ್ರ ವರ್ಣಕ್ಕೆ ಸಾಮಾನವಾಗಿದ್ದರೂ 'ಅಸ್ಪೃಶ್ಯತೆ ಎನ್ನುವ ಒಂದು ಅಮಾನುಷ ಆಚರಣೆ ಪಂಚಮ ವರ್ಣಕ್ಕೆ ಸಂಬಂಧಿಸಿದ್ದಿದೆ. ಚಾತುರ್ವರ್ಣ್ಯ ವೈಜ್ಞಾನಿಕ ಎಂದು ನಂಬಿರುವ ಗಾಂಧೀಜಿ ಸಹ ಅಸ್ಪೃಶ್ಯತೆ ಒಂದು ಶಾಪವೆನ್ನ ಬೇಕಾಯಿತು. ಜಾತಿಗಳ ಶ್ರೇಣೀಕರಣದಲ್ಲಿ ಕೆಳಗೆ ಬಂದಂತೆ ಸಾಂಪತ್ತಿಕ ಸ್ಥಿತಿ ಕಡಿಮೆಗೊಳ್ಳುತ್ತಾ ಅತಿಕೆಳಗೆ ಅದು ಅಸ್ಪೃಶ್ಯತೆಯಲ್ಲಿ ಹರಳುಗಟ್ಟಿದೆ. ಈ ಕ್ರೌರ್ಯ ಸವರ್ಣೀಯ ಮತ್ತು ಅವರ್ಣೀಯ ಎಂಬ ದೊಡ್ಡ ಬಿರುಕನ್ನೇ ತಂದಿದೆ.

ಇದಕ್ಕೆ ವಿರುದ್ಧವಾದ ಪ್ರತಿಭಟನೆಯ ದೀರ್ಘವಾದ ಚರಿತ್ರೆ ಭಾರತಕ್ಕೆ ಇದ್ದೇ ಇದೆ. ಇದು ವೈದಿಕ-ಅವೈದಿಕ ಎಂಬ ರೀತಿಯಲ್ಲಿ ಹಿಂದೆ ನಡೆದಿದೆ. ಬೌದ್ಧ, ಜೈನ ವೀರಶೈವ

ಇತ್ಯಾದಿಗಳೂ ಭಕ್ತಿ ಪಂಥವೂ ಇಂಥ ಪ್ರತಿಭಟನೆಯ ದಾಖಲೆಯಾಗಿದೆ. ಭಾರತ ಚರಿತ್ರೆಯ ಮುನ್ನಡೆಯೇ ವೈದಿಕ-ಅವೈದಿಕಗಳ ಮಧ್ಯೆಯ ಸಂಘರ್ಷ (ವರ್ಣಸಂಘರ್ಷ) ಎನ್ನುವಷ್ಟು ಎಂದು ಹೇಳಲಾಗುತ್ತದೆ.

ಆಧುನಿಕ ಕಾಲದಲ್ಲಿ ಕೂಡ ಈ ಸಂಘರ್ಷ ಜ್ಯೋತಿಬಾ ಫುಲೆಯವರಿಂದ ನಡೆದಿದೆ. ಅದರ ಪರಾಕಾಷ್ಠೆ ಡಾ. ಅಂಬೇಡ್ಕರರಲ್ಲಿ ಪ್ರತಿಫಲನವಾಗಿದೆ. ಇಷ್ಟು ನಡೆದಾಗಲೂ ಈಗಲೂ ನಮ್ಮಲ್ಲಿ ಅಸ್ಪೃಶ್ಯತೆ ಅಳಿದಿಲ್ಲ. ಹಾಗೆಯೇ ಅಸ್ಪೃಶ್ಯರ ಸ್ಥಿತಿಯೂ ಅಪೇಕ್ಷಣೆಯವಾಗುವಷ್ಟು ಎತ್ತರಿಸಲ್ಪಟ್ಟಿಲ್ಲ. ಮಧ್ಯೆಯ ರಾಜಕೀಯಕ್ಕೆ ದಲಿತರೇನೂ ಹೊಣೆಗಾರರಲ್ಲ. ಸವರ್ಣೀಯ ರಾಜಕಾರಣ ಕೂಡ ಅವರನ್ನು ಬಲಿಪಶುವನ್ನಾಗಿ ಮಾಡುತ್ತಿದೆ.

- ಆಧುನಿಕ ಕಾಲದ ಪ್ರತಿಭಟನೆಯನ್ನು ಬಿಟ್ಟರೆ, ಅಂದರೆ ಪ್ರಾಚೀನ ಮತ್ತು ಮಧ್ಯಕಾಲೀನದ ಪ್ರತಿಭಟನೆಯೆಲ್ಲ ಧಾರ್ಮಿಕ ಸ್ವರೂಪದ್ದೇ ಆಗಿದೆ. ಆದ್ದರಿಂದ ಅದು ವೈದಿಕ-ಅವೈದಿಕ ಸಂಘರ್ಷವಾಗಿ ಕಂಡಿದೆ. ಇದರಿಂದ ಚರಿತ್ರೆಯ ಮುನ್ನಡೆ ಕೂಡ ನಡೆದಿದೆ. ಆದರೆ ಅದು ಸಮಾಜದಲ್ಲಿ ಮೂಲಭೂತವಾದ ಬದಲಾವಣೆಯನ್ನು ತರಲಿಲ್ಲ. ಅದರ ಬದಲಾಗಿ ಅನಾರೋಗ್ಯಕಾರಕ ಬೆಳವಣಿಗೆಗೆ ಕಾರಣವಾಗಿದೆ. ಯಾವ ಯಾವ ಪ್ರತಿಭಟನೆ ಧಾರ್ಮಿಕವಾಗಿ ಕಂಡು ಬಂದಿದೆಯೋ ಅವೆಲ್ಲ ಒಂದೊಂದು ಜಾತಿಯಾಗಿ ಮಾರ್ಪಟ್ಟಿದೆ. ಬಸವಣ್ಣನವರ ಚಳವಳಿ ಆ ಕಾಲದ ಚಾರಿತ್ರಕ ನಡೆಯಲ್ಲಿ ಕ್ರಾಂತಿಯಲ್ಲದೆ ಬೇರಲ್ಲ. ಆದರೆ ಇಂದು ಅವರು ಸ್ಥಾಪಿಸಿದ ಧರ್ಮ ವೈದಿಕಕ್ಕಿಂತ ಹೆಚ್ಚು ಜಡ್ಡುಗಟ್ಟಿ ಜಾತಿ, ಅಸ್ಪೃಶ್ಯತೆ, ಸ್ತ್ರೀಶೋಷಣೆ ಮುಂತಾದ ಎಲ್ಲದಕ್ಕೂ ಆಶ್ರಯವಾಗಿದೆ. ಇತರದ್ದೂ ಹಾಗೇ. ಅದರಂತೆ 'ಬ್ರಾಹ್ಮಣ' ಎಂದೊಡನೆ ದಲಿತವಿರೋಧಿ, ಶೂದ್ರ ವಿರೋಧಿ ಎಂದೇ ಕಾಣಲಾಗುತ್ತದೆ. ಇದರ ಹಿಂದೆ ನಮಗೆ ಬಸವಣ್ಣ ಬ್ರಾಹ್ಮಣರಾಗಿದ್ದರು. ಈಶ್ವರಚಂದ್ರ ವಿದ್ಯಾಸಾಗರರಂಥ ಸಮಾಜ ಸುಧಾರಣಾವಾದಿಗಳು ಬ್ರಾಹ್ಮಣರಾಗಿದ್ದರು. ಗಾಂಧಿ ವೈಶ್ಯರಾಗಿದ್ದರು. ಎಂಬುದು ಮರೆತು ಹೋಗುತ್ತದೆ. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಅನೇಕರು ಬ್ರಾಹ್ಮಣರು ಅಸ್ಪೃಶ್ಯತಾ ನಿವಾರಣಾ ಆಂದೋಲನದಲ್ಲಿ ಭಾಗವಹಿಸಿದ್ದರೆಂಬುದು ಮರೆತು ಹೋಗುತ್ತದೆ. ೬೦ ವರ್ಷಗಳ ಮೊದಲೇ "ಚೋಮನದುಡಿ"ಯಂಥಾ ಒಂದು ಕಾದಂಬರಿ ಬಂದಿರುವುದು ಮರೆಯುತ್ತದೆ. ಹಾಗೆಯೇ ಶೂದ್ರನೊಬ್ಬ ಬ್ರಾಹ್ಮಣ್ಯದ ಬಗ್ಗೆ ಮಾತೆತ್ತಿದರೆ ಸಾಕು, ಆತ ಅಥವಾ ಅವಳು ಜಾತಿವಾದಿ ಅಥವಾ ಬ್ರಾಹ್ಮಣ ವಿರೋಧಿಗಳಾಗಿ ಕಾಣುತ್ತಾರೆ. ಈ ಫಲಿತಾಂಶ ಇಂದು ನಮ್ಮ ಸಮಾಜದ ಮುನ್ನಡೆಗೆ ಅಡ್ಡಿಯಾಗಿದೆ. ಇದನ್ನು ಹೋಗಲಾಡಿಸುವದು ಹೇಗೆ?

ಮಹಿಳೆ ದಲಿತಳೇ?

ಮಹಿಳೆ ಕೂಡ ದಲಿತ-ಅಸ್ಪೃಶ್ಯ-ಳೇ ಎಂದು ಹೇಳಲಾಗುತ್ತದೆ. ಯಾಕೆಂದರೆ ಪುರುಷ ಯಾಜಮಾನ್ಯ ಅವರನ್ನು ಎಲ್ಲಾ ಕಾಲದಲ್ಲೂ ಆಳಿದೆ. ಅವರ ವ್ಯಕ್ತಿತ್ವವನ್ನು ಹೀನಾಯಮಾನ ಗೊಳಿಸಲಾಗಿದೆ. ಚರಿತ್ರೆಯಲ್ಲಿ ಅವರು ನೀರು-ಬೆಂಕಿಯನ್ನು ಹಾದು ಬಂದವರಾಗಿದ್ದಾರೆ. ಅವರ ಮೇಲೆ ಧಾರ್ಮಿಕ ನಿಯಮವನ್ನು ಅನ್ಯಾಯವಾಗಿ ಹೇರಿ ಅವರ ವ್ಯಕ್ತಿತ್ವವನ್ನು

ಕುಬ್ಜಗೊಳಿಸಲಾಗಿದೆ. ಅವರ ಮನೋಭಾವನ್ನೇ ತಿದ್ದಲಾಗಿದೆ. ಇಂದಿಗೂ ಎರಡನೇ ದರ್ಜೆ ಪ್ರಜೆಯಂತೆ ನೋಡಲಾಗುತ್ತದೆ. ಆದರೆ ಮೇಲ್ಜಾತಿಯಲ್ಲೂ ಹೀಗೇ ಆಗುತ್ತದೆಯೇ? ಹೌದು ಎನ್ನುತ್ತದೆ ಒಂದು ಪರಿಕಲ್ಪನೆ. ಅದೇನೇ ಇದ್ದರೂ ಅತಿ ಕೆಳಜಾತಿಯಲ್ಲೂ ಮಹಿಳೆ ಅಲ್ಲಿಯ ಪುರುಷರಿಂದ ಶೋಷಿತಳೇ ಆಗಿದ್ದಾಳೆ. ಆದ್ದರಿಂದ ಮಹಿಳೆ ಯಾವ ಜಾತಿಯವಳಾಗಿದ್ದಿರಲಿ ಯಾವ ಧರ್ಮದವಳಾಗಿರಲಿ ಅವಳು ಅಸ್ಪೃಶ್ಯಳೇ. ಬ್ರಾಹ್ಮಣ ಮಹಿಳೆ ಕೂಡ ಹೀಗೇ. ವೈದೇಹಿಯವರ 'ಅಸ್ಪೃಶ್ಯರು' ಕಾದಂಬರಿಯ ಆತ್ಮ ಇದಾಗಿದೆ. ಆದರೆ ಇಂಥಲ್ಲಿ ಒಂದು ಮಾತನ್ನು ನೆನೆಸಿಕೊಳ್ಳಬಹುದು. "ಹಿಂದೊಮ್ಮೆ ದ್ವಾರಕಾಪೀಠದ ಶಂಕರಾಚಾರ್ಯರು ಪುಣೆಯಲ್ಲಿ ಭಾಷಣ ಮಾಡುತ್ತಿದ್ದರು, ಅಸ್ಪೃಶ್ಯತೆಯನ್ನು ಸಮರ್ಥಿಸಿ. ದೂರವಿಟ್ಟ ಮಾತ್ರಕ್ಕೆ ಅವರು ಕೀಳೆಂದು ಅರ್ಥವಲ್ಲ. ಬ್ರಾಹ್ಮಣರ ಮನೆಯಲ್ಲಿಯೂ ಮುಟ್ಟಾದ ಹೆಂಗುಸಿಗೆ ಮುಟ್ಟಿನ ನಾಲ್ಕು ದಿನ ದೂರ ಇಡುವುದಿಲ್ಲವೇ?" ಅಂದರು.

ಆಗ ಆ ಸಭೆಯಲ್ಲಿ ಆಂದು ತರುಣರಾದ ಎಸ್.ಎಂ. ಜೋಶಿ ಕೂತಿದ್ದರು. ಅವರು ಎದ್ದುನಿಂತು ಕೂಗಿದರು. ಆದರೆ ಸ್ವಾಮೀಜಿ ಆ ಹೆಂಗುಸಿಗೆ ಐದನೇ ದಿನವೊಂದು ಬರುತ್ತದೆ? ಈ ಅಂತ್ಯಜರ ಭಾಗ್ಯಕ್ಕೆ ಆದಿನ ಬರುವುದು ಯಾವಾಗ? ಶಂಕರಾಚಾರ್ಯರು ಮಂಕಾದರು ಆದಿನ ಇಂದಿಗೂ ದೂರವೇ ಇದೆ" (ಗೌರೀಶ ಕಾಯ್ಕಿಣಿ ಸಮಗ್ರ ಸಂಪುಟ ೮,೧೯೯೯: ೨೨೬) ಎಂದು ಗೌರೀಶ ಕಾಯ್ಕಿಣಿಯವರು ಎನ್ನುತ್ತಾರೆ. ಅಂದರೆ ಇಂದಿಗೂ ದಲಿತರೆಂದರೆ ಅಸ್ಪೃಶ್ಯರೆಂದೇ ಆಯಿತು. ಸವರ್ಣೆಯ ಮಹಿಳೆಗೆ ಅಸ್ಪೃಶ್ಯಮಹಿಳೆ ಅಸ್ಪೃಶ್ಯ. ಯಾಕೆಂದರೆ ಅವರು ಅತ್ಯಂತ ಹೆಚ್ಚು ಶೋಷಿತರು. ಆದರೆ ಈಗ ದಲಿತರಲ್ಲೂ ವರ್ಗವಿಭಜನೆ ಆಗುತ್ತಿದೆ. ಹೊಸ ಉಪಕ್ರಮದಿಂದ ಅವರಲ್ಲಿ ಕಡಿಮೆ ಸಂಖ್ಯೆಯಲ್ಲಾದರೂ ಮಧ್ಯಮ ವರ್ಗಕ್ಕೆ ಏರುತ್ತಿದ್ದಾರೆ. ಅದು ಶುಭ ಸೂಚನೆಯೇನೂ ಹೌದು. ಆದರೆ ಅದು ಪೂರ್ತಿಯಾಗಿಲ್ಲ.

ಹಾಗಾದರೆ ಶೋಷಣೆ ಎಂಬುದು ದಲಿತ-ಅಸ್ಪೃಶ್ಯ-ರಿಗೆ ಮಾತ್ರ ಸೀಮಿತವಾದುದೇ ಎಂದರೆ ಹಾಗಿಲ್ಲ. ಶೋಷಣೆ ಎಲ್ಲೆಲ್ಲೂ ಉಂಟು. ಶೋಷಿತ ಎಂಬ ಪದಕ್ಕೆ 'ದಲಿತ'ಎಂಬ ಪರಿಕಲ್ಪನೆ ಕೂಡಾ ಉಂಟು. ಇದು ಮಾರ್ಕ್ಸವಾದಿ ಪರಿಕಲ್ಪನೆ. ಈ ಪರಿಕಲ್ಪನೆ ದೊಡ್ಡ ಕೈಗಾರಿಕಾ ಸಂದರ್ಭದಲ್ಲಿ ಬೆಳೆದು ಬಂದುದಾಗಿದೆ. ಹಾಗೆಯೇ ಅದು ವರ್ಗ (ಕ್ಲಾಸ್) ಸಂಬಂಧದಲ್ಲಿ ಬೆಳೆದಿದೆ. ಹಾಗಂತ ಭಾರತದ ಸಂದರ್ಭದಲ್ಲಿ ಅದು ನಿಷ್ಪ್ರಯೋಜಕ ಎಂದಲ್ಲ. ಕೆಲವರು ಹಾಗೆ ಪ್ರತಿವಾದಿಸುತ್ತಾರೆ. ಆಳುವ ವರ್ಗಕ್ಕೆ ಜಾತಿಯಲ್ಲಿ ಒಡೆದು ಹೋದ ದುರ್ಬಲ ಸಮಾಜವನ್ನು ಆಳುವುದು ಸುಲಭ. ವರ್ಗ ಸಂಘರ್ಷ ಬಲವಾಗುತ್ತ ಬಂದಂತೆ ಆಳುವವರ ನೆಲೆ ನಡುಗತೊಡಗುತ್ತದೆ. ಮಧ್ಯಮ ಮತ್ತು ಮೇಲು ವರ್ಗದವರು ಈ ಪರಿವರ್ತನೆಯನ್ನು ಯಾವಾಗಲೂ ವಿರೋಧಿಸುತ್ತಾರೆ. ತಮ್ಮ ಸ್ಥಾನ ಕಳೆದು ಹೋಗಬಹುದೆಂದು ಅವರು ಭಯಪಡುತ್ತಾರೆ.

ವರ್ಗ ಎಂಬ ಪರಿಕಲ್ಪನೆ ಆರ್ಥಿಕ ಹಿನ್ನೆಲೆಯುಳ್ಳದ್ದು. ಪಶ್ಚಿಮದಲ್ಲಿ ಅಂಥ ಸಮಾಜವಿದೆ. ಅಲ್ಲಿ ನಮ್ಮ ಪಾರಂಪರಿಕ ಕಲ್ಪನೆಯ ಪ್ರಕಾರದ ಬ್ರಾಹ್ಮಣರಿಂದ ಹಿಡಿದು ಅಸ್ಪೃಶ್ಯರ ತನಕ

ಸಮಾನ ಆರ್ಥಿಕ ಸ್ಥಿತಿಯವರು ಒಂದು ವರ್ಗವಾಗಿ ಬೆಸೆಯಲು ಅವಕಾಶವಿದೆ ಮತ್ತು ಆಗ ಬೇಕಾದುದೇ ಹಾಗೆ. ಆದರೆ ನಮ್ಮಲ್ಲಿ ಉದ್ಯೋಗದಿಂದಲೇ ಜಾತಿ. ಉದ್ಯೋಗ ಬದಲಾವಣೆಯಲ್ಲ. ಯಂತ್ರಕೈಗಾರಿಕೆಯಲ್ಲಿ ಪರಿವರ್ತನೆ ಸಾಧ್ಯವೆಂದು ಗ್ರಹಿಸಲಾಗಿತ್ತು. ಆದರೆ ಅದು ಪೂರ್ತಿಸಾಧ್ಯವಾಗಲಿಲ್ಲ. ಅಂದರೆ ನಮ್ಮ ಕೂಲಿಕಾರರೂ ಕಾರ್ಖಾನೆಯ ಕಾರ್ಮಿಕರೂ ಕೂಡ ಜಾತಿಯನ್ನು ಮನೆಯೊಳಗೆ ತಪ್ಪದೇ ಪರಿಪಾಲಿಸುತ್ತಾರೆ. ಅವರಿಗೂ ಅಸ್ಪೃಶ್ಯ ಇನ್ನೂ ಸ್ಪೃಶ್ಯ ಆಗಲಿಲ್ಲ. ಶೂದ್ರದಲ್ಲಿ ಪ್ರತಿ ಮೇಲಿನ ಜಾತಿ ಕೆಳಜಾತಿಯನ್ನು ಕೀಳಾಗಿ ಕಾಣುತ್ತದೆ. ಕೆಲವೊಂದು ಶೂದ್ರಜಾತಿ ಈಗ ಜನ್ನಾವರ ಹಾಕಿಕೊಂಡು 'ಬ್ರಾಹ್ಮಣ'ವಾಗುವ ಭರಬರಾಟೆಯಲ್ಲಿದ್ದಾರೆ. ಅವರು ಅವರ ಜಾತಿಗೆ ಪುರೋಹಿತರಾಗುತ್ತಾರೆ. ಮತ್ತೊಂದು ಜಾತಿಯಾಗುತ್ತದೆ. ಜಾತಿ ಭದ್ರವಾಗುತ್ತಲೇ ಹೋಗುತ್ತದೆ.

ಹಿಂದೆ ನಡೆದ ಅವೈದಿಕ ಚಳವಳಿಯ ಹಿಂದೆ ಇದ್ದದ್ದೂ ಆರ್ಥಿಕ ಕಾರಣವೇ. ಅದು ಸಾಂಸ್ಕೃತಿಕ-ಧಾರ್ಮಿಕವಾಗಿ ಸ್ಫೋಟಗೊಂಡಿದೆ. ಅದು ಮುಂದೆ ಅವೈಜ್ಞಾನಿಕ ದಾರಿ ಹಿಡಿಯಿತು. ಬೌದ್ಧ, ಜೈನ ಮೊದಲಾದವು ತಮ್ಮದೇ ಆದ ತತ್ವಜ್ಞಾನ ನೀಡಿವೆ. ದೇವಿಪ್ರಸಾದ ಚಟ್ಟೋಪಾಧ್ಯಾಯರಂಥ(ಅವರು ಬ್ರಾಹ್ಮಣರೆ)ವರು ಲೋಕಾಯುತ ದಂಥ ಸ್ವತಂತ್ರ ತತ್ವಜ್ಞಾನವನ್ನೇ ಸಂಪಾದಿಸಿ ಕೊಟ್ಟಿದ್ದಾರೆ. ಇನ್ನು ಜನಪದದಲ್ಲೂ ಶಾಕ್ತ, ಸಿದ್ಧ, ನಾಥ, ಸೂಫಿ ಮೊದಲಾದವುಗಳಿಂದ ಸಂಗ್ರಹವಾಗ ಬೇಕಾದದ್ದಿದೆ. ಮುಖ್ಯವಾಗಿ ಇಲ್ಲಿ ನಾನು ಹೇಳ ಬಯಸುವುದೇನೆಂದರೆ ಜಾತಿರಹಿತವಾದ, ಧರ್ಮರಹಿತವಾದ ಒಂದು ತತ್ವಜ್ಞಾನ ಮುಂದಿನ ಸಂಘರ್ಷಕ್ಕೆ ಬೆಳಕು ತೋರಬೇಕಾಗಿದೆ. ಆದರ ಹಿಂದಿನ ಪ್ರೇರಕ ಶಕ್ತಿಯಾಗಬೇಕೆಂಬುದು ವರ್ಗಸಂಘರ್ಷ (ಕ್ಲಾಸ್‌ಸ್ಟ್ರಗಲ್)ವೇ ಆಗಬೇಕಾಗಿದೆ. 'ಶೋಷಿತರೆ ಒಗ್ಗಟ್ಟಾಗಿ ನೀವು ಕಳಕೊಳ್ಳುವುದೇನಿಲ್ಲ. ಹೆಚ್ಚೆಂದರೆ ನಿಮ್ಮ ಕೈಗೆ ಹಾಕಿದ ಕೋಳವನ್ನು ಮಾತ್ರ' ಎಂಬ ಮಾರ್ಕ್ಸ್‌ವಾದಿ ಮಾತಿನಲ್ಲಿ ಎಲ್ಲಾ ಕಾರ್ಮಿಕರ, ಶೋಷಿತರ ಒಗ್ಗಟ್ಟಿನ ಮಹತ್ವ ಅಡಗಿದೆ. ಕೇವಲ ಕಾರ್ಮಿಕರು ಎಂದಲ್ಲ. ಎಲ್ಲ ಶೋಷಿತರ ಪರವಾದ ಮಾತು ಇದು. ಆದ್ದರಿಂದ ಬ್ರಾಹ್ಮಣರಿಂದ ಹಿಡಿದು ಅಸ್ಪೃಶ್ಯರವರೆಗಿನ ಹಾಗೂ ಮುಸ್ಲಿಂ, ಕ್ರಿಶ್ಚನ್‌ದೊಳಗಿನ ಎಲ್ಲ ಶೋಷಿತರೂ ಒಂದಾಗಿ ಬೆಸೆದು ಒಂದು ವರ್ಗವಾಗಿ ಮಾರ್ಪಟ್ಟು ವರ್ಗಸಂಘರ್ಷಕ್ಕೆ ಅಣಿಯಾಗಬೇಕು. ಹೀಗಾದಾಗಲೂ ಬ್ರಾಹ್ಮಣರಿಂದ ಐದು ಪ್ರತಿಶತ ಒಳಗೊಂಡರೆ ದಲಿತರಿಂದ ತೊಬತ್ತೈದು ಒಳಗೊಳ್ಳಬೇಕಾದ ವಾಸ್ತವತೆ ನಮ್ಮದು. ವರ್ಗಸಂಘರ್ಷ ಎಂದೊಡನೆ ಕತ್ತಿ ಝಳಪಿಸುವುದೆಂದೇ ಅಲ್ಲ. ಹಾಗೆ ನಮ್ಮ ಪಟ್ಟಭದ್ರ ಹಿತಾಸಕ್ತರು ಪ್ರಚಾರ ಮಾಡುತ್ತಾರೆ. ಸಂಘರ್ಷದ ಸ್ವರೂಪವನ್ನು ಆಯಾ ಕಾಲದ ಭೌತಿಕ ಸಂದರ್ಭ ನಿಶ್ಚಯಿಸುತ್ತದೆ. ಈಗ ಕಾರ್ಮಿಕರೆಂದರೆ ಕೇವಲ ಅಕುಶಲ ಕೆಲಸಗಾರರು ಮಾತ್ರ ಒಂದಾಗಬೇಕೆಂದಲ್ಲ. ಈ ಯಂತ್ರ ನಾಗರಿಕತೆಯಲ್ಲಿ ವೈಟ್‌ಕಾಲರಿನ ಉದ್ಯೋಗಳೂ ಕಾರ್ಮಿಕರೇ ಆಗಿರುತ್ತಾರೆ. ಸರಕಾರಿ ಮತ್ತಿತರ ಕಚೇರಿಯ ನೌಕರರೆಲ್ಲರೂ ಈ ಕಾಲದ ಶೂದ್ರರು ಎಂದು ಹಿರಿಯ ವಿಚಾರವಾದಿ ಡಾ. ಗೌರೀಶ ಕಾಯ್ಕಿಣಿ ಹೇಳುತ್ತಾರೆ.

ಸಾಹಿತ್ಯ ಮತ್ತು ಸಂಘರ್ಷ

೯೦ಥ ಒಂದು ಜಾತಿರಹಿತ ವರ್ಗರಹಿತ ಸಮಾಜ ಪುನರ್ರ್ ಸಂಘಟನೆ ನಡೆಯಬೇಕಾದುದು ನಮ್ಮ ವರ್ತಮಾನಕ್ಕೆ ಅವಶ್ಯವಾಗಿದೆ. ಸಾಹಿತ್ಯ ತನ್ನಿಂದ ತಾನೇ ಮುನ್ನಡೆಯಲಾರದು. ಆದರೆ ಅದು ಅಂಥ ಚಾರಿತ್ರಿಕ ವಾಸ್ತವವನ್ನು ತೆಗೆದು ತೋರಬಲ್ಲದು. ಮನುಷ್ಯ ಹೃದಯವನ್ನೂ, ಆಲೋಚನೆಯನ್ನು ಮಾನವೀಯ ಗೊಳಿಸಬಲ್ಲುದು, ವಿಸ್ತರಿಸಬಲ್ಲದು. ಅದು ಕ್ರಾಂತಮನಸ್ಸನ್ನು ತೆರೆಸಬಲ್ಲದು. ಹಾಗೆಯೇ ಪ್ರತಿಕ್ರಿಯೆಯನ್ನು ಶಿಥಿಲಗೊಳಿಸಬಲ್ಲದು.

ಸಾಹಿತ್ಯಕ್ಕೆ ಒಂದು ಕಲಾತ್ಮಕ ಭಾಷೆ ಇದೆ. ಅದು ಬಂಡಾಯದ ಸಂದರ್ಭದಲ್ಲಿ ಕೆಲಮಟ್ಟಿಗೆ ನಿರ್ಲಕ್ಷ್ಯಕ್ಕೆ ಒಳಗಾಗಿರಬಹುದು. ಆದರೆ ಈಗ ದಲಿತ ಬಂಡಾಯ ಸಂಘಟನೆಗಿಂತಲೂ ಅದು ಸಾಹಿತ್ಯ ಕೇಂದ್ರದಲ್ಲಿ ತಂದಿರಿಸಿದ ಸಾಮಾಜಿಕತೆಯ ಹೆಚ್ಚುಗಾರಿಕೆ ಮುಂದುವರಿಯುತ್ತಲಿದೆ. ಮತ್ತು ಮುಂದುವರಿಯಬೇಕು. ಆದಕ್ಕೇಂತಲೇ ನಾನು ಹೇಳುವದು ಸಾಮಾಜಿಕ ಪರಿವರ್ತನೆಯ ವೈಚಾರಿಕತೆಯ ಹಿನ್ನೆಲೆಯಲ್ಲಿದ್ದ ಕಲಾತ್ಮಕತೆ ಮುನ್ನೆಲೆಯಲ್ಲಿದ್ದು ಕೇಂದ್ರದಲ್ಲಿ ಶೋಷಿತರ ಅಂದರೆ ದಲಿತರ, ದುಃಖಾರ್ತರ ಅಪಮಾನಿತರ, ಮಾನವೀಯಕ್ಕೆ ತೆತ್ತುಕೊಂಡವರ, ಮಹಿಳೆಯರ ಮತ್ತು ಪರಿವರ್ತನೆಗಾಗಿ ಹಾತೊರೆಯುವವರ ಧ್ವನಿಯಿರಬೇಕು; ಪಿಸುನುಡಿಯಿರಬೇಕು.

*

ಡಾ. ಬಿ.ಆರ್. ಅಂಬೇಡ್ಕರರ ಚಿಂತನೆಯ ಹಿನ್ನೆಲೆ ಮತ್ತು ಮುನ್ನೆಲೆ

ಭಾರತದ ಸ್ವಾತಂತ್ರ್ಯ ಆಂದೋಲನ ಒಂದು ಬಿರುಸಾದ ಸುಳಿಗಾಳಿಯಂತಿತ್ತು. ಅದರ ಕೇಂದ್ರದಲ್ಲಿದ್ದವರು ಮಹಾತ್ಮಗಾಂಧಿ. ಯಾರು ಈ ಸುಳಿಗಾಳಿಯ ಬಿರುಗಾಳಿಯ ವಿರುದ್ಧ ಬೀಸಲು ಹವಣಿಸುತ್ತಿದ್ದರೋ ಅವರು ತರಗೆಲೆಯಂತೆ ಹಾರಿಹೋಗುತ್ತಿದ್ದರು. ಆದರೇ ಇದನ್ನು ಕಂಡೂ ಕಂಡೂ ಈ ವೃತ್ತದ ವಿರುದ್ಧ ನಿಂತು ಭೀಮ ಬಲದಿಂದ ಮತ್ತೊಂದು ಸುಳಿಗಾಳಿ ಬಿರುಗಾಳಿಯಾಗಿ ಬೀಸಿತು. ಇದರ ಕೇಂದ್ರದಲ್ಲಿ ಡಾ.ಬಿ. ಆರ್ ಅಂಬೇಡ್ಕರ ಇದ್ದರು. ಮೊದಲನೆಯವರ ಪಾಲಿಗೆ ಸ್ವಾತಂತ್ರ್ಯ ಹೋರಾಟದ ನೇತಾರ ಎಂದು ಬಿರುದು ಬಂದರೆ ಎರಡನೆಯವರ ಪಾಲಿಗೆ ಬ್ರಿಟಿಷ್ ಸರಕಾರದ ಏಜೆಂಟ್ ಎಂಬ ಬಯ್ಗುಳ ಬಂದೆರಗಿತು! ಆದರೆ ಇದು ಎಷ್ಟರ ಮಟ್ಟಿಗೆ ನಿಜ?

ದುಂಡು ಮೇಜಿನ ಪರಿಷತ್ತಿನಲ್ಲಿ ಡಾ. ಅಂಬೇಡ್ಕರ್ ಹೀಗೆ ಹೇಳಿದರು, 'ನನ್ನ ದೃಷ್ಟಿಕೋನವನ್ನು ಸಂಕ್ಷಿಪ್ತವಾಗಿ ವಿವರಿಸುತ್ತೇನೆ. ಜನರ, ಜನರಿಂದ ಮತ್ತು ಜನರಿಗಾಗಿ ಇರುವ ಸರಕಾರವೊಂದು ಭಾರತದಲ್ಲಿ ಅಧಿಕಾರಿಶಾಹಿ ಮಾದರಿಯ ಸರಕಾರದ ಸ್ಥಾನದಲ್ಲಿ ಬರಬೇಕು. ದಮನಿತ ವರ್ಗಗಳ ಈ ಹೇಳಿಕೆ ಕೆಲವು ವರ್ಗಗಳಲ್ಲಿ ಆಶ್ಚರ್ಯ ಹುಟ್ಟಿಸಬಹುದು. ಇಂದಿನ ಸ್ಥಿತಿಯನ್ನು ಬ್ರಿಟಿಷ್ ಪೂರ್ವದ ಭಾರತಕ್ಕೆ ಹೋಲಿಸಿಕೊಂಡರೆ ನಾವು ಮುಂದುವರಿಯುವ ಬದಲು ಕೇವಲ ಸಮಯ ತಳ್ಳುತ್ತಿರುವಂತೆ ತೋರುತ್ತದೆ. ಬ್ರಿಟಿಷ್‌ರಿಗಿಂತ ಮೊದಲು ನಾವು ನಮ್ಮ ಅಸ್ಪೃಶ್ಯತೆಯಿಂದಾಗಿ ಅಸಹ್ಯ ವ್ಯವಸ್ಥೆಯಲ್ಲಿದ್ದೆವು. ಆದರೆ ಬ್ರಿಟಿಷ್ ಸರಕಾರ ಅದನ್ನು ತೊಡೆದು ಹಾಕಲು ಏನನ್ನಾದರೂ ಮಾಡಿತೇ? ಬ್ರಿಟಿಷರು ಬರುವ ಪೂರ್ವದಲ್ಲಿ ನಮಗೆ ಊರಲ್ಲಿ ನೀರು ದೊರಕುತ್ತಿರಲಿಲ್ಲ. ಸೈನ್ಯದಲ್ಲಿ ಸೇವೆ ಮಾಡುವ ಅವಕಾಶವಿರಲಿಲ್ಲ. ಬ್ರಿಟಿಷ್ ಸರಕಾರ ನಮಗೆ ಅದನ್ನು ಒದಗಿಸಿಕೊಟ್ಟಿತೆ? ನಮ್ಮ ಮಟ್ಟಿಗೆ ಹೇಳುವುದಾದರೆ ಬ್ರಿಟಿಷ್ ಸರಕಾರ ನಮ್ಮ ಸಾಮಾಜಿಕ ವ್ಯವಸ್ಥೆ ಹೇಗಿದೆಯೋ ಅದನ್ನು ಹಾಗೇ ಸ್ವೀಕರಿಸಿದೆ. ಅಷ್ಟು ಮಾತ್ರವಲ್ಲ ಅದನ್ನು ಜೋಪಾನವಾಗಿರಿಸಿದೆ. ವಿಧೇಯತೆಯು ಎಲ್ಲಿ ಕೊನೆಗೊಂಡು ಎಲ್ಲಿ ಪ್ರಾರಂಭವಾಗುತ್ತಿದೆ ಎಂದು ಅರಿತಿರುವ, ತ್ವರಿತವಾಗಿ ನ್ಯಾಯದ ಅಧಿಕಾರವನ್ನು ಸ್ಥಾಪಿಸಲು ಸಾಮಾಜಿಕ ಮತ್ತು ಆರ್ಥಿಕ ಕಟ್ಟಳೆಗಳನ್ನು ಬದಲಾಯಿಸಲು ಹೆದರದ ಜನರು ಅಧಿಕಾರದಲ್ಲಿರುವಂತಹ ಒಂದು ಸರಕಾರವನ್ನು ನಾವು ಹೊಂದಬೇಕು. ಇಂತಹ ಪಾತ್ರವನ್ನು

ಮೊದಲ ಪ್ರಕಟನೆ: 'ಜನದನಿ' ೬ ಮೇ ೧೯೯೮

ಬ್ರಿಟಿಷ್ ಸರಕಾರ ಎಂದಿಗೂ ನಿರ್ವಹಿಸಲು ಸಾಧ್ಯವಾಗದು. ಇದನ್ನು ನಿರ್ವಹಿಸಲು ಜನರ, ಜನರಿಂದ ಮತ್ತು ಜನರಿಗಾಗಿ ಇರುವ ಸರಕಾರದಿಂದ ಮಾತ್ರ ಸಾಧ್ಯ."

ಇಂಥ ಮುನ್ನೋಟವುಳ್ಳ ಹೋರಾಟಗಾರರನ್ನು ಬ್ರಿಟಿಷ್ ಏಜೆಂಟ್ ಎನ್ನುವುದಾದರೂ ಹೇಗೆ? ಡಾ. ಅಂಬೇಡ್ಕರರ ಕೆಚ್ಚು ರೊಚ್ಚು, ಕಾಣ್ಕೆಯನ್ನು ತಿಳಿದುಕೊಳ್ಳಬೇಕೆಂದಾದರೆ ಅವರ ಜೀವನ-ಕಾರ್ಯವನ್ನು ಆ ಚಾರಿತ್ರಿಕ ಹಿನ್ನೆಲೆಯಿಂದಲೇ ತಿಳಿದುಕೊಳ್ಳಬೇಕು.

ಬ್ರಿಟಿಷರು ಮಹಾರಾಷ್ಟ್ರದ ಪೂರ್ತಿಯಾಗಿ ಆಡಳಿತವನ್ನು ತಮ್ಮ ಕೈಗೆ ತೆಗೆದು ಕೊಳ್ಳುವ ಕಾಲಕ್ಕೆ ಅಲ್ಲಿ ಪೇಶ್ವೆಯರ ಆಡಳಿತವಿತ್ತು. ಪೇಶ್ವೆಯರ ಆಡಳಿತವೆಂದರೆ ಅದೊಂದು ಬ್ರಾಹ್ಮಣ್ಯದ ಅತ್ಯಂತ ಕ್ರೌರ್ಯದ ಆಡಳಿತವಾಗಿತ್ತು. ಅಲ್ಲಿಯ ಶೂದ್ರರು ಹೀನಾಯಾ ಸ್ಥಿತಿಯಲ್ಲಿರುವುದಾದರೂ ಅದರ ಅತ್ಯಂತ ಹೀನಾಯಮಾನವಾದ ದೌರ್ಜನ್ಯಕ್ಕೆ ತುತ್ತಾದವರು ಅಸ್ಪೃಶ್ಯರು. ಆ ಕಾಲದಲ್ಲಿ ಪುಣೆಯ ಬೀದಿಯ ಮೇಲೆ ಅಸ್ಪೃಶ್ಯರು ನಡೆದಾಡುವುದಾದರೆ ಅವರು ತಮ್ಮ ಕೊರಳಿಗೆ ಒಂದು ಕುಡುಕೆಯನ್ನು ಕಟ್ಟಿಕೊಳ್ಳಬೇಕಿತ್ತು. ಯಾಕೆಂದರೆ ಮೇಲು ಜಾತಿಯವರು ನಡೆದಾಡುವ ದಾರಿಯಲ್ಲಿ ಅವರು ಉಗುಳುವಂತಿಲ್ಲ! ಬ್ರಿಟಿಷರು ಆಡಳಿತ ವಹಿಸಿಕೊಂಡ ಮೇಲೆ ಮೊದಲ ಬಾರಿಗೆ ದಲಿತರಿಗೆ ಶಾಲೆಯ ಪ್ರವೇಶ ಮುಕ್ತವಾಯಿತು. ಪೊಲೀಸ್ ಪಡೆ, ಸೈನ್ಯ ಮತ್ತಿತರ ಕೈಗಾರಿಕೆಯಲ್ಲಿ ಉದ್ಯೋಗದ ಅವಕಾಶ ಸಿಕ್ಕಿತ್ತು! (ಮುಂದೆ ಸೈನ್ಯದಲ್ಲಿ ಮತ್ತೆ ನಿರ್ಬಂಧ ಹೇರಲಾಯಿತು) ಇದರಿಂದ ಅಲ್ಲಿಯೇ ಒಂದು ಸುಸಂಸ್ಕೃತ ವರ್ಗ ತಲೆ ಎತ್ತಿತು. ಅದರ ಉಜ್ವಲ ಪ್ರತಿನಿಧಿಯಾಗಿ ಮಹಾತ್ಮಾ ಜ್ಯೋತಿಭಾ ಫುಲೆ ಮೂಡಿ ಬಂದರು. ಫುಲೆಯವರು ಮಹಾರಾಷ್ಟ್ರದಲ್ಲಿ 'ಸತ್ಯ ಶೋಧಕ' ಚಳವಳಿಯನ್ನು ಪ್ರಾರಂಭಿಸಿದ್ದರು. ಅದು ಬ್ರಾಹ್ಮಣೇತರ ಚಳವಳಿಯಾಗಿ ಮಾರ್ಪಟ್ಟಿತ್ತು. ಡಾ. ಅಂಬೇಡ್ಕರರ ತಂದೆ ರಾಮ್‌ಜಿ ಫುಲೆಯವರ ಅಭಿಮಾನಿಯಾಗಿದ್ದರು.

ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಕಾರ್ಯವನ್ನು ಕಾರ್ಲ್ ಮಾರ್ಕ್ಸ್ ಎರಡು ರೀತಿಯಾಗಿ ಗುರುತಿಸಿದ್ದಾರೆ. "ಒಂದು ವಿನಾಶಕಾರಿ; ಮತ್ತೊಂದು ಪುನರುಜ್ಜೀವನ. ಏಷ್ಯನ್ ಸಮಾಜವನ್ನು ನಾಶಗೊಳಿಸುವುದು ಮತ್ತು ಪಾಶ್ಚಾತ್ಯ ಸಮಾಜದ ಭೌತಿಕ ಬುನಾದಿಯನ್ನು ಹುಟ್ಟುಹಾಕುವುದು." ಭಾರತದಲ್ಲಿ ಹಳೆಯದರ ನಾಶ ಭಾರತೀಯರನ್ನು ಮುಖ್ಯವಾಗಿ ಬ್ರಾಹ್ಮಣ ಮತ್ತು ಬನಿಯಾಗಳನ್ನು ದುಃಖಕ್ಕೀಡು ಮಾಡಿತು. ಇದರ ಪರಿಣಾಮವಾಗಿ ಸ್ವಾತಂತ್ರ್ಯ ಆಂದೋಲನ ಉಂಟಾಯಿತು. ಎರಡನೆಯದಾಗಿ ಪಾಶ್ಚಾತ್ಯ ಭೌತಿಕ ಬುನಾದಿಯಿಂದಾಗಿ ಹೊಸದಾದ ಕಲಿತ ಮಧ್ಯಮ ವರ್ಗವೊಂದು ಮೂಡಿಬಂತು. ಇದು ಬಂಡವಾಳಶಾಹಿಯನ್ನು ಪ್ರತಿನಿಧಿಸುತ್ತಿತ್ತು. ಸ್ವಾತಂತ್ರ್ಯ ಆಂದೋಲನ ಅಖಿಲಭಾರತ ಕಾಂಗ್ರೆಸ್ -ಈ ವರ್ಗದ ಕೈಯಲ್ಲಿತ್ತು. ತಿಲಕರಂಥ ಉಗ್ರಗಾಮಿಗಳೂ ಸಾಂಪ್ರದಾಯವಾದಿಗಳಾಗಿದ್ದರು. ಬ್ರಿಟಿಷ ಸರಕಾರ ಯಾವುದೇ ಸೌಲತ್ತನ್ನು ಶೂದ್ರರಿಗೆ ದಲಿತರಿಗೆ ಕೊಟ್ಟರೆ ಅವರು ಉಗ್ರವಾಗಿ ಪ್ರತಿಭಟಿಸುತ್ತಿದ್ದರು.

ಡಾ. ಅಂಬೇಡ್ಕರ್ ಬರೋಡದ ರಾಜ ಸಯಾಜಿರಾವ್ ಗಾಯಕ್‌ವಾಡ ಮತ್ತು ಕೊಲ್ಹಾಪುರದ ಶಾಹುರಾಜರಿಂದ ವಿದ್ಯಾಭ್ಯಾಸಕ್ಕೆ ಸಹಾಯ ಪಡೆದು ಬೆಳೆದು ಬಂದರು.

ಡಾ. ಅಂಬೇಡ್ಕರ ತಮ್ಮ ವಿದ್ಯಾಭ್ಯಾಸ ಮುಗಿಸಿ ಬರುವ ಹೊತ್ತಿಗೆ ಭಾರತದ ಸ್ವಾತಂತ್ರ್ಯ ಹೋರಾಟದ ನೇತರ ಮಹಾತ್ಮ ಗಾಂಧೀಜಿ ಆಗಿದ್ದರು. ಕಾಂಗ್ರೆಸ್ ಬಂಡವಾಳಶಾಹಿ ಮತ್ತು ಮೇಲು ಜಾತಿಯವರಿಂದಲೇ ತುಂಬಿತ್ತು. ಅವರಿಗೆ ಸ್ವರಾಜ್ಯ ಪ್ರಾಪ್ತಿ ಮುಖ್ಯವಾಗಿತ್ತೇ ಹೊರತು ಸಮಾಜ ಸುಧಾರಣೆ ಆಗಿರಲಿಲ್ಲ. ಗಾಂಧೀಜಿ ಅಸ್ಪೃಶ್ಯತೆಯ ನಿವಾರಣೆಗಾಗಿ ಕಾರ್ಯಕ್ರಮ ಹೊಂದಿದ್ದರೂ ಕೂಡ ಅವರು ಚಾತುರ್ವಣವನ್ನು ಎತ್ತಿ ಹಿಡಿಯುತ್ತಿದ್ದರು. ಆದ್ದರಿಂದ ಡಾ. ಅಂಬೇಡ್ಕರ್

"ಒಂದು ವರ್ಗವು ವಿದ್ಯೆಯನ್ನು ಕಲಿಯಲಿ, ಒಂದು ವರ್ಗ ಶಸ್ತ್ರ ಹಿಡಿಯಲಿ, ಒಂದು ವರ್ಗ ವ್ಯಾಪಾರ ಮಾಡಲಿ, ಉಳಿದೊಂದು ವರ್ಗ ಬರಿಯ ಸೇವೆಯನ್ನು ಮಾಡಿಕೊಂಡಿರಲಿ ಎಂಬ ಧರ್ಮ ನನಗೆ ಒಪ್ಪಿಗೆಯಾಗದು. ಒಂದು ವರ್ಗಕ್ಕೆ (ಶೂದ್ರ) ವಿದ್ಯೆಯನ್ನೂ, ಸಂಪತ್ತಿನಗಳಿಕೆಯ ಹಕ್ಕನ್ನೂ ಶಸ್ತ್ರವನ್ನೂ ನಿರ್ಬಂಧಿಸುವ ಧರ್ಮ ಧರ್ಮವಲ್ಲ ಅದೊಂದು ಹುಚ್ಚು" ಎಂದು ಆರ್ಭಟಿಸಿದರು. ಅವರು ಹಿಂದೂ ಧರ್ಮದ ವಿರೋಧಿಯಾಗಿರಲಿಲ್ಲ. 'ನಾನು ಹಿಂದೂ ಧರ್ಮದಲ್ಲಿ ಹುಟ್ಟಿದ್ದೇನೆ ಆದರೆ ಹಿಂದೂ ಆಗಿ ಸಾಯಲಾರೆ', ಎಂದು ಹೇಳಿದ್ದರೂ ಕೂಡ ಹಿಂದೂ ಧರ್ಮ ಬದಲಾವಣೆ ಆದೀತು ಎಂದು ಸುಮಾರು ಮೂವತ್ತು ವರ್ಷಗಳ ಕಾಲ ಕಾದರು. ನಂತರ ನಿರಾಶೆಯಿಂದ ಅವರು ಬೌದ್ಧಧರ್ಮಕ್ಕೆ ಮತಾಂತರವಾದರು. ಅವರು ಹಿಂದೂಧರ್ಮವನ್ನು ಸಮಾನತೆಯ ತಳಹದಿಯ ಮೇಲೆ ಪುನರ್ ಸಂಘಟಿಸಲು ಬಯಸಿದ್ದರು. ಜಾತಿ ವರ್ಣಗಳ ಕುರಿತು ಇರುವ ತಾರತಮ್ಯಭಾವವನ್ನು ಮುರಿಯಲು ಬಯಸಿದ್ದರು. ಆ ಕಾರಣಕ್ಕಾಗೇ ಅವರು ಮಹಾಡದ ಸಾರ್ವಜನಿಕ ಕೆರೆಯಿಂದ ಅಸ್ಪೃಶ್ಯರು ನೀರನ್ನು ತಾವೇ ತೆಗೆದು ಕುಡಿಯುವ, ನಾಸಿಕ ದೇವಸ್ಥಾನ ಪ್ರವೇಶದ, ಮನುಧರ್ಮ ಶಾಸ್ತ್ರವನ್ನು ಸುಡುವ ಸತ್ಯಾಗ್ರಹವನ್ನು ಮಾಡಿದರು! ಇವು ದೇಶದಲ್ಲೇ ತಲ್ಲಣ ಉಂಟುಮಾಡಿದವು! ಹಿಂದೂ ಧರ್ಮದ ಸಾಧು ಸಂತರ ಉದಾಹರಣೆಯಿಂದ ಹಿಂದೂ ಧರ್ಮದ ಶ್ರೇಷ್ಠತೆಯನ್ನು ಅಳೆಯಬೇಕೆಂದು ಗಾಂಧೀಜಿ ವಿಚಾರಿಸಿದರೆ ಹೊರತು ಮನುಷ್ಯ ಮನುಷ್ಯರ ಮಧ್ಯದ ಸಂಬಂಧದ ಕುರಿತು ವಿಚಾರಿಸಲಿಲ್ಲ. ಆದರೆ ದಲಿತರು ಸಾಮಾನ್ಯ ಜನರೊಡನೆ ವ್ಯವಹಾರಿಸಬೇಕಾಗಿದೆ ಎಂದು ಹೇಳಿದರು. ಅಂಬೇಡ್ಕರ ತಮ್ಮ 'ಮೂಕನಾಯಕ' ಪತ್ರಿಕೆ ಮತ್ತು ಬಹಿಷ್ಕೃತ ಹಿತಕಾರಿಣಿ ವೇದಿಕೆಯ ಮೂಲಕ ಹೋರಾಟ ನಡೆಸಿದರು.

ಡಾ. ಅಂಬೇಡ್ಕರ ಸ್ವಾತಂತ್ರ್ಯ ಹೋರಾಟ ಮತ್ತು ಸಮಾಜ ಸುಧಾರಣೆ ಮುಖ್ಯವಾಗಿ ಜಾತಿನಾಶ, ಒಟ್ಟೊಟ್ಟಿಗೆ ಹೋಗಬೇಕೆನ್ನುತ್ತಿದ್ದರು. ಆದರೆ ಕಾಂಗ್ರೆಸ್ ಅಥವಾ ಗಾಂದೀಜಿಗೆ ಸ್ವರಾಜ್ಯವೇ ಮುಖ್ಯವಾಗಿತ್ತು. ಈ ಮೇಲುಜಾತಿ ಮತ್ತು ಬಂಡವಾಳಶಾಹಿಯೊಡನೆ ಸ್ವಾತಂತ್ರ್ಯ ಕೇಂದ್ರೀಕರಣಗೊಂಡರೆ ನಿಶ್ಚಯವಾಗಿ ಅಸ್ಪೃಶ್ಯರ ಧ್ವನಿಗೆ ಸ್ಥಾನ ಸಿಕ್ಕುವುದಿಲ್ಲ ಎಂದು ಅಂಬೇಡ್ಕರ್ ನಂಬಿದ್ದರು. ಆದ್ದರಿಂದಲೇ ಅವರು ಹೇಳಿದರು.

"ಈ ದೇಶದಲ್ಲಿ ಕಾರ್ಮಿಕರು ಎರಡು ವೈರಗಳನ್ನು ಎದುರಿಸಬೇಕಾಗಿದೆ. ಆ ವೈರಗಳೆಂದರೆ ೧. ಬ್ರಾಹ್ಮಣವಾದ, ೨. ಬಂಡವಾಳಶಾಹಿ"

ಅವರು ಬ್ರಾಹ್ಮಣವಾದವನ್ನು ಬ್ರಾಹ್ಮಣ ಜಾತಿ ಎಂದು ವಾಖ್ಯಾನಿಸುವುದಿಲ್ಲ. ಸ್ವಾತಂತ್ರ್ಯ, ಸಮಾನತೆ ಮತ್ತು ಬಂಧುತ್ವವನ್ನು ವಿರೋಧಿಸುವುದೇ ಬ್ರಾಹ್ಮಣ್ಯ. ಅದು ಉಳಿದ ಎಲ್ಲ ಜಾತಿಗಳಿಗೂ ಹಬ್ಬಿದೆ. ಅದು ಎಷ್ಟು ವ್ಯಾಪಕವಾಗಿದೆಯೆಂದರೆ ದಲಿತರ ಆರ್ಥಿಕ ಅವಕಾಶದ ಮೇಲೂ ಹಿಡಿತ ಸಾಧಿಸಿದೆ, ಎನ್ನುತ್ತಾರೆ. ಬದಲಾವಣೆ ಬಯಸುವ ದಲಿತರಿಗೆ ರಾಜಕೀಯ ಶಕ್ತಿ ಬೇಕು. ಇಲ್ಲದಿದ್ದರೆ ದಲಿತರ ಉನ್ನತಿ ಹಗಲುಗನಸು ಎಂದು ಅವರು ನಂಬಿದ್ದರು. ಆದ್ದರಿಂದಲೇ ಬ್ರಿಟಿಷ್ ಸರಕಾರ ಕೊಡಬಹುದಾದ ಎಲ್ಲ ಸೌಲತ್ತುಗಳನ್ನು ದಲಿತ ವರ್ಗಕ್ಕೆ ದಕ್ಕಿಸಿಕೊಟ್ಟು ಅವರು ಸಮಾಜದಲ್ಲಿ ಎಲ್ಲರಂತೆ ಬಾಳುವಂತಾಗಬೇಕೆಂದು ಬಯಸಿದ್ದರು. ಅದು ಬ್ರಿಟಿಷ್ ಸಾಮ್ರಾಜ್ಯಶಾಹಿ ಏಜಂಟ್‌ಗಿರಿ ಆಗಿರಲಿಲ್ಲ.

ಬ್ರಿಟಿಷ್ ಸರಕಾರ ಚುನಾವಣೆಯಲ್ಲಿ ಮುಸ್ಲಿಮರಿಗೆ ವಿಶೇಷ ಹಕ್ಕನ್ನು ಅಂದರೆ ಪ್ರತ್ಯೇಕ ಚುನಾವಣಾ ಮೀಸಲಾತಿಯನ್ನು ಕೊಡಮಾಡಿದರೆ, ಇತರ ಅಲ್ಪ ಸಂಖ್ಯಾತ ವರ್ಗಕ್ಕೆ ಮೀಸಲಾತಿ ಕೊಡಮಾಡಿದರೆ ಗಾಂಧೀಜಿ ಮತ್ತು ಕಾಂಗ್ರೆಸ್ ವಿರೋಧಿ ಸುತ್ತಿರಲಿಲ್ಲ. ಆದರೆ ಅಸ್ಪೃಶ್ಯರ ಪ್ರತ್ಯೇಕ ಚುನಾವಣಾ ಮೀಸಲಾತಿಯನ್ನು ಗಾಂಧೀಜಿ ವಿರೋಧಿಸುತ್ತಿದ್ದರು. ಇದು ಅಂಬೇಡ್ಕರರನ್ನು ಕೆರಳಿಸುತ್ತಿತ್ತು. ೧೯೩೨ರ ಸೈಮನ್ ಕಮಿಷನ್ ದಲಿತರಿಗೆ ಪ್ರತ್ಯೇಕ ಚುನಾವಣಾ ಹಕ್ಕನ್ನು ಕೊಟ್ಟಿತು. ಗಾಂಧೀಜಿ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದರು. ಡಾ. ಅಂಬೇಡ್ಕರ ಮತ್ತು ಗಾಂಧೀಜಿ ಮಧ್ಯದಲ್ಲಿ ಒಂದು ರಾಜಿಯಾಗಿ ಸತ್ಯಾಗ್ರಹ ನಿಂತಿತು. ಇದನ್ನು 'ಪುಣೆ ಒಪ್ಪಂದ' ಎನ್ನುತ್ತಾರೆ. ಆ ಪ್ರಕಾರ ದಲಿತರ ಪ್ರತ್ಯೇಕ ಚುನಾವಣಾ ಹಕ್ಕು ರದ್ದಾಯಿತು. ಮತ್ತು ಚುನಾವಣೆಯಲ್ಲಿ ಮೀಸಲಾತಿ ಸ್ಥಾನದ ಹಕ್ಕು ಕೊಡಲಾಯಿತು.

ಡಾ. ಅಂಬೇಡ್ಕರರ ರಾಜಕೀಯ ಪ್ರಜ್ಞೆ ಪ್ರಖರವಾದುದು. ದೂರದರ್ಶಿತ್ವ ಉಳ್ಳದ್ದು. ದಲಿತರೇ ಪ್ರತ್ಯೇಕ ನಿಂತು ರಾಜಕೀಯ ಮೇಲ್ಮೆಯನ್ನು ಸಾಧಿಸಲಾರರು ಎಂದು ಅವರು ಅರಿತಿದ್ದರು. ಮತ್ತು ದಲಿತರೆಲ್ಲ ಕಾರ್ಮಿಕರು, ಜಮೀನು ಹೀನರು ಆಗಿದ್ದರು.

'ಕಾರ್ಮಿಕ ಪಕ್ಷ'ವನ್ನು ಸ್ಥಾಪಿಸಿದರು. ಅದರಲ್ಲಿ ವರ್ಣ- ಜಾತಿಯನ್ನು ಮರೆತು ಎಲ್ಲ ಕಾರ್ಮಿಕರೂ ಒಂದಾಗಬೇಕೆಂದು ಬಯಸಿದರು. ಅಂದಿನ ಸನ್ನಿವೇಶದ ಪ್ರಭಾವದಿಂದ ಅದು ಸಾಧ್ಯವಾಗಿಲಿಲ್ಲ. ಅವರು ಭಾರತೀಯ ಅರ್ಥವ್ಯವಸ್ಥೆಯು 'ಸಮಾಜವಾದಿ' ಯಾಗಿರತಕ್ಕದ್ದು ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಕಾರ್ಮಿಕ ಸಂಘಗಳು ರಾಜಕೀಯದಲ್ಲಿ ಪ್ರವೇಶಿಸಬೇಕು. ರಾಜಕೀಯ ಸೇರವುದೆಂದರೆ ರಾಜಕೀಯ ಪಕ್ಷ ಕಟ್ಟುವುದು. ರಾಜಕೀಯ ಹಕ್ಕುಗಳು ಇಲ್ಲದೆ ಕಾರ್ಮಿಕರ ಹಿತವನ್ನು ಸಾಧಿಸುವುದು ಸಾಧ್ಯವಿಲ್ಲ. ಸಂಬಳದ ಸ್ವಾತಂತ್ರ್ಯ, ಸಮತೆ, ಸೋದರತೆಯನ್ನು ಕಾರ್ಮಿಕ ಸಂಘಗಳು ಸಾಧಿಸಬೇಕು ಎಂದು ಅವರೆಂದಿದ್ದಾರೆ.

ಅವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ, ಭೂಸುಧಾರಣೆಯನ್ನು ಮಾಡಬೇಕು. ಜಾತಿ ವರ್ಗಗಳ ಅಂತಸ್ತಿನ ಗಣನೆಯಿಲ್ಲದೆ ಭೂರಹಿತರಿಗೆ ಹೆಚ್ಚು ಜಮೀನನ್ನು ಹಂಚಬೇಕು. ಸಾಮೂಹಿಕ ಬೇಸಾಯ ಯೋಜಿಸಬೇಕು. ಸಾಗುವಳಿಯ ಸಾಧನವನ್ನು ಸರಕಾರ ಒದಗಿಸಬೇಕು. ದೊಡ್ಡ

ದೊಡ್ಡ ಉದ್ಯೋಗಗಳು ಖಾಸಗಿಯವರಲ್ಲಿ ಉಳಿಯತಕ್ಕದಲ್ಲ. ಖಾಸಗಿ ವ್ಯವಸ್ಥೆಯಲ್ಲಿ ಕಾರ್ಮಿಕರು ಗುಲಾಮರೇ ಆಗಿರುತ್ತಾರೆ. ಇನ್ಸೂರೆನ್ಸ್, ಸೈನ್ಯ ಇಂಥವೆಲ್ಲ ಖಾಸಗಿಯವರ ಕೈಗೆ ಕೊಡಬಾರದು. ಬ್ರಿಟಿಷರು ಭಾರತವನ್ನು ಬಿಟ್ಟುಹೋದರೂ ಉದ್ಯಮಿಗಳೂ, ಸಾವುಕಾರರೂ ಇಲ್ಲಿಯೇ ಉಳಿದುಕೊಳ್ಳವರು. ಅವರು ಜನರನ್ನು ಶೋಷಣೆಗೆ ಒಳಪಡಿಸುವರು. ಇಂಗ್ಲಿಷರು ಹೋದರೂ ಕಾರ್ಮಿಕರು ತಮ್ಮ ಸಮಸ್ಯೆಗಾಗಿ ಹೋರಾಡಲೇಬೇಕಾಗುತ್ತದೆ. ರಾಜಕಾರಣದಲ್ಲಿ ವರ್ಗಪ್ರಜ್ಞೆ ಇರಲೇಬೇಕು. ಇಲ್ಲದಿದ್ದರೆ ಅದು ಕೇವಲ ತೆವಲು ಆದೀತು ಎಂಬುದು ಅವರ ತಾತ್ವಿಕ ನಿಲುವು.

ಆದರೆ ಎಲ್ಲವನ್ನು ಅವರು ರಾಜ್ಯದ ಕೈಗೆ ಕೊಡಲು ಒಪ್ಪುವುದಿಲ್ಲ. ಯಾಕೆಂದರೆ ಅಂಥ ಮಿತಿಮೀರಿದ ಅಧಿಕಾರ ಸರ್ವಾಧಿಕಾರವನ್ನೇ ತಂದೀತು. ಆದರಿಂದ ಸಂವಿಧಾನವೇ ಸಮಾಜವಾದಿ ಸ್ವರೂಪದ್ದಿರಬೇಕು. ಮತ್ತು ಅದು ಪ್ರಜಾ ಪ್ರಭುತ್ವವಾದಿ ಯಾದ ಸರಕಾರದ ರಕ್ಷೆಯಲ್ಲಿರಬೇಕು. "ಪ್ರಜಾ ಪ್ರಭುತ್ವವೆಂದರೆ ಪ್ರಜೆಗಳ ಸಾಮಾಜಿಕ ಹಾಗು ಆರ್ಥಿಕ ಬದುಕಿನಲ್ಲಿ ಮೂಲಭೂತ ಬದಲಾವಣೆಗಳನ್ನು ಉಂಟುಮಾಡಬಲ್ಲ ಮತ್ತು ಪ್ರಜೆಗಳು ಈ ಬದಲಾವಣೆಯನ್ನು ಯಾವುದೇ ತರಹದ ವಿವಾದ, ಅಸಹನೆ ರಕ್ತಪಾತವಿಲ್ಲದೆ ಒಪ್ಪಕೊಳ್ಳು ವಂತಹ ವ್ಯವಸ್ಥೆ" ಎಂದು ಹೇಳಿ, ಸಮಾಜವಾದಿ ಅರ್ಥವ್ಯವಸ್ಥೆಯನ್ನು ಸಂವಿಧಾನದಲ್ಲಿ ಅಳವಡಿಸಬೇಕು ಎಂದಿದ್ದಾರೆ. ಅವರು ಸ್ವತಃ ಸಂವಿಧಾನ ರಚನಾಕಾರರಾಗಿ ಸಾಧ್ಯವಾದಷ್ಟು ಸಾಧಿಸಿದ್ದಾರೆ. ಮುಖ್ಯವಾಗಿ ಅದರ ನಿರ್ದೇಶನ ತತ್ವ ಸಾಮಾಜವಾದಿ ಸ್ವರೂಪದ್ದೇ ಆಗಿದೆ. ಡಾ. ಅಂಬೇಡ್ಕರ ಜಗತ್ತಿನಲ್ಲಿ ಮೇಧಾವಿ ನ್ಯಾಯತಜ್ಞರಲ್ಲಿ ಒಬ್ಬರಾಗಿದ್ದಾರೆ. ಎರಡು ವರ್ಷಗಳ ಅವಿರತವಾದ ಪರಿಶ್ರಮದಿಂದ ನಮ್ಮ ಸಂವಿಧಾನ ರಚನೆಮಾಡಿಕೊಟ್ಟು "ಭಾರತ ಸಂವಿಧಾನ ಶಿಲ್ಪಿ" ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ. ಡಾ. ಅಂಬೇಡ್ಕರ್ ತತ್ವಜ್ಞಾನವನ್ನು ಚರ್ಚೆ ವಿಚರ್ಚೆ ಮಾಡುತ್ತಾ ವೇಳೆ ಕಳೆಯುವ ಸಾಧನವನ್ನಾಗಿ ಎಣಿಸದೆ ಜಗತ್ತನ್ನು ಪರಿವರ್ತಿಸುವ ಸಾಧನವಾಗೇ ಗ್ರಹಿಸುತ್ತಾರೆಂದು ಡಾ. ರಾವ್ ಸಾಹೇಬ ಕಸಬೆ ಹೇಳುತ್ತಾರೆ.

ಡಾ. ಅಂಬೇಡ್ಕರರ ಹೋರಾಟ, ಸಂಘಟನೆ ಮತ್ತು ತಾತ್ವಿಕ ವಿಚಾರವನ್ನು ತಿಳಿದ ಯಾರೂ ಅವರ 'ಮಾರ್ಕ್ಸ್‌ವಾದ'ಕ್ಕೆ ಎಷ್ಟು ಹತ್ತಿರ ಇದ್ದಾನೆ ಎಂದೆಣಿಸದೇ ಇರರು. ಭಾರತೀಯ ಕಮ್ಯುನಿಸ್ಟರು ಮತ್ತು ಅಂಬೇಡ್ಕರ ಒಂದಾಗಿದ್ದರೆ ಭಾರತದ ಚರಿತ್ರೆಯೇ ಬದಲಾಗಿಸ ಬಹುದಾಗಿತ್ತು! ಆದರೆ ಅದು ಭಾರತದ ಜಾತಿ ವರ್ಣ ವ್ಯವಸ್ಥೆ, ಭೌಗೋಳಿಕತೆ ಮತ್ತು ಹೋರಾಟದ ವಿಶ್ಲೇಷಣೆಗಳ ಅಸ್ಪಷ್ಟತೆಯಿಂದ ಕೂಡಿದ ಚಾರಿತ್ರಿಕ ಸ್ಸನಿವೇಶದಿಂದಾಗಿ ಆಗಲಿಲ್ಲವೆಂದು ತೋರುತ್ತದೆ. ಆದರೆ ಈಗ ಮರು ಚಿಂತನೆಗೆ ಕಾಲ ಹದಗೊಂಡಿದೆ.

*

ಬುದ್ಧ, ಮಾರ್ಕ್ಸ್ ಮತ್ತು ಅಂಬೇಡ್ಕರ

"......ಆದ್ದರಿಂದಲೇ ನಿನ್ನ ತಿಳಿಯುವುದು ನಿನ್ನ ನೋವಿನಲಿ; ಸಾಹಸದಲ್ಲಿ ಒಂದಾಗುವುದು, ಕವಿತೆ ಬರೆಯುವುದರಿಂದಲ್ಲ; ನಿನ್ನವರ ನೋವಿನ ಮಧ್ಯೆ, ಸೋಲಿನ ಮಧ್ಯೆ ನಿನ್ನ ಜನಗಳ ಮಧ್ಯೆ ನನ್ನನ್ನು ತೋರಿಸಿಕೊಳ್ಳುವದರಿಂದ."

ಪಿರಾಮಿಡ್ಡಿನ ಹಾಗೆ ಗುಡ್ಡೆಗಟ್ಟಿದ ಹಿಂದೂ ಸಮಾಜ ವ್ಯವಸ್ಥೆಯ ಅತ್ಯಡಿಯ ಸ್ತರದಿಂದ ಆಸ್ಫೋಟನೆ ಗೊಂಡ ಒಂದು ದಲಿತ ಧ್ವನಿ ಸಿಡಿದು ಬಂತು. ಆ ಧ್ವನಿಯೇ ಡಾ. ಬಿ. ಆರ್. ಅಂಬೇಡ್ಕರ. ಸಾವಿರ ವರ್ಷದಿಂದ ಒತ್ತಿ ಬಿದ್ದಿದ್ದ ಯುಗಭಾರ ಶಿಲೆಯನ್ನು ಅಲುಗಿಸಿ ಬಿಟ್ಟಿತು ಆ ಆಸ್ಫೋಟನದ ಸಾಮರ್ಥ್ಯ!

ಒಮ್ಮೆ ಶಾಲೆಯಲ್ಲಿ ಶಿಕ್ಷಕರು ಒಂದು ಲೆಕ್ಕ ಬಿಡಿಸಲು ಕರೇಹಲಗೆಯ ಬಳಿ ಕರೆದರು. ಆ ಹಲಗೆಯ ಹಿಂದೆ ಮಕ್ಕಳು ತಮ್ಮ ತಿಂಡಿಯನ್ನು ಇಟ್ಟಿದ್ದರು. ಕೂಡಲೇ ಸವರ್ಣೀಯ ಹುಡುಗ ಹುಡುಗಿಯರು ಓಡಿ ಹೋಗಿ ತಮ್ಮ ತಿಂಡಿಯ ಚೀಲವನ್ನು ದೂರ ಇಟ್ಟು ಕೊಂಡರು. ಈ ಅಸ್ಪೃಶ್ಯನ ಗಾಳಿ ಆ ಪಾತ್ರೆಗೆ ತಾಗಿದರೆ ಮೈಲಿಗೆ ಯಾಗುವುದಿಲ್ಲವೆ?

ಪ್ರಯಾಣಿಸುತ್ತಿದ್ದಾಗ, ಅವರು ಅಸ್ಪೃಶ್ಯರೆಂದು ತಿಳಿದ ಆ ಗಾಡಿಯವ ಅವರನ್ನು ವಾಚಾಮಗೋಚರ ಬೈದು ಗಾಡಿಯಿಂದ ಕೆಳಗೆ ಉರುಳಿಸಿದ. ಇನ್ನೊಮ್ಮೆ ಕ್ಷೌರ ಮಾಡಿಸಿ ಕೊಳ್ಳಲು ಹೋದರೆ "ಹೊಲೆಯರಿಗೆ ನಾನು ಕ್ಷೌರ ಮಾಡುವುದಿಲ್ಲವೆಂದ ಹಜಾಮ" ಅವರು ಇಂಗ್ಲೆಂಡಿನಿಂದ ಹಿಂದಿರುಗಿದ ಮೇಲೆ ಬರೋಡ ರಾಜರಲ್ಲಿ ಮಿಲಿಟರಿ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸುತ್ತಿದ್ದರು. ಆಗ ಅಲ್ಲಿಯ ಜವಾನ ಇವರ ಸ್ಪರ್ಶದಿಂದ ತನಗೆ ಮೈಲಿಗೆಯಾಗುತ್ತದೆಂದು ದೂರದಿಂದಲೇ ಫೈಲನ್ನು ಮೇಜಿಗೆ ಎಸೆಯುತ್ತಿದ್ದ! ಒಂದೇ ಎರಡೇ! ಅವರು ದುಃಖದಲ್ಲೇ ಅದ್ದಿದಂತಿದ್ದರು, ಅಪಮಾನದಲ್ಲಿ ಕುದಿದಿದ್ದರು. ಆದರೂ ಅವರು ಮಹಾ ಸಂಯಮಿಗಳಾಗಿದ್ದರು. ಉದಾರ ವಾದಿಗಳಾಗಿದ್ದರು. ಮಹಾ ಮಾನವರಾಗಿದ್ದರು. ಮಿಸ್ಟರ್ ಗಾಂಧಿಯ ವಿರೋಧಿಯೆಂದೇ ಎಣಿಸಲ್ಪಟ್ಟ ಅಂಬೇಡ್ಕರ ಪುಣೆ ಒಪ್ಪಂದದ ಮುಖಾಂತರ ದಲಿತರ ಪ್ರತ್ಯೇಕ ಚುನಾವಣಾ ವ್ಯವಸ್ಥೆಯ ಬೇಡಿಕೆಯನ್ನು ವಿರೋಧಿಸಿ ಉಪವಾಸ ಮಾಡಿ ಸಾಯುವ ಗಳಿಗೆಯಲ್ಲಿದ್ದ ಮಹಾತ್ಮಾ ಗಾಂಧಿಯವರನ್ನು ಅಂಬೇಡ್ಕರ ಬದುಕಿಸಿದರು. ಆದರೆ ಮುಂದೆ ಗಾಂಧಿಯನ್ನು ಕೊಂದವರು ಸವರ್ಣೀಯರು.

ಮೊದಲ ಪ್ರಕಟನ: ಅಂಬೇಡ್ಕರ ವಾಹಿನಿ, ಬೆಂಗಳೂರು.

ಅಂಬೇಡ್ಕರ ನಮ್ಮೆದುರು ಇಟ್ಟು ಹೋದ ಉದಾಹರಣೆಯೆಂದರೆ ಅಭ್ಯಾಸ ಮತ್ತು ಹೋರಾಟ. ಹಿಂದೂ ಧರ್ಮ ಶಾಸ್ತ್ರಗಳನ್ನು ಆಮೂಲಾಗ್ರವಾಗಿ ಅಭ್ಯಾಸ ಮಾಡಿದರು. ಜಾತಿ, ಅಸ್ಪೃಶ್ಯತೆಯ ಹುಟ್ಟುಗಳ ಬಗ್ಗೆ ವಿಮರ್ಶಿಸಿ ಬರೆದರು. ಚಾತುರ್ವರ್ಣ್ಯವನ್ನು ಹಿಂಜಿ ಹಿಂಜಿ ಅದರ ಪರಿಣಾಮದ ಕುರಿತು ಹೇಳಿದರು. ಪುರಾಣಗಳ ಹಿಂದೆ ಇರುವ ವಂಚನೆಗಳನ್ನು ಗುರುತಿಸಿದರು. "ಯಾವ ಧರ್ಮ ಮನಷ್ಯ ಮನುಷ್ಯರ ಮಧ್ಯೆ ಸಮಾನ ಗೌರವ ತಾಳುವುದನ್ನು ಒಂದು ಪಾಪ ಎಂದು ತಿಳಿಯುತ್ತದೋ ಅದು ಧರ್ಮವಲ್ಲ; ಅದೊಂದು ರೋಗ. ಯಾವ ಧರ್ಮ ಪಶು ಪಕ್ಷಿಗಳನ್ನು ಮುಟ್ಟಲು ಅಡ್ಡಿ ಮಾಡದೆ ಮನುಷ್ಯ ಮನುಷ್ಯರನ್ನು ಮುಟ್ಟುವುದಕ್ಕೆ ನಿರ್ಬಧಿಸುತ್ತದೆಯೋ ಅದು ಧರ್ಮವಲ್ಲ; ಒಂದು ಹುಚ್ಚು. ಯಾವ ಧರ್ಮ ಕೆಲವೊಂದು ವರ್ಗಕ್ಕೆ ಸಂಪತ್ತು ಸಲಕರಣೆಗಳನ್ನು ಪಡೆಯುವುದನ್ನು ನಿರ್ಬಂಧಿಸುವುದೋ ಅದು ಧರ್ಮ ವಲ್ಲ; ಬದುಕಿನ ಒಂದು ಅಣಕ. ಯಾವ ಧರ್ಮ ಕಲಿಯದವರು ಕಲಿಯದೇ ಇರುವಂತೆ, ಬಡವರು ಬಡವರಾಗೇ ಇರುವಂತೆ ನೋಡಿ ಕೊಳ್ಳುತ್ತದೆಯೋ ಆದು ಧರ್ಮವಲ್ಲ; ಕೇವಲ ಒಂದು ಶಿಕ್ಷೆ" ಇನ್ನೊಮ್ಮೆ ತನಗೆ ಸಂಸ್ಕೃತ ಕಲಿಸಲು ಶಿಕ್ಷಕರನ್ನು ಕೇಳಿಕೊಂಡರು. "ಹೊಲೆಮುಂಡೆ ಗಂಡರಿಗೆ ವ್ಯಾಸಂಗಕ್ಕೆ ಅವಕಾಶ ಮಾಡಿಕೊಟ್ಟಿದ್ದೇ ಹೆಚ್ಚು; ಇದಕ್ಕೆ ಸಂಸ್ಕೃತ ಬೇರೆ ಬೇಕಂತೆ" ಎಂದು ಶಿಕ್ಷಕರು ಹೇಳಿದರು. ಆದ್ದರಿಂದ ಇದಕ್ಕೆ ವ್ಯತಿರಿಕ್ತವಾಗಿ, ಸಮಾನತೆ, ಸೋದರತೆ, ಸ್ವಾತಂತ್ರ್ಯವನ್ನು ಬೋಧಿಸುವಂಥ ಬೌದ್ಧ ಧರ್ಮ ಮಾತ್ರ ವಿಶ್ವಧರ್ಮ ಎಂದರು. ಆಕಡೆ ಸೆಳೆಯಲ್ಪಟ್ಟರು. ಕೊನೆಗೆ ಬೌದ್ಧರೇ ಆದರು. "ಭೌದ್ಧ ಧರ್ಮ ಜೀವನಾನುಭವವನ್ನು, ಉದಾತ್ತ ಬದುಕನ್ನೂ ಹೇಳುತ್ತದೆ. ಇಹದಲ್ಲೇ ಬದುಕಿನ ದಿವ್ಯತೆಯನ್ನು ತಿಳಿಸುತ್ತದೆ. ಅದು ವಾಸ್ತವತೆಯ ಮೇಲೆ ನಿಂತಿದೆ; ಆದರ್ಶದ ಮೇಲಲ್ಲ. ಅದು ಸೋದರತೆ, ಸಮಾನತೆ, ಸ್ವಾತಂತ್ರ್ಯವನ್ನು ಹೇಳುತ್ತದೆ. ಅದು ಸಮೃದ್ಧ, ವೈಜ್ಞಾನಿಕ, ವಿಶ್ವ ಸಂಬಂಧಿ. ಎಲ್ಲದಕ್ಕಿಂತ ಬೌದ್ಧ ಧರ್ಮಕ್ಕೆ ಮನುಷ್ಯರೇ ಕೇಂದ್ರ ಬಿಂದು" ಎಂದು ಖಚಿತ ಪಡಿಸಿದರು.

ಅಂಬೇಡ್ಕರ ಒಬ್ಬ ಮಹಾ ಧಾರ್ಮಿಕ ವ್ಯಕ್ತಿಯಾಗಿದ್ದರೂ ವೈಜ್ಞಾನಿಕ ವಸ್ತುನಿಷ್ಠತೆ ಅವರದಾಗಿತ್ತು. ಕಾರ್ಲ ಮಾರ್ಕ್ಸ್ ಸಿದ್ಧಾಂತದ ವರ್ಗ ಹೋರಾಟದ ಬಗ್ಗೆ ಅವರಿಗೆ ನಿಖರವಾದ ಪರಿಜ್ಞಾನವಿತ್ತು. "ನಿಮ್ಮ ದಾಸ್ಯಕ್ಕೆ ನೀವೇ ಕಾರಣ. ನೀವೇ ಅದನ್ನು ಕೊನೆ ಗಾಣಿಸಬೇಕು. ಯಾವುದೋ ಲೋಕದಿಂದ ದೇವರೋ ಅತಿಮಾನವನೋ ಬಂದು ವಿಮೋಚನೆಗೆ ನೆರವಾಗುತ್ತಾನೆಂದು ನಂಬಬೇಡಿ, ಪವಿತ್ರ ಗ್ರಂಥ ನಿಷ್ಠೆ ನಿಮ್ಮನ್ನು ಜೀತ ದಾರಿದ್ರ್ಯಗಳಿಂದ ಪಾರು ಮಾಡುತ್ತದೆಂದು ತಿಳಿಯಬೇಡಿ. ಹಲವು ತಲೆಮಾರಿನಿಂದ ನಿಮ್ಮ ಹಿರಿಯರು ಅವುಗಳನ್ನು ನಂಬಿಕೊಂಡಿದ್ದರಲ್ಲವೇ? ಅವರಿಗೆ ಸುಖ ಸಿಕ್ಕಿತೆ... ಸದ್ಯಕ್ಕೆ ವ್ರತ ನಿಯಮಗಳನ್ನು ಕಟ್ಟಿಟ್ಟು ಶಾಸನಾಧಿಕಾರ ಸಂಪಾದಿಸಲು ಸರ್ವತ್ಯಾಗಕ್ಕೂ ಸಿದ್ಧರಾಗಿ. ಆಗ ಮಾತ್ರ ನಿಮ್ಮ ಹಸಿವು ನೀಗುತ್ತದೆ" ಎಂದು ತಮ್ಮ ಜನರಿಗೆ ಹೇಳಿದ್ದು ಮತ್ತು "ನಮ್ಮ ಪಕ್ಷ ನ್ಯಾಯದ ಪಕ್ಷ. ಅದಕ್ಕಾಗಿ ನಾವು ಕೊನೆವರೆಗೆ ಬಡಿದಾಡುವೆವು... ಪ್ರಸಂಗ ಬಂದರೆ ನಮ್ಮ ಬೆನ್ನೆಲುಬು ಪುಡಿ ಮಾಡುವ ಬೆದರಿಕೆ ತೋರಿಸುವ ಜನರ ತಲೆ ಬಿಸಿ ಮಾಡಲು ನಾವು ಹಿಂಜರಿಯಲಾರೆವು. ಆ ಮೇಲೆ ಏನಾಗುವುದಿದೆಯೊ ಅದು ಆಗಲಿ" ಎಂದು ಮಹಾಡ ಪ್ರಕರಣದಲ್ಲಿ ಬಾಲಾಕಾರರ ಲೇಖನಕ್ಕೆ

ಉತ್ತರ ಕೊಟ್ಟಿರುವಲ್ಲಿ ಹೋರಾಟದ ಕೆಚ್ಚು ವಾಸ್ತವಿಕತೆಯ ವಸ್ತು ನಿಷ್ಠ ವಿಶ್ಲೇಷಣೆಯಿಂದಲೇ ಉಂಟಾದುದು.

ಅವರು ಸ್ಪಷ್ಟವಾಗಿ ಸಮಾಜವಾದಿಗಳಾಗಿದ್ದರು. ಆದರೆ ವರ್ಗ ಹೋರಾಟ ಸಾಧನವನ್ನನುಸರಿಸಿದೆ ಸಂವಿಧಾನಾತ್ಮಕ ಹೋರಾಟ ಸಮಾನತೆಯನ್ನು ಸಾಧಿಸುವ ಮಾರ್ಗವಾಗಬೇಕೆಂದು ಬಯಸಿದ್ದರು. ಅವರು ಖಾಸಗಿ ಆಸ್ತಿಯ ಹಕ್ಕನ್ನು ನಿರಾಕರಿಸಿದ್ದರು. ಅವರು ದೊಡ್ಡ ಔದ್ಯೋಗಿಕರಣವನ್ನು ಬಯಸಿದ್ದರು. ಹೆಚ್ಚುವರಿ ಭೂಮಿ ಸರಕಾರದ ಒಡೆತನಕ್ಕೆ ಸೇರಬೇಕೆಂದಿದ್ದರು. ಸಹಕಾರಿ ಬೇಸಾಯ ಪ್ರಯೋಜನಕಾರಿ ಎಂದಿದ್ದರು. ತಾವು ಸ್ಥಾಪಿಸಿದ ರಾಜಕೀಯ ಪಕ್ಷಕ್ಕೆ ಜಾತಿಯ ಹಣೆಪಟ್ಟಿ ಅಂಟಿಸದೆ ಅದು ಎಲ್ಲ ಶೋಷಿತರ ಪಕ್ಷವಾಗಬೇಕೆಂದು ಬಯಸಿದ್ದರು. ಇವೆಲ್ಲವನ್ನು ಸಂವಿಧಾನದ ಮುಖಾಂತರ ಸಾಧಿಸಬಹುದೆಂಬ ಅವರ ಕನಸು ಕಾರ್ಯಗತವಾಗಲಿಲ್ಲ. ಅವರೇ ರಚಿಸಿದ ರಾಜ್ಯ ಘಟನೆ ಜಾರಿಗೆ ಬಂದು ಕೆಲ ವರ್ಷ ಕಳೆದರೂ ಅಸ್ಪೃಶ್ಯರ ಸ್ಥಿತಿ ಇನ್ನೂ ದಾರುಣವಾಗುತ್ತಿರುವುದನ್ನು ನೋಡಿ ನಿರಾಶರಾಗಿದ್ದರು. ಇಂಡೋ-ಜಪಾನ್ ಸಾಂಸ್ಕೃತಿಕ ಕೂಟ ಅವರಿಗೆ ಕೊಟ್ಟ ಗೌರವ ಸಮಾರಂಭದಲ್ಲಿ ಮಾತಾಡುತ್ತ "ಇಂದಿನ ಅಥವಾ ಮುಂದಿನ ತಲೆಮಾರು ಜನ ಬುದ್ಧನ ಮಾರ್ಗ ಅಥವಾ ಮಾರ್ಕ್ಸ್ ಸಿದ್ಧಾಂತಗಳಲ್ಲಿ ಒಂದನ್ನು ಆರಿಸಿ ಕೊಳ್ಳಬೇಕಾಗುತ್ತದೆ. ಬುದ್ಧನ ಮಾರ್ಗ ಸ್ವೀಕಾರವಾಗದಿದ್ದರೆ -ಏಕೆಂದರೆ ಬುದ್ಧನ ಮಾರ್ಗ ಖಾಸಗಿ ಆಸ್ತಿಯನ್ನು ಮನ್ನಿಸುವುದಿಲ್ಲ. ಬುದ್ಧ ದುಃಖ ಎಂದದ್ದನ್ನೇ ಮಾರ್ಕ್ಸ್ "ಎಕ್ಸ್‌ಪ್ಲಾಯ್ಟೇಶನ್" ಎಂದು ಅಂದಿದ್ದಾನೆ -ಯುರೋಪಿನ ಐತಿಹಾಸಿಕ ಸಮರ ಏಶಿಯಾದಲ್ಲೂ ಸಂಭವಿಸುತ್ತದೆ..." ಎಂದ ಮಾತು ಮನನೀಯವಾಗಿದೆ. (ಉದ್ಧರಣೆ Dr. Ambadkar critical study WN Kuber 1979; 219).

ಮತಾಂತರವಾದರೂ ಅವರು ಮತಾಂತರವೂ ತಮ್ಮವರ ಸಮಸ್ಯೆಗೆ ಪರಿಹಾರ ಒದಗಿಸಲಿಲ್ಲವೆಂದು ಆತಂಕವನ್ನೇ ಅನುಭೋಗಿಸಿದರು. "ದಲಿತರು ನವ ಬೌದ್ಧರಾದ ಮಾತ್ರಕ್ಕೆ ಹಿಂದೂ ದೇಶದಲ್ಲಿ ಸಮಾನತೆ, ಸೋದರತೆ ಮತ್ತು ಸ್ವಾತಂತ್ರ್ಯ ಮೂರು ಅವರಿಗೆ ಸಿಗುತ್ತದೆಂದು ಯಾಕೆ ಇವರು ಆಸೆ ಪಟ್ಟರೋ ತಿಳಿಯದಾಗಿದೆ. ನವಬೌದ್ಧರು ಈ ಹೊತ್ತಿಗೂ ಮತ್ತೊಂದು ದಲಿತ ಜನಾಂಗವಾಗಿಯೇ ಉಳಿದಿದ್ದಾರೆ" ಎಂಬ ದಿ|| ದೇವಯ್ಯ ಹರವೆಯವರ ಮಾತುಗಳನ್ನು ಇಲ್ಲಿ ಸ್ಮರಿಸಬಹುದು. ಹಾಗಾದರೆ ಮುಂದೇನು? ಅಂಬೇಡ್ಕರರೇನೋ ರಥವನ್ನು ಇಲ್ಲಿಯ ತನಕ ಎಳೆದಿದ್ದಾರೆ. ಇನ್ನು ಮುಂದೆ ಎಳೆಯಬೇಕಾದದ್ದು ಇಂದಿನ ಯುವಕರ ಜವಾಬ್ದಾರಿ. ಅಂಬೇಡ್ಕರ ಎಲ್ಲಿ ನಿಂತರೋ ಅಲ್ಲೇ ನಿಂತು ಪೂಜಿಸುವುದಿಲ್ಲ, ಅದನ್ನು ಮುಂದಕ್ಕೆ ಒಯ್ಯಬೇಕು. ಅದಕ್ಕೆ ದಾರಿ ಯಾವುದು?

ಅಸ್ಪೃಶ್ಯತೆ, ಜಾತೀಯತೆಯ ವಿನಾಶದ ಕುರಿತು ನಡೆದ ಸಾಂಸ್ಕೃತಿಕ ಚಳುವಳಿಗೆ ಇತಿಹಾಸದಲ್ಲಿ ದೀರ್ಘ ದಾಖಲೆಯಿದೆ. ಅದು ಇನ್ನು ಮುಂದೆಯೂ ಹೋಗಬೇಕಾದ ಅವಶ್ಯಕತೆಯಿದೆ ಅದೇ ಹೊತ್ತಿಗೆ ಅದು ವರ್ಗ ಹೋರಾಟವನ್ನು ಅಳವಡಿಸಿಕೊಳ್ಳುವ ಅವಶ್ಯಕತೆಯ ಕುರಿತು ಚಿಂತಿಸಬೇಕಾಗಿದೆ. ತಮ್ಮ ಜಾತಿ ಹೋರಾಟದಲ್ಲಿ ವರ್ಗ ಹೋರಾಟವು

ಒಳಗೊಂಡಿದೆ ಎಂದು ಅಂಬೇಡ್ಕರರು ಹೇಳುತ್ತಿದ್ದರು. ಇಂದು ಕಾಲ ಮುಂದುವರಿದಿದೆ, ಜಾತಿ ಹೋರಾಟವನ್ನು ವರ್ಗ ಹೋರಾಟದ ಕಡೆ ತಿರುಗಿಸಬೇಕಾಗಿದೆ. ಆದರೂ ದಲಿತರ ವಿಶಿಷ್ಟವಾದ ಸಮಸ್ಯೆಯನ್ನು ಮರೆಯಬಾರದು ಎಂಬುದೂ ಅಷ್ಟೇ ಮುಖ್ಯವಾಗುತ್ತದೆ. ದಲಿತರ, ಇತರ ಜಾತಿಗಳ ಅಂತರ್ಯದಲ್ಲಿ ಇರುವುದು ಆಸ್ತಿಯ ಪ್ರಶ್ನೆಯೇ ಆಗಿದೆ. ಅದರ ವಿಕೇಂದ್ರೀಕರಣ ಹೇಗೆ ಎಂದು ಇಂದು ವೈಜ್ಞಾನಿಕವಾಗಿ ಚಿಂತಿಸಬೇಕಾಗಿದೆ.

ಬುದ್ಧನ ಹಾಗೆ ಅಂಬೇಡ್ಕರ ಸಹ ಹಿಂದೂ ಧರ್ಮಕ್ಕೆ ಬಲವಾದ ಆಘಾತ ಮಾಡಿದರು. ಅಂತೆ ಮಾರ್ಕ್ಸನ ಹಾಗೆ ಸೈದ್ಧಾಂತಿಕ ಬೆಳಕಿನಲ್ಲಿ ಬಲವಾದ ಸಂಘಟನೆ ಮಾಡಿದರು. ಅವರ ಸಂಘಟನಾ ಸಾಮರ್ಥ್ಯ ಅದ್ಭುತವಾದುದು. ಸಿದ್ಧಾಂತ ಅಥವಾ ಅಭ್ಯಾಸ ಮತ್ತು ಹೋರಾಟದಲ್ಲಿ ಅವರು ಮಾರ್ಕ್ಸನಿಗೆ ಸಮೀಪ. ಬುದ್ಧ ಸತ್ತ ನಂತರ ಅವನ ಧರ್ಮ ವಿಶ್ವವ್ಯಾಪಿಯಾಯಿತು. ಮಾರ್ಕ್ಸ ಸತ್ತ ನಂತರ ಅವರ ಸಿದ್ಧಾಂತ ಜಗತ್ತಿನಾದ್ಯಂತ ಪಸರಿಸುತ್ತಿದೆ. ಅಂತೆಯೇ ಅಂಬೇಡ್ಕರರ ಮರಣಾನಂತರ ಅವರ ವಿಚಾರ ಮಹಾರಾಷ್ಟ್ರವನ್ನು ದಾಟಿ ದೇಶದೆಲ್ಲೆಡೆ ಚಿಂತನೆಗೆ, ಸಂಘಟನೆಗೆ, ಹೋರಾಟಕ್ಕೆ ಸ್ಫೂರ್ತಿಯಾಗುತ್ತಿದೆ. ಹೊಸ ಚಿಂತನೆಗೆ ಆಹ್ವಾನಿಸುತ್ತಿದೆ.

*

ಜಾತಿ ಹೋರಾಟ ಮತ್ತು ರಾಜಕೀಯ ಪ್ರಜ್ಞೆ

"ಪ್ರಾಥಮಿಕ ಹಂತದಲ್ಲಿ ಜಾತಿಯೆಂದರೆ ಆರ್ಥಿಕವಾದ ವರ್ಗವೇ ಆಗಿದೆ" ಎಂದು ಪ್ರಸಿದ್ಧ ಚರಿತ್ರಕಾರರಾದ ಮಾನ್ಯ ಡಿ.ಡಿ. ಕೋಸಂಬಿ ಅವರೆನ್ನುತ್ತಾರೆ. [The culture and civilization of Ancient Indian in Historical outline] ಏಳನೇ ಮುದ್ರಣ ಪು. ೫೦ ವಿಕಾಸ ಪ್ರಕಾಶನ ನ್ಯೂ ಡೆಲ್ಲಿ.

ಚರಿತ್ರೆಯಲ್ಲಿ ಉಂಟಾದ ಯಾವುದೇ ವ್ಯವಸ್ಥೆ ಅಥವಾ ಸಮಾಜದ ಸಂಗತಿಗಳು ನಿರುದ್ದೇಶ, ನಿರರ್ಥಕವಾಗಿ ಉಂಟಾಗುವುದಿಲ್ಲ. ಹೀಗೆ ನೋಡಿದಾಗ ಜಾತಿ ಎಂಬ ಸಂಸ್ಥೆ ಸಹ ಸಮಾಜದ ಬೆಳವಣಿಗೆಯ ಹಂತದಲ್ಲೇ ಉಂಟಾದವು. ಆದರೆ ಒಂದು ಕಾಲದಲ್ಲಿ ಉಂಟಾಗುವ ಯಾವುದೇ ವ್ಯವಸ್ಥೆ ಎಲ್ಲ ಕಾಲಕ್ಕೂ ಸಲ್ಲುತ್ತದೆಂದಿಲ್ಲ. ಆಗ ಅದರ ನಾಶ ಅಗತ್ಯವಾಗುತ್ತದೆ. ಅದರ ವಿನಾಶ ಸರಳವಾದ ಒಂದು ಸಮಾರಂಭವಲ್ಲ. ಅಥವಾ ಯಾವುದೇ ಒಂದು ಶುಭ ಪ್ರಾತಃಕಾಲ ಜಾತಿ ವ್ಯವಸ್ಥೆ ನಾಶವಾಯಿತು ಎಂದು ಸಾರಲಾಗುವುದಿಲ್ಲ. ಹಾಗೆ ನಮ್ಮ ಸಂವಿಧಾನದಲ್ಲಿ ಅಸ್ಪೃಶ್ಯತೆಯನ್ನು ನಾಶ ಮಾಡಲಾಗಿದೆ ಎಂದು ಸಾರಿದರೂ ಇಂದು ಅದು ತನ್ನ ಕರಾಳ ರೂಪವನ್ನು ಇಟ್ಟುಕೊಂಡೇ ಇರುವುದು ಸಾಕ್ಷಿಯಾಗಿದೆ.

ಜಾತಿ ನಾಶವಾಗುವುದು ಎರಡು ಕಾರಣಗಳಿಂದ. ಒಂದು ಕಾಲಕ್ರಮದ ಸನ್ನಿವೇಶದಲ್ಲಿ ಉಂಟಾದ ವ್ಯವಸ್ಥೆ ಮುಂದೆ ಜೀವನಕ್ರಮ ಅಂದರೆ ಆರ್ಥಿಕ, ಉದ್ಯೋಗ ವಿಧಾನ ಬದಲಾದಾಗ ಅದರ ಅಗತ್ಯತೆಗೆ ಹಿಂದಿನ ವ್ಯವಸ್ಥೆ ಪೂರಕವಾಗದಿರುವುದರಿಂದ. ಅಂದರೆ ಹೊಸ ಉದ್ಯೋಗ ವಿಧಾನ, ಸಂಗ್ರಹ, ಹಂಚಿಕೆ ಬದಲಾದಾಗ ಅದು ಮೊದಲಿನ ವ್ಯವಸ್ಥೆಯನ್ನು ಚೂರು ಮಾಡುತ್ತದೆ. ಉದಾಹರಣೆಗೆ ಇಂದು ದೊಡ್ಡ ಪಟ್ಟಣಗಳಲ್ಲಿ ಹಳ್ಳಿಯಲ್ಲಿರುವಂತೆ ಜಾತಿಯ ಕಟ್ಟುನಿಟ್ಟಾದ ಬಳಕೆ ಇಲ್ಲ. ಯಾಕೆಂದರೆ ಅಲ್ಲಿಯ ಜೀವನದ ವಿಧಾನಗಳೇ ಹಾಗಾಗಿವೆ. ಬೇರೆಬೇರೆ ಜಾತಿಯ ಜನ ಒಂದೇ ಕಡೆ ಸೇರಬೇಕಾದ, ಒಂದೇ ಚಾಳದಲ್ಲಿ ಇರಬೇಕಾದ, ಒಂದೇ ಉದ್ಯೋಗದಲ್ಲಿ ವಿವಿಧ ಹಂತಗಳಲ್ಲಿ ಕೆಲಸ ಮಾಡಬೇಕಾದ ಮತ್ತು ಗಂಡುಹೆಣ್ಣುಗಳು ಒಟ್ಟೊಟ್ಟಿಗೆ ದುಡಿಯಬೇಕಾದ ಅನೇಕ ಸಂದರ್ಭ ಜಾತಿಯನ್ನು ಗೌಣ ಮಾಡುತ್ತದೆ. ಅಷ್ಟಾದರೂ ಜಾತಿಯ ಸಂಪೂರ್ಣ ವಿನಾಶ ಅಲ್ಲೂ ಸಾಧ್ಯವಾಗಿಲ್ಲ.

ಮೊದಲ ಪ್ರಕಟನೆ: 'ಶ್ರೀಚಕ್ರ' ೧೯೯೮ ಉ.ಕ. ಜಿಲ್ಲಾ ಕುಂಬಾರ ಸಮ್ಮೇಳನ ಸಂಚಿಕೆ.

ಎರಡನೆಯದೆಂದರೆ ಮನುಷ್ಯ ಪ್ರಯತ್ನ. ಒಂದು ವ್ಯವಸ್ಥೆ ಮಾನವನ ಸಾಮಾಜಿಕ ಬದುಕನ್ನು ಕುಬ್ಜಗೊಳಿಸುತ್ತದಾದರೆ ಅದನ್ನು ಮುರಿದು ಮುಂದೆ ಹೋಗಲು ಪ್ರಯತ್ನಿಸ ಬೇಕಾಗುತ್ತವೆ. ಆದರೆ ಇದು ಸುಲಭವಾದುದಲ್ಲ. ಯಾಕೆಂದರೆ ಜಾತಿಯ ಹುಟ್ಟಿನಿಂದಾಗಿ ಯಾರು ಯಾರು ಅದರಿಂದಾಗಿ ಸೌಲಭ್ಯ ಪಡೆದು ಇತರ ವರ್ಗ-ಜಾತಿಯವರನ್ನು ಆಳುತ್ತಾರೊ ಅವರು ರಚಿಸಿದ ಧರ್ಮ, ಶಾಸ್ತ್ರ, ಪುರಾಣ, ಹಾಗೂ ಶಿಕ್ಷಣ ಕ್ರಮದಿಂದ ಉಳಿದವರನ್ನೂ ಮಂಕುಗೊಳಿಸುತ್ತಾರೆ. ಅಂದರೆ ಉಳಿದವರ ಮಿದುಳನ್ನೇ ಆ ರೀತಿ ತರಬೇತುಗೊಳಿಸಿರುತ್ತಾರೆ. ಆರ್ಥಿಕವಾಗಿ, ಸಾಮಾಜಿಕವಾಗಿ ಉನ್ನತ ಸ್ಥಾನ ಪಡೆದವರು ಅದನ್ನು ಸದಾ ಊರ್ಜಿತ ಇಡಲು ಪ್ರಯತ್ನಿಸುತ್ತಾರೆ. ಇಂಥ ಧಾರ್ಮಿಕ ಶಿಕ್ಷಾ ವಿಧಾನ ಎಷ್ಟು ಪ್ರಬಲವಾಗಿರುತ್ತದೆಂಬುದಕ್ಕೆ ಒಂದು ಮನೋರಂಜಕವಾದ ಉದಾಹರಣೆಯನ್ನು ನಿಮ್ಮ ಮುಂದಿಡುತ್ತೇನೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ನಡೆದ ರೈತ ಹೋರಾಟದಲ್ಲಿ ಅಂಕೋಲೆಯ ಶ್ರೀ ಶೇಷಗಿರಿ ಪಿಕಳೆಯವರ ಹೆಸರು ದಿವಂಗತ ದಿನಕರ ದೇಸಾಯಿಯವರಷ್ಟೇ ಪ್ರಸ್ತುತ. ಅವರೊಡನೆ ಮಾತಾಡುವಾಗ ಒಂದು ಸಂಗತಿ ಹೇಳಿದರು. ಅವರು ರೈತ ಚಳುವಳಿಯಲ್ಲಿ ಧುಮುಕಿದಾಗ ರೈತರಲ್ಲಿ ಮುಖ್ಯವಾಗಿ ಉತ್ತರಕನ್ನಡದಲ್ಲಿ ತೀರ ಹಿಂದುಳಿದ ಸಮೂಹವಾದ ಹಾಲಕ್ಕಿ ಒಕ್ಕಲುಗಳಲ್ಲಿ ಹೋಗಿ ಒಡೆಯರಿಗೆ ಗೇಣಿ ಹಾಕಬೇಡಿ ಎಂದರೆ ಅವರು "ಅಯ್ಯೋ ಒಡ್ಯಾ, ಅದು ಹಂಗೆ ಆಗ್ತದೆರಾ! ಅವರ ಅನ್ನದ ಋಣ ಅಲ್ವ ನಾವು ತಿಂಬೂದು" ಎಂದರಂತೆ. ಪಿಕಳೆ ಇದನ್ನು ವಿವರಿಸುತ್ತ ನೋಡಿದಿರಾ, ಮಹಾಭಾರತದಲ್ಲಿ ಕೌರವರದ್ದು ಅನ್ಯಾಯದ ಪಕ್ಷವೇ ಆಗಿದ್ದರೂ ಭೀಷ್ಮ ಹೇಳಿದನಲ್ಲ. ಪುರುಷೊ ಅರ್ಥಸ್ಯದಾಸಃ. ಅನ್ನದ ಋಣಕ್ಕಾಗಿ ಕೌರವರ ಪಕ್ಷವನ್ನು ನಿರ್ವಹಿಸಬೇಕಾಗಿದೆ -ಎಂದು. ಅದೇ ಭೀಷ್ಮ ಈ ಒಕ್ಕಲುಗಳಲ್ಲಿ ಹೇಗೆ ಮೈದಳೆದ ನೋಡಿ! ನನಗೆ ಆಗ ಥಟ್ಟನೆ ಹೊಳೆಯಿತು. ಈ ಪುರಾಣ ಕಾವ್ಯಗಳೆಲ್ಲ ಜನರ ಮನಸ್ಸನ್ನು ಹೇಗೆ ಆಳುತ್ತವೆ. ಮತ್ತು ಅವು ಆಳುವ ವರ್ಗದ ನೀತಿ (ಹಿತಾಸಕ್ತಿ) ಯನ್ನೇ ಹೇಗೆ ಪ್ರತಿಧ್ವನಿಸುತ್ತವೆ ಎಂದು!

ಇಂಥ ಶಿಕ್ಷಣ ಕೇವಲ ಮುಗ್ಧರ ಮನಸ್ಸನ್ನು ಮಾತ್ರ ಆಳುತ್ತವೆಂದಲ್ಲ. ಅತ್ಯಂತ ಧೀಮಂತ ಮಿದುಳು ಸಹ ಇದನ್ನೇ ಒಪ್ಪಿಕೊಂಡು, ಅಪ್ಪಿಕೊಂಡಿರುತ್ತದೆನ್ನುವುದಕ್ಕೆ ಯುಗಪುರುಷರೆಂದು ಹೆಸರಾದ ಮಹಾತ್ಮಾ ಗಾಂಧಿಯವರನ್ನೇ ನೋಡಬಹುದು. ಗಾಂಧಿ ಅವರಿಗೆ ಅಸ್ಪೃಶ್ಯತೆ-ಜಾತಿ ಭಾರತವನ್ನು ವಿಚ್ಛಿದ್ರಗೊಳಿಸಿವೆ ಎಂದು ಗೊತ್ತಿದೆ. ಅದರ ನಿವಾರಣೆಗಾಗಿ ಅವರು ಮನಮುಟ್ಟಿ ಪ್ರಯತ್ನಿಸುತ್ತಿದ್ದಾರೆ ಕೂಡ. ತಮ್ಮ ಆಶ್ರಮದಲ್ಲಿ ಓರ್ವ ಹರಿಜನ ಕನ್ಯೆಯನ್ನು ಸಾಕಿದ್ದರು. ಆದರೂ ಅವರೆನ್ನುವುದು "ನಾನು ವೇದ, ಉಪನಿಷತ್, ಪುರಾಣ ಮತ್ತು ಹಿಂದು ಎನ್ನುವ ಎಲ್ಲ ಶಾಸ್ತ್ರಗಳನ್ನು ನಂಬುತ್ತೇನೆ. ಅವತಾರಗಳಲ್ಲಿ ಪುನರ್ಜನ್ಮದಲ್ಲಿ ನನಗೆ ನಂಬಿಗೆಯಿದೆ. [Caste class and property Relation- B.T. Randive- P. 4; 1982] ಇಷ್ಟೇ ಅಲ್ಲ, ಅವರು ಚಾತುರ್ವರ್ಣ ವೈಜ್ಞಾನಿಕ ಎಂದೂ ಹೇಳುತ್ತಾರೆ. ಹೀಗೆ ನಮ್ಮ ಧರ್ಮ ಶಾಸ್ತ್ರಗಳು ಪ್ರಬಲವಾಗಿರುವಾಗ ನಮ್ಮ ಜಾತಿಪದ್ಧತಿಯನ್ನು ಮುರಿದು ಮುಂದೆ ಹೋಗುವುದು ಸುಲಭವಲ್ಲ.

ಆದರೆ ಜಾಗತಿಕ ಮುನ್ನೋಟದ ಕ್ರಮದಲ್ಲಿಯೂ, ಪ್ರಜಾ ಪ್ರಭುತ್ವದ ತತ್ವಗಳಾದ ಸ್ವಾತಂತ್ರ್ಯ ಸಮಾನತೆ ಮತ್ತು ಸೋದರತೆಯ ನೆಲೆಯಲ್ಲೂ ನಮ್ಮ ಜಾತಿ ಪದ್ಧತಿ ನಮ್ಮ ಬೆಳವಣಿಗೆಗೆ ಮಾರಕವಾಗಿದೆ. ಡಾ. ಬಿ.ಆರ್. ಅಂಬೇಡ್ಕರ "ಈ ಜಾತಿಪದ್ಧತಿ ಸಾಮಾಜಿಕ ಚಟುವಟಿಕೆಯನ್ನೇ ನಿರ್ಬಂಧಿಸಿ ಬಿಟ್ಟಿದೆ. ಅದು ಹಿಂದುಗಳನ್ನು ಒಂದು ಸಮಾಜವನ್ನಾಗಿ ಬೆಸೆಯುವಲ್ಲಿ ಸೋತಿದೆ. [Dr. Ambedkar A critical study by W.N. Kuber. Page 49; 1973] ಎನ್ನುವುದು ನಿಚ್ಚಳವಾಗಿದೆ ಎಂದು ಹೇಳಿದ್ದಾರೆ.

ಉದ್ಯೋಗ ಅಥವಾ ಉತ್ಪಾದನೆಯ ವಿಧಾನಕ್ಕನುಸಾರವಾಗಿಯೇ ಉದ್ಯೋಗದ ಘಟಕ ಉಂಟಾಗಲು ಸಾಧ್ಯ. ಮಾನವ ಮೊದಲು ಬೇಸಾಯವೇ ಮೊದಲಾದ ಯಾವ ಉತ್ಪಾದನೆಯೂ ಇಲ್ಲದಾಗ ಅಂದರೆ ಕೇವಲ ಬೇಟೆಯಾಡಿಯೋ, ಗಡ್ಡೆಗೆಣಸನ್ನು ಅರಸಿಯೋ ತಿನ್ನಬೇಕಾದ ಸಂದರ್ಭದಲ್ಲಿ ಎಲ್ಲರೂ ಗುಂಪು ಜೀವನವನ್ನೇ ಅನುಸರಿಸಬೇಕಿತ್ತು. ಆದರೆ ಮುಂದೆ ಒಕ್ಕಲುತನ ಗೊತ್ತಾದ ಮೇಲೆ ಒಕ್ಕಲುತನಕ್ಕೆ ಅವಲಂಬಿಸಿ ಅನೇಕ ಆಯಗಾರರು ಉಂಟಾದರು. ನೇಗಿಲು ಮಾಡಲು, ಕಬ್ಬಿಣದ ಕೆಲಸ ಮಾಡಲು ಕಮ್ಮಾರ, ಮಡಿಕೆ ಮಾಡಲು (ಇದು ಎಲ್ಲದಕ್ಕಿಂತ ಮೊದಲು ಆರಂಭವಾದ ಉದ್ಯೋಗ) ಕುಂಬಾರ, ತೊಗಲಿನ ಕೆಲಸ ಮಾಡಲು ಚಮ್ಮಾರ ಮುಂತಾದ ಉದ್ಯೋಗಕ್ಕೆ ಸಂಬಂಧಿಸಿದ ಉದ್ಯೋಗ ಪ್ರಾರಂಭವಾಗಿ ಕೆಲವೊಂದು ಜನ ಅದರಲ್ಲಿಯೇ ವೈಶಿಷ್ಟ್ಯವನ್ನು ಪಡೆದರು. ಅಲ್ಲದೆ ಬೇರೆಬೇರೆ ಪ್ರದೇಶದಲ್ಲಿ ಅದೇ ಉದ್ಯೋಗ ಮಾಡುವವರು ತಮ್ಮದೇ ಒಂದು ವರ್ಗ ಜಾತಿ ಎಂದುಕೊಂಡರು. ದನ-ಕರುಗಳನ್ನು ಸಾಕುತ್ತ ಸಂಚಾರಿಯಾಗಿರುವ ಜನ ಗೌಳಿಗರ ಜಾತಿಯಾಯಿತು. ನಾಗರಿಕತೆ ಬೆಳೆದರೂ ಇನ್ನೂ ಕಾಡಿನಲ್ಲೇ ಇರುವ ಇವರು ಕಿರಾತರಾಗಿಯೋ ಇನ್ನಾವುದೊಂದು ಜಾತಿಯಾಗಿಯೋ ಬೆಳೆದರು.

ಇವರ ಒಟ್ಟೊಟ್ಟಿಗೆ ಸಂಭವಿಸಿದ ಸಂಗತಿಯೆಂದರೆ ಚಾತುರ್ವರ್ಣದ ಪ್ರಸ್ತಾಪ. ಆರ್ಯರು ಭಾರತಕ್ಕೆ ಬಂದ ಮೇಲೆ ಇಲ್ಲಿ ಮೊದಲಿದ್ದ ಜನರೊಡನೆ ಸೆಣಸಾಡಬೇಕಾಯಿತು. ಈ ಜನಾಂಗೀಯ ಉದ್ದೇಶ ಕೂಡ ಚಾತುರ್ವರ್ಣದ ಉದ್ಭವದಲ್ಲಿ ಪಾತ್ರವಹಿಸದೇ ಹೋಗಲಿಲ್ಲ. ಪ್ರಾರಂಭದಲ್ಲಿ ಆರ್ಯರು ಕೂಡ ಅನಾಗರಿಕ ಜನಾಂಗವೇ ಆಗಿದ್ದರು. ನಂತರ ಅವರಲ್ಲಿ ಬ್ರಾಹ್ಮಣ, ಕ್ಷತ್ರಿಯ ಪಂಗಡ ಉಂಟಾಯಿತು ನಂತರ ವೈಶ್ಯರು, ಆಮೇಲೆ ತಾವು ಗೆದ್ದ ಜನ ಅಂದರೆ ಇಲ್ಲಿಯ ಮೂಲನಿವಾಸಿಗಳು ಶೂದ್ರರಾದರು. ಶೂದ್ರರೆಂದರೆ ಪೂರ್ಣವಾಗಿ ಕಾರ್ಮಿಕ ವರ್ಗವೆ. ಮತ್ತು ಇವರ ಸಂಖ್ಯೆ ಅಧಿಕವಾಗಿತ್ತು. ಋಗ್ವೇದದ ಮೊದಲ ಕಾಲದಲ್ಲಿ ಸಂಘಜೀವನವಿತ್ತೇ ಹೊರತು ಜಾತಿ ಅಥವಾ ವರ್ಣ ಇದ್ದಿರಲಿಲ್ಲ. ವರ್ಣ ವ್ಯವಸ್ಥೆ ಅಸ್ತಿತ್ವಕ್ಕೆ ಬಂದ ಮೇಲೆ ಕೂಡ ಒಂದು ವರ್ಣದಿಂದ ಇನ್ನೊಂದು ವರ್ಣಕ್ಕೆ ಮಾರ್ಪಾಟು ಹೊಂದಬಹುದಾಗಿತ್ತು. ಆದರೆ ಮುಂದೆ ಹಾಗಾಗಲಿಲ್ಲ. ಚಾತುರ್ವರ್ಣವೇ ಮೂಲವಾಗಿ ಅದಕ್ಕೆ ಪುರುಷ ಸೂಕ್ತದಲ್ಲಿ ಒಂದು ಅಧಿಕೃತ ವ್ಯವಸ್ಥೆ ಸಿಕ್ಕಿತು. ಮುಂದೆ ಈ ನಾಲ್ಕು ವರ್ಣಗಳೇ ನೂರಾರು ಜಾತಿಗಳ ಕಟ್ಟುಪಾಡನ್ನು ನಿರ್ದೇಶಿಸಿದವು. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಅನಾರ್ಯರು ಮಾತ್ರ ಶೂದ್ರ ವರ್ಣಕ್ಕೆ ಸೇರಿರಲಿಲ್ಲ. ಆದರೆ ಅವರ ಸಂಖ್ಯೆ ಅಧಿಕವಾಗೇ

ಇದ್ದು, ಆರ್ಯರ ಸಂಖ್ಯೆ ಕಡಿಮೆ ಪ್ರಮಾಣದಲ್ಲಿತ್ತು. ಎಲ್ಲ ವರ್ಣಗಳಲ್ಲಿ ಶೂದ್ರ ವರ್ಣದಲ್ಲಿಯೇ ಸಾವಿರಾರು ಜಾತಿಗಳಾದವು. ಇವು ಉದ್ಯೋಗಕನುಸರಿಸಿ ತಮ್ಮ ತಮ್ಮ ಜಾತಿಗಳನ್ನು ನಿರ್ಮಾಣಮಾಡಿಕೊಂಡವು. ಮುಂದೆ ಮೇಲುವರ್ಣದವರು ತಮ್ಮ ವರ್ಣದಲ್ಲಿ ಬೇರೆಯವರು ತೂಕ್ಕದಂತೆ ವ್ಯವಸ್ಥೆ ಮಾಡಿಕೊಂಡಾಗ -ಯಾಕೆಂದರೆ ಅದರಿಂದ ಅವರಿಗೆ ಸಾಮಾಜಿಕವಾದ ಲಾಭವಾಗುತ್ತಿದ್ದರಿಂದ-ಉಳಿದವುಗಳೂ ಅದನ್ನೇ ಅನುಸರಿಸಿದವು.

ಅಧಿಕಾರವನ್ನು ಆಸ್ತಿಯನ್ನು ದಕ್ಕಿಸಿಕೊಳ್ಳುವಲ್ಲಿ ಬ್ರಾಹ್ಮಣ ಮತ್ತು ಕ್ಷತ್ರಿಯವರ್ಣ ಪೈಪೋಟಿ ನಡೆಸಿದರಾದರೂ ಅವರು ಬೇಗ ರಾಜಿ ಆದರು. ವೈಶ್ಯರಿಗೂ ಸಂಪತ್ತಿನ ಬೆಳವಣಿಗೆಯಲ್ಲಿ ಮೇಲಿನ ಸ್ಥಾನಮಾನ ಸಿಕ್ಕಿತು. ಆದರೆ ಈ ಮೂರು ವರ್ಣಗಳ ಸುಲಿಗೆಗೆ ಒಳಗಾದವರು ಶೂದ್ರ ವರ್ಣದವರು.

ಚರಿತ್ರೆಯಲ್ಲಿ ಮುಂದೆ ಕ್ಷತ್ರಿಯ ವರ್ಣದವರೇ ಇಲ್ಲವಾದುದು ಮತ್ತು ಅನೇಕ ಶೂದ್ರ ವರ್ಣದವರು ರಾಜರಾದುದನ್ನು ನೋಡುತ್ತೇವೆ. ಆದರೆ ಈ ಶೂದ್ರ ಮನೆತನದವರು ರಾಜರಾದರೂ ಸಹ ಶೂದ್ರರಿಗೆ ಶಿಕ್ಷಣವಾಗಲಿ, ಸಂಪತ್ತಾಗಲಿ ದೊರಕದಂತಾದುದು ಒಂದು ಚಾರಿತ್ರಿಕವಾದ ವ್ಯಂಗ್ಯವೆಂದೇ ಹೇಳಬೇಕು. ಇಲ್ಲಿ ನಾವು ಗಮನಿಸಬೇಕಾದ ಒಂದು ಸಂಗತಿಯೆಂದರೆ ಶೂದ್ರರೇ ಆದರೂ ಅವರು ಮೇಲಿನ ಸ್ಥಾನಕ್ಕೆ ಏರಿದರೆ ಅವರು ತಮ್ಮ ಜನಾಂಗ ತಮ್ಮ ಸ್ಥಾನಕ್ಕೆ ಬರದ ಹಾಗೆ ನೋಡಿಕೊಳ್ಳುತ್ತಿದ್ದರು. ಈ ಶೂದ್ರ ಜನಾಂಗದ ರಾಜರುಗಳ ಕುಲವನ್ನು ಯಾವುದೋ ದೇವರ ಮೂಲಕ್ಕೊ ಸೂರ್ಯ ಚಂದ್ರರಿಗೋ ಹೋಲಿಸಿ, ಬ್ರಾಹ್ಮಣರು ಕಾವ್ಯ ಪುರಾಣಗಳನ್ನು ಹೆಣೆದು ಅವರನ್ನು ಪ್ರತ್ಯೇಕಗೊಳಿಸಿ, ತಾವು ತಮ್ಮ ಪಾಲಿಗೆ ಸಂಪತ್ತನ್ನು ಗಳಿಸಿ ಸುಖವಾಗಿರುತ್ತಿದ್ದರು.

ತಮ್ಮ ಆರ್ಥಿಕ ಆದಾಯವನ್ನೇ ಗಟ್ಟಿಯಾಗಿಸಿಕೊಂಡ ಪ್ರತಿಯೊಂದು ಜಾತಿಯೂ ಈ ಸಾವಿರ ಜಾತಿಗಳು ಉಂಟಾದುದು ಶೂದ್ರ ವರ್ಣದಲ್ಲಿ ಮಾತ್ರ ಎಂಬುದು ಗಮನಾರ್ಹ. ಬೇರೆ ಜಾತಿಯನ್ನು ಪ್ರತ್ಯೇಕವಾಗಿ ಕಂಡಿತು. ಇವುಗಳಲ್ಲಿ ಯಾವ ಯಾವುದು ಆರ್ಥಿಕವಾಗಿ ಕಡಿಮೆ ಗಳಿಕೆಯದೊ ಅದು ಕ್ರಮೇಣ ಕಡಿಮೆ ಜಾತಿಯಾಗುತ್ತಾ ಹೋಯಿತು. ಅತ್ಯಂತ ಕಡಿಮೆ ಗಳಿಕೆಯಿರುವ ಜಾತಿ ಅತ್ಯಂತ ಕೀಳೂ, ಮುಟ್ಟಿಸಿಕೊಳ್ಳಲು ಆಗದ ಅಸ್ಪೃಶ್ಯರಾದರು. ಈ ರೀತಿಯ ಸಾಮಾಜಿಕ ನಡವಳಿಕೆಗೆ ಧರ್ಮಶಾಸ್ತ್ರಗಳ ಅಧಿಕಾರಯುಕ್ತ ಕಟ್ಟು ಪಾಡು ಅನುಕೂಲವನ್ನಷ್ಟೇ ಅಲ್ಲ ನಿರ್ಬಂಧವನ್ನೂ ವಿಧಿಸಿದುವು. ಹೀಗೆ ಜಾತಿಯ ಕಟ್ಟುಪಾಡುಗಳನ್ನು ಕಾದುಕೊಳ್ಳುವುದರಿಂದ ಮೇಲಿನ ಜಾತಿಗೆ ಅತ್ಯಧಿಕ ಅನುಕೂಲತೆ, ಅಧಿಕಾರ, ಸಂಪತ್ತು ಲಭ್ಯವಾಗುತ್ತಿತ್ತು. ಹೀಗೆ "ಜಾತಿ ವಿಭಜನೆ ಮತ್ತು ಬ್ರಾಹ್ಮಣರ ಧೂರ್ತ ಆಲೋಚನೆ ಭಾರತ ದೇಶದ ತುಂಬೆಲ್ಲ ಮೂಢನಂಬಿಕೆಗಳನ್ನು ಹುಟ್ಟಿಸಿದವು ಮಾತ್ರವಲ್ಲ, ವಿದೇಶೀಯರ ಆಕ್ರಮಣವನ್ನೂ ತಡೆಯಲಾಗದ ಹೀನಸ್ಥಿತಿಗೆ ದೇಶವನ್ನು ಇಳಿಸಿತು" ಎಂದು ಡಿ.ಡಿ. ಕೋಸಂಬಿಯವರು ನಿಖರವಾಗಿ ಹೇಳುವ ಮಾತು ಈಗಲಾದರೂ ನಮ್ಮನ್ನು ಎಚ್ಚರಿಸಬೇಕು. [The culture and civilization of Ancient Indian in Historical outline- Page 52]

ಈ ಜಾತಿ ಆಧಾರಿತ ಸುಲಿಗೆಯ ಯಜ್ಞನಕ್ಕೆ ಪ್ರತಿ ಭಟನೆಯೇ ಆಗಲಿಲ್ಲ ಎಂದು ತಿಳಿಯಬೇಕಿಲ್ಲ. ಚರಿತ್ರೆಯಗುಂಟ ಈ ಪಟ್ಟಭದ್ರ ಹಿತಾಸಕ್ತಿಗೆ ಎದುರಾಗಿ ನಿಂತ ವೈಚಾರಿಕ ಚಳುವಳಿಯನ್ನು ನೋಡಬಹುದು. ಚರಿತ್ರೆಯಲ್ಲಿ ಇದು ಧಾರ್ಮಿಕ ಆಂದೋಲನವಾಗಿಯೇ ಪ್ರಕಟವಾಗಿದೆ. ಚರಿತ್ರೆಯಲ್ಲಿ ಮೊದಲ ಬಾರಿಗೆ ಇದಕ್ಕೆ ಪ್ರತಿಭಟನೆ ಬಂದುದು ಗೌತಮ ಬುದ್ಧನಿಂದ. ಬೌದ್ಧ ಧರ್ಮ ಹಿಂದೂ ಧರ್ಮದ ಮೇಲೆ ಮರ್ಮಾಘಾತವನ್ನುಂಟು ಮಾಡಿತು. ಬೌದ್ಧಧರ್ಮ ವೇದಗಳ ಅಪೌರುಷತೆಯನ್ನು ಅಲ್ಲಗಳೆಯಿತು. ಇದಕ್ಕೂ ಮೊದಲು ಮತ್ತು ಇದೇ ಸುಮಾರಿಗೆ ಲೋಕಾಯತರಿಂದ ಪ್ರತಿಭಟನೆ ಬಂತು. ಆದರೆ ಇವೆಲ್ಲ ಒಂದು ಚಳುವಳಿಯಾಗಿ ಹೊರಹೊಮ್ಮಿದ್ದು ಬೌದ್ಧಧರ್ಮದಲ್ಲಿ ಮತ್ತು ಜೈನ ಧರ್ಮದಲ್ಲಿ. ಬೌದ್ಧಧರ್ಮವಂತೂ ದೇವರ ಮತ್ತು ಆತ್ಮದ ಅಸ್ತಿತ್ವವನ್ನೇ ಅಲ್ಲಗಳೆಯಿತು. ಲೋಕಾಯತರಂತೂ "ಯಜ್ಞದಲ್ಲಿ ಬಲಿಯಾಗುವ ಪಶು ಸ್ವರ್ಗ- ಸೇರುವುದಾದರೆ ನಿಮ್ಮ ಅಪ್ಪನನ್ನೇ ಬಲಿಕೊಡಿರಿ. ಅಂದರೆ ಆತ ನೇರ ಸ್ವರ್ಗ ಸೇರುತ್ತಾರೆ ಎಂದರು. ನಂತರ ಉಗ್ರವಾಗಿ ಪ್ರತಿಭಟನೆ ಬಂದದು ರಾಮಾನುಜರಿಂದ ಅವರಿಂದ. ಪ್ರಚಲಿತವಾದ ವಿಶಿಷ್ಟಾದ್ವೈತ ಅಸ್ಪೃಶ್ಯರಿಗೂ ಜನಿವಾರ ತೊಡಿಸಿ ಜಾತಿ ವಿಂಗಡ್ಡನೆ ಯನ್ನು ವಿರೋಧಿಸಿದರು. ಈ ಮಧ್ಯೆ ಬಸವಣ್ಣನವರಿಂದ ಉಂಟಾದ ವೀರಶೈವ ಚಳವಳಿ ಜಾತಿ ಕಟ್ಟಳೆಯನ್ನು ನುಚ್ಚುನೂರು ಮಾಡಿತ್ತು. ಮುಂದೆ ದಾಸ ಪಂಥದವರ ಪ್ರತಿಭಟನೆ ಕೂಡ ಈ ಜಾತಿವ್ಯವಸ್ಥೆಗೆ ಪ್ರತಿರೋಧವಾಗೇ ಬಂದುದು ಆದರೂ ಸಹ ಜಾತಿ ನಿರ್ಮೂಲನ ವಾಗಲಿಲ್ಲ. ಅದಕ್ಕೆ ಸರಂಜಾಮ ರಾಜಕೀಯ ವ್ಯವಸ್ಥೆ ಪೂರಕವಾಗಿಯೇ ಇತ್ತು ಎನ್ನುವುದನ್ನು ಗಮನಿಸಬೇಕು. ಆಮೇಲೆ ಈ ಜಾತಿ ವರ್ಣವವ್ಯಸ್ಥೆಯ ಮೇಲೆ ಬಲವಾದ ಆಘಾತ ಮಾಡಿದ್ದು ಬಂಡವಾಳ ಶಾಹಿ. ಇಂಗ್ಲಿಷರ ಆಗಮನದಿಂದ ಆದ ಬಂಡವಾಳಶಾಹಿಯು ಹಿಂದೂ ವ್ಯವಸ್ಥೆಯ ಬುಡವನ್ನೇ ಅಲ್ಲಾಡಿಸಿತು. ಇಂಗ್ಲಿಷರ ಆಗಮನ, ಬಂಡವಾಳಶಾಹಿಯ ಬೆಳವಣಿಗೆ. ಇಂಗ್ಲಿಷ್ ಶಿಕ್ಷಣದ ಪ್ರಸಾರ ಅದರ ಬಾಲವಿಡಿದು ಬಂದ ವೈಜ್ಞಾನಿಕ ವಿಚಾರ ಭಾರತೀಯರ ಜೀವನದಲ್ಲಿ ಒಂದು ಹೊಸ ಯುಗವನ್ನೇ ತರೆಯಿತು. ಬ್ರಹ್ಮ ಸಮಾಜ, ಆರ್ಯಸಮಾಜ, ರಾಮಕೃಷ್ಣ ಮಿಶನ್ ಎಲ್ಲಾ ಇದರ ಪ್ರತಿಫಲ, ಪ್ರತಿಭಟನೆಯೇ ಆಗಿದೆ.

ಮುಂದೆ ಇದು ಶುದ್ಧ ಜಾತಿ ಹೋರಾಟವೇ ಆಗಿ ಪರಿಣಮಿಸಿತು. ಮಹಾರಾಷ್ಟ್ರದಲ್ಲಿ ಮಹಾತ್ಮಾ ಫುಲೆ ಶೂದ್ರ ಚಳುವಳಿಯನ್ನು ಪ್ರಾರಂಭಿಸಿದರು. ಶೂದ್ರರಿಗೂ ಅಸ್ಪೃಶ್ಯರಿಗೂ ಮತ್ತು ಹೆಣ್ಣುಮಕ್ಕಳಿಗೂ ಶಿಕ್ಷಣ ಒದಗಿಸಲು ಶಾಲೆಗಳನ್ನು ಅವರು ತೆರೆದರು. ಜಾತಿ ಮತ್ತು ಅಸ್ಪೃಶ್ಯತೆಯ ವಿರುದ್ಧ ಪ್ರಬಲವಾದ ಆಂದೋಲನ ಶುರು ಮಾಡಿದರು. ಫುಲೆಯವರು ಪ್ರಾರಂಭಿಸಿದ ಚಳವಳಿಗೆ ಮಾನವೀಯವಾದ ಒಂದು ವಿಶಾಲವಾದ ವಿಸ್ತಾರವಿತ್ತು. ಅವರು ಸತ್ತ ನಂತರ ಅದರ ಸ್ಫೂರ್ತಿ ಸತ್ತು ಅದು ಕೇವಲ ಬ್ರಾಹ್ಮಣ ವಿರೋಧ ಚಳವಳಿಯಾಗಿ ಪರಿಣಮಿಸಿತು. ದಕ್ಷಿಣದಲ್ಲಿ ರಾಮಸ್ವಾಮಿ ಪೆರಿಯಾರ್ ಶುರುಮಾಡಿದ ಉಗ್ರ ಚಳವಳಿ ಮರೆಯಲಾರದ್ದು. ಆದರೂ ಸಹ ನಂತರ ಅದು ಇಡೀ ಜಾತಿವ್ಯವಸ್ಥೆಯ ವಿರುದ್ಧ ಆಗುವ ಬದಲು ಬ್ರಾಹ್ಮಣ ವಿರೋಧಿ ಚಳುವಳಿಯೇ ಆಯಿತು.

ಇಲ್ಲಿಯವರೆಗೂ ಅದಕ್ಕೊಂದು ರಾಜಕೀಯ ಆಯಾಮ ವಿದ್ದಿರಲಿಲ್ಲ. ರಾಜಕೀಯ ಆಂಶಿಕವಾಗಿತ್ತೇ ಹೊರತು ಆರ್ಥಿಕ ಮೂಲ ಬಿಂದು ಅದಾಗಿರಲಿಲ್ಲ. ಆ ಕಾರಣವೊ ಎಂಬಂತೆ ಅವೆಲ್ಲ ತಮ್ಮ ಪೂರ್ಣಗುರಿ ಸೇರಲಾಗಲಿಲ್ಲ. ಅದಕ್ಕೆ ರಾಜಕೀಯದ ಉಗ್ರ ದೀಕ್ಷೆ ಕೊಟ್ಟವರೆಂದರೆ ಡಾ. ಬಿ.ಆರ್. ಅಂಬೇಡ್ಕರ ಅವರು. ಅವರ ಚಳವಳಿ ಚಿರಸ್ಮರಣೀಯ.

ಸ್ವಾತಂತ್ರ್ಯಾನಂತರ ಅದಕ್ಕೊಂದು ರಾಜಕೀಯ ಸ್ವರೂಪ ಕೊಟ್ಟವರು ಸಮಾಜವಾದಿಗಳು. ಅದರಲ್ಲೂ ಲೋಹಿಯಾವಾದಿಗಳು. ಅವರು ಜಾತಿ, ಹಣ ಮತ್ತು ಇಂಗ್ಲಿಷ್ ವಿದ್ಯೆ ಇವುಗಳಲ್ಲಿ ಯಾವುದಾದರೂ ಎರಡು ಲಭ್ಯವಿದ್ದವರು ಭಾರತವನ್ನು ಆಳುತ್ತಾರೆ ಎಂದರು. ಮುಂದುವರಿದು ಭಾರತವನ್ನು ಬ್ರಾಹ್ಮಣ ಮತ್ತು ಬನಿಯಾ ಕೂಟವೇ ಆಳುತ್ತಿದೆ ಎಂದರು. ಇದನ್ನು ಹೋಗಲಾಡಿಸುವಾಗ ಶೂದ್ರವರ್ಗದವರು ಹೆಚ್ಚಿನ ಸಂಖ್ಯೆಯಲ್ಲಿ ಆಡಳಿತದಲ್ಲಿ ಸೇರಬೇಕೆಂದರು. ಇದು ಸಕಾಲಿಕವಾಗಿತ್ತು. ಆ ಕಾರಣದಿಂದ ಭಾರತದಲ್ಲಿ ಹಿಂದುಳಿದ ಜಾತಿಗಳಲ್ಲಿ ಒಗ್ಗಟ್ಟಿನ ಹಾಗೂ ರಾಜಕೀಯ ಪ್ರಜ್ಞೆ ಉಜ್ವಲವಾಗಿ ಮೂಡಿತು.

ಅದೇ ಹೊತ್ತಿಗೆ ಭಾರತದಲ್ಲಿ ಕಮ್ಯುನಿಷ್ಟರ ಚಳುವಳಿ ವರ್ಗ ಹೋರಾಟದ ನೆಲೆಯನ್ನು ವಿಸ್ತಾರಗೊಳಿಸಿತು. ಆದರೂ ಕಮ್ಯುನಿಷ್ಟರ ವರ್ಗಹೋರಾಟಕ್ಕಿಂತ ಜಾತಿ ಆಧಾರಿತ ಹಿಂದುಳಿದ ವರ್ಗಗಳ ಚಳುವಳಿಯೇ ಹೆಚ್ಚು ಪ್ರಚಾರಕ್ಕೆ ಬಂತು. ಇದಕ್ಕೆ ಕಾರಣವೇನು ಎಂದು ಚರ್ಚಿಸಲು ಬೇರೊಂದು ಪ್ರಬಂಧವೇ ಬೇಕಾಗುತ್ತದೆ. ಅದು ಇಲ್ಲಿ ಪ್ರಸ್ತುತವಲ್ಲ. ಆದರೂ ನಾವು ಇಲ್ಲಿ ಮುಖ್ಯವಾಗಿ ಗ್ರಹಿಸಬೇಕಾದುದು ಹಿಂದುಳಿದವರು ಮುಂದುವರಿಯಬೇಕಾದರೆ ಅವರು ರಾಜಕೀಯ ಜಾಗ್ರತಿಗೊಂಡಿರ ಬೇಕು. ಆ ರಾಜಕೀಯದ ಮುಖಾಂತರ ಸಂಪತ್ತಿನ ವಿಕೇಂದ್ರಿಕರಣ ಸಾಧಿಸಬೇಕು. ಮತ್ತು ಇಂಥ ಚಳುವಳಿ ಸಾಧ್ಯವಾಗಬೇಕಾದರೆ ಜಾತಿ-ಜಾತಿಗಳಲ್ಲಿ ಒಗ್ಗಟ್ಟು ಉಂಟಾಗಬೇಕು ಎಂಬುದು.

ಈ ಕಾರಣದಿಂದಾಗಿ ಬಹು ಸಂಖ್ಯಾತರಾದ ಜಾತಿಯ ಶೂದ್ರರು ತಮ್ಮ ತಮ್ಮ ಜಾತಿ ಸಂಘಗಳನ್ನು ಮಾಡಿಕೊಂಡು, ಒಗ್ಗಟ್ಟನ್ನು ಸಾಧಿಸಲು ಯತ್ನಿಸಿದರು. ಕೆಲಅಂಶ ಅದರಿಂದ ಲಾಭವೂ ಆಯಿತು. ಹಿಂದುಳಿದ ವರ್ಗವನ್ನು ಗುರುತಿಸಿ ಅದಕ್ಕೆ ವಿಶೇಷದ್ದಾದ ಸೌಲತ್ತುಗಳನ್ನು ಒದಗಿಸುವುದು ಸರಕಾರದ ಧೋರಣೆಯಾಯಿತು. ಇದು ಅವಶ್ಯಕವೂ ಹೌದು. ಈ ಕ್ರಮದಿಂದ ಶೂದ್ರ ಜಾತಿಗಳಲ್ಲಿ ಒಂದು ರೀತಿಯ ಚಲನಶೀಲತೆ ಒದಗಿತು. ಈಗಾಗಲೇ ಒಗ್ಗಟ್ಟಾಗಿ ಹೋರಾಡಿದ ಜಾತಿ ಕೆಲ ಅಂಶಗಳಲ್ಲಿ ಮುಂದುವರಿಯಿತು. ಇದು ಸ್ವಾಗತಾವೂ ಹೌದು. ಆದರೆ ಇದರಿಂದ ಇಡೀ ಹಿಂದುಳಿದ ವರ್ಗವೇ ಮುಂದುವರಿಯುವಂತಾಗಲಿಲ್ಲ. ತಮ್ಮ ತಮ್ಮ ಜಾತಿಯ ಬಲದಿಂದ ಮತ್ತು ಹೆಸರಿನಿಂದ ಕೆಲಮುಖಂಡರು ಸ್ಥಾನ ಮಾನ ಗಳಿಸಿದರು. ಇದೊಂದು ಚಾರಿತ್ರಿಕ ಪರಿಣಾಮ. ಆದರೆ ಯಾವುದೇ ಜಾತಿಯ ಎಲ್ಲಬಡವರು ಇದರಿಂದ ಪೂರ್ಣ ಲಾಭ ಹೊಂದುವಂತಾಗಲಿಲ್ಲ. ಈಗ ಎರಡು ಸಮಸ್ಯೆಗಳು ಎದುರಾಗುತ್ತವೆ. ಒಂದು, ಪ್ರಬಲ ಜಾತಿಗಳು ತಮ್ಮ ಸ್ಥಾನ ಮಾನ ಗಳಿಸಲು ಸೆಣಸುತ್ತವೆಯೇ ಹೊರತು, ಒಟ್ಟಾರೆಯಾಗಿ ಹಿಂದುಳಿದವರ ಉನ್ನತಿ ಸಾಧಿಸಲು ಸೆಣಸಾಡುವುದಿಲ್ಲ. ಎರಡು, ಅಲ್ಪ ಸಂಖ್ಯೆಯಲ್ಲಿರುವ ಜಾತಿಗಳು ಯಾರ ಲಕ್ಷ್ಯಕ್ಕೂ ಬರದೆ ಹೋಗುತ್ತವೆ. ಅಂದರೆ ಅಧಿಕ ಸಂಖ್ಯೆಯಲ್ಲಿರುವ ಜಾತಿಗಳು ಕಡಿಮೆ ಸಂಖ್ಯೆಯಲ್ಲಿರುವ ಜಾತಿಗಳ ಸುಲಿಗೆಯನ್ನು ಮಾಡುವಲ್ಲಿ ಹಿಂದೆ ಮುಂದೆ

ನೋಡುವುದಿಲ್ಲ. ಅಲ್ಲದೇ ಹೀಗೆ ಬಹು ಸಂಖ್ಯೆ ಹೊಂದಿದ ಜಾತಿಗಳೇ ಆದರೂ ತಮ್ಮಲ್ಲಿರುವ ಬಡವರ ಕುರಿತು ಏನೂ ಮಾಡುವುದಿಲ್ಲ. ಬದಲಾಗಿ ಚುನಾವಣೆಯ ಸಂದರ್ಭಕ್ಕೆ ಬೇಕಾಗಿ ಅವರಲ್ಲಿ ಜಾತಿಯ ಅಂಧಾಭಿಮಾನವನ್ನು ತುಂಬುತ್ತವೆ.

ತಮ್ಮ ಜಾತಿಯ ಪ್ರತ್ಯೇಕತೆಯನ್ನು ಕಾದುಕೊಳ್ಳುವುದು ಈ ರಾಜಕೀಯ ಮುಖಂಡರಿಗೆ ಒಂದು ಅವಶ್ಯಕ ತಂತ್ರವಾಗುತ್ತದೆ. ಅಂದರೆ ಇವರು ಸುಲಿಗೆಯ ಎಲ್ಲ ಸಾಧನಗಳನ್ನು ಮುಂದುವರಿಸುತ್ತಾರೆಯೇ ಹೊರತು ವೈಜ್ಞಾನಿಕ ಮತ್ತು ಮಾನವೀಯ ವಿಧಾನವಲ್ಲ.

ಹಾಗಾದರೆ ನಾವು ಮನುಷ್ಯ ಮನುಷ್ಯರಲ್ಲಿ ಸಮಾನತೆ ಸೋದರತೆಯನ್ನು ಸ್ಥಾಪಿಸಬೇಕೆಂದಾದರೆ, ಸಂಪತ್ತಿನ ವಿಕೇಂದ್ರಿಕರಣ, ಸರ್ವರಿಗೆ ವಿದ್ಯಾಭ್ಯಾಸ ಮತ್ತು ಸರ್ವರಿಗೆ ಉದ್ಯೋಗ ಒದಗಿಸುವ ವ್ಯವಸ್ಥೆಯನ್ನು ಸ್ಥಾಪಿಸಬೇಕು.

ಸರ್ವರಿಗೂ ಶಿಕ್ಷಣ ಸಾಧ್ಯವಾಗುವ ಹಿಂದುಳಿದವರ ಶಿಕ್ಷಣ ಸೌಲಭ್ಯಕ್ಕೆ ವಿಶಿಷ್ಟವಾದ ವ್ಯವಸ್ಥೆಯನ್ನು ಹೊಂದುವ ರಾಜಕೀಯ ನೀತಿ ಸಾಧ್ಯವಾಗಬೇಕು. ಎರಡನೆಯದಾಗಿ ಸಂಪತ್ತು ಸಮಸ್ತರಿಗೆ ಹಂಚಿ ಹೋಗುವಂತೆ ನಿಖರವಾದ ಕಾರ್ಯ ಕ್ರಮ ಹೊಂದಬೇಕು. ಮೂರನೆಯದಾಗಿ ಎಲ್ಲರಿಗೆ ಉದ್ಯೋಗ ಒದಗುವಂತಾಗಬೇಕು. ಆಗ ಈ ಹಿಂದುಳಿದ ಮುಂದುವರಿದ ಎಂಬ ಪಟ್ಟಿಯ ಅವಶ್ಯಕತೆ ಉಂಟಾಗುವುದಿಲ್ಲ. ಜಾತಿ ವಿನಾಶ ಸಾಧ್ಯವಾಗಬೇಕಾದರೆ, ಆರ್ಥಿಕ ಸಮಾನತೆ ಉಂಟಾಗಬೇಕಾದರೆ ಅದರ ಹೋರಾಟ ಎಲ್ಲ ಜಾತಿಯಲ್ಲಿಯ ಬಡವರನ್ನು ಒಂದೆಡೆ ತರುವ ವ್ಯಾಪಕವಾದ ಕಾರ್ಯಕ್ರಮ ಹೊಂದಿರಬೇಕು. ಅಂದರೆ ಜಾತಿ ಹೋರಾಟದ ಸ್ಥಾನವನ್ನು ವರ್ಗ ಹೋರಾಟ ಆಕ್ರಮಿಸಬೇಕು. ವರ್ಗ ಹೋರಾಟದಲ್ಲಿ ಎಲ್ಲ ಜಾತಿಯ ಬಡವರು ತಾವು ಒಂದೆಂಬ ಭಾವನೆಯಿಂದ ಒಂದು ನೆಲೆಗೆ ಬರಬೇಕಾಗುತ್ತದೆ. ಈ ಹೋರಾಟ ಐತಿಹಾಸಿಕದ ಬೆಳವಣಿಗೆಯ ಮೂರ್ತರೂಪವಾಗುತ್ತದೆ. ಚರಿತ್ರೆಯಲ್ಲಿ ನಡೆದ ಜಾತಿ ಹೋರಾಟ ಸಹ ಆಂತರಂಗಿಕವಾಗಿ ವರ್ಗ ಹೋರಾಟವೇ ಆಗಿದೆ. ಆದರೆ ಅದು ಇಲ್ಲಿಯ ತನಕವೂ ವರ್ಗ ಹೋರಾಟದ ಪೂರ್ಣರೂಪವಾಗಿರಲಿಲ್ಲ.

"ಇದುವರೆಗೂ ಆಗಿಹೋಗಿರುವ ಎಲ್ಲ ಸಮಾಜದ ಇತಿಹಾಸವೂ ವರ್ಗ ಹೋರಾಟಗಳ ಇತಿಹಾಸವೇ ಆಗಿದೆ" ಎಂಬ [ಕಮ್ಯುನಿಸ್ಟ್ ಪಾರ್ಟಿ ಪ್ರಣಾಳಿಕೆ ಅನುವಾದ ಕೆ.ಎಲ್. ಗೋಪಾಲ ಕೃಷ್ಣರಾವ್, ಪುಟ. ೪೦, ೧೯೭೮] ಕಾರ್ಲ್ ಮಾರ್ಕ್ಸರ ಮಾತು ಇನ್ನಷ್ಟು ಸ್ಪುಟವಾಗಿದೆ. ಇದನ್ನು ಗಮನಿಸಿದಾಗ ನಾವು ಮಾಡುತ್ತಿರುವ ಜಾತಿ ಹೋರಾಟ -ಯಾಕೆಂದರೆ ಯಾವ ಜಾತಿಯ ವಿರುದ್ಧ ಯಾವ ಜಾತಿ? ಪ್ರತಿಯೊಂದು ಜಾತಿಯೂ ತಾನು ಮೇಲೆರಿದಂತೆ ಕೆಳಜಾತಿಯನ್ನು ತುಳಿಯುತ್ತದೆ- ವರ್ಗ ಹೋರಾಟವಾಗಿ ಪರಿಣಾಮ ಹೊಂದಬೇಕಾದುದು ಇಂದಿನ ಅವಶ್ಯಕತೆ ಯಾಗಿದೆ. ವರ್ಗಹೋರಾಟ ಉಗ್ರವಾದ ರಾಜಕೀಯ ಪ್ರಜ್ಞೆ ಹೊಂದುವಂತಹದು. ಹಾಗೆ ವರ್ಗಪ್ರಜ್ಞೆಯ ಉಜ್ವಲತೆಯನ್ನು ಹೊಂದಿದ ಒಂದು ರಾಜಕೀಯ ಪ್ರಜ್ಞೆ ಅಂದರೆ ವರ್ಗಹೋರಾಟದ ಪ್ರಜ್ಞೆ ಉಗ್ರ ಉಳ್ಳ ರಾಜಕೀಯ ಪಕ್ಷ ಈ ಹೋರಾಟ ನಾಯಕನಾಗಬೇಕಗುತ್ತದೆ. ನಮ್ಮ ಯುವಜನ ಇದನ್ನು ಚಿಂತಿಸಬೇಕು.

*

ಕಮ್ಯೂನಿಸ್ಟರ ಐಕ್ಯ ಕಾರ್ಯಾಚರಣೆ ಇಂದಿನ ಅಗತ್ಯತೆ

ಭಾರತದ ಹಲವು ರಾಜಕೀಯ ಪಕ್ಷಗಳು ಸಂದರ್ಭಸಾಧಕ ಪಕ್ಷಗಳಾಗಿವೆ. ಅಲ್ಲಿ ಸಿದ್ಧಾಂತಕ್ಕಿಂತ ವ್ಯಕ್ತಿಶ್ರೇಷ್ಠತೆಗೆ, ವೈಯಕ್ತಿಕ ಅಥವಾ ಒಂದು ಚಿಕ್ಕ ಗುಂಪಿನ ತೃಪ್ತಿಗೆ ಮೊದಲಸ್ಥಾನ. ಸಿದ್ಧಾಂತ ರಹಿತವಾದ ರಾಜಕಾರಣ ದೇಶದ ಜನತೆಯಲ್ಲಿ ಕೆಲವೊಂದು ಭ್ರಮೆಯನ್ನು ಹುಟ್ಟಿಸುತ್ತದೆ. ಹಲವಾರು ರಾಜಕೀಯ ಖದೀಮರನ್ನು ಸೃಷ್ಟಿಸುತ್ತದೆ. ಮತ್ತು ದೇಶವನ್ನು ಅರಾಜಕತೆ ಕಡೆಗೆ ಅಥವಾ ಸರ್ವಾಧಿಕಾರದ ಕಡೆಗೆ ಒಯ್ಯುತ್ತದೆ. ಆದ್ದರಿಂದ ರಾಜಕೀಯ ಪಕ್ಷಕ್ಕೊಂದು ಗಟ್ಟಿಯಾದ ಸಿದ್ಧಾಂತವಿರಬೇಕು. ಕೇವಲ ಸಿದ್ಧಾಂತವೊಂದಿದ್ದರೆ ಮಾತ್ರ ಸಾಲದು; ಅದಕ್ಕೊಂದು ಶಿಸ್ತು ಇರಬೇಕು. ಈ ಶಿಸ್ತು ಬಹಳ ಮಹತ್ವದ್ದಾಗಿದೆ. ಏಕೆಂದರೆ ಇಂದು ಒಂದು ಪಕ್ಷದಲ್ಲಿದ್ದವರು ನಾಳೆ ಮತ್ತೊಂದು ಪಕ್ಷಕ್ಕೆ ಬದಲಾಯಿಸಿಕೊಂಡುಬಿಡುತ್ತಾರೆ. ರಾತ್ರಿ ಬೆಳಗಾಗುವುದ ರೊಳಗೆ ಯಾರ ಸಿದ್ಧಾಂತವು ಬದಲಾಗುವ ಸಂಭವವಿಲ್ಲ. ಸಿದ್ಧಾಂತ ರಕ್ತಗತವಾಗಬೇಕಾದರೆ ಅದಕ್ಕಾಗಿ ತ್ಯಾಗ, ಪರಿಶ್ರಮ, ಶ್ರದ್ಧೆ ಇರಬೇಕಾಗುತ್ತದೆ. ಆದರೆ ಬೂರ್ಜ್ವಾ ಪಕ್ಷಗಳಲ್ಲಿ ಇಂಥ ತಾಲೀಮು, ಶಿಸ್ತು ಕಾಣುವುದಿಲ್ಲ. ಇಂಥ ಶಿಸ್ತು ಸಿದ್ಧಾಂತವನ್ನು ಹೊಂದಿ ಇಂದಿಗೂ ಇಟ್ಟುಕೊಂಡಿರುವ ಪಕ್ಷವೆಂದರೆ ಕಮ್ಯುನಿಸ್ಟ್ ಪಕ್ಷಗಳೇ. ಅಲ್ಲಿಯೂ ಪೈಪೋಟಿ, ಧಿಮಾಕು, ಬಾಲಬಡಕತನ ಕ್ರಮೇಣ ಉಂಟಾಗಿದೆ ಎಂದು ಕೆಲ ನಿಕಟವರ್ತಿಗಳು ಹೇಳುತ್ತಾರೆ. ಆದರೆ ನಮಗೆ ಅದರ ಖಾತ್ರಿಯಾದ ಮಾಹಿತಿ ಇಲ್ಲ. ಆದ್ದರಿಂದ ನಾನು ಬೇಜವಾಬ್ದಾರಿಯಾಗಿ ಆರೋಪ ಮಾಡಲಾರೆ. ಕೇವಲ ಒಳಗಿನವರಿಗೆ ಹೊರಗಿನವರು ಏನು ಹೇಳುತ್ತಾರೆಂದು ತಿಳಿಯುವುದು ಅವಶ್ಯಕವೆಂದು ಅವರ ಗಮನಕ್ಕೆ ಈ ಮಾತನ್ನು ತರುತ್ತಿದ್ದೇವೆ. ಲೆನಿನ್ ಒಂದು ಕಡೆ ಹೇಳಿದ ಮಾತು: 'ನಮಗೆ ಪಾರ್ಟಿ ಸದಸ್ಯರ ಮಾತು ಹೇಗೊ ಹೊರಗಿನವರ ಮಾತೂ ಅಷ್ಟೇ ಮಹತ್ವದ್ದು' ಎಂದು.

ಕಮ್ಯುನಿಸ್ಟ್ ಪಕ್ಷ ಮಾರ್ಕ್ಸ್ ಲೆನಿನ್ ಸಿದ್ಧಾಂತವನ್ನು ಹೊಂದಿರುವ ಪಕ್ಷ. ಮಾರ್ಕ್ಸ್‌ವಾದ ಒಂದು ವೈಜ್ಞಾನಿಕಸಿದ್ಧಾಂತ. ಅದು ವಿಜ್ಞಾನ ಹೇಗೋ ಹಾಗೆ ಬೆಳೆಯುತ್ತಲೇ ಹೋಗುವಂತಹದು. ರಷ್ಯಾದಲ್ಲಿ ಕಮ್ಯುನಿಸ್ಟ್ ಹಿನ್ನಡೆ ಜಾಗತಿಕ ಪರಿಸ್ಥಿತಿಯ ಮೇಲೆ, ಅದರಲ್ಲೂ ಭಾರತದ ಮೇಲೆ ಬಹಳ ಕೆಟ್ಟ ಪರಿಣಾಮ ಮಾಡಿದೆ. ಕ್ರಾಂತಿಯನ್ನು ಅದು ೧೦೦ ವರ್ಷ ಮುಂದೂಡಿಬಿಟ್ಟಿತೆಂದು ನನ್ನ ಅನಿಸಿಕೆ. ಇವೆಲ್ಲ ವಿವಾದದ ಸಂಗತಿಯಾದರೂ ಬೂರ್ಜ್ವಾಗಳ 'ಕಮ್ಯುನಿಸಂ ಸತ್ತು

ಮೊದಲ ಪ್ರಕಟನೆ: ಕಂಬಾವುಟ ವಿಶೇಷಾಂಕ ೧೬-೮-೧೯೯೨

ಹೋಯಿತು' ಎಂಬ ಕಿರುಚಾಟಕ್ಕೆ ವಿರುದ್ಧವಾಗಿ ಮಾರ್ಕ್ಸ್‌ವಾದ ಮತ್ತೊಮ್ಮೆ ತನ್ನ ವೈಜ್ಞಾನಿಕತೆಯನ್ನು ಸ್ಫುಟಗೊಳಿಸಿಕೊಂಡಿದೆ ಎಂದೇ ನನ್ನ ಅಭಿಪ್ರಾಯ. ಕ್ರಾಂತಿಯಾಗಿ ಕೇವಲ ಎಪ್ಪತ್ತು ವರ್ಷಗಳಲ್ಲಿ ಅತ್ಯಂತ ಹಿಂದುಳಿದ ರಾಷ್ಟ್ರವಾಗಿದ್ದ ರಷ್ಯದಲ್ಲಿ ನೂರಕ್ಕೆ ನೂರರಷ್ಟು ಸಾಕ್ಷರತೆ, ಎರಡು ನೂರಕ್ಕಿಂತ ಹೆಚ್ಚುವರ್ಷದ ಬೂರ್ಜ್ವಾ ಆಡಳಿತ (ಕೈಗಾರಿಕಾ ಪ್ರಗತಿ) ಇರುವ ಅಮೇರಿಕಾದ ವಿಜ್ಞಾನಿಗಳೂ ಬೆರಗು ಪಡುವಷ್ಟು ವೈಜ್ಞಾನಿಕ ಪ್ರಗತಿ, ಲಿಪಿಯೇ ಇಲ್ಲದ ಹಲವು ಭಾಷೆಗಳಲ್ಲಿ ಜಗತ್ತಿಗೆ ಸರಿಗಟ್ಟುವಂಥ ಸಾಹಿತ್ಯ ಸೃಷ್ಟಿಯಾಗುವಂಥ ಪ್ರಗತಿ, ಶ್ರೀಮಂತ ರಾಷ್ಟ್ರಗಳೇ ತತ್ತರಿಸುವಂತ ಫ್ಯಾಸಿಸ್ಟ್ ಆಕ್ರಮಣವನ್ನು ಹಿಮ್ಮೆಟ್ಟಿಸಿದ್ದು, ಬಂಡವಾಳಶಾಹಿ ರಾಷ್ಟ್ರಗಳು ಸಂಪತ್ತನ್ನು ಸುಲಿಯುವ ಹುನ್ನಾರನ್ನು ಬೆಳೆಸಿ ಕೊಳ್ಳುತ್ತಿರುವಾಗ, ನವವಸಾಹತುಶಾಹಿ ಎಂಬಂಥ ನೀತಿಯನ್ನು ಅನುಸರಿಸುತ್ತಿದ್ದಾಗ, ರಷ್ಯಾ ಸಮಾಜವಾದಿ ರಾಷ್ಟ್ರಗಳಿಗೆ ಸಂಪೂರ್ಣ ಸೋದರ ಸಂಬಂಧದಂಥ ಸಹಾಯ ನೀಡಿದ್ದು, ಸಾಮ್ರಾಜ್ಯಶಾಹಿಗಳಿಂದ ರಕ್ಷಣೆಯನ್ನು ಒದಗಿಸಿದ್ದು, ತಮ್ಮ ರಾಷ್ಟ್ರದಲ್ಲಿ ಆರ್ಥಿಕ ಶೋಷಣೆಯನ್ನು ಸಂಪೂರ್ಣವಾಗಿ ನಿವಾರಿಸಿದ್ದು ಇತ್ಯಾದಿ ಸಾಮಾನ್ಯವಾದ ಮಾತೇನೂ ಅಲ್ಲ. ಅದೊಂದು ರೋಮಾಂಚನಕಾರಿ ಮುನ್ನಡೆ! ಇದನ್ನು ಜನರ ಮುಂದೆ ಬರದಂತೆ ಮರೆಯಿಸಲು ಬೂರ್ಜ್ವಾಗಳಹೊಂಚು ತಿರುಬೊಬ್ಬೆಯಾಗಿ ಮೊಳಗುತ್ತಿದೆ. ಇಷ್ಟಾದರೂ ಬಂಡವಾಳಶಾಹಿಗಳ ಧ್ವನಿಗೆ ಅವಕಾಶ ಮಾಡಿಕೊಟ್ಟಿದೆ ಅಲ್ಲಿಯ ವ್ಯವಸ್ಥೆ. ಮಾರ್ಕ್ಸ್ ವಾದದ ಪ್ರಕಾರ ಯಾವವ್ಯವಸ್ಥೆ ಜಡ್ಡುಗಟ್ಟುತ್ತದೆಯೋ ಆ ವ್ಯವಸ್ಥೆ ತನ್ನಒಡಲಲ್ಲೇ ತನ್ನ ನಾಶದ ಬೀಜವನ್ನು ಹೊತ್ತಿರುತ್ತದೆ. ಅಧಿಕಾರಶಾಹಿ, ಅಭಿಮತ ಮರ್ದನ, ಆತ್ಮ ವಿಮರ್ಶೆಯನ್ನು ಹತ್ತಿಕ್ಕಿದ್ದು ಆ ವ್ಯವಸ್ಥೆಯನ್ನು ಸಿಥಿಲಗೊಳಿಸಿತು.

ಸಿದ್ಧಾಂತಕ್ಕೆ ವಿಶ್ಲೇಷಣೆಯ ಕಾವಲು, ಅಂತಃಕರಣ ಮಾನವೀಯತೆ ಸದಾ ಅವಶ್ಯ ಎಂಬುದನ್ನು ಮಾರ್ಕ್ಸ್‌ವಾದ ಮತ್ತೊಮ್ಮೆ ಸ್ಫುಟಪಡಿಸಿತು. ಇದು ಬೂರ್ಜ್ವಾಗಳು ಕಿರುಚಾಡುವಂತೆ ಮಾರ್ಕ್ಸ್‌ವಾದದ ಸೋಲು ಅಲ್ಲ; ಸತ್ಯದ ಸಾಕ್ಷಾತ್ಕಾರ. ಮಾರ್ಕ್ಸ್‌ವಾದದ ಮೂಲ ಆಶಯಕ್ಕೆ ಇದರಿಂದೇನೂ ಭಂಗವಿಲ್ಲ. ಸಿದ್ಧಾಂತದ ಮೌಲ್ಯವನ್ನು ಕಡಿಮೆಮಾಡಿಲ್ಲ. ವಿಮರ್ಶೆಗೆ ಹೊಸ ಅವಕಾಶವನ್ನು ತೆರೆದಿದೆ.

ಮಾರ್ಕ್ಸ್‌ವಾದಕ್ಕೆ.ರಾಷ್ಟ್ರಗಳ ಗಡಿ ಸಲ್ಲ. ಆದ್ದರಿಂದ ಭಾರತದ ಕಮ್ಯುನಿಸ್ಟ್ ಪಕ್ಷಗಳೂ ಅವರ ಉತ್ತರಾಧಿಕಾರಿಗಳೇ. ಹಾಗಲ್ಲದಿದ್ದರೂ ಭಾರತದಲ್ಲಿಯ ಕಮ್ಯುನಿಸ್ಟ್ ಪಕ್ಷಕ್ಕೆ ೬-೭ ದಶಕದ ಉಜ್ವಲವಾದ ಹೋರಾಟದ ಇತಿಹಾಸವಿದೆ. ಭಾರತದಲ್ಲಿ ಕಮ್ಯುನಿಸ್ಟ್ ಮುಂದಾಳುಗಳು ಹೋರಾಟದ ಬಾನಿನಲ್ಲಿ ಉಜ್ವಲ ನಕ್ಷತ್ರಗಳಾಗಿ ಮಿಂಚಿದ್ದಾರೆ. ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷ ಮಾಡಿದ್ದೆಲ್ಲ ಸರಿಎಂಬುದು ವಾದವಲ್ಲ. ಅವುಗಳ ಏರು ಇಳಿಯಲ್ಲೂ ಅದು ತನ್ನದೇ ಆದ ಧೀರ-ಗಂಭೀರ ಚರಿತ್ರೆಯನ್ನು ಹೊಂದಿದೆ. ಆದ್ದರಿಂದಲೇ ಅವು ಇಂದು ಅಂಥ ಘನವಾದ ಚಾರಿತ್ರಿಕ ಕರ್ತವ್ಯವನ್ನು ನೆರವೇರಿಸಲು ಸಿದ್ಧವಾಗಬೇಕಾಗಿದೆ. ಅದಕ್ಕೆ ಭಾರತದ ರಾಜಕೀಯ ಸ್ಥಿತಿ ಹದವಾಗಿದೆ.

ಭಾರತ ಸ್ವಾತಂತ್ರ್ಯ ಪೂರ್ವದ ಮೂರು ದಶಕಗಳ ಅಖಂಡ ಕಾಲ ಮಹಾತ್ಮಾಗಾಂಧೀಜಿ ಭಾರತೀಯ ಕಾಂಗ್ರೆಸ್ಸಿನ ಮುಂದಾಳುಗಳಾಗಿದ್ದರು. ಸ್ವಾತಂತ್ರ್ಯ ಹೋರಾಟದ ಕೊನೆಯ ಕೊಂಡಿ

ಗಾಂಧೀ ಆಗಿದ್ದರು. ಅವರು ತಮ್ಮ ಪರಂಪರೆಯನ್ನೇ ಅತ್ಯಂತ ಉದಾರವಾಗಿ ಮುಂದುವರಿಸಿದರು. ಗಾಂಧೀಜಿಯ ಬಗ್ಗೆ ನಾವು ಎಷ್ಟೇ ಭಿನ್ನಮತ ತಳೆಯಬಹುದಾಗಿದ್ದರೂ ಭಾರತದ ರಾಜಕೀಯ ಸ್ವಾತಂತ್ರ್ಯ ಹೋರಾಟದಲ್ಲಿ ಅವರ ಪಾತ್ರವನ್ನು ಕಡೆಗಣಿಸುವಂತಿಲ್ಲ, ಅಷ್ಟೇ ಅಲ್ಲ ಅದು ಅವರ ಗೌರವವನ್ನು ಹೆಚ್ಚಿಸಿದೆ.

ಗಾಂಧೀವಾದ ಎನ್ನುವುದು ಒಂದು ಸಿದ್ಧಾಂತವಾಗಿರಲಿಲ್ಲ. ಅದೊಂದು ನೀತಿ, ನಡತೆಯಾಗಿತ್ತು. ಅದು ಆದರ್ಶವಾದದ ನೀರು ಕುಡಿದು ಮುನ್ನಡೆಯುತ್ತಿತ್ತು. ಭಾರತದ ಆಗಿನ ಬಂಡವಾಳಶಾಹಿಗಳಿಗೆ ಆದರ್ಶವಾದ ಒಂದು ಮಾಂತ್ರಿಕ ಕಡ್ಡಿಯಾಗಿತ್ತು ಕೂಡ. ಗಾಂಧೀಜಿ ಬಂಡವಾಳಶಾಹಿ ಕ್ರೌರ್ಯದ ಹಲ್ಲುಗಳನ್ನು ತಮ್ಮ ಉದಾರತೆ ಮತ್ತು ಮಾನವೀಯ ಗುಣಗಳಿಂದ ಮೆದುಮಾಡಿದ್ದರು. ಆದರೆ ನೀತಿ-ನಡತೆ ಎಂಬುದು ವಾಸ್ತವತೆಯ ಆಗುಹೋಗುಗಳಿಂದ ರೂಪು ತಳೆಯುತ್ತದೆ, ರೂಪಾಂತರಗೊಳ್ಳುತ್ತದೆ. ಸ್ವಾತಂತ್ರ್ಯನಂತರದ ರಾಜಕಾರಣ ಆದದ್ದು ಹಾಗೆ. ಇಂದು ಅನೇಕ ಸುಧಾರಣೆಗಳಾಗಿವೆ. ಪ್ರಗತಿ ಆಗಿವೆ. ಅದನ್ನು ಅಲ್ಲಗಳೆಯಬೇಕಿಲ್ಲ. ಆದರೆ ಅದರ ಹತ್ತುಪಟ್ಟು ಭ್ರಷ್ಟತೆ ಹರಡಿದೆ. ಜೀವನ ಮೌಲ್ಯ ಎನ್ನುವುದು ಕೈಲಾಗದ ಮನುಷ್ಯರಿಗೆ ಅನಿವಾರ್ಯವಾಗಿದೆಯೇ ಹೊರತು ಒಂದು ಜೀವನಾವಶ್ಯಕ ಅಂಶವೆಂಬ ಮನ್ನಣೆ ಪಡಿದಿಲ್ಲ. ಆದ್ದರಿಂದ ಎಲ್ಲರಲ್ಲೂ ಅತೃಪ್ತಿ. ಗೊಂದಲ, ಅಸಮಾಧಾನ ತುಂಬಿ ತುಳುಕುತ್ತದೆ. ಆದ್ದರಿಂದ ಭ್ರಷ್ಟತೆಯೇ ಜೀವನ ಮಾರ್ಗವಾಗುತ್ತಿದೆ. ಆದರೆ ಒಳಗಡೆ ಅಷ್ಟೇ ಬೇಯುವಿಕೆ ಕೂಡ ಇದೆ.

ಇಂದಿನ ಹಲವು ರಾಜಕೀಯ ಪಕ್ಷಗಳಲ್ಲಿ ಸ್ಥಿರತೆ ಇಲ್ಲ. ಅವು ಯಾರಿಗಾಗಿ ಹುಟ್ಟಿಕೊಳ್ಳುತ್ತದೆ ಎಂಬುದಕ್ಕೆ ನಿಶ್ಚಯವೇ ಇಲ್ಲ. ಅದಕ್ಕೆ ಚಾರಿತ್ರಿಕ-ಒತ್ತಡ ಬೇಕೆಂದೇನೂ ಇಲ್ಲ. ಒಂದುವೇಳೆ ಅವಕ್ಕೆ ಸಿದ್ಧಾಂತ, ಆದರ್ಶದ ಸ್ಪರ್ಶಸಿಕ್ಕರೂ ಅಲ್ಲಿ ವ್ಯಕ್ತಿ ಪ್ರತಿಷ್ಠೆ ಸ್ವಚ್ಛಂದವೇ. ಇವೆಲ್ಲದರಿಂದ ಬೇಸತ್ತ ಜನ ಪರ್ಯಾಯ ತಿಳಿಯದೆ ನಿರುಪಾಯರಾಗಿದ್ದಾರೆ.

ನೆಹರೂ ಅವರ ದೋಷವೇನೇ ಇರಲಿ. ಅವರು ಸಮಾಜವಾದಿ ಪ್ರಿಯರಾಗಿದ್ದರು. ಮತ್ತೆ ಭ್ರಷ್ಟತೆಯಿಂದ ಮುಕ್ತರಾಗಿದ್ದರು. ಅವರಿಗೆ ಬಡವರ ಬಗ್ಗೆ ಕಳವಳಿ ಇತ್ತು. ನಂತರದಲ್ಲಿ ಇಳಿಕೆ ಕ್ರಮದ ಚರಿತ್ರೆ ನಮ್ಮದು. ಈಗಂತೂ ಬಂಡವಾಳಶಾಹಿ ತನ್ನ ಭ್ರಷ್ಟ ಸ್ಪರ್ಶವನ್ನು ಹಳ್ಳಿಯ ಮೂಲೆಗೂ ಚಾಚಿದೆ. ರಷ್ಯಾದ ಹಿನ್ನಡೆಯ ನಂತರ ಅಮೇರಿಕ ತನ್ನ ವಿಷವೃತ್ತವನ್ನು ಭಾರತದಸುತ್ತಲೂ ಹರಡುತ್ತಿದೆ.

ರಾಷ್ಟ್ರದಲ್ಲಿ ಕೋಮು ಪ್ರಚ್ಛನ್ನತೆ ಮಿತಿಮೀರಿದೆ. ಸೆಕ್ಯೂಲರ್ ರಾಷ್ಟ್ರ ಎಂಬ ಪದ ನಗೆಪಾಟಲಿಗೆ ಗುರಿಯಾಗುತ್ತಿದೆ. ಇವೆಲ್ಲ ಬೂರ್ಜ್ವಾ ವ್ಯವಸ್ಥೆಯ, ತತ್ವರಹಿತ ರಾಜಕಾರಣದ ಪರಿಣಾಮವಾಗಿದೆ. ಇಂಥ ಒಂದು ಸಂದರ್ಭದಲ್ಲಿ ಭಾರತದಲ್ಲಿಯ ಕಮ್ಯೂನಿಸ್ಟ ಪಕ್ಷಗಳು ಜನತೆಯನ್ನು ಮುನ್ನಡೆಸುವ ಜವಾಬ್ದಾರಿಯನ್ನು ಹೊರ ಬೇಕು.

ಭಾರತದ ಕಮ್ಯುನಿಸ್ಟ್ ಪಕ್ಷಗಳ ಮೊದಲ ಕರ್ತವ್ಯವೆಂದರೆ ತನ್ನ ಅವಶ್ಯಕತೆಯನ್ನು ಪ್ರಸ್ತುತಪಡಿಸಿಕೊಳ್ಳುವುದು.

ಬಂಡವಾಳಶಾಹಿ, ಅಮೇರಿಕದ ಸಾಮ್ರಾಜ್ಯಶಾಹಿ ಹೇಗೆ ಭಾರತೀಯರನ್ನು ದಿನದಿನಕ್ಕೆ ಆರ್ಥಿಕವಾಗಿ ಮತ್ತು ನೈತಿಕವಾಗಿ ಅಧಃಪತನಕ್ಕೆ ತಳ್ಳುತಿದೆ ಎಂಬುದನ್ನು ಬೀದಿ ಬೀದಿಗೆ ಡಣಾಡಂಗುರವಾಗಿ ಸಾರಬೇಕು. ಹೀಗೆ ಸಾರುವುದಕ್ಕೆ ಅನೇಕ ಮಾಧ್ಯಮಗಳಿವೆ. ತನ್ನದೇ ಆದ ಪತ್ರಿಕೆ, ಎರಡನೆಯದೆಂದರೆ ಸಂಘಟನೆ. ಸಂಘಟನೆ ಪಕ್ಷದ್ದಾಗಿರಬಹುದು. ಪಕ್ಷ ಪರವಾದದ್ದಾಗಿರಬಹುದು. ಕಾರ್ಮಿಕ ಸಂಘಟನೆ ಆಗಬಹುದು. ಅಲ್ಲಿಯ ಸದಸ್ಯರಿಗೆ ಮಾರ್ಕ್ಸ್‌ವಾದದ ಚಾರಿತ್ರಿಕ ಹಿನ್ನೆಲೆಯನ್ನು, ಸಿದ್ಧಾಂತದ ವೈಶಾಲ್ಯತೆಯನ್ನು ಮನಮುಟ್ಟುವಂತೆ ತಿಳಿಸಬೇಕು. ಕಾರ್ಮಿಕರು, ಸರಕಾರಿ ನೌಕರರು ಕೇವಲ ತಮ್ಮ ಸಂಬಳ, ರಜೆ, ಬೋನಸ್‌ಗಳ ಬಗ್ಗೆ ಮಾತ್ರ ಹೋರಾಟ ರೂಪಿಸಿದರೆ ಸಾಲದೆಂದೂ, ಅವರ ಅಂತಿಮವಾದ ಗುರಿ ವ್ಯವಸ್ಥೆಯ ಸಂಪೂರ್ಣ ಬದಲಾವಣೆ ಎಂಬುದನ್ನು ಮನದಟ್ಟು ಮಾಡಬೇಕು ಮತ್ತು ಅಂಥ ಕಾರ್ಮಿಕರ ಮಧ್ಯದಿಂದಲೇ ಮುಂದಾಳುಗಳು ಬೆಳೆದುಬರುವಂತೆ ಅವಕಾಶವನ್ನು ಕಲ್ಪಿಸಬೇಕು.

ಕಮ್ಯುನಿಸ್ಟ್ ಪಕ್ಷಗಳು ತಮ್ಮ ಕಾರ್ಯಕ್ಷೇತ್ರವನ್ನು ಗ್ರಾಮೀಣ ಪ್ರದೇಶದ ಕಡೆ ವಿಸ್ತರಿಸಬೇಕು. ಸಣ್ಣ ರೈತರು ಮತ್ತು ಗ್ರಾಮೀಣ ಪ್ರದೇಶದಲ್ಲಿಯ ಭೂಒಡೆತನದ ಬಗ್ಗೆ ಮಾರ್ಕ್ಸ್‌ವಾದಿ ನೆಲೆಯಲ್ಲಿ ಸ್ಪಷ್ಟವಾದ ನಿರ್ದೇಶನ ತಿಳಿಸಬೇಕು. ಮಾರ್ಕ್ಸ್‌ವಾದ ಸ್ವಂತ ಆಸ್ತಿಯ ಹಕ್ಕನ್ನು ಇಲ್ಲ ವಾಗಿಸುತ್ತದೆ ಎಂಬ ಅಂಶ ಹೇಗೆ ಕೂಲಿಕಾರರಿಗೂ, ಸಣ್ಣ ರೈತರಿಗೂ ಮಾರಕವಲ್ಲ ಎಂಬುದನ್ನು ಮನವರಿಕೆ ಮಾಡಬೇಕು. ಅಷ್ಟು ಮಾತ್ರವಲ್ಲ ಆಸ್ತಿ ಹಕ್ಕಿನ ಕುರಿತು ಕೂಡ ಭಾರತದಲ್ಲಿ ಪುನರ್‌ವಿಮರ್ಶೆ ನಡೆಯಬೇಕು. ಇದಕ್ಕೆ ಕೇವಲ ಸಭೆ ಮೆರವಣಿಗೆ ಭಾಷಣ ಸಾಲದು. ಅವರಿಗೆ ವ್ಯವಸ್ಥಿತ ಶಿಕ್ಷಣ ನೀಡಬೇಕು. ಸಿದ್ಧಾಂತ, ಶಿಸ್ತು, ರಾಜಕಾರಣ, ಧರ್ಮ ಇತ್ಯಾದಿಗಳ ಬಗ್ಗೆ, ಚಾರಿತ್ರಿಕ ಹಿನ್ನೆಲೆಯ ತಿಳಿವಳಿಕೆಯನ್ನು ಹರಡಬೇಕು.

ವಿದ್ಯಾರ್ಥಿ ಸಂಘಟನೆ ಬಲಗೊಳ್ಳುವಂತೆ ಪ್ರಯತ್ನಿಸಬೇಕು. ಇಲ್ಲಿಯೂ ಸೈದ್ಧಾಂತಿಕ ತಿಳಿವಳಿಕೆಗೇ ಮೊದಲ ಸ್ಥಾನ ಇರಬೇಕು. ಆ ಹಿನ್ನೆಲೆಯಲ್ಲೇ ಚಾರಿತ್ರಕ ಶುದ್ಧತೆಗೆ ಪ್ರಾಶಸ್ತ್ಯ ಇರಬೇಕಾದದು ಅಗತ್ಯ. ಸ್ವತಂತ್ರ ವೈಚಾರಿಕತೆ, ಹೋರಾಟದವ್ಯೂಹ ರಚನೆ ಇವುಗಳು ಮುಂದಾಳುವಿನ ಲಕ್ಷಣವಾಗಬೇಕು.

ಕಮ್ಯೂನಿಸ್ಟ್ ಪಕ್ಷಗಳು ಸಾಹಿತಿ ಬುದ್ಧಿ ಜೀವಿಗಳೊಡನೆ ನಿಕಟ ಸಂಬಂಧ ಹೊಂದಿರಬೇಕು. ಸೈದ್ಧಾಂತಿಕ ನಿಖರತೆಯನ್ನು ಹೊಂದಿದ ಕಮ್ಯೂನಿಸ್ಟ್ ಪಕ್ಷಗಳು ಎಲ್ಲಾ ಲೇಖಕರೊಡನೆಯೂ ಸಂಬಂಧ ಸ್ಥಾಪಿಸುವುದು ಸಾಧ್ಯವಿಲ್ಲ. ಆದರೆ ಸ್ವಲ್ಪಮಟ್ಟಿಗೆ ಏರು ಪೇರು ಇದ್ದರೂ ಎಡಪಂಥೀಯ ಲೇಖಕ ಹಾಗೂ ಅಂಥ ಸಂಘಟನೆಯ ಜೊತೆ ಅದರ ಸಂಬಂಧ ಇರಬೇಕು. ಲೇಖಕ ಪಕ್ಷವನ್ನು ಅರಸಿ ಹೋಗುವಂತಾಗದೆ ಪಕ್ಷವೇ ಅಂಥವರನ್ನು ಗುರುತಿಸಿಕೊಳ್ಳುವ ತಂತ್ರ ಅವುಗಳದ್ದಾಗಬೇಕು. ಹಾಗೆ ಗುರುತಿಸಿ, ಸಂಬಂಧ ಬೆಳೆಸಿದಾಗ ಲೇಖಕರಿಗೂ ಒಂದು ಗಟ್ಟಿತನ ಪ್ರಾಪ್ತವಾಗುವಂತೆ ಕಮ್ಯೂನಿಸ್ಟ್ ಸೈದ್ಧಾಂತಿಕತೆ ಕೂಡ ಹೆಚ್ಚು ವಿಸ್ತಾರ-ವಿನ್ಯಾಸ ಪಡೆಯುತ್ತದೆ.

ಸಾಹಿತ್ಯ ಮೇಲ್ ರಚನೆಗೆ ಸೇರಿದ್ದು ಸರಿಯಾಗಿದ್ದರೂ, ಮೇಲ್‌ರಚನೆ ಕೂಡ ಸಮಾಜ ಪರಿವರ್ತನೆಗೆ ಒಂದು ವೇಗ ಅಥವಾ ಸುಗಮತೆಯನ್ನು ಒದಗಿಸುತ್ತದೆ ಎಂಬುದನ್ನು ಅಲ್ಲ ಗಳೆಯಲಾಗದು. ಸಾಹಿತ್ಯ ತನ್ನಿಂದ ತಾನೇ ಬದಲಾವಣೆಯನ್ನು ತರಲಾರದೆಂದರೂ ಅಂಥ ವಾತಾವರಣವನ್ನು ಸೃಷ್ಟಿಸುವಲ್ಲಿ, ಕ್ರಾಂತಿ ಸಂಭವಿಸಿದರೆ ಪ್ರತಿ ಕ್ರಾಂತಿಯನ್ನು ತಡೆಯುವಲ್ಲಿ ತುಂಬ ಉಪಯುಕ್ತವಾಗುವುದು. ಭಾರತದಲ್ಲಿ ಕಾರ್ಮಿಕರು, ಮತ್ತು ರೈತರ ಮಧ್ಯೆ ಮಾರ್ಕ್ಸ್‌ವಾದ ಪ್ರಚಾರಗೊಂಡುದು ಹೋರಾಟದ ಮುಖಾಂತರವೇ ಆದರೂ ವಿದ್ಯಾರ್ಥಿಗಳು, ಮಧ್ಯಮ ವರ್ಗದ ಬುದ್ಧಿಜೀವಿಗಳಲ್ಲಿ ಮಾರ್ಕ್ಸ್‌ವಾದದ ತಿಳಿವಳಿಕೆಯನ್ನು ಹರಡಿರುವುದು ಪುಸ್ತಕಗಳೇ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ನವ ಕರ್ನಾಟಕ ಪ್ರಕಾಶನ ಇದರ ಸಿಂಹ ಪಾಲು ತೆಗೆದುಕೊಳ್ಳುತ್ತದೆ. ಕ್ರಿಯಾ ಪ್ರಕಾಶನ ಕೂಡ ಆದಷ್ಟು ಮಾಡಿದೆ. ಆದರೆ ಈಚೆಗೆ ನವಕರ್ನಾಟಕ ತಮ್ಮ ಪ್ರಕಾಶನ ಚಳವಳಿಯನ್ನು ಮಂದಗೊಳಿಸಿದೆ. ಇದಕ್ಕೆ ಕಾರಣವೇನೇ ಇರಲಿ, ಪುಸ್ತಕ ಪ್ರದರ್ಶನ ಕೂಡ ಹೋರಾಟದ ಒಂದು ಅಂಗವೆಂದೇ ಪರಿಗಣಿಸಬೇಕು.

ಹೀಗೆ ಯಾಕೆ ಹೇಳುತ್ತಿದ್ದೇವೆಂದರೆ ಇಂದಿನ ವೈಜ್ಞಾನಿಕ ಪ್ರಗತಿ ಬಂಡವಾಳಶಾಹಿ ಪ್ರಭುತ್ವಕ್ಕೆ ಆಶ್ಚರ್ಯಕರವಾದ ವಿನಾಶಕ ಶಸ್ತ್ರಾಸ್ತ್ರಗಳನ್ನು ಪತ್ತೇದಾರಿ ಮಾಧ್ಯಮವನ್ನು, ಅಪಾಯಕಾರೀ ಕೇಂದ್ರೀಯ ವ್ಯವಸ್ಥೆಯನ್ನು ಒದಗಿಸಿ ಕೊಟ್ಟಿದೆ. ಅಂದರೆ ಸರಕಾರ ಎಂತಹ ಹೋರಾಟವನ್ನೂ ಹೊಸೆದು ಹಾಕುವ ಸಾಧನಗಳೊಂದಿಗೆ ಸಜ್ಜಾಗೇ ಇದೆ. ಭಾರತದಂಥ ವಿಶಾಲ ಮತ್ತು ವೈವಿಧ್ಯಮಯವಾದ ಪರಿಸರ ಹೊಂದಿರುವ ರಾಷ್ಟ್ರದಲ್ಲಂತೂ ಸಶಸ್ತ್ರ ಕ್ರಾಂತಿ ದೂರದ ಮಾತೇ. ಅದರಲ್ಲು ಭಾರತದ ಸಂಸ್ಕೃತಿ ಬೇರೆ ರೀತಿಯ ಸಂಸ್ಕೃತಿ. ನಾನು ಸಂಸ್ಕೃತಿ ಎಂದು ಕರೆದಿರುವುದು ನಮ್ಮ ಸನಾತನೀ ಅರ್ಥದಲ್ಲಿ ಅಲ್ಲ. ಭಾರತದ ಸ್ವಾತಂತ್ರ್ಯ ಹೋರಾಟ ೧೮೫೭ ನಂತರ ರೂಪಿಸಿಕೊಂಡು, ಬೆಳೆಸಿಕೊಂಡು ಬಂದ ವೈಜ್ಞಾನಿಕ ಬೆಳವಣಿಗೆಯನ್ನು ಗಮನದಲ್ಲಿಟ್ಟು ಕೊಂಡು ಹೇಳಿದ್ದಾಗಿದೆ. ಇಲ್ಲೆಲ್ಲೂ ಮೊದಲು ಹೋರಾಟ ಅನಿವಾರ್ಯವಾದಾಗ್ಲ ಶಾಂತವಾಗಿ ನಡೆದಿದೆ. ಆದ್ದರಿಂದ ನಮ್ಮ ಕಮ್ಯುನಿಸ್ಟ್ ಪಕ್ಷಗಳು ಜನರಿಗೆ ನಮ್ಮ ಹೋರಾಟದ ಬಗ್ಗೆ ತಿಳಿವಳಿಕೆ ಕೊಡಬೇಕು. ಕೇರಳ, ಪಶ್ಚಿಮ ಬಂಗಾಲದಲ್ಲಿ ಬರುವಂತ ಚುನಾವಣಾ ಫಲಿತಾಂಶ ಇಡೀ ಇಂಡಿಯಾದಲ್ಲೇ ಯಾಕೆ ಬರಬಾರದು? ಆದ್ದರಿಂದ ಮಾರ್ಕ್ಸ್‌ವಾದಿ ಶಿಕ್ಷಣ ಶಾಂತ ಅಥವಾ ಕ್ರಾಂತಿಯುತ ಹೋರಾಟಕ್ಕೂ ಉಪಯುಕ್ತವಾದುದು. ಇಲ್ಲಿಯ ಎಲ್ಲ ಜನರೂ ಕಾರ್ಮಿಕರಾಗಿ ಪರಿವರ್ತನೆ ಹೊಂದಲಾರರು. ಆದ್ದರಿಂದ ಕಾರ್ಮಿಕರನ್ನೊಳಗೊಂಡು ಮಧ್ಯಮ ವರ್ಗದವರೆಲ್ಲರ ಅಭಿಮತವನ್ನು ವ್ಯಕ್ತಮಾಡುವ ಮತ ಪೆಟ್ಟಿಗೆ ಮುಖಾಂತರ ಗೆಲುವು ಎಂದರೆ ಶಿಕ್ಷಣದ ಮುಖಾಂತರ ಗೆಲುವು ಎಂದೇ ಅರ್ಥ.

ಔದ್ಯೋಗಿಕತೆಯ ಬಗೆಗೂ ಕಮ್ಯುನಿಸ್ಟರು ಮರು ಆಲೋಚನೆ ಮಾಡಬೇಕಾಗಿದೆ. ಭೂಮಿಯ ಆಕರ ಅಪರಿಮಿತ ಅಲ್ಲ ಎಂಬುದು ಈಗ ಮನದಟ್ಟಾಗಿದೆ. ಹೆಚ್ಚು ಹೆಚ್ಚು ಕೈಗಾರಿಕೆ ಬೆಳೆಯಲೆಂದರೆ ಇದೀಗ ಇಂಡಿಯಾದ ಪರಿಸರ ಅಕ್ಷಯವಲ್ಲ. ಆದ್ದರಿಂದ ಪರಿಸರ ಸಂರಕ್ಷಣೆ, ದೊಡ್ಡ ಕೈಗಾರಿಕತೆಯ ಬಗ್ಗೆ ಮರುಚಿಂತನೆ, ಮರುಮಾಪನೆ ಅವಶ್ಯ. ಯುರೋಪ್ ದೇಶಗಳಂತೆ ಇಲ್ಲಿ ಭೂಮಿ ಜಾಸ್ತಿ ಜನ ಸಂಖ್ಯೆ ಕಡಿಮೆ ಎನ್ನುವಂತಿಲ್ಲ.

ಭಾರತದಲ್ಲಿ ಕಮ್ಯೂನಿಸ್ಟ್ ಪಕ್ಷಗಳು ತಮ್ಮ ಉಜ್ವಲ ಹೋರಾಟದ ಚರಿತ್ರೆ ಹೊಂದಿದ್ದರೂ ಅಸ್ಪೃಶ್ಯರಿಂದ ದೂರವೇ ಇದೆ! ಯಾಕೆ ಹೀಗೆ ಎಂದು ಇವು ಆತ್ಮ ಪರಿಶೀಲನೆ ಮಾಡಿಕೊಳ್ಳಬೇಕು. ಮಾರ್ಕ್ಸ್‌ರ ಪರಿಭಾಷೆಯಲ್ಲೇ ಹೇಳುವುದಾದರೇ ಅಸ್ಪೃಶ್ಯರಿಗಿಂತ ಕೆಳಗಿನ ಶೋಷಿತರು ಯಾರೂ ಇಲ್ಲ. ವರ್ಗ ಹೋರಾಟವನ್ನೇ ಅನ್ವಯಿಸಿದರೂ ಅಸ್ಪೃಶ್ಯರು ಅದರೊಳಗೆ ಬರಬೇಕು ತಾನೆ? ಹಾಗಿದ್ದರೂ ಅವರು ಕಮ್ಯುನಿಸ್ಟರಿಂದ ದೂರ ಇದ್ದುದೇಕೆ? ಜಾತಿ ಹೋರಾಟ ವರ್ಗ ಹೋರಾಟವಲ್ಲ. ಅಸ್ಪೃಶ್ಯರಿಗೆ ಸಂಬಂಧಿಸಿದ ಹೋರಾಟ ಜಾತಿ ಹೋರಾಟ. ಅದು ಮಾರ್ಕ್ಸ್‌ವಾದವಲ್ಲ ಎಂದು ಹೇಳಿದರೆ ಅದು ಮೊಂಡುವಾದವಾಗುತ್ತದೆ. ಅದಕ್ಕಿಂತ ನಮ್ಮ ಕಮ್ಯುನಿಸ್ಟರಿಗೆ ಜಾತಿ ಹೋರಾಟವನ್ನು ವರ್ಗಹೋರಾಟವನ್ನಾಗಿ ಪರಿವರ್ತಿಸುವುದು ಗೊತ್ತಿಲ್ಲ ಅಥವಾ ಮನಸಿಲ್ಲ ಎಂದು ಹೇಳಬೇಕಾಗುತ್ತದೆ. ಇಂದಿಗಂತೂ ಎಲ್ಲಾ ಜಾತಿಗಳಲ್ಲೂ ವರ್ಗಗಳ ನಿರ್ಮಾಣವಾಗಿವೆ. ಭಾರತದ ಜಾತಿ ರಾಜಕೀಯ ಹೋರಾಟದಿಂದ ಪ್ರತಿ ಜಾತಿಯಲ್ಲೂ ಕೆಲವರೇ ಸಂಪತ್ತು ಅಧಿಕಾರವನ್ನು ಲಪಟಾಯಿಸಿದ್ದಾರೆ. (ಇದು ಆಗುವುದೇ ಹಾಗೆ) ಹಾಗಿದ್ದರೂ ದಲಿತರ ಪರ ಹೋರಾಟನನ್ನು ವರ್ಗ ಹೋರಾಟವೆಂದೇ ಗುರುತಿಸಬಹುದಾಗಿದೆ.

ಹಿಂದೆ ಕಾಮ್ರೇಡ್ ಗೋಪಾಲನ್ ಅಂಥವರು ಅಸ್ಪೃಶ್ಯರ ದೇವಾಲಯ ಪ್ರವೇಶ ಚಳುವಳಿಯಲ್ಲೂ ಭಾಗವಹಿಸಿದ್ದರು. ಇಂದಿನ ಕಮ್ಯುನಿಸ್ಟರಿಗೆ ಅಸ್ಪೃಶ್ಯರ ಕಗ್ಗೊಲೆಯಾದಾಗ ಒಂದು ರ್‍ಯಾಲಿಯನ್ನು ತೆಗೆಯುವುದೂ ಯಾಕೆ ಶಕ್ಯವಾಗುವುದಿಲ್ಲ?

ಇಂದಿನ ವ್ಯೂಹ ರಚನೆಯಲ್ಲಿ ಜಾತ್ಯಾತೀತ ಉದಾರವಾದಿ ಬುರ್ಜ್ವಾ ಪಕ್ಷಗಳನ್ನೊಳಗೊಂಡ ಸಂಯುಕ್ತ ರಂಗ ರಚನೆ ಕೂಡ ಅವಶ್ಯಕ. ಆದರೆ ಅಲ್ಲಿ ಕಮ್ಯೂನಿಕೇಶನ್ ಗ್ಯಾಪ್ ಉಂಟಾಗಬಾರದು. ಹಾಗೆ ಆದರೆ ಜನ ಸಂಶಯಿಸುತ್ತಾರೆ. ನನಗೆ ತಿಳಿದ ಮಟ್ಟಿಗೆ ಅಂಥ ಒಂದು ಕಮ್ಯುನಿಕೇಶನ್ ಗ್ಯಾಪ್ ಸದ್ಯದ ರಾಷ್ಟ್ರಪತಿ ಚುನಾವಣೆಯಲ್ಲಿ ಆದಂತೆ ತೋರಿತು. ಜಾತಿಯ ಆದರಲ್ಲೂ ಅಸ್ಪೃಶ್ಯರಿಗೆ ಸಂಬಂಧಿಸಿ ಜಾತಿಯ ಹೆಸರೆತ್ತುವುದೆ ಒಂದು ಅಪರಾಧ ಆಗಬಾರದು. ಅಥವಾ ನಾನೇ ತಪ್ಪಿರಬಹುದು. ಹಾಗಿದ್ದರೆ ಅವರು ನನ್ನನ್ನು ತಿದ್ದಲಿ.

ಸದ್ಯಕ್ಕಂತು ಪರ್ಯಾಯ ಪಕ್ಷವೆಂದರೆ ಕಮ್ಯುನಿಸ್ಟ್ ಪಕ್ಷಗಳೇ. ಹಾಗಿರುವಾಗ ಸಿ.ಪಿ.ಎಂ ಮತ್ತು ಸಿ.ಪಿ.ಐ. ಒಂದಾಗಲಾರವೆ? ಅವುಗಳಲ್ಲಿನ ಸೈದ್ಧಾಂತಿಕ ನಿಲುವು ಒಂದಾಗಬಿಡುತ್ತಿರಲಿಕ್ಕಿಲ್ಲ. ಆದರೂ ಅವು ಸಮಾನ ಕಾರ್ಯಕ್ರಮಗಳ ಅಡಿಯಲ್ಲಿ ಒಂದಾದ ಹೋರಾಟವನ್ನು ನಡೆಸಬೇಕಾದ ಅವಶ್ಯಕತೆಯಂತೂ ಇಂದಿನದಾಗಿದೆ. ಅವು ಸ್ವತಂತ್ರವಾಗೇ ಇದ್ದರೂ ಚುನಾವಣೆ, ಮತ್ತಿತರ ಸಮಾಜವಾದಿ ಪರ ಕಾರ್ಯಕ್ರಮದಲ್ಲಿ ಸಂಯುಕ್ತವಾಗಿ ಜನರೆದುರು ಬರಬೇಕು. ಇದು ಭಾರತದ ಎಡಪಂಥದ ಪ್ರಗತಿಗೆ ತೀರ ಅವಶ್ಯಕ.

*

ದೇಶೀಯತೆಯೆಂಬ ಇಬ್ಬಾಯಿ ಖಡ್ಗ

ದೇಶೀಯತೆ, ಸ್ವದೇಶಿ, ದೇಶೀ ಚಿಂತನೆ ಇತ್ಯಾದಿ ಪದಗಳು ಜನಸಾಮಾನ್ಯರಲ್ಲಿ ಸಮಾನಾರ್ಥವಾಗಿ ಬಳಕೆಯಾಗುತ್ತಿವೆ. ನಮ್ಮ ಸಾಂಸ್ಕೃತಿಕ ಕೇಂದ್ರವೆಂದುಕೊಂಡ ಬೆಂಗಳೂರು, ಮೈಸೂರು, ಧಾರವಾಡ, ಮಂಗಳೂರು ನಗರಗಳಲ್ಲಿ ಮಾತ್ರವಲ್ಲ, ಒಂದು ಚಿಕ್ಕ ಹಳ್ಳಿಯಲ್ಲೂ ದೇಶಿಯ ಬಳಕೆ ಸಾಮಾನ್ಯ. ಎಡ್ವರ್ಟ್ ಸೈಯದ್ ಅವರಿಂದ ಹಿಡಿದು ನಮ್ಮೂರ ಸಾಮಾನ್ಯರವರೆಗೂ ಇದರ ವ್ಯಾಪ್ತಿ; ಆದರೆ ಅಂತರ ಮಾತ್ರ ಅಜಗಜಾಂತರ.

ದೇಶೀ ಚಿಂತನೆ ಎಂಬ ವೈಚಾರಿಕತೆ ತಲೆ ಎತ್ತುವುದು ಎರಡು ಸಂದರ್ಭಗಳಲ್ಲಿ. ಒಂದನೆಯದಾಗಿ ಯಂತ್ರನಾಗರಿಕತೆ, ಬಂಡವಾಳಶಾಹಿ ರಾಜಕೀಯತೆಯಲ್ಲಿ ರೂಪುಗೊಳ್ಳುವ ಏಕಶಿಲ್ಪ ಸಾಂಸ್ಕೃತಿಕ ಯಜಮಾನಿಕೆಯಿಂದಾದ ದೃಷ್ಟಿ. ಅಂತೆ ಸಮಷ್ಟಿಕೂಡ ತನ್ನ ಅನನ್ಯತೆ ಎರವಾಗಬೇಕಾದ ಅನಿವಾರ್ಯತೆ ಮತ್ತು ಆಂತರಿಕ ಒತ್ತಡದಲ್ಲಿ. ಇದು ಬಂಡವಾಳಶಾಹಿ ಮತ್ತು ಯಂತ್ರನಾಗರಿಕತೆಯ ಮುಂಚೂಣಿ ರಾಷ್ಟ್ರಗಳಾದ ಯುರೋಪಿನಲ್ಲಿ ಉಂಟಾಗಿ ಕಾಲು ಶತಮಾನವೇ ಮುಗಿಯಿತು. ಎರಡನೆಯದೆಂದರೆ ವಸಾಹತುಗಳಾಗಿ ಪರಿವರ್ತಿತವಾದ ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಉಂಟಾಗುವ ಆರ್ಥಿಕ ಮತ್ತು ಸಾಂಸ್ಕೃತಿಕ ಅನನ್ಯತೆಯ ಪ್ರಶ್ನೆಯ ಪ್ರಸ್ತುತಿಯಲ್ಲಿ ಯಜಮಾನ ರಾಷ್ಟ್ರವನ್ನು ರಾಜಕೀಯವಾಗಿ ಎದುರಿಸಲು ಸಿದ್ಧಪಡಿಸಿಕೊಳ್ಳುವ ಅನಿವಾರ್ಯತೆಯಲ್ಲಿ. ಅಂಥ ಸಂದರ್ಭ ಭಾರತಕ್ಕೆ ಮೊದಲು ಉಂಟಾದುದು ಬ್ರಿಟಿಷ್ ವಸಾಹತುಶಾಹಿಯನ್ನು ಎದುರಿಸಬೇಕಾದ ಸಂದರ್ಭ. ಅದರ ಪರಿಣಾಮವೇ ನಮ್ಮ ಸ್ವಾತಂತ್ರ್ಯ ಹೋರಾಟ ಇತ್ಯಾದಿ. ನಮ್ಮ ಸಂದರ್ಭದ ಈ ಪರಂಪರೆಯಲ್ಲಿ ಮುಖ್ಯವಾಗಿ ಮೂರು ಮಾದರಿಯನ್ನು ಗುರುತಿಸಬಹುದು. ಇದರಲ್ಲಿ ಒಂದು ಮಾದರಿ ಬಂಕಿಮ್‌ಚಂದ್ರರ 'ಆನಂದಮಠ' ಕಾದಂಬರಿಯಲ್ಲಿದೆ.

ಹಿಂದೂ ಮೂಲಭೂತವಾದಿ ಧೋರಣೆಗೆ ಸ್ವಾತಂತ್ರ್ಯ ಹೋರಾಟದಲ್ಲಿ ಮುಖ್ಯ ಸ್ಥಾನ ಸಿಕ್ಕದೇ ಹೋದರೂ ಚರಿತ್ರೆ ಗುಂಟ ಅದು ಅಂತರ್ಗತವಾಗೇ ಹರಿದು ಬಂದಿದೆ. ತಿಲಕರ ಕಾಲದ ಹೋರಾಟದಲ್ಲಿ ಇದು ಪ್ರಚ್ಛನ್ನ ಎನ್ನಿಸದಿದ್ದರೂ ಪೂರ್ತಿ ಬೇರೆಯೇನೂ ಆಗಿರಲಿಲ್ಲ. ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (೧೮೫೭)ದಲ್ಲಿ ಹೋರಾಡಿ ಮಡಿದ ಯಾವುದೇ

ಮೊದಲ ಪ್ರಕಟನೆ: 'ಜನವಾಹಿನಿ' ಮಂಗಳೂರು ಮತ್ತು ವಿಚಾರ ಸಾಹಿತ್ಯ ೧೯೯೯ ಸಾಹಿತ್ಯ ಅಕಾಡೆಮಿ.

ನಾಯಕ-ನಾಯಕಿಯರು ಮಹಾರಾಷ್ಟ್ರದ ಸ್ವಾತಂತ್ರ್ಯ ಸ್ವಾಭಿಮಾನದ ನೇತಾರ ಆಗುವ ಬದಲು ಛತ್ರಪತಿ ಶಿವಾಜಿಯೇ ಆಗಿರುವುದರ ಹಿಂದೆ ಇದೇ ಮನೋಧರ್ಮವಿದೆ. ಇದಲ್ಲದೇ ಹಿಂದೂ ಧಾರ್ಮಿಕ ಉತ್ಸವಗಳು ಸ್ವಾತಂತ್ರ್ಯ ಹೋರಾಟ ಮಾಧ್ಯಮವೂ ಆಗಿಬಿಟ್ಟಿರುವುದು ಎಷ್ಟು ಅನಿವಾರ್ಯ ಎನಿಸಿದರೂ ಈ ಮಾದರಿಯ ಜೀವಂತಿಕೆಯಂತೂ ಇದ್ದೇ ಇತ್ತು. ಗಾಂಧಿಯನ್ನು ಕೊಂದದ್ದು ಇದೇ ಶಕ್ತಿ. ಇದೇ ಮಾದರಿಯೇ ಮುಂದೆ ರಾಜಕೀಯವಾಗಿ ಪ್ರಬಲ ಅಸ್ತ್ರವಾಯಿತು. ಇಟ್ಟಿಗೆ ಪೂಜೆ, ರಥಯಾತ್ರೆ, ರಾಮಮಂದಿರ ನಿರ್ಮಾಣ ಅಂತಿಮವಾಗಿ ಬಾಬರಿ ಮಸೀದಿ ನಾಶದಲ್ಲಿ ಪರಿಣಾಮಗೊಂಡು ಕೇಂದ್ರ ಸರಕಾರದ ಅಧಿಕಾರ ಹಿಡಿಯಲು ಶಕ್ತವಾಗಿ ತನ್ನ ಜಾಲವನ್ನು ವಿವಿಧ ರೀತಿಯಲ್ಲಿ ಹರಡಲು ಸಾಧ್ಯವಾಗುವಂತಾಗಿದೆ.

ಎರಡನೇ ಮಾದರಿ ರಾಜಾರಾಂ ಮೋಹನರಾಯರ 'ಆಧುನಿಕತೆ'ಗೆ ನೀಡಿದ ಆಹ್ವಾನದ್ದು. ಆ ಕಾಲಕ್ಕೆ ನಿರುಪಯೋಗಿಯಾದ ಸಂಸ್ಕೃತದ ಬದಲು ಇಂಗ್ಲಿಷ್ ಶಿಕ್ಷಣ ಕೊಡಿ ಎಂದು ಅವರು ಒತ್ತಾಯಿಸಿದರು. ಆಧುನಿಕತೆಯ ನೆರಳಿನಲ್ಲಿ ಬ್ರಹ್ಮ ಸಮಾಜ, ಆರ್ಯ ಸಮಾಜ, ರಾಮಕೃಷ್ಣ ಮಠ ಇವುಗಳ ಮುಖಾಂತರ ಸುಧಾರಣಾವಾದಿ ಚಳವಳಿ ಪ್ರಾರಂಭವಾಯಿತು. ಇದೇ ಮುಂದುವರಿಕೆಯಲ್ಲಿ ಮಹಾತ್ಮಾ ಗಾಂಧೀಜಿ, ಮೌಲಾನ ಅಬುಲ್ ಕಲಂ ಆಜಾದ್, ಜವಾಹರಲಾಲ ನೆಹರು ಮತ್ತು ಸುಭಾಶ್ಚಂದ್ರ ಬೋಸ್ ಬರುತ್ತಾರೆ. ಗಾಂಧೀಜಿ ಮತ್ತು ಆಜಾದ್ ಧಾರ್ಮಿಕ ವ್ಯಕ್ತಿಗಳಾಗಿದ್ದರೂ ಮತೀಯವಾದಿ ಗಳಾಗಿರಲಿಲ್ಲ. ಗಾಂಧೀಜಿ ಯಾವುದೇ ಧಾರ್ಮಿಕ ಉತ್ಸವವನ್ನೂ ಮಾಡಿಸಲಿಲ್ಲ. ಆದರೆ ಹಿಂದೂ, ಮುಸ್ಲಿಂ ಕ್ರೈಸ್ತ ಪ್ರಾರ್ಥನೆಯನ್ನು ಸಭೆಯ ಪೂರ್ವದಲ್ಲಿ ಮಾಡಿಸುತ್ತಿದ್ದರು. ಜಾತಿಯನ್ನು ಮನ್ನಿಸಿ ಅಸ್ಪೃಶ್ಯತೆ, ಉದ್ಯೋಗದ ಮತ್ತು ಹುಟ್ಟಿನ ದೃಷ್ಟಿಯಿಂದ ಮೇಲು-ಕೀಳುಗಳನ್ನು ಅಲ್ಲಗಳೆದು, ಅದನ್ನು ಹೋಗಲಾಡಿಸಲು ಪ್ರಯತ್ನಿಸುತ್ತಿದ್ದರು. ಪಾಶ್ಚಾತ್ಯ ಯಂತ್ರಕೈಗಾರಿಕೆಯನ್ನು ಅಲ್ಲಗಳೆದು ಭಾರತದ ಪರಂಪರಾಗತವಾದ ಗುಡಿ ಕೈಗಾರಿಕೆಯನ್ನು ಮಂಡಿಸುತ್ತಿದ್ದರು.

ಮೂರನೆಯ ಮಾದರಿಯಾಗಿ ಇಂಗ್ಲಿಷ್‌ಗೆ ಸ್ವಾಗತ ಸಿಕ್ಕಿದ್ದು ಮಹಾತ್ಮಾ ಜ್ಯೋತಿರಾವ್ ಫುಲೆ ಅವರಿಂದ ಮತ್ತು ಅದು ಡಾ. ಬಿ.ಆರ್. ಅಂಬೇಡ್ಕರ್ ಮುಖಾಂತರ ಮುಂದುವರಿಯಿತು. ಇದು ಶೂದ್ರ ಮತ್ತು ಅಸ್ಪೃಶ್ಯರಿಗೆ ಹೊಸ ಲೋಕ ತೆರೆಯುತ್ತದೆಂಬ ನಂಬಿಕೆಗನುಸಾರವಾಗಿತ್ತು. ಈ ಮಾದರಿಗಳು ಬ್ರಿಟಿಷ್ ವಸಾಹತು ಶಾಹಿಗೆ ಸ್ವಾಗತ ಬಯಸಿದರೂ ತಮ್ಮ ತಮ್ಮ ದೃಷ್ಟಿಯಲ್ಲಿ ಸ್ವದೇಶಿಯನ್ನು ಕಂಡುಕೊಂಡಿದ್ದವು.

ಇಂದು ಮತ್ತೆ ರಾಷ್ಟ್ರದಲ್ಲಿ ದೇಶೀಯತೆ, ಸ್ವದೇಶಿ, ದೇಶಿ ಚಿಂತನೆಯ ಕುರಿತು ರಭಸದಿಂದ ಮಾತು ಆಡಲ್ಪಡುತ್ತದೆ. ಯಾಕೆಂದರೆ ಈಗ ಭಾರತ ಬೇರೆ ತರದ ವಸಾಹತುಶಾಹಿಗೆ ಗುರಿಯಾಗುತ್ತದೆ. ಈ ವಸಾಹತುಶಾಹಿಯ ಯಜಮಾನಿಕೆ ಇಂಗ್ಲೆಂಡಿನಿಂದ ಅಮೆರಿಕಕ್ಕೆ ಸ್ಥಳಾಂತರಗೊಂಡಿದೆ. 'ಮುಕ್ತ ಆರ್ಥಿಕ ನೀತಿ, ಜಾಗತೀಕರಣ ಮತ್ತು ಖಾಸಗೀಕರಣ'ಇದು ಈ ವಸಾಹತುಶಾಹಿಯ ಮಂತ್ರವಾಗಿದೆ. ಹೀಗೆ ಅಮೆರಿಕದ ಕಂಪೆನಿಗಳು ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ತಮ್ಮ ಬಂಡವಾಳವನ್ನು ತೊಡಗಿಸಿ ಅಲ್ಲಿಯ ಲಾಭವನ್ನೆಲ್ಲ ದೋಚುತ್ತಿವೆ.

ಹೊಸದಾಗಿ ಸ್ವತಂತ್ರವಾದ ಈ ದೇಶಗಳು ಸ್ವತಃ ಶಕ್ತಿಶಾಲಿಗಳಾಗದೆ ಅಮೇರಿಕದ ಸಹಾಯ ಯಾಚನೆಗೆ ಸಿದ್ಧವಾಗಿವೆ. ಅಲ್ಲದೆ ಅಮೇರಿಕ ಬೇರೆ ಬೇರೆ ರಾಷ್ಟ್ರಗಳ ಮಧ್ಯೆ ಯುದ್ಧದ ಉದ್ವೇಗ ಹಚ್ಚಿ, ಅವರಿಗೆ ಶಸ್ತ್ರಾಸ್ತ್ರ ಮಾರಾಟ ಮಾಡುತ್ತ ಅವುಗಳನ್ನು ದಿವಾಳಿಯ ಪಾತಾಳಕ್ಕೆ ತಳ್ಳುತ್ತಿದೆ. ಆಗ ಅಮೇರಿಕದ ಶರತ್ತನ್ನು ಒಪ್ಪಿಕೊಂಡು ತೋರಿಕೆಯ ಸ್ವಾತಂತ್ರ್ಯವನ್ನು ಮಾತ್ರ ಇಟ್ಟುಕೊಳ್ಳುವಂತಾಗುತ್ತದೆ. ಆದರೆ ಭಾರತಕ್ಕೆ ಅಂಥ ಸ್ಥಿತಿಯೇನೂ ಇದ್ದಿರಲಿಲ್ಲ. ಆದರೆ ರಾಜಕೀಯದ (ಸರಕಾರದ) ಭ್ರಷ್ಟಾಚಾರದಿಂದಾಗಿ ದೇಶ ಸಮೃದ್ಧವಾಗದಾಗಿದೆ. ಈಗಲೂ ದೇಶ ರಾಜಕೀಯ ಶಕ್ತಿ ಹೊಂದಿದರೆ ತನ್ನದೇ ಆದ ಆರ್ಥಿಕ ಸ್ಥಿತಿಯನ್ನು ಕಟ್ಟಿಕೊಳ್ಳಬಹುದಾಗಿದೆ. ಆದರೆ ಹಾಗಾಗದೇ ದೇಶವನ್ನು ಕೊಳ್ಳೆ ಹೊಡೆಯಲು ಶ್ರೀಮಂತ ರಾಷ್ಟ್ರಗಳಿಗೆ ಬಾಗಿಲು ತೆಗೆದುಕೊಡಲಾಗುತ್ತಿದೆ.

ಹಾಗಾದರೆ ಕೇಂದ್ರ ಸರಕಾರದಲ್ಲಿರುವ ಬಿಜೆಪಿಯ 'ಸ್ವದೇಶಿ' ಚಿಂತನೆಯೆಂದರೆ ಹಿಂದೂ ರಾಷ್ಟ್ರವನ್ನು ಕಟ್ಟುವುದು. ಈ ಅರ್ಥದಲ್ಲಿ ಸ್ವದೇಶಿ ಎಂದರೆ ಧಾರ್ಮಿಕ ಪುನರುತ್ಥಾನವೇ ಆಗಿದೆ. ಅದರ ಸಂಗಡ ಶ್ರೇಣೀಕೃತ ಜಾತಿ ವ್ಯವಸ್ಥೆ ಬರಲೇಬೇಕು ತಾನೆ? ಉಳಿದ ಮಾದರಿ ದೃಷ್ಟಿಕೋನದಲ್ಲಿ ದೇಶಿ ಅಥವಾ ಸ್ವದೇಶಿ ಕಲ್ಪನೆ ಬೇರೆಯಾಗಿದೆ. ಮುಖ್ಯವಾಗಿ ಹಿಂದೂ ರಾಷ್ಟ್ರಕಲ್ಪನೆಯನ್ನು ಅದು ಒಪ್ಪಿಕೊಳ್ಳುವುದಿಲ್ಲ. ಅನೇಕ ಧರ್ಮಗಳಿರುವ ನಮ್ಮ ರಾಷ್ಟ್ರದಲ್ಲಿ ಎಲ್ಲ ಧರ್ಮಗಳಿಗೂ ಸಮಾನ ಸ್ವಾತಂತ್ರ್ಯ ಇರಬೇಕು. ಹಾಗೆಯೇ ಧರ್ಮ ರಾಜಕೀಯದಿಂದ ಪ್ರತ್ಯೇಕವಿರಬೇಕು. ಸಾರ್ವಜನಿಕ ಜೀವನದಲ್ಲಿ ಧರ್ಮವನ್ನು ಬೆರೆಸಬಾರದು. ಅಂದರೆ ರಾಷ್ಟ್ರ ಮತಾತೀತ (ಸೆಕ್ಯುಲರ್) ಆಗಿರಬೇಕು.

ಎರಡನೆಯದಾಗಿ ನಮ್ಮ ಆರ್ಥಿಕ ಸಾರ್ವಭೌಮತ್ವ ಸಾಮ್ರಾಜ್ಯಶಾಹಿ ಶಕ್ತಿಗೆ ಶರಣಾಗಕೂಡದು. ನಮ್ಮಲ್ಲಿ ವಿಪುಲವಾದ ಮಾನವ ಸಂಪನ್ಮೂಲವೂ, ನೈಸರ್ಗಿಕ ಸಂಪನ್ಮೂಲವೂ ಇರುವುದರಿಂದ ಅದರ ಪ್ರಯೋಜನ ನಮ್ಮ ಜನರಿಗೇ ದೊರಕಬೇಕು. ಅಂದರೆ ರಾಷ್ಟ್ರ ಸಂಪದ್ಭರಿತವಾಗಬೇಕಲ್ಲದೆ ದಿವಾಳಿ ಹೊಂದುವ ಮುಕ್ತತೆ ಇಲ್ಲಿ ಸಲ್ಲದು. ಶಿಕ್ಷಣ, ಆರೋಗ್ಯ, ಉದ್ಯೋಗ ಸರಕಾರದ ಜವಾಬ್ದಾರಿಯಾಗಿದ್ದು ಎಲ್ಲವನ್ನೂ ಖಾಸಗೀಕರಣ ಮಾಡುತ್ತ ಹೊಸ ಉದ್ಯೋಗ ಸೃಷ್ಟಿಯ ಶಕ್ತಿಯನ್ನೇ ಸರಕಾರ ಕಳೆದುಕೊಂಡು ದಲಿತರನ್ನು, ಹಿಂದುಳಿದವರನ್ನು ಅಸಹಾಯಕರನ್ನಾಗಿ ಮಾಡಬಾರದು. ಯಂತ್ರಗಾರಿಕೆ ಮತ್ತು ಪರಿಸರ ಸಮತೋಲನದಲ್ಲಿರಬೇಕು. ಹಾಗೆಯೇ ಸ್ಥಳೀಯ ಭಾಷೆ, ಸಂಸ್ಕೃತಿ, ಕಲೆಗಳು ಸಮಾನವಾಗಿ ಬೆಳೆಯಲು ಅವಕಾಶವಿರಬೇಕು ಮತ್ತು ಇಂಗ್ಲಿಷ್ ಯಜಮಾನಿಕೆಯನ್ನು ತೊಲಗಿಸಬೇಕು. ಸಮಾಜವಾದಿ ಚಿಂತನೆಯ ನೆಲೆ ಅದಕ್ಕೆ ಇರಬೇಕು.

ಈ ಎಲ್ಲ ಭೌತಿಕ ಪರಿಣಾಮವಾಗಿಯೇ ದೇಶೀಯ ಚಿಂತನೆ ಇಂದಿನ ಮುಖ್ಯ ಚಿಂತನೆ ಕೂಡ ಆಗಿದೆ. ಸಾಹಿತ್ಯ ಸಂಸ್ಕೃತಿಯಲ್ಲಿ ಈಗ ಇದು ಹೊಸ ವಿಚಾರ. ಇದರ ಹಿನ್ನೆಲೆ ಮೊದಲೇ ಹೇಳುವ ಹಾಗೆ ನಮ್ಮ ಬೇರುಗಳ ಹುಡುಕಾಟ. ಇದರ ಹಿಂದೆ ಅತ್ಯಂತ ಪ್ರಬಲವಾಗಿರುವುದು ಆಧುನಿಕತೆಯ ವಿರೋಧ. ಹಾಗಾದರೆ ಇದಕ್ಕೆ ಪರಿಹಾರವೇನು? ಅದನ್ನು ನಾವು ಹಿಂದಿನ

ಸಂಸ್ಕೃತಿಯಲ್ಲಿ ಹುಡುಕಿ, ಅದನ್ನು ಮತ್ತೆ ಪ್ರತಿಷ್ಠಾಪಿಸಬೇಕು. ನಮ್ಮ ಆರ್ಷೇಯ ಸಂಸ್ಕೃತಿ, ಜಾನಪದ ಸಂಸ್ಕೃತಿ ಸಂಪದ್ಭರಿತ ವಾದುದು. ಒಂದು ರೀತಿಯಿಂದ ಈ ಅಭಿಪ್ರಾಯ ನಮ್ಮ ಸ್ವಾತಂತ್ರ್ಯ ಹೋರಾಟದ ಸಂದರ್ಭ ಪುನರುತ್ಥಾನವಾದಕ್ಕೆ ಸಂವಾದಿಯಾದುದು. ಆದರೆ ಆಗ ಕೇವಲ ಕಳೆದುಹೋದ ಹಿಂದೂ ಧರ್ಮದ ಗತ ವೈಭವಕ್ಕೆ ಸಂಬಂಧಿಸಿದ್ದಾಗಿತ್ತು. ಈಗ ಅದು ಜಾನಪದಕ್ಕೂ ಹರಡಿಕೊಂಡಿದೆ.

ಇಂಗ್ಲಿಷ್‌ನ ಪ್ರಭಾವ ಇಷ್ಟು ಪ್ರಖರವಾಗಿದೆಯಲ್ಲ, ಇಂದು ಇಂಗ್ಲಿಷ್ ಇಲ್ಲದೆ ಯಾವ ಗೌರವ ಜೀವನವೂ ಸಾಧ್ಯವಿಲ್ಲ. ಆದರೆ ಇಂಗ್ಲಿಷ್ ಶೇಕಡ ತೊಂಬತ್ತೊಂಬತ್ತರಷ್ಟು ಉಳ್ಳವರ ಗಳಿಕೆಯಾಗುತ್ತಿದೆ. ಆದ್ದರಿಂದ ಇಂಗ್ಲಿಷ್‌ನ ಯಜಮಾನಿಕೆಯನ್ನು ಎದುರಿಸಬೇಕು. ಅದರ ಸ್ಥಾನದಲ್ಲಿ ದೇಶಿಯನ್ನು ತರಬೇಕು. ಇದೇ ವಿಚಾರ ಮುಂದುವರಿದು ಕವಲೊಡೆದು ಇಂಗ್ಲಿಷ್‌ನ ಎದುರು ಸಂಸ್ಕೃತವೂ ದೇಶಿಯಾಗುತ್ತದೆ. ಹಾಗೆಯೇ ಇತರ ಸಂಸ್ಕೃತಿಗಳ ವಿಚಾರ ಮತ್ತು ಗುಡಿ ಕೈಗಾರಿಕೆಗಳ ಪುನರುತ್ಥಾನ.

ನಮ್ಮಲ್ಲಿಯ ಸಮಾಜ ರಚನೆ ಇತರೆಡೆಗಿಂತ ಬೇರೆ ರೀತಿಯದು. ಯಾಕೆಂದರೆ ಜಗತ್ತಿನ ಉಳಿದ ಕಡೆ ನಮ್ಮಲ್ಲಿಯ ಥರ ಜಾತಿಗೆ ಅನುಸರಿಸಿ ಉದ್ಯೋಗ ಎಂದಿಲ್ಲ. ಆದ್ದರಿಂದ ಅಲ್ಲಿ ಒಂದು ಉದ್ಯೋಗ ಮಾಡುವವರು ಒಂದು ಜಾತಿಯಾಗುವುದಿಲ್ಲ. ಒಂದು ವರ್ಗದವರು ತಂದೆ ಧರ್ಮಗುರು, ತಾಯಿ ಚಮ್ಮಾರನ ಮಗಳು ಆಗಿರುವುದು ಸಹಜವಾಗಿರುತ್ತದೆ. ಆದರೆ ನಮ್ಮಲ್ಲಿ ಕಡಿಮೆ ಹಣ ತರುವ ಉದ್ಯೋಗ ಕಡಿಮೆ ಜಾತಿಯವರದಾಗುತ್ತದೆ. ಸಮಾಜದ ಅತ್ಯಂತ ಕೆಳಸ್ತರದಲ್ಲಿ ಇರುವವರು ದಲಿತರು. ಅವರ ಉದ್ಯೋಗ ಅತ್ಯಂತ ಕಡಿಮೆ ನೈರ್ಮಲ್ಯ ಸಂಬಂಧಿಯಾದುದು. ಆದ್ದರಿಂದ ಅವರು ಮುಟ್ಟಿಸಿಕೊಳ್ಳಲೂ ಅಯೋಗ್ಯರು. ಅಸ್ಪೃಶ್ಯತೆ ಬೇರೆ ದೇಶದ ಗುಲಾಮ ಪದ್ಧತಿಗಿಂತ ಇದು ಹೀನಾಯವಾದುದು. ಹಾಗೆಯೇ ಈ ಶ್ರೇಣೀಕರಣದ ಮೇಲು ತುದಿಯಲ್ಲಿ ಇರುವವರು ಬ್ರಾಹ್ಮಣರು. ಸಾಂಸ್ಕೃತಿಕ ಯಾಜಮಾನ್ಯ ಬ್ರಾಹ್ಮಣ್ಯದ್ದೇ. ಇಂಥ ಸಮಾಜಕ್ಕೆ ಆಧುನಿಕತೆ ಒಂದು ಬೆಳಕಾಯಿತು. ಡಾ. ಬಿ. ಆರ್. ಅಂಬೇಡ್ಕರ್ ಹಳ್ಳಿಯಲ್ಲಿರುವ ತನ್ನ ಜನವನ್ನು ನಗರಕ್ಕೆ ಕರೆದಿದ್ದರ ಹಿಂದಿರುವ ರಹಸ್ಯ ಕೂಡ ಇದು. ಅವರು ಯಂತ್ರನಾಗರಿಕತೆಯನ್ನು ಪ್ರತಿಪಾದಿಸುತ್ತಿದ್ದರು. ಯಾಕೆಂದರೆ ಅದರಿಂದ ದಲಿತರಿಗೆ ಅಸ್ಪೃಶ್ಯತೆಯಿಂದ ಹೀನವೆಂದು ಪರಿಗಣಿಸಲ್ಪಟ್ಟ ಉದ್ಯೋಗದಿಂದ ವಿಮೋಚನೆಯ ಹಾದಿಯಾಗಲೆಂದು. 'ಆಧುನಿಕತೆ'ಯ ವಿರೋಧ ಕ್ರೂರ, ಅಮಾನವೀಯ ಮತ್ತು ಅತ್ಯಂತ ಪ್ರತಿಗಾಮಿ ಆಗಲಿಕ್ಕಿಲ್ಲವೇ? ಹಾಗೆಯೇ ವೈಜ್ಞಾನಿಕತೆಯ ನಿರಾಕರಣೆ ಯಾವ ವರ್ಗದ ಹಿತಾಸಕ್ತಿಗೆ ಅವಕಾಶ ಒದಗಿಸೀತು?

ಇಷ್ಟು ಹೇಳಿದ ಮೇಲೂ 'ದೇಶಿ ಚಿಂತನೆ'ಯ ಗಹನತೆಯನ್ನು ನಿರಾಕರಿಸ ಕೂಡದು ಮತ್ತು ಈ ದೇಶೀಯ ಚಿಂತನೆ ಕೇವಲ ಇಂಗ್ಲಿಷ್‌ಗೆ ವಿರುದ್ಧವಾಗಿ ಮಾತ್ರ ಸದ್ದು ಹೊಡೆದರೆ ಸಾಲದು. ಬದಲಾಗಿ ದೇಶದೊಳಗಿನ ಪಾರಂಪರಿಕ ಯಜಮಾನಿಕೆಯನ್ನು ವಹಿಸಿದ ಸಂಸ್ಕೃತಿಗೂ ಸದ್ದು ಹೊಡೆಯಬೇಕು. ಅದಕ್ಕೆ ಒಂದು ಉದಾಹರಣೆಯನ್ನು ಹೇಳಲಿಚ್ಛಿಸುತ್ತೇನೆ.

ಮಾಸ್ತಿಕರ ಮೂಲಪುರುಷ ಜಾಂಬವಂತ. ಆತನ ಮಗಳು ಮತಂಗ ಕನ್ಯೆ. ಜಾಂಬವ ಆವಳ ಚರ್ಮವನ್ನು ಸುಲಿದು ಕತ್ತರಿಸಿ ಇದು ಹೊಲೆಯರ ಕುಲ, ಇದು ಒಕ್ಕಲಿಗರ ಕುಲ, ಇದು ಬ್ರಾಹ್ಮಣರ ಕುಲ ಹೀಗೆ ಕುಲವಿಂಗಡಣೆ ಮಾಡುತ್ತಾನೆ. ಈ ಕತೆಯನ್ನು ಲಕ್ಷ್ಮೀಪತಿ ಕೋಲಾರರವರು ಮಾಸ್ತೀಕರ ಸಂಸ್ಕೃತಿ (ಉಪಸಂಸ್ಕೃತಿ ಮಾಲೆ ಕರ್ನಾಟಕ ಸಾಹಿತ್ಯ ಅಕಾಡೆಮಿ)ಯಲ್ಲಿ ಸಂಗ್ರಹಿಸಿದ್ದಾರೆ.

ಕುಲವಿಂಗಡಣೆಯನ್ನು ಭಗವದ್ಗೀತೆಯಲ್ಲಿಯ ಕೃಷ್ಣನ ರೀತಿಗೆ ಹೋಲಿಸಿದಾಗ ಇದು ಎಂಥ ಪ್ರಗತಿಪರ ಎಂಬುದು ಅರಿವಿಗೆ ಬರುತ್ತದೆ. ಇಲ್ಲಿ ಜಾತಿಯ ಮೇಲು, ಕೀಳುಗಳ ಕೆಟ್ಟ ರಾಜಕೀಯದ ಕುರುಹೂ ಇರುವುದಿಲ್ಲ. ಇಂಥವುಗಳ ಹುಡುಕಾಟ ಮತ್ತು ಪ್ರಸ್ತುತತೆ ಮಹತ್ವದ್ದು. ಹಾಗಾದರೂ ಅದಕ್ಕೆ ಆಧುನಿಕತೆಯ ಬೆಂಬಲವಿಲ್ಲದಿದ್ದರೆ ಅದು ಸ್ಥಾಪಿತವಾದೀತೆ ಎಂಬುದು ವಿಚಾರಮಾಡಬೇಕಾದ ಸಂಗತಿ.

ಅದೇನೇ ಇದ್ದರೂ ದೇಶೀ ಚಿಂತನೆಯ ಪರಿಕಲ್ಪನೆ ಸೂಕ್ಷ್ಮವಾದುದು. ಆದರೆ ಅದು ಇಬ್ಬಾಯಿಯ ಖಡ್ಗವಾಗಿದೆ. ಯಾವ ಕಡೆ ಬೀಸಿದರೂ ಕೊರಳು ಹಾರುವ (ಕೆಳಜಾತಿ-ವರ್ಗಗಳ) ಸಂಭವವಿದೆ ಎಂಬುದು ನೆನಪಿಲ್ಲಿರಬೇಕಾದುದು. ಆದರೆ ಸದ್ಯದ ಮಟ್ಟಿಗಂತೂ ಕನ್ನಡ ಸಾಹಿತ್ಯಕ ಚಿಂತನೆಯಲ್ಲಿ ದೇಶೀ ಚಿಂತನೆ ಜಾಗೃತವಾಗಿದ್ದು ಪ್ರತಿಗಾಮಿಯಾಗಿಲ್ಲದಿರುವುದು ವೈಶಿಷ್ಟ್ಯಪೂರ್ಣವಾಗಿದೆ.

*

ಧರ್ಮ ಮತ್ತು ನಡವಳಿಕೆ

ಪ್ರತಿಯೋರ್ವ ವ್ಯಕ್ತಿಯ ಮನಸ್ಸಿನ ಮೇಲೆ ಪ್ರಭಾವ ಬೀರುವುದರಲ್ಲಿ ಮತ್ತು ಮನಸ್ಸನ್ನು ಉದ್ವೇಗಗೊಳಿಸುವಲ್ಲಿ ಧರ್ಮದ ಶಕ್ತಿ ಹೆಚ್ಚಿನದಾಗಿದೆ. ಅಂದರೆ ಅದು ನಿಜಸ್ಥಿತಿಯಾಗೇ ಇರುವಂಥ ಅಚಲ ಅಂಶ ಎಂದೇನೂ ಅಲ್ಲ. ಆದರೆ ಇಂದಿನ ತನಕವೂ ಜನ ಸಾಮಾನ್ಯರ ಮೇಲೆ ಅಂಥ ಪ್ರಭಾವವನ್ನು ಧರ್ಮ ಇಟ್ಟುಕೊಂಡಿದೆ. ಹಾಗೆ ಧರ್ಮಕ್ಕೆ ಯಾವ ಅನುಮಾನವಿಲ್ಲದ, ಯಾವ ವಿವೇಚನೆ ವಿಶ್ಲೇಷಣೆ ಇಲ್ಲದೆ ಭಕ್ತಿ ಮೌಢ್ಯದಿಂದ ಜನಸಾಮಾನ್ಯರು ತಲೆಕೊಟ್ಟಿರುವುದರಿಂದಲೇ ಇಂದಿನ ತನಕವೂ ಪುರೋಹಿತಶಾಹಿ ತನ್ನ ಶೋಷಣೆಯನ್ನು ನಿರಾತಂಕವಾಗಿ, ಬಹಳ ವೇಳೆ ಅಟ್ಟಹಾಸದಿಂದ ನಡೆಸುತ್ತ ಬಂದಿದೆ. ಹಾಗಿದ್ದರೆ ಈ ಧರ್ಮದ ಇಂಥ ಅಟ್ಟಹಾಸದ ಮರ್ಮ ಏನು? ಧರ್ಮವನ್ನು ಅನುಸರಿಸುವುದಾದರೆ ಯಾವ ರೀತಿಯಲ್ಲಿ ಎಂಬ ವಿವೇಚನೆಯನ್ನು ಮಾಡಿಕೊಳ್ಳಬೇಕಾದ ಕಾಲ ಈಗ ಪ್ರಾಪ್ತವಾಗಿದೆ.

ಧರ್ಮ ಎಂದರೇನು ಎಂದು ಪಂಡಿತರೊಡನೆ ಪ್ರಶ್ನೆ ಇಟ್ಟರೆ ಅದನ್ನು ನೂರಾರು ಪುಟಗಳಷ್ಟು ವ್ಯಾಖ್ಯಾನಕ್ಕೆ ಒಳಪಡಿಸಬಹುದು. ಅಂಥ ಸಾಮರ್ಥ್ಯ ಅಸಾಧ್ಯವೇನೂ ಅಲ್ಲ. ಆದರೆ ಧರ್ಮದ ಅರ್ಥವನ್ನು ಹುಡುಕುವಲ್ಲಿ ನನ್ನದು ಶಬ್ದೋತ್ಪತ್ತಿ ದಾರಿಯಲ್ಲ. ಯಾಕೆಂದರೆ ಧರ್ಮ ಎನ್ನುವುದು ಆಚರಣೆಯಲ್ಲಿ ಮಾತು, ಕೃತಿ, ಹೃದಯವಂತಿಕೆ ಮುಂತಾದವುಗಳಲ್ಲಿ ಸಾಕ್ಷಾತ್ಕಾರವಾಗ ಬೇಕಾದುದು. ನೋಡಿ, ಹಿರಿಯರ ಮಾತನ್ನೇ, ಸತ್ಯಂವದ, ಧರ್ಮಂಚರ; ಧರ್ಮವನ್ನು ನಡೆ ಅಥವಾ ನಡೆಸು, ಆದ್ದರಿಂದ ಧರ್ಮ ಆಚರಣೆಯಲ್ಲಿ ಗೋಚರಿಸಬೇಕು ಎನ್ನುವುದು ಮುಖ್ಯ. ಅಂದರೆ ಅದರ ಅಂತಿಮ ಸಾಕ್ಷಿ ಆಚರಣೆಯೇ ಆಗಿದೆ.

ಧರ್ಮದ ಒಡಲಾಳ ಹೇಗಿರಬೇಕೆಂಬ ಬಗ್ಗೆ ಕೆಲ ಪ್ರಮುಖ ತತ್ವಜ್ಞಾನಿಗಳ ಅಂಬೋಣವನ್ನು ನೋಡೋಣ.

೧. "ಭಾರತೀಯ ತತ್ವದ ಇತಿಹಾಸದಲ್ಲಿ 'ಧರ್ಮ' ಎನ್ನುವ ಪದ ಬಹಳ ಮಹತ್ವವನ್ನು ಪಡೆದಿದೆ. ಆದರೆ ದುರ್ದೈವವೆಂಬಂತೆ ಅದರ ನಿರೂಪಣೆಯನ್ನು ಕೊಡುವುದು ಸುಲಭ ಸಾಧ್ಯವಲ್ಲ. ಪದಶಃ ಯಾವುದು ಧಾರಣ ಮಾಡುವುದೋ ಅದು ಎಂದು ಅರ್ಥವಾಗುತ್ತದೆ. ಅದೇ ಧರ್ಮ. ಎಲ್ಲ ರೀತಿಯ ಸಾಮಾಜಿಕ ಅಥವಾ ನೈತಿಕ ಸುವ್ಯವಸ್ಥೆಗೂ ಅದೇ

ವಿಚಾರ ಸಾಹಿತ್ಯ ೧೯೯೭, ಸಾಹಿತ್ಯ ಅಕಾಡೆಮಿ

ಆಧಾರವೆಂದು ಸೂಚನೆ ಬರುತ್ತದೆ." (ಭಾರತೀಯ ತತ್ವಶಾಸ್ತ್ರದ ಮೂಲಾಂಶಗಳು ಎಂ. ಹಿರಿಯಣ್ಣ, ೧೯೩೪, ಅನು ಡಾ. ಕೆ.ಬಿ. ರಾಮಕೃಷ್ಣರಾವ್, ೧೯೭೧).

೨. "ಎಲ್ಲ ಧರ್ಮಗಳೂ ನಮಗೆ ಆಧ್ಯಾತ್ಮ ಪ್ರಕಾಶವನ್ನು ಪಡೆಯಲು ಸಹಾಯ ಮಾಡುತ್ತವೆ. ಬೇರೆ ಬೇರೆ ಹಾದಿಗಳು ನಮ್ಮ ಮುಂದೆ ಕವಲೊಡೆದು ಹೋಗುವಂತೆ ಕಾಣುವುದರಿಂದ ಅವೆಲ್ಲ ಬೇರೆ ಬೇರೆ ಗುರಿಗಳ ಕಡೆಗೆ ಹೋಗುತ್ತವೆಂದು ಸಿದ್ಧವಾಗುವುದಿಲ್ಲ, ಕೆಲವು ಗಜಗಳೋ ಮೈಲುಗಳೋ ಅಡ್ಡದಾರಿ ಹಿಡಿದ ಮೇಲೆ ಅವು ಮತ್ತೆ ಒಂದುಗೂಡಿ ಪರಿಪೂರ್ಣದಡೆಗೆ ಒಯ್ಯುವ ಒಂದೇ ಘನವಾದ ರಾಜಮಾರ್ಗವಾಗಬಹುದು" (ಪ್ರಾಚ್ಯ ಮತ್ತು ಪಾಶ್ಚಾತ್ಯ ಸಂಸ್ಕೃತಿ ಡಾ. ಎಸ್. ರಾಧಾಕೃಷ್ಣನ್. ಅನು: ಪ್ರೊ. ಎಸ್.ಎಂ. ನಿಶಂ ಮತ್ತು ಎನ್.ಎಸ್. ಅನಂತರಂಗಾಚಾರ್, ೧೯೭೧, ೫೪)

"ಧರ್ಮ ಅನ್ನುವ ಮಾತಿಗೆ ನನ್ನ ಅರ್ಥ ಏನು?" ಎಂದು ಕೇಳಿದ ನಿಮ್ಮ ಮೊದಲ ಪ್ರಶ್ನೆಗೆ ನನ್ನ ಉತ್ತರ ಇದು. ಅನಂತವೂ ಅಪಾರವೂ ಆದ ವಿಶ್ವದೊಡನೆ ಅಥವ ಅದರ ಮೂಲ ಹಾಗೂ ಅಧಿಕರಣಗಳ ಬಗ್ಗೆ ಕಲ್ಪಿಸಿಕೊಳ್ಳುವ ಸಂಬಂಧವೇ ಧರ್ಮ.

"ತನ್ನ ಸುತ್ತಣ ವಿಶ್ವದೊಡನೆ ಕಲ್ಪಿಸಿಕೊಳ್ಳುವ ಸಂಬಂಧವೇ ಧರ್ಮವಾಗಿದ್ದರೆ ನೀತಿ ಎನ್ನುವುದು ಮನುಷ್ಯನು ವಿಶ್ವದೊಡನೆ ಯಾವ ಸಂಬಂಧವನ್ನು ಹೊಂದಿರುತ್ತಾರೆ ಅದಕ್ಕೆ ಅನುಗುಣವಾಗಿ ನಡೆಯುವ ಅದರ ಕ್ರಿಯೆಗಳ ಸೂಚಿ ಹಾಗೂ ಸ್ಪಷ್ಟೀಕರಣ" (ಟಾಲ್‌ಸ್ಟಾಯ್ ವಿಚಾರಧಾರೆ ವಿವಿಧ ಲೇಖಕರು ೧೯೭೩-೨೧)

ಈ ಹಿನ್ನೆಲೆಯಲ್ಲಿ ನಮ್ಮ ಮುಂದಿರುವ ಕೆಲವು ಮತ ಧರ್ಮಗಳನ್ನು ಗಮನಿಸುವ.

ಕ್ರಿಶ್ಚನ್ ಧರ್ಮದ ಮೂಲ ಗುರು ಮಹಾತ್ಮನಾದ ಏಸೂ ಕ್ರಿಸ್ತ. ರೋಮನ್ ಸಾಮ್ರಾಜ್ಯದಲ್ಲಿ ಪುರೋಹಿತ ಶಾಹಿಗಳು ಧರ್ಮ-ದೇವರ ಹೆಸರಿನಲ್ಲಿ ಬಡ ಜನರನ್ನು ಮೌಢ್ಯದ ಮುಖಾಂತರ ಶೋಷಣೆಗೆ ಒಳಗಾಗಿಸಿದ್ದರು. ಅವರ ಜೊತೆ ಅಲ್ಲಿಯ ಆಳರಸರು ಒಪ್ಪಂದ ಮಾಡಿಕೊಂಡಿದ್ದರು. ಜಗತ್ತಿನ ಯಾವ ಚರಿತ್ರೆಯನ್ನು ನೋಡಿದರೂ ಅರಸರು ಮತ್ತು ಪುರೋಹಿತರು ಒಂದಾಗಿರುವುದು ಕಂಡು ಬರುತ್ತದೆ. ಭಾರತದಲ್ಲಿ ಇದು ಬ್ರಾಹ್ಮಣ ಮತ್ತು ಕ್ಷತ್ರಿಯರ ತಂಡವಾಗಿತ್ತು. ಇವರ ಸಂಖ್ಯೆ ಅಲ್ಪವೆ. ಆದರೆ ಇವರು ಬಹು ಸಂಖ್ಯಾತ ಪ್ರಜೆಗಳ ಮೇಲೆ ಅಧಿಕಾರ ನಡೆಸುತ್ತಿದ್ದರು. ಮತ್ತು ಬಹುಸಂಖ್ಯಾತ ಜನರ ದುಡಿತದ ಬಹುಪಾಲನ್ನು ತಾವೇ ಕಬಳಿಸುತ್ತಿದ್ದರು. ಈ ಸುಲಿಗೆಗೆ ಒಳಗಾದ ಜನರಿಗೆ ಒಂದು ವ್ಯವಸ್ಥೆಯನ್ನು ಕೊಟ್ಟು ಮೇಲೆತ್ತಿದವರು ಏಸು ಕ್ರಿಸ್ತ. ಅವರ ಬೋಧೆಯೇ ಕ್ರಿಸ್ತ ಧರ್ಮವಾಯಿತು. ಕ್ರಿಸ್ತ, ದೇವರ ಮಗ ಎಂದು ಕ್ರಿಸ್ತರು ನಂಬುತ್ತಾರೆ. ಅಂದರೆ ಕ್ರಿಸ್ತ ಧರ್ಮ ಬಡವರ ಪ್ರತಿಭಟನೆಯಾಗೇ ಬಂತು. ಈ ಬಡವರಲ್ಲಿ ಮೇಲು ಕೀಳು ಇಲ್ಲ. ಕ್ರಿಸ್ತರು ಪ್ರಾರ್ಥನೆಗೆ ಸೇರಿದಾಗ ಮೇಲು ಕೀಳು ಎಂಬ ಭೇದವಿಲ್ಲ. ನಮಗೆಲ್ಲ ಪರಿಚಿತರಾಗಿರುವ ಜಾತಿ ವ್ಯವಸ್ಥೆಯ ಮೇಲೆ ಅದು ಆಧಾರಗೊಂಡಿಲ್ಲ. ಕ್ರಿಸ್ತ ಧರ್ಮದ ಆಚರಣೆ ಸರಳವಾದುದು. ಅದರ ಅಂತಸ್ಸತ್ವ ಕರುಣೆ ಮತ್ತು ಸೇವೆ.

ಇನ್ನೊಂದು ಪ್ರಮುಖ ಧರ್ಮ ಮುಸ್ಲಿಂ. ಅರಬ ಸ್ಥಾನದಲ್ಲಿ ಶ್ರೀಮಂತರ, ಪುರೋಹಿತರ ಅಟ್ಟಹಾಸ ಹೇಳತೀರದು. ದೇವರು ಸಾವಿರಾರು, ತಮ್ಮ ತಮ್ಮ ದೇವರಿಗಾಗೇ ಹೊಡೆದಾಟ. ಬಹು ಸಂಖ್ಯಾತರು ಅಜ್ಞರು, ಜೂಜು, ಕುಡಿತ ಇತ್ಯಾದಿ ಚಟ. ತಾಯಂದಿರನ್ನು ದಾಸಿಯಂತೆ ನೋಡಿಕೊಳ್ಳುವುದು, ಶಿಶುಹತ್ಯೆ ಇತ್ಯಾದಿ ರೂಢಿ. ಇಂಥ ಜನಗಳಲ್ಲಿ ಒಗ್ಗಟ್ಟನ್ನು ಸ್ಥಾಪಿಸಿ ಅವರನ್ನು ಸನ್ಮಾರ್ಗದಲ್ಲಿ ನಡೆಸುವಂತೆ ಮಾಡುವುದಕ್ಕಾಗೇ ಮಹಾತ್ಮರಾದ ಮಹಮ್ಮದ್ ಪೈಗಂಬರ ತಮ್ಮ ಬೋಧನೆಯನ್ನು ಕೊಟ್ಟರು. ಅದೇ ಮುಸ್ಲಿಂ ಧರ್ಮವಾಯಿತು. ಮುಸ್ಲಿಂ ಧರ್ಮದ ಆಚರಣೆ ಕೂಡ ಸರಳ. ಪ್ರಾರ್ಥನೆಯಲ್ಲಿ ಜಾತಿ ಭೇದವಿಲ್ಲ. ನೀತಿಯೇ ಅದರ ಜೀವಾಳ. ಸೋದರತೆಯೆ ಮುಸ್ಲಿಂ ಧರ್ಮದ ವೈಶಿಷ್ಟ್ಯ. ನಾಲ್ಕು ಜನ ಮುಸ್ಲಿಂ ಜನ ಒಂದೆಡೆ ಕೂಡಿದರೆ ಅವರು ಒಂದೇ ಬಟ್ಟಲಲ್ಲಿ ಊಟ ಮಾಡುತ್ತಾರೆ. ಇದರ ವೈಜ್ಞಾನಿಕ ವಿಶ್ಲೇಷಣೆ ಹೇಗೊ ಇರಲಿ. ಆದರೆ ಈ ಆಚರಣೆಯ ಹಿಂದೆ ಇರುವ ಸೋದರತೆಯ ಸ್ವಭಾವ ಅದ್ಭುತವಾದುದು.

ಜಗತ್ತಿನ ಮತ್ತೊಂದು ಪ್ರಸಿದ್ಧ ಧರ್ಮ ಬೌದ್ಧ ಧರ್ಮ. ಇದು ಹಿಂದೂ ಪುರೋಹಿತ ಶಾಹಿಯ ವಿರುದ್ಧ ಸಮರ ಸಾರಿತು. ಬೌದ್ಧ ಧರ್ಮದಲ್ಲಿ ಜಾತಿಯಿಲ್ಲ. ಸಂಘದಲ್ಲಿ ಎಲ್ಲರೂ ಸಮಾನರು. ನೀತಿ ಸನ್ನಡತೆಯೇ ಬೌದ್ಧ ಧರ್ಮದ ಜೀವಾಳ; ದಯೆ ಅದರ ಅಂತಃಸ್ಸತ್ವ. ಗೌತಮ ಬುದ್ಧ ಇದರ ಸ್ಥಾಪಕ.

ಇನ್ನೂ ಅನೇಕ ಉದಾಹರಣೆಯನ್ನು ಕೊಡಬಹುದು. ಇದರಲ್ಲಿ ಎರಡು ಸಂಗತಿಗಳು ಎದ್ದು ಕಾಣುತ್ತವೆ.

ಒಂದು: ಈ ಎಲ್ಲ ಮತ ಧರ್ಮಗಳು ತನ್ನ ಅವಲಂಬಿತರನ್ನೆಲ್ಲ ಸಮಾನತೆಯಿಂದ ಕಾಣುತ್ತದೆ. ಒಂದಾಗಿ ಎತ್ತಿ ಹಿಡಿಯುತ್ತದೆ. ಒಂದು ವ್ಯವಸ್ಥೆಯಾಗಿ ಧಾರಣ ಮಾಡುತ್ತದೆ.

ಎರಡು: ದೇವರ ದಾರಿಯ ಏಕ ಪ್ರಕಾರವಾಗಿದೆ. ದೇವ ಕಾರ್ಯದಲ್ಲಿ ಸಮಾನತೆಯಿರುತ್ತದೆ. ವ್ಯವಹಾರದಲ್ಲೂ ಒಂದೇ ನೀತಿಯನ್ನು ಪ್ರತಿಪಾದಿಸುತ್ತದೆ. ಇವಾವುದರಲ್ಲಿ ಜಾತಿಯ ತಾರತಮ್ಯತೆಯಿಲ್ಲ. ಅಸ್ಪೃಶ್ಯತೆ ಇಲ್ಲ.

ಇವುಗಳೆದುರು ಹಿಂದೂ ಧರ್ಮ ಅಥವಾ ವೈದಿಕಧರ್ಮವನ್ನು ಇಟ್ಟು ನೋಡುವ.

ಹಿಂದೂ ಧರ್ಮದ ಮೂಲ ಘಟಕ ಚಾತುರ್ವರ್ಣ. ಅಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ಘಟಕ. ಇದರಲ್ಲಿ ಮೊದಲಿನ ಮೂರು ಗುಂಪು ಹೊಕ್ಕ ಬಳಕೆ ಉಳ್ಳವು. ಈ ಗುಂಪುಗಳಿಗೆ ವಿದ್ಯೆಯನ್ನು ಕಲಿಯುವ ಹಕ್ಕು ಸಾಧ್ಯ. ಇವರಿಗೆ ಆಸ್ತಿಗಳಿಸುವ ಹಕ್ಕು ಉಂಟು. ಆದರೆ ಶೂದ್ರರಾದರೆ ಈ ಯಾವ ಹಕ್ಕು ಇಲ್ಲ. ವಿದ್ಯೆ ಕಲಿಯುವ ಹಕ್ಕಾಗಲಿ, ಸಂಪತ್ತು ಗಳಿಸುವ ಹಕ್ಕಾಗಲಿ ಇಲ್ಲ. ಕೇವಲ ಈ ಮೇಲಿನ ಮೂರು ವರ್ಗಗಳ ಸೇವೆಯನ್ನು ಮಾಡಿ ಅವರು ಕೊಟ್ಟುದುದರಲ್ಲಿ ಜೀವಿಸುವುದು ಮಾತ್ರ ಸಾಧ್ಯ. ಶೂದ್ರ ವೇದದ (ಆಗಿನ ವಿದ್ಯಾಭ್ಯಾಸ) ಒಂದು ವರ್ಣವನ್ನು ಕೇಳಿದರೂ ಅವರ ಕಿವಿಯಲ್ಲಿ ಕಾದ ಸೀಸೆಯನ್ನು

ಹೊಯ್ಯಬೇಕು ಎಂದು ಶಾಸ್ತ್ರ ವಿಧಿಸುತ್ತದೆ. ಹೀಗೆ ಮೇಲಿನ ಮೂರು ವರ್ಗ ವಿದ್ಯೆಯ ಗೌಪ್ಯವನ್ನು ಕಾದು ಇಟ್ಟುಕೊಂಡಿತು.

ರಾಮನು ದೇವರ ಅವತಾರವೆಂದೂ, ರಾಮ ದೇಗುಲ ಕಟ್ಟುವುದು ಹಿಂದೂಗಳ ಕರ್ತವ್ಯ ಮತ್ತು ಪುಣ್ಯ ಕೆಲಸವೆಂದೂ ಸಾರಿ, ಮುಸ್ಲಿಮರು ಹಿಂದೂಗಳ ವೈರಿಗಳೆಂದು ಚಿತ್ರಿಸಿ, ಧರ್ಮಾಭಿಮಾನದ ಅತಿರೇಕದ ಅಮಲನ್ನು ಜನರಲ್ಲಿ ತುಂಬಿ ಜನಸಾಮಾನ್ಯರನ್ನು ಉಪಯೋಗಿಸಿಕೊಳ್ಳುತ್ತಿರುವ ಪುರೋಹಿತ ವರ್ಗದ ದೇವರಾದ ರಾಮ ಸಂಪೂರ್ಣವಾಗಿ ಶೂದ್ರ ವೈರಿಯಾಗಿದ್ದ. ಇದನ್ನು ಇಂದಿನ ಶೂದ್ರರು ಅರಿತರೆ ಅಯೋಧ್ಯೆಯ ರಾಮದೇಗಲಕ್ಕೆ ಇಟ್ಟಂಗಿ ಒಯ್ಯುವ ಭಟ್ಟಂಗಿ ಕೆಲಸ ಮಾಡುವುದಿಲ್ಲ.

ರಾಮ ಹೇಗೆ ಮಾನವ ವಿರೋಧಿಯಾಗಿದ್ದ ಎಂಬುವುದಕ್ಕೆ ಎರಡು ಉದಾಹರಣೆಗಳು ಸಾಕು. ತಾನು ಸ್ವರ್ಗ ಪಡೆಯಬೇಕೆಂಬ ಸದುದ್ದೇಶದಿಂದ ಅಡವಿಯಲ್ಲಿ ಒಬ್ಬ ತಪಸ್ಸು ಮಾಡುತ್ತಿದ್ದ. ವರ್ಣ ಧರ್ಮದ ಪ್ರಕಾರ ಶೂದ್ರ ತಪಸ್ಸನ್ನು ಮಾಡಕೂಡದು. ಹಾಗೆ ಈ ಶೂದ್ರ ತಪಸ್ಸು ಮಾಡಿದ್ದರಿಂದ ಓರ್ವ ಬ್ರಾಹ್ಮಣನ ಬಾಲಕ ಸತ್ತನಂತೆ. ಇದು ಧರ್ಮದ ಅತಿಕ್ರಮದಿಂದಾದ ಹಾನಿ ಎಂದು ರಾಮನಿಗೆ ಆ ಪುರೋಹಿತ ತಿಳಿಸಿದಾಗ ರಾಮ ಶೂದ್ರ ತಪಸ್ವಿಯ ಬಳಿಗೆ ಬರುತ್ತಾನೆ "ನೀನು ಯಾಕೆ ತಪಸ್ಸು ಮಾಡುತ್ತಿ?" ಎಂದು ಕೇಳುತ್ತಾನೆ. ಆ ತಪಸ್ವಿ ವಿನಯದಿಂದ "ಸ್ವರ್ಗ ಪಡೆಯುವುದಕ್ಕಾಗಿ ತಪಸ್ಸು ಮಾಡುತ್ತೇನೆ" ಎನ್ನುತ್ತಾನೆ. ಆದರೆ ರಾಮನಿಗೆ ಇದು ಸಹನೆಯಿಲ್ಲ. ಕೂಡಲೇ ಆತ ಖಡ್ಗ ತೆಗೆದು ಆತನ ಕೊರಳನ್ನು ಕತ್ತರಿಸುತ್ತಾನೆ.

ತಪಸ್ಸು ಎಂದರೆ ವಿದ್ಯೆ, ಶೂದ್ರರು ವಿದ್ಯೆ ಕಲಿತರೆ ಈ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರ ಸೇವೆ ಮಾಡಲು, ಬಿಟ್ಟಿ ಕೆಲಸ ಮಾಡಲು ಜನ ಸಿಕ್ಕಲಿಕ್ಕಿಲ್ಲ. ಅಲ್ಲದೆ ವಿದ್ಯೆ ಎಂದರೆ ಬೆಳಕು ಇದ್ದಂತೆ. ಈ ಶೂದ್ರರಿಗೆ ಜ್ಞಾನವೆಂಬ ಬೆಳಕು ಸಿಕ್ಕಿದರೆ ತಮ್ಮ ಸುಖಕ್ಕೆ ಅಧಿಕಾರಕ್ಕೆ (ತಾವು ದುಡಿದು ಉಣ್ಣುವಂತಾದರೆ) ಸಂಚಕಾರ ಬರುತ್ತದೆಂಬುದೇ ಇವರ ಹಿಂದಿರುವ ಧೂರ್ತ ಆಲೋಚನೆ.

ಎರಡನೆಯ ಉದಾಹರಣೆ ಸೀತೆಗೆ ಸಂಬಂಧಿಸಿದ್ದು. ಸೀತೆಯ ಬಗ್ಗೆ ರಾಮನಿಗೆ ಪ್ರೀತಿ ಇದೆ. ಹಾಗೆ ತಿಳಿಯೋಣ. ರಾಮ, ಲಕ್ಷ್ಮಣ-ಸೀತೆ ಪಂಚವಟಿಯಲ್ಲಿ ಇರುವಾಗ ರಾವಣ ಸೀತೆಯನ್ನು ಕದ್ದೊಯ್ಯುತ್ತಾನೆ. ಇದು ಸುಮಾರು ಒಂದು ವರ್ಷದ ಅವಧಿ. ರಾಮ ರಾವಣನನ್ನು ಕೊಂದು ಸೀತೆಯ ಸೆರೆ ಬಿಡಿಸುತ್ತಾನೆ. ಆಗ ಆತನನ್ನು ಕೂಡಿಕೊಳ್ಳಲು ಸೀತೆಗೆ ಅತ್ಯಂತ ಆಸೆ ತುಂಬಿದೆ. ಆದರೆ ರಾಮ ಹೇಳುವುದೇನು? ನೀನು ರಾವಣನ ಬಳಿ ಇದ್ದುದರಿಂದ ನಿನ್ನ ಚರಿತ್ರೆಯ ಶುದ್ಧತೆಯನ್ನು ಸಾರುವುದಕ್ಕಾಗಿ ಅಗ್ನಿ ಪ್ರವೇಶ ಮಾಡಬೇಕು; ಸೀತೆ ಹಾಗೆ ಮಾಡುತ್ತಾಳೆ. ರಾಮ ಸೀತೆ ಅಯೋಧ್ಯೆಗೆ ಮರಳುತ್ತಾರೆ. ಕಾಲಾಂತರದಲ್ಲಿ ಸೀತೆ ಗರ್ಭಿಣಿಯಾಗುತ್ತಾಳೆ. ಆ ಸಂದರ್ಭದಲ್ಲಿ ಯಾರೋ ಒಬ್ಬ ಪಿಸುಣಿಗ (ಅಗಸ ಎಂಬುದು ಪ್ರಚಲಿತವಾಗಿರುವ ಕತೆ, ಆದರೆ ರಾಮಾಯಣದಲ್ಲಿ ಅಗಸ ಹೇಳಿದ ಎಂದು ಇಲ್ಲ ಎಂದು ವಾಲ್ಮೀಕಿ ರಾಮಾಯಣ ಓದಿದ ತಜ್ಞರು ಹೇಳುತ್ತಾರೆ) 'ಬಿಟ್ಟ ಹೆಂಡತಿಯನ್ನು ಕೂಡಲು ತಾನೇನು ರಾಮನಲ್ಲ'

ಎನ್ನುತ್ತಾನಂತೆ. ಅದನ್ನು ತಿಳಿದ ರಾಮ ಗರ್ಭಿಣಿಯಾದ ಸೀತೆಯನ್ನು ವನದಲ್ಲಿ ಅನಾಥೆಯನ್ನಾಗಿ ಮಾಡಿ ತ್ಯಜಿಸುತ್ತಾನೆ. ಇದು ರಾಮನಿಗೆ ಹೆಣ್ಣಿನ ಬಗ್ಗೆ ಇರುವ ಪುರುಷ ಪ್ರಾಧಾನ್ಯದ ಮನೋಭಾವ.

ಆದ್ದರಿಂದ ರಾಮರಾಜ್ಯ ಎಂದರೆ ಚಾತುರ್ವರ್ಣದ, ಅಸಮಾನತೆಯಿಂದ ಕೂಡಿದ ಮತ್ತು ಹೆಣ್ಣನ್ನು ಎರಡನೇ ದರ್ಜೆ ಪ್ರಜೆಯನ್ನಾಗಿ ಕಾಣುವ ವ್ಯವಸ್ಥೆಯುಳ್ಳ ರಾಜ್ಯ ಎಂದೇ ಅರ್ಥ.

ಇದು ರಾಮನ ಕಥೆಯಾದರೆ, ಕೃಷ್ಣನ ಕಥೆ ಇದಕ್ಕಿಂತ ಬೇರೆಯಿಲ್ಲ. ಕೃಷ್ಣ ಪರಮಾತ್ಮನೆಂದೂ, ಅವತಾರಿ ಎಂದೂ ಪ್ರಚಲಿತ. ಬಹುಶಃ ರಾಮನಿಗಿಂತ ಕೃಷ್ಣನ ಲೀಲಾಮಯ ಕತೆಯೇ ಹೆಚ್ಚು ಜನಪ್ರಿಯವಾಗಿದೆ. ಇಂಥ ಪರಮಾತ್ಮ ಭಗವದ್ಗೀತೆಯಲ್ಲಿ ಶೂದ್ರ ಮತ್ತು ಹೆಂಗಸರ ಬಗ್ಗೆ ತೋರುವ ಪಕ್ಷಪಾತ, ಕೀಳು ಮನೋಭಾವವನ್ನು ಗಮನಿಸಬೇಕು. ಕೃಷ್ಣ ಎನ್ನುತ್ತಾನೆ: "ಚಾತುರ್ವರ್ಣ್ಯಂ ಮಯಾಸೃಷ್ಟಂ" ಎನ್ನುತ್ತಾನೆ. ಅಂದರೆ ಈ ಚಾತುರ್ವರ್ಣ ತನ್ನಿಂದಲೇ ಹುಟ್ಟಿದ್ದು ಎಂದು ಅರ್ಥ. ಚಾತುರ್ವರ್ಣ ಅಸಮಾನತೆಯ ವ್ಯವಸ್ಥೆ ಎಂಬುದು ಶತಸಿದ್ಧ. ಹೀಗಿರುವಾಗ ಸ್ವತಃ ಕೃಷ್ಣನೇ ಇದರ ಜವಾಬ್ದಾರಿ ಹೊರುತ್ತಾನೆ. ದನ ಕಾಯುವ ಗೌಳಿಗರ ಮಗನಾದ ಈ ಶೂದ್ರ ಕೃಷ್ಣ ಶುದ್ರ ವಿರೋಧಿಯಾದ ಈ ಮಾತನ್ನು ಯಾಕೆ ಹೇಳಿದ ಎಂಬುದು ಆಶ್ಚರ್ಯಕರವಾಗಿದೆ. ಆದರೆ ಇದು ಅಷ್ಟೇ ಸಹಜ ಕೂಡ. ಬ್ರಾಹ್ಮಣ ಕ್ಷತ್ರಿಯ ವರ್ಗವೇ ಆಳುವ ವರ್ಗವಾಗಿರುವಾಗ ಅವರಂತಾಗಿ, ಅವರಿಂದ ಮನ್ನಣೆ ಹೊಂದಲು, ಅಧಿಕಾರ, ಪೂಜೆ ಗಳಿಸಲು ತಾವೂ ಬ್ರಾಹ್ಮಣರ ಹಾಗೇ ಎಂದುಕೊಂಡು, ಜನಿವಾರ ಹಾಕಿಕೊಂಡು ತಮ್ಮದೇ ಒಂದು ಮಠ ರಚಿಸಿಕೊಂಡು ಬ್ರಾಹ್ಮಣ ಗುರುಗಳಿಂದ ಮತ್ತು ಪುರೋಹಿತರಿಂದ ಗೌರವ ಪಡೆಯಲು ಇಂದು ಶೂದ್ರರಲ್ಲಿಯ ಎಷ್ಟು ಜಾತಿಗಳು ಹಪಹಪಿಸುತ್ತಿಲ್ಲ? ಭಟ್ಟರಂತೆಯೇ ಆಗಬೇಕೆಂದು ಭಂಡಾರಿ, ಶೆಟ್ಟಿ, ನಾಯ್ಕ ಹೀಗೆ ಅನೇಕ ಜಾತಿಗಳು ತಮಗಿಂತ ಕೆಳಗಿನ ಜಾತಿಗಳು, ಅವರು ಶೂದ್ರರೇ, ಒಂದೇ ಮೂಲದವರೇ ಎಂಬುದನ್ನು ಮರೆತು ಮೇಲಾಟ ನಡೆಸುವುದಿಲ್ಲವೇ? ಬಹುಶಃ ಕೃಷ್ಣನ ಮಾನಸಿಕ ಧೋರಣೆಯೂ ಇದೇ ಇರಬಹುದು.

ಹೀಗೆ ಹೇಳಿದ ಕೃಷ್ಣ ಶೂದ್ರರ ಬಾಯಿಗೆ ಒಂದು ಪೆಪ್ಪರ್‌ಮೆಂಟನ್ನು ತುರುಕುತ್ತಾನೆ. ಅದು ಬಹಳ ಸಿಹಿ ಇದೆ. ನಾಲಿಗೆಗೆ ಸಿಹಿ, ಹೊಟ್ಟೆಗೆ ಹೋದಮೇಲೆ ಹೊಟ್ಟೆ ತಳಮಳಿಸಲು ಶುರುವಾಗುತ್ತದೆ. ಅಥವಾ ಹೆಂಡಕುಡಿವಾಗಿನ ಸುಖದ ಭ್ರಾಂತಿಯನ್ನು ಉಂಟುಮಾಡಿ ದೀರ್ಘ ಕಾಲದಲ್ಲಿ ಕ್ಯಾನ್ಸರ್ ಉಂಟುಮಾಡುವ ಅಪಾಯದ ಗುಳಿಗೆಯಂತಿದೆ. ಆ ಮಾತೆಂದರೆ..

"...ಆದಕಾರಣ ಸ್ತ್ರೀಯರು, ವೈಶ್ಯರು ಮತ್ತು ಶೂದ್ರರನ್ನು ಪಾಪಿಷ್ಠ" ಎಂದು ಕರೆದರೂ ಗೀತೆಯು ಅವರಿಗೆ ಕೂಡ ಮೋಕ್ಷದ ಬಾಗಿಲನ್ನು ತೆರೆಯಿತು. "ನನ್ನನ್ನು ಆಶ್ರಯಿಸಿದರ ಪಾಪಿಷ್ಠರಾದ ಸ್ತ್ರೀಯರು, ವೈಶ್ಯರು, ಮತ್ತು ಶೂದ್ರರಿಗೆ ಸಹ ಪರಮಗತಿ (ಅಂದರೆ ಮೋಕ್ಷ) ದೊರೆಯುತ್ತದೆ" ಎಂದು ಹಿಂದೆ ಹೇಳಿದಾತ ಶ್ರೀಕೃಷ್ಣ ಗೀತೆಯಲ್ಲಿ ಅವರಿಗೆ ಆಶ್ರಯ ನೀಡುತ್ತಾನೆ.

ಏಕೆಂದರೆ ಮೋಕ್ಷ ಸಂಪಾದನೆಗೆ ಉಪನಿಷತ್ತುಗಳು ಬೋಧಿಸಿದ ದಾರಿ ಒಂದೇ. ಜ್ಞಾನ ಮಾರ್ಗವೆಂದು ಆಡಂಬರದಿಂದ ಕರೆಯಲ್ಪಟ್ಟಿರುವ ಅದು ಅಧ್ಯಯನ, ತಪಸ್ಸು ಮತ್ತು ಧ್ಯಾನಗಳ ದಾರಿ. ಈ ಮೂಲಕ ವೈಯಕ್ತಿಕ ಆತ್ಮವನ್ನು ವಿಶ್ವಾತ್ಮವಾದ ಬ್ರಹ್ಮನಲ್ಲಿ ವಿಲೀನಗೊಳಿಸುವುದೇ ಮೋಕ್ಷ. ಆದರೆ ಆತ್ಮ ಮತ್ತು ಬ್ರಹ್ಮಗಳ ಬಗೆಗಿನ ಆ ನಿಗೂಢ ಅರ್ಥಮಾಡಿಕೊಳ್ಳಲು ಕೆಳದರ್ಜೆಯ ಜನಗಳಿಗೆ ಸರ್ವಥಾ ಸಾಧ್ಯವಿದ್ದಿರಲಿಲ್ಲ. ಮಾತ್ರವಲ್ಲ, ಅವುಗಳನ್ನು ಅಭ್ಯಸಿಸುವ, ಅಧಿಕಾರವೂ ಅವರಿಗಿರಲಿಲ್ಲ. ಹೀಗಾಗಿ ಈ ಜ್ಞಾನಮಾರ್ಗವೂ ಕೇವಲ ಬ್ರಾಹ್ಮಣ ಕ್ಷತ್ರಿಯರ ಗುತ್ತಿಗೆಯಾಗಿ ಪರಿಣಮಿಸಿತು. ಅಲ್ಲದೆ ಮೇಲ್ಮಟ್ಟದ ಈ ವರ್ಣಗಳ ಅಸ್ತಿತ್ವ ಮತ್ತು ಸೌಕರ್ಯಗಳಿಗೆ ಶೂದ್ರರ ಹಾಗೂ ವೈಶ್ಯರ ನಿರಂತರ ದುಡಿಮೆ (ವೈಶ್ಯರಿಗೆ ಕಾಲಾಂತರದಲ್ಲಿ ಅವರ ಸಂಪತ್ತು ಹೆಚ್ಚಿದಂತೆ ಮೇಲಿನ ವರ್ಣಗಳ ಜೊತೆ ಬಡತಿ ದೊರೆಯಿತು. ನಂತರ ದುಡಿಯುವ ವರ್ಗ ಶೂದ್ರರು ಮಾತ್ರ ಆದರು) ಅತ್ಯಗತ್ಯವಾಗಿತ್ತು. ಆದ್ದರಿಂದ ವೈಶ್ಯ ಶೂದ್ರಾದಿಗಳನ್ನು (ಇದರ ಜೊತೆ ಸ್ತ್ರೀಯರನ್ನು ಸೇರಿಸಿಕೊಳ್ಳಬೇಕು-ಲೇ) ತಪೋವನಗಳಿಗೆ ಕಳುಹಿಸಿ ಬ್ರಹ್ಮಧ್ಯಾನ ಮಾಡಲು ಅವಕಾಶ ನೀಡಿ ತಮ್ಮ ಭೋಗ ಜೀವನ ಮತ್ತು ಆರಾಮಗಳ ಈ ಆರ್ಥಿಕ ಅಡಿಪಾಯವನ್ನು ಕಳೆದುಕೊಳ್ಳಲು ಆವರುಸಿದ್ಧರಿರಲಿಲ್ಲ. ('ಮಾರ್ಕ್ಸ್‌ವಾದ ಮತ್ತು ಭಗವದ್ಗೀತೆ' ಜಿ.ಎಸ್ ಸರ್‌ದೇಸಾಯಿ ಮತ್ತು ದಿಲೀಪಭೋಸ್ ೧೯೮೭-೩೮).

ಈ ಮೇಲಿನ ವಿವರಣೆ ಭಗವದ್ಗೀತೆಯ ರಾಜಕೀಯವನ್ನು ತಿಳಿಸುತ್ತದೆ. ಒಟ್ಟಾರೆ ಈ ಮೇಲಿನ ವಿವರಣೆ ಏನು ತಿಳಿಸುತ್ತದೆ? ಹಿಂದೂ ಧರ್ಮದ ವ್ಯವಸ್ಥೆಯ ಮೂಲ ಘಟಕವಾಗೇ ಅಸಮಾನತೆ, ಹಿಂಸೆ ಮತ್ತು ಅಮಾನವೀಯತೆ ತುಂಬಿದೆ. ಈ ಚಾತುರ್ವರ್ಣವೇ ಮುಂದೆ ಸಾವಿರಾರು ಜಾತಿಗಳ ವಿಂಗಡನೆಗೆ ಹಾದಿ ಹಾಕಿಕೊಟ್ಟಿತು. ಇದು ಹಿಂದುಗಳನ್ನು ಒಂದು ಜನಾಂಗವನ್ನಾಗಿ ಬಿಗಿದಿಲ್ಲ. ಒಂದು ಪೂರ್ಣ ಘಟಕವಾಗಿ, ಒಂದು ಸಮಾನ, ವ್ಯವಸ್ಥೆಯನ್ನಾಗಿ ಧಾರಣ ಮಾಡಿದ್ದಲ್ಲ. ಇಂಥ ಧರ್ಮವನ್ನು ಡಾ. ಬಿ.ಆರ್. ಅಂಬೇಡ್ಕರರು:

"ಯಾವ ಧರ್ಮ ಮನುಷ್ಯರ ಗೌರವವನ್ನು ಕಳೆಯುತ್ತದೆಯೋ ಅದು ಧರ್ಮವಲ್ಲ. ಒಂದು ರೋಗ.

ಯಾವ ಧರ್ಮ ಕೊಳಕು ಪ್ರಾಣಿಗಳನ್ನು ಮುಟ್ಟಲು ಮನ್ನಿಸಿ ಮನುಷ್ಯರನ್ನು ಮುಟ್ಟದಂತೆ ಪ್ರತಿಬಿಂಬಿಸುತ್ತದೋ ಅದು ಧರ್ಮವಲ್ಲ ಅದು, ಒಂದು ಹುಚ್ಚು.

ಯಾವ ಧರ್ಮ ಕೆಲ ಜಾತಿಗಳನ್ನು ಸಂಪತ್ತುಗಳಿಸಲು ನಿರ್ಬಂಧಿಸುತ್ತವೆಯೊ ಅದು ಧರ್ಮವಲ್ಲ, ಅದೊಂದು ಅಣಕ.

ಯಾವ ಧರ್ಮ ಕಲಿಯದವರು ಕಲಿಯದೆ, ಬಡವರು ಬಡವರಾಗೇ ಇರಬೇಕೆಂದು ವಿಧಿಸುತ್ತದೆಯೊ ಅದು ಧರ್ಮವಲ್ಲ, ಅದೊಂದು ಶಿಕ್ಷೆ (ಉದ್ಧರಣ: ಗಾಂಧಿ, ಅಂಬೇಡ್ಕರ್ ಅಂಡ್ ದ ಎಕ್ಸ್ಟಾರ್ಪೇಶನ್ ಆಫ್ ಅನ್ ಟಚಬಲಿಟಿ- ವಿರೇಂದ್ರ ಮುಖರ್ಜಿ ೧೯೮೮-೨೫) ಹೇಳುತ್ತಾರೆ.

ಈಗ ಚಾತುರ್ವರ್ಣ ಇಲ್ಲ. ಶೂದ್ರರಲ್ಲೂ ಸಾವಿರ ಸಾವಿರ ಜಾತಿಗಳು ಉಂಟಾಗಿವೆ. ಈ ಜಾತಿಗಳು ಉದ್ಯೋಗದ ಘಟಕವಾದರೂ ಅದು ಹಾಗೇ ಇಲ್ಲ. ಹಣವುಳ್ಳ ಜಾತಿ ಮೇಲು ಜಾತಿ ಎನಿಸಿಕೊಳ್ಳುತ್ತದೆ. ಶೂದ್ರರಿಗೆ ವಿದ್ಯೆ ಈಗ ಮುಕ್ತವಾಗಿದೆ. ಬ್ರಾಹ್ಮಣರು ಸುಲಿಗೆಗಾರರಾಗಿ ಇಲ್ಲ. ಆದರೂ ಈ ಚಾರಿತ್ರಿಕ ಗುಣದ ಸೊಗಡು ಸಂಪೂರ್ಣ ಮಾಸಿಲ್ಲ. ಇಂದಿನ ನಮ್ಮ ಜಾತಿ, ರಾಜಕೀಯ, ಬ್ರಾಹ್ಮಣ ಬ್ರಾಹ್ಮಣೇತರದ ಗೊಂದಲದಲ್ಲಿ ಗೌಜಿನ ಈ ಚಾರಿತ್ರಿಕ ಸತ್ಯದ ಅಂಶದ ಪಾಲೂ ಇದೆ. ಆದ್ದರಿಂದ ಈ ಮೂಲಭೂತ ಸಂಗತಿಗಳನ್ನು ಶೂದ್ರರೂ, ಬ್ರಾಹ್ಮಣರೂ, ಅರಿತಿರಬೇಕು. ಅಂದರೆ ನಮ್ಮ ವರ್ತಮಾನ ಮತ್ತು ಭವಿಷ್ಯದ ಗತಿ ಸುಗಮವಾಗುತ್ತದೆ.

ಬ್ರಾಹ್ಮಣರೂ, ಶೂದ್ರರೂ ಅರಿತಿರಬೇಕು ಎಂದು ನಾನು ಹೇಳಿದ್ದರಲ್ಲಿ ಮಹತ್ವವಿದೆ. ಯಾಕೆಂದರೆ ಹಿಂದೂ ಎನ್ನುವ ಈ ಧರ್ಮದಲ್ಲಿ ಹುಟ್ಟಿದವರು ಯಾವುದಾದರೂ ಒಂದು ಜಾತಿಯಲ್ಲೇ ಹುಟ್ಟುತ್ತಾರೆ. ಆ ಜಾತಿಯಲ್ಲಿ ಹುಟ್ಟಿದಾಗಲಂತೂ ಅರಿಯದಯೇ ಆಯಾ ಜಾತಿಯ 'ಜಾತೀಯತೆ'ಯನ್ನು ರೂಢಿಸಿಕೊಳ್ಳುತ್ತಾರೆ. ಅರಿವು ಬಂದಮೇಲೆ ಹರಿವೆ ಎಂದರೆ ಬಿಡದು. ಈ ಜಾತೀಯತೆಯನ್ನು ನೀಗಲು, ಬಗೆಹರಿಸಿಕೊಂಡು 'ದಯವೇ ಧರ್ಮದ ಮೂಲವಯ್ಯ'ವನ್ನಾಗಿ ಮಾಡಲು, ಜಾತಿ- ಧರ್ಮವನ್ನು ಮೀರಿದ ಮಾನವೀಯ ತೆಯನ್ನು ಮೈಗೂಡಿಸಿಕೊಳ್ಳಲು ಪ್ರಜ್ಞಾಪೂರ್ವಕವಾದ ಪ್ರಯತ್ನ ಬೇಕಾಗುತ್ತದೆ. ಅದು ಅನಿವಾರ್ಯ ಕೂಡ.

ಡಾ. ಅಂಬೇಡ್ಕರ್ ಚೌಡರ್ ಕೆರೆಯ ನೀರು ಕುಡಿಯುವ ಸತ್ಯಾಗ್ರಹವನ್ನು ಒಮ್ಮೆ ಮಾಡಿದರು. ಅಂಬೇಡ್ಕರ್ ಮಹರ್ ಎಂಬ ಅಸ್ಪೃಶ್ಯ ಜಾತಿಯವರು. ಸಾವಿರ ಸಾವಿರ ಜನರು ಸತ್ಯಾಗ್ರಹಕ್ಕೆ ಸೇರಿದ್ದರು. ಆಗ ಅವರ ಅನುಯಾಯಿಗಳಲ್ಲಿ ಒಬ್ಬ; "ಈ ಸತ್ಯಾಗ್ರಹಕ್ಕೆ ಬ್ರಾಹ್ಮಣರನ್ನು ಸೇರಿಸಿಕೊಳ್ಳಬಾರದು" ಎಂದ. ಅದಕ್ಕೆ ಉತ್ತರವಾಗಿ ಅಂಬೇಡ್ಕರ್ ಹೇಳಿದ ಮಾತು ಜಾತಿವಿನಾಶ ಆಂದೋಲನದಲ್ಲಿ ಮಾರ್ಗದರ್ಶಿ ಯಾಗಿರಬೇಕು. ಅವರೆಂದರು.

"ನಾನು ಬ್ರಾಹ್ಮಣದ್ವೇಷಿಯಲ್ಲ. ನಾನು ಬ್ರಾಹ್ಮಣ್ಯವನ್ನು ಮಾತ್ರ ದ್ವೇಷಿಸುತ್ತೇನೆ. ಅನೇಕ ಪ್ರಜ್ಞಾವಂತ ಬ್ರಾಹ್ಮಣರು ನಮಗೆ ಸಹಾಯಕರಿದ್ದರೆ, ಅವರಿಗೆ ಸ್ವಾಗತ. ಅದರಂತೆ ಬ್ರಾಹ್ಮಣ್ಯವನ್ನು ಹೊಂದಿದ ಅನೇಕ ಶೂದ್ರರೂ ಇದ್ದಾರೆ."

ಹೀಗೆ ಸತ್ಯಾಗ್ರಹಿಯ ಮನಸ್ಸು ಮಾನವಕೇಂದ್ರಿತವಾಗಿ ಇರಬೇಕೇ ಹೊರತು ಬ್ರಾಹ್ಮಣ ದ್ವೇಷಿಯಾಗಿ ಅಲ್ಲ ಎನ್ನುವುದು ಮುಖ್ಯ. ವೈದಿಕ ಧರ್ಮದ ಜಾತೀಯತೆಯೇ ಮೊದಲಾದ ಮೂಢ ನಂಬಿಕೆಗೆ ಸಿಡಿದುಹೋಗಿ 'ವೀರಶೈವ' ಧರ್ಮವನ್ನು ಸ್ಥಾಪಿಸಿದ ಮಹಾತ್ಮಾ ಬಸವಣ್ಣನವರು ಮೂಲತಃ ಬ್ರಾಹ್ಮಣರು. ಬುದ್ಧ ಧರ್ಮದ ಮೂಲ ಪುರುಷ ಗೌತಮಬುದ್ಧ ಕ್ಷತ್ರಿಯ, ಜಾತೀಯತೆಯ ನಿವಾರಣೆಗೆ ಪ್ರಯತ್ನಿಸಿದ ಮಹಾತ್ಮಾಗಾಂಧಿ ವೈಶ್ಯ. ಶೂದ್ರರು ಇನ್ನೂ ಕತ್ತಲೆಯಲ್ಲಿ ಅಸಹಾಯಕತೆಯಿಂದ ಬಳಲುತ್ತಿದ್ದಾಗ ಈ ಪ್ರಜ್ಞಾವಂತ ಉಚ್ಚ ಜಾತಿಯ ಪ್ರತಿಭಾಶಾಲಿಗಳೇ ಹಿಂದೂ ಧರ್ಮದ ಜಾತೀಯತೆಯ ವಿರುದ್ಧ ಹೋರಾಡಿದರು. ಅಂಬೇಡ್ಕರರ

ಪ್ರೀತಿಯ ಗುರು ಆಂಬೇವಾಡಕರ ಒಬ್ಬ ಬ್ರಾಹ್ಮಣ. ಅಂಬೇಡ್ಕರರ ಅತ್ಯಂತ ಪ್ರೀತಿಯ ಒಬ್ಬ ಶಿಷ್ಯ ಲೋಕಮಾನ್ಯ ತಿಲಕರ ಮಗ. ಈ ಎಲ್ಲ ಸಂಗತಿಗಳನ್ನು ನೆನಪಿಟ್ಟುಕೊಳ್ಳಬೇಕು. ಅದಲ್ಲದೆ ಬ್ರಾಹ್ಮಣ ದ್ವೇಷವನ್ನು ಮೂಲಬಂಡವಾಳ ಮಾಡಿಕೊಂಡು ಜಾತಿವಿನಾಶಕ್ಕೆ ಹೊರಟರೆ ಯಾವ ಅಸಮಾನತೆಯ ವಿರುದ್ಧ ನಾವು ಹೋರಾಡಬೇಕೋ ಅದನ್ನೇ ಮತ್ತೆ ತಿರುವು ಮುರುವು ಇಟ್ಟು ಮಾಡಿದಂತೇ ಆಗುತ್ತದೆ. ಇಂದಿಗೂ ಉಚ್ಚಜಾತಿಯವರೇ ಜಾತಿವಿನಾಶಕಾರ್ಯದಲ್ಲಿ ಭಾಗವಹಿಸುವ ಅವಶ್ಯಕತೆಯಿದೆ. ಯಾಕೆಂದರೆ ಯಾರು ವಿಶ್ರಾಂತರೂ, ಪ್ರಜ್ಞಾವಂತರೂ ಆಗುತ್ತಾರೊ ಅವರೆ ಮುಂದಾಳ್ತನ ಕೊಡಬೇಕಾಗುತ್ತದೆ.

ಇಂದು ಹಿಂದಿನ ಜಾತಿ ಇಲ್ಲ. ಆದರೆ ಇದೀಗ ಈ ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ಬ್ರಾಹ್ಮಣ ಮೇಲಿನ ತುದಿಗೂ, ಅಸ್ಪೃಶ್ಯ ಅತ್ಯಂತ ಕೆಳಗಿನ ತುದಿಗೂ ಇದ್ದಾರೆ. ಈ ಮಧ್ಯೆ ಶೂದ್ರರಲ್ಲಿ ಸಾವಿರಾರು ಜಾತಿಗಳಿವೆ.

ಈ ಎಲ್ಲ ಜಾತಿಗಳೂ ಹಣವಂತರಾದೊಡನೆ ತಮ್ಮದೇ ಆದ ಒಂದು ಮಠವನ್ನು, ಒಂದು ಗುರುವನ್ನು ಹೊಂದಲು ಪ್ರಯತ್ನಿಸುತ್ತಾರೆ. ಒಂದು ಜನಿವಾರವನ್ನು ಹಾಕಿಕೊಂಡರೆ ಕಾಲರಷ್ಟೊ, ಅರ್ಧದಷ್ಟೊ ಬ್ರಾಹ್ಮಣರಾದೆವು ಎಂದುಕೊಳ್ಳುತ್ತಾರೆ. ಯಾಕೆಂದರೆ ಪುರೋಹಿತಶಾಹಿಗೂ, ಸಂಪತ್ತುಗಳಿಕೆಯ ಜಾತಿಗೂ ಮೊದಲಿನಿಂದಲೂ ಸಂಬಂಧ. ಇಂದು ಜನಿವಾರ ಧಾರಣೆ ಕೇವಲ ಸಂಪ್ರದಾಯದ ಹೆಣವನ್ನು ಔಷಧಿ ಹಾಕಿ ರಕ್ಷಿಸಿಕೊಂಡಂತೆ; ಮೈಸೂರು ರಾಜ ಈಗಿನ ದಸರಾ ಸಂದರ್ಭದಲ್ಲಿ ತನ್ನ ಸ್ವಂತ ದರ್ಬಾರು ಹಾಲಿನಲ್ಲಿ ಒಂದು ಅಣಕು ರಾಜ ದರ್ಭಾರ ನಡೆಸುತ್ತಾರಂತಲ್ಲ, ಹಾಗೆ. ಅದೊಂದು ಚರಿತ್ರೆಯ ಪಳೆಯುಳಿಕೆ. ತಾನು ಮೇಲು ಜಾತಿಯವನೆಂಬ ಧಿಮಾಕಿನ ಸಂಕೇತವಾಗಿದೆ. ಆದ್ದರಿಂದ ಸಮಾನತೆಯ ಒಂದು ಗುರುತೆಂದರೆ ಜನಿವಾರವನ್ನು ತೆಗೆದು ಒಗೆಯುವುದೇ ಆಗಿದೆ. ಬ್ರಾಹ್ಮಣರಿಗೆ ಅದೊಂದು ಹೆಣ ಭಾರವಾದರೆ ಶೂದ್ರರಿಗೆ ಪ್ಯಾಶನ್ ಆಗಿದೆ. ಅವರು ಹಾಕಿಕೊಳ್ಳಲು ಪ್ರಯತ್ನಿಸುತ್ತಾರೆ.

ಹಾಗಿದ್ದಾಗಲೂ ಬ್ರಾಹ್ಮಣರನ್ನು- ಹೆಚ್ಚಾಗಿ ಚುನಾವಣೆಯಲ್ಲಿ ಟೀಕಿಸುತ್ತಲೇ ಇರುತ್ತಾರೆ. ಆದರೆ ಅವರು ಮೊದಲು ಅರಿತಿರಬೇಕಾದುದು ತಾನು ಬ್ರಾಹ್ಮಣರ ವಿಷಯದಲ್ಲಿ ತನ್ನನ್ನು ಕೀಳೆಂದು ಕಾಣಬಾರದೆಂಬುದು ಎಂದು ಭಾವಿಸುತ್ತೇನೋ ಅದನ್ನೇ ತಮಗಿಂತ ಕೆಳಗಿನ ಜಾತಿಯ ಬಗ್ಗೆ ಮುಖ್ಯವಾಗಿ ಅಸ್ಪೃಶ್ಯರಾದ ಮುಕ್ರಿ, ಹಳ್ಳೇರ, ಹೊಲೆ ಮಾದಿಗರ ಬಗ್ಗೆ ಗ್ರಹಿಸಬೇಕು. ಮುಕ್ತವಾಗಿ ಈ ಎಲ್ಲ ಜನಾಂಗದವರು ತಮ್ಮದೇ ಕರುಳಬಳ್ಳಿ ಎಂಬುದನ್ನು ಮರೆಯದೆ, ಸಮಾನ ಗೌರವದಿಂದ ನಡೆದುಕೊಳ್ಳಬೇಕು. ಯಾರು ತನಗಿಂತ ಕೆಳಜಾತಿಗಳನ್ನು ಸಮಾನತೆಯಿಂದ ಕಾಣುತ್ತಾರೋ ಅವರು ತಮಗಿಂತ ಮೇಲಿನವರನ್ನು ಅಥವಾ ಬ್ರಾಹ್ಮಣರನ್ನು ಟೀಕಿಸಲು ಅರ್ಹರಾಗಬಹುದು. ಇಲ್ಲದಿದ್ದರೆ ಉಪಾಯ ವೇದಾಂತ ವಾಗುತ್ತದೆ.

ಪುರೋಹಿತಶಾಹಿ ತಂತ್ರ ಒಂದಿದೆ. ಯಾವ ಜಾತಿ ಸಂಪತ್ತುಗಳಿಸುತ್ತದೋ ರಾಜಕೀಯದಲ್ಲಿ ಮುಂದೆ ಹೋಗುತ್ತಾರೋ, ಸರಕಾರಿ ನೌಕರ ಸಂಖ್ಯೆ ಹೆಚ್ಚುಗಳಿಸುತ್ತಾರೋ ಅವರನ್ನು ಪ್ರಿಯವಾಗಿ ಕಾಣುವುದು. ಇದನ್ನೇ ವಿಸ್ತರಿಸಿ ಅಜ್ಞ ಜಾತಿಗಳ ಮಧ್ಯೆ ನಮ್ಮ ಧರ್ಮ

ನಾಶವಾಗುತ್ತದೆ. ನಮ್ಮ ದೇವರು ಅಪಮಾನಿತ ವಾಗುತ್ತದೆ. ನಾವೆಲ್ಲ ಹಿಂದೂ, ನಾವೆಲ್ಲ ಒಂದು ಎಂಬ ದುರಭಿಮಾನ ಧಾರ್ಮಿಕ ದುರಭಿಮಾನವನ್ನು ತುಂಬಿ ಅವರನ್ನು ಮುಸ್ಲಿಂ ಎದುರು ನಿಲ್ಲಿಸುತ್ತಾರೆ. ಅಯೋಧ್ಯೆಯಲ್ಲಿ ರಾಮಮಂದಿರ ಕಟ್ಟುವ ನೆಪದಲ್ಲಿ ಬಾಬರಿ ಮಸೀದಿಯನ್ನು ಕೆಡಗುವ ಹುನ್ನಾರು ನಡೆದಿರುವ ಪುರೋಹಿತಶಾಹಿ ಹಿಕಮತ್ತನ್ನು ಭಾರತೀಯರೆಲ್ಲ ಅರಿಯಬೇಕಾಗಿದೆ. ಮುಸ್ಲಿಮರು ಹೊರಗಿನಿಂದ ಬಂದವರು. ಅವರು ಹಿಂದೂಗಳನ್ನು ಮತಾಂತರಿಸಿದರು. ಹಿಂದೂ ದೇವಾಲಯಗಳನ್ನು ಕೆಡುಹಿದರು ಎಂದೆಲ್ಲ ಹೇಳಿ ಹಿಂದುಗಳಲ್ಲಿ ದ್ವೇಷಬಿತ್ತಿ ಹಿಂದುಳಿದವರನ್ನೇ ಬಲಿಕೊಡುತ್ತಾರೆ.

ಹಾಗೆ ಕೇಳಿದರೆ ಈ ಆರ್ಯರು ಎಲ್ಲಿಂದ ಬಂದವರು? ಇವರು ಸಹ ಹೊರಗಿನಿಂದ ಬಂದವರೆ. ಇವರು ಬಂದಾಗ ಸಿಂಧೂ ನದಿಯ ದಡದ ಮೇಲೆ ಒಂದು ಸಮೃದ್ಧವಾದ ಸಂಸ್ಕೃತಿ ಪಟ್ಟಣ ಬೆಳೆದಿತ್ತು. ಅದು ದ್ರಾವಿಡರ (ಇಂದಿನ ಶೂದ್ರರಲ್ಲಿ ದ್ರಾವಿಡರ ಸಂಖ್ಯೆಯೇ ಹೆಚ್ಚು) ಸಂಸ್ಕೃತಿಯಾಗಿತ್ತು. ಅದನ್ನು ಸಂಪೂರ್ಣನಾಶ ಮಾಡಿದವರು ಆರ್ಯರು ಎಂದು ಇತಿಹಾಸ ಹೇಳುತ್ತದೆ. ಹಾಗೆ ಹೊರಗಿನಿಂದ ಬಂದಾಗ ಅಷ್ಟಿಷ್ಟು ನಾಶ ಆಗುವುದು ಸ್ವಾಭಾವಿಕ. ಹಾಗಿದ್ದರೂ ಮುಸ್ಲಿಮರು ಮತಾಂತರಿಸಿದವರ ಸಂಖ್ಯೆ ತಾನಾಗಿ ಮತಾಂತರ ಹೊಂದಿದವರ ಸಂಖ್ಯೆಗಿಂತ ಕಡಿಮೆ, ಹಿಂದೂ ಧರ್ಮದಲ್ಲಿರುವ ಜಾತಿ ವ್ಯವಸ್ಥೆಯಿಂದಾಗಿ ಹೀನಾಯವಾಗಿ ಬಡತನ, ಶೋಷಣೆ, ಹಿಂಸೆಯನ್ನು ಅನುಭೋಗಿಸುತ್ತಿರುವ ಹಿಂದುಗಳು ತಾವಾಗಿಯೇ ಮುಸ್ಲಿಮನ್ನ ಅಪ್ಪಿಕೊಂಡರು. ಮುಸ್ಲಿಮರ ಮೇಲೆ ಈ ಪುರೋಹಿತಶಾಹಿಗಳಿಗೆ ಇರುವ ಸಿಟ್ಟು ಎಂದರೆ ತಮ್ಮ ಅಡಿಯಾಳಾಗಿಬಿಟ್ಟಿರುವ ಈ ಕೀಳು ಜಾತಿಗಳಿಗೆ ಸಮಾನತೆ ಕಲ್ಪಿಸಿಕೊಟ್ಟರು. ಹೀಗೇ ಅದರ ತಾವು ಯಾರ ಮೇಲೆ ಪುರೋಹಿತಕಿ ನಡೆಸಬೇಕು ಎಂಬುದೇ ಆಗಿದೆ. ತಮ್ಮ ಬಂಧುಗಳಲ್ಲೇ ಕೆಲವರು ಹೋಗಿ, ಏನಿಲ್ಲ ಎಂದರೂ ಧರ್ಮದ ಎದುರಿನಲ್ಲಾದರೂ ಸಮಾನತೆಯನ್ನು ಅನುಭೋಗಿಸುವ ಮನುಷ್ಯತ್ವ ಕಂಡ ಬಂಧುಗಳಿಗಾಗಿ ಹಿಂದುಳಿದ ಜಾತಿಯವರು ಅಭಿಮಾನ ಪಡಬೇಕೇ ಹೊರತು ದ್ವೇಷವನ್ನಂತೂ ಅಲ್ಲ. ಮುಸ್ಲಿಮರಲ್ಲಿರುವ ಮತಾಂಧತೆಯನ್ನು ಖಂಡಿಸುವ, ಅದು ಬೇರೆ ಸಂಗತಿ. ಆದರೆ ದ್ವೇಷಕ್ಕೆ ಗುರಿಮಾಡಬೇಕಿಲ್ಲ.

ಎರಡನೆಯದಾಗಿ ಕೆಲವೊಂದು ದೇವಾಲಯ ನಾಶವಾಗಿರಬಹುದು. ಅದು ಆ ಕಾಲದ ಒಂದು ವಾತಾವರಣಕ್ಕೆ ಸೇರಿದ್ದು. ಹಾಗಿದ್ದರೆ ಬೌದ್ಧರ ದೇವಾಲಯವನ್ನು ಹಿಂದು ಪುರೋಹಿತರು, ರಾಜರು ಕೆಡಹಿಸಿದರು ಎಂದೂ ಇತಿಹಾಸ ಹೇಳುತ್ತದೆ. ಈಗ ಮತ್ತೆ ಅಲ್ಲಿಯ ಹಿಂದೂ ದೇವಾಲಯ ಕೆಡಹಿಬೌದ್ಧ ವಿಹಾರವನ್ನು ಕಟ್ಟೋಣವೆ?

ಬೌದ್ಧ ಧರ್ಮೀಯನಾದ ಮಿನಾಂಡರನೊಡನೆಯಾದ ಯುದ್ಧದಲ್ಲಿ ಬ್ರಾಹ್ಮಣ ಪುಷ್ಯ ಮಿತ್ರ ಪಾಟಲೀಪುತ್ರದಿಂದ ಜಲಂಧರದವರೆಗಿನ ಎಲ್ಲ ಬೌದ್ಧ ವಿಹಾರಗಳನ್ನು ಸುಡಿಸಿದ. 'ನನಗ ಶ್ರವಣನ ತಲೆ ತಂದುಕೊಟ್ಟವರಿಗ ನೂರು ದಿನಾರು ಕೊಡುತ್ತೇ'ನೆಂದು ಸಾರಿದ. (ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ-ಭಗವತ್ ಶರಣ ಉಪಾಧ್ಯಾಯ ಅನು: ಪ್ರಧಾನ ಗುರುದತ್ತ, ೧೯೭೩-೨೨೦)

ಹೀಗೆ ಇತಿಹಾಸದಲ್ಲಿ ನಡೆಯಿತೆಂಬ ಕೆಲವು ಸಂಗತಿಗಳಿಗೆ ಈಗ ಸೇಡು ತೀರಿಸಿಕೊಳ್ಳುವ ಈರ್ಷೆ ಮಾನವ ದ್ವೇಷಿಯಾಗುತ್ತದೆಯೇ ಹೊರತು ಧರ್ಮದ ನಡವಳಿಕೆಯಾಗುವುದಿಲ್ಲ.

ಈ ಮೇಲಿನ ಸಂಗತಿಗಳನ್ನು ನಾನು ತುಸು ಜೋರಿನಿಂದ ಹೇಳಿದ ಕಾರಣವೆಂದರೆ ಧರ್ಮ ನಮ್ಮನ್ನು ಉದ್ಧರಿಸಬೇಕೇ ಹೊರತು ಛಿದ್ರಗೊಳಿಸುವುದಲ್ಲ. ಇಂದು ನಮ್ಮ ದೇಶ ಅನೇಕ ಧರ್ಮಗಳ ದೇಶವಾಗಿದೆ. ಎಲ್ಲ ಧರ್ಮಗಳ ಆಶಯವೂ ನಮ್ಮನ್ನೆಲ್ಲ ಒಟ್ಟಿಗೆ ಧಾರಣಮಾಡಬೇಕು. ಆಗಲೇ ಧರ್ಮ ಧಾರಣ ಮಾಡುತ್ತದೆ; ವ್ಯವಸ್ಥಿಗೊಳಿಸುತ್ತದೆ ಎಂಬುದಕ್ಕೆ ಅರ್ಥ ಬರುತ್ತದೆ.

ಅಂದರೆ ನಮಗೆ ಧರ್ಮದಲ್ಲಿಯ ಮಾನವೀಗುಣ ಎದ್ದುನಿಲ್ಲಬೇಕು. ದಯೆಯೇ ಧರ್ಮದ ಮೂಲವಯ್ಯ ಎಂಬ ನುಡಿ ಸಾರ್ಥಕವಾಗಬೇಕು. 'ಮನುಷ್ಯ ಜಾತಿ ತಾನೊಂದು ವಲಂ' ಎಂಬ ನಮ್ಮ ನಾಡೋಜ ಪಂಪನ ಉಕ್ತಿಗೆ ಶಕ್ತಿ ಬರಬೇಕು. ಪ್ರೀತಿ, ದಯೆ, ಸಮಾನತೆ, ಸೋದರತೆ, ನಮ್ಮ ನಡವಳಿಕೆಯಲ್ಲಿ ಮೂರ್ತವಾಗಬೇಕು. ಅಂದರೆ ಮಾತ್ರ ಧರ್ಮದ ಅರ್ಥ ಸಾರ್ಥಕವಾಗುತ್ತದೆ. ಅದಿಲ್ಲದಿದ್ದರೆ ಧರ್ಮದ ಮುಖಾಂತರ ನಾವು ದೇವರ ಮನೆಗೆ ಹೋಗುವ ಬದಲು ದೈತ್ಯದ ಮನೆಗೆ ಹೋಗುತ್ತೇವೆ.

ಹೇಳುವುದು ಧರ್ಮವಲ್ಲ, ನಡೆಯುವುದು ಧರ್ಮ. ನಮ್ಮದು ಮಾನವ ಧರ್ಮವಾಗಬೇಕು; ವಿಶ್ವ ಧರ್ಮವಾಗಬೇಕು. ಅದು ನಮ್ಮ ದಿನ ನಿತ್ಯದ ನಡತೆಯಲ್ಲಿ, ಮನುಷ್ಯ ಮಾತ್ರರೆಲ್ಲರನ್ನು ಹೃದಯದಿಂದ ಸ್ಪರ್ಶಿಸಬೇಕು.

ಸ್ವಾತಂತ್ರ್ಯ, ಸೋದರತೆ, ಸಮಾನತೆ ಇಂದಿನ ಧರ್ಮವಾಗಬೇಕು. ಲೇಖನದ ಪ್ರಾರಂಭದಲ್ಲಿ ದಾಖಲಿಸಿದ ಉದ್ಧರಣ ವಾಕ್ಯಗಳಲ್ಲಿ ಹೇಳುವುದು ಅದೇ ಅಲ್ಲವೆ?

*

ಸಾಮರಸ್ಯವೇ ಭಾರತ ಚರಿತ್ರೆಯ ಗುಟ್ಟು

ಇಂಡಿಯಾ ಬಹುಮುಖೀ ಸಂಸ್ಕೃತಿಯ ದೇಶ. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಬೌದ್ಧ, ಜೈನ, ಫಾರಸಿ ಇನ್ನೂ ಅನೇಕ ಧರ್ಮ ಸಂಸ್ಕೃತಿಗಳಿದ್ದಂತೆ ಇನ್ನೂ ಅನೇಕ ಪ್ರಾದೇಶಿಕ ಸಂಸ್ಕೃತಿಗಳಿವೆ. ಇವುಗಳು ಪರಸ್ಪರ ಅರಿಯುವುದು, ಸ್ಪಂಧಿಸುವುದು ಆ ಮುಖಾಂತರ ಬೆಳೆಯುವುದೇ ಬಹುಮುಖೀ ಸಂಸ್ಕೃತಿಯನ್ನು ಹೊಂದಿದ ದೇಶಗಳ ಧರ್ಮ. ಅಂದರೆ ಸಂಘರ್ಷದಿಂದ ಸಾಮರಸ್ಯದ ಕಡೆಗೆ ನಡೆಯುವುದೇ ಭಾರತದ ಬೆಳವಣಿಗೆಯ ಗುಟ್ಟು.

ಕ್ರಿಸ್ತ ಪೂರ್ವ ೩೦೦೦ ವರ್ಷಗಳ ಕೆಳಗೆ ಸಿಂಧೂ ಸಂಸ್ಕೃತಿಯನ್ನು ನಾವು ಕಾಣುತ್ತೇವೆ. ಇದು ಮುಂದುವರಿದ ಸಂಸ್ಕೃತಿಯಾಗಿತ್ತು.

ನಾಗರಿಕರಲ್ಲದ ಆರ್ಯರು ಆಕ್ರಮಣಕಾರರಾಗಿ ಭಾರತವನ್ನು ಪ್ರವೇಶಿಸಿದರು. ಆರ್ಯರಿಗೂ ದ್ರಾವಿಡರಿಗೂ (ಸಿಂಧೂ ಜನರಿಗೂ) ಸಂಘರ್ಷ ನಡೆದಿರಲೇಬೇಕು. ಅಲೆಮಾರಿಗಳಾಗಿದ್ದ ಆರ್ಯರು ಮೇಲುಗೈ ಪಡೆದರು. ಕೊನೆಗೆ ಈ ಸಂಘರ್ಷ ಸಾಮರಸ್ಯದತ್ತ ನಡೆಯಿತು. ಅಂದರೆ ಆರ್ಯರ ಶ್ರೇಷ್ಠತೆ ಕೂಡ ತನಗೆ ಬೇಕಾದುದಷ್ಟು ಸ್ವೀಕರಿಸಿ ಬೆಳೆಯಿತು.

ಅವರು ದ್ರಾವಿಡರಿಂದ ಕೃಷಿಯನ್ನು ಕಲಿತರು, ಪೂಜೆಯನ್ನು ಕಲಿತರು, ಅವರ ಭಾಷೆಯ ಎಷ್ಟೋ ಶಬ್ದಗಳನ್ನು ಸ್ವೀಕರಿಸಿದರು. ಅವರ ಸ್ತ್ರೀಯರನ್ನು ಮದುವೆಯಾದರು, ಅವರಿಗೆ ಹುಟ್ಟಿದ ಮಕ್ಕಳೆಷ್ಟೋ ಋಷಿಗಳಾದರು.

ಭಾರತದ ಮೇಲೆ ಅನೇಕ ಆಕ್ರಮಣಗಳಾಗಿವೆ. ಗ್ರೀಕರು, ಗುರ್ಜರರು, ಕುಷಾಣರು ಇತ್ಯಾದಿ, ಇವರೆಲ್ಲರೂ ಸ್ಥಳೀಯರೊಡನೆ ಸಂಘರ್ಷಕ್ಕಿಳಿದಿದ್ದಾರೆ. ಆದರೆ ಪರಸ್ಪರ ನಾಶವಾಗಲಿಲ್ಲ. ಬದಲಾಗಿ ತಮ್ಮ ತಮ್ಮ ಕೊಡುಗೆಯಿಂದ ಸಾಮರಸ್ಯದ ಸಂಸ್ಕೃತಿಯನ್ನು ಬೆಳೆಸಿದರು.

ಉದಾಹರಣೆಗೆ ಸಂಸ್ಕೃತ ನಾಟಕದಲ್ಲಿ ಮುಂದಿನ ಪರದೆ, 'ಯವನಿಕಾ' ಬಳಸುವ ಪದ್ಧತಿ ಗ್ರೀಕರಿಂದಲೇ ಬಂತು. ಗಾಂಧಾರ ಕಲೆಗೆ ಕಾನಿಷ್ಕರ ರಾಜಧಾನಿಯೇ ಕೇಂದ್ರವಾಗಿತ್ತು. ಯಾವ ರಜಪೂತರನ್ನು ಅತ್ಯಭಿಮಾನದಿಂದ ಕ್ಷತ್ರಿಯರು ಎಂದೊಪ್ಪಿ ಕೊಂಡಿರುವೆವೋ ಅಂಥ ಅನೇಕ ರಜಪೂತ ವಂಶಗಳ ಮೂಲದವರು ಹೂಣರೂ, ಗುರ್ಜರೂ ಆಗಿದ್ದಾರೆ.

ಪ್ರಕಟನೆ: ಉತ್ತರ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಮತ್ತು ವಿಚಾರ ಸಾಹಿತ್ಯ ೧೯೯೪, ಸಾಹಿತ್ಯ ಅಕಾಡೆಮಿ

ಇದೇ ಸರಣಿಯಲ್ಲಿ ಮಹಮದೀಯರ ಆಗಮನ ೮ನೇ ಶತಮಾನದಿಂದ ೧೬ನೇ ಶತಮಾನದವರೆಗೂ ನಡೆದಿದೆ. ಆದರೆ ಇವರ್‍ಯಾರೂ ಒಂದೇ ಮನೆತನಕ್ಕೆ ಸೇರಿದವರಲ್ಲ. ಮೊದಲು ಬಂದು ರಾಜ್ಯ ಕಟ್ಟಿದವರ ಮೇಲೆ ನಂತರದವರು ಯುದ್ಧ ಹೂಡಿದರು. ಆದ್ದರಿಂದ ಇದನ್ನು ರಾಜ ರಾಜರ ಮಧ್ಯೆಯೆ ಯುದ್ಧವಾಗಿ ಪರಿಗಣಿಸಬೇಕೇ ಹೊರತು ಎರಡು ಧರ್ಮಗಳ ಯುದ್ಧವಾಗಿ ಅಲ್ಲ.

ಇವರಲ್ಲಿ ಎಲ್ಲರೂ ರಾಜ್ಯಕಟ್ಟಲೂ ಬಂದವರಲ್ಲ, ಕೆಲವರು ಸುಲಿಗೆಗಾಗಿ ಬಂದರು ಮತ್ತು ಅದನ್ನು ಸಾಧಿಸಿಕೊಂಡು ಹೋದರು. ಉದಾಹರಣೆಗೆ ಘಜನಿ ಮಹ್ಮದ. ಮುಂದೆ ಬೇರೇಬೇರೆ ಮನೆತನದವರು ಬಂದರು. ಬಾಬರ ಯುದ್ಧ ಹೂಡಿದ್ದು ಮುಸ್ಲಿಂರಾಗಿದ್ದ ಲೋದಿ ಅರಸರ ಮೇಲೆ. ಎಲ್ಲಾ ಆಕ್ರಮಣದ ರೀತಿಯಲ್ಲೇ ಇದು ನಡೆದಿದೆ. ಇದಕ್ಕೆ ಧಾರ್ಮಿಕ ಸ್ವರೂಪ ಸಲ್ಲದು. ಗೆದ್ದವರು ಹಿಂದೂವಿರಲಿ ಮುಸ್ಲಿನಿರಲಿ ತಮ್ಮ ದಾರಿಗೆ ಅಡ್ಡ ಬಂದವರನ್ನು ತರಿದಿದ್ದಾರೆ. 'ತೈಮೂರಲಂಗ್‌ನು ದಿಲ್ಲಿಯ ಮೇಲೆ ದಾಳಿಮಾಡಿದಾಗ ಐದುಲಕ್ಷ ಇಂಡಿಯನ್ನರನ್ನು ಕೊಂದನು. ಅದರಲ್ಲಿ ಮೂರು ಲಕ್ಷ ಸೈನಿಕರು ಮುಸಲ್ಮಾನರು! ಗಜನಿ, ಘೋರಿ ಇಡೀದೇಶ ವಾಸಿಗಳ ದೃಷ್ಟಿಯಿಂದ ಹೊರಗಿನವರಾಗಿದ್ದರು. ಆದರೆ ಅದೇ ರಜಿಯ, ಶೇರಶಹನಂಥವರು ನಮ್ಮೆಲ್ಲರ ಪೂರ್ವಜರಾಗಿದ್ದರು' ಎಂದು ರಾಮಮನೋಹರ ಲೋಹಿಯಾ ಅನ್ನುತ್ತಾರೆ. ಆರ್ಯರು ಹೊರಗಿನವರಾದರೂ ನಂತರ ಭಾರತೀಯರು ಎನ್ನುತ್ತೇವೋ ಹಾಗೆ ಮೊದಲಿನ ಮಹಮದೀಯರು ಹೊರಗಿನವರಾದರೂ ನಂತರದವರು ಭಾರತೀಯರೇ ಆಗಿದ್ದಾರೆ.

ಆದರೆ ಭಾರತದ ಕಥೆ ಸಂಘರ್ಷದ್ದೇ ಅಲ್ಲ, ಅದು ಸಂಪೂರ್ಣವಾಗಿ ಸಾಮರಸ್ಯದ್ದಾಗಿದೆ. ಪರಸ್ಪರ ಹತ್ತಿರ ಬದುಕಬೇಕಾದವರು ಕೊಡುಕೊಳ್ಳುವಿಕೆಯನ್ನು ಮಾಡಲೇಬೇಕಾಗುತ್ತದೆ. ಕುಷಾಣರ ಕೊಡುಗೆಯಾದ ಪೈಜಾಮಿಗೆ ಆಧುನಿಕ ರೂಪ ಕೊಟ್ಟವರು ಮುಸ್ಲಿಂರು; ಇಂದಿನ ಹಿಂದು ಮಹಿಳೆಯರಿಗೆ ಪರಮ ಪವಿತ್ರವಾದ ಮೂಗಿನ ನತ್ತು ಮುಸ್ಲಿಂರದ್ದಾಗಿದೆ. ಇಂಥ ಸಾಮರಸ್ಯದ ಅತ್ಯುನ್ನತ ದಾಖಲೆಯೇ 'ದೀನ ಎ ಇಲಾಹಿ'. ಬಾಬರನೇ ತನ್ನ ಮಗನಿಗೆ ಹಿಂದುಗಳನ್ನು ಪ್ರೀತಿ ಸೌಹಾರ್ದತೆಯಿಂದ ನೋಡಿಕೊಳ್ಳಬೇಕೆಂದು ಹೇಳಿದ್ದನು. ಅದು ಮೊಮ್ಮಗ ಅಕ್ಬರನಲ್ಲಿ ಫಲಿಸಿತು. ಹಿಂದೂ-ಮುಸ್ಲಿಂ ಧರ್ಮದ ಒಳಿತಿನ ಅಂಶಗಳನ್ನು ತೆಗೆದು ಕಸಿ ಮಾಡಿದ ಪಂಥವೇ 'ದೀನ ಎ ಇಲಾಹಿ'. ಅಕ್ಬರ್ ಬೀರಬಲ್‌ರ ಕಥೆಯಂತೂ ಜನಜನಿತವಾಗಿದೆ. ಇಂಥ ಸಾಮರಸ್ಯದ ಅತ್ಯುನ್ನತ ಉದಾಹರಣೆಯಾಗಿ ಟಿಪ್ಪು ಸುಲ್ತಾನನನ್ನು ಗಮನಿಸಬೇಕು. ಮರಾಠರು (ಹಿಂದೂಗಳು) ಶೃಂಗೇರಿ ಮಠವನ್ನು ಸುಲಿದಾಗ ಅದರ ಹಾನಿಯನ್ನು ತುಂಬಿಕೊಟ್ಟು ಪ್ರಸಾದ ಸ್ವೀಕರಿಸಿ, ರಾಜ್ಯದ ಒಳಿತಿಗಾಗಿ ಪ್ರಾರ್ಥನೆ ಮಾಡಲು ಸ್ವಾಮಿಗಳನ್ನು ವಿನಂತಿಸಿಕೊಂಡವನು ಟಿಪ್ಪು.

ಲೋಕವನ್ನೇ ಸೂರೆಗೊಂಡಿರುವ ಅದ್ಭುತ ಕಲಾಕೃತಿ ತಾಜ್‌ಮಹಲ್‌ನಲ್ಲಿ ಮೈದಾಳಿದ ಹಿಂದೂ ಪಂಚರತ್ನ ರೀತಿಯ ವಿನ್ಯಾಸ ಮುಸ್ಲಿಂರ ಇರಾನಿ ಶಿಲ್ಪರೀತಿಗೆ ತೊಡಿಸಿದ ಭಾರತೀಯ ಶಿಲ್ಪಕಲೆಯ ಮುಕುಟಗಳು ಎಂದು ರಾಷ್ಟ್ರಕವಿ ಕುವೆಂಪು ಅನ್ನುತ್ತಾರೆ.

ಸೂಫಿ ಪಂಥ ಹಿಂದೂ-ಮುಸ್ಲಿಂ ತತ್ವಜ್ಞಾನದ ಸಾಮರಸ್ಯ ಸಂಕೇತ. ಉಪನಿಷತ್ತಿನ ತತ್ವಜ್ಞಾನ ಮುಸ್ಲಿಂರನ್ನು ಆಕರ್ಷಿಸಿದ್ದು, ಇಸ್ಲಾಂದ, ಬಂಧುತ್ವ, ಸಾಮಾಜಿಕ- ವ್ಯವಸ್ಥೆ ಹಿಂದುಗಳನ್ನು ಆಕರ್ಷಿಸಿದೆ. ಸತ್ಯದ ಸಾಕ್ಷಾತ್ಕಾರಕ್ಕಾಗಿ ಔರಂಗಜೇಬನಂಥ ಸರ್ವಾಧಿಕಾರಿಯನ್ನೇ ಸೂಫಿಗಳು ಎಮರುಹಾಕಿಕೊಂಡಿದ್ದಾರೆ. ಮುಸ್ಲಿಂ ಶಿಶುನಾಳ ಶರೀಫರಿಗೆ ಗೋವಿಂದ ಭಟ್ಟ ಗುರುವಾದರೆ ಹಿಂದೂ ಮಹಿಪತಿದಾಸನಿಗೆ ಮುಸ್ಲಿಂ ಸೂಫಿ ಷಹನುಂಗ್ ಗುರುವಾಗಿದ್ದಾರೆ. ಅಮೀರಖುಸ್ರೊ ಹಿಂದು- ಇರಾನಿ ರಾಗಗಳನ್ನು ಕಸಿ ಮಾಡಿ ಅನೇಕ ರಾಗಗಳನ್ನು ಕಂಡು ಹಿಡಿದನು. ಇವನೇ ಸಿತಾರವನ್ನು ಕಂಡುಹಿಡಿದವನು ಎನ್ನುತ್ತಾರೆ. ಅರಬಿ ಮತ್ತು ಹಿಂದೂ ಸಂಗೀತದ ಸಂಗಮದಿಂದಲೇ ಹಿಂದೂಸ್ಥಾನಿ ಎಂದು ಕರೆಯುವ ಎಂಬ ಸಂಗೀತ ಸಿದ್ಧವಾಯಿತು ಎನ್ನುವುದು ತಜ್ಞರ ಅಭಿಪ್ರಾಯ. ಅಕ್ಬರನ ಆಸ್ಥಾನದಲ್ಲಿ ಪ್ರಸಿದ್ಧನಾಗಿದ್ದ ತಾನ್‌ಸೇನ್ ಹರಿದಾಸ ಸ್ವಾಮಿಯ ಶಿಷ್ಯನೂ, ಸೂರದಾಸನ ಮಿತ್ರನೂ ಆಗಿದ್ದನಂತೆ.

ಜಗತ್ತಿನ ಅನೇಕ ರಾಷ್ಟ್ರಗಳು ಜನಾಂಗೀಯ, ಧರ್ಮೀಯ ಜಗಳದಲ್ಲಿ ಛಿದ್ರವಾಗಿವೆ. ಆದರೆ ಭಾರತ ಹಾಗಲ್ಲ. ಮೊದಲಿನಿಂದಲೂ ಬಹುಮುಖೀ ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದಿದೆ. ಆದ್ದರಿಂದ ಅದರ ಬಹು ಧರ್ಮೀಯತೆ ಪ್ರಜಾಪ್ರಭುತ್ವಕ್ಕೂ ರಾಷ್ಟ್ರೀಯ ಏಕತೆಗೂ ಮಾರಕವಾಗಬೇಕಾದುದಿಲ್ಲ. ಅನೇಕ ರಾಷ್ಟ್ರದವರ ಊಹೆಯನ್ನು ಸುಳ್ಳಾಗಿಸಿ ಭಾರತ ಒಂದಾಗಿ ಬಾಳಿ, ಬೆಳೆಯುವ, ಪ್ರಜಾ ಪ್ರಭುತ್ವವನ್ನು ನೆಲೆನಿಲಿಸುವ ನಿಟ್ಟಿನಲ್ಲಿ ನಡೆದಿದೆ. ಇದು ಭಾರತದ ಬಹುಮುಖೀ ಸಂಸ್ಕೃತಿಯ ಸಾಮರಸ್ಯದ ಫಲದಿಂದ ಮಾತ್ರ ಸಾಧ್ಯವಾಗಿದೆ. ಇದನ್ನು ಎರಡು ಕಡೆಯ ಮೂಲಭೂತವಾದಿಗಳು ಅರಿಯಬೇಕು. ಹಾಗೆಯೇ ಜನ ತಿಳಿಯಬೇಕು.

*

ಸಮಾನತೆಯ ತೊಯ್ದಾಟ

ಆಧುನಿಕ ಕಾಲದ ಸಂದರ್ಭದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ, ಬೃಹತ್ ಕೈಗಾರಿಕೆ ಮತ್ತು ಪ್ರಜಾಪ್ರಭುತ್ವ ಎಂಬ ತ್ರಿವಳಿ ಅನೇಕ ಸವಾಲು ಸಂಘರ್ಷಗಳನ್ನು ಉಂಟು ಮಾಡಿದೆ. ಪ್ರಪ್ರಥಮವಾಗಿ ವಿಜ್ಞಾನ ನಮಗೆ ಒಂದು ಸೆಕ್ಯುಲರ್ ದೃಷ್ಟಿ ಅಥವಾ ಲೋಕದೃಷ್ಟಿಯನ್ನು ಒದಗಿಸಿತು. ಸೆಕ್ಯುಲರ್ ಎಂದರೆ ಇಹಲೋಕಕ್ಕೆ ಸಂಬಂಧಿಸಿದ್ದು, ಅದರ ದೃಷ್ಟಿ ಧರ್ಮದಿಂದ ಬೇರೆಯಾದುದು ಎಂದು ಡಾ. ವಿ.ಕೃ. ಗೋಕಾಕ್ ಎನ್ನುತ್ತಾರೆ. (ಇಂಡಿಯಾ ಏಂಡ್ ವರ್ಲ್ಡ್ ಕಲಚರ್ ೧೯೭೨-೧೦೦) ವಿಜ್ಞಾನ ಕೊಟ್ಟ ಈ ಕೃಷ್ಟಿ ದೊಡ್ಡ ಕೈಗಾರಿಕೋದ್ಯಮ ಒದಗಿಸಿದ ಉತ್ಪಾದನೆಯ ವಿಧಾನ ಮತ್ತು ಉದ್ಯೋಗದ ವಿಧಾನ ಇವೆಲ್ಲವುಗಳಿಗೆ ಸಾಪೇಕ್ಷವಾಗೇ ಉಂಟಾದ ಪ್ರಜಾಪ್ರಭುತ್ವ ವ್ಯವಸ್ಥೆ ಈ ಎಲ್ಲ ಸಂಘರ್ಷಗಳನ್ನು ಉಂಟು ಮಾಡಿದೆ. ನಮ್ಮ ಪ್ರಜಾಪ್ರಭುತ್ವದ ಸಂವಿಧಾನ ಧರ್ಮ, ಜಾತಿ, ಲಿಂಗಗಳ ತಾರತಮ್ಯವನ್ನು ಮಾಡದೆ, ಎಲ್ಲರಿಗೂ ಸಮಾನ ಸ್ವಾತಂತ್ರ್ಯವನ್ನು ನೀಡಿದೆ. ಅಷ್ಟೇ ಅಲ್ಲ ಅಸ್ಪೃಶ್ಯತೆಯು ಅಪರಾಧವೆಂದಿದೆ. ಹಿಂದುಳಿದ, ಬುಡಕಟ್ಟಿನ ಮತ್ತು ಪರಿಶಿಷ್ಟಜಾತಿಗಳ ಉನ್ನತಿಗಾಗಿ ವಿಶೇಷ ಕಾರ್ಯಕ್ರಮಗಳನ್ನು ಸೂಚಿಸಿದೆ. ಸಂಸ್ಕೃತಿಯ ಧೋರಣೆಯಲ್ಲಿ ಸಾಂಪ್ರದಾಯಿಕ ದೃಷ್ಟಿಯನ್ನು ವಿಚ್ಛಿದ್ರಗೊಳಿಸಿದೆ. ೧೯೪೦ರಲ್ಲಿಯೇ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರೂ, ಶಿಕ್ಷಣತಜ್ಞರೂ ಸ್ವಾತಂತ್ರ್ಯ ನಂತರ ಶಿಕ್ಷಣ ಮಂತ್ರಿಗಳೂ ಆದ ಮೌಲಾನಾ ಅಬ್ದುಲ್ ಕಲಂ ಆಝಾದರು ಒಂದು ಎಚ್ಚರಿಕೆ ಎನ್ನುವಂತೆ ಈ ಮಾತನ್ನು ಹೇಳಿದರು.

ಮೌಲಾನಾ ಎಚ್ಚರಿಕೆ

"ನಮ್ಮ ಪೂರ್ವಾರ್ಜಿತ ನಮ್ಮೆಲ್ಲರ ಸಂಪತ್ತು ಎನ್ನಿಸಿದೆ. ನಾವು ಅದನ್ನು ಬಿಟ್ಟು ನಮ್ಮ ಕೂಡು ಜೀವನ ಪ್ರಾರಂಭವಾಗುವದಕ್ಕಿಂತ ಮುಂಚಿನ ಕಾಲಕ್ಕೆ ಹೋಗಲು ಬಯಸುವದಿಲ್ಲ. ಯಾವುದೇ ಹಿಂದೂ ಸಾವಿರಾರು ವರ್ಷಗಳ ತನ್ನ ಹಿಂದಿನ ಜೀವನ ಪದ್ಧತಿಯನ್ನು ಮತ್ತೆ ಈಗ ತರಬಯಸುವ ಕನಸು ಕಂಡರೆ ಅದು ಕೇವಲ ಭ್ರಾಮಕವಾಗುತ್ತದೆ. ಅದರಂತೆ ಯಾವುದೇ ಮುಸಲ್ಮಾನ ಸಾವಿರಾರು ವರ್ಷಗಳ ಹಿಂದೆ ಇರಾನ ಮತ್ತು ಮಧ್ಯ ಏಷ್ಯಾದಿಂದ ತಂದ ನಾಗರಿಕತೆ ಮತ್ತು ಸಂಸ್ಕೃತಿಯನ್ನು ಪುನಃ ಶುರು ಮಾಡುವ ಕನಸು ಕಂಡರೆ ಬಹುಬೇಗ ಅವರು ತಮ್ಮ ವ್ಯರ್ಥ ಪ್ರಯತ್ನದಿಂದ ಎಚ್ಚೆತ್ತು ಕೊಳ್ಳುತ್ತಾರೆ. ಇವು ವಾಸ್ತವಿಕ ನೆಲದಲ್ಲಿ ಬೇರು ಬಿಡುವ ವಿಚಾರವಲ್ಲ. ಧರ್ಮದ ಒಳಗಡೆ ಪುನರುಜ್ಜೀವನ ಅಂಶ ಅವಶ್ಯವಾಗಬಹುದು. ಆದರೆ

ಸಾಮಾಜಿಕ ಸಂದರ್ಭದಲ್ಲಿ ಅದು ಪ್ರಗತಿಯನ್ನು ತಡೆಯವ (ಹಳೆಯದರ ಕಡೆ ಮರಳುವದು) ಅಡ್ಡಿಯಾಗುತ್ತದೆಂಬ ಅಬಿಪ್ರಾಯ ನನ್ನದಾಗಿದೆ." (ಇಂಡಿಯಾಆ್ಯಂಡ್ ವರ್ಡ್ಲ ಕಲ್ಚರ್ ಉದ್ಧಾರಣೆ, ವಿ.ಕೃ ಗೋಕಾಕ, ೧೯೭೨, ೧೦೧) ಈ ಹಿನ್ನೆಲೆಯಲ್ಲಿ ಬಹಳ ಮುಖ್ಯವಾದ ಸಂಘರ್ಷವನ್ನು ಸ್ಥೂಲವಾಗಿ ಗಮನಿಸಲಾಗಿದೆ.

ಮೊದಲನೆಯದಾಗಿ ದಲಿತರ ಸ್ವಾಭಿಮಾನ ಚಳವಳಿ, ದಲಿತರ ಸ್ವಾಭಿಮಾನ ಚಳವಳಿ ನೂರು ವರ್ಷಗಳ ಹಿಂದೆ ಮಹಾತ್ಮಾ ಫುಲೆಯವರಿಂದಲೇ ಪ್ರಾರಂಭವಾದರೂ ಅದು ಡಾ. ಬಿ.ಆರ್. ಅಂಬೇಡ್ಕರರ ಕಾಲದಲ್ಲಿ ಪ್ರಜ್ವಲಿಸಿತು. ಇಡೀ ಭಾರತದಲ್ಲೇ ಈ ಚಳವಳಿ ದಲಿತರಲ್ಲಿ ಹೊಸ ಉತ್ಸಾಹವನ್ನು ಉತ್ತೇಜಿಸಿ ಹೊಸ ಬಾಳಿನ ಬಗೆಯನ್ನು ತೆರೆಯಿತು. ಹಾಗೆಯೇ ದಲಿತ ರೈತರಲ್ಲಿಯೂ ಅರಿವಿನ ವಿಸ್ತಾರಕ್ಕೆ ಕಾರಣವಾಯಿತು. ಅಂಬೇಡ್ಕರ ಪ್ರಚ್ಛನ್ನರಲ್ಲ. ಅವರ ಅಂತರಂಗ ಕೂಡ ಧಾರ್ಮಿಕವಾದದ್ದು. ಅಂತರಂಗ ಸಂಸ್ಕಾರಕ್ಕೆ ಅವರು ಮಹತ್ವ ಕೊಟ್ಟವರೇ. ಒಂದು ಮಾತಿನಿಂದ ಹೇಳುವದಾದರೆ ಅವರು ಧರ್ಮಕ್ಕಿಂತ ಸಂಸ್ಕೃತಿಗೆ ಹೆಚ್ಚು ಮಹತ್ವಕೊಟ್ಟವರು. ಮಾತ್ರವಲ್ಲ, ಗೌರವಿಸಿದವರು. ಎಂತಲೇ ಅವರು ದೇವರಿಲ್ಲದ ಆದರೆ ನೀತಿಯೇ ದೇವರಾದ ಧರ್ಮವನ್ನು ಆಯ್ದುಕೊಂಡರು. ದಲಿತರೂ, ಅಸ್ಪೃಶ್ಯತೆಯನ್ನು ಮತ್ತು ಇಡಿಯಾಗಿ ಚಾತುರ್ವರ್ಣ ಸ್ವರೂಪದ ಜಾತಿ ವ್ಯವಸ್ಥೆಯನ್ನು ನಿರಾಕರಿಸುತ್ತಾರೆ. ಹಾಗೆಯೇ ಊಳಿಗಮಾನ್ಯ ವ್ಯವಸ್ಥೆಯನ್ನು ಸಂಪೂರ್ಣ ನಿರಾಕರಿಸುತ್ತಾರೆ. ಅದರ ಸ್ಥಾನದಲ್ಲಿ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಯ ಸಮಾಜವಾದಿ ವ್ಯವಸ್ಥೆಯನ್ನು ತರಬಯಸುತ್ತಾರೆ. ಇದು ದಲಿತರದ್ದು ಮಾತ್ರವೇ ಆಗಿರದೆ ಅನೇಕ ಹಿಂದುಳಿದ ಜಾತಿ ಪಂಗಡಗಳ ಬಯಕೆ ಕೂಡಾ ಆಗಿದೆ.

ಇದೇ ಹೊತ್ತಿಗೆ ದಲಿತರಿಗೂ ಮತ್ತಿತರ ಜಾತಿ ಪಂಗಡಗಳಿಗೂ ತಮ್ಮದೇ ಅದ ಸಂಸ್ಕೃತಿಗಳಿವೆ. ಭಾಷೆಗಳಿವೆ. ಅವುಗಳನ್ನು ಪ್ರಸ್ತುತ ಮಾಡುವ ಅವಶ್ಯಕತೆಯನ್ನು ಮನಗುಂಡಿದ್ದಾರೆ. ಆದರೆ 'ಸಂಸ್ಕತಿ' ಎಂಬುದು ಸಾಮಾಜಿಕ, ಸಾಂಪತ್ತಿಕ ಸನ್ನಿವೇಶದಲ್ಲಿ ತನ್ನ ಆಗುವಿಕೆ "ನಡವಳಿಕೆ"ಯನ್ನು ಹದಗೊಳಿಸುತ್ತದೆ. ಈಗ ಮುರುಕು ಗುಡಿಸಲಿನ, ಒಡಕು ಮಡಕೆಯ, ಹರಕುವಸನದ ಸಂದರ್ಭ ಬದಲಾಗುತ್ತಿದೆ. ಶಿಕ್ಷಣ ಸರ್ವ ಸಮವಾಗಿದೆ. ಸಂಸ್ಕೃತಿಯ ಹೆಸರಿನಲ್ಲಿ ಸಾಂಪ್ರದಾಯಕ ಕುರುಡ ಅನುಕರಣೆ ಹಿಂದೆ ಸರಿದಿದೆ. ಆದ್ದರಿಂದ ವೈಜ್ಞಾನಿಕತೆ ಮತ್ತು ಹೊಸ ತಂತ್ರಜ್ಞಾನದ ಮೇಲು ಜಾತಿಗಳಲ್ಲಿಯಂತೆ ಕೆಳಜಾತಿಗಳಲ್ಲೂ ಹೊಸ ರೀತಿಯನ್ನು ಹೊಸ ನೀತಿಯನ್ನೂ ಉಂಟು ಮಾಡುತ್ತಿದೆ. 'ಮುಟ್ಟಬೇಡ, ಸಂಸ್ಕೃತಿ 'ಕೂಡುಕೊಳ್ಳುವ' ಸಂಸ್ಕೃತಿಗೆ ಇಂಬು ಕೊಡುತ್ತಲಿದೆ.

ಎರಡನೆಯದಾಗಿ ಸ್ತ್ರೀ ಸಮಾನತೆಯ ಪರಿಕಲ್ಪನೆ. ಮಹಿಳೆಯನ್ನು ಗೌರವದಿಂದ ಕಾಣುತ್ತೇವೆ. ಪೂಜಿಸುತ್ತೇವೆ. ರಕ್ಷಿಸುತ್ತೇವೆ. ಇವೆಲ್ಲ ಬೇರೆ. ೧೯೮೭ರಲ್ಲಿ ರಾಜಸ್ಥಾನದಲ್ಲಿ ರೂಪ್ ಕನ್ವರ್ ಎಂಬ ತರುಣ ವಿಧವೆಯನ್ನು 'ಸತಿ'ಗೊಪ್ಪಿಸಿ ಗೌರವೋತ್ಸವ ಆಚರಿಸಲಾಯಿತು. ೬೦ ವರ್ಷದ ಷಹಾಭಾನು ಎಂಬ ಮುಸ್ಲಿಂ ಮಹಿಳೆಗೆ ಅವಳ ಗಂಡ ತಲಾಖ್ ಕೊಟ್ಟಾಗ ಅವಳಿಗೆ ಸರ್ವೋಚ್ಚ ನ್ಯಾಯಾಲಯ ಕೊಡಮಾಡಿದ ಜೀನಾಂಶ ನಿರ್ಣಯವನ್ನು ಮುಸ್ಲಿಂ

ಮೂಲಭೂತವಾದಿಗಳು ವಿರೋಧಿಸಿದರು. ಇದು ಮಹಿಳೆಯರ ಸಂರಕ್ಷಣೆ ಹೇಗೆ ಆಗುತ್ತದೆ ಎಂಬುದಕ್ಕೆ ಒಳ್ಳೆಯ ಉದಾಹರಣೆಯಾಗಬಹುದು. ಆದರೆ ಸಂವಿಧಾನ ಹುಟ್ಟುಹಾಕಿದ ಸ್ತ್ರೀ ಸಮಾನತೆಯ ಪರಿಕಲ್ಪನೆಯೇ ಬೇರೆ. ಈ ಪರಿಕಲ್ಪನೆ ಕೌಟುಂಬಿಕ ಸ್ವರೂಪವನ್ನೇ ಬದಲು ಮಾಡುತ್ತದೆ. ಯಜಮಾನ, ಸೇವಕ, ದೈವಿಕ, ಲೌಕಿಕ ಇಂಥ ಸಂಬಂಧ ಸ್ವರೂಪವನ್ನು ಬದಲಿಸುತ್ತದೆ. ಇಲ್ಲಿ ದರ್ಪದ ಬದಲು ಸೌಜನ್ಯ; ಸರ್ವಾಧಿಕಾರದ ಬದಲು ಪ್ರಜಾಪ್ರಭುತ್ವ ನೀತಿಯ ನೆಲೆಯಾಗುತ್ತದೆ. ಇದು ಧಾರ್ಮಿಕ ನೆಲೆಯನ್ನು ಪ್ರಶ್ನಿಸುತ್ತದೆ. ಲೌಕಿಕ ಭದ್ರತೆಯನ್ನು ಒದಗಿಸುತ್ತದೆ. ಹಿಂದೂ, ಮುಸ್ಲಿಂ, ಕ್ರಿಶ್ಚನ್ ಎನ್ನುವ ಎಲ್ಲ ಹೆಂಗಸರ ಸಮಸ್ಯೆಯಾಗಿದೆ.

ಮೂರನೆಯದಾಗಿ ಕೋಮು ಸಾಮರಸ್ಯ ಅಥವಾ ಸೆಕ್ಯೂಲರಿಸಂ. ನಮ್ಮ ಸಂವಿಧಾನ ಯಾವ ಧರ್ಮವನ್ನೂ ರಾಷ್ಟ್ರಧರ್ಮವೆಂದು ಸ್ವೀಕರಿಸಲಿಲ್ಲ. ಧರ್ಮದ ಕುರಿತಾಗಿ ಅದರದ್ದು ಲೌಕಿಕ ದೃಷ್ಟಿ. ಆದರೆ ಎಲ್ಲ ಧರ್ಮಗಳಿಗೆ ಆಚರಣೆಯ ಸ್ವಾತಂತ್ರ್ಯದ ಖಾತ್ರಿಯನ್ನು ನೀಡಲಾಗಿದೆ. ಧಾರ್ಮಿಕ ಅಥವಾ ನಾಸ್ತಿಕ ಆಚರಣೆಯನ್ನು ಅವರವರ ಆತ್ಮಸಾಕ್ಷಿಗೆ ಬಿಡಲಾಗಿದೆ. ಆದರೆ ಭಾರತ ಹಿಂದೂ ರಾಷ್ಟ್ರವಾಗಬೇಕೆಂಬ ಹುಯಿಲನ್ನೆಬ್ಬಿಸಿ ಕೋಮು ಗಲಭೆಯನ್ನು ಪ್ರಚೋದಿಸುವ ಹಿಂದೂ ಮೂರ್ಖರಿರುವಂತೆ ಮುಸ್ಲಿಂ ಅಲ್ಲದ ಸರಕಾರಕ್ಕೆ ಮುಸ್ಲಿಂಮರನ್ನು ಆಳುವ ಅಧಿಕಾರವಿಲ್ಲ ಎಂದು ಫತ್ವಾ ಹೊರಡಿಸುವ ಮುಸ್ಲಿ ಮೂರ್ಖರೂ ಇದ್ದಾರೆ. ಮುಸ್ಲಿಂರಿಂದ ಹಿಂದೂ ಘನತೆ ನಾಶವಾಗಿದೆಯೆಂದು ಮಧ್ಯಕಾಲೀನ ಚರಿತ್ರೆಯ ಅಂಶಿಕ ದಾಖಲೆಯನ್ನು ಎತ್ತಿಹೇಳಿ ಮುಸ್ಲಿಂ ವಿರುದ್ಧ ಹಿಂದೂಗಳ ಭಾವವನ್ನು ಉದ್ರೇಕಗೊಳಿಸುವ ಹಿಂದೂಗಳಿದ್ದಂತೆ ತಮ್ಮ ಧರ್ಮ ಅಪಾಯದಲ್ಲಿದೆ ಎಂದು ಹೇಳುತ್ತಾ ಮುಸ್ಲಿಮರನ್ನು ಹಿಂದೂ ವಿರೋಧವಾಗಿ ನಿಲ್ಲಿಸಿ ಪವಿತ್ರ ಕುರಾನಿನ ಒಂದೊಂದೂ ವಾಕ್ಯ ಸತ್ಯ ಎಂದು ಹೇಳುತ್ತಲೇ 'ತಲಾಕ್, ಬುರುಕಿ' ಯಂಥ ಅಮಾನವೀಯ ನಡತೆಯನ್ನು ಸಮರ್ಥಿಸಿಕೊಂಡು ತಮ್ಮವರನ್ನು ಪ್ರಗತಿಯಿಂದ ಹಿಂದಕ್ಕೆ ತಳ್ಳುವ ಮುಸ್ಲಿಂರೂ ಇದ್ದಾರೆ. ನೆರೆಮನೆಯವರಾಗಿ ಬಾಳುತ್ತಿದ್ದವರೇ ಕತ್ತಿ ಚೂರಿಯಲ್ಲಿ ಇರಿದುಕೊಳ್ಳುವ, ಇಂದು ಮಿತ್ರರಾದವರು ನಾಳೆ ಶತ್ರುಗಳಾಗುವ, ಸದಾ ಸಂಶಯ ಮತ್ತು ಅಭದ್ರತೆಯಲ್ಲಿ ಬದುಕುವ ಪರಿಸ್ಥಿತಿಯನ್ನು ತಂದಿಡುವವರೂ ಇದ್ದಾರೆ. ಇವರು ಹಿಂದೂ, ಮುಸ್ಲಿಂರೂ ಸರಿ ಸುಮಾರು ಐದುನೂರು ವರ್ಷ ಒಟ್ಟೊಟ್ಟಾಗಿ ಬದುಕಿದರೂ, ಮತ್ತು ಈ ಬದುಕಿನಲ್ಲಿ ಉಂಟಾದ ಕೊಡು ಪಡೆ, ಕಲೆ ಸಂಸ್ಕಾರ, ತೋರಿದ ಸಂಘರ್ಷ, ಸಾಮರಸ್ಯದ ಚರಿತ್ರೆಯನ್ನು ಬಾಳಿನ ಒಳಿತಿನ ದೃಷ್ಟಿಯಿಂದ ನೋಡಲು ಕಲಿಯುವುದೇ ಇಲ್ಲ. ಇವರಿಗೆ ಇತಿಹಾಸ ವೆಂಬುದು ಧಾರ್ಮಿಕ ಪುನರುಜ್ಜೀವನದ ನೆಪದಲ್ಲಿ ಕೋಮು ದ್ವೇಷದ ಬೆಂಕಿಯನ್ನು ಹರಡಲು ಬೇಕಾದ ಕಿಡಿಗಳ ಆಕರವಾಗಿದೆ. ಇವರಿಗೆ ಚರಿತ್ರೆ ಏಕತೆಯಿಂದ ವಿವಿಧತೆಯ ಕಡೆಗೆ, ಸಂಕುಚಿತತೆಯಿಂದ ವಿಶಾಲತೆಯ ಕಡೆಗೆ ಸಂಘರ್ಷದಿಂದ ಸಾಮರಸ್ಯದ ಕಡೆಗೆ ವಿನ್ಯಾಸಗೊಂಡಿರುವ ರೀತಿಯ ಅರಿವೇ ಆಗುವುದಿಲ್ಲ. ಆದರೆ ನಮ್ಮ ಸಂದರ್ಭ ಅಂದರೆ ಭಾರತೀಯ ಪ್ರಜಾಪ್ರಭುತ್ವದ ಸಂದರ್ಭ ಸಂವಿಧಾನ ರಚನೆಯ ಅಂತಿಮ ಸಭೆಯಲ್ಲಿ ಡಾ. ಅಂಬೇಡ್ಕರ್ ಹೇಳಿದ, "ನಮಗೆ ನಾವೇ ಅಧಿಕಾರ ಕೊಟ್ಟುಕೊಂಡ ಪಂಥಕ್ಕೆ ಬದ್ಧವಾಗಿದ್ದೇವೆ. ನಾವು ಎಲ್ಲಿಯತನಕ ಧರ್ಮ, ಪಕ್ಷಗಳಿಗಿಂತ ರಾಷ್ಟ್ರ ಹೆಚ್ಚಿನದೆಂದು ಗ್ರಹಿಸುತ್ತೇವೆಯೊ ಅಲ್ಲಿಯ

ತನಕ ನಾವು ಸ್ವಾತಂತ್ರ್ಯವನ್ನು ರಕ್ಷಿಸುತ್ತೇವೆ. ಎಂದು ನಮ್ಮ ಧರ್ಮ, ಪಕ್ಷಗಳೇ ರಾಷ್ಟ್ರಕ್ಕಿಂತ ಹೆಚ್ಚಿನದೆಂದು ಗ್ರಹಿಸುತ್ತೇವೆಯೋ ಆಗ ನಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತೇವೆ" ಎಂಬ ಮಾತು ನಮಗೆ ನಿರ್ದೇಶಕ ಆದೇಶದಂತಿದೆ.

ಭಾರತ ಅನೇಕ ಧರ್ಮ ಪಂಥಗಳುಳ್ಳ, ಅಂತೆಯೇ ಅನೇಕ ಭಾಷೆ, ಸಂಸ್ಕೃತಿಗಳುಳ್ಳ ರಾಷ್ಟ್ರವಾಗಿದೆ. ಪರಮತ ಸಹನೆ ಮತ್ತು ಮತಧರ್ಮ ಸಾಮರಸ್ಯ ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದೆ ಆಗಬೇಕಾಗಿಯೂ ಇದೆ.

ವೈಜ್ಞಾನಿಕ ಕುತೂಹಲ, ಮಾನವೀಯತೆಯ ಕಡೆಗಿನ ತುಡಿತ, ಪ್ರಜಾಪ್ರಭುತ್ವವಾದಿ ಹೋರಾಟ, ಸಂವಿಧಾನಾತ್ಮಕವಾದ ನ್ಯಾಯಪ್ರಜ್ಞೆ, ಸೋದರತ್ವದ ಕಕ್ಕುಲತೆ, ವೈಯಕ್ತಿಕ ಮತ್ತು ಸಾಮಾಜಿಕವಾದ ನೀತಿ ಪ್ರಜ್ಞೆ, ಕ್ಷುಲ್ಲಕತೆಯನ್ನು ಮೆಟ್ಟಿನಿಲ್ಲುವ ದೃಢತೆ, ಸರಳವಾದ ಜೀವನಶೈಲಿ, ಅನುದ್ರಿಕ್ತವಾದ ಸೌಂದರ್ಯ ಪ್ರಜ್ಞೆ, ಇವು ಇಂದಿನ ಪರಿಸ್ಥಿತಿಯನ್ನು ನಿರೂಪಿಸುವ ಬಹುಮುಖ್ಯವಾದ ಅಂಶವಾಗಬೇಕಾಗಿದೆ. ಆದ್ದರಿಂದ ಜೇನು ನೊಣ ಅನೇಕ ಹೂವುಗಳ ಕಡೆ ಸಂಚರಿಸಿ, ಮಕರಂದವನ್ನೇ ಆಯ್ದು ಜೇನುತುಪ್ಪವೆಂಬ ಸ್ವಾದಿಷ್ಟವಾದ ಪದಾರ್ಥವನ್ನು ತಯಾರು ಮಾಡಿದಂತೆ ಸಂಸ್ಕೃತಿಯನ್ನು ರೂಪಿಸುವ ಇಂದಿನ ಸಂದರ್ಭದ ಆಕರಗಳ ಸಂಗ್ರಹವನ್ನು ಬಹು ಎಚ್ಚರಿಕೆಯಿಂದ ವಿಶಾಲವಾದ ಮಾನವೀಯ ತಳಹದಿಯಿಂದ ಮಾಡಬೇಕಾಗಿದೆ.

*

ಜಾಗತೀಕರಣ ಮತ್ತದರ ಸಾಂಸ್ಕೃತಿಕ ಪ್ರಭಾವ ಪರಿಣಾಮ

ರಾಜಕಾರಣಿ ಮತ್ತು ಅರ್ಥಶಾಸ್ತ್ರಜ್ಞರು ಸಂಬಂಧಿಸಿದ ವಿಷಯಗಳನ್ನು ವಿವರಿಸುವಾಗ ಖಚಿತವಾದ ಅಂಕೆ-ಸಂಖ್ಯೆಗಳ ಮೂಲಕ ಹೇಳುತ್ತಾರೆ; ಆದರೆ ಒಬ್ಬ ಸಾಹಿತಿ ಅದನ್ನು ರೂಪಕಗಳ ಮೂಲಕ ಹೇಳುತ್ತಾರೆ. ಈ ಮಾತನ್ನು ಒಂದು ಸಾಹಿತ್ಯ ಕೃತಿ ತೋರಿಸುವ ರೀತಿಗೂ ರಾಜಕಾರಣಿಗಳು, ಸಮಾಜಶಾಸ್ತ್ರಜ್ಞರು ಇತ್ಯಾದಿಯವರು ತರ್ಕದ ಮುಖಾಂತರ ವಾಸ್ತವವನ್ನು ವಿವರಿಸುವ ರೀತಿಗೂ ಇರುವ ಭಿನ್ನತೆಯನ್ನು ತೋರಿಸುವ ಬಗೆಗೆ ಹೇಳುತ್ತಾರೆ. ಆದರೆ ನಾನು ಇಲ್ಲಿ ವಿವರಿಸುವ ವಿಷಯ 'ಜಾಗತೀಕರಣ ಮತ್ತದರ ಪ್ರಭಾವ' ಎಂಬುದು ಒಂದು ಸಾಹಿತ್ಯ ಕೃತಿಯಾಗಿ ಅಲ್ಲ. ಆದ್ದರಿಂದ ಇದರ ರೀತಿ ಅಂಕೆ-ಸಂಖ್ಯೆಗಳನ್ನು ಅವಲಂಬಿಸುವಂತಹದು. ಆದರೆ ಅರ್ಥಶಾಸ್ತ್ರಜ್ಞನಾಗಲಿ, ಸಮಾಜಶಾಸ್ತ್ರಜ್ಞನಾಗಲಿ ಅಲ್ಲದ ನಾನು ಹಾಗೆ ವಿವರಿಸಲಾರೆ. ಆದ್ದರಿಂದ ನಾನು ಇಲ್ಲಿ ರೂಪಕದ ಭಾಷೆಗೇ ಶರಣಾಗಬೇಕು. ಆದರೆ ಒಂದು ವ್ಯತ್ಯಾಸವಿದ್ದೀತು. ಸಾಹಿತ್ಯದಲ್ಲಿ ರೂಪಕ ವಸ್ತುವಿನ ಸಂಕೀರ್ಣತೆಗೆ ವಾಹಕವಾದರೆ ಇಲ್ಲಿ ಅದು ಸರಳೀಕರಣಕ್ಕೆ ಸಹಕರಿಸಬೇಕೆಂಬುದು ನನ್ನ ಉದ್ದೇಶ.

ನಾವು ಬ್ರಿಟಿಷರ ವಸಾಹತುಶಾಹಿಯನ್ನು ಕಂಡುಂಡವರು. ಆ ಇತಿಹಾಸದಲ್ಲಿ ವೆಲ್ಲೆಸ್ಲಿ ಎಂಬ ಗವರ್ನರ ಜನರಲ್‌ನೊಬ್ಬನಿದ್ದ. ದೇಶೀ ರಾಜರ ಸಹಾಯಕ್ಕಾಗಿ ಆತ ಒಂದು ಪದ್ಧತಿಯನ್ನು ತಂದ. ಅದರ ಹೆಸರು 'ಸಹಾಯಕ ಸೈನ್ಯ ಯೋಜನೆ'. ಅದರ ಶರತ್ತುಗಳು ಹೀಗಿದ್ದವು.

೧. ದೇಶೀರಾಜರ ರಕ್ಷಣೆಗಾಗಿ ಅವರಲ್ಲಿ ಬ್ರಿಟಿಷ ಸೈನ್ಯವನ್ನು ಇಡಲಾಗುವುದು.

೨. ಆ ಸೈನ್ಯದ ಖರ್ಚನ್ನು ಸಂಸ್ಥಾನಿಕರು ಕೊಡಬೇಕು.

೩. ಸಂಸ್ಥಾನಿಕರು ಬ್ರಿಟಿಷರ ಮಿತ್ರರೊಡನೆ ಯುದ್ಧ ಮಾಡಲಾಗದು.

೪. ಬ್ರಿಟಿಷರ ವೈರಿಗಳೊಡನೆ ಸ್ನೇಹ ಬೆಳೆಸಕೂಡದು.

೫. ಅವರು ಸಾಕಿದ ಸೈನ್ಯವನ್ನು ಅವರಲ್ಲೇ ಇಡಲ್ಪಡುವ ಒಬ್ಬ ಅಧಿಕಾರಿಯ ಅನುಮತಿಯಿಂದ ಮಾತ್ರ ಉಪಯೋಗಿಸಬೇಕು.

ಇದು ಎಷ್ಟು ಸುಂದರವಾದ ಯೋಜನೆ ನೋಡಿ; ಸಂಸ್ಥಾನಿಕರ ಸಂರಕ್ಷಣೆಗೆ ಇದಕ್ಕಿಂತ ಉತ್ತಮ ವ್ಯವಸ್ಥೆ ಬೇರೇನು ಬೇಕು? ಅಂದರೆ ಸಂಸ್ಥಾನಿಕರು ಮಹಾರಾಜರೇ, ರಾಜ್ಯದ

ಮುಖ್ಯಾಧಿಕಾರಿಗಳೇ. ಉದಾಹರಣೆಗೆ ಹೇಳುವುದಾದರೆ ಮೈಸೂರು ದಸರೆಯಲ್ಲಿ ಆನೆಯ ಮೇಲೆ ಚಿನ್ನದ ಅಂಬಾರಿ ಏರಿ ಮೆರವಣಿಗೆ ಹೊರಡುವವರ ಅರಸರೆ. ಆದರೆ ಅರಸರ ಜುಟ್ಟು ಇರುವುದು ಬ್ರಿಟಿಷರಲ್ಲಿ.

ಬ್ರಿಟಿಷರ ಸಂತಾನದವರೇ ಅಮೇರಿಕನ್ನರು. ಇತರ ಪಾಶ್ಚಿಮಾತ್ಯರು ಕೂಡ. ಈಗ ಜಾರಿಗೆ ಬಂದ ಜಾಗತೀಕರಣ ಎಂಬುದು ಬ್ರಿಟಿಷ ವಸಾಹತುಶಾಹಿಯ ಅಮೇರಿಕನ್ ಸುಧಾರಿತ ರೂಪವಾಗಿದೆ. ಅದು ಬಂಡವಾಳಶಾಹಿಯಾದರೆ ಇದು ಸಾಮ್ರಾಜ್ಯಶಾಹಿ. ಸೋವಿಯಟ್ ಕ್ರಾಂತಿ ಬ್ರಿಟಿಷ್ ವಸಾಹತುಶಾಹಿಯನ್ನು ಅಲುಗಾಡಿಸಿದರೆ ಸೋವಿಯಟ್ ಕುಸಿತ ಸಾಮ್ರಾಜ್ಯಶಾಹಿಗೆ ಇದ್ದ ಬಲವಾದ ತೊಡಕನ್ನು ನಿವಾರಿಸಿದಂತಾಯಿತು. ಇನ್ನೂ ಒಂದು ಮಹತ್ವದ ಸಂಗತಿಯಂದರೆ ಬ್ರಿಟಿಷ್ ಬಂಡವಾಳಶಾಹಿಯ ಕಾಲದಲ್ಲಿ ನಮ್ಮೆದುರೇ ನಮ್ಮ ವೈರಿ ಇದ್ದರು. ನಮ್ಮ ಹೋರಾಟ ನೇರವಾಗಿರಲು ಸಾಧ್ಯವಿತ್ತು. ಆದರೆ ಈ ಸಾಮ್ರಾಜ್ಯಶಾಹಿಯನ್ನು ಎದುರಿಸಲು ನಮ್ಮೆದುರು ನಮ್ಮ ವೈರಿಯೇ ಇಲ್ಲ.

ಜಾಗತೀಕರಣದ ಈ ಚಕ್ರವ್ಯೂಹದ ಒಳಗೆ ಹೊಕ್ಕಮೇಲೆ ಹೊರಬೀಳುವಂತೆಯೇ ಇಲ್ಲ. ಆದರೆ ಅಭಿಮನ್ಯುವಿಗೆ ಹೊಕ್ಕಬೇಕಾದ ಅನಿವಾರ್ಯವೂ ಇತ್ತಲ್ಲ? ಆದರೆ ನಾನು ಆಶಾವಾದಿ. ನಾವು ಅಭಿಮನ್ಯು ಆಗಬೇಕಾದುದಿಲ್ಲ. ಕಾಲ ಬಹಳ ಮುಂದೆ ಸರಿದಿದೆ. ಆದ್ದರಿಂದ, ಬಹಳ ಕಷ್ಟದ ಕೆಲಸವಾದರೂ ನಾವು ಅರ್ಜುನನಾಗ ಬೇಕೆಂಬುದು ನನ್ನ ಆಶೆ.

ಇದು ಏಕಮುಖವಾಯಿತೆಂದೆನ್ನುತ್ತೀರೇನು? ಅದನ್ನು ನಾನೂ ಪೂರ್ತಿಯಾಗಿ ತಿರಸ್ಕರಿಸಲಾರೆ. ಆದರೆ ಇದು ಒಂದು ರೂಪಕ; ಅತ್ಯುತ್ತಮವಾದ ರೂಪಕ. ಇದನ್ನು ಹೇಳುವಾಗ ತೃತೀಯ ಜಗತ್ತಿನ ರಾಷ್ಟ್ರಗಳನ್ನೊಳಗೊಂಡೇ ಭಾರತ ನನ್ನ ಮನಸ್ಸಿನಲ್ಲಿದೆ.

ಹಾಗಾದರೆ ಇಲ್ಲಿ ನಾವು 'ಜಾಗತೀಕರಣ' ಎಂದರೇನು ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕು. 'ಜಾಗತೀಕರಣ'ವೆಂದರೆ ಜಗತ್ತಿನ ಸಂಪರ್ಕ, ಜಗತ್ತಿನೊಡನೆಯ ವ್ಯವಹಾರ ಎಂದು ಕರೆದರೆ ಅದು ಮುಗ್ಧತ್ವವಾಗುತ್ತದೆ. ಯಾಕೆಂದರೆ ಇದೇ ಅದರ ವ್ಯಾಖ್ಯೆ ಆಗಿದ್ದರೆ ಜಾಗತಿಕ ಸಂಪರ್ಕ ನಮಗೆ ಹೊಸದಲ್ಲ. ನಮ್ಮ ಸಂಸ್ಕೃತಿಯಲ್ಲೇ ಆ ಮುಕ್ತತೆ ಇದೆ. ಅದು ನಮಗೆ ಇಂದಿಗೂ ಬೇಕಾದುದೇ.

ನಮ್ಮ ಸಂಸ್ಕೃತ ನಾಟಕಕ್ಕೆ ಗ್ರೀಕ್ ಥೇಟರಿನ ಸಂಪರ್ಕ ಇರಬಹುದೆಂದು ವಿದ್ವಾಂಸರು ಊಹಿಸುತ್ತಾರೆ. ನಮ್ಮ ವ್ಯಾಪಾರ ಸಂಬಂಧ ಅರಬಸ್ತಾನದೊಡನಿತ್ತು ಎಂಬುದು ನಮಗೆ ಗೊತ್ತು. ನಿರಂಜನರ 'ಮೃತ್ಯುಂಜಯ' ಕಾದಂಬರಿಯಲ್ಲಿ ಕೆಪ್ಪ ಎಂಬ ವ್ಯಾಪಾರಿಯು ಇಜಿಪ್ತಿನಿಂದ ದಕ್ಷಿಣ ಕನ್ನಡದ ತುಳುನಾಡಿಗೂ ಬರುತ್ತಿದನೆಂಬ ಸಂಗತಿ ಇದೆ. ಧಾರ್ಮಿಕವಾಗಿಯಂತೂ ಬೌದ್ಧ ಧರ್ಮ ಚೀನಾ, ಶ್ರೀಲಂಕ, ಕಾಂಬೋಡಿಯಾ, ಜಪಾನ, ಮೊದಲಾದ ಕಡೆಗೆ ಸಂಪರ್ಕ ಕಲ್ಪಿಸಿದೆ. ಹಾಗೆ ಕೇಳಿದರ ಮಬ್ಬುಗತ್ತಲಿನಲ್ಲಿ ನಾವು ತಡವರಿಸುತ್ತಿರುವಾಗ ಆಧುನಿಕತೆಯ ಬೆಳಕನ್ನು ಬ್ರಿಟಿಷ್ ನೀಡಿಲ್ಲವೇ? ನಮ್ಮ ಪೂರ್ವಿಕರು ಕಿಡಕಿಗಳನ್ನು ತೆರೆದಿಡಿ; ಬೆಳಕು ಎಲ್ಲಾ

ಕಡೆಯಿಂದ ಬರಲಿ' ಎಂದವರು. ಗಮನಿಸಿ, ಅವರು ಹೇಳಿದ್ದು ಕಿಡಕಿ; ಬಾಗಿಲಲ್ಲ. ಆದ್ದರಿಂದ ಇದೇ ಜಾಗತೀಕರಣ ಎಂದಾದರೆ ಅದರ ಬಗ್ಗೆ ಭಯಪಡಲೂ ಬೇಕಿಲ್ಲ; ತಲೆ ಕೆಡಿಸಿಕೊಳ್ಳಲೂ ಬೇಕಿಲ್ಲ. ಆದರೆ ಈಗ ನಾವು ಜಾಗತೀಕರಣ ಎಂದು ಕರೆಯುವುದು ೧೯೯೧ ರಿಂದ ರಾಜೀವಗಾಂಧಿ ಮತ್ತು ಮನಮೋಹನಸಿಂಗ್ ಜಾಗತಿಕ ವಾಣಿಜ್ಯ ಸಂಘಟನೆಯೊಡನೆ ಮಾಡಿಕೊಂಡ ವಾಣಿಜ್ಯ ಸಂಬಂಧದ ವಾಣಿಜ್ಯ ವ್ಯವಸ್ಥೆಗೆ. ಆದ್ದರಿಂದ ಅಲ್ಲಿಯವರೆಗಿನ ನಮ್ಮ ವಾಣಿಜ್ಯ ನೀತಿಗೂ ನಂತರಕ್ಕೂ ಬಹಳ ವ್ಯತ್ಯಾಸವಿದೆ. ಹೀಗೆ ಮನಮೋಹನ ಹೆತ್ತ ಶಿಶು 'ಮನಮೋಹಿನಿ' ಯಾಗಿ ನಮ್ಮ ಮುಂದಿದೆ. ಈ 'ಜಾಗತೀಕರಣ'ವೆಂಬ ಮನಮೋಹಿನಿಗೆ ಅಮೇರಿಕಾ ಎಂದು ಮತ್ತೊಂದು ಹೆಸರು. ಇಂದಿನ ನಮ್ಮ ಮೇಲೆ ಮಧ್ಯಮ ವರ್ಗದ ತಾಯಿ ತಂದೆಗಳು ತಮ್ಮ ಮಕ್ಕಳಿಗಾಗಿ ಕನಸು ಕಾಣುವುದೇ 'ಅಮೇರಿಕಾ'

ನಮ್ಮ ಸ್ವಾಂತ್ರ್ಯ ಹೋರಾಟ ಶುರುವಾಗಿರುವುದು ವಾಣಿಜ್ಯ ಸಂಬಂಧದಿಂದಲೇ (ವಸಾಹತುಶಾಹಿ ಬಂದುದೂ ಅದೇ ಸಂಬಂಧಕ್ಕಾಗಿ) ದಾದಾಬಾಯಿ ನವರೋಜಿಯಂಥವರು ಭಾರತದಿಂದ ನಮ್ಮ ರೂಪಾಯಿ ಇಂಗ್ಲೆಂಡಿಗೆ ಹರಿದು ಹೋಗುವ ರೀತಿಯನ್ನು ಚಿತ್ರಿಸುತ್ತಾರೆ. ಅದರಿಂದ ನಮ್ಮ ದೇಶ ಪ್ರತಿವರ್ಷ ಒಂದಲ್ಲಾ ಒಂದು ಕಡೆಗೆ ಬರಗಾಲ ಬೀಳುತ್ತಿತ್ತು ಎಂಬುದು ತಿಳಿದ ವಿಷಯ. ಈ ಹಿರಿಯರೆಲ್ಲರಿಗೆ ದೇಶ ಎಂದರೆ ದೇಶದಲ್ಲಿ ಬಾಳುತ್ತಿರುವ ಜನರೇ ಆಗಿದ್ದಾರೆ. ಬ್ರಿಟಿಷ್ ವಸಾಹತುಶಾಹಿ ಭಾರತವನ್ನು ಯಾವ ಸ್ಥಿತಿಗೆ ತಂದಿತ್ತು ಎಂಬುದನ್ನು ಕಾರ್ಲ್ ಮಾರ್ಕ್ಸ್ ಹೀಗೆ ಗುರುತಿಸಿದ್ದಾರೆ.

".... ಅವರು ದೇಶೀಯ ಸಮುದಾಯಗಳನ್ನು ಒಡೆಯುವ ಮೂಲಕ ದೇಶೀಯ ಕೈಗಾರಿಕೆಯನ್ನು ಮೂಲೋತ್ಪಾದನೆ ಮಾಡುವ ಮೂಲಕ ದೇಶೀಯ ಸಮಾಜದಲ್ಲಿ ಮಹೋನ್ನತವಾದುದೆಲ್ಲವನ್ನೂ ಉಚ್ಚವಾದುದೆಲ್ಲವನ್ನೂ ನೆಲಸಮ ಮಾಡುವ ಮೂಲಕ ಆ ನಾಗರಿಕತೆಯನ್ನು ನಾಶಮಾಡಿದರು. ಭಾರತದಲ್ಲಿ ಅವರ ಅಧಿಪತ್ಯದ ಪುಟಗಳನ್ನೆಲ್ಲ ಈ ವಿನಾಶವನ್ನೂ ಬಿಟ್ಟು ಬೇರೆ ಏನನ್ನು ಹೇಳುವುದಿಲ್ಲ. ಪುನರುಜ್ಜೀವನದ ಕಾರ್ಯವನ್ನು ಈ ಭಿನ್ನಾವಶೇಷಗಳ ರಾಶಿಗಳ ಮಧ್ಯೆ ಕಾಣುವುದು ದುಸ್ಸಾಧ್ಯ. ಆದರೂ ಪುನರುಜ್ಜೀವನದ ಕಾರ್ಯ ಪ್ರಾರಂಭವಾಗಿದೆ."[೧]

ಇಲ್ಲಿ ನಾನು ಗಮನಿಸುವುದು ಅದರ ಆರ್ಥಿಕ ದುರವಸ್ಥೆಯನ್ನು. ಪುನರುಜ್ಜೀವನ ಕಾರ್ಯವೆಂದರೆ ಹೊಸ ಭಾರತದ, ಸ್ವತಂತ್ರ ಭಾರತದ ಕನಸು. ಸ್ವತಂತ್ರ ಭಾರತದಲ್ಲಿ ನಿರುದ್ಯೋಗಗಳಿರುವುದಿಲ್ಲ. ಹಾಗೂ ಬಡತನದ ನಿವಾರಣೆಗೆ ಸದಾ ಪ್ರಯತ್ನಗಳು ನಡೆಯುತ್ತವೆ.

ಸ್ವಾತಂತ್ರ್ಯ ಸಿಕ್ಕುವ ಪೂರ್ವದಲ್ಲೇ ನಮ್ಮಲ್ಲಿ ಅನಿವಾರ್ಯವಾಗಿಯಾದರೂ ದೊಡ್ಡ ಕೈಗಾರಿಕೀಕರಣ ಪ್ರಾರಂಭವಾಗಬೇಕಿತ್ತು. ಹಾಗೆ ಆಗಿದೆ. ಸ್ವಾತಂತ್ರ್ಯ ಹೋರಾಟದ ಕೊನೆಯ ಭಾಗದಲ್ಲಿ ರಾಷ್ಟ್ರೀಯ ಕಾಂಗ್ರೇಸು ಸ್ವತಂತ್ರ ಭಾರತದಲ್ಲಿ ಸಮಾಜವಾದಿ ಸಮಾಜ ರಚನೆಯ ಕನಸು ಕಂಡಿತ್ತು. ಇಷ್ಟು ಮಾತ್ರವಲ್ಲ ನಮ್ಮಲ್ಲಿ ಸಾಂಸ್ಕೃತಿಕವಾಗಿ ಮೂಡಿಸಿದ ಎಚ್ಚರ, ಚಳವಳಿ ಚರಿತ್ರೆಯ ಚಾಲಕ ಶಕ್ತಿಯಾಗಿದೆ. ಅಸ್ಪೃಶ್ಯತೆಯ ನಿವಾರಣೆ, ಭೂಸುಧಾರಣೆ, ಆರ್ಥಿಕ

ಸಮೃದ್ಧಿಗಾಗಿ ಪಂಚವಾರ್ಷಿಕ ಯೋಜನೆ, ಸರ್ವರಿಗೂ ವೋಟಿನ ಹಕ್ಕು, ಸ್ವತಂತ್ರ ಸಂವಿಧಾನ, ಒಟ್ಟಾರೆಯಾಗಿ ಕವಿ ವಾಣಿಯಲ್ಲಿ ಹೇಳುವುದಾದರೆ ಸರ್ವರಿಗೆ ಸಮಪಾಲು, ಸರ್ವರಿಗೆ ಸಮಬಾಳು, ಎಂಬ ಕನಸಿಗಾಗಿ ಹೋರಾಟ ನಡೆಯಿತು. ಈ ಕಾವು ಸ್ವಾತಂತ್ರ್ಯ ಸಿಕ್ಕಿದ ಕಾಲವಲ್ಲಿ ಎಚ್ಚರವಾಗೇ ಇದ್ದಿತು.

'ಔದ್ಯೋಗಿಕತೆ' ಇಲ್ಲವೇ ಸಾವು' ಎನ್ನುವಂಥ ಮಾತನ್ನು ಸರ್. ವಿಶ್ವೇಶ್ವರಯ್ಯನವರು ಎಂದರೆ, ಬಾಂಬೆ ಪ್ಲಾನ್ ಎಂಬುದು ಕೂಡ ದೊಡ್ಡ ಕೈಗಾರಿಕೀಕರಣವನ್ನು ಮುಂದಿಟ್ಟಿತು.

ಆಗ ದೇಶೀ ಬಂಡಾಶಾಹಿಗಳಲ್ಲಿ ಅಷ್ಟೊಂದು ಬಂಡವಾಳಗಳಿರುವದಿಲ್ಲ. ಆದ್ದರಿಂದ ಉಳಕಿ ಕೈಗಾರಿಕಾ ಬೆಳವಣಿಗೆಗೆ ಸಹಾಯಕವಾಗುವ ಮುಖ್ಯ ಕೈಗಾರಿಕೆಯನ್ನು ಅಂದರೆ ವಿದ್ಯುತ್ ಉತ್ಪಾದನೆ, ಕಲ್ಲಿದ್ದಲು, ಉಕ್ಕು, ರಸ್ತೆ ನಿರ್ಮಾಣ ಇತ್ಯಾದಿ ಕಾರ್ಖಾನೆಗಳನ್ನು ಸರ್ಕಾರಿ ಆಶ್ರಯದಲ್ಲಿ ಸ್ಥಾಪಿಸಲಾಯಿತು. ಅದಕ್ಕೆ ಸಾರ್ವಜನಿಕ ವಲಯ ಅಥವಾ ಪಬ್ಲಿಕ್ ಸೆಕ್ಟರ್ ಎಂದು ಕರೆಯಲಾಯಿತು. ಈ ಸಾರ್ವಜನಿಕ ಕ್ಷೇತ್ರದಲ್ಲಿ ಉದ್ಯೋಗ ನಿರ್ಮಾಣದ ಗುರಿ ಕೂಡ ಇತ್ತು. ಹೀಗೆ ಉತ್ಪಾದನೆ ಮಾಡಿದ ಮೂಲ ವಸ್ತುಗಳನ್ನು ದೇಶೀಯ ಬಂಡವಾಳಗಾರರಿಗೆ ಅಗ್ಗದ ದರದಲ್ಲಿ ಕೊಡಲಾಯಿತು. ಇದರಿಂದ ದೇಶದ ಬಂಡವಾಳಶಾಹಿ ಬೆಳೆಯಿತು.

ಹಾಗೆಯೇ ನಮಗೆ ಹೊಸ ತಂತ್ರಜ್ಞಾನ ಬೇಕು; ಉತ್ಪತ್ತಿ ಬೇಕುವನ್ನುವಾಗ ವಿದೇಶಿ ಕಂಪನಿಗಳಿಗೆ ಆಹ್ವಾನಿಸಲಾಯಿತು. ಈ ದಿಸೆಯಲ್ಲಿ ಮೊದಲು ರಷಿಯಾ ಸಹಕರಿಸಿತು. ನಂತರ ಇತರರೂ ಮುಂದೆ ಬಂದರು.

ಹೀಗಾದಾಗ ನಾವು ಗ್ರಹಿಸಬೇಕಾದ ಮುಖ್ಯ ಸಂಗತಿಯೆಂದರೆ ಅದು ವಿದೇಶಿ ಕಂಪನಿಯ ಮುಕ್ತ ಗುತ್ತೇ ದಾರಿ ಆಗಿರಲಿಲ್ಲ. ಕಂಪನಿಯಲ್ಲಿ ಅರ್ಧಕ್ಕಿಂತಲೂ ಹೆಚ್ಚು ಷೇರುಗಳನ್ನು ಸರಕಾರ ಹೊಂದಿರುತ್ತಿತ್ತು ಹೆಚ್ಚೆಂದರೆ ೫೧:೪೯. ಹೀಗೆ ಯಾಕೆಂದರೆ ಆ ಕಂಪನಿಯ ಮೇಲೆ ದೇಶಿ ಸರಕಾರದ ಹಿಡಿತ ಇರಬೇಕು. ಹಾಗೆಯೇ ದೇಶಿ ಉದ್ದಿಮೆಯನ್ನು ಬೆಳೆಸುವ ಕ್ರಮವಾಗಿ, ದೇಶದಲ್ಲಿ ಉತ್ಪನ್ನವಾಗುವ ಸರಕುಗಳಿಗೆ ಮತ್ತು ಸಣ್ಣ ಕೈಗಾರಿಕೆಗಳಿಗೆ ರಕ್ಷಣೆ ಕೊಡುವ ಉದ್ದೇಶದಿಂದ ವಿದೇಶದಿಂದ ಬರುವ ಸರಕಿನ ಮೇಲೆ ಆಮದಿನ ಸುಂಕ ಏರಿಕೆಯಲ್ಲಿರುತ್ತಿತ್ತು. ಅಂದರೆ ವಿದೇಶಿ ಕಂಪನಿಗಳಿಗೆ ಇಲ್ಲಿ ಅಗ್ಗದಲ್ಲಿ ಮಾರಲು ಸಾಧ್ಯವಾಗುತ್ತಿರಲಿಲ್ಲ. ಹೀಗಾಗಿ ದೇಶಿ ಉದ್ದಿಮೆ ಬೆಳೆಯಲು ಸಹಾಯಕ.

ಆದರೆ ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಆಡಳಿತ ಇದ್ದದ್ದು ಮೇಲು ಮಧ್ಯಮ ವರ್ಗ ಮತ್ತು ಶ್ರೀಮಂತ ವರ್ಗದ ಕೈಯಲ್ಲಿ. ಬಂಡವಾಳಗಳಿಗೆ ಮತ್ತು ದೊಡ್ಡ ಭೂಮಾಲಿಕರಿಗೆ ಸಹಾಯಕರಾಗೇ ಉಳಿಯವುದು ಅವರ ವರ್ಗ ಸ್ವಭಾವಕ್ಕನು ಗುಣವಾಗಿದೆ.

ರಾಜೀವಗಾಂಧಿ ಅಧಿಕಾರಕ್ಕೆ ಬರುವ ಮೊದಲ ಕಾಲದಲ್ಲೂ ಮತ್ತು ಅವರದೇ ಕಾಲದಲ್ಲೂ ನಾವು ಗಮನಿಸುವುದಾದರೆ ಭಾರತದಲ್ಲಿ ಒಳರಚನೆ (ಇನ್‌ಫ್ರಾಸ್ಟ್ರಕ್ಚರ್) ಅಭಿವೃದ್ಧಿ ಹೊಂದಿರಲಿಲ್ಲ. ಆದರೆ ಮಧ್ಯಮ ವರ್ಗದವರ ಸಂಖ್ಯೆ ಬೆಳೆಯಿತು. ಹಾಗೆಯೇ ಅವರ ಕೈಯಲ್ಲಿ ಹಣ ಓಡಾಡಿತು.

ಆದ್ದರಿಂದ ವಿಲಾಸಿ ಸರಕುಗಳ ಮಾರುಕಟ್ಟೆ ಬೆಳೆಯಿತು. ಭೂಸುಧಾರಣೆ ಆಗಿರಲಿಲ್ಲ. ಬಡವರ ಸ್ಥಿತಿ ಸುಧಾರಿಸಲಿಲ್ಲ. ಜನರಲ್ಲಿ ಕೊಳ್ಳುವ ಶಕ್ತಿ ಕಡಿಮೆಯಾಯಿತು. ಆದ್ದರಿಂದ ಭಾರತದ ಮಾರುಕಟ್ಟೆ ಸಂಕೋಚನ (ಶ್ರಿಂಕ್) ಗೊಂಡಿತು. ಲಾಭ ಮಾಡಿಕೊಂಡ ಬಂಡವಾಳಿಗಳು ತೆರಿಗೆಯನ್ನು ಕೊಡಬೇಕು ತಾನೆ? ಆದರೆ ಬಂಡವಾಳಶಾಹಿ ಪ್ರತಿನಿಧಿಗಳೇ ಸರಕಾರ ನಡೆಸುವವರಾದ್ದರಿಂದ ನೇರ ತೆರಿಗೆ (ಡೈರೆಕ್ಟ್ ಟ್ಯಾಕ್ಸ್) ಹಾಕುವ ಬದಲು ಹೆಚ್ಚು ಹೆಚ್ಚು ಅಪ್ರತ್ಯಕ್ಷ ತೆರಿಗೆ (ಇಂಡೈರೆಕ್ಟ್ ಟ್ಯಾಕ್ಸ್) ಹಾಕಿತು. ಇದರಿಂದಾಗಿ ಸರಕಾರಿ ಬೊಕ್ಕಸಕ್ಕೆ ಹೆಚ್ಚು ಹಣ ಜಮಾ ಆಗಲಿಲ್ಲ. ಅಂದರೆ ಅಭಿವೃದ್ಧಿಗಾಗಿ ಮತ್ತು ಯಥಾವತ್ ಕಾರ್ಯ ನಿರ್ವಹಣೆಗಾಗಿ ಕೊರತೆಯ ಬಜೆಟ್ ಬರತೊಡಗಿತು. ಅದನ್ನು ತುಂಬಿಕೊಳ್ಳಲು ಒಳಗಿನಿಂದ ಮತ್ತು ಹೊರಗಿನಿಂದ ಸಾಲ ಎತ್ತಲಾಯಿತು. ವಿದೇಶಿ ಹಣ ಬಡ್ಡಿಗೂ ಸಾಲದಾಯಿತು. ಈಗ ಎರಡು ದಾರಿಗಳು ತೆಗೆದುಕೊಂಡವು. ಒಂದು ವಿದೇಶಿ ಸಾಲ ಮತ್ತೊಂದು, 'ಬನ್ನಿ, ಖಾಸಗಿ ಕಂಪನಿಗಳೇ, ಬನ್ನಿ, ನಿಮಗೆ ರತ್ನ ಹಾಸುತ್ತೇವೆ. ನಮ್ಮಲ್ಲಿ ಉದ್ಯೋಗ ಶುರುಮಾಡಿ. ನಮಲ್ಲಿ ಕಾಸಿಲ್ಲ', ಎಂದು ಜಗತ್ತೆಲ್ಲ ಕೇಳುವಂತೆ ಕೂಗುವುದು.

ಇದೇ ರೀತಿ ಬೆಳವಣಿಗೆ ಹೊಸದಾಗಿ ಸ್ವಾತಂತ್ರ್ಯ ಪಡೆದ ಎಲ್ಲ ದೇಶಗಳಲ್ಲಿ ಇತ್ತು. ಹೆಚ್ಚು ಮಟ್ಟಿಗೆ ಭಾರತವೇ ಅಭಿವೃದ್ಧಿಶೀಲತೆಯನ್ನು ಬೆಳೆಸಿಕೊಂಡಿತ್ತು.

ಇದಕ್ಕೆ ವಿರುದ್ಧವಾದ ಸ್ಥಿತಿ ಪಶ್ಚಿಮ ದೇಶಗಳಲ್ಲಿ ಇತ್ತು. ಇವೆಲ್ಲ ವಸಾಹತುಗಳ ಸುಲಿಗೆ ಮಾಡಿ ಶ್ರೀಮಂತವಾಗಿದ್ದವು. ಅಭಿವೃದ್ಧಿಯ ವೇಗ ಹೆಚ್ಚಿತು. ಶ್ರೀಮಂತವಾದವು. ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಜಪಾನ್, ಕೆನಡ, ಇಟಲಿ ಮತ್ತು ಅಮೇರಿಕ ದೇಶಗಳನ್ನೇ ನಾವು 'ಜಿ ಸೆವೆನ್' ಎಂದೆಲ್ಲ ಕರೆಯತ್ತೇವೆ. ಇವುಗಳಲ್ಲಿ ಅಮೇರಿಕ ಹುಲಿ ಅದರ ಹಿಡಿತ ಜಗತ್ತಿನ ಮೇಲೆ.

ಎರಡನೇ ಮಹಾಯುದ್ಧದಲ್ಲಿ ಅಮೇರಿಕಾಕ್ಕೆ ಅಂಥ ಹಾನಿಯೇನೂ ಅಗಲಿಲ್ಲ. ಅದು ಪ್ರತ್ಯಕ್ಷ ಭಾಗವಹಿಸಿದ್ದು ಕೊನೆಯಲ್ಲಿ. ಅದು ಶುರು ಮಾಡಿದ ಧಂದೆಯೆಂದರೆ ಶಸ್ತ್ರಾಸ್ತ್ರ ತಯಾರಿಸುವುದು. ಶಸ್ತ್ರಾವನ್ನು ತಯಾರಿಸುವುದೇ ಅಮೇರಿಕದ ಬೃಹದ್ ಕೈಗಾರಿಕೋದ್ಯಮ. ಶಸ್ತ್ರಾಸ್ತ್ರ ತಯಾರಿಕೆ ಭರ್ಜರಿ ಎಂದ ಮೇಲೆ ಅದರ ಮಾರಾಟ ಅಗಬೇಕು? ಅದಕ್ಕೆ ಅಮೇರಿಕ ಜಗತ್ತಿನ ಒಂದಲ್ಲ ಒಂದು ಕಡೆ ಯುದ್ಧ ನಡೆಸುತ್ತಿರುತ್ತದೆ. ಅದು ಪತ್ಯಕ್ಷ ಯುದ್ಧ ಮಾಡದಿದ್ದರೂ ರಾಷ್ಟ್ರ ರಾಷ್ಟ್ರಗಳ ಮಧ್ಯ ಯುದ್ಧ ಹಚ್ಚಿ ಹಾಕುತ್ತದೆ. ಆದೇಶಗಳಿಗೆ ಶಸ್ತ್ರ ಮಾರುತ್ತದೆ. ಅಥವಾ ಎರಡೂ ದೇಶಗಳಿಗೂ ಮಾರುತ್ತದೆ. ಇದರಿಂದ ಬಡದೇಶಗಳ ಹಣವನ್ನು ಮಾತ್ರ ಹೊಡೆದದ್ದಲ್ಲ; ಹಣಕ್ಕಾಗಿ ಮತ್ತು ಅಧಿಕಾರಕ್ಕಾಗಿ ಮಾನವತೆಯನ್ನು ಹೊಡೆದು ಹಾಕಿತು ಅಮೇರಿಕ.

೭೦ ರ ದಶಕದಲ್ಲಿ ಅರಬ್ ದೇಶಗಳಲ್ಲಿ ತೈಲ ಸಂಶೋಧನೆಯಾಯಿತು. ಅಮೇರಿಕದ ಕಂಪನಿಗಳು ಅಲ್ಲಿ ತೊಡಗಿಕೊಂಡವು. ಪೆಟ್ರೋಲ್ ದರ ನಿರ್ಧರಿಸುವರು ಅವರೇ ಆದರು. ಇದರಿಂದ ಪೆಟ್ರೋಲ್ ಡಾರುಗಳು ಅವರ ಬಂಡವಾಳವಾದವು. ಮುಂದೆ ಹೊಸ ವಿದ್ಯುನ್ಮಾನ ತಂತ್ರಜ್ಞಾನ ಶುರುವಾದವು. ಇದರಿಂದ 'ಫೈನನ್ಸ್ ಕಿಪಿಟಲ್' ಬೆಳೆದವು.

ಅಮೇರಿಕ ತನ್ನ ಆರ್ಥಿಕ ಬಿಕ್ಕಟನ್ನು ಸುಧಾರಿಸಿಕೊಳ್ಳವಾಗ ಶ್ರೀಮಂತ ರಾಷ್ಟ್ರಗಳ ಕೂಟವನ್ನು ಮಾಡಿಕೊಂಡಿದ್ದವು. ಈ ಶ್ರೀಮಂತ ರಾಷ್ಟ್ರಗಳೆಂಬ ಬೆಕ್ಕುಗಳು ಬಡದೇಶಗಳು ಉದ್ಧಾರಕ್ಕಾಗಿ ವಿಶ್ವಬ್ಯಾಂಕ್, ಅಂತಾರಾಷ್ಟ್ರೀಯ ದ್ರವ್ಯ ನಿಧಿ (ಇವು ಸರಕಾರಕ್ಕೆ ಮಾತ್ರ ಸಾಲ ಕೊಡುತ್ತವೆ) ಮತ್ತು ವಿಶ್ವಾಭಿವೃದ್ಧಿಯ ಬ್ಯಾಂಕ್-ಐ.ಎಂ.ಎಫ್ (ಇಂಟರ್ ನೆಶನಲ್ ಮೊನಟರಿ ಫಂಡ್) ಸ್ಥಾಪನೆ ಮಾಡಿ ಬಡದೇಶಗಳ ಅಭಿವೃದ್ಧಿಗೆ ಸಾಲ ಕೊಟ್ಟವು.

ಹೀಗೆ ಸಾಲಕೊಡುವಾಗ ಅವರ ಧ್ಯೇಯೋದ್ದೇಶಗಳು ಆಕರ್ಷಕವಾಗೇ ಇರುತ್ತವೆ. ಒಂದು ದೇಶ ಅಭಿವೃದ್ಧಿ ಹೊಂದಬೇಕಾದರೆ ಅಲ್ಲಿದ್ದ ಸಂಪನ್ಮೂಲಗಳು ಯೋಜಿತವಾಗಿ ಬಳಕೆಯಾಗಬೇಕು. ಅಲ್ಲಿಯ ತಾಂತ್ರಿಕತೆ ಸುಧಾರಿಸಬೇಕು. ಇದನ್ನು ನಿವಾರಿಸಲು ಮುಂದುವರಿದ ರಾಷ್ಟ್ರಗಳು ಮಾರ್ಗದರ್ಶನ ಮಾಡುತ್ತವೆ. ಮತ್ತು ತಮ್ಮಲ್ಲಿಯ ಸುಧಾರಿತ ತಂತ್ರಜ್ಞಾನವನ್ನು ನೀಡುತ್ತವೆ ಮುಂತಾಗಿ ಅವು ಹೇಳುತ್ತವೆ. ಈ ಬ್ಯಾಂಕುಗಳ ಮೂಲಕ ಬರುವ ಸೂಚನೆಗಳು ಸರಿಯಾಗಿ ಕಾರ್ಯಗತವಾಗುತ್ತಲೇ ಬಂದಿವೆ. ಆದರೂ ಕೂಡ ಸಾಲಕೊಂಡ ರಾಷ್ಟ್ರಗಳ ಬಡತನ ನೀಗಲಿಲ್ಲ. ಆರೋಗ್ಯ ಸುಧಾರಿಸಲಿಲ್ಲ. ಮಕ್ಕಳಿಗೆ ಪೌಷ್ಟಿಕ ಆಹಾರದ ಕೊರತೆಯಿಂದಾಗಿ ಲಕ್ಷಾಂತರ ಮಕ್ಕಳು ಸಾಯವಂತಾಯಿತು. ಅಭಿವೃದ್ಧಿ ಆದಂತೆ ಕಂಡರೂ ಕೈಗೆ ಸಿಕ್ಕಲಿಲ್ಲ. ಇದಕ್ಕೆ ಕಾರಣವೆಂದರೆ "ಸಂಕ್ಷಿಪ್ತವಾಗಿ ಹೇಳುವುದಾದರೆ ದ್ರವ್ಯನಿಧಿ ಮತ್ತು ಜಾಗತಿಕ ಬ್ಯಾಂಕ್ ತನ್ನ ಸಹ ಸಂಸ್ಥೆಗಳೊಂದಿಗೆ ಅಭಿವೃದ್ಧಿಗಿಂತಲೂ ಹೆಚ್ಚಾಗಿ ಅಭಿವೃದ್ಧಿಕಾರ್ಯಗಳನ್ನು ಪ್ರೋತ್ಸಾಹಿಸುವ ನೆಪದಲ್ಲಿ ಬಹುರಾಷ್ಟ್ರೀಯ ಕಂಪನಿಗಳಿಗೆ ತಮ್ಮ ಮಾರುಕಟ್ಟೆ ವಿಸ್ತರಿಸುವ, ಶ್ರೀಮಂತ ದೇಶಗಳ ತಂತ್ರಜ್ಞಾನ ವರ್ಗಾಯಿಸುವ ಕೆಲಸವನ್ನು ಸಮರ್ಥವಾಗಿ ನಿರ್ವಹಿಸುತ್ತದೆ. ಇದರ ಪರಿಣಾಮವಾಗಿ ಅಭಿವೃದ್ಧಿಹೊಂದಲು ಹೆಣಗಾಡುತ್ತಿರುವ ರಾಷ್ಟ್ರಗಳು ತಮ್ಮ ದುಡಿಮೆಯ ಫಲವನ್ನು ಶಕ್ತ ರಾಷ್ಟ್ರಗಳಿಗೆ ವರ್ಗಾಯಿಸಿ ತಾವು ಮಾತ್ರ 'ಏನಾದರೇನು ರಾಗಿಬೀಸುವುದು ತಪ್ಪಲಿಲ್ಲ', ಎನ್ನುವಂತೆ ಯಥಾ ಪ್ರಕಾರ ಹಸಿವು ಬಡತನ, ನಿರುದ್ಯೋಗದಂತಹ ಸಮಸ್ಯೆಗಳಿಂದ ಬಾಧಿತವಾಗಿವೆ" ಎಂದು ಉದಯ ಕುಮಾರ ಇರ್ವತ್ತೂರ ಅವರು ಸಾಕಷ್ಟು ಪುರಾವೆಗಳೊಡನೆ ಹೇಳುತ್ತಾರೆ.[೨]

ಹೀಗೆ ಆಗಲು ಕಾರಣಗಳನ್ನು ಇವರು ಕೊಡುವ ಶರತ್ತಿನಲ್ಲಿ ಅರಸಬೇಕಾಗಿದೆ. ಸಾಲ ಕೊಡುವ ಈ ಸಾವುಕಾರರು ವಿಧಿಸುವ ಶರತ್ತುಗಳನ್ನು ಒಟ್ಟಾರೆಯಾಗಿ ಹೀಗೆ ಹೇಳಬಹುದು. ವಿದೇಶಿ ಮುಕ್ತ ಮಾರುಕಟ್ಟೆಗೆ ಅನಿರ್ಬಂಧಿತ ಅವಕಾಶವನ್ನು ಕಲ್ಪಿಸಬೇಕು. ಸಾರ್ವಜನಿಕ ಉದ್ದಿಮೆಗಳನ್ನು ಕಡಿತಗೊಳಿಸಿ ವಿದೇಶಿ ಖಾಸಗಿ ಉದ್ದಿಮೆಗಳಿಗೆ ಹೆಚ್ಚು ಅವಕಾಶ ಮಾಡಿಕೊಡಬೇಕು. ಅಂದರೆ ಬಂಡವಾಳದ ಖಾಸಗೀಕರಣ ಸಾಧಿಸಬೇಕು. ವಿದೇಶಿ ಬ್ಯಾಂಕುಗಳಿಗೆ ಅವಕಾಶ ಕಲ್ಪಿಸುವುದು. ಔಷಧಿಯೇ ಮೊದಲಾದ ವಸ್ತುಗಳ ಪೇಟೆಂಟನ್ನು ವಿದೇಶೀಯರಿಗೆ ಕೊಡುವುದು. ಸಾಲಕೊಟ್ಟ ಬ್ಯಾಂಕುಗಳ ನಿರ್ದೇಶನದಂತೆ ಕೃಷಿಯಿಂದ ಹಿಡಿದು ಇತರ ಅಭಿವೃದ್ಧಿ ಕಾರ್ಯ ಕ್ರಮವನ್ನು ಕೈಕೊಳ್ಳುವುದು. ಅಂದರೆ ಸಾಲ ಕೊಡುವ ಬ್ಯಾಂಕುಗಳು ಮತ್ತು ವಿಶ್ವವ್ಯಾಪಾರ ಸಂಸ್ಥೆ (ಇದನ್ನು ಕೂಡ ಶ್ರೀಮಂತ ರಾಷ್ಟ್ರಗಳು ತಮ್ಮ ಸರಕಿಗೆ ವಿಶಾಲ

ಮಾರುಕಟ್ಟೆ ಒದಗಿಸಲು ಮಾಡಿಕೊಂಡ ಸಂಸ್ಥೆ. ಡಬ್ಲೂ.ಟಿ.ಓ. ಎಂದು ಸಂಕ್ಷಿಪ್ತ ಹೆಸರು) ಅಂದರೆ ಒಟ್ಟಾರೆಯಾಗಿ ಶ್ರೀಮಂತ ರಾಷ್ಟ್ರಗಳು ಹೇಗೆ ಹೇಳುತ್ತವೊ ಹಾಗೆ ಕೇಳಬೇಕು. ಸ್ವಾತಂತ್ರ್ಯ ಸಿಕ್ಕಿದಾಗ ನಮ್ಮ ಸರಕಾರ ತನಗೆ ಬೇಕಾದಂತೆ ನಮ್ಮ ರಾಷ್ಟ್ರವನ್ನು ಕಟ್ಟಿಕೊಳ್ಳಲು ಹೆಣಗಿತು. ಅದು ಈಗ ಸರಿಯಾಗಿ ವಿರುದ್ಧ ಪ್ರಕ್ರಿಯೆಗೆ ಒಳಗಾಗಿದೆ. ಅಂದರೆ ನಮ್ಮ ದೇಶದಲ್ಲಿ ಏನು ಬೆಳೆಯಬೇಕು, ಏನು ಆಗಬೇಕು ಎಂಬುದೆಲ್ಲವನ್ನೂ ನಿರ್ಣಯಿಸುವುದು ಅಮೇರಿಕ ಸಾಮ್ರಾಜ್ಯಶಾಹಿ. ಅಂದರೆ ಸಾಲ ಕೊಡುವ ಈ ಸಂಸ್ಥೆಗಳು. ಈಗ ನಾನು ಮೊದಲು ಹೇಳಿದ ವೆಲ್ಲೆಸ್ಲಿಯ ಸಹಾಯಕ ಸೈನ್ಯ ಯೋಜನೆಯನ್ನು ನೆನಪಿಸಿಕೊಳ್ಳಿ. ಜಾಗತೀಕರಣ ಎಂಬುದು ಆಗಿನ ಬ್ರಿಟಿಷ್ ಸಹಾಯಕ ಸೈನ್ಯಯೋಜನೆಯ ಸುಧಾರಿತ ತಳಿ ಎಂಬುದು ಮನದಟ್ಟಾಗುತ್ತದೆ. ಅದು ಬ್ರಿಟಿಷ್ ವಸಾಹತುಶಾಹಿಯಾಗಿತ್ತು; ಇದು ಅಮೇರಿಕದ ವಸಾಹತು ಶಾಹಿಯಾಗಿದೆ. ಇದಕ್ಕೆ ಈ ಮುಕ್ತ ವ್ಯಾಪಾರಿ ಒಪ್ಪಂದವನ್ನು ಒಪ್ಪಿಕೊಂಡ ಸುಡಾನ, ಮೆಕ್ಸಿಕೊ, ಬ್ರೆಜಿಲ್ ಮೊದಲಾದ ರಾಷ್ಟ್ರಗಳಲ್ಲಿಯಾದ ಪರಿಣಾಮದ ಸಾಕ್ಷಿಯಿದೆ. ಇಲ್ಲೆಲ್ಲಾ ಏನಾಗುತ್ತದೆಂದರೆ ಮೊದಮೊದಲು ಅಭಿವೃದ್ಧಿಯ ವೇಗ ಹೆಚ್ಚಿದಂತೆ ಕಾಣುತ್ತದೆ. ಮೇಲ್ ಮಧ್ಯಮ ವರ್ಗಕ್ಕೆ ವಿಲಾಸಿ ಸರಕನ್ನು ಅಗ್ಗದಲ್ಲೂ ಒದಗಿಸಲಾಗುತ್ತದೆ. ಹೀಗೆ ಮುಕ್ತ ಮಾರುಕಟ್ಟೆಯ ಬಗ್ಗೆ ಸದಭಿಪ್ರಾಯ ಮೂಡುತ್ತಿರುವಂತೆ ಅದರ ವಿರುದ್ಧ ಕ್ರಿಯೆ ಶುರುವಾಗುತ್ತದೆ. ಸಾಲ ಹೆಚ್ಚಾದಂತೆ ಕೊಡುತ್ತ ಹೋಗಲಾಗುತ್ತದೆ. ಆದ ಉತ್ಪನ್ನು ಬಡ್ಡಿ ತುಂಬಲೇ ಸಾಲದಾಗುವ ಸ್ಥಿತಿ ಬರುತ್ತದೆ. ಮುಕ್ತ ಮಾರುಕಟ್ಟೆ ವಿದೇಶಿ ಕಂಪನಿಗೆ ಕೊಳ್ಳೆ ಹೊಡೆಯಲು ಅವಕಾಶವಾಗುತ್ತದೆಯೇ ಹೊರತು ದೇಶಾಭಿವೃದ್ಧಿಗೆ ಸಲ್ಲುವುದಿಲ್ಲ. ಹೀಗೆ ಅದರ ದೇಶಿ ಮಾರುಕಟ್ಟೆ ಸಂಕೋಚನ (ಶ್ರಿಂಕ್) ವಾಗುತ್ತದೆ. ಆಗ ವಿದೇಶಿ ಕಂಪನಿಗಳು ಆಧುನಿಕ ವಿದ್ಯುನ್ಮಾನಗಳ ಸಹಾಯದಿಂದ ತನ್ನ ಬಂಡವಾಳವನ್ನು ಬೇರೆ ದೇಶಕ್ಕೆ ಸ್ಥಳಾಂತರಿಸಲೂ ಬಹುದು. ಹಾಗೆ ಆದಾಗ ಇಡೀ ದೇಶದ ಆರ್ಥಿಕ ಸ್ಥಿತಿಯೇ ಕುಸಿಯುತ್ತದೆ. ಮೆಕ್ಸಿಕೋ ದಿವಾಳಿ ಹೋದದ್ದು ಇಂಥ ಪ್ರಕ್ರಿಯೆಗೆ ಒಳಗಾಗಿಯೇ. ಈ ವಾತಾವರಣದಡಿಯಲ್ಲಿ ಭಾರತ ಕೈಗೊಂಡ ಕಾರ್ಯವನ್ನು ನೋಡಬಹುದಾಗಿದೆ.

ಮುಕ್ತ ಆರ್ಥಿಕ ನೀತಿಯ ಅಡಿಯಲ್ಲಿ ವಿದೇಶಿ ಕಂಪನಿಗಳಿಗೆ ಮುಕ್ತ ಸ್ವಾಗತ ಕೋರಲಾಗುತ್ತದೆ. ಹೀಗೆ ಬೇರೆ ದೇಶದ ಕಂಪನಿಗಳು ಬಂದರೆ ನಮಗೇನು ಹಾನಿ? ಒಳ್ಳೆಯದೇ ಆಯಿತು. ಅದು ದೇಶಿಕಂಪನಿಗಳ ಜೊತೆ ಸ್ಪರ್ಧೆ ನಡೆಸಿದರೇ ಗ್ರಾಹಕರಿಗೆ ಉತ್ತಮ ಸರಕೂ ಅಗ್ಗದ ಬೆಲೆಯೂ ಸಿಕ್ಕುತ್ತದೆ ಎಂದೆನ್ನಿಸುತ್ತದೆ. ಆದರೆ ಅದರ ಪರಿಣಾಮ ವಿನಾಶಕವಾದುದೆಂದು ನಮಗೆ ತಿಳಿಯದೇ ಹೋಗುತ್ತದೆ. ಸ್ವಾತಂತ್ರ್ಯ ನಂತರ ನಮ್ಮ ದೇಶಿ ಉದ್ಯಮಗಳನ್ನು ಬೆಳೆಸುವ ದೃಷ್ಟಿಯಿಂದ ಹೊರಗಿನಿಂದ ಬರುವ ಸರಕುಗಳ ಮೇಲೆ ದುಬಾರಿ (೩೦೦ ಪಟ್ಟುವರೆಗೆ) ಆಮದು ಸುಂಕವನ್ನು ಹಾಕಲಾಗುತ್ತಿತ್ತು. ಹೀಗೆ ಸುಂಕವನ್ನು ತೆತ್ತು ಒಳ ಬರುವ ಕಂಪನಿಗಳಿಗೆ ತಮ್ಮ ಸರಕನ್ನು ದೇಶದಲ್ಲಿ ತಯಾರಾಗುವ ಸರಕುಗಳಿಗಿಂತ ಕಡಿಮೆ ಬೆಲೆಯಲ್ಲಿ ಮಾರಲಾಗುತ್ತಿರಲಿಲ್ಲ. ಹೀಗಾಗಿ ಇಲ್ಲಿಯ ಉದ್ಯೋಗಗಳು ಸಂರಕ್ಷಿತವಾಗುತ್ತಿದ್ದವು. ಮತ್ತು ಬೆಳೆಯುತ್ತಿದ್ದವು. ಸಣ್ಣ ಕೈಗಾರಿಕೆಗಳ ವಿಷಯದಲ್ಲಿ ಸರಕಾರ ಹೆಚ್ಚಿನ ರಕ್ಷಣೆ ಕೊಡುತ್ತಿತ್ತು.

ಆವರೆ ಆಮದು ಸರಕುಗಳಿಗೆ ಸುಂಕ-ವಿನಾಯತಿ ಕೊಟ್ಟಾಗ ಅವು ನಮ್ಮಲ್ಲಿ ಒಂದು ರಾಶಿ ಬೀಳುತ್ತವೆ. ಇಲ್ಲಿಯ ಉದ್ಯೋಗ ನಾಶವಾಗಿ ಇಡೀ ದೇಶ ಪರಾವಲಂಬಿಯಾಗ ಬೇಕಾಗುತ್ತದೆ.

ಈ ನಿರ್ದೇಶನದನ್ವಯ ನಮ್ಮಲ್ಲಿ ಈಗಾಗಲೇ ಏಪ್ರಿಲ್ ೨೦೦೧ರ ವೇಳೆಗೆ ೧೪೨೯ ವಸ್ತುಗಳ ಮೇಲಿನ ಆಮದು ಸುಂಕವನ್ನು ತೆಗೆದು ಹಾಕಲಾಗಿದೆ.[೬] ಇದರಿಂದಾಗಿ ಈಗಾಗಲೇ ಸಾವಿರಾರು ಸಣ್ಣ ಉದ್ಯೋಗ ಘಟಕಗಳು ಮುಚ್ಚಿಹೋಗಿವೆ. ಹೀಗೆ ಹೊರ ಕಂಪನಿ ಬಂಡವಾಳಗಳಿಂದ ದೇಶೀಯರಿಗೆ ಕೆಲಸ ಸಿಕ್ಕುತದೆಂದರೆ ಅದೂ ನಿರಾಶೆಯನ್ನು ತರುತ್ತದೆ. ಅವು ಅತಿ ಅಗ್ಗದ ದರದಲ್ಲಿ ಇಲ್ಲಿಯ ಕೂಲಿಗಳನ್ನೂ ಇತರ ಸಂಪನ್ಮೂಲಗಳನ್ನು ಉಪಯೋಗಿಸುತ್ತವೆ. ಆದ್ದರಿಂದ ಕಾರ್ಮಿಕರ ಬಗೆಗೆ ಅದರ ದೃಷ್ಟಿ ಲಾಭಕೋರ ಬಂಡವಾಳಗಾರ ದೃಷ್ಟಿಯೇ ಆಗಿರುತ್ತದೆ. ಅದೂ ಅಲ್ಲದೇ ಕಂಪ್ಯೂಟರ್ ದಂಥವುಗಳನ್ನು ಬಳಸಿಕೊಳ್ಳುವುದರಿಂದ ಉದ್ಯೋಗ ಸೃಷ್ಟಿಯ ಪ್ರಮಾಣ ಅತಿ ಕಡಿಮೆಯದಾಗಿರುತ್ತದೆ. ಅದು ಬಂಡವಾಳ ತರುತ್ತದೆಂದು ತೋರಿದರೂ ಇಲ್ಲಿಂದ ಹೊತ್ತು ನಡೆಯುವುದೇ ಜಾಸ್ತಿ. ಉದಾಹರಣೆಗೆ ೧೯೯೧ ರಿಂದ ೧೯೯೫ ರ ವರೆಗೆ ರೂ. ೨೫,೪೭೯ ಕೋಟಿ ಬಂಡವಾಳ ಹೂಡಿದ್ದರೆ ಅವು ೩೪, ೭೪೦-೦೦ ಕೋಟಿಯನ್ನು ಹೊರಗೆ ಸಾಗಿಸಿವೆ.[೭] ಇವು ವ್ಯಾಪಾರವನ್ನು ಮಾತ್ರ ಮಾಡುತ್ತವೆಂದು ಗ್ರಹಿಸಬೇಕಿಲ್ಲ. ರಾಜಕೀಯದಲ್ಲಿ ಅವು ಪ್ರವೇಶಿಸುತ್ತವೆ. ಯಾಕೆಂದರೆ ಅದರ ಹಿಂದೆ ಸಾಮ್ರಾಜ್ಯಶಾಹಿ ಹಿತಾಸಕ್ತಿ ಅಡಗಿವೆ. ೧೯೭೩ ರಲ್ಲಿ ಚಿಲಿಯ ಚುನಾಯಿತ ಸರಕಾರವನ್ನು ಕೆಡಹುವ ದುಷ್ಟ ತಂತ್ರದ ನಿರೂಪಣೆಯಲ್ಲಿ ಪೆಪ್ಸಿಕೋಲಾ ಕಂಪನಿಯವರಿದ್ದರು. ಈ ಕಾರ್ಯಾಚರಣೆಯಲ್ಲಿ ರಾಷ್ಟ್ರಪತಿ ಮತ್ತು ಅವರ ೧೪ ಮಂದಿ ಪ್ರಮುಖ ಸಚಿವರ ಕೊಲೆ ಮಾಡಲಾಯಿತು. ಜಾಗತಿಕ ಕವಿ ಪಾಬ್ಲೊ ನರೂದಾ ಈ ಸಂಚಿನಿಂದ ಕೊಲ್ಲಲ್ಪಟ್ಟನು. ಇದಕ್ಕೆ ಕಾರಣ ಈ ಆಡಳಿತ ಬಹುರಾಷ್ಟ್ರೀಯ ಕಂಪನಿಗಳಿಗೆ ವಿರೋಧಿಗಳಾಗಿದ್ದವು. ಇದೇ ರೀತಿ ಬ್ರೆಝಿಲ್, ಬೊಲಿವಿಯಾ, ಗ್ವಾಟೆಮಾಲ ಸರಕಾರಗಳನ್ನು ಉರುಳಿಸುವಲ್ಲಿ ಅಮೇರಿಕದ ಕಂಪನಿಗಳ ಕೈಯಿದೆ. ಅಮೇರಿಕಾ ಕಂಪನಿಗಳು ಇರಾಣದಲ್ಲಿ ಸೃಷ್ಟಿಸಿದ ಪರಿಸ್ಥಿತಿಯಿಂದಲೇ ಇರಾಣ್, ಇರಾಕ್ ಯುದ್ಧವಾಯಿತು. ಗಂಭೀರವಾದ ವಿಷಯವೆಂದರೆ ಈ ಕಂಪನಿಗಳು (ಲಾಕ್ ಹೀಡ ಕಂಪನಿ) ಈ ಎರಡು ರಾಷ್ಟ್ರಗಳಿಗೂ ಶಸ್ತ್ರಾಸ್ತ್ರ ಸರಬರಾಜು ಮಾಡುತ್ತಿತ್ತು. ಜಗತ್ತಿನಲ್ಲಿ ಒಂದಲ್ಲಾ ಒಂದು ಕಡೆ ಯುದ್ಧ ನಡೆಯುವಂತೆ ಅಮೇರಿಕಾ ನೋಡಿಕೊಳ್ಳುತ್ತದೆ.

ಇವು ತಮ್ಮ ಹಣದ ದಾಹದ ಪೂರೈಕೆಗೆ ಕನಿಷ್ಠ ಪ್ರಮಾಣದ ನೀತಿಯನ್ನು ಸಹ ಪಾಲಿಸುವುದಿಲ್ಲ. ನೇರವಾಗಿ ಅಧಿಕಾರಿಗಳಿಗೂ ಆಡಳಿತದ ಧುರಿಣರಿಗೂ ಲಂಚಕೊಡುತ್ತಾರೆ. ಭಾರತದಲ್ಲೂ ಇದಕ್ಕೆ ಸಾಕ್ಷಿಗಳಿವೆ. ೧೯೮೬ ರಲ್ಲಿ ನಡೆದ ಬೋಫೋರ್ಸ್ ಹಗರಣದಲ್ಲಿ ಸ್ವೀಡನ್ನಿನ ಕಂಪನಿಯೊಂದು ಭಾರತೀಯ ಅಧಿಕಾರಿಗಳಿಗೆ ಮತ್ತು ಧಾರೀಣರಿಗೆ ೬೭ ಕೋಟಿ ರೂಪಾಯಿಗಳ ಲಂಚ ಕೊಡಲಾಯಿತೆಂಬ ಪ್ರಕರಣ ಇನ್ನೂ ನಡೆಯುತ್ತಲೇ ಇದೆ. ೧೯೯೩ರಲ್ಲಿ ವಿದೇಶಿ ಬ್ಯಾಂಕುಗಳು ಭಾರತೀಯರ ಸಾವಿರಾರು ಕೋಟಿ ರೂಪಾಯಿ ಮುಳುಗಿಸಿದವು.[೮] ಕಾರ್ಗಿಲ್ ಯುದ್ಧದ ನಂತರ ನಡೆದ ಸೈನಿಕರ್ ಶವ ಪೆಟ್ಟಿಗೆಯ ಹಗರಣ ನಮ್ಮ ಕಣ್ಮುಂದೇ

ಇದೆ. ವಿದೇಶಿ ಕಂಪನಿಗಳು ತಮ್ಮ ವ್ಯಾಪಾರ ಕುದರಿಸುವಲ್ಲಿ ಸರಕಾರದೊಡನೆ ವರ್ತಿಸುವ ರೀತಿಯನ್ನು 'ತೆಹಲ್ಕಾ ಪ್ರಕರಣ' ಒಂದು ನಾಟಕೀಯ ಸನ್ನಿವೇಶವನ್ನು ನಮಗೆ ತೋರಿದೆ. ನಮ್ಮಲ್ಲಿ ಮಾತ್ರವಲ್ಲ ದಕ್ಷಿಣಾಫ್ರಿಕಾದಲ್ಲಿ ಅವು ಅಲ್ಲಿಯ ವರ್ಣಧರ್ಮ ಪರವಾದ ಸರಕಾರವನ್ನು ಬೆಂಬಲಿಸಿತ್ತು. ಇಸ್ರೇಲಿಯರಿಗೆ ಶಸ್ತ್ರಾಸ್ತ್ರ ಮಾರಿ ಪೆಲಸ್ತೇನಿನದಲ್ಲಿ ಮಾರಣಹೋಮ ಮಾಡುತ್ತಾ ಇದೆ.

ವಿದೇಶಿ ಕಂಪನಿಗಳು ಹೇಗೆ ಅಮಾನವೀಯವಾಗಿ ವರ್ತಿಸುತ್ತವೆ ಎಂಬುದಕ್ಕೆ ೧೯೮೪ರಲ್ಲಿ ನಡೆದ ಭೋಪಾಲ ಅನಿಲ ದುರಂತವೇ ಸಾಕ್ಷಿಯಾಗಿದೆ. ಯುನಿಯನ್ ಕಾರ್ಬೈಡ್ ಕ್ರಾರ್ಪೋರೇಶನ್ (ಯು.ಸಿ.ಸಿ.) ಅಮೇರಿಕದ ಕಂಪನಿ. ಈ ಕಂಪನಿ ಕೀಟ ನಾಶಕಕ್ಕೆ ಬೇಕಾಗಿರುವ ರಾಸಾಯನಿಕವನ್ನು ತಯಾರಿಸುತ್ತಿತ್ತು. ೧೯೮೪ರ ಡಿಸೆಂಬರ ಮೂರರಂದು ೪೦ ಟನ್ ವಿಷಾನಿಲ ಸೋರಿತು. ಇದರಿಂದ ೩೦೦೦ ಜನ ಸತ್ತರು. ೩,೫೦,೦೦೦ ಜನ ಮಾರಕ ಕಾಯಿಲೆಗೆ ತುತ್ತಾದರು. ಕಳೆದ ಹದಿನೇಳು ವರ್ಷಗಳಲ್ಲಿ ಸತ್ತವರ ಸಂಖ್ಯೆ ೧೭,೦೦೦. ದುರಂತ ಘಟನೆ ನಡೆದು ಒಂದು ವಾರದ ವರೆಗೂ ಘಟನೆಗೆ ಕಾರಣವನ್ನೇ ಕಂಪನಿ ತಿಳಿಸಲಿಲ್ಲ. ತಮ್ಮದೇಶದಲ್ಲಿಯ ಕಾರಖಾನೆಗಳಲ್ಲಿ ಅನುಸರಿಸುವ ಸುರಕ್ಷಣಾ ಕ್ರಮವನ್ನು ಇಲ್ಲಿ ಅನುಸರಿಸದಿದ್ದುದರಿಂದ ಇಷ್ಟು ಸಾವು ನೋವುಗಳಾದವು. ಆ ಮೇಲೆ ಕಂಪನಿ ದಿವಾಳಿಯಾಗಿದೆ ಎಂದು ಸಾರಿತು. ಆಗ ಅಧ್ಯಕ್ಷನಾಗಿದ್ದ ವಾರೆನ್ ಅಂಡರ್ಸನ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಲಾಯಿತು. ಆತನ ಮೇಲೆ ಭಾರತದ ನ್ಯಾಯಾಲಯ ಬೇಲ್‌ರಹಿತವಾರಂಟು ಹೊರಡಿಸಿ ತನಗೊಪ್ಪಿಸಬೇಕೆಂದು ತನ್ನ ಒಪ್ಪಂದದನ್ವಯವೇ ಹೇಳಿದ್ದರೂ ಆತ ಧಿಕ್ಕರಿಸಿದ್ದಾನೆ. ಭಾರತದ ಸುಪ್ರೀಮ್ ಕೋರ್ಟ್ ನೀಡಿರುವ ನಿರ್ಣಯದಂತೆ ೪೭೦ ಮಿಲಿಯ ಕೊಟ್ಟು ಬಿಟ್ಟರೆ ಮುಗಿಯಿತೆಂದುಕೊಂಡಿರು. ಕಂಪನಿ ವಿಷಾನಿಲ ದುರಂತದ ದೂರಗಾಮಿ ಪರಿಣಾಮಗಳ ಬಗ್ಗೆ ಅಧ್ಯಯನ ಮಾಡುವ ಕಡೆ ಮನಸ್ಸು ಹಾಕಲಿಲ್ಲ. ಆಶ್ಚರ್ಯವೆಂದರೆ ನಮ್ಮ ದೇಶದ ಸರಕಾರವೇ ಇದರ ಬಗ್ಗೆ ಕಾಳಜಿ ವಹಿಸಲಿಲ್ಲ.[೬]

ಐ.ಎಂ.ಎಫ್. ಮತ್ತು ವಿಶ್ವವ್ಯಾಪಾರಿ ಒಪ್ಪಂದದ ನಿರ್ದೇಶನವೆಂದರೆ ಖಾಸಗೀಕರಣ. ಸಾರ್ವಜನಿಕ ಕ್ಷೇತ್ರ ಭಾರತದಲ್ಲಿ ಉದ್ಯೋಗ ನಿರ್ಮಿತಿಯ ಕ್ಷೇತ್ರಗಳಾಗಿದ್ದವು. ಆದರೆ ಈಗ ಎಲ್ಲವೂ ಖಾಸಗೀಕರಣ. ೨೦೦೧-೦೨ರ ಬಜೆಟ್ಟಿನಲ್ಲಿ ಕೇಂದ್ರ ಹಣಕಾಸು ಸಚಿವ ಯಶವಂತ ಸಿನ್ಹಾ ಬಜೆಟ್ ಕೊರತೆಯನ್ನು ನೀಗಿಸಲು ಸಾರ್ವಜನಿಕ ಉದ್ದಿಮೆಗಳನ್ನು ಮಾರಿ ೧೨,೦೦೦ ಕೋಟಿ ರೂಪಾಯಿಗಳನ್ನು ಸಂಗ್ರಹಿಸುವುದಾಗಿ ಹೇಳಿದ್ದರು. ಯಾರೊಬ್ಬರ ಟೀಕೆಯನ್ನೂ ಗಮನಕ್ಕೆ ತೆಗೆದುಕೊಳ್ಳವುದಿಲ್ಲ ಎಂದು ಹೇಳಿದ್ದಾರೆ. ಇದು ಐ.ಎಂ.ಎಫ್. ನಿರ್ದೇಶನಕ್ಕನು ಸಾರಿಯಾಗಿದೆ.

ಭಾರತ ಅಲ್ಯೂಮಿನಿಯಂ (ಬಾಲ್ಕೊ) ಕಂಪನಿಯನ್ನು ಖಾಸಗಿಯವರಿಗೆ ಮಾರಾಟ ಮಾಡಿದ ರೀತಿಯನ್ನು ನೋಡಿದರೆ ಭಾರತ ಸರಕಾರದ ದಿವಾಳಿಕೊರತನ ಕಂಡುಬರುತ್ತದೆ. ಬಾಲ್ಕೊ ಕಂಪನಿಯ ೧೯೬೫ ರಲ್ಲಿ ಪ್ರಾರಂಭಿಕ ಬಂಡವಾಳ ೧೫೦೦ ಕೋಟಿ ರೂಪಾಯಿ ೧೯೯೯ರಲ್ಲಿ ನಿವ್ವಳ ಲಾಭ ೬೫ ಕೋಟಿ. ಒರಿಸ್ಸಾ ಸರಕಾರ ಕಡಿಮೆ ಬೆಲೆಗೆ ಅದಿರು

ಪೂರೈಕೆಯ ಒಪ್ಪಂದ ಮಾಡಿಕೊಂಡಿದೆ. ಅಂಥ ಕಂಪನಿಯ ಶೇ. ೫೧ ಷೇರಿನ ಬೆಲೆ. ೫೫೦ ಕೋಟಿ ಮಾತ್ರ. ೧೫೦೦ ದಿಂದ ೨,೦೦೦ ಕೋಟಿಯ ತನಕ ಸ್ಥಿರ ಚರ ಆಸ್ತಿ ಹೊಂದಿದ 'ಮಾಡರ್ನ್ ಫುಡ್ಸ್'ನ್ನು ೧೦೫ ಕೋಟಿಗೆ ಮಾರಲಾಗಿದೆ.[೭]

• ಜೀವವಿಮಾ ನಿಗಮ ಕೂಡ ಖಾಸಗೀಕರಣದ ಒಂದು ಭಾಗವೇ ಆಗಿದೆ. ಆದರೆ ನಿಗಮದ ನೌಕರರ ಸತತವಾದ ವಿರೋಧದಿಂದಾಗಿ ಇನ್ನೂ ಜಾರಿಯಾಗಿಲ್ಲ. ಜೀವವಿಮಾ ನಿಗಮ ೧೯೫೬ರಲ್ಲಿ ರಾಷ್ಟ್ರೀಕರಣವಾಯಿತು. ಆಗ ಅದರ ಮೂಲ ಧನ ೫ ಕೋಟಿ ರಾಪಾಯಿ. ಈಗ ಅದರ ಆಸ್ತಿ ೧೫೪ ಸಾವಿರ ಕೋಟಿ ರೂಪಾಯಿ. ಅದು ತನ್ನ ಉಳಿತಾಯದಲ್ಲಿ , ಬಹುದೊಡ್ಡ ಮೊತ್ತವನ್ನು ಸರಕಾರದ ಕೆಲಸಗಳಾದ ಚರಂಡಿ ಯೋಜನೆ, ನೀರು ಸರಬಾರಾಜು, ಹೌಸಿಂಗ್ ಬೋರ್ಡ್ ಇತ್ಯಾದಿಗೆ ಕೊಡುತ್ತದೆ. ೮ನೇ ಪಂಚವಾರ್ಷಿಕ ಯೋಜನೆಗೆ ೫೦,೦೦೦ ಕೋಟಿ ರೂ. ಕೊಟ್ಟಿದೆ. ಇಂಥ ಲಾಭಯುಕ್ತ ಸರಕಾರಿ ಸೊತ್ತನ್ನು ಖಾಸಗಿಯವರ ಹಿತಾಸಕ್ತಿಗೆ ಮಣಿದು ಮೂರು ಕಾಸಿಗೆ ಮಾರಲು ಮನಸ್ಸು ಮಾಡುತ್ತಿದೆ ಸರಕಾರ.

ಉದ್ಯೋಗ ಕಡಿತ ಐ.ಎಂ.ಎಫ್. ನ ವಿಧಿಗಳಲ್ಲಿ ಒಂದು. ಹೀಗೆ ಕಡಿತ ಮಾಡುವಲ್ಲಿ ಮಂತ್ರಿ ಮಹೋದಯರ ವಿಲಾಸಗಳನ್ನು ಕಡಿಮೆ ಮಾಡುವುದಿಲ್ಲ. ಬದಲಾಗಿ ಸರಕಾರ ನೌಕರರನ್ನು ಕಡಿಮೆಗೊಳಿಸುತ್ತದೆ. ಇದರ ಪರಿಣಾಮವಾಗಿ ಉದ್ಯೋಗ ಸೃಷ್ಟಿಗೆ ಕಡಿತವಾಗುತ್ತದೆ. ಈ ಎಲ್ಲದರ ಪರಿಣಾಮವೆಂದರೆ ನಿರುದ್ಯೋಗ ಸೃಷ್ಟಿ. ಕೆಲಸ ಮಾಡುವ ಕೈಗಳಿಗೆ ಕೆಲಸವಿಲ್ಲ. ಪ್ರತಿ ವರ್ಷ ೧ ಕೋಟಿ ೬೪ ಲಕ್ಷದಷ್ಟು ಹೊಸ ನಿರುದ್ಯೋಗಗಳು ಹುಟ್ಟಿಕೊಳ್ಳುತ್ತಲಿವೆ.[೮] ಪೆಪ್ಸಿ ಕೋಲಾ ಬಂದಿದ್ದರಿಂದ ಖಾದ್ಯ ಹಾಗೂ ಪಾನೀಯ ತಯಾರಿಕೆಯನ್ನು ತಯಾರಿಸುವ ೨೧೨ ಸಣ್ಣ ಕೈಗಾರಿಕೆಗಳು ಮುಚ್ಚಿವೆ.

ಈಸ್ಟ ಇಂಡಿಯಾ ವ್ಯವಹಾರವನ್ನು ಒಂದು ಪ್ರತಿಮೆಯಾಗಿ ಮೊದಲು ನಾನು ಪ್ರಸ್ತಾಪಿಸಿದ್ದೆ. ಆ ಕಂಪನಿಗಳ ಒಟ್ಟು ಪರಿಣಾಮವನ್ನು ಮಾರ್ಕ್ಸ್ ಬಹಳ ಸ್ಪಷ್ಟವಾಗಿ ಹೀಗೆ ಹೇಳಿದ್ದಾನೆ. "ಅವರು ದೇಶೀಯ ಸಮುದಾಯಗಳನ್ನು ಪಡೆಯುವ ಮೂಲಕ ದೇಶೀಯ ಕೈಗಾರಿಕೆಗಳನ್ನು ಮೂಲೋತ್ಪಾದನೆ ಮಾಡುವ ಮೂಲಕ ದೇಶೀಯ ಸಮಾಜದಲ್ಲಿ ಮಹೋನ್ನತವಾದುದೆಲ್ಲವನ್ನು ಉಚ್ಚವಾದುದೆಲ್ಲವನ್ನು ನೆಲಸಮ ಮಾಡುವ ಮೂಲಕ ಆ ನಾಗರಿಕತೆಯನ್ನು ನಾಶ ಮಾಡಿದರು."[೯]

ಆಗ ನಾಗರಿಕತೆಯೇನೋ ಸಂಪೂರ್ಣ ನಾಶವಾಗಲಿಲ್ಲ. ಅದಕ್ಕೆ ಬೇರೆ ಆಯಾಮಗಳೂ ಉಂಟಾದವು. ಆದರೆ ಈಗಿನದು ಅದಕ್ಕಿಂತ ಕಡಿಮೆಯಾದೇನೂ ಅಲ್ಲ. ಇದನ್ನು ಹೇಳುವ ಉದ್ದೇಶ ಇತಿಹಾಸದ ಮರುಕಳಿಕೆಯ ಕಡೆ ಬೆರಳು ತೋರಲು.

ಇಷ್ಟಿದ್ದರೂ ನಮ್ಮ ಆಡಳಿತಗಾರರು ಯಾಕೆ ನಿರ್ಲಕ್ಷಿಸುತ್ತಾರೆ? ಮೊದಲನೆಯ ದಾಗಿ ಮತ್ತು ಪ್ರಬಲವಾಗಿ ನಮ್ಮ ರಾಜಕಾರಣಿಗಳು ದೇಶ ಪ್ರೇಮಿಗಳಲ್ಲ. ಇಂದಿರಾ ಗಾಂಧಿ ತನಕವೂ ಸ್ವಾತಂತ್ರ್ಯ ಹೋರಾಟವನ್ನು ಕಣ್ಣಾರೆ ಕಂಡ, ಭಾಗವಹಿಸಿದ ಭಾವಾತ್ಮಕವಾದ ದ್ರವ್ಯ ಇತ್ತು. ನಂತರದ ಪೀಳಿಗೆ ತ್ಯಾಗವಿಲ್ಲದ, ಸೇವೆಯಲ್ಲದ, ಕಷ್ಟವರಿಯದ ಪೀಳಿಗೆ. ಇದರ ದೇಶಪ್ರೇಮ

ಸರಿಯಾಗಿ ಬ್ರಿಟಿಷರು ಬರುವ ಮೊದಲಿನ ಸಂಸ್ಥಾನಿಕರ ತರದ್ದು. ಅವರ ದೇಶ ಪ್ರೇಮವೆಂದರೆ ತಮ್ಮ ಬೆಳೆಸುವ ತಮ್ಮ ವಿಲಾಸ ಮೆರೆಸುವ ಪ್ರೇಮ. ಇವರದ್ದೂ ಅಷ್ಟೆ. ಈ ರಾಜಕಾರಣಿಗಳ ಹಣ ಸ್ವಿಸ್ ಬ್ಯಾಂಕಿನಲ್ಲಿ ಜಮಾ ಆದ ಬಗ್ಗೆ ಪತ್ರಿಕೆಗಳು ಬಯಲು ಮಾಡಿವೆ.

ಕಾಂಗ್ರೆಸ್ ಆಡಳಿತದಲ್ಲಿ ಶುರುವಾದ ಈ ಕಾರ್ಯಕ್ರಮ ಬಿ.ಜೆ.ಪಿ. ಸರಕಾರದಡಿ ಅತಿ ವೇಗದಿಂದ ನಡೆದಿದೆ. ಬಿ.ಜೆ.ಪಿ. ಕೋಮುವಾದಿ ಪಕ್ಷವೆಂಬ ಹೆಸರಿದ್ದರೂ ಬಹು ಜನರು ಅದನ್ನು ದೇಶಿ ಪ್ರತಿಪಾದಕ ಎಂದು ಗ್ರಹಿಸಿದ್ದರು. ಅವರು ಸಂವಿಧಾನ ಹಿಡಿದು ಪ್ರಮಾಣ ಮ್ಹಾಡಿ ಅಧಿಕಾರ ವಹಿಸಿಕೊಂಡರೆನ್ನುವುದಕ್ಕಿಂತ ರಾಮನಾಮ ಪ್ರಮಾಣ ಮಾಡಿದವರೆಂದು-ಕೊಂಡಿದ್ದರು. ಆದ್ದರಿಂದ ಅವರಿಂದ ಪ್ರಮಾಣಿಕತೆ, ತ್ಯಾಗ ಹಾಗೂ ದೇಶಿಯತೆಯ ಬಗ್ಗೆ ಹೆಚ್ಚಿನ ನಿರೀಕ್ಷಣೆಯಿತ್ತು. ಅವರು ಜನರ ನಿರೀಕ್ಷೆಯನ್ನು ಚೂರು ಚೂರು ಮಾಡಿ ಒಗೆದರು. ಅವರಿಗೆ ದೇಶೀಯತೆ ಎಂದರೆ ಹಿಂದೂ ರಾಷ್ಟ್ರ. ಜನಾಂಗೀಯ ದ್ವೇಷವೇ ಆಗಿದೆ.

ಈ ಎಲ್ಲದರಿಂದ ಆಗುವ ಸಾಂಸ್ಕೃತಿಕ ಪ್ರಭಾವ ಮತ್ತು ಪರಿಣಾಮಗಳು ಗಂಭೀರವಾದದ್ದು. ಮೊದಲನೆಯದಾಗಿ ಅತ್ಯಂತ ಗಂಭೀರ ಸ್ವರೂಪದ ಪ್ರಭಾವ ಪರಿಣಾಮವೆಂದರೆ ಜನರಲ್ಲಿ ನೈತಿಕ ಅಧಃಪತನವುಂಟಾಗುವುದು. ಹಣ ಮಾಡುವ ಮಾಧ್ಯಮದ ಕುರಿತು ಕಿಂಚಿತ್ತೂ ಸಂಭಾವಿತಕಿ ಇಲ್ಲದಂತಾಗಿದೆ. ನಮ್ಮ ಸಂವಿಧಾನ ನಮಗೆ ರಕ್ತರಹಿತ ಕ್ರಾಂತಿಯನ್ನು ತರಲು ಬಯಸುತ್ತದೆ. ಸಮಾನತೆ ಬೇಕು, ಸಮಾಜವಾದಿ ಸಮಾಜ ರಚನೆಯಾಗಬೇಕು ಎಂಬುದೇ ಅದು ಕೊಡುವ ನಿರ್ದೇಶನ. ಆದರೆ ಸರಕಾರ ಮಾಡುತ್ತಿರುವ ಪ್ರತಿಯೊಂದ ಸುಧಾರಣೆಯೂ ಸಂವಿಧಾನದ ಆತ್ಮಕ್ಕೆ ಚೂರಿ ಹಾಕುವಂತಹದಾಗಿದೆ. ಪ್ರಗತಿ ಎಂದರೆ ಹಣಗಳಿಕೆ, ಮತ್ತು ಬಲವುಳ್ಳವರ ಬದುಕು ಎಂಬುದೇ ಆಗಿದೆ. ಅಂದರೆ ನಮ್ಮ ಪ್ರಗತಿಯ ಕಲ್ಪನೆಯಲ್ಲಿ ನೀತಿಗೆ ಕಿಂಚಿತ್ತೂ ಸ್ಥಾನವನ್ನು ಸ್ಥಾಪಿಸಿಲ್ಲದಂತಾಗಿದೆ. ನೊಬೆಲ್ ಪ್ರಶಸ್ತಿ ಪುರಸ್ಕೃತ ಅಮರ್ತ ಸೇನ್ ಅರ್ಥಶಾಸ್ತ್ರ ನೈತಿಕ ಮೌಲ್ಯವನ್ನೊಳಗೊಳ್ಳಬೇಕೆಂದು ತಿಳಿಸುತ್ತಾರೆ. "ಸಂಪ್ರದಾಯಿಕ ಅರ್ಥಶಾಸ್ತ್ರದಲ್ಲಿ ಸುತ್ತಮುತ್ತಲಿಂದ ಪ್ರತ್ಯೇಕಗೊಂಡ ದ್ವೀಪವಾಸಿಯಂತಿರುವ ಸ್ವಾರ್ಥ ಸಾಧಕ ಆರ್ಥಿಕ ವ್ಯಕ್ತಿಯ ಬಗೆಗೆ ಬಹಳಷ್ಟು ಹೇಳಲಾಗಿದೆ. ಇವನು ಬೇರೆಲ್ಲ ಪರಿಗಣನೆಗಳಿಂದಲೂ ತನ್ನನ್ನು ಪ್ರತ್ಯೇಕಿಸಿಕೊಂಡು ಸ್ವಹಿತವನ್ನಷ್ಟೇ ಸಾಧಿಸುವಂತಹನು ಎಂಬ ಕಲ್ಪನೆ ಇದೆ. ಆದರೆ ಸಾಮಾಜಿಕ ಐಕ್ಯತೆಯ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಇಂಥ ಭಾವನೆ ಎಷ್ಟು ಮಾತ್ರವೂ ಉಪಾಯಕವಲ್ಲ."[೧೦] ಆದ್ದರಿಂದ ಅಂಥ ಮೌಲ್ಯವನ್ನೊಳಗೊಳ್ಳಬೇಕಾದರೆ ಪಾಕಿಸ್ಥಾನಿ ಆರ್ಥಿಕ ತಜ್ಞರ ಅಭಿಪ್ರಾಯದಂತೆ ಅಭಿವೃದ್ಧಿ ಎನ್ನುವುದು ಬಡತನ, ಪೌಷ್ಟಿಕ ಆಹಾರದ ಕೊರತೆ, ಹಸಿವು, ನಿರುದ್ಯೋಗ, ರೋಗ, ಅನಕ್ಷರತೆ, ಅಸಮಾನತೆಯ ಮೇಲಿನ ಸಮರವಾಗ ಬೇಕು.[೧೧] ಅಮೇರಿಕನ್ ಪ್ರಣೀತ್ ಉದಾರೀಕರಣ ಮಾರುಕಟ್ಟೆಯನ್ನು ಜೊಮಸ್ಕಿ ಬಡವರಿಂದ ಕಸಿದು ಹೊಟ್ಟೆ ಬಾಕರಿಗೆ ಬಡಿಸುವುದು ಎಂದಿದ್ದಾರೆ.

ಅಮೇರಿಕ ಶಸ್ತ್ರಾಸ್ತ್ರ ತಯಾರಿಕೆಯನ್ನು ಮುಖ್ಯ ಉತ್ಪಾದನೆಯನ್ನಾಗಿ ಮಾಡಿಕೊಂಡು ಜಗತ್ತಿನಲ್ಲಿ ಯುದ್ಧ ಪ್ರೇರಣೆಯನ್ನು ಕೊಡುತ್ತ ಮನುಷ್ಯರನ್ನು ಕ್ರಿಮಿಗಳಂತೆ ಕೊಲ್ಲುವುದು ಧರ್ಮ ಬಾಹಿರವಾದ ಮತ್ತು ಅಮಾನವೀಯ ನಡತೆಯಾಗಿದೆ.

ಎರಡನೆಯದಾಗಿ ಇದು ಶೀಲ-ಅಶ್ಲೀಲಗಳ ಮಧ್ಯೆಯ ಗೆರೆಯನ್ನೇ ಅಳಿಸಿ ಹಾಕಿದೆ. ಅಶ್ಲೀಲವನ್ನೇ ಸೌಂದರ್ಯ ಎಂದು ಕರೆಯಲಾಗುತ್ತದೆ. ಸೌಂದರ್ಯ ಗೌರವಾರ್ಹವಾದುದು. ಅದು ನಿಸರ್ಗದ ಕೊಡುಗೆ. ಅದರ ಉದ್ದೇಶವೇನೇ ಇರಲಿ. ಅದನ್ನು ಗೌರವಿಸುವುದು ತಪ್ಪೇನಲ್ಲ. ಆದರೆ ನಮ್ಮ ಟಿ.ವಿ. ಜಾಹೀರಾತುಗಳು ಹೆಣ್ಣನ್ನ ವಾಣಿಜ್ಯೀಕರಣ ಮಾಡಿದೆ. ವಾಣಿಜ್ಯೀಕರಣವೆಂದರೆ ಹೆಚ್ಚು ಮಟ್ಟಿಗೆ ವೇಶ್ಯಾವೃತ್ತೀ ಕರಣದರೀತಿಯಲ್ಲೇ ಆಗಿದೆ. ಇದು ಸಂಸ್ಕೃತಿಯ ಪ್ರಶ್ನೇ ಎಂದು ನಾನು ಹೇಳುತ್ತಿಲ್ಲ. ಹೆಣ್ಣಿನ ಸ್ಥಾನಮಾನದ ಕುರಿತು ನಮ್ಮ ಸಂಸ್ಕೃತಿಯೇನೂ ಮೇಲಿನ ಸ್ಥಾನವನ್ನೇ ಕೊಟ್ಟಿಲ್ಲ. ಆದರೆ ಹೆಣ್ಣಿಗೆ ಸಮಾನ ಸ್ಥಾನವನ್ನು ತಂದುಕೊಡುವಲ್ಲಿ ನಡೆದ ಚಳವಳಿಗೆ ದೀರ್ಘ ಇತಿಹಾಸವಿದೆ. ಸಾವಿರಾರು ವರ್ಷಗಳಿಂದ ಹೆಣ್ಣನ್ನು ಅಬಲೆ ಎಂದೂ, ಪುರುಷ ಯಾಜಮಾನ್ಯಕ್ಕೆ ಒಪ್ಪಿಸಲ್ಪಟವಳೆಂದೇ ಸ್ಥಾಪಿಸಿದ ನಮ್ಮ ಮುಖ್ಯ ಸಂಸ್ಕೃತಿಯ ವಿರುದ್ಧವಾಗಿ ಸಮಾನತೆಗಾಗಿ ಹುಟ್ಟು ಹಾಕಿಕೊಂಡು ನಡೆಸಿಕೊಂಡು ಬಂದ ಮಹಿಳಾ ಚಳುವಳಿಗಳು ಛಿದ್ರವಾಗುತ್ತವೆ, ಮಾತ್ರವಲ್ಲ, ಹೆಣ್ಣು ಇರಬೇಕಾದುದೇ ಹೀಗೆ ಎಂದು ನಮ್ಮ ಹದಿಹರೆಯದ ಹುಡುಗಿಯರನ್ನು ಬಗ್ಗಿಸುವ ಮತ್ತು ಹುಡುಗರಲ್ಲಿ ಗಂಡಸಿನ ಅಹಂಕಾರವನ್ನು ಬೆಳೆಸುವ ಒಂದು ಮಾನಸಿಕ ತರಬೇತಿ ಇಲ್ಲಿ ನಡೆಯುತ್ತಿರುತ್ತದೆ.

ಅಮೇರಿಕಾ ಮತ್ತಿತರ ಪಶ್ಚಿಮದಲ್ಲಿ ನಡೆಯುತ್ತಿರುವ ಫೆಮಿನಿಸ್ಟ ಚಳುವಳಿಗೂ ನಾನು ಹೇಳುತ್ತಿರುವ ಮಹಿಳಾ ಸಮಾನತೆಯ ಚಳವಳಿಗೂ ಬಹಳ ಅಂತರವಿದೆ. ಲೈಂಗಿಕ ಸ್ವಾತಂತ್ರ್ಯಕ್ಕೂ ಮಹಿಳಾ ಸ್ವಾತಂತ್ರ್ಯಕ್ಕೂ ಅಂತಿಮವಾದ ಸಂಬಂಧವಿದೆ ಎಂದು ಒಪ್ಪಿಕೊಂಡರೂ ಲೈಂಗಿಕ ಸ್ವಾತಂತ್ರ್ಯಕ್ಕೂ ಸ್ವೇಚ್ಛಾಚಾರಕ್ಕೂ ಮಧ್ಯೆಯ ಗೆರೆ ಯಾವುದು? ಅಥವಾ ಬೇಡವೆ ಎಂಬ ಪ್ರಶ್ನೆ ನಿರ್ಲಕ್ಷಿಸುವಂತಿಲ್ಲ. ಲೈಂಗಿಕ ಸ್ವೇಚ್ಛಾಚಾರ ಹೆಣ್ಣಿಗೆ ಸಮಾನತೆಯನ್ನು ತಂದುಕೊಡುವ ಬದಲು ನಿರಾಶೆಯನ್ನೂ ಅಸಹಾಯಕತೆಯನ್ನೂ ತಂದು ಹಾಕುತ್ತದೆ.

ಹೆಣ್ಣನ್ನು ಜಾಹೀರಾತಿಗಾಗಿ ಮಾತ್ರ ಬಳಸುತ್ತದೆಂದೇನಲ್ಲ. ಬದುಕಿನ ಪಾವಿತ್ರ್ಯವನ್ನು ನಾಶ ಮಾಡುವ ಬಂಡವಾಳಶಾಹಿಗೆ ಹೆಣ್ಣು ಒಂದು ವಿಲಾಸಿ ಸರಕು. ಅದಕ್ಕಿಂತ ಹೆಚ್ಚಿಲ್ಲ. ಅದನ್ನು ಪ್ರವಾಸೀ ಉದ್ಯಮದಲ್ಲಿ ಕಾಣಬಹುದು. ಅಲ್ಲಿ ಹೆಣ್ಣನ್ನು ಸೆಕ್ಸ್ ವರ್ಕರ್ಸ್ ಎಂದು ಬಳಸಿಕೊಳ್ಳುತ್ತಾರೆ. ಇದೀಗ ಮುಂಬೈಯಲ್ಲಿ ಒಂದೂವರೆ ಲಕ್ಷದಷ್ಟು ಬಾರ್ ಬಾಲೆಯರಿದ್ದಾರೆ ಎಂದು ಶ್ರೀನಿವಾಸ ಜೊ ಕಟ್ಟಿಯವರು ಹೇಳುತ್ತಾರೆ.[೨] ಹಾಗೆಯೇ ಇದು ಯುವ ಜನರಲ್ಲಿ ಲಂಪಟತನವನ್ನು ಪ್ರಚೋದಿಸಿ ಬೆಳೆಸುತ್ತದೆ. ಹಿಂಸಾ ಪ್ರವೃತ್ತಿಯನ್ನು ಹೆಚ್ಚಿಸುತ್ತದೆ. ಗಂಡಸು ಮತ್ತೂ ಸ್ವಚ್ಛಂದ ವೃತ್ತಿಯವರಾಗುತ್ತಾರೆ.

ಮೂರನೇಯದಾಗಿ ರಾಜಕೀಯ ಪರಿಣಾಮಗಳು: ಈಗಾಗಲೇ ಕಂಪನಿಗಳು ಮಾಡುವ ರಾಜಕೀಯ ಅನಾಹುತಗಳ ಬಗ್ಗೆ ಹೇಳಿದೆ. ಎಲ್.ಜಿ.ಪಿ ಎಂದು ಕರೆಯುವ ಉದಾರನೀತಿ, ಜಾಗತೀಕರಣ ಮತ್ತು ಖಾಸಗೀಕರಣದ ಹಿಂದಿರುವ ಶಕ್ತಿ ವಿಶ್ವಬ್ಯಾಂಕ್, ವಿಶ್ವದ್ರವ್ಯ ನಿಧಿ ಬ್ಯಾಂಕ್, ಐ.ಎಂ.ಎಫ್. ವಿಶ್ವ ವ್ಯಾಪಾರಿ ಒಪ್ಪಂದ ಎಂದೆಲ್ಲ ಅಸ್ತ್ರವನ್ನು ಹೊಂದಿರುವುದು ಸಾಮ್ರಾಜ್ಯಶಾಹಿ ಎಂಬುದನ್ನು ನೆನಪಿಡಬೇಕು. ಈ ನೀತಿಗನುಸರಿಸಿ ಪತ್ರಿಕಾ ಉದ್ಯಮಕ್ಕೆ ಸಹ

ವಿದೇಶಿ ಖಾಸಗಿಗೆ ಬಾಗಿಲು ತೆರೆದಿಡಬೇಕು. ಈಗಾಗಲೇ ನಮ್ಮಲ್ಲಿ ಅದು ಜಾರಿಯಲ್ಲಿ ಬಂದಿದೆ. ಆದರೆ ಈ ರೀತಿಯ ಒತ್ತಡ ಬಂದಿರುವುದು ಮಾತ್ರ ಸಾಮ್ರಾಜ್ಯಶಾಹಿ ಯಾಜಮಾನ್ಯ ಮತ್ತು ಸಂಸ್ಕೃತಿಯನ್ನು ಸ್ಥಾಪಿಸುವ ಒಂದು ಕಾರ್ಯತಂತ್ರವಾಗಿದೆ. ಯುದ್ಧ ಎನ್ನುವುದು ಗನ್ನು, ಬಾಂಬುಗಳ ಮಧ್ಯೆ ಮಾತ್ರ ನಡೆಯಬೇಕಿಲ್ಲ. ಅದಕ್ಕಿಂತ ಭೀಕರವಾದ ಯುದ್ಧ ಈ ಮಾಧ್ಯಮಗಳಿಂದಲೇ ನಡೆಯುತ್ತದೆ. ಯಾಕೆ ಇದನ್ನು ವಿರೋಧಿಸಬೇಕೆಂದರೆ ಒಂದು, ಇದು ತನ್ನ ಮೇಲೆ ಬರುವ ಹೊರಗಿನ ಯಾವುದೇ ಒತ್ತಡಗಳನ್ನು ಮೀರಿಯೂ ತನ್ನದೇ ಆದ ಆರ್ಥಿಕ ನೀತಿಯನ್ನು ಸ್ಥಾಪಿಸಿಕೊಂಡು ಮುನ್ನಡೆಯಬೇಕೆಂಬ ದೇಶದ ಆರ್ಥಿಕ ಸಾರ್ವಭೌಮತ್ವವನ್ನು ದುರ್ಬಲಗೊಳಿಸುತ್ತದೆ.

ಎರಡು, ಇದು ಜನಪರವಲ್ಲದ ಅಂದರೆ ಜನರ ಬದುಕಿನ ಮೂಲಭೂತ ಸೌಕರ್ಯಗಳನ್ನೇ ವಂಚಿಸುವ ಆರ್ಥಿಕ ರಚನೆ ಹೊಂದಿರುವ ಆರ್ಥಿಕ ನೀತಿಯನ್ನು ಬೆಂಬಲಿಸುವ ಮೂಲದ್ದಾಗಿದೆ. ಮತ್ತು ದೇಶದ ಆರ್ಥಿಕ ಪ್ರಗತಿಯ ವೇಗವನ್ನು ಕುಂದಿಸುವಂತಹ ಪ್ರತಿಗಾಮಿ ವಿಚಾರವನ್ನು ಹರಡುವ ಅವಕಾಶವನ್ನು ಹೊಂದಿರುತ್ತದೆ.[೧೩]

ನಮ್ಮ ಪತ್ರಿಕೆಗಳು ನಮ್ಮ ದೇಶವನ್ನು ಸ್ವಾತಂತ್ರ್ಯಗೊಳಿಸುವಲ್ಲಿ, ಶಿಕ್ಷಣ ಪ್ರಸಾರದಲ್ಲಿ, ಸಂಸ್ಕೃತಿ ನಿರ್ಮಾಣದಲ್ಲಿ, ಕೋಮು ಸಾಮರಸ್ಯ ಸ್ಥಾಪಿಸುವಲ್ಲಿ, ಪ್ರಜಾಪ್ರಭುತ್ವವಾದಿ ಪ್ರಜ್ಞೆಯನ್ನು ಹರಡುವಲ್ಲಿ ಬಹಳ ಮುಖ್ಯ ಪಾತ್ರವನ್ನು ಹೊಂದಿದ ಚರಿತ್ರೆ ಉಳ್ಳದ್ದು. ಅದು ಇನ್ನೂ ಮುಂದೆಯೂ ಅಂಥ ಹೊಣೆ ಹೊರಬೇಕಾಗಿದೆ. ಪ್ರತಿಕಾ ಮಾಧ್ಯಮದ ಮೂಲಕ ವಿದೇಶಿಗಳು ಎಂತಹ ಅನಾಹುತ ಮಾಡ ಬಹುದೆಂಬುದಕ್ಕೆ ಒಂದು ಉದಾಹರಣೆ ಇಲ್ಲಿ ಹೇಳಿದರೆ ಸಾಕು.

ಮುರ್ಡೋಕ್ ಒಡೆತನದಲ್ಲಿರುವ ದಟೈಮ್ಸ್ ಪತ್ರಿಕೆಯ ಕಾರ್ಯ ವಿಧಾನವೊಂದು ಹೀಗಿದೆ. ೧೯೭೨ ರಲ್ಲಿ ಆಸ್ಟ್ರೇಲಿಯಾದಲ್ಲಿ ಲೇಬರ ಪಕ್ಷವನ್ನು ಬೆಂಬಲಿಸಿ ಅದರ ನಾಯಕ ಗಾಗ್‌ವಿಟ್ಲಾಂ ಅವರು ಪ್ರಧಾನ ಮಂತ್ರಿಗಳಾಗುವಂತೆ ಉತ್ತೇಜಿಸಿದ ರೂಪರ್ಟ ಮುರ್ಡೋಕ್ ಮೂರು ವರ್ಷಗಳ ನಂತರ ಈ ಸರಕಾರಕ್ಕೆ ತನ್ನೆಲ್ಲಾ ಪತ್ರಿಕೆಗಳ ಬೆಂಬಲ ಹಿಂತೆಗೆದುಕೊಂಡು ಸರಕಾರ ಉರುಳುವಂತೆ ಮಾಡಿದ. ಇದೇ ಸಮಯದಲ್ಲಿ ಸೆನೇಟ್ ಬಹಮತ ಹೊಂದಿದ್ದ ವಿರೋಧಿ ಪಕ್ಷಗಳು ಗಾಗ್ ವಿಟ್ಲಾಂ ಬಜೆಟನ್ನು ತಿರಸ್ಕಾರಿಸಿದ್ದವು. ಮುರ್ಡೋಕ್ ಒಡೆತನದ ಪತ್ರಿಕೆಗಳು ಗಾಗ್ ರವರು ಆಡಳಿತ ನಡೆಸುವ ಸಾಮರ್ಥ್ಯ ಹೊಂದಿಲ್ಲವೆಂಬ ಪ್ರಚಾರ ನಡೆಸಿ ಆ ಸರಕಾರವನ್ನು ವಜಾಮಾಡಬೇಕೆಂಬ ಜನಾಭಿಪ್ರಾಯ ಮೂಡಿಸಲು ಮುಂದಾದವು.[೧೪] ಮುಂದೆ ಹೀಗೆ ಪತ್ರಿಕೆಗಳು ಬಹಳ ಮಹತ್ವದ್ದಾಗಿ ಜನಾಭಿಪ್ರಾಯ ಮೂಡಿಸುವ ಮಾಧ್ಯಮವಾಗಿರುವುದರಿಂದ ಅದು ದೇಶದ ಹಿತಾಸಕ್ತಿಯನ್ನು ಹಾಳು ಮಾಡಬಲ್ಲದು. ಹಾಗೆಯೇ ಪತ್ರಿಕೆಯ ನೆಪದಲ್ಲಿ ಸಿ.ಐ.ಎ. ಎಜಂಟರು ಕೂಡ ನುಸಿಳಿರುವುದು ಈಗಾಗಲೇ ತಿಳಿದ ವಿಷಯ. ಹೀಗಾಗಿ ಮಾಧ್ಯಮದ ಸ್ವಾತಂತ್ರ್ಯ ನಮಗೆ ಮುಖ್ಯವಾದುದಾಗಿದೆ.

ಇವೆಲ್ಲಕ್ಕೂ ಮೂಲವಾದುದು ಜಾಗತೀಕರಣವೆಂಬ ಪ್ರಕಿಯಯೇ. ಭಯೋತ್ಪಾದನೆಯಾಗಿದೆ ಕೂಡ ಅದರದೇ ಪ್ರಕ್ರಿಯೆಯಾಗಿದೆ. ಮತ್ತು ಅಮೇರಿಕ ದೊಡ್ಡ ಭಯೋತ್ಪಾದಕವಾಗಿದೆ.

ಆದರೆ ಈ ಪ್ರಕ್ರಿಯೆಯನ್ನು ತಡೆಯುವುದು ಹೀಗೆ ಎಂಬ ಪ್ರಶ್ನೆ ಯಾಗಿದೆ. ಜಾಗತೀಕರಣವನ್ನು ಈ ವಿನಾಶಕ ಪರಿಕಲ್ಪನೆಯಲ್ಲಿ ಮಾತ್ರ ನಿರಾಕರಿಸಬೇಕಾಗಿದೆ. ಅದಲ್ಲದಿದ್ದರೆ ಜಗತ್ತಿಕ ವಾಣಿಜ್ಯ ಬೌದ್ಧಿಕ ಸಂಪರ್ಕವನ್ನು ನಿರಾಕರಿಸಬೇಕೆಂಬುದು ಕೂಡ ಸಂಕುಚಿತ ಹಠಮಾರಿತನವಾಗುತ್ತದೆ. ರಾಜಕೀಯ ಮತ್ತು ವಾಣಿಜ್ಯ ಸಂಬಂಧಗಳು ಸಂಕೀರ್ಣಗೊಳ್ಳುತ್ತಿರುವ ಇಂದಿನ ಸಂದರ್ಭದಲ್ಲಿ ಜಾಗತೀಕರಣವನ್ನು ಸಂಪೂರ್ಣ ನಿರಾಕರಿಸುವುದು ಅಷ್ಟು ಸಾಧಕವಾಗಲಾರದು. ಆದರೆ ಅದು ದೇಶೀಯ ಹಿತಾಸಕ್ತಿಗೆ ಮಾರಕವಾಗದ ರೀತಿಯಲ್ಲಿ ಮಾತ್ರ ಇರಬೇಕು. ಜಾಗತೀಕರಣದ ಪ್ರತಿರೋಧವೆಂದರೆ ಸನಾತನತೆಗೆ ಹಿಂದಿರುಗುವುದೆಂದಾಗಲಿ ಆಧುನಿಕತೆಯ ಕೈಬಿಡುವುದು ಎಂದಾಗಲಿ ಆಗಬಾರದು.

ಜಾಗತಿಕ ಸಂದರ್ಭದಲ್ಲಿ 'ಜಾಗತೀಕರಣ'ದ ವಿರುದ್ಧ ಬುದ್ಧಿ ಜೀವಿಗಳ ಒಂದು ಪ್ರತಿಭಟನಾ ಅಲೆ ಎದ್ದಿದೆ. ಜಾಗತಿಕ ವ್ಯಾಪಾರಿ ಸಂಘಟನೆ ಸಭೆ ಸೇರುವಲ್ಲಿ ಸಾವಿರಾರು ಜನರು ಸೇರಿ ಕಪ್ಪುಧ್ವಜ ಪ್ರದರ್ಶನ ಮಾಡಿರುವುದನ್ನು ಜಾಗತೀಕರಣದ ವಿರುದ್ಧ ಘೋಷಣೆ ಮಾಡಿದ್ದನ್ನು ನಾವು ಪತ್ರಿಕೆಗಳಲ್ಲಿ ಕಂಡಿದ್ದೇವೆ. ನಮ್ಮ ದೇಶದೊಳಗೂ ವಿದ್ಯಾರ್ಥಿಗಳ ಚಳವಳ ನಡೆದಿದೆ. ಅದು ಅಷ್ಟೇಸಾಲದೆ ರೈತರು ಕಾರ್ಮಿಕರು ಒಟ್ಟುಗೂಡಿ ಚಳವಳಿ ಉಂಟಾಗಬೇಕು.

ಹಾಗೆಯೇ ಜನಸಾಮಾನ್ಯರ ಮಧ್ಯೆಯೂ ಪ್ರತಿಭಟನಾ ಅಭಿಪ್ರಾಯ ಮೂಡಿಸಬೇಕು. ಇದಕ್ಕೆ ನಮ್ಮ ಅನಕ್ಷರತೆ ದೊಡ್ಡ ಅಡ್ಡಿಯಾಗಿದೆ. ಆದರೂ ಸಭೆ, ಹಾಡು, ಬೀದಿನಾಟಕಗಳ ಮುಖಾಂತರವೂ ಜನಜಾಗ್ರತಿಯನ್ನು ಮಾಡಬೇಕು. ಅಮೇರಿಕದಂಥ ಸಾಮ್ರಾಜ್ಯಶಾಹಿ ರಾಷ್ಟ್ರದ ಸಮೀಪ ಇದ್ದು ಅದರ ನೀತಿಗೆ ಬಾಗದಿರುವ ಶಕ್ತಿಯನ್ನು ಕ್ಯೂಬಾ ಪಡೆದದ್ದು ಹೀಗೇ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇರುವ ಸರಕಾರವನ್ನು ಬದಲಿಸುವ ಸಾಧ್ಯತೆಯ ಪ್ರಯೋಜನ ಪಡೆಯಬೇಕು. ಸರ್ವಾಧಿಕಾರವನ್ನು ಹೇರಿದ ಇಂದಿರಾ ಗಾಂಧಿಯವರನ್ನೇ ಕಿತ್ತೊಗೆದ ಪ್ರಜ್ಞೆಯನ್ನು ಈ ದೇಶದ ಜನತೆ ಮರೆದಿದ್ದಿದೆ. ಹಾಗೆಯೇ ಈಗ ನಡೆದ ಉತ್ತರ ಪ್ರದೇಶ ಮತ್ತಿತರ ಕಡೆಯ ಚುನಾವಣೆ ಏನು ಹೇಳುತ್ತಿದೆ? ಬಿ.ಜೆ.ಪಿ.ಯ ಕೋಮುವಾದಿ ಧೋರಣೆಗೆ ಕಬ್ಬಿಣದ ಬರೆ ಎಳೆದಿದೆ ಜನತೆ.

ಆದ್ದರಿಂದ ಜಾಗತೀಕರಣವನ್ನು ವಿರೋಧಿಸುವ ಅಥವಾ ಅದಕ್ಕಾಗಿ ರಾಷ್ಟ್ರದ ಸಾರ್ವಭೌಮತ್ವವನ್ನು ಮಾರುವುದಿಲ್ಲವೆಂದು ಭರವಸೆ ಕೊಡುವ ಮತ್ತೊಂದು ಪಕ್ಷವನ್ನು ಆರಿಸಿ ತರಬೇಕು. ಆ ಮೂಲಕ ಜಾಗತೀಕರಣದ ಅತಿರೇಕವನ್ನು ತಡೆಯುವುದನ್ನೂ ದೇಶ ಕಟ್ಟುವ ಪ್ರಕ್ರಿಯೆಯನ್ನೂ ಮುಂದುವರಿಸಿಕೊಂಡು ಹೋಗಬೇಕು.

ಇಲ್ಲದಿದ್ದರೆ ಸರಕಾರ ನಮ್ಮದಾಗಿರುವುದಿಲ್ಲ. ಹಿಂದೆ ಬ್ರಿಟಿಷ ರಾಣಿ ಪ್ರತಿನಿಧಿಯಾಗಿ ವಾಯಸ್‌ರಾಯ್ ಇರುವಂತೆ ಈಗ ಅಮೇರಿಕದ ಪ್ರತಿನಿಧಿಯಾಗಿ ಪ್ರಧಾನಮಂತ್ರಿ ಮತ್ತು ಮಂತ್ರಿ ಮಂಡಲವಿರುತ್ತದೆ. ಬ್ರಿಟಿಷ್ ಯಜಮಾನಿಕೆ ಪ್ರತ್ಯಕ್ಷವಾಗಿರುತ್ತಿತ್ತು. ಆದರೆ ಈಗಿನದು ಅದರ ಸುಧಾರಿತ (ಇಂಪ್ರೂವ್ಡ್) ಮಾದರಿಯಲ್ಲಿ ಅಮೇರಿಕನ ಯಜಮಾನಿಕೆ ಪ್ರತ್ಯಕ್ಷ ಇರುವುದೇ ಇಲ್ಲ.

ಅಡಿಟಿಪ್ಪಣಿಗಳು

೧. 'ಪ್ರಥಮ ಭಾರತೀಯ ಸಂಗ್ರಾಮ ೧೮೫೭-೫೯ ಅನು. ಕೆ.ಎಲ್. ಗೋಪಾಲ ಕೃಷ್ಣರಾವ್ ೧೯೮೭; ೪೦.

೨. 'ಅರಿವು ಬರಹ' ಸಂಚಿಕೆ ೯;೧೯೯೫.

೩. ಭಾರತ ಕಮ್ಯುನಿಸ್‌ಟ ಪಕ್ಷ (ಎಂ) ೧೭ನೇ ಅಧಿವೇಶನದ ಕರಡು ಪು ೧೯

೪. ಬಹುರಾಷ್ಟ್ರೀಯ ಕಂಪನಿಗಳ ಜೇಡರ ಬಲೆ ಕನ್ನಡ ಜನಾಂತರಂಗ (ಪ್ರತಿಕೆ) ಲೇಖನ ಭಾಗ ೧೩; ರಾಜೀವ ದೀಕ್ಷಿತ.

೫. ರಾಜೀವ ದೀಕ್ಷಿತ, ಲೇಖನ ಮಾಲೆಯ ಭಾಗ ೩೦ ಬಿ; ಕನ್ನಡ ಜನಾಂತರಂಗ ೨೭-೨.೨೦೦೨

೬. ಈ ಬಗ್ಗೆ ಕೆ. ಫಣಿರಾಜ್ ಜನವಾಹಿನಿ ದಿನಪತ್ರಿಕೆ, ೪-೨-೨೦೦೨ರಲ್ಲಿ ವಿವರವಾಗಿ ಬರೆದಿದ್ದಾರೆ.

೭. ಕೆ. ಫಣಿರಾಜ್ ಅವರು ಜೂನ್ ೨೦೦೧ರ 'ಹೊಸತು' ಮಾಸಿಕ ಪತ್ರಿಕೆ ಸಂಚಿಕೆಯಲ್ಲಿ ಬರೆದ ಲೇಖನ ಯಾರದ್ದೊ ದುಡ್ಡು ಎಲ್ಲಮ್ಮನ ಜಾತ್ರೆ' ಈ ಸಂಗತಿಯನ್ನು ಮನನೀಯವಾಗಿ ವಿವರಿಸುತ್ತದೆ.

೮. ರಾಜೀವ ದೀಕ್ಷಿತ ಬಹುರಾಷ್ಟ್ರೀಯ ಕಂಪನಿ ಜೇಡರಬಲೆ ಭಾಗ ೧೯ (ಕ. ಜನಾಂತರಂಗ)

೯. ಪ್ರಥಮ ಭಾರತೀಯ ಸ್ವಾತಂತ್ರ್ಯ ಸಂಗ್ರಾಮ ಮೊದಲು ಹೇಳಿದ್ದು.

೧೦. ಜಾಗತೀಕರಣ ಮತ್ತು ಸಾಂಸ್ಕೃತಿಕ ಪಲ್ಲಟ. ಕೆ.ಜಿ.ನಾಗರಾಜಪ್ಪ 'ಹೊಸತು' ಪತ್ರಿಕೆ ಫೆಬ್ರವರಿ ೨೦೦೦.

೧೧. ಅರಿವು ಬರಹ ಸಂಚಿಕೆ ೯; ೧೯೯೫; ೧೧.

೧೨. ಕನ್ನಡ ಜನಾಂತರಂಗ ೨೨-೨-೨೦೦೨

೧೩. 'Marxist' ಸಂಚಿಕೆ ಜುಲೈ-ಡಿಸೆಂಬರ ೨೦೦೧ ಎನ್.ರಾಮ್ ಲೇಖನ ಪು.೫೭

೧೪. ಡಂಕೆಲ್ ಪ್ರಸ್ತಾವನೆ 'ಪತ್ರಿಕಾರಂಗ' ಜೆ.ಎನ್. ಮೋಹನ್ ೧೯೯೫; ೫೧

* ಜಾಗತೀಕರಣದ ವಿಷಯವಾಗಿ ನನ್ನೊಡನೆ ಚರ್ಚಿಸಿ ವಿಷಯ ತಿಳಿಯಾಗಿಸಿದ ಶ್ರೀ ಸಿ.ಆರ್. ಶಾನಭಾಗ, ಸಿರ್ಸಿ ಅವರಿಗೆ ನನ್ನ ಕೃತಜ್ಞತೆ ಸಲ್ಲುತ್ತದೆ.

* ದಿ: ೧೦-೩-೨೦೦೨ ರಂದು ಮುಂಬೈಯಲ್ಲಿ ನಡೆದ ಹೊರನಾಡ ಕನ್ನಡಿಗರ ಸಮ್ಮೇಳನದಲ್ಲಿಯ ಗೋಷ್ಠಿಯ ಅಧ್ಯಕ್ಷತೆಯ ಭಾಷಣದ ಬರಹ ರೂಪ.

*

ಆರ್.ಎಸ್.ಎಸ್. ಪ್ರಣೀತ ಹಿಂದುತ್ವ ಮತ್ತು (ಸೆಕ್ಯುಲರಿಸಂ) ಧರ್ಮನಿರಪೇಕ್ಷಿತಾವಾದ

೪-೫-೦೨ರಂದು ಯಲ್ಲಾಪುರದ ಮಂಚಿಕೇರಿಯಲ್ಲಿ 'ಧರ್ಮ ಮತ್ತು ಸಂಸ್ಕೃತಿ' ಕುರಿತೊಂದು ವಿಚಾರಸಂಕಿರಣ ನಡೆಯಿತು. ಆ ಸಂಕಿರಣದಲ್ಲಿ ಧರ್ಮ ನಿರಪೇಕ್ಷಿತಾವಾದಿಗಳನ್ನು ಮಾತ್ರ ಕರೆದಿದ್ದಾರೆಂದೂ ಅದು ಅಪೂರ್ಣವೆಂದು ಅಪಾದಿಸಿ, ಕೆಲವು ಪ್ರಶ್ನೆಗಳನ್ನೊಳಗೊಂಡ 'ಸಂವಾದವೋ ಪ್ರಚಾರವೋ' ಎಂಬ ಲೇಖನ ಸವಿತೊಗರಿಬೇಳೆ, ಎಂಬ ಹೆಸರಿನಲ್ಲಿ ದಿ: ೩-೫-೨೦೦೨ ರಂದು ಸಿರ್ಸಿಯಿಂದ ಪ್ರಕಟನೆಗೊಳ್ಳುವ 'ಧ್ಯೇಯನಿಷ್ಠ ಪತ್ರಕರ್ತ' ಎಂಬ ಪತ್ರಿಕೆಯಲ್ಲಿ ಪ್ರಕಟವಾಯಿತು. ಆ ಲೇಖನ ಧರ್ಮನಿರಪೇಕ್ಷತಾ ವಾದಿಗಳು ಧರ್ಮ (ಹಿಂದೂ) ವಿರೋಧಿಗಳು ಎಂಬ ಅಭಿಪ್ರಾಯವನ್ನು ಮೂಡಿಸುವ ಹುನ್ನಾರನ್ನೊಳಗೊಂಡಿತ್ತು. ಅವರ ಆ ರಾಜಕೀಯವನ್ನು ಸಾರ್ವಜನಿಕರೆದುರು ಬಯಲುಗೊಳಿಸುವ ಉದ್ದೇಶದಿಂದ ಅವರ ವ್ಯಂಗ್ಯ-ವಿಡಂಬನೆ, ಆಡಂಬರದ ವಿವರಗಳನ್ನೆಲ್ಲ ಬಿಟ್ಟು ಮುಖ್ಯ ಪ್ರಶ್ನೆಯನ್ನೇ ಎತ್ತಿಕೊಂಡು ದಿ. ೧೩-೧೪-೫-೦೨ ಮತ್ತು ೫-೯-೬-೦೨ರಂದು ಉತ್ತರ ಬರೆದೆ. ಮಧ್ಯೆ ಅವರ ೧೦ ಬಹಿರಂಗ ಪತ್ರಗಳು ಪ್ರಕಟವಾದವು. ಅಲ್ಲಿ ನಾನು ಬರೆದ ಲೇಖನದಲ್ಲಿ ಅಲ್ಲಲ್ಲಿ ಹರಡಿ ಹೋದ ಅಂಶಗಳನ್ನೆಲ್ಲ ಒಂದೆಡೆ ತರುವಂತೆ ಮಾಡಲು ಅವರ ಹೇಳಿಕೆಯನ್ನು ಪೂರ್ವಪಕ್ಷವನ್ನಾಗಿ ಮಾಡಿಕೊಂಡು ಇಲ್ಲಿ ಸಂಯೋಜಿಸಿದ್ದೇನೆ. ಆದರೆ ಪ್ರಶ್ನೆಗಳೂ ಮತ್ತು ಅದಕ್ಕೆ ನಮ್ಮ ಉತ್ತರವೂ ಮೂಲದಲ್ಲಿ ಇದ್ದಂತೇ ಇದೆ.

ಮಂಡನೆ: ಇಂದಿನ ಎಡಪಂಥೀಯ ಲೇಖಕರಪೈಕಿ ಹಲವರನ್ನು ನಾನು ಹತ್ತಿರದಿಂದ ನೋಡಿದ್ದೇನೆ. ಇವರೆಲ್ಲ ಪ್ರತಿಪಾದಿಸುವ ಸೆಕ್ಯೂಲರಿಸಂಗೆ 'ಧರ್ಮನಿರಪೇಕ್ಷವಾದ' ಎಂದು ಹೆಸರಿಟ್ಟಿದ್ದಾರೆ. ಈ ಹೆಸರನ್ನು ಅದರ ಮುಖಬೆಲೆಯಲ್ಲಿ ಸ್ವೀಕರಿಸುವುದೆಂದರೆ ಇವರಿಗೆ ಧರ್ಮಬೇಡವೆಂದಾಯಿತು. ಅಧರ್ಮ ಪ್ರತಿಪಾದಕರೆಂದಾಯಿತು. ಈ ಎಡಪಥೀಯ ಬುದ್ಧಿಜೀವಿಗಳು 'ಕುಡಿತ'ವನ್ನು ಒಂದು ಸಂಸ್ಕೃತಿಯನ್ನಾಗಿ ಮಾಡಿಕೊಂಡಿದ್ದಾರೆ.

ಉತ್ತರ: ಇಲ್ಲಿ ಎರಡು ಅಂಶಗಳಿವೆ. ಮೊದಲನೆಯ ಪ್ರಶ್ನೆ ಸೆಕ್ಯುಲರಿಸಮ್‌ಗೆ ಸಂಬಂಧಿಸಿದ್ದು. ನಿಮ್ಮವಾದ ಒಬ್ಬ ನಿಷ್ಣಾತ ಕ್ರಿಮಿನಲ್ ವಕೀಲನ ಮಂಡನೆಯಂತಿದೆ. ಅಂದರೆ ಕೊಲೆಪಾತಕಿಯನ್ನು ಸಂಭಾವಿತನನ್ನಾಗಿ ಮಾಡುವ ರೀತಿಯದು. ಯಾಕೆಂದರೆ ಮೋಸವನ್ನು ಅರಿಯದ ಜನ ಸಾಮಾನ್ಯರು ಭ್ರಮಾಧೀನರಾಗಿ ಈ ಬಲೆಯಲ್ಲಿ ಸಿಕ್ಕಿಬೀಳುತ್ತಾರೆ. ಮತ್ತು

ನಿಮ್ಮನ್ನು ನಂಬುತ್ತಾರೆ. ಸೆಕ್ಯುಲರಿಸಮ್‌ಗೆ 'ಧರ್ಮನಿರ ಪೇಕ್ಷ'ಎಂದು ಹೆಸರಿಟ್ಟವರು ಎಡಪಂಥೀಯರಲ್ಲ. ಸೆಕ್ಯುಲರಿಸಮ್ ಬೆಂಬಲಿಸುವರಲ್ಲಿ ಎಲ್ಲರೂ ಎಡಪಂಥೀಯರೇ ಇಲ್ಲ. ಸೆಕ್ಯುಲರಿಸಮ್‌ಗೆ 'ಧರ್ಮ ನಿರಪೇಕ್ಷ' ಎಂದು ಸ್ವೀಕರಿಸಿದ್ದು ಸಂವಿಧಾನ ನಿರ್ಮಾಪಕರು ಮತ್ತು ಇತರ ಚಿಂತಕರು. ಇದು ಸೆಕ್ಯುಲರಿಸಮ್‌ಗೆ ತೀರ ಹತ್ತಿರದ ಪದವೇಹೊರತು ಅದೇ ಇದಲ್ಲ. ಇದನ್ನು ನೆಹರು ಕೂಡ ಹೇಳಿದ್ದರು. ಡಾ. ರಾಧಾಕೃಷ್ಣನ್ ಕೂಡ ಈ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದ್ದುಂಟು. ಒಟ್ಟಾರೆಯಾಗಿ ಇದರ ಹಿಂದಿರುವುದು ಎಲ್ಲಾ ಧರ್ಮಗಳನ್ನು ಸಮಾನ ಗೌರವದಿಂದ ಕಾಣುವುದು. ಆ ಮುಖಾಂತರ ಮತೀಯ ಮತ್ತು ಭಾಷಿಕ ಅಲ್ಪಸಂಖ್ಯಾತರ ರಾಜಕೀಯ, ಧಾರ್ಮಿಕ ಮತ್ತು ಆರ್ಥಿಕ ಹಕ್ಕುಗಳನ್ನು, ಅಭಿವೃದ್ಧಿಯ ಪ್ರಕ್ರಿಯೆಯನ್ನು ರಕ್ಷಿಸುವುದು ಎಂಬುದಾಗಿದೆ. ಮತೀಯ ಅಲ್ಪಸಂಖ್ಯಾತರಿಗೆ ಕೊಡುವ ವಿಶೇಷ ಸೌಲತ್ತು ಬೊಟ್ಟುಮಾಡಿ ತೋರಿಸುವವರಲ್ಲಿ ಕೊಂಕಣಿಯಂಥ ಭಾಷಿಕ ಅಲ್ಪಸಂಖ್ಯಾತರಾಗಿ ವಿಶೇಷ ಹಕ್ಕು ಪಡೆಯುವವರೂ ಇದ್ದಾರೆ ಎನ್ನುವುದು ಇಲ್ಲಿಯ ಚೋದ್ಯ.

- ನೀವು ಇನ್ನೊಂದು ಹೀನ ಆಕ್ಷೇಪವನ್ನು ಹೊರಿಸುತ್ತೀರಿ. ಅಂದರೆ ಸೆಕ್ಯುಲರಿಸಂ ಬಗ್ಗೆ ಮಾತನಾಡುವವರು ನೀತಿವಂತರಲ್ಲ. ಅವರ ಅಭಿಪ್ರಾಯವನ್ನು (ಸೆಕ್ಯುಲರಿಸಮ್ ಬಗ್ಗೆ) ಮನ್ನಿಸಬೇಡಿ ಎಂದು ಜನರನ್ನು ಮೋಸಗೊಳಿಸುವ ತಂತ್ರ ಅದು. ಸೆಕ್ಯುಲರಿಸಮ್ ಪ್ರತಿಪಾದಿಸುವವರಲ್ಲಿ 'ಕುಡಿತ'ದ ರುಚಿಹೊಂದಿದವರಿದ್ದಿರಬಹುದು. ಅದು ಅವರ ವೈಯಕ್ತಿಕ ವಿಚಾರ. ಆದರೆ ಸೆಕ್ಯುಲರ್‌ಂಗಳೆಲ್ಲ 'ಕುಡುಕರಲ್ಲ ಹಾಗೂ 'ಕುಡಿತ'ವನ್ನು ಒಂದು ಸಂಸ್ಕೃತಿಯನ್ನಾಗಿ ಸ್ವೀಕರಿಸಿದವರೂ ಅಲ್ಲ. ನನಗೆ ಅನೇಕ ಎಡಪಂಥೀಯರ ಪರಿಚಯ ಉಂಟು. ಆದರೆ ನೀವು 'ಕುಡಿತ' (ಸುರಾಪಾನ) ಎನ್ನುವುದನ್ನು ವೈದಿಕ ಸಂಸ್ಕೃತಿಯ ಜನಪ್ರಿಯವಾದ ಪ್ರಾಚೀನ ಸಂಸ್ಕೃತಿ ಎಂದು ಎತ್ತಿ ಹಿಡಿಯಲ್ಲಿಲ್ಲ ಎನ್ನುವುದು ಸಂತೋಷದ ಸಂಗತಿ.

ಮಂಡನೆ: ನೀವು ಹೇಳಿದ್ದು ಸರಿಯಲ್ಲ ಸೆಕ್ಯುಲರ್ ಎಂಬುದು ನಮ್ಮ ಸಂವಿಧಾನದಲ್ಲಿಲ್ಲ. ಅಲ್ಲಿರುವುದು 'ಸರ್ವಧರ್ಮ ಸಮಭಾವ' ಎಂದಿದೆ. ಸೆಕ್ಯುಲರ್ ಪದ ಸಂವಿಧಾನದಲ್ಲಿ ಸೇರಿರುವುದು ಇಂದಿರಾಗಾಂಧಿ ಅವರ ಕಾಲದಲ್ಲಿ ಅದರ ಅರ್ಥ ಎಲ್ಲಿ ಧರ್ಮಕ್ಕೆ ಸಮಾನ ಗೌರವ ಅಂತಲ್ಲ ಸಮಭಾವ ಅಂದರೆ ಸಮಾಭಾವ ಅಷ್ಟೆ.

ಉತ್ತರ: ನೀವು ಹೇಳಿದ್ದು ಇಂದಿರಾಗಾಂಧಿ ಕಾಲದಲ್ಲೇ ಸೆಕ್ಯುಲರ್ ಎಂಬ ಪದ ಸೇರಿದ್ದು ಎನ್ನುವುದು ಸರಿಯಾಗೇ ಇದೆ. ಆದರೆ ಸಂವಿಧಾನದ ಚರ್ಚೆಯಲ್ಲಿ ಬಹು ಹಿಂದೆಯೇ ಬಳಕೆಯಾದ ಪದವೂ ಹೌದು. ಅಂದರೆ ಅದು ಸಂವಿಧಾನ ನಿರ್ಮಾಪಕರಲ್ಲಿದ್ದ 'ಪರಿಕಲ್ಪನೆ'. ಅಂತದೊಂದು ಚರ್ಚೆಯನ್ನು ಗಮನಿಸಿ. ಪಂಡಿತ ಜವಾಹರಲಾಲ ಹೇಳುತ್ತಾರೆ. 'ಒಂದು ಸಲ ನ್ಯಾಶನಲ್ ಸ್ಟೇಟ್ ಜಾರಿಗೆ ಬಂತೆಂದರೆ ನಮಗೆ ಮುಖ್ಯವಾಗುವುದು ಆರ್ಥಿಕ ಸಮಸ್ಯೆ. ಅಲ್ಲಿ ವರ್ಗಸಂಘರ್ಷ ಇರಬಹುದೇ ಹೊರತು ಧರ್ಮ ಸಂಘರ್ಷ ಇರಲಾರದು. ಯಾಕೆಂದರೆ ಅದು ಕೆಲವೇ ಹಿತಾಸಕ್ತರಿಂದಷ್ಟೇ ಉಂಟಾಗಬಹುದು. ಧಾರ್ಮಿಕ ಅಲ್ಪಸಂಖ್ಯಾತರಿಗೆ ಸೆಕ್ಯುಲರ್ ನೀತಿ ಹೊಂದಿದ ವ್ಯವಸ್ಥೆಯಲ್ಲಿ ಸುರಕ್ಷತೆಯಿದೆ ಎಂಬ ನಂಬಿಕೆ ಇಲ್ಲಿಯದಾಗಿದೆ."

[**ಉದ್ಧರಣೆ:** ಎಸ್. ನರಂಗ ವಿವರಣೆಗಾಗಿ ಸೋಶಿಯಲ್ ಜಸ್ಟೀಸ್ ಆ್ಯಂಡ್‌ದ ಕಾನ್ಸ್‌ಟಿಟ್ಯೂಶನ್: ಸಂಪಾದಕರು ಅಜಿತೆ ಭಟ್ಟಾಚಾರ್ಯಜೀ: ೧೯೯೭: ೧೨೯] ಮಂಡನೆ: ಸೆಕ್ಯುಲರಿಸ್‌ಮ್‌ದ ಅರ್ಥ ಲೌಕಿಕ ರಾಜ್ಯ ಎಂದಾಗುತ್ತದೆಯೇ ಹೊರತು 'ಧರ್ಮನಿರಪೇಕ್ಷ' ಆಗುವುದಿಲ್ಲ. ರಾಜ್ಯವು 'ಸರ್ವಧರ್ಮ ಸಮಭಾವ' ಎಂಬ ತತ್ವವನ್ನು ಅನುಸರಿಸ-ಬೇಕೆಂಬುವುದಾದರೆ ಅದು ಸೆಕ್ಯುಲರಿಸಮ್ ಹುಟ್ಟುವ ಎಷ್ಟೋ ಮೊದಲೇ ಭಾರತದಲ್ಲಿತ್ತು. ಇಲ್ಲಿಯ ರಾಜರು ಮುಸ್ಲಿಂ, ಕ್ರಿಶ್ಚನರಿಗೆ ಮಸೀದಿ, ಚರ್ಚ್‌ಕಟ್ಟಲು ಅವಕಾಶ ಕೊಟ್ಟರು. ಹಿಂದೂ ಎಂಬುದು ಒಂದು ಜೀವನ ವಿಧಾನ (ಒಂದು ಮತವಲ್ಲ) ಎಂದು ಭಾರತದ ಸರ್ವೋಚ್ಚ ನ್ಯಾಯಾಲಯ ಮೂರುಬಾರಿ ತೀರ್ಪಿತ್ತಿದೆ. ರಾಮಜನ್ಮಭೂಮಿ ವಿಷಯದಲ್ಲಿ ನ್ಯಾಯಾಲಯದ ತೀರ್ಪನ್ನು ಗೌರವಿಸಬೇಕೆಂದು ಶಂಖ ಊದುವ ಬುದ್ಧಿಜೀವಿಗಳು ಹಿಂದೂ ಎಂದರೆ ಒಂದು ಜೀವನವಿಧಾನ ಎಂಬ ತೀರ್ಪನ್ನು ಯಾಕೆ ಗೌರವಿಸುವುದಿಲ್ಲ?

ಉತ್ತರ: ನೀವು ಸರಿಯಾಗೇ ಗುರುತಿಸುವಂತೆ ಸೆಕ್ಯುಲರಿಸಂ ಎಂದರೆ ಲೌಕಿಕತೆ ಅದರ ಒಂದು ಅಂಶ. 'ಸರ್ವ ಧರ್ಮ ಸಮಭಾವ' ಒಂದು ಅಂಶ. ಸಮಾನ ಗೌರವ ಒಂದು ಅಂಶ. ಸರ್ವಧರ್ಮ ಸಮದೂರ ಇನ್ನೊಂದು ಅಂಶ. ಅಂದರೆ ಇವೆಲ್ಲ ಸೆಕ್ಯುಲರಿಸಂ ಪರಿಕಲ್ಪನೆಯಲ್ಲಿದೆ. ಸಮಸ್ಯೆ ಇರುವುದು ಸೆಕ್ಯುಲರಿಸಮ್‌ದ ಅನುವಾದದಲ್ಲಿ. ನನಗೆ ಸಕ್ಯೂಲರಿಸಂ 'ಧರ್ಮನಿರಪೇಕ್ಷೆ' ಎಂದೇ ಅನುವಾದಿಸಬೇಕೆಂಬ ಹಟವಲ್ಲ. ಅದರ ಅರ್ಥ ಮುಖ್ಯವೇ ಹೊರತು ಶಬ್ದಾರ್ಥವಲ್ಲ. ಕಮ್ಯುನಿಸ್ಟರು ಬಳಸಿದ್ದಾರೆ ಎಂಬ ಅರಿವಿನಿಂದಲೂ ಅಲ್ಲ. ಆ ಪದವನ್ನು ಹಿಂದಿಯಲ್ಲೂ, ಕನ್ನಡದಲ್ಲೂ ವ್ಯಾಪಕವಾಗಿ ಬಳಸಲಾಗಿದೆ ಎಂದು ತಿಳಿದು ಬಳಸಿದ್ದೆ. ಹಾಗೆ ಬಳಸಿದಾಗಲೂ ಆ ಪದ ಪರಿಪೂರ್ಣವಲ್ಲ ಎಂದೂ ಸೆಕ್ಯುಲರಿಸಂದ ಪರಿಕಲ್ಪನೆ ಏನೆಂದು ಮೊದಲೇ ಹೇಳಿದೆ. ಆದರೆ ಅದನ್ನು ಮರೆಸಿ ವೈಯಕ್ತಿಕ ಮಟ್ಟದಲ್ಲಿ ಶಬ್ದಾರ್ಥಗೊಳಿಸಿ ಅಂದರೆ ಧರ್ಮ ನಿರಪೇಕ್ಷೆ, ಧರ್ಮದ ಬಗ್ಗೆ ಅಪೇಕ್ಷೆ ಇಲ್ಲದವರು. ಧರ್ಮವನ್ನು ಗೌರವಿಸುವವರಲ್ಲ; ನಾಸ್ತಿಕರು ಎಂದೆಲ್ಲ ಅರ್ಥ ಬರುವಂತೆಮಾಡುತ್ತೀರಿ. ಇದು ತಪ್ಪು ಎಂದು ನಿಮಗೆ ಗೊತ್ತಿದೆ. ನೀವು ಮೊದಲು ಶುರುಮಾಡಿದ್ದೇ ಹೀಗೆ 'ಧರ್ಮನಿರಪೇಕ್ಷ'ವನ್ನು ಮುಖ ಬೆಲೆಯಲ್ಲಿ ಗ್ರಹಿಸುವುದಾದರೆ... ಎಂದು. ಅಂದರೆ ಅದನ್ನು ಮುಖಬೆಲೆಯಲ್ಲಿ ಗ್ರಹಿಸಬಾರದೆಂದು ನಿಮಗೆ ತಿಳಿದಿದೆ. ಶಬ್ದಕೋಶದ ಅರ್ಥಕ್ಕೂ ಒಂದು ಪರಿಕಲ್ಪನೆಗೂ ವ್ಯತ್ಯಾಸವಿದೆ. 'ಧರ್ಮನಿರಪೇಕ್ಷೆ' ಎಂಬುದು ಸೆಕ್ಯುಲರಿಸಂಗೆ ಸಂವಾದಿಯಾಗಿ ಬಳಸಿದ್ದರಿಂದ ಅದು ಒಂದು ಪರಿಕಲ್ಪನೆ. ಅದರ ಅರ್ಥ ನೀವೇ ವಿವರಿಸಿದಂತೆ ಸರಕಾರದ ಎದುರು ಅದು 'ತಟಸ್ಥ' ಎಂದೇ. ಸರಕಾರದ ಕಾರ್ಯಾಚರಣೆಯಲ್ಲಿ ಎಲ್ಲಧರ್ಮಗಳಿಗೆ ಒಂದೇ, ಅಂದರೆ, ಪಕ್ಷಪಾತವಿಲ್ಲ. ಸರಕಾರ ತನ್ನದು ಈ ಮತ ಧರ್ಮ ಎಂದು ಯಾವುದೇ ಮತಧರ್ಮವನ್ನು ಹೆಸರಿಸುವುದಿಲ್ಲ. 'ಹಿಂದೂ ರಾಷ್ಟ್ರ' ಎಂಬುದರಲ್ಲಿ ಆ ಅರ್ಥವೂ ನುಸುಳಿಬಿಡುವುದರಿಂದಲೇ ಕೆಲವರು ಇಂಡಿಯಾ ಎಂದೂ ಕರೆಯುತ್ತಾರೆ.

ಒಂದು ಧರ್ಮ, ಒಂದು ರಾಷ್ಟ್ರವಾಗಿರುವಲ್ಲಿ ಅಂದರೆ ಪಾಶ್ಚಾತ್ಯ ಪ್ರಜಾಪ್ರಭುತ್ವದಲ್ಲಿ ಆಚರಣೆಗೆ ಬಂದ ಪದ ಅನೇಕ ಮತಧರ್ಮ, ಭಾಷೆ, ಸಂಸ್ಕೃತಿಗಳಿರುವ ನಮ್ಮಲ್ಲಿ ಪೂರ್ಣ

ಅರ್ಥ ಕೊಡಲಾರದು ಎಂದೇ ಅದಕ್ಕೆ ಹತ್ತಿರವಾದ ಪದವಾಗಿ ಸೆಕ್ಯುರಿಸಂ ಎಂಬರ್ಥದಲ್ಲಿ 'ಸರ್ವಧರ್ಮ ಸಮಭಾವ' ಎಂದು ಬಳಸಲಾಗಿದೆ. ಈ ವಿಷಯದಲ್ಲಿ ನನ್ನ ತಕರಾರೇ ಇಲ್ಲ. ಹಾಗೆ ರಾಷ್ಟ್ರ ಆ ಅಥವಾ ಈ ಧರ್ಮವನ್ನು 'ರಾಷ್ಟ್ರಧರ್ಮ' ಎಂದು ಸ್ವೀಕರಿಸುವುದಿಲ್ಲವಾದರೂ ಎಲ್ಲ ಧರ್ಮೀಯರಿಗೂ ತಮ್ಮ ತಮ್ಮ ಮತ ಧರ್ಮಗಳನ್ನು ಆಚರಿಸಿಕೊಂಡು ಹೋಗುವುದನ್ನು ನಮ್ಮ ಸಂವಿಧಾನ ಮೂಲಭೂತ ಹಕ್ಕುಗಳಲ್ಲಿ ಒಂದನ್ನಾಗಿಸಿದೆ. ಸೆಕ್ಯುಲರ್ ಎಂದರೆ ಧರ್ಮಬಿಟ್ಟವರು ಅಥವಾ ಬಿಡಬೇಕೆನ್ನುವವರು ಎಂದಲ್ಲವೇ ಅಲ್ಲ. ಆದ್ದರಿಂದ 'ಸರ್ವಧರ್ಮ ಸಮಭಾವ' ಎನ್ನುವುದನ್ನು ಆಡಳಿತದ ಸಂದರ್ಭದಲ್ಲಿ ಹೇಗೆ ವ್ಯಾಖ್ಯಾನಿಸಬೇಕೊ ಹಾಗೇ ಧರ್ಮನಿರಪೇಕ್ಷೆ ಎಂಬುದನ್ನೂ ವ್ಯಾಖ್ಯಾನಿಸಬೇಕು.

ಎರಡನೆಯದಾಗಿ ನ್ಯಾಯಾಲಯದ ತೀರ್ಪನ್ನು ಗೌರವಿಸುವವರಲ್ಲಿ ಸೆಕ್ಯುಲರಿಸಂ ಪರವಿದ್ದವರು ಮೊದಲಿಗರು. 'ನ್ಯಾಯಾಲಯ ತಮ್ಮ ಮನಸ್ಸಿಗೆ ಬಂದಂತೆ ತೀರ್ಪುನೀಡಿದರೆ ಸರಿ. ಇಲ್ಲದಿದ್ದರೆ ನಾವು ಗೌರವಿಸುವುದಿಲ್ಲ' ಎಂದು ಹೇಳುವವರು ಸಂಘಪರಿವಾರ ಎಂದೇ ಹೆಸರಾದ ಆರ್.ಎಸ್.ಎಸ್., ವಿಶ್ವಹಿಂದೂ ಪರಿಷತ್, ಬಜರಂಗದಳ ಮೊದಲಾದವರು.

ಜೀವನ ವಿಧಾನದ ಬಗ್ಗೆ ಹೇಳಿದ್ದೀರಿ ಮತವು ಜೀವನ ವಿಧಾನವೂ ಹೌದು. ಜೀವನ ವಿಧಾನ ಮತದ ಹೊರತಾಗಿ ಇರಬಹುದು. ಆದರೆ ಸರ್ವೋಚ್ಚನ್ಯಾ ಯಾಲಯಕ್ಕೆ ಬಾಬರಿ ಮಸೀದಿಯನ್ನು ಕರಸೇವಕರಿಂದ ರಕ್ಷಿಸುತ್ತೇನೆಂದು ಭರವಸೆ ಕೊಟ್ಟ ಭಾ.ಜ.ಪ. ರಾಜ್ಯ ಸರಕಾರವೇ ಮಸೀದೆ ಉರುಳಿಸಲು ಅವಕಾಶ ಮಾಡಿಕೊಟ್ಟಿದ್ದು ಮೋಸವಲ್ಲವೇ? ಗುಜರಾತ್‌ದಲ್ಲಿ ಹಾಗೇ ನಡೆಯುತ್ತದೆ ತಾನೆ? ಅಂದ ಮೇಲೆ 'ಹಿಂದುತ್ವ' ಎನ್ನುವುದು ಒಂದು ಮೋಸದ ಕಾರ್ಯಕ್ರಮ ವಿಧಾನ ಕೂಡ ಆಗಿರಬಹುದಲ್ಲವೆ?

'ಹಿಂದೂ ಒಂದು ಜೀವನ ವಿಧಾನ' ಎಂದು ತೀರ್ಪಿತ್ತ ಸರ್ವೋಚ್ಚ ನ್ಯಾಯಾಲಯ ಸೆಕ್ಯುಲರಿಸಂ ಬಗ್ಗೆ ತೀರ್ಪಿತ್ತಿದೆ. ಕೇರಳ ಸರ್ಕಾರದ ಕೇಶವಾನಂದ ಭಾರತಿ ವಿರುದ್ಧದ ಮೊಕದ್ದಮೆಯಲ್ಲಿ ಹದಿಮೂರು ಜನ ನ್ಯಾಯಾಧೀಶರನ್ನೊಳ ಗೊಂಡ ಸರ್ವೋಚ್ಚ ನ್ಯಾಯಾಲಯದ ನ್ಯಾಯಪೀಠ "ಭಾರತದ ಸಂವಿಧಾನದಲ್ಲಿ ಸೆಕ್ಯುಲರಿಸಂ ಹಾಸುಹೊಕ್ಕಾಗಿ ಅಂತರ್ಗತವಾಗಿರುವ ಮೂಲ ರಚನೆ ಮತ್ತು ಅತ್ಯಂತ ಪವಿತ್ರವಾದುದು" ಎಂದು ಹೇಳಿದೆ. ಅಂದ ಮೇಲೆ ಸೆಕ್ಯುಲರಿಸಂ ಕೂಡ ಒಂದು ಜೀವನ ವಿಧಾನವೇ ಆಗಲಾರದೇ? ಸರ್ವಧರ್ಮಸಮಭಾವ ನಮ್ಮಲ್ಲಿ ಮೊದಲು ಇತ್ತು ಎನ್ನುವ ನೀವು ಅದು ನಮ್ಮ ಸಂಸ್ಕೃತಿಯ ವಿಧಾನ ಎಂದುತಿಳಿದೂ ಅದನ್ನೇ ಈಗಲೂ ಯಾಕೆ ವಿಸ್ತರಿಸುವುದಿಲ್ಲ?

ಮಂಡನೆ: ಈ ಇವರಿಗೆ (ಎಡಪಂಥೀಯರಿಗೆ) ಧರ್ಮ ಮತ್ತು ಮತಗಳಲ್ಲಿ ಅಂತರವನೇ ತಿಳಿದಿಲ್ಲ. 'ಮತ' ಧರ್ಮವಲ್ಲ. 'ಮತ' ಎಂದರೆ ಪೂಜಾವಿಧಾನ. ದೇವರನ್ನು ತಲುಪುವ ಮಾರ್ಗ. ಕ್ರೈಸ್ತ, ಇಸ್ಲಾಂ, ಬೌದ್ಧ, ಜೈನ, ವೀರಶೈವ ಇವೆಲ್ಲ ಮತಗಳು. ಧರ್ಮದ ಹತ್ತು ಲಕ್ಷಣವನ್ನು ಮನುಸ್ಮೃತಿ ಕೊಡುವುದು ಹೀಗೆ "ಧೃತಿ (ಧೈರ್ಯ ಅಥವಾ ಸ್ಥಿರತೆ), ಕ್ಷಮೆ (ಮನಸ್ಸಿನ ಉದಾರತೆ), ದಮೆ (ಕ್ಲೇಶವನ್ನು ಸಹಿಸುವ ಶಕ್ತಿ), ಅಸ್ತೇಯ (ಬೇರೆಯವರ ವಸ್ತುವಿಗೆ

ಕೈಹಾಕದಿರುವುದು), ಶೌಚ (ಆಹಾರ ಇತ್ಯಾದಿ ಸ್ವಚ್ಛತೆ), ಇಂದ್ರಿಯನಿಗ್ರಹ (ಪಂಚೇಂದ್ರಿಯಗಳ ಮತ್ತು ಮನಸ್ಸಿನ ಸಂಯಮ), ಧೀ(ವಿವೇಕ), ವಿದ್ಯೆ (ಬಿಡುಗಡೆ ಮುಕ್ತಿ ಯನ್ನುಗಳಿಸಿ ಕೊಡುವ ಜ್ಞಾನ), ಸತ್ಯ ಮತ್ತು ಅಕ್ರೋಧ"

ಶಂಕರ ದಯಾಳು ಶರ್ಮ ನಿಮಗೆ ಗೊತ್ತು ಗಾಂಧಿವಾದಿಗಳು, ಸೆಕ್ಯುಲರಿಸಂನ್ನೇ ಅನುಸರಿಸಿದವರು. ಅವರು ೧೯೯೩ರ ಸೆಪ್ಟೆಂಬರ್ ೨೫ರಂದು ಬೆಂಗಳೂರಿನ ನೇಶನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿಯ ಘಟಿಕೋತ್ಸವದಲ್ಲಿ ಮಾಡಿದ ಭಾಷಣದ ಶೀರ್ಷಿಕೆ ಧರ್ಮೋ ರಕ್ಷತಿ, ರಕ್ಷಿತಃ ವಿಶ್ವವಿದ್ಯಾಲಯದ ಘೋಷಣ ವಾಕ್ಯ ಕೂಡ ಅದೇ. ಡಾ. ಶಿವರಾಮ ಕಾರಂತರು ಹೇಳಿದ್ದ 'ಆಯಾ ಸನ್ನಿವೇಶದಲ್ಲಿ ಮನುಷ್ಯ ತೋರುವ ಆದರ್ಶ ನಡವಳಿಕೆಯೇ ಧರ್ಮ' ಮತವಲ್ಲ.

ಇದು ೮-೧೦-ಸಾವಿರ ವರ್ಷದಿಂದ ನಡೆದುಬಂದ ವೇದ ಸಂಸ್ಕೃತಿ. ಅವಿಚ್ಛಿನ್ನವಾದುದು. ಸಂಸ್ಕೃತಿ ಎಂದರೆ ಧರ್ಮದ ಅತ್ಯಂತ ಸಮೀಪದ ಅರ್ಥ. ಈ ಬುದ್ಧಿ ಜೀವಿಗಳು ಮೂಲವನ್ನು, ಸಂಸ್ಕೃತವನ್ನು ಅರಿತಿದ್ದಾರೆಯೇ? ನಿಮ್ಮದೂ ಸ್ವಂತ ಅಧ್ಯಯನ ಅಲ್ಲ. ನೀವೆಲ್ಲ ಮಾಡುವುದು ಮಾರ್ಕ್ಸ್‌ವಾದಿ ದೃಷ್ಟಿಯಿಂದ. ಅದು ನಮ್ಮ ಸಂಸ್ಕೃತಿ ಅಲ್ಲ.

ಉತ್ತರ: ಮತ ಮತ್ತು ಧರ್ಮಗಳ ಮಧ್ಯೆ ವ್ಯತ್ಯಾಸದ ಕೂದಲೆಳೆ ಸೀಳುವ ಕೆಲಸ ಇಲ್ಲಿ ಪ್ರಸ್ತುತವಲ್ಲ ಎಂದು ಗ್ರಹಿಸಿ ನಾನು ಅದನ್ನು ವಿಸ್ತರಿಸಿರಲಿಲ್ಲ. ಯಾಕೆಂದರೆ 'ಸೆಕ್ಯುಲರಿಸಂ' ಎನ್ನುವುದು ಪ್ರಸ್ತುತವಾಗುವುದು ಮತಧರ್ಮಗಳ ಸಹಬಾಳ್ವೆಯಲ್ಲೇ. ಆದರೆ ನೀವು ಅದನ್ನು ವಿಸ್ತರಿಸಿದ್ದೀರಿ. ನಾನಾಗಲಿ, ಬೇರೆ ಧರ್ಮನಿರ ಪೇಕ್ಷವಾದಿಗಳಾಗಲಿ ನೀವು ಕೊಟ್ಟ ಧರ್ಮದ ವ್ಯಾಖ್ಯಾಯನ್ನು ಖಂಡಿಸುವುದಿಲ್ಲ. ದೀನದಯಾಳು ಶರ್ಮ ಅವರ ಭಾಷಣದಲ್ಲಿ ಹೇಳಿದ ಧರ್ಮೋರಕ್ಷತಿ ರಕ್ಷಿತಃ ಎಂಬುದನ್ನೋ ವಿಶ್ವವಿದ್ಯಾಲಯದ ಘೋಷವಾಕ್ಯವನ್ನಾಗಲಿ ನಾನು ನಿರಾಕರಿಸುತ್ತಿಲ್ಲ. ಯಾಕೆಂದರೆ ಅದು ನಾವು ಒಳ್ಳೆತನವನ್ನು ರಕ್ಷಿಸಿದರೆ ಒಳ್ಳೆತನ ನಮ್ಮನ್ನು ರಕ್ಷಿಸುತ್ತದೆ. ಎಂಬಂತೆ. ಡಾ. ಶಿವರಾಮಕಾರಂತರ ವ್ಯಾಖ್ಯಾನವನ್ನೂ ಸಹ ಧರ್ಮದ ಅಂದರೆ ಇಲ್ಲಿ ಕರ್ತವ್ಯ, ನಡತೆ ಎಂಬಿತ್ಯಾದಿ ಅರ್ಥದಲ್ಲಿದೆ. ಸಂಕೀರ್ಣವಾದ ಬದುಕಿನಲ್ಲಿ ಯಾವುದು, ಯಾರಿಗೆ ಎಲ್ಲಿ, ಯಾಕೆ ಧರ್ಮ ಎಂಬುದನ್ನು ನಿಶ್ಚಯಿಸುವುದು ನಮ್ಮ ಎಲ್ಲಾ ವ್ಯಾಖ್ಯೆಯನ್ನೂ ಮೀರಿಹೋಗಬಹುದು. ಕಾಶ್ಯಪಪರ್ಣಕುಟಿಯವರು ದಿ: ೨೪-೫-೦೨ರ ಸಂಯುಕ್ತ ಕರ್ನಾಟಕ ಪತ್ರಿಕೆಯ ಸಂಚಿಕೆಯಲ್ಲಿ ಪ್ರಕಟಿಸಿದ 'ಧರ್ಮಹಾಗೆಂದರೇನು?' ಎಂಬಲೇಖನದಲ್ಲಿ ಧರ್ಮ ಸೂಕ್ಷ್ಮಗಳನ್ನು ವಿವೇಚಿಸುತ್ತ 'ವ್ಯಾಸಮಹರ್ಷಿಗಳು ಕೊನೆಗೆ ಧರ್ಮದ ಸಾರವೆಂದರೆ 'ಪರೋಪಕಾರವೇ ಪುಣ್ಯ ಪರಪೀಡನೆಯೇ ಪಾಪ' ಎಂಬ ನಿರ್ಣಯಕ್ಕೆ ಬರುತ್ತಾರೆ' ಎಂದು ಬರೆಯುತ್ತಾರೆ. ಇವು ವಿಶ್ವಾತ್ಮಕ ನಿಯಮಗಳು. ಸೆಕ್ಯುಲರಿಸಂಗೆ ಈ ಮಾತುಗಳು ಬಲವನ್ನೇ ಕೊಡುವಂತಹದು. ಇದು ಎಲ್ಲಾ ಮತಧರ್ಮಗಳ ತಿರುಳುಕೂಡ ಹೌದು. ಇದೇ ರೀತಿ ನೀವು ಆಯ್ದು ಸಂಗ್ರಹಿಸಿಕೊಟ್ಟ ಉದಾತ್ತ ವ್ಯಾಖ್ಯೆಯನ್ನು ಹಿಂದೂ ಜೀವನ ವಿಧಾನ ಎಂದು ಕೊಂಡರೂ ಅದಕ್ಕೆ ಆಚರಣಾತ್ಮಕ ಹಾಗೂ ಸಾಂಸ್ಥಿಕವಾದ (ಮತಧರ್ಮದ) ಆಯಾಮವೊಂದಿದೆ ಎಂಬುದನ್ನು

ಅಲ್ಲಗಳೆಯಲಾಗುವುದಿಲ್ಲ. ಆದ್ದರಿಂದ ಹಿಂದುಗಳು ಮತಬಾಹಿರರಲ್ಲ. ನೀವು ಹೇಳಿದಂತೆ ಮುಸ್ಲಿಂ, ಕ್ರಿಶ್ಚನ, ಇವುಗಳು ಮತಗಳೂ ಹೌದು; ಹಾಗೆಯೇ ತಮ್ಮದೇ ಆದ ಜೀವನ ವಿಧಾನವನ್ನು ನಿರ್ಮಿಸಿಕೊಂಡ ಮತಧರ್ಮವೂ ಹೌದು. ವ್ಯವಹಾರದಲ್ಲಿ ನಾವು ಇವುಗಳನ್ನು 'ಧರ್ಮ' ಎಂದೇ ಕರೆಯುತ್ತೇವೆ. ವೈದಿಕ ಧರ್ಮದಲ್ಲಿ ಮತಪಂಥಗಳಿರುವಂತೆ ಮುಸ್ಲಿಂ, ಕ್ರೈಸ್ತರಲ್ಲಿ ಕೂಡ ಇವೆ. ಅಲ್ಲೂ ಆದರ್ಶಗಳಿವೆ: ಆಧ್ಯಾತ್ಮ ಇದೆ. ನೀವು ಮನುಸ್ಮೃತಿಯಿಂದ ಎತ್ತಿಕೊಟ್ಟ ದಶಗುಣಗಳನ್ನು ಎಲ್ಲಾ ಮತ ಧರ್ಮಗಳೂ ಪ್ರತಿಪಾದಿಸುತ್ತವೆ. ಪ್ರಸ್ತುತ ಪಡಿಸುವ ಶೈಲಿಯಲ್ಲಿ ವ್ಯತ್ಯಾಸ ಇರಬಹುದು. ವೈದಿಕ ಧರ್ಮ ಸಂಸ್ಕೃತದಲ್ಲಿ ಹೇಳುತ್ತದೆ ಅಷ್ಟೇ.

ಇಲ್ಲಿಯ ಒಂದು ವ್ಯಂಗ್ಯವೆಂದರೆ ಇಲ್ಲಿ ಹೇಳಿದ ಯಾವ ಗುಣವೂ 'ಹಿಂದೂತ್ವವನ್ನು' ಪ್ರತಿನಿಧಿಸುವ ಸಂಘಪರಿವಾರದವರಲ್ಲಾಗಲಿ, ಅವರ ರಾಜಕೀಯ ಮುಖವಾಣಿಯಾದ ಭಾ.ಜ.ಪ. ಅವರಲ್ಲಾಗಲಿ ಕಂಡುಬರುವುದಿಲ್ಲ. ಅದಕ್ಕೆ ಸಮೀಪದ ಉದಾಹರಣೆಯೆಂದರೆ ಗುಜರಾತಿನಲ್ಲಿ ನಡೆದ ನಡೆಯುತ್ತಿರುವ ಕೊಲೆ ಪಾತಕ.

ಮಾಜಿ ಸಂಸದ ಜಾಫ್ರಿ ಎನ್ನುವವರನ್ನು ಹಸಿಹಸೀ ಜೀವಂತವಾಗಿ ಬೆಂಕಿಯಲ್ಲಿ ಸುಟ್ಟರು. ಪದೇ ಪದೇ ಆರಕ್ಷಕರಿಗೆ ವಿನಂತಿಸಿಕೊಂಡರೂ ಗುಂಪು ಇಡೀಕೇರಿಯನ್ನು ಸುತ್ತುವರಿದು ವ್ಯವಸ್ಥಿತವಾಗಿ ಮುಗಿಸುವವರೆಗೂ ಆರಕ್ಷಕರು ಅರಕ್ಷಕರಾದರು. ಹೆಂಗಸರು ಮಕ್ಕಳನ್ನು ಮುಸ್ಲಿಮರೆಂದು ಖಾತ್ರಿಪಡಿಸಿಕೊಂಡೇ ಅಮಾನುಷವಾಗಿ ಕೊಂದರು. ಹೆಂಗಸರ ಮೇಲೆ ಅತ್ಯಾಚಾರ ನಡೆಸಿದರು. ಅಂಗಡಿ, ಮನೆ, ಮಸೀದಿಗಳ ಲೂಟಿ ನಡೆಯಿತು. ಒಂದು ಕಾಲದಲ್ಲಿ ದ್ರೌಪದಿಯ ಅಸಹಾಯಕ ಸ್ಥಿತಿಯಲ್ಲಿ ಕೃಷ್ಣ ರಕ್ಷಣೆಕೊಟ್ಟನೆಂದು ನಾವು ನಂಬುತ್ತೇನೆ (ಅದು ಅಸಾಹಯಕರನ್ನು ರಕ್ಷಿಸುವ ಧರ್ಮವಾಗಿ) ಆದರೆ ಇಲ್ಲಿ ಕೇಂದ್ರ ಗೃಹಮಂತ್ರಿಗಳಾದ (ಲಾಲ) ಕೃಷ್ಣ ರಕ್ಷಣೆ ಕೊಟ್ಟಿದ್ದು ದುಶ್ಯಾಸನರಿಗೆ! ಒಂದು ಪ್ರಭುತ್ವವೇ ಕೊಲೆ ಮಾಡಿಸಲು ನಿಂತರೆ ಅದೆಂಥ ರಾಜಧರ್ಮ. ೮೦೦ಕ್ಕಿಂತ ಹೆಚ್ಚು ಕೊಲೆ, ಸಾವಿರಕ್ಕಿಂತ ಹೆಚ್ಚು ನಿರಾಶ್ರಿತರು.

ಈ ಘಟನೆಗೆ ಸಂಬಂಧಿಸಿದ ಶಾಹ ಅಲಂ ಎಂಬ ನಿರಾಶ್ರಿತ ಕೇಂದ್ರದಲ್ಲಿ ಎಂಟುಸಾವಿರ ಜನರಿದ್ದಾರೆ. ಕೇಂದ್ರ ಶುರುವಾಗಿ ಐದು ದಿನಗಳ ನಂತರ ಅಲ್ಲಿಗೆ ಕೊಟ್ಟ ಆಹಾರ ೧,೫೦೦ ಕೆ.ಜಿ. ಇದನ್ನು ನೆನೆದಾಗ ಹಿಟ್ಲರ್ ಕೂಡುದೊಡ್ಡಿಯಲ್ಲಿ ಉಪವಾಸ ಹಾಕಿ ಯೆಹುದಿಗಳನ್ನು ಕೊಲ್ಲಿಸಿದ ನೆನಪು ಬರುತ್ತದೆ. ನ್ಯಾಸಿಸಂ', 'ಫ್ಯಾಸಿಸಂ' ಎನ್ನುವುದು ಹಿಂದುತ್ವದ ಒಳಮುಖ ಎನ್ನುವುದಕ್ಕೆ ಬೇರೆ ಉದಾಹರಣೆ ಬೇಕೇ? ಆರ್.ಎಸ್.ಎಸ್.ನ ಗುರುಗಳಾದ ಗೋಲ್ವಾಲ್ಕರ ಅವರಿಗೆ ಹಿಟ್ಲರ್ ಒಂದು ಆದರ್ಶಕೂಡ ಹೌದು. ಅವರ ಬರಹದಲ್ಲಿ ಇದು ವ್ಯಕ್ತವಾಗಿದೆ.

ಈಗ ಹೇಳಿ, ನೀವು ಪ್ರತಿಪಾದಿಸಿದ ಧರ್ಮದ ದಶಲಕ್ಷಣಗಳಲ್ಲಿಯ ಕ್ಷಮೆ (ಮನಸ್ಸಿನ ಉದಾರತೆ)ದಯೆ (ಕ್ಲೇಶವನ್ನು ಸಹಿಸುವ ಶಕ್ತಿ), ಅಸ್ತೇಯ (ಬೇರೆಯವರ ವಸ್ತುವಿಗೆ ಕೈ ಇಡದಿರುವಿಕೆ), ಶೌಚ (ಮನಸ್ಸಿನ, ದೇಹದ ಸ್ವಚ್ಛತೆ) ಈ ಯಾವ ಧಾರ್ಮಿಕ ಗುಣ ನೀವು **ಪ್ರತಿಪಾದಿಸುವ ಹಿಂದುತ್ವದಲ್ಲಿದೆ?** 'ಧೃತಿ' ಒಂದು ಇದ್ದಂತಿದೆ. ಆದರೆ ಅದು ಈ ಮೇಲಿನ ಗುಣಗಳನ್ನು ಪಡೆಯುವುದರಲ್ಲಿ ಅಲ್ಲ: ಅದು ಮಹಾತ್ಮಾ ಗಾಂಧಿಯನ್ನು ಕೊಂದ 'ಗೋಡ್ಸೆ

ಧೃತಿ' ಅಲ್ಲಿಯ ಗೋಡ್ಸೆ ಗಾಂಧಿಯನ್ನು ಒಂದೇ ಸಲ ಕೊಂದ. ಗುಂಡು ತಾಗಿದಾಗ ಮಹಾತ್ಮಾ 'ರಾಮ, ರಾಮ ಎಂದರು. ದೇಹವೇ ದೇಗುಲ ಆದ ಪರಿ ಅದು; ಆದರೆ ರಾಮದೇಗುಲಕ್ಕಾಗಿ ಹಿಂದುತ್ವವಾದಿಗಳಾದ ನೀವು ಕೊಲ್ಲುವ ಜನರೆಷ್ಟು?'

ಈ ಎಲ್ಲದರ ಹಿನ್ನೆಲೆಯಲ್ಲಿ ಗುಜರಾತಿನ ಘಟನೆಗಳನ್ನು ದೌರ್ಜನ್ಯಗಳನ್ನು ಬಯಲುಗೊಳಿಸಿದ ಮಾಧ್ಯಮದವರನ್ನೇ ದೂಷಿಸಲಾಗುತ್ತದೆ. ಆದರೆ ಈ ಮಾಧ್ಯಮದವರೆಲ್ಲ ಮುಸ್ಲಿಮರಲ್ಲ, ಎಡಪಂಥೀಯರಲ್ಲ, ದೇಶದ್ರೋಹಗಳಲ್ಲ, ಅಧರ್ಮೀಯರೂ ಅಲ್ಲ. ಆದರೂ ಅವರು ಸತ್ಯದ ಪರವಾದ 'ಹಿಂದುತ್ವ'ದ ಅಮಾನವೀಯತೆಯನ್ನು ಬೈಲಿಗೆಳೆಯುವಲ್ಲಿ ಮತ್ತು ಮಾನವೀಯತೆಯನ್ನು ಪ್ರದರ್ಶಿಸುವಲ್ಲಿ 'ಧೃತಿವಂತ' ರಾಗಿರುವುದು ಈ ದೇಶದ ಪ್ರಜಾಪ್ರಭುತ್ವದ ಸೌಭಾಗ್ಯ.

ಧರ್ಮದ ವ್ಯಾಖ್ಯಾನವನ್ನು ಮಾಡಲು ಮುದ್ದಾಮಾಗಿ 'ಮನುಸ್ಮೃತಿ'ಯನ್ನೇ ಆರಿಸಿಕೊಂಡಿದ್ದೀರಿ. ಯಾಕೆಂದರೆ ಸಂಘ ಪರಿವಾರದವರು ಪ್ರತಿ ಪಾದಿಸುವ ಹಿಂದೂ ರಾಷ್ಟ್ರದಲ್ಲಿ ಮನುಸ್ಮೃತಿಯೇ ಪಂಚಾಂಗ ಮತ್ತು ಸಂವಿಧಾನ. ಆದ್ದರಿಂದಲೇ ಪ್ರಜಾಪ್ರಭುತ್ವಕ್ಕೆ ಅಗತ್ಯವಾದ ಸಮಾನತೆ ಮತ್ತು ಸೆಕ್ಯುಲರಿಸಂನ್ನು ಪ್ರತಿಪಾದಿಸುವ ಈಗಿನ ಸಂವಿಧಾನವನ್ನು ಬದಲಿಸಬೇಕು ಎನ್ನುತ್ತದೆ ಭಾ.ಜ.ಪ.

ಆದ್ದರಿಂದ ಮನುಸ್ಮೃತಿ ಇಂಥ ಉದಾತ್ತತೆಯಿಂದ ಕೂಡಿದೆ ಎಂದು ಜನರಲ್ಲಿ ಬಿಂಬಿಸಿ ಅದರ ಪರವಾದ ಒಪ್ಪಿಗೆಯನ್ನು ಕೆಳಜಾತಿಗಳಿಂದ ಪಡೆಯಬೇಕು. ಇಂಥ ಉದಾತ್ತ ಮನುಸ್ಮೃತಿಯನ್ನು ಅಂಬೇಡ್ಕರ ಸಾರ್ವಜನಿಕವಾಗಿ ಸುಟ್ಟುಬಿಟ್ಟರಲ್ಲ ಎಂಬ ವಿರೋಧ ಭಾವವನ್ನು ಮೇಲುಜಾತಿಗಳಲ್ಲೂ, ಛೇ ಇಂಥ ಮಹಾಗ್ರಂಥವನ್ನು ಸುಡುವುದೆ? ಎಂಬ ಪಶ್ಚಾತ್ತಾಪವನ್ನು ದಲಿತ ಮತ್ತು ಕೆಳಜಾತಿಗಳಲ್ಲೂ ಉಂಟು ಮಾಡುವ ಹುನ್ನಾರು ಈ ಉದ್ಧರಣೆಯಲ್ಲಿದೆ. ಹಾಗಾದರೆ ಮನುಸ್ಮೃತಿ ಇಷ್ಟು ಉದಾತ್ತವೇ?

ಬ್ರಾಹ್ಮಣ ಸ್ಮೃತಿಗಳನ್ನೆಲ್ಲ (ಶಾಸ್ತ್ರಗಳನ್ನೆಲ್ಲ) ಪರಿಶೀಲಿಸಿದ ಡಾ. ಅಂಬೇಡ್ಕರ ತಲುಪುವ ನಿರ್ಣಯ ಇದು. ೧. ಸಾಮಾಜಿಕ ಶ್ರೇಣೀಕರಣದಲ್ಲಿ ಶೂದ್ರರ ಸ್ಥಾನ ಕೊನೆಯದು.

೨. ಶೂದ್ರ ಅಶುದ್ಧನಾದುದರಿಂದ ಯಾವುದೇ ಪವಿತ್ರ ಕಾರ್ಯವನ್ನು ಅವರಿಗೆ ಕಾಣುವ ಹಾಗೆ ಅಥವಾ ಕೇಳುವ ಹಾಗೆ ನಡೆಸಬಾರದು.

೩. ಶೂದ್ರರನ್ನು ಉಳಿದ ವರ್ಣ (ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ)ದವರ ಹಾಗೆ ಗೌರವದಿಂದ ಕಾಣಬಾರದು.

೪. ಶೂದ್ರರ ಜೀವನಕ್ಕೆ ಕಿಮ್ಮತ್ತಿಲ್ಲ. ಅವರನ್ನು ಯಾರಾದರೂ ಕೊಲ್ಲಬಹುದು. ಅದಕ್ಕೆ ಪರಿಹಾರ ಕೊಡಬೇಕಾದುದಿಲ್ಲ. ಒಂದು ವೇಳೆ ಕೊಡುವುದಿದ್ದರೆ ಬ್ರಾಹ್ಮಣ ಕ್ಷತ್ರಿಯ ಮತ್ತು ವೈಶ್ಯರಿಗೆ ಕೊಡುವುದಕ್ಕೆ ಹೋಲಿಸಿದರೆ ಕಿಂಚಿತ್ ಕೊಡಲಿ, ಸಾಕು.

೫. ಶೂದ್ರರು ಜ್ಞಾನವನ್ನು ಗಳಿಸಲೇ ಕೂಡದು. ಹಾಗೆ ಮಾಡಿದರೆ ಅದೊಂದು ಪಾಪ. ಅವರಿಗೆ ವಿದ್ಯೆಯನ್ನು ಕೊಡುವುದು ಒಂದು ಕೊಲೆಪಾತಕದಂತೆಯೇ.

೬. ಶೂದ್ರರು ಸಂಪತ್ತನ್ನು ಗಳಿಸಕೂಡದು, ಮತ್ತು ಬ್ರಾಹ್ಮಣರು ಅವರ ಸಂಪತ್ತನ್ನು ಬೇಕಾದಂತೆ ಬೇಕಾದಾಗ ತೆಗೆದುಕೊಳ್ಳಬಹುದು.

೭. ಶೂದ್ರರು ರಾಜಾಧಿಕಾರದ ನೌಕರಿಯನ್ನು ಹೊಂದಕೂಡದು.

೮. ಶೂದ್ರರ ಕರ್ತವ್ಯವೆಂದರೆ ಮೇಲಿನ ವರ್ಣಗಳ ಸೇವೆ ಮಾಡುವುದು ಮಾತ್ರ.

೯. ಮೇಲ್ಜಾತಿಯ ಜನ ಶೂದ್ರರೊಳಗೆ ಮದುವೆ ಸಂಬಂಧ ಬೆಳೆಸಕೂಡದು. ಆದರೆ ಅವರು ಕೆಳಜಾತಿಯ ಮಹಿಳೆಯರನ್ನು ಇಟ್ಟುಕೊಳ್ಳಬಹುದು. ಒಂದು ವೇಳೆ ಶೂದ್ರ ಗಂಡಸು ಮೇಲ್ಜಾತಿಯ ಹೆಂಗಸರನ್ನು ಮುಟ್ಟಿದರೆ ಕಠಿಣವಾದ ಶಿಕ್ಷೆಗೆ ಗುರಿಪಡಿಸಬೇಕು ಮತ್ತು

೧೦. ಶೂದ್ರರು ಯಾವಾಗಲೂ ದಾಸ್ಯದಲ್ಲೇ ಇರಬೇಕು.

ಹೇಗಿದೆ ಧರ್ಮದ ದಶಗುಣ? ಸೆಕ್ಯುಲರಿಸಂ ಬಗ್ಗೆ ಮಾತಾಡುವವರ ವಿಚಾರ ಮಾರ್ಕ್ಸ್, ಮೆಕಾಲೆಯವರಿಂದ ಬಂದುದು ಎಂದು ಹೇಳುತ್ತ ನಮಗೆ ತ್ಯಾಜ್ಯಾ ಎನ್ನುವಂತೆ ಮಾತಾಡುತ್ತೀರಿ! ಅದೇ ಹೊತ್ತಿಗೆ ಹಿಂದೂ ಪರಂಪರೆ ಅವಿಚ್ಛಿನ್ನ ಎನ್ನುತ್ತೀರಿ. ಅವಿಚ್ಛಿನ್ನ ಹೌದಾದರೆ ಆ ಪರಂಪರೆಯಲ್ಲೇ ಬಂದಿರುವ ಧಾರ್ಮಿಕ ಉದಾರತೆಯ ಪರಂಪರೆಯನ್ನು ಯಾಕೆ ವಿಚ್ಛಿನ್ನ ಗೊಳಿಸುತ್ತೀರಿ? ಆ ಧಾರ್ಮಿಕ ಉದಾರತೆಯನ್ನೇ ಮುಂದುವರಿಸಬಾರದೆ?

ಖರೆ ಎಂದರೆ ಪರಂಪರೆ, ಸಂಸ್ಕೃತಿ ಎನ್ನುವುದೆಲ್ಲ ನಿಶ್ಚಲವಲ್ಲ. ಅದು ಕಳೆದುಕೊಳ್ಳುತ್ತ ಕೂಡಿಕೊಳ್ಳುವತ್ತ ಮುಂದುವರಿಯುತ್ತದೆ. ಹಿಂದಿನದರಲ್ಲಿಯ ಉತ್ತಮ ಅಂಶವನ್ನು ಉಳಿಸಿ ಕೊಳ್ಳುತ್ತ, ಹೊಸ ಉತ್ತಮ ಅಂಶವನ್ನು ಕಟ್ಟಿಕೊಳ್ಳುತ್ತ ವರ್ತಮಾನವನ್ನು ನಿರ್ಮಿಸಿ ಕೊಳ್ಳಬೇಕು. ಅದೆಲ್ಲ ಅವಿಚ್ಛಿನ್ನ ಅಲ್ಲ ಎನ್ನಲು ಎಷ್ಟೋ ಉದಾಹರಣೆಗಳನ್ನು ಕೊಡಬಹುದು. ವೇದಕಾಲದಲ್ಲಿ ಬ್ರಾಹ್ಮಣರು ಮಾಡುವ ಯಜ್ಞಯಾಗಾದಿಗಳು ಈಗ ಇಲ್ಲ. ಇಂದು ಚಾತುರ್ವರ್ಣವನ್ನು ಆಗಿನ ಬಿಗಿಯಲ್ಲಿ ಆಚರಿಸುವುದಿಲ್ಲ. ಇಂದಿನ ಶೂದ್ರರು ಕೂಡ ಎಲ್ಲರೂ ದಾಸರಾಗಿಲ್ಲ. (ಸ್ಮೃತಿಯ ನಿದೇಶನದಂತೆ ಇಲ್ಲ). ಕ್ಷತ್ರಿಯ ಎನ್ನುವ ವರ್ಣ ಈಗ ಇಲ್ಲ. ವೈದಿಕಧರ್ಮವನ್ನು ಜೈನ, ಬೌದ್ಧ ಇತ್ಯಾದಿಗಳು ಛಿದ್ರಗೊಳಿಸಿವೆ. ಬ್ರಾಹ್ಮಣರನ್ನೇ ಅಸ್ಪೃಶ್ಯರನ್ನಾಗಿ ಸಾರಿದ 'ಮಹಿಮಾ' ಧರ್ಮ ನಮ್ಮಲ್ಲಿದೆ. ಕಾಲಕ್ರಮದಲ್ಲಿ ಮುಸ್ಲಿಂ ಮತ್ತು ಕ್ರಿಶ್ಚನ್ ಧರ್ಮ ನಮ್ಮಲ್ಲಿ ಸೇರಿ ಬೆಳೆದಿವೆ. ಆದ್ದರಿಂದಲೇ ನಮಗೆ ಈಗ 'ಸೆಕ್ಯುಲರಿಸಂ' ಬೇಕು. ಮತಧರ್ಮ, ಭಾಷೆ, ಅಸ್ಪೃಶ್ಯತೆ, ಮಹಿಳೆ ಎಂಬ ಕಾರಣಗಳು ಉಂಟು ಮಾಡಿರುವ ಅಲ್ಪಸಂಖ್ಯಾತ ಮತ್ತು ದುರ್ಬಲ ಗುಂಪುಗಳ ಸಬಲೀಕರಣಕ್ಕಾಗಿ; ಅಂದರೆ ಸಮಾಜದ ಅಂಚಿನಲ್ಲಿರುವವರಿಗೂ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಲಭ್ಯವಾಗಬೇಕಾದ ಸಮಾನತೆಯನ್ನು ಸಾಧಿಸಿಕೊಡುವ ನಿಟ್ಟಿನಲ್ಲಿ ವಿಶೇಷ ಗಮನ ಕೊಡಲು 'ಸೆಕ್ಯುಲರಿಸಂ' ಎಂಬ ಪರಿಕಲ್ಪನೆಯ ಅವಶ್ಯಕತೆಯಿದೆ. ಇದು ಐವತ್ತು ವರ್ಷಗಳ ಈಚಿನದು ಎಂದ ಮಾತ್ರಕ್ಕೆ ತ್ಯಾಜ್ಯವಲ್ಲ. ಇದರಲ್ಲೇ ಹಿಂದೂ ಉದಾರತೆಯು ಮುಂದುವರಿಕೆಯೂ ಇದೆಯಾದ್ದರಿಂದ ಅದನ್ನು ಹಿಂದುತ್ವವಾದಿಗಳು ಯಾಕೆ ವಿರೋಧಿಸ ಬೇಕು? ಅದೂ ನಮ್ಮ ಸಂಸ್ಕೃತಿಯ ನೆಲೆಯೇ ಅಲ್ಲವೇ? 'ವೈದಿಕ' ಎಂಬುದೇ ಭಾರತದ ಏಕಮಾತ್ರ ಸಂಸ್ಕೃತಿ,

ಅದೇ ಹಿಂದೂ ಸಂಸ್ಕೃತಿ ಎಂದು ಕರೆಯಬೇಕೇಕೆ? ವೈದಿಕವೆಂಬ ಒಂದು ಚಿಕ್ಕ ಗುಂಪಿನ ಸಂಸ್ಕೃತಿಯನ್ನೇ ಭಾರತದ ಏಕಶಿಲಾಕೃತಿಯ ಸಂಸ್ಕೃತಿಯನ್ನಾಗಿ ವೈಭವೀಕರಿಸುವ ಅವಶ್ಯಕತೆಯೇನು? ಭಾರತೀಯ ಸಂಸ್ಕೃತಿ ಅಥವಾ 'ಹಿಂದೂಯಿಸಂ' ಎನ್ನುವುದು ವೈದಿಕ ಮಾತ್ರವಲ್ಲ. ಭಾರತ ಹಲವು ಮತಧರ್ಮ ಮತ್ತು ಸಂಸ್ಕೃತಿಗಳ ಬೀಡು. ಸಮಾನತೆ ಅವೆಲ್ಲಕ್ಕೂ ಸಲ್ಲಬೇಕಾದ ನ್ಯಾಯ. ಅದು ಪ್ರಜಾ ಪ್ರಭುತ್ವದಲ್ಲಿಯ ಅವಶ್ಯಕತೆ. ಹೀಗೆ ಬಹು ಸಂಸ್ಕೃತಿಗಳನ್ನು ಗುರುತಿಸುವ, ಅದಕ್ಕೆ ಸಮಾನತೆಯನ್ನು ಕಲ್ಪಿಸಿಕೊಡುವ ಮತ್ತು ಗೌರವಿಸುವ ನಿಟ್ಟಿನಲ್ಲಿ ನಾವು ನಡೆಯಬೇಕಾಗಿದೆ. 'ಸೆಕ್ಯುಲರಿಸಂ' ಅದರ ಒಂದು ಅವಿನಾಭಾವವಾದ ಅಂಶವಾಗಿದೆ. ಇದನ್ನು ಪ್ರತಿಪಾದಿಸುವವರಲ್ಲಿ ಮಾರ್ಕ್ಸ್‌ವಾದಿಗಳು ಇದ್ದಾರೆ. ಆದರೆ ಇದನ್ನು ಪ್ರತಿಪಾದಿಸುವವರೆಲ್ಲ ಮಾರ್ಕ್ಸ್‌ವಾದಿ ಗಳಲ್ಲ. ಇವರುಗಳಲ್ಲಿ ಅಂಬೇಡ್ಕರವಾದಿಗಳು, ಲೋಹಿಯಾವಾದಿಗಳು, ಸರ್ವೋದಯ ವಾದಿಗಳು ಗಾಂಧೀವಾದಿಗಳು ಗುರುನಾರಾಯಣವಾದಿಗಳು ಇರಬಹುದು. ಇದಾವುದೂ ಇಲ್ಲದೆ ತನ್ನದೆ ಆದ ಧರ್ಮ, ನಂಬಿಕೆಯ ನೆಲೆಯಲ್ಲಿ ನಡೆಯುತ್ತಿರುವವ-ರಿರಬಹುದು. ಬ್ರಾಹ್ಮಣ ಶೂದ್ರರೆನ್ನದೇ ಮನುಷ್ಯತ್ವದಲ್ಲಿ ನಂಬಿಗೆ ಇಟ್ಟವರೆಲ್ಲ ಇದ್ದಾರೆ. ಕೇವಲ ಮಾರ್ಕ್ಸ್, ಮೆಕಾಲೆ ಸುದ್ದಿ ಹೇಳುವುದು ಈ ಮಹಾಜನತೆಗೆ ಅಪಮಾನ ಮಾಡಿದಂತೆ.

ಹಿಂದೂ ಎನ್ನುವುದು ಒಂದು ದೇಶವಾಚಕ. ಹಿಂದೂಸ್ತಾನದಲ್ಲಿ ಮುಸ್ಲಿಂ ಒಳಗೊಂಡ ಅನೇಕ ಮತಧರ್ಮ ಮತ್ತು ಸಂಸ್ಕೃತಿಗಳಿವೆ. ಹಜ್‌ಯಾತ್ರೆಗೆ ಹೋದ ಇಲ್ಲಿಯ ಮುಸ್ಲಿಂರನ್ನು ಹಿಂದೂಸ್ತಾನಿ ಅಥವಾ ಹಿಂದೂ ಮುಸ್ಲಿಮರೆಂದು ಕರೆಯುತ್ತಾರೆಂದು ನೀವೇಹೇಳುತ್ತೀರಿ. ಆದ್ದರಿಂದ ಇದು ಅವಶ್ಯಕವಾಗಿ ಧರ್ಮಸೂಚಕ ಆಗಬೇಕಾದುದಲ್ಲ. 'ಹಿಂದೂ' ಎಂಬುದನ್ನು ಹಿಂದುತ್ವವಾದಿಗಳು ನಿಖರವಾಗಿ 'ವೈದಿಕಧರ್ಮ' ಸೂಚಕವನ್ನಾಗಿ ಮಾಡಲು ಉದ್ಯುಕ್ತರಾದ್ದರಿಂದ ಆ ಏಕಶಿಲ್ಪದಿಂದ ಬಿಡುಗಡೆಗೊಳಿಸಲೆಂದೇ ಅದನ್ನು ಇಂಡಿಯಾ ಅಥವಾ ಭಾರತ ಎಂದು ಕರೆಯಲಾಗುತ್ತದೆ. ಇಂಡೂಸ್, ಇಂಡಿಯಾ ಎನ್ನುವುದು ಕೂಡ ಸಿಂಧುನದಿಯ ಈಚಿಗಿನ ದೇಶ ಎಂಬ ಸ್ಥಳವಾಚಕವೇ. 'ವೈದಿಕ ಸಾಹಿತ್ಯದಲ್ಲಿ ಈಚಿನವರೆಗೂ ಹಿಂದೂ, ಹಿಂದೂಧರ್ಮ ಎಂಬ ಪದವೇ ಇಲ್ಲ' ಎಂದು ಅನೇಕ ವಿದ್ವಾಂಸರು ಹೇಳುತ್ತಾರೆ. 'ಏನಿದ್ದರೂ ಅದು ನಮ್ಮ ವಸಾಹತುಶಾಹಿ ಸಂದರ್ಭದ ೧೯ನೇ ಶತಮಾನದಲ್ಲಿ ಚಾಲ್ತಿಗೆ ಬಂದುದು. ಅಷ್ಟಾಗಿಯೂ ಅದೇನು ಏಕರೂಪಿ ಜನಾಂಗ-ಸಂಸ್ಕೃತಿಯನ್ನು ಒಳಗೊಂಡದಾಗಿರಲಿಲ್ಲ. ಇದರಲ್ಲಿ ಅನೇಕ ಭಾಷೆ, ಪ್ರದೇಶ, ಸಂಸ್ಕೃತಿ, ಬುಡಕಟ್ಟುಗಳನ್ನೆಲ್ಲ ಒಂದು ಕಡೆ ತಂದು ಬ್ರಿಟಿಷ್ ವಸಾಹತುಶಾಹಿ ವಿರುದ್ಧ ನಿಲ್ಲಿಸುವ ಭಾವನೆ ಕೂಡ ಇದ್ದಿರಬಹುದು. ಆದರೆ ಈಗ ಹಿಂದೂಧರ್ಮ ಎನ್ನುವುದು ಬಳಕೆಗೆ ಬಂದಿದೆ. ಅದಕ್ಕಾಗಿ ನಾವು ಬಯ್ದಾಡಬೇಕಿಲ್ಲ.

ಬಳಸುವವರ ತಲೆಯಲ್ಲಿ ದುರ್ಬೋಧ ಇಲ್ಲದಿದ್ದರೆ ಶಬ್ದ ತನ್ನಿಂದ ತಾನೇ ಭ್ರಷ್ಟವಾಗುವುದಿಲ್ಲ. ಆದರೆ ಮಾರ್ಕ್ಸ್‌ವಾದಿ ಚಿಂತಕರು ಸಂಸ್ಕೃತ ಮೂಲ ಓದಿದವರಲ್ಲ ಎಂದು ಜನರಿಗೆ ಮೋಸ ಮಾಡುವುದಕ್ಕಾಗೇ ಔದ್ಧತ್ಯ ತೋರಬಾರದು. ಎಸ್.ಜಿ. ಸರದೇಸಾಯಿ, ಶ್ರೀ ಪಾದಡಾಂಗೆ, ಭಗವತ್ ಶರಣ ಉಪಾಧ್ಯಾಯ, ನಂಬೂದರಿ ಪಾದ್, ದೇವಿಪ್ರಸಾದ

ಚಟ್ಟೋಪಾಧ್ಯಾಯ, ಸಾಂಕೃತಾಯನ, ಗೌರೀಶಕಾಯ್ಕಿಣಿ, ಭಾಸ್ಕರಮಯ್ಯಾ ಮೊದಲಾದವರು ಸಂಸ್ಕೃತದ ಘನವಿದ್ವಾಂಸರಾಗಿದ್ದರಲ್ಲದೆ ಬ್ರಾಹ್ಮಣರೂ ಆಗಿದ್ದಾರೆ. ಇದೇನೂ ನಿಮಗೆ ತಿಳಿಯದ್ದಲ್ಲ. ಆದರೂ ಅವರು ಎಡಪಂಥೀಯರದ್ದು ಸೆಕೆಂಡ್‌ಹ್ಯಾಂಡ್, ಥರ್ಡ್‌ಹ್ಯಾಂಡ್, ಸಿಕ್ಸ್ ಹ್ಯಾಂಡ್ ನಾಲೇಜ್ ಮೂಲ ಓದಲಾರದವರು ಎಂದು ಹೇಳಿ ಇಂಥವರಿಗೆ ಧರ್ಮದ ಬಗೆಗೆ ಚರ್ಚಿಸಲು ಹೇಗೆ ಅರ್ಹತೆ ಬರುತ್ತದೆ ಎಂದು ಕೇಳುತ್ತೀರಿ. ಇದನ್ನೇನೂ ನೀವು ಬಾಲಿಶವಾಗಿ ಕೇಳಿದ್ದಲ್ಲ. ಅದರ ಹಿಂದೆ ಒಂದು ಕಾರ್ಯಸೂಚಿ ಇದೆ. ಮನುಸ್ಮೃತಿಯಿಂದಲೇ ಸಂವಾದ ಶುರುಮಾಡುವ ಮತ್ತು ಸಂವಾದಿಸುವವರ ಸಂಸ್ಕೃತ ಓದಿನ ಅರ್ಹತೆಯನ್ನು ಪ್ರಸ್ತಾಪಿಸಿ ಮುಗಿಸುವಲ್ಲಿ ಒಂದು ಶಿಲ್ಪಕೃತಿ ಶಿಸ್ತು ಇದೆ. ಆದರೆ ಅದರ ಹಿಂದೆ ಇರುವುದು ಘಾತಕವಾದ ಆಲೋಚನೆ.

ನಮ್ಮಲ್ಲಿಯ ಯಕ್ಷಗಾನದ 'ಭೀಷ್ಮವಿಜಯ'ದಲ್ಲಿ ಬರುವ ಒಂದು ದೃಶ್ಯದಲ್ಲಿ ಒಬ್ಬ ಬೇಡ ನೀನು ಅಂಬೆಯನ್ನು ಸ್ವಯಂವರ ಮಂಟಪದಿಂದ ತಂದುದು, ಈಗ ತಮ್ಮನಿಗೆ ಮದುವೆಯಾಗೆಂದು ಹೇಳುವುದು ನ್ಯಾಯವೇ ಎಂದು ಭೀಷ್ಮನನ್ನು ಕೇಳುತ್ತಾನೆ. ಆಗ ಭೀಷ್ಮ 'ಕೇವಲ ಬೇಡ (ಶೂದ್ರ) ನಾದ ನಿನಗೆ ನನ್ನೊಡನೆ ಚರ್ಚಿಸಲು ಅರ್ಹತೆಯಲ್ಲಿದೆ?' ಎಂದು ಕೇಳಿಬಿಡುತ್ತಾನೆ.

ಇದೇನೂ ಪ್ರಾಚೀನ ಸಂಗತಿಯಲ್ಲ. ನಮ್ಮ ಪ್ರಸಂಗಕರ್ತರು ಅದನ್ನೆಲ್ಲ ವಿಚಾರಿಸುವವರೂ ಅಲ್ಲ. ಅಂದರೆ ಉದ್ದೇಶಪೂರಕವಲ್ಲದಿದ್ದರೂ, ಅದು ಹಳೇಬೇರಿನ ಹೊಸ ಚಿಗುರೇ ಆಗಿದೆ. ಪಾಂಡವರ ಮುಂದೆ ವೀರಶ್ರೀಯನ್ನು ಮೆರಯುತ್ತಿದ್ದ ಕರ್ಣನನ್ನು ಮುಗಿಸಿದ್ದು ಇದೇ ಬೇರು. ತಾನು ಉನ್ನತಗತಿ ಪಡೆಯಬೇಕೆಂದು ಶೂದ್ರಶಂಭೂಕ ತಪಸ್ಸನ್ನಾಚರಿಸಿದರೆ ಅದು ಬ್ರಾಹ್ಮಣರ ಸ್ಥಾನವನ್ನು ಆಕ್ರಮಣ ಮಾಡಿದಂತಾಗಿ ಬ್ರಾಹ್ಮಣ ಶಿಶುವೊಂದು ಸಾಯುತ್ತದೆಂಬ ನೆಪದಲ್ಲಿ ಸ್ವತಃ ಪುರುಷೋತ್ತಮನಾದ, ಪತಿತಪಾವನನೆಂದು ಆರಾಧಿಸಲ್ಪಡುವ ರಾಮನೇ ಹೋಗಿ ಶಂಭೂಕನ ತಲೆ ಕತ್ತರಿಸುತ್ತಾನೆ; ಈ ರೀತಿ ಪತಿತನಾದ ರಾಮನನ್ನು ಮೇಲೆತ್ತಲು ಶೂದ್ರ ಕವಿ ಕುವೆಂಪು ಬರಬೇಕಾಯಿತು. ಈ ಅರ್ಥದಲ್ಲಾದರೆ ನೀವು ಹೇಳುವ ವೈದಿಕ ಸಂಸ್ಕೃತಿ ಅವಿಚ್ಛಿನ್ನವಾಗೇ ಇದೆ.

ನನ್ನದು ಸೆಕೆಂಡ್ ಹ್ಯಾಂಡ್ ಥರ್ಡ್ ಹ್ಯಾಂಡ್ ನಾಲೇಜ್ ಇತ್ಯಾದಿ ಬಳಸಿ ನನ್ನದೆಲ್ಲ ಎರವಲು ತಂದ ವಿಚಾರಗಳೇ, ತಲೆಯಲ್ಲಿ ಮಿದುಳೇ ಇಲ್ಲ ಎಂದೇ ಓದುಗರನ್ನು ನಂಬಿಸಲು ಪ್ರಯತ್ನಿಸುತ್ತೀರಿ. ಆ ಬಗ್ಗೆನಾನು ಆಕ್ಷೇಪಿಸುವುದಿಲ್ಲ. ಮಾರ್ಕ್ಸ್‌ವಾದಿ ವಿಚಾರಗಳ ಆಚೆ ನನ್ನ ವಿಚಾರ ಇಲ್ಲ ಎಂದೂ ಆಕ್ಷೇಪಿಸಿದೀರಿ. ಆದರೆ ನನ್ನ ಓದು ಅಷ್ಟಕ್ಕೇ ಕಟ್ಟು ಬಿದ್ದಂತಹದೇನೂ ಅಲ್ಲ. ಹಾಗಿದ್ದರೂ ಮಾರ್ಕ್ಸ್‌ವಾದ ಎಂಬುದು ಒಂದು ಆಲೋಚನಾಕ್ರಮ. ಅದು ಜಾಗತಿಕವಾದ ಮನ್ನಣೆಯನ್ನು ಪಡೆದಿದೆ. ಅದಕ್ಕೆ ಒಂದು ಲೋಕ ದೃಷ್ಟಿಯಿದೆ. ಅದರ ಹಿಂದೆ ದೀರ್ಘವಾದ ಮಾನವ ಇತಿಹಾಸದ ಹಿನ್ನೆಲೆ, ತರ್ಕಗಳು ಇವೆ. ಅದರ ಲೋಕದೃಷ್ಟಿಯನ್ನು ನೀವು ಒಪ್ಪದಿರಬಹುದು. ಆದರೆ ಹಾಗೆ ಉಫ್ ಎಂದು ಊದಿಬಿಡಲಾಗುವುದಿಲ್ಲ. ಅಂಥ ಅವಗಣನೆ

ಹುಡುಗಾಟಿಕೆಯದಾಗುತ್ತದೆ. ಅಂತೆಯೇ ಆ ದೃಷ್ಟಿಕೋನವನ್ನು ಒಪ್ಪುವುದು ಒಂದು ಅಪರಾಧವೂ ಅಲ್ಲ. ಆದರೆ ಆರೆಸ್ಸೆಸ್ ಪ್ರಣೀತವಾದ ಹಿಂದುತ್ವಕ್ಕೆ ಮಾರ್ಕ್ಸ್ ಮತ್ತು ಕಮ್ಯುನಿಸ್ಟ ಎಂದರೆ ಕಂಸನ ಸ್ವಪ್ನದಲ್ಲಿ ಬರುವ ಕೃಷ್ಣನ ಹಾಗೆ. ಯಾಕೆಂದರೆ ನಖಶಿಖಾಂತ ಅಸಮಾನತೆಯನ್ನು ನೀತಿ ನಿಯಮವನ್ನಾಗಿ ಮಾಡಿಕೊಂಡ 'ಹಿಂದುತ್ವ'ಕ್ಕೆ ವರ್ಗ- ವರ್ಣರಹಿತವಾದ ಸಮಾಜದ ಆದರ್ಶವನ್ನು ಹೊಂದಿ, ಆ ದಿಸೆಯಲ್ಲಿ ಕಾರ್ಯೋನ್ಮುಖರಾಗುವ ಕಮ್ಯುನಿಸ್ಟರು ಪರಮ ವೈರಿಯಾಗುವುದರಲ್ಲಿ ಆಶ್ಚರ್ಯವಿಲ್ಲ.

ಇದರ ಹೊರತಾಗಿಯೂ ಬ್ರಾಹ್ಮಣ ಮಹಿಳೆಯರನ್ನು ಕೂಡ ಶೂದ್ರರಂತೆ ನೋಡಲಾಗಿದೆ. ಇದು ಹಿಂದುತ್ವದ ಭವಿಷ್ಯದ ಸಂವಿಧಾನ. ಹೀಗೆ ಶೂದ್ರರು ಬ್ರಾಹ್ಮಣರ ಸೇವೆ ಮಾಡುತ್ತಲೇ ಸಾಯಬೇಕೆಂಬ ನಿಯಮ ಗುಪ್ತವಾಗಿ ಜಾರಿಯಲ್ಲಿದೆ ಎಂಬುದಕ್ಕೆ ಗೋದ್ರಾದ ಬೆಂಕಿಯಲ್ಲಿ ಬೂದಿಯಾಗಿ ಹೋದ ೫೮ ಮಂದಿಯಲ್ಲಿ ಯಾರೊಬ್ಬರೂ ಬ್ರಾಹ್ಮಣ ಇದ್ದಿರಲಿಲ್ಲ ಎಂಬ ಚಂಪಾ (ಪ್ರೊ. ಚಂದ್ರಶೇಖರ ಪಾಟೀಲ್) ಅವರ ಹೇಳಿಕೆ ಸಾಕ್ಷಿಯಾಗಿದೆ.

'ವೇದದ ಕಾಲ ೮-೧೦ ಸಾವಿರ ವರ್ಷ ಹಿಂದಿನದು. ಅದು ಅವಿಚ್ಛನ್ನವಾಗಿ ನಡೆದು ಬಂದಿದೆ. ಎನ್ನುತ್ತೀರಿ. ಇವೆರಡೂ ಹಸಿಸುಳ್ಳು ಎನ್ನುವುದನ್ನು ತುಸುವೇ ವಿವರಿಸಿದರೂ ಗೊತ್ತಾಗುತ್ತದೆ. ಋುಗ್ವೇದದ ಕಾಲ ಕ್ರಿ.ಶ. ಪೂ. ೧೫೦೦ ರಿಂದ ೧೨೦೦ ಎಂದೂ ತುಸು ಹಿಂದೆಯೂ ಆಗಬಹುದು ಎಂದು ಆ ವಿಷಯದಲ್ಲಿಯ ತಜ್ಞರು ನಿರ್ಣಯಿಸಿದ್ದಾರೆ. ಅದನ್ನು ಹಿಂದಕ್ಕೆ ಒಯ್ದರೂ ೪೦೦೦ ವರ್ಷಕ್ಕಿಂತಲೂ ಹಿಂದೆ ಹೋಗುವುದಿಲ್ಲ. ಏನೇ ಹೇಳಿದರೂ ೮-೧೦ ಸಾವಿರ ವರ್ಷ ಹಿಂದಕ್ಕೆ ಹೋಗುವುದಿಲ್ಲ. ಹಾಗಾದರೆ ಇದು ನಿಮಗೆ ತಿಳಿದಿಲ್ಲವೆನ್ನೋಣವೇ? ತಿಳಿದಿದೆ. ಆದರೂ ಹಾಗೆ ಸುಳ್ಳು ಹೇಳಿ ಆರ್ಯರ (ವೇದದ) ಕಾಲವನ್ನು ಹಿಂದಕ್ಕೆ ಒಯ್ಯುವ ಅವಶ್ಯಕತೆಯಿದೆ. ಹಿಂದಕ್ಕೆ ಎಂದರೆ ಅದು ಸಿಂಧೂ ಸಂಸ್ಕೃತಿಗಿಂತ ಹಿಂದಕ್ಕೆ. ಹಾಗೆ ಮಾಡಿದರೆ ಸಿಂಧೂ ಸಂಸ್ಕೃತಿ ಕೂಡ ಆರ್ಯ ಸಂಸ್ಕೃತಿ ಎಂದೇ ಆಗುತ್ತದೆ. ಹಾಗೆ ನಂಬಿಸಿಬಿಟ್ಟರೆ ಆರ್ಯರೇ ಭಾರತದ ಮೂಲನಿವಾಸಿಗಳು ಎಂದೂ ಮುಸ್ಲಿಮರಾದರೆ ಹೊರಗಿನಿಂದ ಆಮೇಲೆ ಬಂದವರೆಂದೂ ಸ್ಥಾಪಿಸಲು ಆಗುತ್ತದೆ. ಈ ಯೋಜನೆ ಮತ್ತು ಯೋಚನೆಯಿಂದಲೇ ಕೇಂದ್ರಸರಕಾರದ ಮಾನವ ಸಂಪನ್ಮೂಲ ಇಲಾಖೆಯ ಮಂತ್ರಿ ಮುರಳಿ ಮನೋಹರಜೋಷಿ ಇತಿಹಾಸ ಸಂಶೋಧನಾ ಇಲಾಖೆಯ ಮುಖ್ಯಸ್ಥರನ್ನಾಗಿ 'ಹಿಂದುತ್ವ'ದ ವಿದ್ವಾಂಸರನ್ನೇ ನೇಮಿಸಿ, ಇತಿಹಾಸವನ್ನು ತಿದ್ದಿಸುತ್ತಿದ್ದಾರೆ. ಇಲ್ಲಿಯ ವಾದವನ್ನು ಜೋಷಿಯವರು ಮತ್ತು ನೀವು ಒಂದೆಡೆ ಕುಳಿತು ಮಾತಾಡಿಕೊಂಡು ಮಾಡಿದ್ದಲ್ಲ. ಆದರೆ 'ಹಿಂದುತ್ವ'ದ ರಹಸ್ಯ ಕಾರ್ಯಕ್ರಮ ಅಂತಹದು. ಅದು ನಾಲ್ಕಾರು ವರ್ಷಗಳಲ್ಲಿ ಸಾಧಿಸಿ ಬಿಡಬೇಕೆಂದಲ್ಲ. ದೀರ್ಘಕಾಲಿನ, ಮುಂಧೋರಣೆ ಅಲ್ಲಿ ದುಡಿಯುತ್ತದೆ. ಆದರೆ ಆ ಧೋರಣೆ ಪ್ರಜಾಪ್ರಭುತ್ವದ ಹಿತಕ್ಕಾಗಿ, ಜನಪರ ಅಭಿವೃದ್ಧಿಗಾಗಿ ದುಡಿಯುತ್ತಿಲ್ಲ. ಸಮಾಜವಾದಿ ಧೋರಣೆಯ ವಿಷಯದಲ್ಲಿ ಇಂತಹದೇ ದೂರದೃಷ್ಟಿ ಉಳ್ಳವರೆಂದರೆ ಕಮ್ಯುನಿಸ್ಟರು. ಉಳಿದ ಪಕ್ಷಗಳು ಮತ್ತು ವ್ಯಕ್ತಿಗಳು ಹೇಗಾದರೂ ಮಾಡಿ ಅಧಿಕಾರ ಮತ್ತು ದುಡ್ಡನ್ನು ಗಳಿಸುವ ಕ್ಷುಲ್ಲಕ ತಾತ್ಕಾಲಿಕವಾದ

ರಾಜಕೀಯದಲ್ಲಿ ನಾಶವಾಗಿ ಹೋಗುತ್ತಾರೆ. (ದುಡ್ಡು ಮಾಡುವ ವಿಷಯದಲ್ಲಿ ಭಾ.ಜ.ಪ ಕೂಡ ಹಿಂದೆ ಬೀಳುವ ಪಕ್ಷವಲ್ಲ ಎಂದು ಈಗ ಸಾಭೀತಾಗಿರುವ ವಿಷಯ, ಬಿಡಿ).

ಮಂಡನೆ: ಬ್ರಿಟಿಷರು ಈ ದೇಶಕ್ಕೆ ಬಂದು ರಾಜಕಾರಣದಲ್ಲಿ ಪ್ರವೇಶಿಸುತ್ತಿದ್ದಂತೆಯೇ ಅವರು ಮಾಡಿದ ಮೊದಲ ಕೆಲಸವೆಂದರೆ ಇಲ್ಲಿಯ ಎಲ್ಲಾ ಸ್ಥಿತಿಗತಿಗಳ ಬಗ್ಗೆ ಸಮೀಕ್ಷೆ ಮಾಡಿದ್ದು. ಆ ಎಲ್ಲದರ ಬಗ್ಗೆ ದಾಖಲೆ ಲಂಡನ್ನಿನ ರಾಯಿಲ್ ಲೈಬ್ರರಿಯಲ್ಲಿದೆ. ಇದನ್ನು ಖ್ಯಾತ ಇತಿಹಾಸ ಸಂಶೋಧಕರಾದ ಧರ್ಮಪಾಲಕರು ಅಭ್ಯಸಿಸಿ, ಕ್ಷೇತ್ರಕಾರ್ಯ ನಡೆಸಿ ನಿರ್ಣಯಕ್ಕೆ ಬಂದಿದ್ದೆಂದರೆ ೧೮೦೫ರ ಹೊತ್ತಿಗೆ ತಂಜಾವೂರು ಜಿಲ್ಲೆಯಲ್ಲಿ ಪಿತ್ರಾರ್ಜಿತ ಭೂಮಿ ಸ್ವಾಮ್ಯ ಹೊಂದಿದವರ ಸಂಖ್ಯೆ ೬೨೦೪೮ರಲ್ಲಿ ೪೨೦೦೦ (ಸುಮಾರು ೭೦ಶೇಕಡಾ) ಜನ ಶೂದ್ರ ಮತ್ತು ಅದಕ್ಕೂ ಕೆಳಜಾತಿ ಜನ ಪಿತ್ರಾರ್ಜಿತ ಆಸ್ತಿ ಹೊಂದಿದ್ದರು. ಮಕ್ಕಳ ವಿದ್ಯಾಭ್ಯಾಸ ಶೂದ್ರರದ್ದು ೭೦ ಶೇಕಡಾ ರಿಂದ ೮೦ ಶೇಕಡಾ. ಮಹಿಳೆಯರ ದೃಷ್ಟಿಯಿಂದ ನೋಡಿದರೆ ವೇದಕಾಲದಲ್ಲಿ ಮೈತ್ರೇಯಿ, ಗಾರ್ಗಿ ಮೊದಲಾದವರು ಬ್ರಹ್ಮವಾದಿನಿ-ಯರಾಗಿದ್ದರು. ಆದ್ದರಿಂದ ಅಂಬೇಡ್ಕರರ ಮತ್ತು ನಿಮ್ಮ ಆರೋಪ ಶೂದ್ರರಿಗೆ ವಿದ್ಯೆ ಕೊಡಲಿಲ್ಲ ಎಂಬ ಆರೋಪ (ಶೂದ್ರರಿಗೆ ವಿದ್ಯೆ ಕೊಡಲಿಲ್ಲ ಎಂಬ ಆರೋಪ) ಧೂಳೀಪಟ ಹೊಂದುತ್ತದೆ. ಕುಮಟಾದಲ್ಲಿ ನಡೆದ ಮನುಸ್ಮೃತಿ' ವಿಚಾರಸಂಕಿರ್ಣಕ್ಕೆ ನೀವು ಹೋಗಿದ್ದರೆ ನಿಮ್ಮ ಜ್ಞಾನ ಹೆಚ್ಚುತ್ತಿತ್ತು.

ಉತ್ತರ: ಇದು ಒಂದು ಅದ್ಭುತ ಸಂಶೋಧನೆ. ಹಾಗೆ ಧರ್ಮಪಾಲರು ಹೇಳಿದ್ದಾರೆನ್ನುವ ಮೂಲಕ ನೀವು ಶೂದ್ರ ದಲಿತ ಮತ್ತು ಮಹಿಳೆಯರು ಶೋಷಣೆಗೆ ಒಳಗಾಗಿಲ್ಲ ಎಂದು ವಾದಿಸಿದ ಮಾತ್ರಕ್ಕೆ 'ಸ್ಮೃತಿ'ಗಳು ವಿಧಿಸಿರುವ "ದೇವರು ಶೂದ್ರರಿಗೆ ವಿಧಿಸಿದ ಒಂದೇ ಒಂದು ಕರ್ತವ್ಯ ಅತ್ಯಂತ ವಿನಯದಿಂದ ಇತರ ಮೂರು ವರ್ಗಗಳಿಗೆ (ಬ್ರಾಹ್ಮಣ, ಕ್ಷತ್ರಿಯ, ಮತ್ತು ವೈಶ್ಯ ವರ್ಗಗಳಿಗೆ) ಸೇವೆ ಮಾಡುವುದು" ಎನ್ನುವುದನ್ನಾಗಲೀ, "ಶೂದ್ರರಿಗೆ ಹಣಮಾಡುವ ಶಕ್ತಿಯಿದ್ದರೂ ಹಣ ಮಾಡಬಾರದು. ಹಾಗೆ ಮಾಡಿದರೆ ಆತ ಬ್ರಾಹ್ಮಣರಿಗೆ ಬಾಧೆಯನ್ನುಂಟು ಮಾಡುತ್ತಾನೆ." ಎನ್ನುವುದನ್ನಾಗಲೀ, "ಗಂಡನು ಶೀಲಹೀನನಾಗಿದ್ದರೂ ಕಾಮಮತ್ತನಾಗಿ ಬೇರೆ ಕಡೆ ಸುಖ ಅರಸುತ್ತಿದ್ದರೂ ಅವನನ್ನೇ ದೇವರೆಂದು ಪೂಜಿಸಬೇಕು. ಸ್ತ್ರೀಗೆ ವೇದ ವಿದ್ಯೆ ನಿಷೇಧ. ಮಲಗುವುದು, ಕುಳಿತು ಕೊಳ್ಳುವುದು, ಅಲಂಕಾರಗಳಲ್ಲಿ ಪ್ರೀತಿ, ಕಾಮ, ಕ್ರೋಧ, ಕಪಟ, ದುರ್ವತನೆ, ಮನೋವಿಕಾರಗಳು ಸ್ತ್ರೀಯ ಜನ್ಮಸಿದ್ಧ ಹಕ್ಕು" ಎಂದು ಹೇಳುವುದನ್ನಾಗಲೀ, ಗೌತಮ ಹೇಳುವ "ವೇದವನ್ನು ನೆನಪಿಟ್ಟುಕೊಳ್ಳುವುದಕ್ಕಾಗಿ ಉದ್ದೇಶ ಪೂರಕವಾಗಿ ಶೂದ್ರನು ಕೇಳಿದ್ದೇ ಆದರೆ ಅವನ ಕಿವಿಗೆ ಸೀಸವನ್ನು, ಅರಗನ್ನು ಕರಗಿಸಿ ಹೊಯ್ಯಬೇಕು. ವೇದವನ್ನು ಕಲಿತುಕೊಂಡಿದ್ದರೆ ಅವನ ದೇಹವನ್ನು ಚೂರು ಚೂರಾಗಿ ಕತ್ತರಿಸಿಹಾಕಬೇಕು". ಎಂಬುದನ್ನಾಗಲೀ ಒರಸಿಹಾಕಲು ಆಗುತ್ತದಾ? ನೀವು ನಡೆಸಿದ ಕುಮಟಾದ ವಿಚಾರ ಸಂಕಿರ್ಣವಾದರೂ ಹಾಗೆ ಮಾಡಿತೇ?

ಇನ್ನೊಂದು ವಿಚಾರವನ್ನು ಗಮನಿಸಿ ೧೯೩೨ರಲ್ಲಿ ದುಂಡುಮೇಜಿನ ಪರಿಷತ್ತಿಗೆ ಹೋಗುವ ಮುನ್ನ (೧೯೩೧) ಅಬೇಂಡ್ಕರರನ್ನು ಗಾಂಧೀಜಿ ಭೇಟಿಯಾಗಲು ಬಯಸಿದ್ದರು. ಹಾಗೆ ಅವರ

ಭೆಟ್ಟಿ ಆಯಿತು. ಅಂಬೇಡ್ಕರ ಅಸ್ಪೃಶ್ಯರ ಅಭಿವೃದ್ಧಿ ಕುರಿತು ಅಸ್ಪೃಶ್ಯರ ಬಗ್ಗೆ ಸವರ್ಣೀಯರ ಮನಸ್ಸು ಬದಲಾಗದ ಕುರಿತು ಮಾತನಾಡುತ್ತ ತಟ್ಟನೆ ಮಾತು ಬದಲಿಸಿ ಉದ್ವಿಗ್ನರಾಗಿ "ಗಾಂಧೀಜಿ, ನನಗೊಂದು ತಾಯ್ನೆಲ್ಲ ಇಲ್ಲ" ಎನ್ನುತ್ತಾರೆ. "ಯಾಕಿಲ್ಲ? ನನಗೆಂತೋ ನಿಮಗೂ ಈ ನೆಲ ತಾಯ್ನೆಲ" ಎಂದು ಗ್ಾಂಧೀಜಿ ಉತ್ತರಿಸುತ್ತಾರೆ. ಆಗ ಅಂಬೇಡ್ಕರ "ಇಲ್ಲ, ಇಲ್ಲ, ಹಂದಿ ನಾಯಿಗಳಿಗಿಂತ ಕಡೆಯಾಗಿ ಬಾಳು ಸಾಗಿಸುತ್ತಿರುವ, ಕುಡಿಯುವ ನೀರು ಸಿಗದಿರುವ ಈ ನೆಲವು ನನ್ನ ತಾಯ್ನೆಲವೇ? ದೇವಾಲಯ ಪ್ರವೇಶಕ್ಕವಕಾಶ ನೀಡದಿರುವ ಅಸಮಾನತೆಯ ಮೂಲ ತತ್ವವಾಗಿರುವ ಈ ಧರ್ಮ ನನ್ನ ಧರ್ಮವೇ?" ಎಂದು ಕೇಳುತ್ತಾರೆ. (ಕ್ರಾಂತಿಕಾರ ಡಾ. ಅಂಬೇಡ್ಕರ ಜವರೇಗೌಡ ೧೯೮೨: ೮೪) ಇದು ಹಿಂದೂ ಧರ್ಮದ ಸಾಂಸ್ಥಿಕ, ಆಚರಣಾತ್ಮಕ ಆಯಾಮದ ಪರಿಣಾಮ. ಇದನ್ನು ಧರ್ಮಪಾಲರ ಸಂಶೋಧನೆಯೊಡನೆ ತಾಳೆಹಾಕಿ.

ಮಂಡನೆ: ಈ ದೇಶದಲ್ಲಿರುವ ಬಹು ಸಂಖ್ಯಾತ ಮುಸ್ಲಿಮರು ಮತ್ತು ಕ್ರಿಶ್ಚನರು ಅರಬಸ್ತಾನದಿಂದಲೋ ಯುರೋಪಿನಿಂದಲೋ ಬಂದವರಲ್ಲ ಅವರು ಇಲ್ಲಿಯೇ ಮತಾಂತರ ಹೊಂದಿದವರು. ಅವರ ಮತ್ತು ನಮ್ಮ ಹಿರಿಯರು ಒಬ್ಬರೇ ಇರಬಹುದು. ಅವರು ಮತ್ತು ನಮ್ಮ ರಕ್ತ ಬೇರೆಯಲ್ಲ.

ಉತ್ತರ: ಇದು ನನ್ನ ಲಭಿಪ್ರಾಯ ಕೂಡ ಆದ್ದರಿಂದಲೇ ಅವರನ್ನು ಸಹನೆಯಿಂದ, ಸಮಾನವಾದ ಧಾರ್ಮಿಕ ಸ್ವಾತಂತ್ರ್ಯದೊಂದಿಗೆ 'ಸೆಕ್ಯುಲರಿಸಂ' ಪರಿರಕಲ್ಪನೆಯ ಅಡಿಯಲ್ಲಿ ಬದುಕೋಣವೆಂದು ನಾನು ಹೇಳುತ್ತೇನೆ. ಆದರೆ ನಿಮ್ಮ ಗುರು ಗೊಳಲ್ಕರ್ ಏನು ಹೇಳುತ್ತಾರೆ?" ಹಿಂದು ಸ್ಥಾನದಲ್ಲಿರುವ ಹಿಂದುಗಳಲ್ಲದ ಜನರು ಹಿಂದೂ ಸಂಸ್ಕೃತಿ, ಭಾಷೆಗಳನ್ನು ಅಳವಡಿಸಿ ಕೊಳ್ಳಬೇಕು. ಹಿಂದೂ ಜನಾಂಗ ಮತ್ತು ಸಂಸ್ಕೃತಿಗಳ ಕೀರ್ತಿಗೌರವಗಳಿಗೆ ಹೊರತಾಗಿ ಬೇರಾವ ವಿಚಾರಗಳಿಗೂ ಬೆಲೆ ಕೊಡಬಾರದು. ತಿರುಗಿ (ಮಾತೃಧರ್ಮಕ್ಕೆ) ಬಂದರೆ ಅವರವರ ಹಿಂದಿನ ಸ್ಥಾನದಲ್ಲೇ ಇರಬೇಕು" ಇತ್ಯಾದಿ. (ಇದು ವರ್ಣಧರ್ಮದ ಮರುಸ್ಥಾಪನೆ ಎಂದು ಬೇರೆ ಹೇಳಬೇಕೇ?)

ಮಂಡನೆ: ಶೂದ್ರತಪಸ್ವಿಯ ಕುರಿತು ನಿಮ್ಮ ಆರೋಪ ಸರಿಯಲ್ಲ ಗಾಂಧೀಜಿಗಿಂತ ಕುವೆಂಪು ದೊಡ್ಡವರಲ್ಲ. ಗಾಂಧೀಜಿ ಮತಾಂಧರಾಗಿರಲಿಲ್ಲ ಅಂಥ ಗಾಂಧೀಜಿಯೇ ಶೂದ್ರ ತಪಸ್ವಿ ಪ್ರಕ್ಷಿಪ್ತ ಎಂದಿದ್ದಾರೆ. ವೇದಗಳನ್ನು ಕಲಿತದಕ್ಕಾಗಿ ರಾಮ ಶಿಕ್ಷಿಸಿದ ಎಂಬುದನ್ನು ತಾನು ನಂಬುವುದಿಲ್ಲ ಎಂದಿದ್ದಾರೆ.

ಉತ್ತರ: ಗಾಂಧೀಜಿಯವನ್ನು ತುಂಬ ಹೊಗಳಿದ್ದೀರಿ. ಅವರದ್ದು ವೈರಿಗಳಿಂದಲೂ ಹೊಗಳಿಸಿ ಕೊಳ್ಳುವ ವ್ಯಕ್ತಿತ್ವ. ಅವರು ಹೇಳಿದ ರಾಮಾಯಣದೊಳಗಿನ ಪ್ರಕ್ಷಿಪ್ತತೆಯ ವಿಚಾರ ಅವರ ಘನ ವ್ಯಕ್ತಿತ್ವಕ್ಕೆ ತಕ್ಕುದುದು. ಅವರ ರಾಮನೆಂದರೆ ಈ ದೇಶದ ಕೋಟ್ಯಾನುಕೋಟಿ ಜನರ ಹೃದಯದಲ್ಲಿರುವ ಶಬರಿಯ ರಾಮ; ಕಲ್ಲಾಗಿಬಿದ್ದ ಅಹಲ್ಯೆಯನ್ನು ಉದ್ಧರಿಸಿದ ಪತಿತಪಾವನ ರಾಮ. ಆದರೆ ಅವನು ಗುಜರಾತಿನಲ್ಲಿ ತುಂಬುಗರ್ಭಿಣಿಯ ಹೊಟ್ಟೆಬಗೆದು

ಭ್ರೂಣತೆಗೆದು ಚೂರುಮಾಡಿ ಒಗೆದ ಭಕ್ತರ ರಾಮನಲ್ಲ. ಅಸಹಾಯಕ ಹೆಣ್ಣನ್ನು ಅತ್ಯಾಚಾರ ಮಾಡಿ ಯೋನಿಯಲ್ಲಿ ಮರದ ತುಂಡು ಜಡಿದು ಬಂದು ಮಾತೃಹಂತಕ ಭಕ್ತರ ರಾಮನಲ್ಲ. ನಿಮ್ಮ ದೃಷ್ಟಿಯಲ್ಲಿ ಕುವೆಂಪು ದೊಡ್ಡವರಿಲ್ಲದಿರಬಹುದು. ಆದರೆ ಅವರ ರಾಮ ನಿಶ್ಚಯವಾಗಿ ದೊಡ್ಡವನು.

ಮಂಡನೆ: ಮುಸ್ಲಿಂ ಆಕ್ರಮಣಕಾರರು ಆರೆಂಟುನೂರು ವರ್ಷಗಳ ಕಾಲ ಈ ದೇಶವನ್ನು ಆಳಿ ಲೂಟಿಮಾಡಿದರು. ಇಲ್ಲಿಯ ಸಂಸ್ಕೃತಿಯನ್ನು ಧ್ವಂಸ ಮಾಡಿದರು.

ಉತ್ತರ: ಇದು ತಪ್ಪು ಭಾವನೆ, ನಿಮಗೆ ಚಾರಿತ್ರಿಕ ಪ್ರಜ್ಞೆ ಬೇಕಿಲ್ಲದಿರುವುದು ಸ್ಪಷ್ಟ. ಕಾಲ ಮತ್ತು ವಿಷಯಗಳನ್ನು ನಿಮಗೆ ಬೇಕಾದಂತೆ ತಿದ್ದುತ್ತೀರಿ. ಕೇಂದ್ರದ (ಭಾಜಪ) ಸರಕಾರ ಹೀಗೆ ಇತಿಹಾಸ ತಿದ್ದುವ ಕೆಲಸವನ್ನು ಮಾಡುತ್ತದೆಯಲ್ಲವೇ? ಮಧ್ಯಕಾಲೀನ (ಮುಸ್ಲಿಂ ಆಳ್ವಿಕೆ) ಇತಿಹಾಸದ ಬಗ್ಗೆ ತಪ್ಪು ಕಲ್ಪನೆಯನ್ನು ಯಾಕೋ ಬೆಳೆಸಲಾಗಿದೆ. ಮುಸ್ಲಿಂ ಆಳ್ವಿಯೆಂದರೆ ಅದೇನು ಧ್ವಂಸದ ಇತಿಹಾಸವಲ್ಲ.

ಮುಸ್ಲಿಂ ಆಳ್ವಿಕೆಯ ಕಾಲದಲ್ಲಿ ದೇಶದಲ್ಲಿ ಹಿಂದೂ ರಾಜರುಗಳೂ ಆಳುತ್ತಿದ್ದರು. ಮುಸ್ಲಿಂ ಆಳ್ವಿಕೆಯಲ್ಲಿ ದೇಶ ದಿವಾಳಿಹೋಗಿರಲಿಲ್ಲ; ಅಲ್ಲಿ ಎಲ್ಲವೂ ಸರಿ ಇತ್ತು, ಧ್ವಂಸ ನಡೆಯಲೇ ಇಲ್ಲ ಎಂದಲ್ಲ. ಹಾಗೆ ನಡೆದರೆ ಅದು ಎಲ್ಲಾ ಧಾಳಿ ನಡೆದಕಾಲದಲ್ಲೂ ರಾಜರ ಕಾಲದಲ್ಲೂ ನಡೆದಿದೆ. ಆದರೆ ಅಲ್ಲಿ ಸಾಕಷ್ಟು ರಚನಾತ್ಮಕ ಕಾರ್ಯಗಳೂ ನಡೆದಿವೆ. ಕೆರೆ ತೋಡುವುದು, ಒಡ್ಡು ಕಟ್ಟುವುದು. ಭೂಮಿ ಅಳೆಯುವುದು ಮುಂತಾಗಿ ಪ್ರಜಾಹಿತಕಾರಿ ಕೆಲಸಗಳು ನಡೆದಿವೆ. ಆ ಕಾಲದಲ್ಲಿ ದೇಶದ ಒಂದೇ ಒಂದು ನಾಣ್ಯ ದೇಶದ ಹೊರಗೆ ಹೋಗಲಿಲ್ಲ. ಸರಂಜಾಮಿ ಊಳಿಗಮಾನ್ಯ ವ್ಯವಸ್ಥೆ ಇರುವುದರಿಂದ ಸಂಪತ್ತಿನ ಸಮಾನ ಹಂಚಿಕೆ ನಡೆದಿರಲಿಲ್ಲ. (ನಿಮ್ಮ ಧರ್ಮಪಾಲರ ಸಂಶೋಧನೆಯ ಪ್ರಕಾರ ಶ್ರೀಮಂತರ-ಬಡವರ ಮಧ್ಯೆ ಅಂಥ ಅಂತರವೂ ಇರಲಿಲ್ಲ, ಅಲ್ಲವೇ?) ಅಲ್ಲದೆ ಮುಸ್ಲಿಂ ಅರಸರು ತಳಮಟ್ಟದ ಸಾಮಾಜಿಕ ವ್ಯವಸ್ಥೆ ಯಲ್ಲಿ ಕೈ ಹಾಕಲಿಲ್ಲ. ಅಕಬರನಂಥ ರಾಜರು ಅಶೋಕನ ಸಾಲಿಗೆ ಸೇರಬೇಕಾದರು. ಮತಾಂಧ ಎಂದೇ ಹೆಸರಾದ ಔರಂಗಜೇಬ ಬನಾರಸದ ಬ್ರಾಹ್ಮಣರಿಗೆ ವಂಶಪಾರಂಪರಯ್ಯವಾಗಿ ದೇವಸ್ಥಾನದ ಪೂಜೆಯನ್ನು ನಡೆಸಿಕೊಂಡು ಹೋಗುವ ಹಕ್ಕನ್ನು ಬರೆಸಿಕೊಟ್ಟ ದಾಖಲೆಯಿದೆ. ಹಿಂದುಸ್ಥಾನೀ ಸಂಗೀತ ತನ್ನ ಉಚ್ಚಾಂಕವನ್ನು ಮುಟ್ಟಿದ್ದೇ ಆಕಾಲದಲ್ಲಿ. ಭಕ್ತಿಪಂಥದ ಸಾಮಾಜಿಕ ಸುಧಾರಣಾ ಚಳವಳಿ ನಡೆದದ್ದು ಮಧ್ಯಕಾಲದಲ್ಲೇ. ಮುಸ್ಲಿಂ ಧಾರ್ಮಿಕ ಮೂಲಭೂತವಾದಿ ನಂಬಿಕೆಗೆ ವಿರುದ್ಧವಾಗಿ ಸೂಫಿ ಪಂಥ ಬೆಳೆದದ್ದು ಆಗಲೇ. ಸೂಫಿಗಳು ಸಾಧಿಸಿದ ಹಿಂದೂ-ಮುಸ್ಲಿಂ ಸೌಹಾರ್ದ-ಸಾಮರಸ್ಯ ಸ್ಥಾಪನೆ ಸಾಧಾರಣವಾದುದಲ್ಲ. ಸಂಸ್ಕೃತಿಕವಾಗಿ ಅನೇಕ ಕೊಡುಪಡೆಗಳು ಈ ಎರಡೂ ಧರ್ಮಗಳ ಮಧ್ಯೆನಡೆದಿವೆ. ಬ್ರಾಹ್ಮಣರಿಗೂ ಮತ್ತು ಜಮೀನುದಾರರಾದ ಶೂದ್ರರಿಗೂ ಯಾವ ಹಾನಿಯೂ ಆಗಲಿಲ್ಲ. ಬದಲಾಗಿ ಸಾಮಾಜಿಕ-ನಿರ್ಲಕ್ಷ್ಯ, ಶೋಷಣೆಗೆ ಒಳಗಾಗಿದ್ದ ಕೆಳಜಾತಿ ಶೂದ್ರರೂ ಮತ್ತು ದಲಿತರು ಮುಸ್ಲಿಂ ಧರ್ಮವನ್ನು ಸೇರಿ ಸಾಮಾಜಿಕವಾಗಿ ಉನ್ನತಿಗೇರಿದರು. ಇದು ಸತ್ಯ ಚಿತ್ರ.

ಮಂಡನೆ: ಗಾಂಧಿ ಹತ್ಯೆಯ ಗೋಡ್ಸೆಯನ್ನು ಆರ್.ಎಸ್.ಎಸ್. ಎಂದು ಆರೋಪಿಸಿದ್ದೀರಿ. ಇದು ಸತ್ಯಕ್ಕೆ ದೂರವಾದ ಆರೋಪ. ಆರ್.ಎಸ್.ಎಸ್.ಗೂ ಗಾಂಧಿ ಹತ್ಯೆಗೂ ಯಾವ ಸಂಬಂಧವೂ ಇಲ್ಲವೆಂದು ನ್ಯಾಯಾಲಯವೇ ತೀರ್ಪಿತ್ತಿದೆ.

ಉತ್ತರ: ಹಾಗಾದರೆ ನಾನು ನಾಥೂರಾಮಗೋಡ್ಸೆಯ ಸೋದರನ ಹೇಳಿಕೆಯನ್ನೇ ಮುಂದಿಡುತ್ತೇನೆ. ನಾಥೂರಾಮನ ಸೋದರ ಗೋಪಾಲಗೋಡ್ಸೆ ತನ್ನ ಅಣ್ಣನ 'ವಾಯ್ ಆಯ್ ಅಸ್ಸಾಸಿನೇಟೆಡ್ ಮಹಾತ್ಮಾ ಗಾಂಧಿ' ಎಂಬ ಪುಸ್ತಕ ಬಿಡುಗಡೆಯ ಸಮಾರಂಭದಲ್ಲಿ (ಇದರ ಪ್ರಕಾಶಕ ಗೋಪಾಲ ಗೋಡ್ಸೆಯೇ) ೨-೧೨-೧೯೯೨ ರಂದು ತಾವಿಬ್ಬರೂ ಆರ್. ಎಸ್. ನ ಸದಸ್ಯರಾಗಿದ್ದೆವು ಎನ್ನುತ್ತಾನೆ. ಹಾಗೆಯೇ ೨೮-೧-೧೯೯೪ರ ಫ್ರಂಟ್‌ಲೈನ್ ಪತ್ರಿಕೆ ನಡೆಸಿದ ಸಂದರ್ಶನದಲ್ಲಿ ಆತ ಎಲ್ಲಾ ಸೋದರರೂ ಆರ್.ಎಸ್.ಎಸ್. ನಲ್ಲಿದ್ದೆವು. ನಮಗೆ ಅದೊಂದು ಕುಟುಂಬವಾಗಿತ್ತು. ನಾಥೂರಾಮ ಅದರಲ್ಲಿ ಬೌದ್ಧಿಕ ಕಾರ್ಯಕರ್ತ (ಇಂಟೆಲಿಜೆಂಟ್ ವರ್ಕ್‌ರ್) ಆಗಿದ್ದ. ನಾನು ಬಿಟ್ಟೆ. ಯಾಕೆಂದರೆ ಗಾಂಧಿ ಹತ್ಯೆಯ ನಂತರ ಗೋಲ್ವಾಲ್ಕರ ಮತ್ತು ಸಂಘ ಬಹಳ ಸಂಕಷ್ಟದಲ್ಲಿ ಸಿಲುಕಿತ್ತು" ಎನ್ನುತ್ತಾನೆ. ಆರೆಸ್ಸೆಸ್‌ಗೂ" ನಾಥೂರಾಮನಿಗೂ ಏನೇನೂ ಸಂಬಂಧ ಇದ್ದಿರಲಿಲ್ಲ ಎಂದು ಅದ್ವಾನಿ ಹೇಳಿರುವುದನ್ನು ಅವನ ಗಮನಕ್ಕೆ ತಂದಾಗ "ಅದನ್ನು ನಾನು ಖಂಡಿಸುತ್ತೇನೆ. ಅದೊಂದು ಹೇಡಿತನ 'ಹೋಗು, ಗಾಂಧಿಹತ್ಯೆ ಮಾಡು' ಎಂದು ಠರಾವು ಮಾಡಿರಲಿಲ್ಲ ಎಂದು ಬೇಕಾದರೆ ಹೇಳಬಹುದು. ಆದರೆ ನಾಥೂರಾಮನನ್ನು ಕೈಬಿಡುವುದು ಸರಿಯಲ್ಲ. ನಾಥೂರಾಮ ಹಿಂದೂಮಹಾಸಭೆಯಲ್ಲಿ ಕಾರ್ಯಕರ್ತನಾಗಿ ಶುರುಮಾಡಿದ ನಂತರ ಆರ್.ಎಸ್.ಎಸ್.ನ ಬೌದ್ಧಿಕ ಕಾರ್ಯಕರ್ತನಾದ" ಎನ್ನುತ್ತಾನೆ. ಸಾಕೇ ಸಾಕ್ಷಿ?

ಮಂಡನೆ: ಡಾ. ಅಂಬೇಡ್ಕರರಿಗೆ ಆರ್.ಎಸ್.ಎಸ್. ಬಗ್ಗೆ ಒಳ್ಳೆಯ ಅಭಿಪ್ರಾಯವಿತ್ತು. ಅವರು ಭಾರತೀಯ ಮಜದೂರ ಸಂಘದ ಸ್ಥಾಪಕರಾದ ದತ್ತೋಪಂಥ ದೇಂಗಡಿ ಅವರೊಡನೆ ವಾರ್ತಾಲಾಪ ಮಾಡುತ್ತ "ನಿನ್ನ ಸಂಘಟನೆಯ ಬಗ್ಗೆ ನನಗೆ ಗೊತ್ತು. ಮೆಚ್ಚಿಕೆಯೂ ಇದೆ. ದಲಿತರು ಪ್ರಗತಿ ಶೀಲತೆ, ಧರ್ಮ ನಿರಪೇಕ್ಷತೆ ಎಂದೆಲ್ಲ ಮೂಲವಾಹಿನಿಯಿಂದ ದೂರುವಾಗುತ್ತಿದ್ದಾರೆ. ಬಡತನ ಇತ್ಯಾದಿಗಳಿಂದ ವಾಮವಾದಿಗಳ ಮಾತಿಗೆ ಮರಳಾಗುತ್ತಿದ್ದಾರೆ. ಅವರ ಮಧ್ಯೆ ನಾನು ನಿಂತಿದ್ದೇನೆ. ಇವನ್ನೆಲ್ಲ ವಿಚಾರ ಮಾಡೇ ನಾನು ಬೌದ್ಧಧರ್ಮಕ್ಕೆ ಶರಣುಹೋದೆ ಎಂದು ನಮ್ಮ ಕೆಲಸವನ್ನು ಪ್ರಶಂಸಿಸಿದ್ದಾರೆ.

ನೀವು ಬ್ರಾಹ್ಮಣದ್ವೇಷಿಗಳಾಗಿದ್ದೀರಿ. ಆದ್ದರಿಂದಲೇ ಹಿಂದೂ ಧರ್ಮವನ್ನು ಟೀಕಿಸುತ್ತೀರಿ. ಗೋದ್ರಾದಲ್ಲಿ ಸತ್ತವರಲ್ಲಿ ಜಾತಿ ಅರಸುತ್ತೀರಿ. ಇಲ್ಲಿ ಉಪದೇಶ ಮಾಡುವ ನೀವು ಪಾಕಿಸ್ತಾನಕ್ಕೊ, ಬಾಂಗ್ಲಾದೇಶಕ್ಕೊ ಅರಬಸ್ತಾನಕ್ಕೊ ಹೋಗಿ ಅವರಿಗೆ 'ಸೆಕ್ಯುಲರಿಸಂ' ಹೇಳಿ. ಅಲ್ಲಿ ಅನ್ಯ ಧರ್ಮೀಯರನ್ನು ಹಿಂಸಿಸಲಾಗುತ್ತದೆ.

ಉತ್ತರ: ಡಾ. ಬಿ.ಆರ್. ಅಂಬೇಡ್ಕರರು ಆರ್.ಎಸ್.ಎಸ್ ಬಗ್ಗೆ ದತ್ತೋಪಂಥರೊಡನೆ ಆಡಿದರೆನ್ನಲಾದ ನಿನ್ನ ಹಿಂದು ಸಂಘಟನೆಯ ಕಾರ್ಯದ ಬಗೆಗೆ ನನಗೆ ಚೆನ್ನಾಗಿ ತಿಳಿದಿದೆ.

ಮೆಚ್ಚಿಗೆಯೂ ಇದೆ.... ಮುಂತಾಗಿ ಹೇಳಿದ ಮಾತಿನಿಂದ ಬೆನ್ನಚಪ್ಪರಿಸಿಕೊಳ್ಳುತ್ತೀರಿ. ಆದರೆ ಆರ್.ಎಸ್.ಎಸ್. ಅಂಬೇಡ್ಕರ ಮಾತಿನ ಹಾರ್ದಿಕೆಯನ್ನು ಉಳಿಸಿಕೊಳ್ಳಲಿಲ್ಲ. ಅಂಬೇಡ್ಕರ ಹಿಂದೂ ಧರ್ಮದಲ್ಲಿಯ ಅಸ್ಪೃಶ್ಯತೆ ಮತ್ತು ಜಾತಿಯತೆಯು ನಾಶವಾಗಬಹುದು ಎಂದು ಸುಮಾರು ಇಪ್ಪತ್ತು ವರ್ಷಕಾದರು. (ತಾನು ಅಸ್ಪೃಶ್ಯನಾಗಿ ಹುಟ್ಟಿದೆ. ಆದರೆ ಅಸ್ಪೃಶ್ಯನಾಗಿ ಸಾಯುವುದಿಲ್ಲ ಎಂದು ಸಾರ್ವಜನಿಕವಾಗಿ ಸಾರಿದ್ದರು) ಕೊನೆಗೂ ನಿರಾಶರಾಗಿ ಬೌದ್ಧಧರ್ಮಕ್ಕೆ ಶರಣಾದರು. ಸಾಮ್ಯವಾದದ ಬಗ್ಗೆ ಹೇಳಿದ ಮಾತಿನ ಹಿಂದೆ ಅವರಿಗೆ ರಶಿಯಾದ, ಚೀನಾದಲ್ಲಿಯ ಕಮ್ಯುನಿಸ್ಟ ಬೆಳವಣಿಗೆಯ ಬಗ್ಗೆ ಕೆಲವು ಸಂದೇಹಗಳಿದ್ದವು. ಹಾಗೆಯೇ ಅವರಿಗೆ ಆಂತರಿಕವಾಗಿ ಆಧ್ಯಾತ್ಮಿಕ ಎನ್ನಬಹುದಾದ ಹಸಿವಿತ್ತು. ಅದ್ದರಿಂದ ಕಮ್ಯುನಿಸ್ಟ ಕಡೆ ಒಲಿಯದೆ ಸಮಾನತೆಯನ್ನು ಹೊಂದಿದ, ಅಸ್ಪೃಶ್ಯತೆ ಮತ್ತು ಜಾತಿ ವ್ಯವಸ್ಥೆಯನ್ನು ಅಲ್ಲಗಳೆದ, ನೀತಿಯೇ ದೇವರಾದ, ದೇವರಿಲ್ಲದ ಧರ್ಮವಾದ ಬೌದ್ಧಧರ್ಮಕ್ಕೆ ಮತಾಂತರ ಹೊಂದಿದರು. ಆದ್ದರಿಂದ ಇದು ಆರ್ ಎಸ್ ಎಸ್ ಗೆ ನಿಜ ಸರ್ಟಿಫಿಕೇಟ್ ಆಗಲಾರದು.

ಆರ್.ಎಸ್.ಎಸ್.ನ ಗುಣಗಾನ ಮಾಡುವ ನಿಜ ಸರ್ಟಿಫಿಕೇಟ್ ಇಲ್ಲಿದೆ, ನೋಡಿ. ದಿನಾಂಕ ೨-೪-೧೯೪೮ ರ ಸರಕಾರಿ ದಾಖಲೆ ಹೇಳುವ ಮಾತು ಇದು. "ರಾಷ್ಟ್ರೀಯ ಸ್ವಯಂ ಸೇವಕ ಸಂಘ ಹಿಂದುಗಳ ಮಧ್ಯೆ ಭೌತಿಕ, ನೈತಿಕ, ಪ್ರೀತಿ, ಗುಣ ಮತ್ತು ಸೇವಾಭಾವನೆಯನ್ನು ಹರಡುವುದು ತನ್ನ ಗುರಿ ಎಂದು ಹೇಳಿತ್ತು. ಆದರೆ ಈ ಸಂಘದ ಸದಸ್ಯರಿಂದ ಅಪಾಯಕಾರಿ ಚಟುವಟಿಕೆಗಳು ನಡೆಸಲ್ಪಡುತ್ತಿವೆ. ಮದ್ದುಗುಂಡು, ನಿಷೇಧಿತ ಶಸ್ತ್ರಾಸ್ತ್ರ ಸಂಗ್ರಹ, ಬೇರೆಯವರ ಮನೆ-ಆಸ್ತಿಪಾಸ್ತಿಗಳಿಗೆ ಬೆಂಕಿ ಇಡುವುದು, ಭಯೋತ್ಪಾದನೆಯ ಮುಖಾಂತರ ಹಣ ಸಂಗ್ರಹಿಸಲು ಪ್ರಚೋದಿಸುವುದು, ಮಿಲಿಟರಿ ಮತ್ತು ಪೋಲಿಸ ವ್ಯವಸ್ಥೆಯನ್ನು ಬುಡಮೇಲ ಮಾಡಲುಯತ್ನಿಸುವುದೇ ಮುಂತಾದ ಕೃತಿಯಲ್ಲಿ ತೊಡಗಿದ್ದಾರೆ."

"ಆರ್‌ಎಸ್‌ಸ್' ಬಗ್ಗೆ ತುಂಬಾ ಸಹಾನುಭೂತಿ ಹೊಂದಿದ್ದ, ನೆಹರೂ ಇಚ್ಚೆಗೆ ವಿರುದ್ಧವಾಗಿ ಕಾಂಗ್ರೆಸ್ ಸೇರಲು ಸಂಘದ ಸದಸ್ಯರನ್ನು ಒಮ್ಮೆ ಆಮಂತ್ರಿಸಿದ ಸರದಾರ್ ವಲ್ಲಭಾಯಿ ಪಟೇಲರೇ ಕೊಟ್ಟ ಸರ್ಟಿಫಿಕೇಟ್ ಕೂಡ ಇಲ್ಲಿದೆ. ಅವರು ೧೧ ಸೆಪ್ಟೆಂಬರ್ ೧೯೪೮ ರಲ್ಲಿ ಗೋಲ್ವಲ್ಕರ್ ಅವರಿಗೆ ಬರೆದ ಪತ್ರದಲ್ಲಿ ಆರ್.ಎಸ್. ಹರಡುತ್ತಿರುವ ಕೋಮು ವಿಷದ ಬಗ್ಗೆ ಖಂಡಿಸುತ್ತ "ಆ ವಿಷದ ಪರಿಣಾಮವಾಗಿ ಮಹಾತ್ಮರ ಅಮೂಲ್ಯವಾದ ಜೀವನವನ್ನು ಕಳೆದುಕೊಳ್ಳಬೇಕಾಯಿತು" ಎನ್ನುತ್ತಾರೆ. "ಗಾಂಧೀ ಹತ್ಯೆಯ ನಂತರ ಕೆಲವು ಕಡೆ ಆರೆಸ್ಸೆಸ್‌ನವರು ಸಿಹಿತಿಂಡಿ ಹಂಚಿಕೊಂಡು ಸಂತೋಷ ದಿನಾಚರಣೆ ಅನುಭೋಗಿಸಿದರೆಂದು ತಿಳಿದ ಮೇಲಂತೂ ಜನರ ತಿರಸ್ಕಾರ ಅಧಿಕವಾಗಿ ಬೆಳೆದಿದೆ. ಆರ್‌ಎಸ್ ಎಸ್ ಬಗ್ಗೆ ಸರಕಾರಕ್ಕಾಗಲೀ, ಸಾರ್ವಜನಿಕರಿಕಾಗಲಿ ಒಂದು ಬಿಂದುವಿನಷ್ಟು ಸಹಾನುಭೂತಿ ಇಲ್ಲವಾಗಿದೆ". ಎಂದು ಹೇಳಿದ್ದಾರೆ.

ಅಂತಿಮವಾಗಿ ನನ್ನ ಮೇಲೆ 'ಬ್ರಾಹ್ಮಣ ದ್ವೇಷಿ' ಎಂಬ ಬ್ರಹ್ಮಾಸ್ತ್ರವನ್ನು ಪ್ರಯೋಗಿಸುತ್ತಿರಿ. ನಿಜಕ್ಕೂ ನಾನು ಒಂದು ಸಲ ದಂಗಾಗಿಬಿಟ್ಟೆ. ಈ ಬಾಣ ನನಗೇನೂ ಹೊಸದಲ್ಲ. ಆದರೆ

ಒಂದು ತಾತ್ವಿಕ ಹಿನ್ನೆಲೆಯಲ್ಲಿ ವಾದಿಸುವ, ಚಿಂತಿಸುವ ನೀವು ಈ ಮಟ್ಟಕ್ಕೆ ಇಳಿಯಬಹುದೆಂಬ ಊಹೆಯೂ ಇರಲಿಲ್ಲ.

ಒಬ್ಬ ಬ್ರಾಹ್ಮಣ ವೈದಿಕದ ಪ್ರತಿಗಾಮಿತನ ಮತ್ತು ಮೌಢ್ಯದ ಬಗ್ಗೆ ಹೇಳಿದರೆ ಅದು ಪ್ರಗತಿಪರ ವಿಚಾರವಾಗುತ್ತದೆ. ಆದರೆ ಅದನ್ನೇ ಒಬ್ಬ ಶೂದ್ರ ಹೇಳಿದರೆ, ಶೂದ್ರಪರ ಕೂಡ ಆಗದೆ, ನೇರ ಬ್ರಾಹ್ಮಣ ದ್ವೇಷವಾಗುತ್ತದೆ. ಅಲ್ಲವೇ? ಹಿಂದುಗಳ ದುರ್ದೈವವೆಂದರೆ ಇಲ್ಲಿ ಹುಟ್ಟುವ ಎಲ್ಲರೂ ಒಂದಲ್ಲಾ ಒಂದು ಜಾತಿಯಲ್ಲಿ ಹುಟ್ಟಬೇಕಾಗುತ್ತದೆ. ಬ್ರಾಹ್ಮಣರು ಆ ಜಾತಿಯಲ್ಲಿ ಹುಟ್ಟಿದ್ದಕ್ಕಾಗಿ ಇತರರಂತೆ ತಮ್ಮ ಜಾತಿ, ಸಮಾಜದ ನೀತಿ, ಆಚರಣೆಗಳನ್ನು ಬಾಲ್ಯದಿಂದಲೇ ಕಲಿಯುತ್ತಾರೆ. ಅಥವಾ ಕಲಿಸಲ್ಪಡುತ್ತಾರೆ. ಮುಂದೆ ಅವರು ಪ್ರಗತಿಪರ ವಿಚಾರವನ್ನು ಬೆಳೆಸಿಕೊಂಡರೆ ತಮ್ಮ ಜಾತಿಯ ಮೌಢ್ಯದ ವಿರುದ್ಧವಾಗಿ ಹೋರಾಡುತ್ತಾರೆ. (ಇದು ಅವರ ಕರ್ತವ್ಯ ಕೂಡಾ) ಹಾಗೆ ಆ ಬಲೆಯಿಂದ ತಪ್ಪಿಸಿಕೊಳ್ಳಲಾಗದವರು ಒಳಗೊಳಗೇ ನರಳುತ್ತಾರೆ. (ಗತಾನುಗತಿಕರಿಗೆ ಇದಾವುದರ ಆತಂಕವೂ ಇಲ್ಲ. ಕೊಳಪೆಯಲ್ಲಿ ಮಲಗಿದ ಎಮ್ಮೆ. ಎಲ್ಲಾ ಮೇಲು ಜಾತಿಯವರಿಗೂ ಅನ್ವಯವಾಗುವ ವಿಚಾರ ಇದು). ಬ್ರಾಹ್ಮಣರನ್ನು ನಾನು ಹೇಗೆ ನೋಡುವೆನೊ ಹಾಗೇ ದಲಿತರು ನನ್ನನ್ನು ನೋಡಲು ಸಾಧ್ಯ. ಲೋಹಿಯ ಹೇಳಿದ ಮಾತು ಇದು: ಈ ದೇಶದಲ್ಲಿ ತನ್ನ ಜಾತಿಗಿಂತ ಮೇಲಿನವರಿಗೆ ಮುಗಿಯಲು ಕೈ ಇರುವಂತೆ ಕೆಳಗಿನವರನ್ನು ತುಳಿಯಲು ಕಾಲುಗಳಿವೆ. ನಾನೇನೂ ಬ್ರಾಹ್ಮಣ ದ್ವೇಷಿಯಲ್ಲ. ಸಮಾಜ ಸುಧಾರಕರಲ್ಲಿ ಬ್ರಾಹ್ಮಣರದ್ದೇ ಸಾಲುಶಿಖರಗಳಿವೆ ಎಂಬುದನ್ನು ನಾನು ಬಲ್ಲೆ.

ಅಂಬೇಡ್ಕರರು ನಡೆಸಿದ ಮಹಾಡ ಕೆರೆಯ ಚಳುವಳಿ ಎಲ್ಲರಿಗೂ ತಿಳಿದೇ ಇದೆ. ಮಹಾರಾಷ್ಟ್ರದ ಮಹಾಡ ಕೆರೆ ಸಾರ್ವಜನಿಕವಾದುದು. ಆದರೆ ಅಸ್ಪೃಶ್ಯರಿಗೆ ಅದರನೀರನ್ನು ಮುಟ್ಟಲು ಬಿಡುತ್ತಿರಲಿಲ್ಲ. ಇದನ್ನು ಪ್ರತಿಭಟಿಸುವ ಸಲುವಾಗಿ ಡಾ. ಅಂಬೇಡ್ಕರ ದೊಡ್ಡ ಚಳುವಳಿ ನಡೆಸುತ್ತಾರೆ. ಆಗ ಕೆಲವರು ಈ ಚಳುವಳಿಯಲ್ಲಿ ಬ್ರಾಹ್ಮಣರನ್ನು ಸೇರಿಸಿಕೊಳ್ಳಬಾರದು ಎನ್ನುತ್ತಾರೆ. ಅದಕ್ಕೆ ಡಾ. ಅಂಬೇಡ್ಕರ, "ಬ್ರಾಹ್ಮಣರೆಲ್ಲರೂ ನಿಮ್ಮವರ್ಗದ ಜನರ ಶತ್ರುವಲ್ಲ ನಾನು ಅಸ್ಪೃಶ್ಯತೆಯನ್ನು ಪೋಷಿಸುವ ಬ್ರಾಹ್ಮಣ್ಯವನ್ನು ವಿರೋಧಿಸುತ್ತೇನೆಯೇ ಹೊರತು ಬ್ರಾಹ್ಮಣರನ್ನಲ್ಲ. ಅನೇಕ ಬ್ರಾಹ್ಮಣೇತರರಲ್ಲಿಯೂ ಬ್ರಾಹ್ಮಣ್ಯ ಮನೆ ಮಾಡಿಕೊಂಡಿದೆ. ಅಂಥವರು ಬ್ರಾಹ್ಮಣರಿಗಿಂತ ಅಪಾಯಕಾರಿ" ಎನ್ನುತ್ತಾರೆ. ನನ್ನ ವೈಚಾರಿಕತೆಯ ಮತ್ತು ವ್ಯವಹಾರದ ಹೃದ್ಗತ ವಿಚಾರ ಇದು.

ಒಂದು ಮಾತನ್ನು ಗಮನಿಸಿ, ನಮ್ಮಲ್ಲಿ ಪ್ರಜಾಪ್ರಭುತ್ವವೆನ್ನುವುದು ಹೊಸ ಪ್ರಯೋಗ. ಅದರಲ್ಲೂ ಭಾರತ ಬಹು ಧರ್ಮಗಳ ಬೀಡು. ಬಹು ಸಂಸ್ಕೃತಿ ಭಾಷೆಗಳ ನಾಡು. ಸಮಾನತೆಯ ಆಶಯ ಮತ್ತು ಸೆಕ್ಯುಲರ್ ನೀತಿಯಿಂದ ಈ ಪ್ರಜಾಪ್ರಭುತ್ವವನ್ನು ನಾವು ದಕ್ಕಿಸಿಕೊಂಡರೆ ಜಗತ್ತಿನಲ್ಲೇ ಒಂದು ಅದ್ಭುತ ಪ್ರಯೋಗ ಮತ್ತು ಸಿದ್ಧಿ ಆಗುತ್ತದೆ. **ಇಂಗ್ಲೆಂಡ್ ಪ್ರಜಾಪ್ರಭುತ್ವದ ತೌರು ಆಗಿರಬಹುದು; ಆದರೆ ಭಾರತ ಪ್ರಜಾಪ್ರಭುತ್ವದ ತೊಟ್ಟಿಲು** ಎಂದಾಗುತ್ತದೆ. ಇದು ಆಶಯ. ನನ್ನ ಬಗ್ಗೆ ನಾನು ಹೇಳಿಕೊಳ್ಳುವುದು ಅತ್ಯಂತ ಮುಜುಗರದ ವಿಷಯ.

ನಮ್ಮ ಜಿಲ್ಲೆಯ ಬರಹಗಾರರ ಬಗ್ಗೆ ಬ್ರಾಹ್ಮಣ ಬ್ರಾಹ್ಮಣೇತರ ಎಂಬ ಭೇದ ಮಾಡದೆ ವ್ಯಾಪಕವಾಗಿ ಬರೆದಿದ್ದೇನೆ. ನನ್ನ ಸ್ನೇಹಿತರಲ್ಲಿ ಅತ್ಯಂತ ಆತ್ಮೀಯರಾದವರು ಬ್ರಾಹ್ಮಣರಲ್ಲೂ ಇದ್ದಾರೆ.

ನಾನು ಆರೆಸ್ಸೆಸ್ ಪ್ರತಿಪಾದಿಸುವ ಹಿಂದುತ್ವದ ಗುಣಗಳಾದ ಶ್ರೇಣಿಕೃತ ಜಾತಿಯ ಅಸಮಾನತೆ, ಅಂದರೆ ಪುರುಷ ಸೂಕ್ತದ ಚಾತುರ್ವಣ ಆದರ್ಶವೆನ್ನುವ, ಲಕ್ಷಾಂತರ ಯಹೂದಿಗಳನ್ನು ಆರ್ಯಶ್ರೇಷ್ಠತೆಯ ಹೆಸರಿನಲ್ಲಿ ಕೊಲ್ಲಿಸಿದ ಹಿಟ್ಲರ್‌ನನ್ನು ಮಾದರಿ ಎನ್ನುವ, ಮುಸ್ಲಿಂ, ಕಿಶ್ಚನ್‌ರನ್ನು ಜನಾಂಗೀಯವಾಗಿ ದ್ವೇಷಿಸುವ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಲ್ಲದ, ಹಿಂದೂ ಸಾಮ್ರಾಜ್ಯ, ಸಂಸ್ಕೃತ ರಾಷ್ಟ್ರಭಾಷೆ ಇತ್ಯಾದಿಗಳ ಕನಸು ಕಾಣುವ, ಅಫಘಾನಿಸ್ಥಾನದಲ್ಲಿಯ ತಾಲಿಬಾನಿನ ಎಲ್ಲ ಗುಣಗಳನ್ನ ಹೊಂದಿದ ಆರ್.ಎಸ್.ಎಸ್. ಪ್ರಣೀತ ಹಿಂದುತ್ವದ ಅಪಾಯದ ಬಗ್ಗೆ ಹೇಳುತ್ತ ಹಿಂದೂ ಧರ್ಮದಲ್ಲಿಯೇ ಇರುವ ಸಹಿಷ್ಣುತೆ, ಉದಾರತೆ, ಸೌಹರ್ದತೆ ಇತ್ಯಾದಿ ಗುಣವನ್ನು ಎತ್ತಿ ಹಿಡಿದೇ ಸೆಕ್ಯುಲರಿಸಂನ್ನು ಪ್ರತಿಪಾದಿಸುತ್ತಿದ್ದರೆ, ನನ್ನನ್ನು ಅರಬಸ್ತಾನಕ್ಕೊ, ಪಾಕಿಸ್ತಾನಕ್ಕೊ ಕಳಿಸಲುಮುಂದಾಗಿದ್ದೀರಿ. ಗೋದ್ರಾದಲ್ಲಿ ಸತ್ತವರೆಲ್ಲ ಶೂದ್ರರು ಎಂದು ಪ್ರಸ್ತಾಪಿಸಿದ್ದು ಬ್ರಾಹ್ಮಣರು ಸಾಯಬೇಕಿತ್ತು ಎಂಬ ಕಾರಣಕ್ಕಲ್ಲ, ಸತ್ತವರಲ್ಲಿ ಜಾತಿ ಎಣಿಸಲಿಕ್ಕಲ್ಲ. ಅದು ಎರಡು ಕಾರಣಕ್ಕಾಗಿ. 'ಹಿಂದುತ್ವದ ಸ್ಥರದಲ್ಲಿ ಈಗಲೂ ಶೂದ್ರರು ಸೇವೆ ಮಾಡುವುದರಲ್ಲೇ ಸಾಯುವ ಪರಿಯಲ್ಲಿ ಇದ್ದಾರೆ ಎಂದು ಚಾತುರ್ವಣವನ್ನು ಗುಪ್ತವಾಗಿ ಜಾರಿಯಲ್ಲಿಟ್ಟ ಆರ್.ಎಸ್.ಎಸ್.ನ ಹಿಂದುತ್ವದ ನೀತಿಯನ್ನು ಬಯಲು ಮಾಡಲು ೨. ಮಹಾರಾಷ್ಟ್ರದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್.ಎಸ್.ಎಸ್.) ವನ್ನು ಹುಟ್ಟುಹಾಕುವ ಸಂದರ್ಭದಲ್ಲಿ ಮುಸಲ್ಮಾನರನ್ನು ತರಿದು ಹಾಕಲು ಇನ್ನು ಇತರ ಜಾತಿಗಳ ಸಹಾಯವನ್ನು ನಂಬಲಿಕ್ಕಾಗದು. ಆದ್ದರಿಂದ ನಾವೇ ಸಂಘಟಿತರಾಗಬೇಕು ಎಂದು ಎಣಿಸಲಾಗಿತ್ತು. ಯಾಕೆಂದರೆ ಆಗ ಅಲ್ಲೂ ಬ್ರಾಹ್ಮಣ ವಿರೋಧಿ, ದಲಿತ ಚಳುವಳಿಗಳು ಪ್ರಬಲವಾಗಿದ್ದವು. ಆದರೆ ಈಗ ಕೇವಲ ಅದು ಬ್ರಾಹ್ಮಣ ಸಂಘಟನೆಯಾಗಿ ಉಳಿದಿಲ್ಲ. (ಅದು ಬ್ರಾಹ್ಮಣರೇ ಸಂಘಟಿಸಿದ ಸಂಘಟನೆಯಾದರೂ ಆಗಲೂ ಎಲ್ಲ ಬ್ರಾಹ್ಮಣರೂ ಅದನ್ನು ಸೇರಿರಲಿಲ್ಲ). ಈಗ ಅದರಲ್ಲಿ ಶೂದ್ರರೂ ದೊಡ್ಡ ಸಂಖೆಯಲ್ಲಿ ಸೇರಿದ್ದಾರೆ ಎಂದು ತೋರಿಸಲು, ಅಷ್ಟೆ. ಮೂಲಭೂತವಾದ ಯಾವ ಧರ್ಮದ್ದೇ ಆದರೂ ಖಂಡನಾರ್ಹವೇ ಅದರಲ್ಲೂ ಕೋಮುವಾದವೆಂಬುದು ಸಾರ್ವತ್ರಿಕವಾಗಿ ಖಂಡನೆಗೆ ಪಕ್ಕಾಗಿರಬೇಕಾದುದು, ನಾನೇನೂ ಮುಸ್ಲಿಂ ಕೋಮುವಾದವನ್ನು ಎತ್ತಿಹಿಡಿದಿಲ್ಲ. ಗೋದ್ರದಲ್ಲಿ ಜಿಲ ಜನರನ್ನು ಸುಟ್ಟುಹಾಕಿದ ಕೋಮುವಾದಿಗಳಿಗೆ ಶಿಕ್ಷೆಯಾಗಬೇಕಾದುದು ಅವಶ್ಯವಾದುದು. ಆದರೆ ಬಹುಸಂಖ್ಯಾತರ ಕೋಮುವಾದ ಹೆಚ್ಚು ಅಪಾಯಕಾರಿ. ಅದರಲ್ಲಿಯೂ ಸರಕಾರವೇ ಕೋಮುವಾದಿಯಾಗುವುದು ತೀರಾ ಅಪಾಯಕಾರಿಯಾದುದು ಎಂಬುದು ಗುಜರಾತದ ಮುಂದಿನ ಘಟನೆಯೇ ಸಾರಿ ಹೇಳುತ್ತದೆ. ರೈಲಿಗೆ ಬೆಂಕಿ ಹಚ್ಚಿದವರನ್ನು ಹಿಡಿಯ ಶಿಕ್ಷಿಸುವುದು ಸರ್ಕಾರದ ಕರ್ತವ್ಯವಾಗಿತ್ತು. ಆದರೆ ಸರಕಾರ ಮುಸ್ಲೀಮರನ್ನು ಕೊಲ್ಲಲು ತಾನೇ ಮುಂದಾಗಿದೆ. ಪಾಕಿಸ್ತಾನ ಮತ್ತು ಬಾಂಗ್ಲಾದಲ್ಲೂ ಆರ್.ಎಸ್.ಎಸ್. ನಂತಹದೆ ಮುಸ್ಲಿಂ ಸಂಘಟನೆಗಳಿವೆ. ಅಲ್ಲಿಯೂ

ಇಲ್ಲಿಯಂತೆಯೇ ಕೋಮುವಾದ ಬಲವಾಗುತ್ತಲೇ ಇದೆ. ಆದರೆ ಅಲ್ಲಿ ಸೆಕ್ಯುಲರ್ ಮನೋಭಾವದವರು ಕೋಮು ಸೌಹಾರ್ದತೆ ಸಾರುವವರು ಇಲ್ಲವೆಂದು ತಿಳಿಯಬೇಡಿ. ಬಾಂಗ್ಲಾದ ಲೇಖಕಿ ತಸ್ಲೀಂ ಅವರು ಒಂದು ಹಿಂದು ಕುಟುಂಬ ಕೋಮು ದೌರ್ಜನ್ಯಕ್ಕೆ ಗುರಿಯಾದ ವಸ್ತುವಿನ ಮೇಲೆ 'ಲಜ್ಜಾ' ಎಂಬ ಕಾದಂಬರಿ ಬರೆದುದಕ್ಕಾಗಿ ದೇಶ ಬಿಡಬೇಕಾದ ಪ್ರಸಂಗ ಬಂದರೂ ಶರಣಾಗಲಿಲ್ಲ ಎಂಬುದನ್ನು ನೆನಪಿಡಿ. ಇನ್ನು ನಾನು ಬ್ರಾಹ್ಮಣದ್ವೇಷಿ ಅಲ್ಲವೆಂದು ಸಿದ್ಧಮಾಡಲು ಆರೆಸ್ಸೆಸ್ ಪ್ರಣೀತವಾದ 'ಹಿಂದುತ್ವ'ವನ್ನು ಒಪ್ಪಿಕೊಳ್ಳಬೇಕು ಎಂದು ನೀವು ಹೇಳುವಿರಾದರೆ ಅದಕ್ಕಿಂತ ನನಗೆ 'ಬ್ರಾಹ್ಮಣ ದ್ವೇಷಿ' ಎಂಬ ಬಿರುದೇ ಪ್ರಿಯವಾದುದು.

ಆಕರ ಗ್ರಂಥ

೧. ಚಿಂತನ ಗಂಗಾ (ಬಂಚ್ ಆಫ್ ಥಟ್‌ನ ಅನುವಾದ)

೨. ಪಂಜು, ಪ್ರೊ ರಾವಸಾಹೇಬ ಕಸಬೆ ಕನ್ನಡ ದತ್ತಾತ್ರೇಯಪೂಜಾರಿ ೧೯೮೨.

೩. ಕ್ರಾಂತಿಕಾರ ಡಾ: ಅಂಬೇಡ್ಕರ; ದೇ. ಜವರೇಗೌಡ, ೧೯೮೨.

೪. ಡಾ. ಬಾಬಾಸಾಹೇಬ ಅಂಬೇಡ್ಕರ್ ಬರಹಗಳು ಸಂಪುಟ ೨, ೧೯೯೪.

೫. ಧರ್ಮ ನಿರುಪೇಕ್ಷತೆ ಮತ್ತು ಅಲ್ಪಸಂಖ್ಯಾತರು. ಡಾ. ಬದರಿನಾಥ ಕೆ. ರಾವ್ ೨೦೦೨.

೬. ಕೋಮುವಾದದ ರಾಜಕೀಯ ಮಹ್ಮದ ಕಟ್ಟಾಡಿ, ಕೆ. ಫಣಿರಾಜ ಮತ್ತು ಜಿ. ರಾಜಶೇಖರ.

೭. What is this Hindu Rastra; Sitaram Yechuri 1993.

೮. The R.S.S. and the B.J.P. - A.G. Noorani, 2000.

೯. Social Justice and the constitutuion Edited by Ajit Bhattacharjee 1977.

✱

'ಬಂಡಾಯ ಸಾಹಿತ್ಯ ಸಂಘಟನೆ'ಯ ಕುರಿತು ಒಂದಿಷ್ಟು ಚಿಂತನೆ

೧೯೭೦ನೇ ದಶಕವೆಂದರೆ ಒಂದು ಬಗೆಯ ಜಾಗ್ರತಿಯ ದಶಕ ಎನ್ನಬಹುದು. ರೈತ ಚಳವಳಿ, ಕಾರ್ಮಿಕ ಚಳವಳಿ, ದಲಿತ ಚಳವಳಿ, ರಾಜಕೀಯ ಚಳವಳಿಯೇ ಮೊದಲಾದವು ಕಾಣಿಸಿಕೊಂಡ ದಶಕ. ಅದೇ ಹೊತ್ತಿಗೆ ೧೯೭೯ರಲ್ಲಿ ಬಂಡಾಯ ಸಾಹಿತ್ಯ ಸಂಘಟನೆ ಹುಟ್ಟಿಕೊಂಡಿತು. ಅದು ದೃಶ್ಯಾತ್ಮಕವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಪಟ್ಟಭದ್ರ ಹಿತಾಸಕ್ತರ ವಿರುದ್ಧವೋ, ನವ್ಯ ಸಾಹಿತ್ಯ ಪರಂಪರೆಯ ಪ್ರತಿಭಟನಾತ್ಮಕವೂ ಹುಟ್ಟಿತ್ತೆಂಬಂತೆ ಕಾಣುವುದಾದರೂ ಆ ದಶಕದ ಸಾಮಾಜಿಕ ಸಂಚಲನೆಯ ಒಳ ಒತ್ತಡದಿಂದಲೇ ಹುಟ್ಟಿಬಂದುದು ಅದರ ನಿಜಸ್ವರೂಪವಾಗಿದೆ.

ಹಾಗೆ ಹುಟ್ಟಿಕೊಂಡ ಬಂಡಾಯ ಸಾಹಿತ್ಯ ಸಂಘಟನೆ ಕೇವಲ ಸಾಹಿತ್ಯ ನಿರ್ಮಿತಿಯ ಜನಪರ ಕಾಳಜಿಯನ್ನೊಳಗೊಂಡದ್ದಾಗಿರದೆ ಇಡಿಯಾಗೇ ಜನಪರವಾದ ಸಾಂಸ್ಕೃತಿಕ ಕಾಳಜಿಯ ಅಭಿವ್ಯಕ್ತಿಯಾಗಿ ಮುಂದುವರಿಯಿತು. "ಶೋಷಿತ ಜನತೆಯ ಪರವಾದ ನಿಲುವುಗಳನ್ನು ಸಾಂಸ್ಕೃತಿಕ ಕ್ಷೇತ್ರದಲ್ಲಿ ಭದ್ರವಾಗಿ ನೆಲೆಗೊಳಿಸುವುದು ನಮ್ಮ ಮುಖ್ಯ ಗುರಿಗಳಲ್ಲೊಂದಾಗಬೇಕು. ನಮ್ಮ ಹೋರಾಟ ಪ್ರಧಾನವಾಗಿ ಸಾಂಸ್ಕೃತಿಕ ಕ್ಷೇತ್ರಕ್ಕೆ ಸಂಬಂಧಿಸಿದ್ದು ದೇಶದ ರಾಜಕೀಯ ಮತ್ತು ಸಾಂಸ್ಕೃತಿಕ ಸಂದರ್ಭಗಳು ಪರಸ್ಪರ ಸಂಬಂಧ ಉಳ್ಳವು ಎಂಬ ನಿಲುವಿನಿಂದ ಹೊರಟದ್ದು ಸಾಹಿತಿಗೆ ಸಾಮಾಜಿಕ, ರಾಜಕೀಯ ಪ್ರಜ್ಞೆ ಇರಬೇಕೆಂಬ ಆಶಯ ಇಲ್ಲಿ ಮುಖ್ಯವಾದದ್ದು. ಅಸ್ಪೃಶ್ಯತೆ, ಜಾತಿ ಪದ್ಧತಿ ಮತ್ತು ಲಿಂಗಭೇದ ನೀತಿಯ ವಿರುದ್ಧ ಹೋರಾಟವನ್ನು ಕಟ್ಟುವುದು ನಮ್ಮ ಉದ್ದೇಶಗಳಲ್ಲಿ ಒಂದು. ಎಲ್ಲ ಜನಪರ ಒಲವುಗಳಿಗೆ ನಮ್ಮ ಬೆಂಬಲ ಜನಪರವಾದ ಸಾಂಸ್ಕೃತಿಕ ಹೋರಾಟ ನಮ್ಮ ಮುಖ್ಯ ನೆಲೆ. ಇಂಥ ಒಲವಿನ ಸಾಹಿತ್ಯ ಸೃಷ್ಟಿ ಹೋರಾಟದ ಮುಖ್ಯ ದಾಖಲೆ' (ಬಂಡಾಯ ಸಾಹಿತ್ಯ ಸಂಘಟನೆ ಪ್ರಣಾಳಿಕೆಯ ಮತ್ತು ಸಂವಿಧಾನ ೧೯೮೭) ಹೀಗೆ ಹೊರಟ ಸಂಘಟನೆ ಒಂದು ಆಂದೋಲನದಂತೆ ಕೆಲಸ ಮಾಡಿತು. ವ್ಯಕ್ತಿಕೇಂದ್ರಿತವಾದ ಸಾಂಸ್ಕೃತಿಕ ನಿಲುವನ್ನು ಸಮಾಜ ಕೇಂದ್ರಿತ (ಮಾನವೀಯ ಕೇಂದ್ರಿತ) ನಿಲುವನ್ನಾಗಿ ಮಾರ್ಪಡಿಸುವುದರಲ್ಲಿ ಗಣನೀಯವಾಗಿ ಶ್ರಮಿಸಿತು ಮತ್ತು ಅದು ತನ್ನ ಪ್ರಭಾವವನ್ನು ಕಿರಿಯರ ಮೇಲಷ್ಟೆ ಕೆಡಹಿದ್ದಲ್ಲ ಹಿರಿಯ ಲೇಖಕರು ಕೂಡಾ ತಿದ್ದಿಕೊಳ್ಳುವಂತೆ ಆದುದಕ್ಕೆ ೮೦ರ ದಶಕದ ನಂತರದ ಸಾಹಿತ್ಯ ಸಾಕ್ಷಿಯಾಗಿದೆ. ಈ ಪರಿವರ್ತನೆಯೊಡನೆ ಬಂಡಾಯ ಸಾಹಿತ್ಯ ಸಂಘಟನೆಯ

ಮೊದಲ ಪ್ರಕಟನೆ 'ಜನವಾಹಿನಿ' ೧೫-೬-೨೦೦೧

ಮೊದಲಿನ ಹೋರಾಟದ ಕಾವು ಮಂದಗೊಳ್ಳುತ್ತ ಬಂದು ಅದು ಸ್ಥಗಿತಗೊಂಡಿದೆ ಎಂಬಂಥ ಸ್ಥಿತಿಗೆ ಬಂತು. ಇದಕ್ಕೆ ಅನೇಕ ಕಾರಣಗಳನ್ನು ಹೇಳಲಾಗುತ್ತದೆ. ಇವುಗಳಲ್ಲಿ ಮುಖ್ಯವಾದುದು ಮುಂದಾಳುಗಳು ನಿಷ್ಕ್ರಿಯರಾದದ್ದು ಮತ್ತು ಸರಕಾರದೊಡನೆ ರಾಜಿಯಾಗಿ ಪ್ರಮುಖಸ್ಥಾನ ಪಡೆದರು. ಹೀಗಾಗಿ ಸಂಘಟನೆ ಸ್ಥಗಿತವಾಯಿತು ಎಂಬುದು ಈ ಹೇಳಿಕೆ ಅಥವಾ ವಿಮರ್ಶೆಯ ರೀತಿ ಬಂಡಾಯ ಪ್ರಣಾಳಿಕೆಗೆ ವಿರುದ್ಧ ವಾದ ವ್ಯಕ್ತಿ ಕೇಂದ್ರಿತ ನಿಲುವಿನಿಂದ ಹೊರಟಿದ್ದು. ಮೇಲು ಪದರಿನಲ್ಲಿ ಹೀಗೆ ಕಾಣಲು ಸಾಧ್ಯವಾದರೂ ಇದು ವಸ್ತುನಿಷ್ಠ ವಿವರಣೆ ವಿಶ್ಲೇಷಣೆ ಆಗುವುದಿಲ್ಲ. ಕಳೆದ ದಶಕದಲ್ಲಿ ನಡೆದ ಎಡಪಂಥೀಯ ಮೇಲಿನೆಲ್ಲಾ ಚಳವಳಿಗಳೂ ತನ್ನ ಪ್ರಖರತೆಯನ್ನು ಕಳೆದುಕೊಂಡದ್ದು ಯಾಕೆ ಎಂಬುದನ್ನು ಚಾರಿತ್ರಿಕವಾಗಿಯೇ ನೋಡ ಬೇಕಾಗುತ್ತದೆ. ಸಾಂಸ್ಕೃತಿಕ ಸಂದರ್ಭಕ್ಕೂ ರಾಜಕೀಯ ಸಂದರ್ಭಕ್ಕೂ ಇರುವ ಸೂಕ್ಷ್ಮ ಸಂಬಂಧದ ವಿಶ್ಲೇಷಣೆ ಬೇಕಾಗುತ್ತದೆ. ಆದರಂತೆ ಸಂಘಟನೆ ವ್ಯಕ್ತಿ ಕೇಂದ್ರಿತ ನಿಲುವು ಹೊಂದಿದ್ದಾಗಿರಲಿಲ್ಲ ಎಂಬುದು ಮುಖ್ಯ. ಒಂದು ವೇಳೆ ಈ ರೀತಿ ವಿವರಿಸುವುದಾದರೂ ಉಳಿದವರಲ್ಲಿ ಕ್ರಿಯಾಶೀಲತೆ ಇದ್ದಿರಲಿಲ್ಲವೆ? ಅವರಿಗೆ ಮುಂದಾಳುತನ ನೀಡಲು ಏನು ಅಡ್ಡಿ ಇತ್ತು ಎಂಬುದನ್ನು ಗಮನಿಸಬೇಕಾಗುತ್ತದೆ. ಇದರೊಟ್ಟಿಗೆ ನೇತಾರರಿಗೆ ಅವರದೇ ಆದ ಸಾಮರ್ಥ್ಯ, ಪ್ರಭಾವ, ಇರುವುದರಿಂದ ಅವರು ತನಗೆ ತಾವಾಗೇ, ತೆಗೆದುಕೊಳ್ಳಬೇಕಾದ ಜವಾಬ್ದಾರಿ ನಡವಳಿಕೆಯ ಬಗ್ಗೆ ಗಂಭೀರವಾದ ನಿಲುವು ಇರಬೇಕಾಗಿರುವುದು ಅಪೇಕ್ಷಣೀಯವೆ. ಅದೇನೇ ಇದ್ದರೂ ಅದರ ವಿವರಣೆ ಇಲ್ಲಿಯ ಉದ್ದೇಶವಲ್ಲ. ಆದರೆ ಜೂನ್ ೧೦, ೨೦೦೧ ರಂದು ಬೆಂಗಳೂರಿನಲ್ಲಿ 'ಬಂಡಾಯ ಸಾಹಿತ್ಯ ಸಂಘಟನೆ'ಯ ಪುನಶ್ಚೇತನದ ಸಭೆ ನಡೆದ ಹಿನ್ನೆಲೆಯಲ್ಲಿ ಮತ್ತೆ ಸಂಘಟನೆಯ ಅವಶ್ಯಕತೆ ಯಾಕೆ ಎನ್ನುವುದು ಒಂದು ಧನಾತ್ಮಕವಾದ ಅವಲೋಕನ ಇಲ್ಲಿಯ ಉದ್ದೇಶ.

ಬಂಡಾಯ ಸಾಹಿತ್ಯ ಸಂಘಟನೆ ಎಲ್ಲಾ ಎಡಪಂಥೀಯ ಸಾಂಸ್ಕೃತಿಕ ಆಶಯ ಹೊಂದಿದ ಸಂಘಟನೆ ಎಂಬುದು ಮುಖ್ಯವಾದುದು. ಅಲ್ಲದೆ ಅದು ದೇಶದ ರಾಜಕೀಯ ಪರಿಸ್ಥಿತಿಯೊಡನೆ ಸಂಬಂಧ ಉಳ್ಳದ್ದು ಎಂಬುದೂ ಬಹಳ ಮಹತ್ವದ್ದು. ಆದ್ದರಿಂದ ಇಂದಿನ ರಾಜಕೀಯ ಮತ್ತು ಸಾಂಸ್ಕೃತಿಕ ಸಂಬಂಧ ಎಂತಹದು ಎಂಬುದು ಮತ್ತು ಅದು ಕೇವಲ ಕವಿ-ಕಲಾವಿದರಿಗೆ ಮಾತ್ರ ಸಂಬಂಧಿಸಿದ್ದು ಎನ್ನುವುದಾಗಿರದೆ ಜನಪರ ಕಾಳಜಿಯ ಎಲ್ಲ ಬುದ್ಧಿ ಜೀವಿಗಳ, ಅವರು ಯಾವುದೇ ಸೈದ್ಧಾಂತಿಕ ಹಿನ್ನೆಲೆ ಯವರಾಗಿದ್ದರೂ ಅವರ ಜವಾಬ್ದಾರಿಗೆ ಸಂಬಂಧಿಸಿದ್ದು ಆಗಿರಬೇಕಾದುದು ಇಂದಿನ ಸಂದರ್ಭದ ಒತ್ತಾಯವಾಗಿದೆ.

ಉಲ್ಬಣಗೊಂಡ ಕೋಮುವಾದ

ಇಂದು ನಮ್ಮೆದುರು ಕೋಮುವಾದ ಪೆಡಂಭೂತದ ಹಾಗೆ ಎದ್ದು ನಿಂತಿದೆ ಎಂಬುದನ್ನು ಗಮನಿಸಬೇಕು. ಈ ಕೋಮುವಾದಕ್ಕೂ ರಾಜಕೀಯ ಬೆಳವಣಿಗೆಗೂ ಇರುವ ಒಳ ಸಂಬಂಧವನ್ನು ಹೀಗೆ ವಿವರಿಸಲಾಗುತ್ತದೆ. 'ರಾಜಕೀಯ ಅಧಿಕಾರಕ್ಕಾಗಿ ಒಂದು ಧರ್ಮದ ಅನುಯಾಯಿಗಳನ್ನು ಇನ್ನೊಂದು ಧರ್ಮದ ವಿರುದ್ಧ ಎತ್ತಿ ಕಟ್ಟುವುದು ಮತ್ತು ಬಹುಸಂಖ್ಯಾತರ

ಸಂಸ್ಕೃತಿಗೆ ಅಲ್ಪಸಂಖ್ಯಾತರು ಹೊರಗಿನವರು ಎಂದು ವಾದಿಸಿ ಅವರ ಬಗ್ಗೆ ದ್ವೇಷ ತಿರಸ್ಕಾರಗಳನ್ನು ಬೆಳೆಸುವುದು ಕೋಮುವಾದ' (ಜಿ. ರಾಜಶೇಖರ, ಕೆ, ಫಣಿರಾಜ ಮತ್ತು ಫಕೀರ ಮಹಮ್ಮದ್ ಕಟ್ಪಾಡಿ, ಕೋಮುವಾದದ ರಾಜಕೀಯ ೨೦೦೦) ಇದು, ಬಾಬರಿ ಮಸೀದಿ ಧ್ವಂಸದಲ್ಲಿ ಒಂದು ರಾಜಕೀಯ ಸಾಧನೆಯ ಹಂತಕ್ಕೆ ತಲುಪಿತಾದರೆ, ಇದರಿಂದ ಕೇಂದ್ರ ಸರಕಾರದಲ್ಲಿ ಅಧಿಕಾರವನ್ನು ಹಿಡಿದ ಸಂಘ ಪರಿವಾರ ಬೆಂಬಲಿತ ಬಿಜೆಪಿ ಮುಖ್ಯವಾಗಿ ಸಾಂಸ್ಕೃತಿಕ ನೆಲೆಯಲ್ಲಿ ತನ್ನ ವಿದ್ವೇಷಕ ವಿಷವನ್ನು 'ಹಿಂದುತ್ವ' ಎನ್ನುವುದರ ಮುಖಾಂತರ ಹರಡುತ್ತಿದೆ. 'ಹಿಂದುತ್ವ' ಈಗ ಕೇವಲ ನಗರದ ಸಮಸ್ಯೆಯಾಗಿರದೆ ಈ ನಗರಗಳ ಬೇರುಗಳಂತಿರುವ ಹಳ್ಳಿಯನ್ನು ವ್ಯಾಪಕವಾಗಿ ಪ್ರವೇಶಿಸಿದೆ. ಉದಾಹರಣೆಗೆ ಒಂದು ಹಳ್ಳಿ, ಇಲ್ಲಿ ಬ್ರಾಹ್ಮಣ, ನಾಮಧಾರಿ, ಭಂಡಾರಿ, ಗೌಡ, ಶೆಟ್ಟಿ ಇತ್ಯಾದಿ ಜನರಿದ್ದಾರೆ. ಗುಡ್ಡ ಬೆಟ್ಟಗಳಿಂದ ಕೂಡಿದ ಹಳ್ಳಿ. ಇಲ್ಲಿ ಈಗ ಆರ್.ಎಸ್.ಎಸ್‌ನ ಸ್ವಯಂ ಸೇವಕರ ಪ್ರವೇಶವಾಗಿದೆ. ಪ್ರತಿ ಜನವಸತಿಯಲ್ಲಿ ಕ್ಲಾಸು, ಕವಾಯತು ಶುರುವಾಗಿದೆ. ಅದು ಬ್ರಾಹ್ಮಣರನ್ನು ಮಾತ್ರ ತೆಕ್ಕೆಗೆ ತೆಗೆದುಕೊಂಡಿಲ್ಲ. ಶೂದ್ರ ಸಮುದಾಯವೆಲ್ಲವನ್ನೂ ತೆಗೆದುಕೊಂಡಿದೆ. ೧೯೨೫ರಲ್ಲಿ ಮಹಾರಾಷ್ಟ್ರದಲ್ಲಿ ಆರ್.ಎಸ್.ಎಸ್ ಪ್ರಾರಂಭವಾದಾಗ ಅಲ್ಲಿ ಬ್ರಾಹ್ಮಣ ವಿರೋಧಿ ಚಳವಳಿ ಪ್ರಬಲವಾಗಿ ನಡೆಯುತ್ತಿತ್ತು. 'ಕೆಳಜಾತಿಗಳವರು ಮೇಲು ಜಾತಿಗಳ ವಿರುದ್ಧ ತಿರುಗಿಬೀಳುವುದನ್ನು ನೋಡಿದರೆ ಮುಸ್ಲಿಂ ವಿಷಸರ್ಪಗಳನ್ನು ಸವರಿ ಹಾಕಲಿಕ್ಕೆ ಕೆಳಜಾತಿಯವರ ಸಹಕಾರ ನಿರೀಕ್ಷಿಸುವ ಹಾಗಿಲ್ಲ. ಕಾರಣದಿಂದ ನಾವು ಯಾರನ್ನು ನಂಬಿಕೂರದೆ ಸ್ವಂತದ ತಯಾರಿ ಮಾಡಿ ಮಾಡಿಕೊಳ್ಳಬೇಕಾಗಿದೆ' ಎಂದು ಆರ್.ಎಸ್.ಎಸ್‌ನ ಇನ್ನೊಬ್ಬ ಸ್ಥಾಪಕ ನೇತಾರ ಕೆ.ಬಿ. ಹೆಡ್ಗೇವಾರ ಹೇಳಿದ್ದರು. (ಪೂರ್ವೋಕ್ತ, ಪುಟ. ೧೩) ಅಂದರೆ ಪ್ರಾರಂಭದಲ್ಲಿ ಈ ಆರ್.ಎಸ್.ಎಸ್. ಪೂರ್ತಿಯಾಗಿ ಬ್ರಾಹ್ಮಣ ಸಂಘಟನೆಯೇ ಆಗಿ ಅಸ್ತಿತ್ವದಲ್ಲಿ ಬಂತು. ಆದರೆ ಈಗ ಅದು ಇಡೀ ಶೂದ್ರ ಸಮಾಜದಲ್ಲೂ ಭದ್ರವಾಗಿ ಕಾಲೂರುತ್ತಿದೆ. ಹಾಗಂತ ಎಲ್ಲಕಡೆಯ ಬ್ರಾಹ್ಮಣರು ಇದನ್ನು ಒಪ್ಪಿಕೊಂಡಿದ್ದಾರೆ ಎಂದು ತಿಳಿಯಬಾರದು. ಪರಿಸರವಾದಿ ಚಳವಳಿ ನಮ್ಮ ಜಿಲ್ಲೆಯಲ್ಲಿ ಒಂದು ಕ್ರಿಯಾ ಶೀಲ ಚಳವಳಿ. ಅದು ಸ್ವಾಗತಾರ್ಹವಾದುದು ಕೂಡಾ ಹೌದು. ಇಲ್ಲಿಯ ಒಬ್ಬ ಸ್ವಾಮೀಜಿ ಪರಿಸರ ಸ್ವಾಮೀಜಿ ಎಂದೇ ಹೆಸರಾಗಿದ್ದಾರೆ. ಸಂಸ್ಕೃತ ತಿಳಿದವರು ಸುಸಂಸ್ಕೃತರು. ವೇದದಲ್ಲಿ ಭಾರತೀಯ ಸಂಸ್ಕೃತಿ ಇರುವುದು. ಇತ್ಯಾದಿ ಅವರ ಮಾತುಗಳನ್ನು, ಸಂಸ್ಕೃತ ಶಿಬಿರವೇ ಮೊದಲಾದ ಚಟುವಟಿಕೆಯನ್ನು ನೋಡಿದರೆ ಅವರ ಹಿಂದೆ 'ಹಿಂದುತ್ವ' ಹೆಪ್ಪುಗಟ್ಟಿರುವುದನ್ನು ನೋಡಬಹುದು. ಇದು ಎಂತಹ ಸೂಕ್ಷ್ಮವೆಂದರೆ ಪರಿಸರ ಸಂರಕ್ಷಣೆಯ ಬಗೆಗಿನ್ನು ಅವರ ಕಾಳಜಿ ಗೌರವಾರ್ಹವಾದುದು. ಆದರೆ 'ಹಿಂದುತ್ವ'ದ ಪ್ರತಿಗಾಮಿತನದ ಅಪಾಯವನ್ನು ಕಡೆಗಣಿಸಲಾಗದು. ಇಂಥ ಸಂಬಂಧಿಗಳ ಅಪಾಯದ ಸೂಕ್ಷ್ಮತೆ ಗೋಚರವಾಗು ವಂತಹದಲ್ಲ.

ಈಗಾಗಲೇ ಕೇಂದ್ರ ಸರಕಾರ ರೋಮಿಲಾ ಥಾಪರ್ ಶರ್ಮ ಮೊದಲಾದ ಜಾತ್ಯತೀತ ಮನೋಭಾವದ ಚರಿತ್ರಾ ಕಾರರನ್ನು ವಿದ್ಯಾ ಸಂಶೋಧನ ಇಲಾಖೆಯಿಂದ ತೆಗೆದು ಹಾಕಿದೆ. ಜ್ಯೋತಿಷ್ಯ, ಧಾರ್ಮಿಕ ಕರ್ಮಕಾಂಡವನ್ನು ವಿಶ್ವವಿದ್ಯಾಲಯದ ಪದವಿಗೆ ಅಧ್ಯಯನ

ವಿಷಯವನ್ನಾಗಿ ಮಾಡಹೊರಟಿದೆ. ಅಂದರೆ ನಮ್ಮ ಅಧ್ಯಯನ, ಸಂಶೋಧನೆ ಮತ್ತೆಲ್ಲ ಸಾಂಸ್ಕೃತಿಕ ಕ್ಷೇತ್ರವನ್ನು 'ಕೇಸರೀಕರಣ'ಗೊಳಿಸುವುದು ನಿಚ್ಚಳವಾಗಿದೆ. ಈಗ ಮಧುರೆಯ ಸಮೀಪದ ಕಡಲಿನಡಿಯಲ್ಲಿ ಗುರುತಿಸಲ್ಪಟ್ಟಿದೆ ಎನ್ನುವ ನಗರ ಸಿಂಧೂನದಿ ಆರ್ಯರಿಗೆ ಸಂಬಂಧಿಸಿದ್ದು ಎಂದು ಮುರಳಿ ಮನೋಹರ ಜೋಶಿ ಹೇಳಿಬಿಟ್ಟಿದ್ದಾರೆ! ಅಂದರೆ ಅವರಿಗೆ ಆದರಿಂದ ಸಿಂಧು ಸಂಸ್ಕೃತಿ ಬೇರೆಯದಲ್ಲ, ಆರ್ಯರದ್ದೇ ಎಂದು ಸಾಧಿಸಿ (ಇದು ಆರ್ಯ ಸಂಸ್ಕೃತಿ ಎಂಬ ಗ್ರಹೀತದೊಂದಿಗೆ) ಆರ್ಯರು ಹೊರಗಿನಿಂದ ಬಂದವರಲ್ಲ, ಮುಸ್ಲಿಮರು ಹೊರಗಿನವರು ಎಂಬುದನ್ನು ಸಾಧಿಸಿ, ನಮ್ಮ ಸ್ವಾತಂತ್ರ್ಯ ಹೋರಾಟ ೧೯ ಮತ್ತು ೨೦ನೇ ಶತಮಾನದ ಸಂಗತಿಯಲ್ಲ; ಐದು ಸಾವಿರ ವರ್ಷದಿಂದ ಶುರುವಾದುದು ಎಂಬುದನ್ನು ಸ್ಥಾಪಿಸಬೇಕಾಗಿದೆ.

ಹೀಗೆ ಸಾಧಿಸುವ, ಹರಡುವ ಜನಾಂಗೀಯ ದ್ವೇಷದ ಬಗ್ಗೆ ಜನ ಜಾಗ್ರತರಾಗಿ ಪ್ರತಿಭಟನೆಯಲ್ಲಿ ಕ್ರಿಯಾಶೀಲರಾಗದಿದ್ದರೆ ಜರ್ಮನ್‌ನಲ್ಲಿ ಹಿಟ್ಲರ್‌ನಿಂದ ಹೇಗೆ ಲಕ್ಷಾಂತರ ಯಹೂದಿಗಳನ್ನು ನಾಶ ಮಾಡಲು ಸಾಧ್ಯವಾಯಿತೋ ಇಲ್ಲಿಯೂ ಹಾಗೆ ಮುಸ್ಲಿಂ, ಕ್ರಿಶ್ಚಿಯನ್. ಹಾಗೆಯೇ ಹಿಂದುಗಳೊಳಗೆ ದಲಿತರನ್ನೊಳಗೊಂಡು ಯಾವ ಗಡಿರೇಖೆ ಯಿಲ್ಲದೆ ಎಡಪಂಥೀಯ ಬುದ್ಧಿ ಜೀವಿಗಳನ್ನು ಕೊಲ್ಲಲು ಸಾಧ್ಯವಾಗುವಂತಹ ಪರಿಸ್ಥಿತಿ ಉಂಟಾಗುತ್ತದೆನ್ನುವ ರಾಜಶೇಖರ ಮತ್ತು ಫಣಿರಾಜರ ಮಾತಿನಲ್ಲಿ ಯಾವ ಅನುಮಾನವೂ ಇಲ್ಲ.

ಎರಡನೆಯ ಮಹಾಭೂತ ಜಾಗತಿಕ ವ್ಯಾಪಾರಿ ಸಂಘಟನೆ (ಡಬ್ಲ್ಯೂಟಿಒ). ಮುಕ್ತ ಆರ್ಥಿಕ ನೀತಿಯ ದುಷ್ಫಲ ಈಗಲೇ ಕಾಣತೊಡಗಿದೆ. ಪ್ರತಿಯೊಂದಕ್ಕೂ ಭಾರತ ಆರ್ಥಿಕ ನೀತಿ ಅಮೇರಿಕದ ಸಲಹೆಯನ್ನೇ ಅನುಸರಿಸುತ್ತದೆ. ನಮ್ಮ ರೈತರಿಗೆ ಪ್ರೋತ್ಸಾಹಧನ (ಸಬ್ಸಿಡಿ) ಕೊಡಬೇಕೆ ಬೇಡವೇ? ಕೊಟ್ಟರೆ ಎಷ್ಟು ಕೊಡಬೇಕು? ನಮ್ಮ ರೈತ ಯಾವುದನ್ನು ಬೆಳೆಯಬೇಕು? ನಾವು ಕಡ್ಡಾಯವಾಗಿ ಯಾವ ಯಾವ ಸರಕನ್ನು ವಿದೇಶದಿಂದ ಕೊಳ್ಳಲೇಬೇಕು? ನಮ್ಮ ದೇಶದ ಔದ್ಯೋಗಿಕತೆಯ ರಕ್ಷಣೆಗಾಗಿ ಸುಂಕ ಹೇರಬೇಕೊ ಬೇಡವೊ? ಇತ್ಯಾದಿಗಳನ್ನೆಲ್ಲ ನಾವು ಬಲಾಢ್ಯ ರಾಷ್ಟ್ರಗಳ, ಮುಖ್ಯವಾಗಿ ಅಮೇರಿಕದ ಅನುಮತಿಯನ್ನು ಕೇಳಬೇಕಾಗಿದೆ. ಬಾಯಲ್ಲಿ ದೇಶಿಯತೆಯ ಬಗ್ಗೆ ಮಾತನಾಡುವ ಸರಕಾರ ಕೃತಿಯಲ್ಲಿ ದೇಶವನ್ನೇ ವಿದೇಶಕ್ಕೆ ಹರಾಜು ಹಾಕಲು ಹೊರಟಿದೆ.

ಈ 'ಡಬ್ಲೂಟಿ ಓದ' ನೀತಿಯೆಂದರೆ ಹಿಂದೆ ಭಾರತಕ್ಕೆ ಬಂದ ಬ್ರಿಟಿಷ್ ಈ ಈಸ್ಟ್ ಇಂಡಿಯಾ ಕಂಪೆನಿ ರಾಜ್ಯ ಕಬಳಿಸುವಲ್ಲಿ ವೆಲ್ಲೆಸ್ಲಿ ನಿರೂಪಿಸಿದ ಸಹಾಯಕ ಸೈನ್ಯ ಯೋಜನೆ' ಹಾಗೇ ಇದೆ. ಆಗ ಅವರೇ ಪ್ರತ್ಯಕ್ಷ ಬಂದು ನಮ್ಮಲ್ಲಿಯ ಜನರನ್ನು ಕೆಳ ನೌಕರರನ್ನಾಗಿ ಮಾಡಿಕೊಂಡು ನಮ್ಮ ದೇಶವನ್ನು ಆಳುತ್ತಿದ್ದರು. ಈಗ ಇಲ್ಲಿಗೆ ಅವರು ಬರುವುದಿಲ್ಲ; ಆದರೆ ನಮ್ಮ ದೇಶದ ಪ್ರಧಾನಿ, ಮಂತ್ರಿಮಂಡಲ, ಸಂಸದ ಶಾಸಕರ ಮುಖಾಂತರ ತಮ್ಮ ದೇಶದಿಂದಲೇ ಆಳುತ್ತಾರೆ. ಇವರೆಲ್ಲ ಅವರ ಗುಮಾಸ್ತರು. ತಪ್ಪಿದರೆ ಆಗಿನ ಬ್ರಿಟಿಷ್ ಜಿಲ್ಲಾಧಿಕಾರಿ ಇದ್ದಂತೆ, ಅಷ್ಟೇ.

ಖಾಸಗೀಕರಣದಿಂದಾಗಿ, ವಿದೇಶಿ ಕಂಪೆನಿಯಿಂದಾಗಿ ಸರಕಾರ ಉದ್ಯೋಗ ಸೃಷ್ಟಿ ಮಾಡುವುದಿಲ್ಲ. ಹಾಗಿರುವಾಗ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡಬೇಕಾದ ಮೀಸಲಾತಿ ಎಲ್ಲಿ? ಅದೇನೆ ಇರಲಿ. ನಮ್ಮ ದೇಶದ ಕಂಪೆನಿಗಳು ಕಾರ್ಮಿಕರನ್ನು ಹಾದಿಯ ಮೇಲೆ ಹಾಕುತ್ತಿದೆ. ಈ ಮುಕ್ತ ಆರ್ಥಿಕ ನೀತಿಯಿಂದ ರೈತರು, ಬಡವರು ಆತ್ಮಹತ್ಯೆ ಮಾಡಿಕೊಳ್ಳದೇ ಗತಿಯಿಲ್ಲ. ಅಂಥ ಸಂದರ್ಭ ಇಂದಿನದು. ಲಿಂಗ ಅಸಮಾನತೆ, ಅತ್ಯಾಚಾರ ಬಂಡವಾಳಶಾಹಿಗಳಿಂದ ಪರಿಸರ ನಾಶ, ಅಣ್ವಸ್ತ್ರಗಳ ಶೇಖರಣೆ ಇತ್ಯಾದಿಗಳಿಂದ ಪೃಥ್ವಿಯನ್ನು ಜೀವಿಗಳ ವಾಸಕ್ಕೆ ಅಸಾಧ್ಯವನ್ನಾಗಿ ಮಾಡಲಾಗುತ್ತದೆ.

ಲಾಭಬಡಕ ಗ್ರಾಹಕ ಸಂಸ್ಕೃತಿ ಮನುಷ್ಯನನ್ನು ಏಕಾಕಿಯನ್ನಾಗಿ ಮಾಡುತ್ತದೆ. ಮನುಷ್ಯರ ಮಾನಸಿಕ ಸ್ವಾಸ್ಥ್ಯವನ್ನು ಕೆಡಿಸುತ್ತದೆ. ಇಂಥ ಸಂದರ್ಭ ಸಾಹಿತ್ಯವೆನ್ನುವುದನ್ನು ಅಸ್ವಾಸ್ಥ್ಯದ ಅಭಿವ್ಯಕ್ತಿ, ಅಸಂಗತತೆ ಮತ್ತು ವ್ಯಕ್ತಿಕೇಂದ್ರಿತ, ಅಭಿವ್ಯಕ್ತಿಯನ್ನಾಗಿ ಮಾಡುತ್ತದೆ. ಏಟ್ಸ್ ಕವಿಯ ಒಂದು ಕವನದ ಸಾರಾಂಶ ಹೀಗಿದೆ.

'ಗಳಳನೇ ನಂಬರಿನ ಮನೆಯ ಮನುಷ್ಯ ಹೇಗಿದ್ದ? ಅವನು ಓದುತ್ತಿದ್ದ, ತಿನ್ನುತ್ತಿದ್ದ, ಕುಡಿಯುತ್ತಿದ್ದ, ಒಳ್ಳೆ ಮನೆಯೊಳಗಿದ್ದ. ಅದು ಸರಿ, ಅವನು ಸುಖವಾಗಿದ್ದನೇ? ಅದು ಪ್ರಸ್ತುತ ಪ್ರಶ್ನೆಯಲ್ಲ' ಹೀಗೆ ಮನುಷ್ಯನಿಗೆ ಒಂದು ಹೆಸರೂ ಕೂಡಾ ಇಲ್ಲದೆ ಹಾಗೆ ಚಹರೆ ರಹಿತನಾಗಿರುತ್ತಾನೆ. ಊಟ, ತಿಂಡಿ, ಎಲ್ಲ ಇದೆ. ಆದರೆ ಸುಖವಾಗಿದ್ದನಾ ಕೇಳಿದರೇ ಕವಿತೆ ಹೇಳುತ್ತದೆ, ಆ ಪ್ರಶ್ನೆ ಪ್ರಸ್ತುತವಲ್ಲ, ಇಂಥ ಬದುಕಿನ ಬಿಕ್ಕಟ್ಟು ಇಂದಿನದು.

ಇಂಥ ಪರಿಸ್ಥಿತಿಯಲ್ಲಿ ಎರಡು ಪ್ರವೃತ್ತಿಗಳು ತಲೆ ಎತ್ತುತ್ತವೆ. ಒಂದು ಅರಾಜಕತೆ, ಲೋಲುಪತೆ ಮತ್ತು ಅಸಹಾಯಕತೆ. ಎರಡನೆಯದು ಭವಿಷ್ಯದಲ್ಲಿ ವಿಶ್ವಾಸ, ಹೋರಾಟದ ಕೆಚ್ಚು, ಜನಾಂಗೀಯ ಪ್ರೀತಿ, ಸಾಮಾಜಿಕತೆ, ಒಟ್ಟಾರೆಯಾಗಿ ಸಮಾಜದ ಪುನರ್ಘಟನೆ, 'ಸರ್ವರಿಗೆ ಸಮಪಾಲು ಸರ್ವರಿಗೆ ಸಮಬಾಳು' ಎಂಬಂಥ ಸ್ಥಿತಿಯ ಕುರಿತಾದ ಸಾಂಘಿಕತೆ ಮತ್ತು ಕನಸುಗಾರಿಕೆ. ಒಂದನೆಯ ಪ್ರವೃತ್ತಿ ಸ್ವೀಕಾರಾರ್ಹವಲ್ಲ. ಎರಡನೆಯ ಸಂಗತಿ ಅನಿವಾರ್ಯವಾದುದು. ಸಾಹಿತ್ಯದಿಂದ ಸಾಮಾಜಿಕ ಕ್ರಾಂತಿ ಸಾಧ್ಯವಾಗದಿರಬಹುದು. ಆದರೆ ವ್ಯಕ್ತಿಯ ಘನತೆಯನ್ನು ಪ್ರತಿಷ್ಠಾಪಿಸಿ, ಮಾನವೀಯತೆಯ ವಿಸ್ತರಣೆಗೆ ಶಕ್ತಿ ತುಂಬಬಹುದು. ಬಂಡಾಯ ಸಾಹಿತ್ಯ ಸಂಘಟನೆ ಸಾಂಸ್ಕೃತಿಕ ದಾಖಲೆ ಹೌದಾದರೂ ಅದು ಒಂದು ಸಂದರ್ಭದಲ್ಲಿ ರಾಜಕೀಯ ಕ್ರಾಂತಿಯೂ, ಸಾಂಸ್ಕೃತಿಕ ಕ್ರಾಂತಿಯೂ ಒಂದು ಬಿಂದುವಿನಲ್ಲಿ ಕೂಡಬಹುದು ಎಂಬ ನಂಬುಗೆಯಿಂದ ಹೊರಟದ್ದು. ಆದ್ದರಿಂದ ಬರಹಗಾರರು, ಇತರ ಕಲೆಗಾರರು ಮಾತ್ರವಲ್ಲ ಅಥವಾ ಬಂಡಾಯ ಬರಹಗಾರರ ಕೃತಿ ರಚನೆಯ ಬಗ್ಗೆ ಮೆಚ್ಚುಗೆ ಇಲ್ಲದೇ ಇದ್ದರೂ ಬಂಡಾಯದ ತಾತ್ವಿಕ ನಿಲುವಿನಲ್ಲಿ ಸಹಾನುಭೂತಿ ಉಳ್ಳವರನ್ನೆಲ್ಲ ಒಂದೆಡೆ ತಂದು ಮಾನವೀಯ ಆಶಯಗಳನ್ನೆಲ್ಲ ಕ್ರಿಯಾಶೀಲವಾದ ಹೋರಾಟದಲ್ಲಿ ತೊಡಗಿಸಲಿಕ್ಕೆ ಮತ್ತೆ ಬಂಡಾಯ ಸಾಹಿತ್ಯ ಸಂಘಟನೆ ಒಂದು ಚಾರಿತ್ರಿಕವಾದ ಅವಶ್ಯಕತೆಯಾಗಿದೆ.

*

ಭಾಗ-೩

ನವಸಾಕ್ಷರರಿಗೆ ಸಾಹಿತ್ಯ : ಒಂದು ಪ್ರಾಸ್ತಾವಿಕ ಟಿಪ್ಪಣಿ

ನವಸಾಕ್ಷರರಿಗಾಗಿ ಪುಸ್ತಕವನ್ನು ರಚಿಸುವ ಈ ಶಿಬಿರದ ಹಿಂದೆ ಒಂದು ಮಹಾ ಉದ್ದೇಶವಿದೆ, ಅದೆಂದರೆ ನವಸಾಕ್ಷರರ ಕಲಾತ್ಮಕ, ಕಲ್ಪನಾತ್ಮಕ ಮತ್ತು ಸಾಂಸ್ಕೃತಿಕ ಮಟ್ಟವನ್ನು ಎತ್ತರಿಸುವುದು. ಇಲ್ಲಿ ನಮಗೆ ವಿಜ್ಞಾನ, ಭೂಗೋಲ, ಇತಿಹಾಸ, ಜಮಾಖರ್ಚು, ಪೌರನೀತಿಯ ಪಾಠವನ್ನು ಹೇಳುವ ಉದ್ದೇಶವಿಲ್ಲ. ಹಾಗೆ ಮಾಡುವಾಗ ಒಂದು ವಿಷಯವನ್ನು ಕೊಟ್ಟು ಬರೆಸಬಹುದು. ಉದಾಹರಣೆಗಾಗಿ ಹೇಳುವುದಾದರೆ ಕುಟುಂಬಯೋಜನೆ ಕುರಿತು, ಪಲ್ಸಪೋಲಿಯೋ ಕುರಿತು, ಕತೆ, ಕವನ, ಹಾಡು, ಬೀದಿ ನಾಟಕ ಇತ್ಯಾದಿ. ನಮ್ಮ ಉದ್ದೇಶ ಅದಲ್ಲ. ನಮ್ಮ ಉದ್ದೇಶ ನವಸಾಕ್ಷರರಿಗೆ ಓದಿನ ಮುಖಾಂತರ ಸಾಹಿತ್ಯಿಕ ಸಂತೋಷವನ್ನು ಒದಗಿಸುವುದು ಮತ್ತು ಕಲಾತ್ಮಕ ಸಂವೇದನೆಯನ್ನು ಚೂಪುಗೊಳಿಸುವುದು. ಅವರ ಅಭಿರುಚಿಯನ್ನು ವಿಸ್ತರಿಸುವುದು.

ಈ ಸಂತೋಷ, ಈ ಸಾಂಸ್ಕೃತಿಕ ಅಭಿರುಚಿಯ ಸಂಪನ್ಮೂಲ ಯಾವುದು? ಅದು ಜನಸಾಮಾನ್ಯರ ಬದುಕೇ ಆಗಿದೆ. ಅಂದರೆ ನಮ್ಮ ನವಸಾಕ್ಷರರ ಬದುಕೇ ಆಗಿದೆ. ಅವರು ತುಂಬ ಅನುಭವಿಗಳು. ಜೀವನ ಬಲ್ಲವರು, ಜನಪದ ಕಲೆಗಳ ಸೃಷ್ಟಿಕರ್ತರು. ಆದ್ದರಿಂದ ಅವರ ಬುದ್ಧಿ, ಭಾವ, ಮತ್ತು ಬದುಕೇ ನಮಗೆ ತೀರಲಾರದ ಸಂಪನ್ಮೂಲ ಖನಿ. ಅದು ಬತ್ತದ ತೊರೆ.

ಆದರೆ ಅಷ್ಟೇ ಅಲ್ಲ. ಅಷ್ಟೇ ಆಗಿದ್ದರೆ 'ಅಭಿರುಚಿಯ ಮಟ್ಟ ಎತ್ತರಿಸುವುದು, ಸಾಂಸ್ಕೃತಿಕ ಹಂತ ಎತ್ತರಿಸುವುದು, ಸಂತೋಷದ ಸಂವೇದನೆಯನ್ನು ಚುರುಕು ಗೊಳಿಸುವುದು' ಎಂದು ಹೇಳಬೇಕಿರಲಿಲ್ಲ. ಆದರೆ ನಮ್ಮ ಈ ಕಲಾತ್ಮಕ ಅಭಿವ್ಯಕ್ತಿಯ ನಿರೂಪಣೆಯಲ್ಲಿ ಬೇರೆ ಉದ್ದೇಶವೂ ಇದೆ. ಅದೆಂದರೆ, 'ಸರ್ವರಿಗೆ ಸಮಪಾಲು, ಸರ್ವರಿಗೆ ಸಮಬಾಳು' ಎಂಬ ಬಾಳಿನ ಸೂತ್ರದ ಕಡೆಗೆ ತುಯ್ತವನ್ನುಂಟು ಮಾಡುವುದೂ ಹೌದು.

ಸಾಂಸ್ಕೃತಿಕ ಮಟ್ಟ ಎಂದರೇನು? 'ಸಂಸ್ಕೃತಿ' ಎನ್ನುವ ಶಬ್ದ ಎಷ್ಟು ಮೋಹಕವೋ ಅಷ್ಟೇ ಅಪಾಯಕಾರಿ. ಆದ್ದರಿಂದ ಸಾಂಸ್ಕೃತಿಕ ಸ್ವರೂಪದ ಬಗ್ಗೆ ಲೇಖಕನಾದವರಿಗೆ ಸ್ಪಷ್ಟವಾದ

ಉ.ಕ. ಜಿಲ್ಲೆಯಲ್ಲಿ ೧೯೯೯ರಲ್ಲಿ ನಡೆದ ಸಾಕ್ಷರತಾ ಸಾಹಿತ್ಯ ರಚನೆಯ ಶಿಬಿರದಲ್ಲಿ ಪ್ರಸ್ತುತಪಡಿಸಿದ ಪ್ರಸ್ತಾವನೆ.

ಪರಿಕಲ್ಪನೆಗಳಿರಬೇಕು. ಉದಾಹರಣೆಗೆ ಹೇಳುವುದಾದರೆ ಒಂದು ಸತ್ಯನಾರಾಯಣ ಪೂಜೆ ಮಾಡಿದವರ ಸಾಂಸ್ಕೃತಿಕ ಮಟ್ಟ ಕಡಿಮೆ, ನೂರಾ ಒಂದು ಪೂಜೆ ಮಾಡಿದವರ ಅಥವಾ ಮಾಡಿಸಿದವರ ಸಾಂಸ್ಕೃತಿಕ ಮಟ್ಟ ಉನ್ನತವಾದದ್ದು ಅನ್ನುತ್ತೀರಾ? ನಮ್ಮ ಸಂಕಷ್ಟ ನಿವಾರಣೆಗಾಗಿ ದೆವ್ವಕ್ಕೆ ಒಂದು ಕೋಳಿ ಕೊಯ್ಯುವವರ ಸಾಂಸ್ಕೃತಿಕ ಮಟ್ಟ ಕಡಿಮೆ, ಅದಕ್ಕಾಗಿ ಹೋಮ ಮಾಡಿಸುವವರ ಸಾಂಸ್ಕೃತಿಕ ಮಟ್ಟ ಉನ್ನತವಾದದ್ದು ಎನ್ನುತ್ತೀರಾ? ಇಲ್ಲಿ ಮಾವೋನ ಒಂದು ಮಾತನ್ನು ನೆನಸಿಕೊಂಡರೆ ತಪ್ಪಲ್ಲ ಎನ್ನಿಸುತ್ತದೆ. "ಜನಸಾಮಾನ್ಯರ ಮಟ್ಟವನ್ನು ಎತ್ತರಿಸುವುದೆಂದರೇನು? ಊಳಿಗಮಾನ್ಯ ಬದುಕಿನ ವರ್ಗಮಟ್ಟಕ್ಕೋ, ಬಂಡವಾಳಶಾಹಿ, ಅರೆ ಬಂಡವಾಳಶಾಹಿ ಮಾದರಿಗೋ? ಅದು ಹಾಗಲ್ಲ, ಜನಸಾಮಾನ್ಯರು ತಾವಾಗಿಯೇ ಮುಂದುವರಿಯುತ್ತಿರುವ ಪ್ರಗತಿಯ ದಿಕ್ಕಿನಲ್ಲಿ ಅಂದರೆ ಕೂಲಿಕಾರ್ಮಿಕ ಮತ್ತು ರೈತ ವರ್ಗದ ಪ್ರಗತಿಯ ಪಥದಲ್ಲಿ."

ಹೀಗೆಂದ ಮಾತ್ರಕ್ಕೆ ನಾವೆಲ್ಲ ಕಮ್ಯುನಿಸ್ಟರೊ, ಮಾರ್ಕ್ಸ್, ಮಾವೋವಾದಿಗಳೋ ಆಗಬೇಕೆಂದಲ್ಲ. ಸಾಮಾಜಿಕ ಪರಿವರ್ತನೆಯ ತಹತಹವನ್ನು ಇದು ಹಿಡಿದುಕೊಡುತ್ತದೆ ಎನ್ನುವದಿಂದ ಮಾತ್ರ ಹೇಳಿದೆ. ಪ್ರಗತಿಪರತೆಯ ಆಳದಲ್ಲಿ ಇರುವುದೂ ಇದೇ ತಹತಹಲ್ಲವೇ?

ಸಾಹಿತ್ಯದ ಕುರಿತು ಅನೇಕ ವ್ಯಾಖ್ಯೆಗಳಿವೆ. ಅವುಗಳಲ್ಲಿ ಮುಖ್ಯವಾದುದು ಎರಡು

೧. ಸಾಹಿತ್ಯ ಜೀವನದ ಪ್ರತಿಬಿಂಬ ೨. ಸಾಹಿತ್ಯ ಜೀವನದ ಪ್ರತಿಬಿಂಬ ಮಾತ್ರವಲ್ಲ ಅದು ಗತಿಬಿಂಬವೂ ಹೌದು.

ಸಾಮಾನ್ಯವಾಗಿ ಹೇಳುವುದಾದರೆ, ಸಾಹಿತ್ಯ ಲೇಖಕರ ಮಿದುಳಮೇಲೆ ಬಿಂಬಿತವಾದ ದತ್ತ ಸಮಾಜದ ಪ್ರತಿಬಿಂಬದ ಅಭಿವ್ಯಕ್ತಿಯೇ ಆಗಿದೆ. ಆದರೆ ಕ್ರಾಂತಿಕಾರಿ ಸಾಹಿತ್ಯವೆಂದರೆ ಕ್ರಾಂತಿಕಾರಿ ಲೇಖಕರ ಮಿದುಳಲ್ಲಿ ಬಿಂಬಿತವಾದ ಜನಜೀವನದ ಪ್ರತಿಬಿಂಬದ ಅಭಿವ್ಯಕ್ತಿಯಾಗಿದೆ. ಆದರೆ ಹೀಗೆ ಅಭಿವ್ಯಕ್ತಿಗೊಳ್ಳುವಾಗ ಲೇಖಕರ ಆಶಯಿಕೂಡ ಮಿಳಿತವಾಗಿರುತ್ತದೆ ಎಂಬುದೂ ಅಷ್ಟೇ ಮುಖ್ಯ. ಇದನ್ನು ನಾನು ಉದ್ಧರಣ ಮಾಡಿದ್ದು ಯಾಕೆಂದರೆ ನವಸಾಕ್ಷರರ ಬಗೆಗಿನ ಸಾಹಿತ್ಯದ ದೃಷ್ಟಿ ಕೂಡ ಪ್ರಗತಿಯ ದಿಸೆಯಲ್ಲಿ ಮನಸ್ಸನ್ನು ಉದ್ದೀಪನಗೊಳಿಸುವ ದಿಕ್ಕಿನಲ್ಲಿರಬೇಕು ಎನ್ನುವುದಕ್ಕಾಗಿ.

ಇದು ತೀರಾ ಗಂಭೀರವಾಯಿತು ಎನ್ನುತ್ತಿರಾ? ಇಲ್ಲ. ಹಾಗೆ ಹೇಳಲಿಕ್ಕಿಲ್ಲ. ಯಾಕೆಂದರೆ ಇದು ಎಲ್ಲಾ ಸಾಹಿತ್ಯದ ಉದ್ದೇಶದ ಕುರಿತು ಮತ್ತು ಅದು ನವಸಾಕ್ಷರರ ಸಾಹಿತ್ಯದಲ್ಲಿ ಕೂಡ ನಿಜವಾಗಬೇಕೆಂಬ ಕುರಿತು.

ಆದ್ದರಿಂದ ನವಸಾಕ್ಷರರ ಸಾಹಿತ್ಯದ ಈ ರೀತಿಯ ಪರಿಕಲ್ಪನೆಯಲ್ಲಿ ಜಾತಿ, ಅಸ್ಪೃಶ್ಯತೆ, ಕೋಮುಸೌಹಾರ್ದ, ಪರಿಸರಪ್ರೀತಿ, ಮಕ್ಕಳ ಶಿಕ್ಷಣ, ಮೂಢನಂಬಿಕೆ, ಆರೋಗ್ಯ, ನೈರ್ಮಲ್ಯ ಹೀಗೆ ಎಷ್ಟೋ ವಿಷಯಗಳು ಬರಬಹುದು ಅಥವಾ ಬರದೆಯೂ ಇರಬಹುದು. ಆದರೆ

ಅದು ಅಂತಿಮವಾಗಿ ಸಾಹಿತ್ಯಿಕ ಅನುಭವವಾಗಿ ರೂಪಾಂತರ ಹೊಂದಿರಬೇಕು. ಅದು ಓದುಗರ ಸಂತೋಷಕ್ಕೆ ಸಲ್ಲಬೇಕು. ದಣಿದ ದೇಹಕ್ಕೆ ನೆಳಲನ್ನು ನೀಡಬೇಕು. ಅದರೊಟ್ಟಿಗೆ ಅರಿವನ್ನು ವಿಸ್ತರಿಸಬೇಕು.

ಇದು ಸಾಮಾನ್ಯವಾದ ಕೆಲಸವಲ್ಲ. ವಸ್ತುವನ್ನು ಸಾಹಿತ್ಯವನ್ನಾಗಿ ಮಾಡುವುದೇ ಒಂದು ಪವಾಡ. ನಮಗೆ ಮಾವಿನ ಅಥವಾ ಯಾವುದೇ ಹಣ್ಣಿನ ಮಿಡಿಯಾದದ್ದು ತಿಳಿಯುತ್ತದೆ. ಕಾಯಿ ಆದದ್ದು ತಿಳಿಯುತ್ತದೆ. ಆ ಮೇಲೆ ಹಣ್ಣು ಆದ ಮೇಲೆ ಆಹಾ! ಎನ್ನಿಸುತ್ತದೆ. ಮಿಡಿಯ ಚೊಗರು ಹುಳಿಯಾಗಿ, ಹುಳಿಯಾದುದು ಸವಿಯಾಗಿ, ಸವಿಯಾದುದು ಸಕ್ಕರೆ ಆದದ್ದು ಯಾವಾಗ, ನೆರು (ಹೆಪ್ಪು) ಹಾಕಿದ ಹಾಲು ಮೊಸರಾದದ್ದು ಹೇಗೆ? ಯಾವಾಗ? ನಮಗೆ ಮೊಸರಾದ ಮೇಲೆ ಗೊತ್ತಾಯಿತು 'ಇದು ಮೊಸರು' ಎಂದು; ಅಲ್ಲವೇ? ಆದ್ದರಿಂದಲೇ ವಸ್ತು ಸಾಹಿತ್ಯವಾದದ್ದು ಒಂದು ಪವಾಡ ಎಂದು. ಹೀಗಾಗುವುದೇ ಒಂದು ಪವಾಡ ಎಂದುಕೊಂಡರೆ ಇದು ನವಸಾಕ್ಷರರ ಸಾಹಿತ್ಯದ ವಿಷಯದಲ್ಲಿ ಇನ್ನು ಚೋದ್ಯವಾದುದು. ಯಾಕೆಂದರೆ ನಮ್ಮ ನವಸಾಕ್ಷರರು ಬದುಕನ್ನು ಬಾಳಿದವರು. ಅದರಲ್ಲೂ ನವಸಾಕ್ಷರ ಓದುಗರಲ್ಲಿ ಮಹಿಳೆಯರೇ ಜಾಸ್ತಿ. ಅವರು ಬದುಕಿನಿಂದ ಅನುಭವಿಗಳು, ವಯಸ್ಸಿನಿಂದ ಪ್ರೌಢರು. ಆದರೆ ಓದಿನಿಂದ ಅಂದರೆ ಅಕ್ಷರ ಕಲಿಕೆಯಿಂದ ಮಕ್ಕಳು ಅಥವಾ ಕಲಿಕೆಯವರು. ಬದುಕಿನ ರೀತಿಯಿಂದ ಶೋಷಿತರು ಮತ್ತು ವಿಧಿವಾದದ ಸೆರೆಯಾಳುಗಳು.

ಇವರಿಗೆ ಸಂತೋಷ ಕೊಡಬೇಕು. ಇವರ ಅರಿವನ್ನು ವಿಸ್ತರಿಸಬೇಕು, ಅಭಿರುಚಿಯನ್ನು ತಿದ್ದಬೇಕು. ಅಂತಿಮವಾಗಿ ಇವರಿಗೆ ಓದುವ ಗೀಳನ್ನು ಹಿಡಿಸಬೇಕು. ತಾವೇ ತಮ್ಮ ಓದನ್ನು ಮುಂದುವರಿಸಿಕೊಂಡು ಹೋಗಬೇಕು.

ಆದ್ದರಿಂದ ಇದು ನಮ್ಮ ಲೇಖಕರಿಗೆ ಒಂದು ದೊಡ್ಡ ಸವಾಲು ಅಥವಾ ಆಹ್ವಾನ.

ಸುದೈವದಿಂದ ಈ ಶಿಬಿರಕ್ಕೆ ಬಂದು ನಮ್ಮ ಲೇಖಕರಲ್ಲಿ ಹಲವರು ನಮ್ಮ ನವಸಾಕ್ಷರರ ವರ್ಗದಿಂದಲೇ ಮೇಲೆದ್ದು ಬಂದವರು. ಇನ್ನು ಹಲವರು ಈ ದಲಿತರ ಬದುಕನ್ನು ಕಣ್ಣಾರೆಕಂಡು ಅರಿತವರು. ಆದರೂ ಇದೊಂದು ಸವಾಲು. ಆದರೆ ಈ ಸವಾಲನ್ನು ಎದುರಿಸುವ ಸತ್ವಶಾಲಿಗಳು ನೀವು ಎಂದು ಹೇಳಬಯಸುತ್ತೇನೆ.

*

ರಾಷ್ಟ್ರೀಯ ಭಾವೈಕ್ಯ ಪಠ್ಯಪುಸ್ತಕ ಮತ್ತು ಶಿಕ್ಷಕರು

ರಾಷ್ಟ್ರೀಯ ಭಾವೈಕ್ಯ ಎನ್ನುವುದು ವಿವಿಧ ಸಂಸ್ಕೃತಿ ಮತ್ತು ಧರ್ಮಗಳನ್ನು ಹೊಂದಿದ ಒಂದು ಸ್ವತಂತ್ರ ದೇಶದ ಸ್ವಾತಂತ್ರ್ಯ ಮತ್ತು ಸಾರ್ವಭೌಮತ್ವದ ಜೀವಾಳವಾದ ಸಂಗತಿ. ಒಂದು ರಾಷ್ಟ್ರಕ್ಕೆ ಭಾವೈಕ್ಯದ ಪ್ರಶ್ನೆ ಎದುರಾಗುತ್ತದೆಯೆಂದರೆ ಆ ದೇಶದೊಳಗೆ ಭಾವೈಕ್ಯಕ್ಕೆ ಎರವಾಗುವ ಸಂಭವ ಅಧಿಕವಾಗಿದೆ ಎಂದು ಅರ್ಥಮಾಡಬೇಕಾಗುತ್ತದೆ. ಇಂಥ ಪ್ರಶ್ನೆ ಇತರ ದೇಶಗಳಿಗಿಂತ ಭಾರತಕ್ಕೆ ಮಹತ್ವದ್ದಾಗುತ್ತದೆ. ಜಗತ್ತಿನ ಇತರ ರಾಷ್ಟ್ರಗಳು ಒಂದು ಜನಾಂಗ, ಒಂದು ಧರ್ಮ, ಒಂದು ದೇಶ ಎಂಬ ಸ್ಥಿತಿಗೆ ಬದ್ಧವಾಗಿವೆ. ಇವು ಇಲ್ಲದ ಕಡೆ ಒಂದೇ ಸವನೆ ಅಂತರ್ಯುದ್ಧದಲ್ಲಿ ಸಿಲುಕಿಕೊಳುತ್ತದೆ. ಆದರೆ ಜಗತ್ತಿನಲ್ಲಿದ್ದಷ್ಟು ಧರ್ಮವೂ ಇದ್ದು, ಇದ್ದ ಧರ್ಮದಲ್ಲಿಯೂ ಹತ್ತೆಂಟು ಶ್ರೇಣಿ ವ್ಯವಸ್ಥೆಯನ್ನೊಳಗೊಂಡ ದೊಡ್ಡ ದೇಶವೆಂದರೆ ಭಾರತ ಒಂದೇ. ಆದ್ದರಿಂದಲೇ ಇಲ್ಲಿಯ ಸಂದರ್ಭ ಬಹಳ ಸೂಕ್ಷ್ಮವಾದುದು.

೧೯೪೭ರಲ್ಲಿ ಭಾರತ ಸ್ವತಂತ್ರವಾಯಿತಾದರೂ ಅದು ಇಬ್ಭಾಗ ಕೂಡ ಆಯಿತು. ಈ ಇಬ್ಭಾಗಕ್ಕೆ ದೇಶದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿಯ ಕೋಮು ಭಾವನೆಯ ಬೆಳವಣಿಗೆಯೇ ಕಾರಣ. ಅದೇನೇ ಇದ್ದರೂ ದೇಶ ಇಬ್ಭಾಗವಾದರೂ ಈ ಪಿಡುಗು ನಿಲ್ಲಲಿಲ್ಲ. ಇಂಡಿಯಾದಲ್ಲಿ ಮುಸ್ಲಿಮರೂ, ಪಾಕಿಸ್ಥಾನದಲ್ಲಿ ಹಿಂದು, ಕ್ರಿಸ್ತ, ಶೀಖ್ಖರು ಉಳಿಯುವಂತಾಯಿತು. ಅಂದರೆ ಒಂದು ಧರ್ಮ, ಒಂದು ರಾಷ್ಟ್ರದ ಕಲ್ಪನೆ ಇಂಡಿಯಾಕ್ಕೆ ವ್ಯವಹಾರಿಕ ಆಗಲಿಲ್ಲ.

೧೯೫೦ ಭಾರತ ಗಣರಾಜ್ಯವಾಯಿತು. ಈ ಪ್ರಜಾ ಪ್ರಭುತ್ವದ ರೀತಿ ರಿವಾಜು, ಉತ್ಸಾಹ, ಸಂಯಮ ಭಾರತೀಯರಿಗೆ ಹೊಸದು. ಇದನ್ನು ಗಮನಿಸಿಯೇ ಸಂವಿಧಾನ ಶಿಲ್ಪಿಯಾದ ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ ಅವರು ಸಂವಿಧಾನ ಸಭೆಯ ಅಂತಿಮ ಭಾಷಣದಲ್ಲಿ ತಮ್ಮ ಕಳವಳವನ್ನು ಈ ರೀತಿ ತೋಡಿಕೊಳ್ಳುತ್ತಾರೆ.

"ಇತಿಹಾಸವು ಮರುಕಳಿಸೀತೆ? (ಬೌದ್ಧ ಕಾಲದಲ್ಲಿ ಗಣರಾಜ್ಯ ಬಳಕೆಯಲ್ಲಿತ್ತೆಂದೂ, ಅದನ್ನು ಭಾರತ ಕಳೆದುಕೊಂಡಿತೆಂದು ಅಂಬೇಡ್ಕರರ ಅಭಿಪ್ರಾಯ) ಈ ವಿಚಾರ ನನ್ನನ್ನು ಕಳವಳಕ್ಕೊಳಪಡಿಸುತ್ತಿದೆ. ನಮ್ಮ ಜಾತಿ ಪಂಥಗಳೆಂಬ ರೂಪದಲ್ಲಿರುವ ನಮ್ಮ ಹಳೆಯ

ಶೈಕ್ಷಣಿಕ ಸಮ್ಮೇಳ ಹೊನ್ನಾವರದ ನೆನಪಿನ ಸಂಚಿಕೆಯಲ್ಲಿ ಪ್ರಕಟಿತ.

ವೈರಿಗಳ ಜೊತೆಜೊತೆಗೇ ಒಂದಕ್ಕೊಂದು ವೈರುದ್ಧ್ಯವುಳ್ಳ ತಾತ್ವಿಕತೆಯನ್ನು ಹೋಂದಿರುವ ರಾಜಕೀಯ ಪಕ್ಷಗಳನ್ನು ನಾವು ಹೊಂದುತ್ತೇವೆ. ಭಾರತೀಯರು ತಮ್ಮ ದೇಶವನ್ನು ತನ್ನ ಪಂಥಗಳಿಗಿಂತ ಶ್ರೇಷ್ಠವೆಂದು ತಿಳಿದಾರೇ? ಅಥವಾ ತಮ್ಮ ಪಂಥವೇ ದೇಶಕ್ಕಿಂತ ಹೆಚ್ಚಿನದೆಂದು ತಿಳಿದಾರೆ? ನನಗೆ ತಿಳಿಯಲೊಲ್ಲದು, ಆದರೆ ಇಷ್ಟು ಮಾತ್ರ ಖಾತ್ರಿ. ನಮ್ಮ ಪಕ್ಷಗಳು ತಮ್ಮ ಪಂಥವನ್ನೇ ದೇಶಕ್ಕಿಂತ ಹೆಚ್ಚಿನದೆಂದು ತಿಳಿದರೆ ದೇಶ ಗಂಡಾಂತರದಲ್ಲಿ ಸಿಕ್ಕಿಹಾಕಿಕೊಳ್ಳುತ್ತದೆ. ಬಹುಶಃ ಎಂದೆಂದಿಗೂ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತದೆ. ಆದ್ದರಿಂದ ನಾವೆಲ್ಲರೂ ಈ ಕೊನೆಗಳಿಗೆಯಲ್ಲಿ ದೃಢಸಂಕಲ್ಪದಿಂದ ರಕ್ತದ ಕೊನೆಯ ಹನಿಯನ್ನಾದರೂ ತರ್ಪಣ ಕೊಟ್ಟು ಸ್ವಾತಂತ್ರ್ಯ ರಕ್ಷಿಸುತ್ತೇವೆಂದು ನಿಶ್ಚಯ ಮಾಡಬೇಕು."

(ಡಿ.ಸಿ. ಅಹಿರ್-ದ ಲಿಗಸಿ ಆಫ್ ಡಾ. ಅಂಬೇಡ್ಕರ (ಭಾರತರತ್ನ ೧೯೯೦: ೧೧೫)

ಅಂಬೇಡ್ಕರರ ಈ ಆಳವಾದ ಆತಂಕ ಕೇವಲ ಕಲ್ಪನೆಯಲ್ಲ. ನಮ್ಮ ಸಾವಿರಾರು ವರ್ಷದ ಇತಿಹಾಸವನ್ನು ಅಂಬೇಡ್ಕರ ತಮ್ಮೆದುರು ತಂದುಕೊಳ್ಳುತ್ತಾರೆ. ಇಂದಿನ ಅರ್ಥದಲ್ಲಿ ನಮಗೊಂದು ರಾಷ್ಟ್ರೀಯ ಕಲ್ಪನೆ ಮೊದಲು ಇದ್ದಿರಲಿಲ್ಲ. ನಮ್ಮ ದೇಶ ಒಂದು ರಾಷ್ಟ್ರವಾಗಿರಲಿಲ್ಲ. ನಮ್ಮ ಯಕ್ಷಗಾನ ಅರ್ಥದಲ್ಲಿ ಹೇಳುವಂತೆ ಚಪ್ಪನ್ ಐವತ್ತಾರು ದೇಶಗಳಾಗಿದ್ದವು. ಇಲ್ಲಿಯ ಧರ್ಮ ಕೂಡಾ ಅಂಥ ರಾಜಕೀಯ ಏಕತೆಯನ್ನು ನಿರ್ಮಿಸಿರಲಿಲ್ಲ. ಇಲ್ಲಿಯ ರಾಜರುಗಳು ಅವರು ಹಿಂದುಗಳೇ ಆಗಿರಲಿ, ಬೌದ್ಧರೇ ಆಗಿರಲಿ, ಮಹಮದೀಯರೇ ಆಗಿರಲಿ ಒಂದು ಧರ್ಮ ಒಂದು ಭಾಷೆ, ಒಂದು ರಾಷ್ಟ್ರಕ್ಕಾಗಿ ಹೋರಾಡಲಿಲ್ಲ ಅವರು ತಮ್ಮ ತಮ್ಮ ಅಧಿಕಾರ, ರಾಜ್ಯಕ್ಕಾಗಿ ಹೋರಾಡುತ್ತಿದ್ದರು. ಅಲೆಕ್ಸಾಂಡರನು ಭಾರದ ಮೇಲೆ ಏರಿ ಬಂದಾಗ ಅವನನ್ನು ಎದುರಿಸುವಲ್ಲಿ ಪೋರಸನಿಗೆ ಅಂಬಿ ಸಹಾಯಕನಾಗಲಿಲ್ಲ. ಮಹ್ಮದಘೋರಿ ಬಂದಾಗ ಜಯಚಂದ ಪೃಥ್ವಿರಾಜನಿಗೆ ಸಹಾಯಕನಾಗಿ ಹೋರಾಡಲಿಲ್ಲ. ಬ್ರಿಟೀಷರ ವಿರುದ್ಧ ಸಿಡಿದೆದ್ದ ಟಿಪ್ಪುವಿಗೆ ನಿಜಾಮನಾಗಲಿ, ಮರಾಠರಾಗಲಿ ಸಹಾಯಕವಾಗಲಿಲ್ಲ. ಇನ್ನು ಮುಖ್ಯ ಸಂಗತಿಯೆಂದರೆ ಹೀಗೆ ರಾಜರುಗಳು ತಮ್ಮ ತಮ್ಮಲ್ಲಿ ಕಿತ್ತಾಡುತ್ತಿದ್ದಾಗ ನಮ್ಮ ಸ್ವಯಂಪೂರ್ಣ ಹಳ್ಳಿಗಳು ತೆಪ್ಪಗೆ ಮೌನವಾಗಿ ಇದ್ದವು. ಅಂದರೆ ಭಾರತೀಯ ಸಾಮಾಜಿಕ ಸಂರಚನೆಯೇ ಕೆಲವು ಜನವರ್ಗವನ್ನು ಕೇವಲ ಗುಲಾಮರನ್ನಾಗಿ ಮಾಡಿತ್ತು. ಮುಖ್ಯವಾಗಿ 'ಮುಟ್ಟಬೇಡ' ಎಂಬ ಜಾತಿ ಸ್ಥರದ ಸಾಮಾಜಕ ಇರುವು ಆದಾಗಿತ್ತು. ಪ್ರಥಮ ಸಾತಂತ್ರ್ಯ ಹೋರಾಟದಲ್ಲಿ ಕೂಡ ಎಲ್ಲಾ ಜನವರ್ಗದವರೂ ಬ್ರಿಟೀಷರ ವಿರುದ್ಧ ಹೋರಾಡದಿರುವದಕ್ಕೆ ನಮ್ಮಲ್ಲಿಯ ಜಾತಿ ವ್ಯವಸ್ಥೆ ಕೂಡ ಮುಖ್ಯ ಕಾರಣಗಳಲ್ಲಿ ಒಂದಾಗಿದೆ ಎಂಬುದನ್ನು ಮರೆಯುವಂತಿಲ್ಲ.

ಸ್ವಾತಂತ್ರ್ಯಾ ನಂತರ ನಾವು ಹೊಸ ಯುಗದಲ್ಲಿ ಕಾಲಿಟ್ಟೆವು. ಈ ಯುಗ ಪ್ರಜಾಪ್ರಭುತ್ವದ ಯುಗ. ಇದರ ಸವಾಲುಗಳೇ ಬೇರೆ. ಸಮಾನತೆ, ಸೋದರತೆ, ಮತ್ತು ಸ್ವಾತಂತ್ರ್ಯ ಈ ಯುಗದ ಜೀವದುಸಿದರು. ಈ ಸಮಾನತೆಯ ಕರೆಗೆ ನಮ್ಮ ಬದುಕು ಮಾಗಿ ಬರಲಿಲ್ಲ. ನಮ್ಮ ಅಸ್ಮಿತೆ (Identity) ಇದ್ದುದು ಧರ್ಮ, ಜಾತಿ, ಭಾಷೆ, ಪ್ರಾದೇಶಿಕತೆಯಲ್ಲಿ. ಇದು ಸಾವಿರಾರು ವರ್ಷದ ಅನುಭವ ನಮಗೆ.

ನಮ್ಮ ದೇಶದ ವೈವಿಧ್ಯವನ್ನು ನೋಡಿದರೆ ನಿಸರ್ಗವೆಂಬ ಅಪಾರ ವಿವಿಧ ಬಣ್ಣ ಆಕಾರಗಳಿಂದ ಕೂಡಿದ ತೋಟದಂತಿದೆ. ಇಲ್ಲಿ ಜಗತ್ತಿನಲ್ಲಿರುವ ಧರ್ಮಗಳೆಲ್ಲ ಇವೆ. ಭಾಷೆಗಳು ಬೇರೆ ಬೇರೆ. ಆಹಾರಗಳು ಬೇರೆ, ಉಡಿಗೆ ತೊಡಿಗೆಗಳು ಬೇರೆ. ಆದ್ದರಿಂದ ನಮ್ಮ 'ಅಸ್ಮಿತೆ'ಯೇ ಅನೇಕವಾಗಿವೆ. ಹಾಗಿರುವಾಗ ಇಂಡಿಯಾ ಹಾದಿಯಲ್ಲಿ ತಂದ ಪ್ರಜಾಪ್ರಭುತ್ವದ ರಾಷ್ಟ್ರೀಯತೆಯ ಕಲ್ಪನೆಗೆ 'ಅಸ್ಮಿತೆ'ಯನ್ನು ಬೇರೆ ಬಗೆ ಹುಡುಕ ಬೇಕಾಗುತ್ತದೆ. ಈ ವೈವಿಧ್ಯಮಯವಾದ ಜನ ಜನಾಂಗವನ್ನು ರಾಷ್ಟ್ರೀಯತೆಯೆಂಬ ದಾರಕ್ಕೆ ಪೋಣಿಸಿದ ಹಾರದಂತಿದೆ ನಮ್ಮ ಪ್ರಜಾಪ್ರಭುತ್ವ. ಈ ಎಲ್ಲವನ್ನೂ ಒಂದಾಗಿಡುವ ರಾಷ್ಟ್ರಧರ್ಮ 'ಒಂದು ಮತ' 'ಒಂದು ಮೌಲ್ಯ'ವೇ ಆಗಿದೆ. ಅದೇ ಭಾರತೀಯತೆಯಾಗಿದೆ. ಈ ರಾಷ್ಟ್ರೀಯತೆಯ ಅಸ್ಮಿತೆ ನಮ್ಮ ಸಂವಿಧಾನದೊಂದಿಗಿದೆ ಇರಬೇಕು ಕೂಡ.

ನಮ್ಮ ಸಂವಿಧಾನ ಯಾವ ಧರ್ಮವನ್ನೂ ರಾಷ್ಟ್ರಧರ್ಮವೆಂದು ಸಾರಿಕೊಂಡಿಲ್ಲ, ಸರ್ವಧರ್ಮ ಸಮಭಾವ ಅದರ ನೀತಿ. ಅಂದರೆ ಅದು ಸ್ಪಷ್ಟವಾಗಿ ಧರ್ಮ ನಿರಪೇಕ್ಷತೆ (ಸೆಕ್ಯುಲರಿಸಂ)ಯನ್ನು ಅಪೇಕ್ಷಿಸುತ್ತದೆ. ಆದರೆ ಎಲ್ಲ ಧರ್ಮವೂ ಆಕ್ರಮಣಶೀಲತೆಯ ಹೊರಗಿದ್ದು ತಮ್ಮ ತಮ್ಮ ವಿಧಿ ವಿಧಾನದಂತೆ ಆಚರಣೆಗೆ ಅವಕಾಶ ಹೊಂದಿದೆ. ಜಗತ್ತಿನ ಅನೇಕ ರಾಷ್ಟ್ರಗಳು ಧರ್ಮೀಯವಾಗಿದ್ದರೆ ನಮ್ಮದು 'ಧರ್ಮನಿರಪೇಕ್ಷ' ರಾಷ್ಟ್ರವಾಗಿದೆ. ಇದು ಅನೇಕ ಧರ್ಮಗಳಿರುವ ನಮ್ಮ ದೇಶಕ್ಕೆ ಅನಿವಾರ್ಯವಾಗಿದೆ. ಇಷ್ಟು ಮಾತ್ರವಲ್ಲ ಜಗತ್ತಿನಲ್ಲೇ ಅತ್ಯಾಧುನಿಕ ರಾಷ್ಟ್ರೀಯತೆಯ ಪರಿಕಲ್ಪನೆ ಇದಾಗಿದೆ. ಇಲ್ಲಿ ರಾಜಕೀಯ ಅಧಿಕಾರ ಪಡೆಯುವುದು ಪಕ್ಷಗಳು ಜನರೆದುರು ಮಂಡಿಸುವ ರಾಜಕೀಯ ನೀತಿ (ಪೊಲಿಟಿಕಲ್ ಪಾಲಿಸಿ) ಮತ್ತು ಆರ್ಥಿಕ ಸಿದ್ಧಾಂತ (ಇಕಾನಮಿಕಲ್ ಪಾಲಿಸಿ) ಯ ಮುಖಾಂತರ. ಅದರ ಹೊರತು ಜಾತಿ, ಧರ್ಮದ ಮುಖಾಂತರವಾಗಿ ಅಲ್ಲ. ಜನಾಂಗೀಯ, ಧಾರ್ಮಿಕ, ಭಾಷಿಕ, ಅಲ್ಪ ಸಂಖ್ಯಾತರಿಗೆ ಕೆಲವೊಂದು ಸೌಲತ್ತನ್ನು ಕೂಡ ಸಂವಿಧಾನ ಕೊಟ್ಟಿದೆ. ಅದನ್ನು ಬಹು ಸಂಖ್ಯಾತರು ಸಹಿಸಬೇಕಾಗುತ್ತದೆ. ಅಲ್ಪಸಂಖ್ಯಾತರು ತಮ್ಮ ಪರಿಸರದಲ್ಲಿ ತಾವು ಅನಾಥರಲ್ಲ ಎಂಬ ಭಾವನೆಯ ಭರವಸೆ ಅವರಿಗಿರಬೇಕಾಗುತ್ತದೆ. ಇದನ್ನು ಒದಗಿಸುವದು ಬಹುಸಂಖ್ಯಾತರ ಜವಾಬ್ದಾರಿ.

ತಾವು ಮುಂದುವರಿದವರೆಂದುಕೊಳ್ಳುವ ಪಾಶ್ಚಾತ್ಯ ರಾಷ್ಟ್ರಗಳಲ್ಲೇ ಮಹಿಳೆಯರಿಗೆ 'ಮತದಾನ' ಹಕ್ಕನ್ನು ಪಡೆಯಲು ದೀರ್ಘಕಾಲ ಹೋರಾಟ ಮಾಡಬೇಕಾಯಿತು. ಆದರೆ ನಮ್ಮ ಸಂವಿಧಾನ ಒಂದೇ ಸಲ ಮಹಿಳೆಯರಿಗೂ ಸಮಾನಸ್ಥಾನ ಕಲ್ಪಿಸುವ ಅತ್ಯಂತ ಪ್ರಗತಿಪರವಾದ ವಿಧಾನವನ್ನು ಕೈಕೊಂಡಿದೆ. ನಮ್ಮ ಸಂವಿಧಾನದ ಶಿಲ್ಪಿಗಳ ಪ್ರಗತಿಪರ ಆಲೋಚನೆಗಳು ಒಮ್ಮೆಲೆ ನಮ್ಮ ಜನಕ್ಕೆ ಅರ್ಥವಾಗಿ, ಬಳಕೆಯಾಗಿ ಮೈಗೂಡುವಂತಹದಲ್ಲ ಅದು ಪ್ರಜ್ಞಾಪೂರಕವಾದ ಪ್ರಯತ್ನದಿಂದ ಸಾಧಿಸ ಬೇಕಾದುದು.

ಹಾಗಂತ ಈ ರಾಷ್ಟ್ರ ಎಲ್ಲ ಧರ್ಮಗಳ ನಾಶಕ್ಕೆ ಕರೆಕೊಡುವುದಿಲ್ಲ ಪ್ರಜಾಪ್ರಭುತ್ವಕ್ಕೆ ಅದು ಸಾಧ್ಯವೂ ಇಲ್ಲ. ಸಾಧುವೂ ಅಲ್ಲ. ಆದ್ದರಿಂದಲೇ 'ವಿವಿಧತೆಯಲ್ಲಿ ಏಕತೆ' ಎನ್ನುವುದು

ವಿವಿಧ ಧರ್ಮ -ಒಂದು ರಾಷ್ಟ್ರ, ವಿವಿಧ ಭಾಷೆ -ಒಂದು ರಾಷ್ಟ್ರ, ವಿವಿಧ ಭೌಗೋಲಿಕತೆ- ಒಂದು ರಾಷ್ಟ್ರ ಎನ್ನುವುದು ಒಂದು ಬಗೆಯಿಂದ ಪರಸ್ಪರ ವೈರುದ್ಧ್ಯತೆಯನ್ನು ಹೇಳದಂತಾಗುವುದಿಲ್ಲವೇ! ಆದರೆ ಈ ವೈವಿಧ್ಯದ ವೈರುದ್ಧ್ಯತೆಯನ್ನು ಬೆಸೆದು ಒಂದಾಗಿಸುವುದೇ ಭಾವೈಕ್ಯದ ಕರೆಯಾಗಿದೆ. ಇದನ್ನು ಒಂದು ಚಿಕ್ಕ ಉದಾಹರಣೆಯಿಂದ ವಿವರಿಸಬಹುದು. ಎತ್ತಿನಗಾಡಿ ಎರಡು ಚಕ್ರಗಳ ಮಧ್ಯೆ ಒಂದುಗೂಡಿಸುವ ಒಂದು ಹಾರೆ ಇರುತ್ತದೆ. ಎತ್ತು ಎಳೆಯುವಾಗ ಗಾಲಿ ಮುಂದೆ ತಿರುಗುತ್ತದೆ. ಆದರೆ ಹಾರೆ ಅದನ್ನು ಹಿಂದಕ್ಕೆ ಜಗ್ಗುತ್ತದೆ. ಅಂದರೆ ಹಾರೆಯೊಡನೆ ಘರ್ಷಣೆ ನಡೆದು ಗಾಲಿಯ ವೇಗ ಕುಗ್ಗುತ್ತದೆ. ಇದನ್ನರಿತ ಗಾಡಿಕಾರ ಹಾರೆಗೆ ಎಣ್ಣೆ ಹಾಕುತ್ತಾನೆ. ಆಗ ಹಾರೆ ಸುತ್ತ ಗಾಲಿ ನಯವಾಗಿ, ಗಾಲಿ ಸರಾಗವಾಗಿ ಉರುಳುತ್ತದೆ. ಈ ಎಣ್ಣೆ ಹಾಕುವ ಕ್ರಿಯೆ ಉಂಟಲ್ಲ, ಇದೇ ಭಾವೈಕ್ಯ. ಭಾವೈಕ್ಯದಿಂದ ದೇಶದ ಪ್ರಗತಿಯ ಗಾಲಿ ವೇಗವಾಗಿ ಉರಳುತ್ತದೆ. ಇಂಥ ಭಾವೈಕ್ಯದ ನೆಲೆ ಧರ್ಮನಿರಪೇಕ್ಷತೆಯ 'ಒಂದು ಮತ, ಒಂದು ಮೌಲ್ಯ' ಎಂಬ ಸಂವಿಧಾನದ ನೀತಿಯೇ ಆಗಿದೆ. ಇದಕ್ಕೆ ವಿರೋಧವಾದ ನೆಲೆಯನ್ನು ನಾವು ತಿರಸ್ಕರಿಸಬೇಕಾಗಿದೆ. ಆದರೆ ಇಂಥ ನೆಲೆಗಳು ಏಕಾ ಏಕಿ ಲಭ್ಯವಲ್ಲ. ಇತಿಹಾಸದಲ್ಲೇ ಅವುಗಳು ಬೇರು ಬಿಟ್ಟಿರುತ್ತವೆ.

ನಮ್ಮ ಇತಿಹಾಸ ಪ್ರಜ್ಞೆ

"ವರ್ತಮಾನ ಪತ್ರದ ತುಂಬ ಭೂತದ ಸುದ್ದಿ" ಎಂಬ ಕವಿವಾಣಿ ಚಾರಿತ್ರಿಕವಾಗಿಯೂ ಸತ್ಯವಾಗಿದೆ. ವರ್ತಮಾನದ ಎಂಬುದು ಸ್ವಯಂ ಪೂರ್ಣವಲ್ಲ. ಕಾಣುವುದಕ್ಕಿಂತ ಕಾಣದಿರುವದೆ ಹೆಚ್ಚು. "ನೀರ ಮೇಲೊಂದು ಮಡಿ, ಕೆಳಕ್ಕೇಳು ಮಂಜಿನ ಶಿಖರಿ" ಅಡಿಗರು ಎಂದಂತೆ. ಆದ್ದರಿಂದ ಇಂದಿನ ನಮ್ಮ ಭಾವನೆಗಳನ್ನು ಆರಂಭಗೊಳಿಸಿದ ಇತಿಹಾಸವನ್ನು ಸರಿಯಾಗಿ, ವೈಜ್ಞಾನಿಕವಾಗಿ ವಿಶ್ಲೇಷಿಸುವುದರಿಂದ ಸರಿಯಾದ ವರ್ತಮಾನವನ್ನು ರೂಪಿಸಲು ಸಾಧ್ಯವಾಗುತ್ತದೆ.

ನಮ್ಮ ಇತಿಹಾಸ ಒಂದು ರಾಷ್ಟ್ರೀಯತೆಯ ಪರಿಕಲ್ಪನೆಯಲ್ಲಿ ರಚಿಸಲ್ಪಟ್ಟಿದ್ದು ಇಂಗ್ಲಿಷರ ಕಾಲದಲ್ಲಿ ಓರಿಯಂಟಲಿಸ್ಟರಿಂದ. ಬ್ರಿಟಿಷ್ ಇತಿಹಾಸಕಾರರು ಭಾರತದ ಪ್ರಾಚೀನತೆಯ ಮೇಲೆ ಹೆಚ್ಚು ಒತ್ತು ಕೊಟ್ಟರು. ಅದರ ಕಾರಣವೇನೇ ಇರಲಿ. ಅಂದು ಸಾಧಿಸಿದ್ದ ಹಿಂದೂ ಪ್ರಾಚೀನತೆ ಆಧ್ಯಾತ್ಮಿಕ ಶ್ರೇಷ್ಠತೆ ಹೊಂದಿದ್ದು; ಭಾರತದ ಶ್ರೇಷ್ಠತೆ ಇರುವುದೇ ಆಧ್ಯಾತ್ಮದಲ್ಲಿ. (ಅಂದರೆ ಅವರು ಆಳುವ ತಾಕತ್ತಿನವರಲ್ಲ; ಆಳಲ್ಪಡಲು ಯೋಗ್ಯರು). ಆರ್ಯ ಶ್ರೇಷ್ಠತೆಯ ಪ್ರಾಚೀನ ಉನ್ನತಿ ಮಧ್ಯಕಾಲದಲ್ಲಿ ಮುಸ್ಲಿಂ ಆಗಮನದಿಂದ ಅವನತಿ ಹೊಂದಿತು ಎಂಬ ನಿರ್ಣಯ ಬ್ರಿಟಿಷ್ ಆಳರಸರಿಗೆ ಅನುಕೂಲವಾಯಿತು. ಹೀಗೆ ಹಿಂದೂ ಮುಸ್ಲಿಮರಲ್ಲಿ ಒಡಕಿನ ಬೀಜ ಬಿತ್ತಲಾಯಿತು.

ಬ್ರಿಟಿಷ್ ವಸಾಹತುಶಾಹಿಯ ಎದುರು ತನ್ನ ಹೆಚ್ಚುಗಾರಿಕೆಯನ್ನು ಆಧ್ಯಾತ್ಮಿಕತೆಯ ಮೂಲಕ ಸ್ಥಾಪಿಸಿಕೊಡ ಪ್ರಜ್ಞೆ ಹಿಂದುತ್ವವನ್ನು ರಾಷ್ಟ್ರೀಯ ಪ್ರಜ್ಞೆಯನ್ನಾಗಿ ಸ್ವೀಕರಿಸಿತು. ತಿಲಕರು ಸ್ವಾತಂತ್ರ್ಯಾಂದೋಲನದಲ್ಲಿ ಧರ್ಮವನ್ನು ಬಳಸಿಕೊಂಡರು. ಇದು ಆದಾಗಲೇ ಬೇರು ಬಿಟ್ಟಿತ್ತು.

ಗಾಂಧಿಯವರೂ ಕೂಡ ಎಷ್ಟೇ ಮೃದುಗೊಳಿಸಿದರೂ, ಉದಾರಗೊಳಿಸಿದರೂ ಧಾರ್ಮಿಕತೆಯನ್ನು ಬಳಸಿಕೊಂಡರು. ಅವರು ಅಹಿಂಸೆಯ ಮೂಲವನ್ನು ಭಗವದ್ಗೀತೆಯಲ್ಲಿ ಕಂಡುಕೊಂಡರು. ಇದೇ ಸಂದರ್ಭದಲ್ಲಿ ಅಂದರೆ ೧೯೨೫ರಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್ ಎಸ್. ಎಸ್) ಹುಟ್ಟಿಕೊಂಡಿತು. ಇದು ಒರಬಿರಟಾಗಿ ಹಿಂದುತ್ವವನ್ನು ಪ್ರತಿಪಾದಿಸಿತು. ಮುಸ್ಲಿಮರು ಹೊರಗಿನವರೆಂಬ ಭಾವನೆಯನ್ನು ಬೆಳೆಸಿತು. ಇದಕ್ಕೂ ಹಿಂದೆಯೇ ಹಿಂದೂ ಮಹಾಸಭೆ ಹುಟ್ಟಿತ್ತು. ಸಾವರಕರ ಅವರು ಅದರ ವೀರಾಗ್ರಣಿಗಳಾಗಿದ್ದರು.

ಹಿಂದುಗಳು ಭಗವದ್ಗೀತೆಯನ್ನು ಹಿಡಿದೊಡನೆ ಮುಸ್ಲಿಮರು ಕುರಾನನ್ನು ಹಿಡಿದರು. ಮುಸ್ಲಿಂ ವೈಭವದ ಬಗ್ಗೆ ಅವರ ಗಮನ ಹರಿಯಿತು.

ಆರ್.ಎಸ್.ಎಸ್.ದವರಿಗೆ ಭಾರತದ ಪ್ರಥಮ ಸ್ವಾತಂತ್ರ್ಯ ಹೋರಾಟದಲ್ಲಿ ಹೋರಾಡಿದ ಯಾರೂ ರಾಷ್ಟ್ರೀಯ ನಾಯಕರಾಗಲಿಲ್ಲ. (ತಿಲಕರಿಗೂ ಆಗಲಿಲ್ಲ) ಅಥವಾ ಅಶೋಕ, ಅಕ್ಬರ್, ನಾನಕರಂಥವರೂ ಆಗಲಿಲ್ಲ. ಬದಲಾಗಿ ಶಿವಾಜಿ, ರಾಣಾ ಪ್ರತಾಪ ಮೊದಲಾದವರು ಹೀರೋ ಆದರು. ಇದರ ಕಾರಣ ಸ್ಪಷ್ಟವಿದೆ. ಅವರು ಮುಸ್ಲಿಮರ ವಿರುದ್ಧ ಹೋರಾಡಿದವರಾಗಿದ್ದರು. ಈ ಹಿನ್ನಲೆಯ ಕುರಿತು ಬರೆಯುತ್ತ ಡಾ. ಬಿಪಿನ್ ಚಂದ್ರ "ನಿಜವಾಗೂ ರಾಣಾಪ್ರತಾಪ್, ಅಕ್ಬರನಿಗಿಂತ; ಶಿವಾಜಿ, ಔರಂಗಜೇಬನಿಗಿಂತ ರಾಷ್ಟ್ರೀಯ ನಾಯಕರೇನೂ ಅಲ್ಲ. ಆದರೆ ಅವರಿಗೆ ಸುಳ್ಳು ರಾಷ್ಟ್ರೀಯ ಲಕ್ಷಣವನ್ನು ನೀಡಿ ಆಧುನಿಕ ಮತ್ತು ಸಮಕಾಲೀನ ಇತಿಹಾಸದಲ್ಲಿ ರಾಷ್ಟ್ರ ವಿರೋಧಿ ಆಶಯಗಳನ್ನು ಪೂರೈಸುತ್ತಿದ್ದೇವೆ" ಎಂದು ಹೇಳುತ್ತಾರೆ.

('ಕೋಮುವಾದ' ಸಂ: ಬರಗೂರು ರಾಮಚಂದ್ರಪ್ಪ ಮತ್ತು ರಮಜಾನ ದರ್ಗಾ ೧೯೯೯;೬೫)

ಹೀಗೆ ಹಿಂದೂವಾದಿಗಳಿಂದ ಮುಸ್ಲಿಮರು ಭಾರತ ವಿರೋಧಿಗಳೆಂದೂ ಹಿಂದೂ ಸರ್ವಶ್ರೇಷ್ಠವೆಂದೂ ಪ್ರತಿಪಾದಿಸಲ್ಪಟ್ಟಿತು. ಆರ್.ಎಸ್.ಎಸ್.ದ ಬೈಬಲ್ ನಂತಿರುವ 'ಬಂಚ್ ಆಫ್ ಥಾಟ್ಸ್ ದಲ್ಲಿ ಗೋಲ್ವಾಲ್ಕರ್ ಹೀಗೆ ಹೇಳುತ್ತಾರೆ.'

"ಈ ಹಿಂದೂ ಜನತೆಯೇ ಪರಮಾತ್ಮನ ಸಾಕಾರ ಅಭಿವ್ಯಕ್ತಿಯಾದ ವಿರಾಟ್ ಪುರುಷ ಎಂದು ನಮ್ಮ ಪೂರ್ವಜರು ನುಡಿದಿದ್ದಾರೆ. ಬ್ರಾಹ್ಮಣನೇ ಇದರ ತಲೆ, ರಾಜನ್ಯನೇ ಕೈಗಳು. ವೈಶ್ಯನು ಇದರ ತೊಡೆಗಳು. ಮತ್ತು ಶೂದ್ರನೇ ಇದರ ಪಾದ ಎಂದು ಪುರುಷ ಸೂಕ್ತದಲ್ಲಿ ಹೇಳಿದೆ. ಈ ಚತುರ್ವಿಧ ವ್ಯವಸ್ಥೆಯನ್ನು ಹೊಂದಿರುವ ಜನತೆ ಅಂದರೆ ಹಿಂದೂ ಜನತೆ ನಮ್ಮ ದೇವರು ಎಂಬುದೇ ಅರ್ಥ. ಸಮಾಜದಲ್ಲಿ ದೇವತ್ವವನ್ನು ಕಾಣುವ ಈ ಮಹೋನ್ನತ ದೃಷ್ಟಿಯೇ ರಾಷ್ಟ್ರ ಎಂಬ ನಮ್ಮ ಕಲ್ಪನೆಯ ತಿರುಳು. ('ಮಾರ್ಕ್ಸ್‌ವಾದ ಮತ್ತು ಭಗವದ್ಗೀತೆ' ಎಸ್.ಜಿ. ಸರದೇಸಾಯಿ ಮತ್ತು ದಿಲೀಪ್‌ಘೋಸ್ ಅನು: ಆರ್.ಎಸ್. ಭಟ್, ೧೯೮೨; ೧೦೯)

ಇಂಗ್ಲೀಷರು ಈ ಸನ್ನಿವೇಶವನ್ನು ಹಿಂದು-ಮುಸ್ಲಿಂ ಒಡೆದಾಳುವ ನೀತಿಗೆ ಸರಿಯಾಗಿ ಉಪಯೋಗಿಸಿಕೊಂಡರು. ಇದಕ್ಕೆ ಮುಸ್ಲಿಮರಲ್ಲಿಯ ಹಿಂದುಳಿದಿರು ವಿಕೆಯೂ ಕಾರಣವಾಗಿತ್ತು. ರಾಜಾರಾಮಮೋಹನರಾಯ ಪ್ರಾರಂಭಿಸಿದ ಶೈಕ್ಷಣಿಕ ಚಳವಳಿ, ಇಂಗ್ಲಿಷ ಶಿಕ್ಷಣ ಕೊಡಿಸಲು ಮಾಡಿದ ಪ್ರಯತ್ನ ಇತ್ಯಾದಿ- ಹಿಂದುಗಳಲ್ಲಿ ತಮ್ಮ ಮೌಢ್ಯವನ್ನು ತೊರೆದು ಮುಂದುವರಿಯಲು ಸಾಧ್ಯವಾಯಿತು. ಮುಸ್ಲಿಮರು ಇಂಗ್ಲಿಷ್ ಶಿಕ್ಷಣವನ್ನು ನಿರಾಕರಿಸಿದರು. ನಂತರ ಸಯ್ಯದ ಮಹಮದಖಾನ ಅವರು ಮುಸ್ಲಿಮರಲ್ಲಿ ಆಧುನಿಕ ಶಿಕ್ಷಣ ಹರಡಲು ತಮ್ಮನ್ನೇ ಅರ್ಪಣೆ ಮಾಡಿಕೊಂಡರು. ಹೀಗಾಗಿ ಮುಸ್ಲಿಮರ ಚಾರಿತ್ರಿಕ ಹಿನ್ನೆಡೆ ಇಂಗ್ಲೀಷರಿಗೆ ಅನುಕೂಲವನ್ನು ಒದಗಿಸಿತು.

ಇವನ್ನೆಲ್ಲ ಗಮನಿಸಿ ಡಾ. ಬಿಪಿನ್‌ಚಂದ್ರ ಹೇಳುವ "ನಮ್ಮ ನಡುವಿನ ಎಷ್ಟೋ ರಾಷ್ಟ್ರೀಯವಾದಿಗಳು ರಾಷ್ಟ್ರೀಯ ಭಾವೈಕ್ಯವನ್ನು ತೀವ್ರವಾಗಿ ಪ್ರತಿಪಾದಿಸುವರಷ್ಟೋ ಮಂದಿಯ ಮನದಾಳದಲ್ಲಿ ಕೋಮುವಾದಿ ದೃಷ್ಟಿಯಿಂದಿರುವದು ಅಪೂರ್ವವೇನಲ್ಲ. ಇದಕ್ಕೆ ಮುಖ್ಯ ಕಾರಣ ನಾವೆಲ್ಲರೂ ಚಿಕ್ಕಂದಿನಿಂದಲೂ ಇತಿಹಾಸ ಸಮಾಜ ಮತ್ತು ಸಂಸ್ಕೃತಿಯನ್ನು ಕೋಮುವಾದಿ ದೃಷ್ಟಿಯಿಂದ ಅರಿಯುವದೇ ಆಗಿದೆ" ಎಂಬ ('ಕೋಮುವಾದ', ಪು. ೫೨) ನಮ್ಮನ್ನು ಬಾಲ್ಯದಲ್ಲಿ ಪಡೆಯುವ ಶಿಕ್ಷಣದ ಮಹತ್ವದ ಕಡೆಗೆ ಗಮನ ಸೆಳೆಯುತ್ತದೆ.

ಶಿಕ್ಷಣ, ಇತಿಹಾಸ ಪ್ರಜ್ಞೆ ಮತ್ತು ವೈಜ್ಞಾನಿಕ ಮನೋಭಾವ

ನಮ್ಮ ಬದುಕಿನಲ್ಲಿ ವಿದ್ಯಾರ್ಥಿದೆಸೆಯೆಂದರೆ ಇಡೀ ವ್ಯಕ್ತಿತ್ವವನ್ನು ತಿದ್ದಿ, ತೀಡಿ ಸಿದ್ಧಪಡಿಸುವುದೇ ಆಗಿದೆ. ವಿದ್ಯಾರ್ಥಿಗಳ ಮನಸ್ಸೆಂದರೆ ಒಂದು ಹಸನಾದ ನೆಲದಂತೆ ಅಲ್ಲಿ ಒಳ್ಳೆಯ ಬೀಜ ಬಿತ್ತಿ ಫಲ ಪಡೆಯಬಹುದು. ಅಥವಾ ಮುಳ್ಳು ಬೀಜ ಬೀತ್ತಿ ಫಲಪಡೆಯಬಹುದು. ಬಿತ್ತಿದ್ದನ್ನು ಬೆಳೆದುಕೋ ಎಂಬುದು ಶೈಕ್ಷಣಿಕ ಮನಶ್ಶಾಸ್ತ್ರ ದೃಷ್ಟಿಯಿಂದಲೂ ಮಹತ್ವದ್ದು. ಆದ್ದರಿಂದ ಶಿಕ್ಷಣದ ಸಂದರ್ಭದಲ್ಲಿ ಸರಿಯಾದ ಇತಿಹಾಸ ಪ್ರಜ್ಞೆಯನ್ನು ಪ್ರಜಾ ಪ್ರಭುತ್ವವಾದಿ ಸಮಾನತೆ, ಸೋದರತೆ, ಸ್ವಾತಂತ್ರ್ಯದ ನೀತಿಯನ್ನು ವೈಜ್ಞಾನಿಕ ಮನೋಭಾವವನ್ನು ಬೆಳೆಸುವುದು ಅವಶ್ಯವಾಗಿದೆ. ಇಂಥ ಒಂದು ಸಮಾಜವಾದಿ ಸಮಾಜರಚನೆಗೆ ಪೂರಕವಾದ ಭಾವೈಕ್ಯವನ್ನು ಬೆಳೆಸುವ ದ್ರವ್ಯವನ್ನು ಹೊಂದಿದ ಪಠ್ಯಕ್ರಮ, ಅಧ್ಯಾಪನ ಮತ್ತು ಇತರ ಚಟುವಟಿಕೆಯನ್ನು ರೂಪಿಸುವದು ಹಿರಿಯರ ಕರ್ತವ್ಯವಾಗಿದೆ.

ಇತಿಹಾಸ ಪ್ರಜ್ಞೆ ಹೇಗಿರಬೇಕು ಎಂಬುದಕ್ಕೆ ಖ್ಯಾತ ಇತಿಹಾಸ ವಿದ್ವಾಂಸರಾದ ಡಾ. ಶ್ರೀಮತಿ ರೋಮಿಲಾ ಥಾಪರ್ ಮಾತು ಆಧುನಿಕ ಇತಿಹಾಸಕಾರರಿಗೆ ಗ್ರಾಹ್ಯವಾಗಿದೆ. ಅವರು ಮಾತು ಹೀಗಿದೆ:

"ಇತಿಹಾಸವೆಂದು ಇಂದು ನಾವು ಕರೆಯುವಲ್ಲಿಯೂ ಇತಿಹಾಸದ ಪರಂಪರಾಗತವಾದ ಬರವಣಿಗೆಯಲ್ಲಿಯೂ ಗುಣಾವಲಂಬಿಯಾದ ಬದಲಾವಣೆ ಉಂಟು. ಸಾಕ್ಷವನ್ನು ಬಳಸುವ ವಿಧಾನದಲ್ಲಿ ಇತಿಹಾಸದ ಈಗಿನ ಬದಲಾವಣೆಯು ಎರಡು ಸಂಗತಿಗಳಿಂದ ಪ್ರಭಾವಿತವಾಗಿದೆ. ವೈಜ್ಞಾನಿಕ ಕ್ರಾಂತಿಯು ಉಂಟುಮಾಡಿದ ಬೌದ್ಧಿಕ ಪ್ರಭಾವ ಒಂದನೆಯದು; ಇದರಿಂದ ಗತ

ಕಾಲವನ್ನು ಕ್ರಮಬದ್ಧವಾಗಿ ಬೆಳಕಿಗೆ ತರುವ ಹಾಗೂ ಐತಿಹಾಸಿಕ ಸಂಗತಿಗಳ ಸತ್ಯಾಸತ್ಯತೆಯನ್ನು ಒರೆಗೆ ಹಚ್ಚುವ ನಿಲುವಿಗೆ ಮಹತ್ವ ಬಂದಿದೆ. ಒಂದು ಗುಂಪಿನ ಸಾಮಾನ್ಯ ಭಾಷೆ ಸಂಸ್ಕೃತಿ ಹಾಗೂ ಇತಿಹಾಸಗಳಿಗೆ ಮಹತ್ವ ನೀಡುವ ಮನೋವೃತ್ತಿಯ ರಾಷ್ಟ್ರೀಯತೆಯೆಂಬ ಹೊಸ ಧ್ಯೇಯವು ಇತಿಹಾಸದ ರಚನೆಯ ಮೇಲೆ ಬೀರುವ ಪ್ರಭಾವವು ಎರಡನೆಯದು. ರಾಷ್ಟ್ರೀಯ ಹಿನ್ನೆಲೆಯನ್ನು ಸಮರ್ಥಿಸುವಲ್ಲಿ ಇತಿಹಾಸಾಧ್ಯಯನವು ಜಗತ್ತಿನಾದ್ಯಂತ ವಿಶೇಷ ಮಹತ್ವ ಪಡೆದಿರುವದಂತೂ ನಿಜ."

(ಗತಕಾಲದ ಬಗ್ಗೆ ಪೂರ್ವಗ್ರಹ : ಅನು; ಸೂರ್ಯನಾಥ ಕಾಮತ್ ೧೯೭೫; ೪)

ಈ ಹಿನ್ನೆಲೆಯಲ್ಲಿ ಅಂದರೆ, ಐತಿಹಾಸಿಕ ಘಟನೆಯನ್ನು ಆಯಾ ಕಾಲದ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯಲ್ಲಿ ಸಾಕ್ಷ್ಯಾಧಾರಸಹಿತ ವಿಶ್ಲೇಷಿಸಿ ಮಂಡಿಸುವ ಅವಶ್ಯಕತೆಯಿದೆ ಇಂಥ ಮಂಡನೆಯು ವಿದ್ಯಾರ್ಥಿಗಳಲ್ಲಿ ಪೂರ್ವಾಗ್ರಹವನ್ನು ನಿವಾರಿಸಿ ದ್ವೇಷದ ಬದಲು ಪ್ರೀತಿಯನ್ನು ಅನೈಕ್ಯತೆಯ ಜಾಗದಲ್ಲಿ ಭಾವೈಕ್ಯವನ್ನು ಬೆಳೆಸಬಲ್ಲುದು.

ಪಠ್ಯಪುಸ್ತಕ ರಚನೆಯಲ್ಲಿ ಬೇರೆ ಬೇರೆ ಅಂಶ. ಪ್ರಾಧಾನ್ಯತೆ ಪಡೆಯುತ್ತದಾದರೂ ಭಾವೈಕ್ಯತೆಯ ಸಂದರ್ಭಕ್ಕೆ ಈ ಕೆಳಗಿನ ಅಂಶಗಳು ಚಾಲಕ ಶಕ್ತಿಯಾಗಬೇಕು.

೧. ಇತಿಹಾಸದ ಸರಿಯಾದ ಜ್ಞಾನ.

೨. ಧರ್ಮ ಹಾಗೂ ಸಾಂಸ್ಕೃತಿಕ ಚಲನಶೀಲತೆಯ ದಾಖಲೆ.

೩. ವೈಜ್ಞಾನಿಕ ಮನೋಭಾವ.

೪. ಪ್ರಜಾಪ್ರಭುತ್ವಕ್ಕೆ ಪೂರಕವಾದ ಧರ್ಮ ನಿರಪೇಕ್ಷತೆಯ ಭಾವ.

೫. ಸಮಾನತೆ, ವಿಶ್ವಬಂಧುತ್ವ, ಮಾನವೀಯತೆಯ ಉದ್ದೀಪಕಾಂಶ.

೧. ಇತಿಹಾಸ ಧಾರ್ಮಿಕ ಭಾವನೆಯಿಂದ ವಸಾಹತುಶಾಯಿ ಸಂದರ್ಭದಲ್ಲಿ ಹೇಗೆ ತಿರುಚಲ್ಪಟ್ಟಿದೆ ಎಂದು ಮೊದಲೇ ಹೇಳಿದ್ದೇನೆ. ಅದಕ್ಕೆ ವಿರೋಧಿಯಾದ ಚಾರಿತ್ರಿಕ ಕಲ್ಪನೆಯ ನೆಲೆಯಿಂದ ಅದೇ ಸಾಮಗ್ರಿಗಳನ್ನು ಮಂಡಿಸುವ ಕಲೆ ನಮಗೆ ಅವಶ್ಯವಾಗಿದೆ. ಇತಿಹಾಸದಲ್ಲಿ ನಡೆದ ಸಂಗತಿ ರಾಜಕೀಯ ಮತ್ತು ಆರ್ಥಿಕ ಸಂಬಂಧಿಯಾದವು ಎಂಬುದನ್ನು ಸ್ಫೋಟಗೊಳಿಸಬೇಕಾಗಿದೆ.

ಮಧ್ಯಕಾಲೀನ ಇತಿಹಾಸವನ್ನು ಮನಸ್ಸಿನಲ್ಲಿಟ್ಟುಕೊಂಡಾಗ ನಮ್ಮ ಮನಸ್ಸಿನಲ್ಲಿ ಮುಸ್ಲಿಮರು ಹಿಂದೂ ಧರ್ಮವನ್ನು ಹಾಳು ಮಾಡಿದರು. ಅವರು ಹಿಂದು ವಿರೋಧಿಗಳು. ಹಿಂದುಗಳು ಮಾತ್ರ ಸಂಭಾವಿತರು ಎಂಬ ಮಿತ್ ಮನೆಯಾಡಿದೆ. ಆದರೆ ಈ ಮಿತ್ ಸತ್ಯವಲ್ಲ. ಇದಕ್ಕೆ ವಿರುದ್ಧವಾದ ಅನೇಕ ಸಂಗತಿ ಸಾಮಗ್ರಿ ಅದೇ ಇತಿಹಾಸದಲ್ಲಿದೆ. ಅದನ್ನು ನಾವು ಇಂದು ಪ್ರಸ್ತುತಪಡಿಸಬೇಕಾಗಿದೆ. ಹೀಗೆ ಮಾಡುತ್ತಲೇ ಇತಿಹಾಸವನ್ನು ನೋಡುವ ನಮ್ಮ ದೃಷ್ಟಿಯನ್ನೇ ಬದಲಿಸಬೇಕಾಗಿದೆ ಅದಕ್ಕೆ ಕೆಲವೊಂದು ಉದಾಹರಣೆಯನ್ನು ಮಾತ್ರ ನಾನು ಇಲ್ಲಿ ಮಂಡಿಸಲು ಇಚ್ಛಿಸುತ್ತೇನೆ.

ಭಾರತದಲ್ಲಿ ಅನೇಕ ಧರ್ಮಗಳು ಉದಯಿಸಿವೆ. ಈ ಧರ್ಮಕ್ಕೆ ಹಿಂದೂ ಧರ್ಮೀಯರೇ ಪರಿವರ್ತನವಾದರಲ್ಲ, ಯಾಕೆ? ಇದರ ಗುಂಟ ನಮ್ಮ ಆಲೋಚನೆಯನ್ನು ಹರಿಸಬಹುದು. ಹೀಗೆ ಬೌದ್ಧ-ಜೈನ ಧರ್ಮಕ್ಕೆ ಮತಾಂತರ ಆದರಲ್ಲಿ ಹಿಂದೂ ಧರ್ಮದ ಚಾತುರ್ವರ್ಣದ ಅಡಿಯಲ್ಲಿ ಬೆಂದುಹೋದವರೇ ಹೆಚ್ಚು ಎಂಬುದನ್ನು ಗಮನಿಸಬೇಕು. ಹಿಂದೂಧರ್ಮ ಶೂದ್ರರಿಗೆ ವಿದ್ಯೆಯನ್ನು, ಸಂಪತ್ತಿನ ಗಳಿಕೆಯನ್ನು ನಿಷೇಧಿಸಿತು. ಅಸ್ಪೃಶ್ಯರ ಗೋಳಂತೂ ಅಮಾನವೀಯ. ಹೀಗೆ ಬಳಲಿದ ಜನಕ್ಕೆ ಬೌದ್ಧಧರ್ಮ ಒಂದು ದಿವ್ಯ ಮಾರ್ಗವನ್ನು ತೆರೆಯಿತು. ಜನದೂರ ಭಾಷೆಯಾದ ಸಂಸ್ಕೃತದಲ್ಲಿ ರಹಸ್ಯವಾಗಿಟ್ಟ ಧರ್ಮವನ್ನು ಬಯಲು ಮಾಡಿ ತಾಂತ್ರಿಕ ಜಟಿಲತೆ ಇಲ್ಲದ ನಿರಾಡಂಬರ ರೀತಿಯ ಆಚರಣೆಯ ಜನಭಾಷೆಯಲ್ಲಿಯ ಪ್ರಚಾರ ವಿಧಾನ ಮತ್ತು ಜಾತಿಯ ಕಟ್ಟು ಇಲ್ಲದ ಅಸ್ಪೃಶ್ಯತೆಯ ರೋಗವಿಲ್ಲದ ವಿಧಾನವನ್ನು ಅವು ಬೋಧಿಸಿದವು. ಪುರೋಹಿತಶಾಹಿಯ ಶೋಷಣೆಯನ್ನು ಮುರಿದವು. ಆದ್ದರಿಂದ ಹಿಂಡು ಹಿಂಡಾಗಿ ಅದನ್ನು ಅಪ್ಪಿಕೊಂಡರು. ಅದೇ ತಳಹದಿಯಲ್ಲೇ ಮುಸ್ಲಿಂ ಧರ್ಮವನ್ನು ಅಸ್ಪೃಶ್ಯರೂ ಕೆಳಜಾತಿಯ ಶೂದ್ರರೂ ಅಪ್ಪಿಕೊಂಡರು. ಸ್ವಾಮಿ ವಿವೇಕಾನಂದರೇ ಅನ್ನುತ್ತಾರೆ 'ಹಿಂದೂ ಧರ್ಮದಿಂದ ನೊಂದ ಜನ ಮುಸ್ಲಿಮಿನ ಬಂಧುತ್ವದ ತಕ್ಕೆಗೆ ಒಪ್ಪಿಕೊಂಡರೇ ಹೊರತು ಕತ್ತಿಯ ಭಯಕ್ಕಲ್ಲ.' ಹಾಗಂತ ಅದು ನಡೆದೇ ಇಲ್ಲ ಎಂದಲ್ಲ. ಆದರೆ ಅದು ಅಲ್ಪವೇ. ಅದೇನೇ ಇದ್ದರೂ ಇಂದು ಇರುವ ಮುಸ್ಲಿಮರು ಭಾರತೀಯರೇ ಹೊರತು ಹೊರಗಿನವರಲ್ಲ.

ಮುಸ್ಲಿಂ ಅರಸರೂ ಇಲ್ಲಿಯ ಗ್ರಾಮಮಟ್ಟದ ಆಡಳಿತದಲ್ಲಿ ಕೈ ಹಾಕಲಿಲ್ಲ. ಯಾಕೆಂದರೆ ಅವರಿಗೆ ಧರ್ಮಪ್ರಚಾರ ಮುಖ್ಯವಾಗಿರಲಿಲ್ಲ. ಅವರಿಗೆ ತಮ್ಮ ರಾಜ್ಯವಿಸ್ತಾರವಾಗಬೇಕು, ಶಾಶ್ವತವಾಗಬೇಕು ಎಂಬ ಬಯಕೆ ಇತರ ಹಿಂದೂ ರಾಜರುಗಳಂತೆಯೇ ಇತ್ತು. ಆದ್ದರಿಂದ ಅಲ್ಲಿ ನಡೆದ ಘಟನೆ ರಾಜಕೀಯ ಸ್ವರೂಪದ್ದೇ ಹೊರತು ಧಾರ್ಮಿಕ ಅಲ್ಲ.

ಮುಸ್ಲಿಂ ಆಡಳಿತದಲ್ಲಿ ಸಮನ್ವಯ, ವಿರೋಧ ಎರಡೂ ಇದೆ. ಅವರು ತಮ್ಮ ವಿರುದ್ಧ ಎದ್ದವರು ಯಾರೇ ಆದರೂ ಅವರು ಹಿಂದೂ ಮುಸ್ಲಿಂ ಎಂದಿಲ್ಲದೇ ಹತ್ತಿಕ್ಕಿದರು. ಇದು ರಾಜಕೀಯ. ಹಾಗೆಯೇ ಸಮನ್ವಯ ಕೂಡ ಬೇಕಷ್ಟು ನಡೆದಿದೆ. ಇದಕ್ಕೆ ದೊಡ್ಡ ಉದಾಹರಣೆಯಾಗಿ ಅಕಬರ-ಬೀರಬಲ್ಲರ ಸ್ನೇಹ, ಎಂಬ ಕಥೆಗಳ ಜನಪ್ರಿಯತೆ. ಹಾಗೆಯೇ ಅಕಬರನ "ದೀನೆ ಇ ಲಾಹಿ" ಎಂಬ ಧರ್ಮ ಸಾಕ್ಷಿಯಾಗಿದೆ. ದಿಲ್ಲಿ ಅರಸರು ಅಶಕ್ತರಾದಾಗ ದೇಶದ ಬೇರೆ ಕಡೆ ಮುಸ್ಲಿಂ ದೊರೆಗಳೂ ದಂಗೆ ಎದ್ದಿದ್ದಾರೆ.

ಖಿಲ್ಜಿಮಹ್ಮದ್ ತನ್ನ ಚಿಕ್ಕಪ್ಪನನ್ನೇ ಕೊಂದ ಕಥೆ ಏನು ಹೇಳುತ್ತದೆ? ಧರ್ಮವೇ ಅವರು ಗುರಿಯಾಗಿದ್ದರೆ ದಿಲ್ಲಿ ಸುಲ್ತಾನರು ತಮ್ಮ ತಮ್ಮಲ್ಲೇ ಕೊಂದು ಕೊಳ್ಳುತ್ತಿರಲಿಲ್ಲ. ಹಾಗೆಯೇ ಮಹ್ಮದ ಘೋರಿ ದಾಳಿ ಮಾಡಿದಾಗ ಪೃಥ್ವಿರಾಜನ ವಿರುದ್ಧ ಜಯಚಂದ ಘೋರಿಗೆ ಸಹಾಯ ಮಾಡಿದ. ಇವೆಲ್ಲ ರಾಜಕೀಯ ಆಟ.

ಮುಸ್ಲಿಮರು ಹಿಂದೂ ದೇವಾಲಯ ಹಾಳು ಮಾಡಿದರು ಎಂಬುದಕ್ಕೆ ಘಜ್ನಿಮಹಮ್ಮದ ಸೋಮನಾಥ ದೇವಾಲಯವನ್ನು ಸುಲಿದ ಕಥೆಯನ್ನೇ ಸಾವಿರ ಸಲ ಹೇಳುತ್ತೇವೆ. ಆದರೆ

ಆತ ಸೋಮನಾಥ ದೇವಾಲಯವನ್ನು ಮಾತ್ರ ಸುಲಿದು ಸುತ್ತಲಿನ ಸಾವಿರಾರು ದೇವಾಲಯಗಳ ಪಾಡಿಗೆ ಯಾಕೆ ಹೋಗಲಿಲ್ಲ ಎಂಬ ಪ್ರಶ್ನೆಯನ್ನು ಕೇಳಿಕೊಂಡರೆ ನಮಗೆ ಗೊತ್ತಾಗುವ ಸಂಗತಿಯೆಂದರೆ ಸೋಮನಾಥ ದೇವಾಲಯವನ್ನು ಆತ ಸಂಪತ್ತಿಗಾಗಿ, ವಜ್ರ ವೈಢೂರ್ಯಕ್ಕಾಗಿ ಸುಲಿದನೇ ಹೊರತು ಧರ್ಮಕ್ಕಾಗಿ ಅಲ್ಲ. ಆ ದೇವಸ್ಥಾನ ಅತ್ಯಂತ ಶ್ರೀಮಂತವಾಗಿತ್ತು, ೧೦,೦೦೦ ಹಳ್ಳಿಗಳ ಇನಾಮು, ೧೮ ಕೋಟಿ ಚಿನ್ನದ ನಾಣ್ಯಗಳ ಸಂಗ್ರಹವಿತ್ತು.

ಹಾಗೆ ನೋಡಿದರೆ ಹಿಂದೂ ಧರ್ಮದ ರಾಜರು ಹಿಂದು ದೇವಾಲಯವನ್ನೇ ಸುಲಿದ ಉದಾಹರಣೆ ಇದೆ. ಕಾಶ್ಮೀರದ ರಾಜ ಹರ್ಷ (೧೦೮೯-೧೧೦೧) ಖಜಾನೆಗೆ ಕೊರತೆಯಾದಾಗ ಹಣ ಸಂಗ್ರಹಕ್ಕಾಗಿ "ದೇವೋತ್ಪಾಟನ ನಾಯಕ" ಎಂಬ ಅಧಿಕಾರಿಯನ್ನೇ ನೇಮಿಸಿದ್ದ. ಇಂಥ ಸಂಗತಿಗಳು ರಾಜಕೀಯ ಮತ್ತು ಆರ್ಥಿಕ ಸಂದರ್ಭದಲ್ಲಿ ಪ್ರಸ್ತುತವಾಗುತ್ತವೆ.

ಮತಾಂಧನೆನ್ನುವ ಸ್ವತಃ ಔರಂಗಜೇಬನೇ ದೇವಾಲಯಗಳ ನಿರ್ಮಾಣ ಮಾಡಿದ. ಮತ್ತು ಹಿಂದುಗಳ ಪೂಜೆಯ ಆನುವಂಶಿಕ ಹಕ್ಕನ್ನು ಸಂರಕ್ಷಿಸಿಕೊಂಡು ಬರುವ ಅಗತ್ಯವನ್ನು ಒತ್ತಿ ಹೇಳುವ ಫರ್ಮಿನ ಒಂದು ಸಾಲಿನ ಸಾರಾಂಶ ಹೀಗಿದೆ "ಅವರು (ಬನಾರಸಿನ ಬ್ರಾಹ್ಮಣ ಅರ್ಚಕರು) ಅವರ ವೃತ್ತಿಯಲ್ಲಿ ತಮ್ಮ ದೈವದತ್ತ ರಾಜ್ಯದ ನಿರಂತರ ಮುಂದುವರಿಕೆಗಾಗಿ ಪೂಜಾವಿಧಿಗಳನ್ನು ನೆಮ್ಮದಿಯಿಂದ ಮಾಡಿಕೊಂಡು ಬರಲು ಬಿಡತಕ್ಕದ್ದುನ್ನು". (ಹಿಂದು ಮುಸ್ಲಿಂ ಸಂಘರ್ಷವೋ ಸೌಹಾರ್ದವೋ; ಡಾ. ಆರ್.ಕೆ. ಮಣಿಪಾಲ, ೧೯೯೧; ೬)

ಎರಡನೇ ಇಬ್ರಾಹಿಂ ಆದಿಲ್‌ಶಾಹಿ ಹಿಂದು ಮುಸ್ಲಿಂ ಪ್ರಜೆಗಳಿಗೆ "ಜಗದ್ಗುರು" ಎಂದೇ ಹೆಸರಾಗಿದ್ದ. ಟಿಪ್ಪುವಿನ ಕಡೆ ಬಂದರೆ, ಮರಾಠರು (ಅವರು ಹಿಂದುಗಳು ತಾನೇ) ಸುಲಿದ ಶೃಂಗೇರಿಯನ್ನು ಟಿಪ್ಪು ಸರಿಪಡಿಸಿದ, ಇವೆಲ್ಲ ಇತಿಹಾಸವನ್ನು ನೋಡುವ ದೃಷ್ಟಿಗೆ ವೈಜ್ಞಾನಿಕತೆಯನ್ನು ಕಲ್ಪಿಸಬೇಕು.

ನಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ಮುಖ್ಯ ಪಾತ್ರ ತೆಗೆದುಕೊಂಡ ರಾಷ್ಟ್ರೀಯ ಕಾಂಗ್ರೆಸ್ ಮತೀಯವಾದಿಯಾಗಿರಲಿಲ್ಲ. ಕ್ರಾಂತಿಕಾರರು (ಭಗತ್‌ಸಿಂಗ್ ಮೊದಲಾದವರು) ಮತೀಯವಾದಿಯಾಗಿರಲಿಲ್ಲ. ಹಾಗೆಯೇ ರಾಷ್ಟ್ರೀಯ ಹೋರಾಟಗಾರರಲ್ಲಿ ಹಿಂದು ಮುಸ್ಲಿಂ ಶಿಖ್ಖ್ ಮುಂತಾದವರೆಲ್ಲ ಇದ್ದರು.

ಹಿಂದು, ಮುಸ್ಲಿಂ, ಕ್ರೈಸ್ತ ಧರ್ಮಗಳು ಸಾಂಸ್ಕೃತಿಕವಾಗಿ ಬೇಕಷ್ಟು ಕೊಡಕೊಳ್ಳುವಿಕೆಯನ್ನು ಹೊಂದಿರುವವು. ಬಹುಮತವುಳ್ಳ ಹಿಂದುಗಳ ಮಧ್ಯೆ ಸೌಹಾರ್ದ ಜೀವನ ನಡೆದಾಗಲೇ ರಾಜ್ಯದಲ್ಲಿ ಶಾಂತಿ ಸಮೃದ್ಧಿ ನೆಲೆಸುತ್ತದೆಂದು ಅರಿತ ಅಕಬರ ತನ್ನ "ದೀನ್ ಇ ಲಾಹಿ" ಮುಖಾಂತರ ಮತೀಯ ಸೌಹಾರ್ದಕ್ಕಾಗಿ ಪ್ರಯತ್ನಿಸಿದ. ಉತ್ತರ ಭಾರತದಲ್ಲಿ ಕಬೀರ, ಕರ್ನಾಟಕದಲ್ಲಿ ಶಿಶುನಾಳ ಶರೀಫ್ ಉತ್ತಮ ಉದಾಹರಣೆ. ಶರೀಫರಿಗೆ ಗೋವಿಂದಭಟ್ಟ ಬ್ರಾಹ್ಮಣ ಗುರು ಆಗಿದ್ದರೆ ಮಹಿಪತಿದಾಸರಿಗೆ ಮುಸ್ಲಿಂ (ಸೂಫಿಸಂತ) ಗುರು. ಕೋಮು ಸೌಹಾರ್ದತೆ ಸಾರುವ ಅನೇಕ ಕಥೆಗಳು ಸೂಫಿಗಳಲ್ಲಿವೆ.

ಉರ್ದುಭಾಷೆ ಹಿಂದೂ ಮುಸ್ಲಿಂ ಸಂಸ್ಕೃತಿಯ ಸಮ್ಮಿಳನದಿಂದ ಹುಟ್ಟಿದ ಭಾಷೆ. ಇಂಥವುಗಳು ಆಯಾ ದಿನದ ಸಾಮಾಜಿಕ ಸನ್ನಿವೇಶದಲ್ಲಿ ವಿಶ್ಲೇಷಣೆಗೆ ಒಳಪಡಬೇಕು.

ವೈಜ್ಞಾನಿಕ ಮನೋಭಾವ ವೈಜ್ಞಾನಿಕ ಮನೋಭಾವವೆಂದರೆ ಭಾವಾವೇಶದ ಸಾಕ್ಷಿಯದಲ್ಲ. ಪ್ರತ್ಯಕ್ಷ ಆಧಾರದಿಂದ ನಿರ್ಣಯಿಸಲ್ಪಡುವ ಸಂಗತಿ. ಇತಿಹಾಸದ ಘಟನೆಗಳು ಸಾಮಾಜಿಕ, ರಾಜಕೀಯ ಹಿನ್ನೆಲೆಯಲ್ಲಿ ಕ್ರಮಬದ್ಧವಾಗಿ ಗ್ರಹಿಕೆಗೆ ಒಳಗಾಗಬೇಕು.

ಆದಿಕವಿ ಪಂಪ "ಮಾನವಜಾತಿ ತಾನೊಂದೆ ವಲಂ" ಎಂದಿರುವದು ನಮಗೆ ತೀರ ಆವಶ್ಯವಾಗಿದೆ. ನಮ್ಮ ಸಂವಿಧಾನ ಬೇರೆ ಬೇರೆ ಧರ್ಮ, ಭಾಷೆ ಪ್ರಾದೇಶಿಕತೆಗಳ ಮಧ್ಯೆ ಘರ್ಷಣೆ ಬರದಂತೆ ನೇಮ ನಿರೂಪಿಸಿದೆ. ಇಂದು ಈ ಭಾಷೆ, ಧರ್ಮ, ಪಂಥಗಳನ್ನು ಮೀರಿ ಮಾನವನ ಲೌಕಿಕ ಮತ್ತು ಪಾರಲೌಕಿಕ ಸಮ್ಮೃದ್ಧಿಯಾಗಬೇಕು. ಇತಿಹಾಸದ ತಪ್ಪನ್ನು ಸರಿಪಡಿಸುತ್ತೇವೆಂದು ಚಾತುರ್ವರ್ಣವನ್ನು ಮತ್ತೆ ಮರುಕಳಿ ಸಲಾಗುವದಿಲ್ಲ. ಹಾಗೆಯೇ ಧರ್ಮದ್ವೇಷ. ನಮ್ಮದು ಬಹುಧರ್ಮೀಯರ ನಾಡು. ಆದ್ದರಿಂದ ಎಲ್ಲ ಧರ್ಮಗಳ ಕುರಿತು ಸಹಿಷ್ಣುತೆ ನಮ್ಮ ಪ್ರಗತಿಗೆ ಅವಶ್ಯ ಎಂಬ ಅಂಶ ನಮ್ಮ ಪಠ್ಯ ಪುಸ್ತಕದಲ್ಲಿ ಸ್ಥಾಪಿತವಾಗಬೇಕು. ಕೊನೆಗೂ ಪಠ್ಯಪುಸ್ತಕ ಜೀವ ತಳೆಯುವುದು ಶಿಕ್ಷಕರ ಕೈಯಲ್ಲಿ. ಶಿಕ್ಷಕರ ಮನಸ್ಸು ಈ ಮೇಲಿನಂತೆ ವೈಜ್ಞಾನಿಕ ಮನೋಭಾವದಿಂದಲೂ ಸದಭಿರುಚಿಯಿಂದಲೂ ಕೂಡಿದ್ದಾದರೆ ಪಠ್ಯದ ಕೊರತೆಯನ್ನು ತುಂಬಿ ದೇಶದ ಅಗತ್ಯಕ್ಕೆ ಅನುವಾಗಬಲ್ಲದು. ಒಂದು ಗಣಿತದಲ್ಲಿ ಕೊಡುವ ರಾಮನೂ ಕೃಷ್ಣನೂ ಕೂಡಿ ವ್ಯಾಪಾರ ಮಾಡಿದರು ಅನ್ನುವಲ್ಲಿ ರಾಮನೂ ರಹೀಮನೂ ರೋಸಿಯೂ ವ್ಯಾಪಾರ ಮಾಡಿದರು ಎಂದು ಬದಲಾಯಿಸುವುದು ಸಹ ಸಣ್ಣ ಸಂಗತಿ ಆಗುವುದಿಲ್ಲ. ಈ ದಿಸೆಯಲ್ಲಿ ಶಿಕ್ಷಕರ ಹೊಣೆಗಾರಿಕೆ ಮೌಲಿಕವಾದುದು.

*

ಪ್ರಾಥಮಿಕ ಶಾಲೆಗಳಲ್ಲಿ ಕನ್ನಡವನ್ನು ಹೇಗೆ ಉಳಿಸಬೇಕು? ಬೆಳೆಸಬೇಕು?

ಕನ್ನಡ ಭಾಷೆ ಕರ್ನಾಟಕದ ರಾಜ್ಯ ಭಾಷೆ. ಹಾಗೆಯೇ ಅದು ಇಲ್ಲಿಯ ಮುಖ್ಯವಾದ ವ್ಯಾವಹಾರಿಕ ಭಾಷೆಯೂ ಆಗಿದೆ. ಕರ್ನಾಟಕದ ಹೆಚ್ಚಿನ ಶಾಲೆಗಳಲ್ಲಿ ಒಂದರಿಂದ ಹತ್ತನೆಯ ತರಗತಿಯವರೆಗಿನ ಶಿಕ್ಷಣ ಮಾಧ್ಯಮವಾಗಿದೆ ಕೂಡ. ಒಂದು ಭಾಷೆ ವ್ಯಾವಹಾರಿಕ ಮಾಧ್ಯಮವಾಗುವುದು ಎಂದರೆ ಆ ಭಾಷೆಯ ಮುಖಾಂತರ ನಮ್ಮ ಗ್ರಹಿಕೆಯ ಶಕ್ತಿ, ವ್ಯಕ್ತಿತ್ವದ ಬೆಳವಣಿಗೆ ಮತ್ತು ಅಭಿವ್ಯಕ್ತಿಯ ಸೂಕ್ಷ್ಮತೆಯನ್ನು ಸಾಧಿಸುವುದೇ ಆಗಿದೆ. ಒಟ್ಟಾರೆಯಾಗಿ ಭಾಷೆ ನಮ್ಮ ಇಡಿಯಾದ ಬೆಳವಣಿಗೆಗೆ ಮೂರ್ತಸ್ವರೂಪಿಯಾಗಿದೆ.

ಕನ್ನಡ ಮಾಧ್ಯಮದ ಶಾಲೆಗಳಲ್ಲಿ, ಅದರಲ್ಲೂ ನನ್ನ ಅನುಭವದ ಖಾಸಾತನಕ್ಕೆ ಬಂದಂತೆ ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿ ಕನ್ನಡ ಭಾಷೆಯ ಬೆಳವಣಿಗೆ ಗಮನಾರ್ಹವಾಗಿ ಕುಸಿದಿದೆ. ಇದಕ್ಕೆ ಕೇವಲ 'ಆಂಗ್ಲ ಮಾಧ್ಯಮ ವ್ಯಾಮೋಹ' ಎಂದು ಒಂದೇ ಮಾತಿನಲ್ಲಿ ಹೇಳುವುದೂ ಈಗ ಸಾಮಾನ್ಯವೂ ಸುಲಭವೂ ಆಗಿಬಿಟ್ಟಿದೆ. ಇದು ಸರಿಯಲ್ಲ. ಅದಕ್ಕೆ ಇದೊಂದೇ ಕಾರಣವೂ ಅಲ್ಲ. ಅನೇಕ ಕಾರಣಗಳು ಬೇರೆಯೇ ಇವೆ. ವೃಥಾ ಆರೋಪ ಪಟ್ಟಿ ಮಾಡುವಂತಿಲ್ಲ. ಒಟ್ಟಿನಲ್ಲಿ ಕನ್ನಡ ಭಾಷೆಯ ಸ್ಥಿತಿ-ಗತಿ ನಿರಾಶಾದಾಯಕವಾಗಿದೆ. ಹಾಗೆಂದು ಇದು ಸುಧಾರಿಸಲು ಅಸಾಧ್ಯವಾದುದೇನೂ ಅಲ್ಲ ಅಥವಾ 'ಅಸಾಧ್ಯ'ವೆಂದು ಕೈಚೆಲ್ಲಿ ಕುಳಿತುಕೊಳ್ಳುವಂತೆಯೂ ಇಲ್ಲ. ಬದಲಾವಣೆ, ಸುಧಾರಣೆ, ಸತ್ವಭರಿತ ಭಾಷಾ ಬೆಳವಣಿಗೆ, ನಾವು-ನೀವು ಮುಖ್ಯವಾಗಿ ಶಾಲೆಗಳ ಉಪಾಧ್ಯಾಯರುಗಳು ಮನಸ್ಸು ಮಾಡಿದರೆ ಖಂಡಿತಸಾಧ್ಯ. ಆ ದಿಕ್ಕಿನಲ್ಲಿ ನಾನು ಕನ್ನಡ ಶಾಲಾ ಶಿಕ್ಷಕನಾಗಿ ದುಡಿದ ಆಯುಷ್ಯದ, ಅನುಭವದ ಹಿನ್ನೆಲೆಯಲ್ಲಿ ಕೆಲವು ಸೂಚನೆಗಳನ್ನೂ, ಮಾರ್ಗಗಳನ್ನೂ, ಉಪಾಯಗಳನ್ನೂ ಇಲ್ಲಿ ಸೂಚಿಸಬಯಸುತ್ತೇನೆ.

ಪ್ರಾಥಮಿಕ ಹಂತದಿಂದ ಹಿಡಿದು ವಿಶ್ವವಿದ್ಯಾಲಯದ ತನಕದ ಅಧ್ಯಾಪಕರು ಸಾಮಾನ್ಯವಾಗಿ ಗುರುತಿಸುವುದೇನೆಂದರೆ- ವಿದ್ಯಾರ್ಥಿಗಳು ಬರೆವಣಿಗೆಯಲ್ಲಿ ಗಣನೀಯವಾಗಿ ಕಾಗುಣಿತ, ಅಲ್ಪ ಪ್ರಾಣ, ಮಹಾಪ್ರಾಣ ಮತ್ತು ಹ್ರಸ್ವ, ದೀರ್ಘ ತಪ್ಪು ಮಾಡುವಿಕೆ. ಇದನ್ನು ಆರಂಭದಲ್ಲಿಯೇ ತಿದ್ದ ಬೇಕಿತ್ತು. ಹಾಗೆ ಮಾಡದಿರುವುದೇ ಇದಕ್ಕೆ ಕಾರಣ ಎನ್ನುವುದು ಅವರ

ದಿ. ೨೭-೯-೧೯೯೮ರ 'ತರಂಗ'ದಲ್ಲಿ ಪ್ರಕಟಿತ.

ವಾದ. ಇದು ಸತ್ಯವೂ ಹೌದು. ಆದರೆ ತಿದ್ದುವಿಕೆ ಕೇವಲ ಪ್ರಾಥಮಿಕ ಹಂತದ ಕ್ರಿಯೆ ಮಾತ್ರವಲ್ಲ. ಅದು ನಿರಂತರವಾಗಿ ಸಾಗಬೇಕಾದ ಪ್ರಕ್ರಿಯೆಯೂ ಹೌದು.

ಈ ತಪ್ಪುಗಳಿಗೆ ಪ್ರಾಥಮಿಕ ಶಾಲೆಯ ಶಿಕ್ಷಕರನ್ನು ಕೇಳಿದರೆ ಅವರು ಕೊಡುವ ಕಾರಣಗಳು ಹೀಗೆ. ಮೋದಲು ಅಕ್ಷರ ಪದ್ಧತಿಯಿಂದ ಕಲಿಸುತ್ತಿದ್ದರು. ಆಗ ಸರಿಯಾಗಿ ಕಾಗುಣಿತ, ಹ್ರಸ್ವ, ದೀರ್ಘಗಳ ರೂಢಿ ಆಗುತ್ತಿತ್ತು. ಮಕ್ಕಳು ಅಕ್ಷರ ಗುರುತಿಸಿ ಶಬ್ದ, ವಾಕ್ಯದ ಕಡೆಗೆ ಹೋಗುತ್ತಿದ್ದುದರಿಂದ ಮರೆಯಲಾರದಷ್ಟು ಮೈಗೂಡುತ್ತಿತ್ತು. ಈಗ ಆ ಪದ್ಧತಿ ಬಿಟ್ಟದ್ದೇ ಇಷ್ಟೊಂದು ತಪ್ಪುಗಳಿಗೆ ಕಾರಣ.

ಈಗ ಶಬ್ದ ಮತ್ತು ವಾಕ್ಯ ಪದ್ಧತಿ ಜಾರಿಯಲ್ಲಿದೆ. ಇದರಲ್ಲಿ ಗಿಳಿ ಓದಿನ ತರ ಮಕ್ಕಳು ರೂಢಿಸಿಕೊಳ್ಳುತ್ತಾರೆ. ಹಾಗಾಗಿ ಅಕ್ಷರ ಸ್ಖಾಲಿತ್ಯ ಮತ್ತು ಅಕ್ಷರ ಲೋಪ ಉಂಟಾಗುತ್ತದೆ. ಅದು ದೋಷ ರೂಪದಲ್ಲಿ ಪ್ರಕಟವಾಗುತ್ತದೆ.

ಮೇಲಿನ ಎರಡು ಹೇಳಿಕೆಗಳ ಒಳಹೊಕ್ಕು ನೋಡಿದಾಗ ಸತ್ಯದ ದರ್ಶನ ಆಗಬಹುದು ಎನ್ನುವುದು ನನ್ನ ನಂಬಿಕೆ. ಭಾಷೆಯ ಕಲಿಕೆಯಲ್ಲಿ ಅಕ್ಷರ ಕಲಿಕೆ ಮೊದಲೋ? ಆಲಿಸುವಿಕೆ ಮೊದಲೋ? ಎಂಬ ಪ್ರಶ್ನೆ ಇಲ್ಲಿ ಮುಖ್ಯವಾಗಿ ಹುಟ್ಟುತ್ತದೆ. ಯಾವ ಮಗುವೂ ಮಾತನಾಡುವುದಕ್ಕಿಂತ ಮೊದಲು ಓದುವುದಿಲ್ಲ. ಇದು ಬಹಳ ಸಾಮಾನ್ಯ ವಿಚಾರ.

ಮಕ್ಕಳು ಮಾತು (ಭಾಷೆ) ಕಲಿಯುವುದು ತಾಯಿ-ತಂದೆ, ಮನೆಯವರ, ನೆರೆಯವರ, ಸುತ್ತಣ ಪರಿಸರದವರ ಮತ್ತು ಶಾಲೆಗಳ ಸಹಾಯದಿಂದ. ಮೊದಲ ಮಾತು ಕಲಿಯುವ ಮಗು ತನ್ನ ಹತ್ತಿರದವರ ಮಾತುಗಳನ್ನು ಗಮನವಿಟ್ಟು ಅಂದರೆ ತನ್ನ ಸಂಪೂರ್ಣ ಇಂದ್ರಿಯ ಶಕ್ತಿಗಳ ಮೂಲಕ 'ಆಲಿಸಿ' ಅನುಕರಿಸುತ್ತದೆ. ಆಡುವವರನ್ನು ತದೇಕಚಿತ್ತದಿಂದ ನೋಡುತ್ತಾ-ಮುಖದ ಭಾವ ವೈವಿಧ್ಯ, ತುಟಿಯ ಚಲನೆ ಮತ್ತು ಧ್ವನಿಯನ್ನು ತನ್ನದಾಗಿಸಿಕೊಳ್ಳಲು, ಭಾಷೆಯನ್ನಾಗಿಸಲು ಪ್ರಯತ್ನಿಸುತ್ತದೆ. ಮತ್ತೆ ಮತ್ತೆ ಅದೇ ಸನ್ನಿವೇಶ, ಅದೇ ಮಾತು, ಅದೇ ವಸ್ತು ಸಿಕ್ಕಿದಾಗ ಪುನರಾವರ್ತನೆ ಆಗುತ್ತದೆ. ಆದ್ದರಿಂದ ಭಾಷಾ ಕಲಿಕೆಯಲ್ಲಿ ಆಲಿಸುವಿಕೆ ಮತ್ತು ಸಂಭಾಷಣೆಗೆ ಪ್ರಥಮ ಸ್ಥಾನ. ಇದು ಅಕ್ಷರ ಪದ್ಧತಿಯಲ್ಲೂ ಅಷ್ಟೇ. ಶಬ್ದ, ವಾಕ್ಯ ಪದ್ಧತಿಯಲ್ಲೂ ಅಷ್ಟೇ. ಅದಕ್ಕೇ ಹೇಳುವುದು- ಶಿಕ್ಷಕರು ಅಕ್ಷರವನ್ನಾಗಲೀ, ಶಬ್ದವನ್ನಾಗಲೀ ಉಚ್ಚರಿಸುವಾಗ ಮಗುವಿಗೆ ಕೇಳುವಂತೆ ಸ್ಪಷ್ಟವಾಗಿ, ವೇಗವೂ ಅಲ್ಲದ, ನಿಧಾನವೂ ಅಲ್ಲದ ರೀತಿಯಲ್ಲಿ ಮಗುವಿನ ಮುಖ ನೋಡುತ್ತಾ ಹೇಳಬೇಕು. ಪುನಃ ಉಚ್ಚರಿಸಬೇಕು. ಮಗು, ಒಂದು ಬಾರಿ ಹೇಳಿದಾಗ ಆಲಿಸುತ್ತದೆ. ಎರಡನೆಯ ಬಾರಿ ಹೇಳಿದಾಗ ಮನನ ಮಾಡುತ್ತದೆ. ಮೂರನೆಯ ಸಲ ಹೇಳಿದಾಗ ಶಬ್ದರೂಪ ಕೊಡಲು ಸಿದ್ಧವಾಗುತ್ತದೆ. ಪರಭಾಷೆ-ಯಾದಾಗಲಂತೂ (ಇಂಗ್ಲಿಷ್ ಇತ್ಯಾದಿ) ಪುನರಾವರ್ತನೆಯನ್ನು ಹೆಚ್ಚು ಮಾಡಬೇಕು.

ಹಾಗೆಯೇ ಶಿಕ್ಷಕರು ಶಬ್ದಗಳನ್ನು ಉಚ್ಚರಿಸುವಾಗ ಅಲ್ಪಪ್ರಾಣ, ಮಹಾಪ್ರಾಣ ಗ್ರಹಿಕೆಯನ್ನು ಸ್ಪಷ್ಟವಾಗಿ ಇಟ್ಟುಕೊಳ್ಳಬೇಕು. 'ಕ...ಖ' ಎನ್ನುವ ಬದಲು 'ಕ... ಕ ಎಂದೋ, 'ಮುಖ್ಯ'

ಎನ್ನುವ ಬದಲು 'ಮುಕ್ಕ' ಎಂದೋ ತಪ್ಪು ಉಚ್ಚರಿಸಿದರೆ ಮಕ್ಕಳೂ ಇದೇ ತಪ್ಪನ್ನು ಮಾಡುತ್ತಾರೆ. ಬರೆಯುವಾಗಲೂ ಅಷ್ಟೇ. ಶಿಕ್ಷಕರು ಸರಿಯಾಗಿ ಬರೆದು ತೋರಿಸಬೇಕು. ಅಕ್ಷರ ಪದ್ಧತಿಯಾಗಲಿ, ಶಬ್ದ ಪದ್ಧತಿಯಾಗಲಿ, ಅದರ ಯಶಸ್ಸು ಮಕ್ಕಳ ಆಲಿಸುವಿಕೆ ಮತ್ತು ನೋಡುವಿಕೆಯನ್ನು ಅವಲಂಬಿಸಿದೆ. ಮಕ್ಕಳು ಬರೆಹವನ್ನು ಕಣ್ಣಿನಿಂದಲೂ ಕಿವಿಯಿಂದಲೂ ಏಕಕಾಲದಲ್ಲಿ ಓದುತ್ತಾರೆ. ಇವೆರೆಡರ ಸುಸಂಗತತೆ ಬಹಳ ಮುಖ್ಯ.

ಈ ಪದ್ಧತಿಗಳ ಸಾಧಕ-ಬಾಧಕಗಳೇನು?

ಅಕ್ಷರ ಪದ್ಧತಿ ಮತ್ತು ಶಬ್ದ ಪದ್ಧತಿಗಳ ಸಾಧಕ-ಬಾಧಕಗಳ ಬಗ್ಗೆ ತುಸು ಚರ್ಚಿಸಬೇಕು. ಅಕ್ಷರಗಳನ್ನು ಮಕ್ಕಳಿಗೆ ಹೇಳಿಕೊಡುವಾಗ ಬೋಧಕರು ವೈಯಕ್ತಿಕವಾಗಿ ಮಕ್ಕಳ ಸಂಪರ್ಕವನ್ನು ಹೊಂದಿರುತ್ತಾರೆ. ಪಾಟಿ (ಸ್ಲೇಟ್)ಯ ಮೇಲೆ ವಿದ್ಯಾರ್ಥಿಯ ಹತ್ತಿರದಲ್ಲಿಯೇ ಕುಳಿತು ಅಕ್ಷರವನ್ನು ಎಲ್ಲಿಂದ ಆರಂಭಿಸಬೇಕು? ಹೇಗೆ ಬರೆಯಬೇಕು? ಎನ್ನವುದನ್ನು ಕಾಣಿಸುತ್ತಾರೆ. ಕೆಲವು ಸಲ ಶಿಕ್ಷಕರೇ ಮಗುವಿನ ಕೈ ಹಿಡಿದೂ ಬರೆಸುತ್ತಾರೆ. ಹಾಗೇ ತಿದ್ದುವಾಗ ಬಾಯಿಯಲ್ಲಿ ತಾವೂ ಹೇಳುತ್ತಾ ಮಕ್ಕಳಿಂದ ಹೇಳಿಸುತ್ತಾ ತಿದ್ದಿಸುತ್ತಾರೆ. ಇದರಿಂದ ಅಕ್ಷರ ಬರೆಹದಲ್ಲಿ ಖಚಿತತೆ ಬರುತ್ತದೆ. ಇದು ಸ್ಮೃತಿಪಟಲದಲ್ಲಿ ಗಟ್ಟಿಯಾಗಿ ಒತ್ತಲ್ಪಡುತ್ತದೆ. ಮರೆಯುವುದಿಲ್ಲ. ಇದರಲ್ಲಿ ಸಣ್ಣ ದೋಷವೂ ಇದೆ ಅನ್ನಿ. ಅದೆಂದರೆ, ಮಗುವಿಗೆ ಓದುಬರೆಹವೆಂದರೆ ಒಂದು ರೀತಿಯ ಜೈಲುಶಿಕ್ಷೆಯಾಗಿ ಬಿಡಬಹುದು. ಬೇಗ ಕಲಿಯದಿದ್ದರೆ ತಪ್ಪಿದರೆ ಮನೆಯಲ್ಲಿ ಹೆತ್ತವರು, ಶಾಲೆಯಲ್ಲಿ ಶಿಕ್ಷಕರು ಅಥವಾ ಶಿಕ್ಷಕಿಯರು ಕಿವಿಗೆಂಡೆ ಮೇಲೆ ಎತ್ತುತ್ತಾರೆ. ಆದ್ದರಿಂದ ಶಿಕ್ಷೆ ಶಿಕ್ಷಣವಾಗದೆ. ಶಿಕ್ಷಣ ಒಂದು ಶಿಕ್ಷೆಯಾಗಿಬಿಟ್ಟಿದೆ.

ಅಕ್ಷರಗಳನ್ನು ಹಕ್ಕಿ ಹಕ್ಕಿ ಓದುವುದರಿಂದ ಕಣ್ಣು, ಕಿವಿ, ಧ್ವನ್ಯಂಗ ಒಟ್ಟಿಗೇ ಕೆಲಸ ಮಾಡಬೇಕಾಗುತ್ತದೆ. ಹೀಗಾಗಿ ಪಟುತ್ವ ಹೆಚ್ಚುತ್ತದೆ.

ಶಬ್ದಪದ್ಧತಿಯಲ್ಲಿ ಈ ಶಿಕ್ಷೆ ಬಹಳ ಮಟ್ಟಿಗೆ ಕಡಿಮೆಯಾಗುತ್ತದೆ. ಅರ್ಥವಿಲ್ಲದ ಅಕ್ಷರವನ್ನು 'ಗೋಳೋ' ಎಂದು ತಿದ್ದುವುದಕ್ಕಿಂತ ಅರ್ಥಪೂರ್ಣವಾದ ಶಬ್ದವನ್ನು ಮಗು ಲವಲವಿಕೆಯಿಂದ ಕಲಿಯುತ್ತದೆ. ಇದನ್ನು ಒಂದು ಉದಾಹರಣೆಯಿಂದ ಸ್ಪಷ್ಟಪಡಿಸಬಹುದು. 'ಹಸ್ತ' ಎಂಬ ಶಬ್ದವನ್ನು ಹೇಳುವಿರಿ ಎಂದಿಟ್ಟುಕೊಳ್ಳೋಣ. ಆಗ ಮಗು ಇಡಿಯಾಗಿ ಹಸ್ತವನ್ನು ಗ್ರಹಿಸುತ್ತದೆ ಮತ್ತು ಆಸಕ್ತಿ ತೋರುತ್ತದೆಯೇ ಹೊರತು ಬೆರಳು, ಮಧ್ಯದ ಕರತಲವನ್ನು ಬಿಡಿಬಿಡಿಯಾಗಿ ಯೋಚಿಸಿಕೊಳ್ಳುವುದಿಲ್ಲ. ಹಾಗೆಯೇ 'ಹಸ್ತ' ಎಂದು ಬರೆದಾಗ ಅದು 'ಹ' ಬೇರೆ, 'ಸ್ತ' ಬೇರೆ ಎಂದು ಗ್ರಹಿಸುವುದಿಲ್ಲ. 'ಹಸ್ತ' ಎಂಬುದನ್ನು ಒಂದು ಘಟಕ (ಯುನಿಟ್) ಆಗಿಯೇ ಮಗು ಗ್ರಹಿಸುತ್ತದೆ. ಆದ್ದರಿಂದ ಶಬ್ದವನ್ನು ಮೊದಲು ಓದಿ, ಆಮೇಲೆ ಬರೆದು, ಅನಂತರ ಕೇಳಿ ಬರೆಯುತ್ತದೆ. ಇಲ್ಲಿ ಬೇಸರ ಬರುವುದಿಲ್ಲ. ಪಾಠವು ಆಟವಾಗುತ್ತದೆ. ಹೀಗೆ ೨೦೦ ಶಬ್ದ ಕಲಿಯುವುದರಲ್ಲಿ ಎಲ್ಲಾ ಅಕ್ಷರಗಳನ್ನು ಮಗು ಕಲಿಯುತ್ತದೆ. ಬಿಡಿಬಿಡಿ ಅಕ್ಷರಗಳ ಅಭ್ಯಾಸವೂ ತನ್ನಿಂದ ತಾನೇ ಆಗುತ್ತದೆ. ಮೂಲ ಅಕ್ಷರ, ಕಾಗುಣಿತ, ಒತ್ತಕ್ಷರ ಇತ್ಯಾದಿ ಒಟ್ಟಿಗೇ ಅಭ್ಯಾಸವಾಗಿಬಿಡುತ್ತದೆ. ಆದ್ದರಿಂದ 'ಶಬ್ದ ಪದ್ಧತಿ' ಹೆಚ್ಚುಸುಖ ಮತ್ತು ಸುಲಭದ ಪದ್ಧತಿ ಆಗಿದೆ.

ಅಂದಮಾತ್ರಕ್ಕೆ ಈ ಪದ್ಧತಿ ಅಪಾಯರಹಿತವೇನಲ್ಲ. ಮಕ್ಕಳು ಪಾಠವನ್ನು 'ಉರು' ಹೊಡೆದುಬಿಡುವ ಅಪಾಯವಿದೆ. 'ಹತ್ತನೆಯ ಪಾಠ ಓದು' ಎಂದರೆ ಸಾಕು. ಪುಸ್ತಕ ತೆರೆಯುವ ಮೊದಲೇ ಪಾಠದ ತಲೆಬರೆಹದಿಂದ ಹಿಡಿದು ಇಡಿಯ ಪಾಠದ ಓದನ್ನು ಮುಗಿಸಿಬಿಡುತ್ತಾರೆ. ಏಕೆ ಹೀಗೆ ಆಗುತ್ತದೆ ಎಂದರೆ ಮಕ್ಕಳ ಜತೆ ಬೋಧಕರು ಹೆಚ್ಚು ವೇಳೆ ಕಳೆಯುವುದಿಲ್ಲ. ಮಕ್ಕಳಿಗೆ ಶಬ್ದದ ಕಲಿಕೆಯಲ್ಲಿ ಸಾಕಷ್ಟು ರೂಢಿ (ಪ್ರಾಕ್ಟೀಸ್) ಆಗಿರುವುದಿಲ್ಲ. 'ಶಬ್ದ ಕಲಿಕೆ' ಎಂದರೆ ಬರೀ ಓದುವುದಲ್ಲ, ನೋಡಿ ಬರೆಯುವುದೂ ಅಲ್ಲ. ಕೇಳಿ ಬರೆಯಬೇಕು. ತಾವಾಗಿಯೇ ಯೋಚಿಸಿ ಬರೆಯಬೇಕು. ಅಂದರೆ ಒಂದು ಶಬ್ದ ಸರಿಯಾದ ಉಚ್ಚಾರದೊಂದಿಗೆ ಸರಿಯಾದ ಬರೆಹದಲ್ಲಿ ಅಂತರ್ಗತ ಆಗಬೇಕು. ಹೀಗೆ ಆಗದೇ ಇರುವುದರಿಂದಲೇ 'ಶಬ್ದ ಪದ್ಧತಿಯ' ಪ್ರಯೋಗದಲ್ಲಿ ದೋಷಗಳು ಹೆಚ್ಚಾಗುತ್ತವೆ. ಮೊದಲ ಪದ್ಧತಿ ಬೋಧಕರಿಗೆ ಸುಖ. ಎರಡನೆಯದು ಮಕ್ಕಳಿಗೆ ಸುಖ. ಇದನ್ನು ಸರಿಪಡಿಸಲು ಆಗದೇ ಇದ್ದುದರಿಂದಲೇ ಈಗ ಪುನಃ ಅಕ್ಷರ ಪದ್ಧತಿಯನ್ನೇ ಜಾರಿಗೆ ತಂದಿದ್ದಾರೆಂದು ತೋರುತ್ತದೆ.

ಪದ್ಧತಿಗಳು 'ಸ್ವಯಂಭೂ' ಅಲ್ಲ

ಯಾವುದೇ ಪದ್ಧತಿಯೂ ಸ್ವಯಂಭೂ ಅಲ್ಲ, ಪರಿಪೂರ್ಣವೂ ಅಲ್ಲ. ಮುಂದಿನ ಪದ್ಧತಿಯಲ್ಲಿ ಹಿಂದಿನ ಗಟ್ಟಿ ದ್ರವ್ಯ ಇರಲೇ ಬೇಕು. ಕುಶಲಿಯಾದ ಶಿಕ್ಷಕರು ಈ ಮೇಲಿನ ಎರಡೂ ಪದ್ಧತಿಗಳನ್ನು ಹೊಂದಿಸಿಕೊಂಡು ಯಶಸ್ವಿಯಾಗಿ ಬೋಧನ ಕಾರ್ಯ ಕೈಗೊಳ್ಳುವಲ್ಲಿ ಮಕ್ಕಳ ಸರ್ವತೋಮುಖ ಪ್ರಗತಿ, ಯಶಸ್ಸು ಇದೆ. ಹಾಗೇ ಶಿಕ್ಷಕ ಪದ್ಧತಿಗಳಲ್ಲಿ ಯಾವುದು ಶ್ರೇಷ್ಠ ಎಂದು ಹುಡುಕುವ ಸಿದ್ಧಾಂತಿಯಲ್ಲ. ಬದಲಾಗಿ ಎಲ್ಲದರಲ್ಲಿಯ ಒಳ್ಳೆಯದನ್ನೂ ಆರಿಸಿಕೊಂಡು ಸಂಯೋಜಿಸಿಕೊಂಡು ದುಡಿಯುವ ನಿತ್ಯ ಪ್ರಯೋಗಶೀಲ ಮತ್ತು ಪ್ರಯೋಗಕರ್ತ. ಹಾಗಾದಾಗಲೇ ಬೋಧನೆಗೆ ಸರ್ವಾಂಗ ಯಶಸ್ಸು ದೊರೆಯುತ್ತದೆ.

ಆಡಳಿತಾತ್ಮಕ ದೋಷ

ಹೀಗೆ ಕಲಿಕೆಯ ದೋಷಗಳನ್ನು ಪದ್ಧತಿಯಲ್ಲಿ ಅರಸುವವರು ಒಂದು ಮಹತ್ವದ ಆಡಳಿತಾತ್ಮಕ ಅಂಶವನ್ನು ಮರೆಯುತ್ತಾರೆ. ಅದೆಂದರೆ, ಮಕ್ಕಳಿಗೆ ವೈಯಕ್ತಿಕ ಗಮನ ಕೊಡಬೇಕು ಎನ್ನುವುದು ಸುಲಭ. ಆದರೆ ಪರಿಸ್ಥಿತಿ ಹೇಗಿದೆ? ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಅನುಪಾತ ಎಷ್ಟಿದೆ? ಒಂದು ಹಳ್ಳಿಪರಿಸರದ ತಾಲೂಕಿನಲ್ಲಿಯೇ ೨೦೦ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇರುವ ಶಾಲೆಗಳಲ್ಲಿ ಕೇವಲ ಇಬ್ಬರು ಶಿಕ್ಷಕರೋ, ಶಿಕ್ಷಕಿಯರೋ ಇರುವ ಶಾಲೆ ಆರು-ಏಳು ಆದರೂ ಇವೆ. ಒಂದು ಪೂರ್ಣ ಪ್ರಾಥಮಿಕ ಶಾಲೆಗೆ ನಾಲ್ಕು ಜನ ಬೋಧಕರೂ ಇಲ್ಲದಿದ್ದ ಮೇಲೆ ಬೋಧನೆಯ ಮಟ್ಟ ಹೇಗಿರಬೇಕು? ನೀವೇ ಊಹಿಸಿ. ಇದು ಇಂದಿನ ಕರ್ನಾಟಕದ ಪ್ರಾಥಮಿಕ ಕನ್ನಡ ಶಾಲೆಗಳ ವಸ್ತುಸ್ಥಿತಿ.

ಅದೇನೇ ಇದ್ದರೂ ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಭಾಷೆಯ ಬೆಳವಣಿಗೆಗೆ ಕೆಲವು ಮುಖ್ಯ ಸಲಹೆಗಳನ್ನು ಹೀಗೆ ಪಟ್ಟಿ ಮಾಡಬಹುದಾಗಿದೆ-

ಗಟ್ಟಿಯಾಗಿ ಓದುವುದು

ಪ್ರಾಥಮಿಕ ಶಾಲಾ ಹಂತದ ಕಲಿಕೆಯಲ್ಲಿ ಗಟ್ಟಿಯಾಗಿ ಓದುವುದು ಬಹಳ ಮುಖ್ಯ. ಹೀಗೆ ಓದುವುದರಿಂದ ಮಕ್ಕಳು ತಮ್ಮ ಉಚ್ಚಾರವನ್ನು ತಾವೇ ಕೇಳಿಕೊಳ್ಳುತ್ತಾರೆ. ಅಂದರೆ 'ಆಲಿಸುವಿಕೆ' ಬಲಗೊಳ್ಳುತ್ತದೆ. ಇದರಿಂದ ಧ್ವನ್ಯಂಗಗಳು ಪಟುತ್ವ ಹೊಂದುತ್ತವೆ. ಹೀಗೆ ಓದುವುದರಿಂದ ಮಕ್ಕಳು ತಪ್ಪಿದರೆ ಶಿಕ್ಷಕರು, ಹಿರಿಯರು, ಪಾಲಕರು ತಿದ್ದಲು ಅನುಕೂಲವಾಗುತ್ತದೆ. ಈ ತಿದ್ದುವಿಕೆ ಒಂದು 'ಶಿಕ್ಷೆ' ಆಗದಂತೆ ತಿದ್ದುವವರು ಎಚ್ಚರವಹಿಸಬೇಕು. ಇಲ್ಲವಾದಲ್ಲಿ ತೆನಾಲಿ ರಾಮಕೃಷ್ಣನ ಬೆಕ್ಕು ಹಾಲು ಕುಡಿದಂತೆ ಆಗುತ್ತದೆ. ಕೆಳಗಿನ ತರಗತಿಯ ಓದು ಬಾಯ್ದೆರೆಯದ್ದಾಗಿರಬೇಕು. ಬೋಧಕರು ಮಾದರಿ ಓದನ್ನು ಒದಗಿಸಬೇಕು.

ಶಬ್ದ ಬರೆಯುವುದು

ಇದು ಬಹಳ ಮಹತ್ವದ್ದು. ಪಾಠದ ಪುನರಾವರ್ತನೆಯ ಸಂದರ್ಭದಲ್ಲಿ ಕಡ್ಡಾಯವಾಗಿ 'ಶಬ್ದ ಕೇಳಿ ಬರೆಹ' ಇರಬೇಕು. ಬೋಧಕರು ಮೊದಲೇ ಒಂದು ಪಟ್ಟಿಯನ್ನು ಸಿದ್ಧಪಡಿಸಿ ಕೊಂಡಿರಬೇಕು. ಹ್ರಸ್ವ, ದೀರ್ಘ, ಅಲ್ಪಪ್ರಾಣ, ಮಹಾಪ್ರಾಣ, ಒತ್ತಕ್ಷರ, ಅನುನಾಸಿಕ, ಅನುಸ್ವಾರಗಳ ವ್ಯತ್ಯಾಸಗಳಿಂದ ಶಬ್ದಗಳ ಪಟ್ಟಿ ತಯಾರಿಸಬೇಕು. ಉದಾ: ದಡ್ಡ-ದಡ, ನೆಗ್ಗು-ನೆಡು, ಅಂಗಳ-ಅಗಳ, ರೋಖ-ರೊಕ್ಕ, ಅತ್ತೆ-ಕತ್ತೆ, ಅಮ್ಮ-ಗುಮ್ಮ, ತಮ್ಮ-ಎಮ್ಮೆ, ಸ್ಥಾನ-ಸ್ಥಾಪನೆ, ಮಂಗ-ಮಗ, ಕಷ್ಟ-ನಷ್ಟ, ಕ್ಷಾರ-ಕ್ಷತ್ರಿಯ ಇತ್ಯಾದಿಯಾಗಿ ಧ್ವನ್ಯಂತರವುಳ್ಳ ಆಘಾತ (ಸ್ಟ್ರೆಸ್) ಗಳ ಶಬ್ದಗಳ ಪಟ್ಟಿಯನ್ನು ತಯಾರಿಸಿಕೊಳ್ಳಬೇಕು. ಇಂಥ ಒಂದು ನೂರು ಶಬ್ದಗಳನ್ನು ತಯಾರಿಸಿ ಕೊಟ್ಟು ಒಂದು ವಾರದ ಅನಂತರ ಅದರ ಸ್ಪರ್ಧೆ ಏರ್ಪಡಿಸ ಬಹುದಾಗಿದೆ.

ಹಾಗೇ 'ಮಂಗ' ಶಬ್ದ ಬರೆಸಿ, ಓದಿಸುವುದು- ಮಧ್ಯದ ಸೊನ್ನೆ ತೆಗೆದು ಇನ್ನೊಮ್ಮೆ ಓದಿಸುವುದು. 'ಎಣಿ' ಬರೆಸಿ ಒಮ್ಮೆ ಓದಿಸುವುದು. ಇನ್ನೊಮ್ಮೆ 'ಎಣಿ' ಬರೆಸಿ ಓದಿಸುವುದು. ಹೀಗೆ ಬರೆಯುವುದರಲ್ಲಿ ಸರಿ, ತಪ್ಪು ಬರೆಸಿ ದೊಡ್ಡದಾಗಿ ಓದಿಸಿ ತಿದ್ದಿಸಬೇಕು. ಇದು ಶಬ್ದಗಳ ಬರೆಯುವಿಕೆಯಲ್ಲಿ ಸರಿ, ತಪ್ಪಿನ ಅರಿವನ್ನು ಸ್ಪಷ್ಟವಾಗಿ ಮಾಡಿಸುತ್ತದೆ. ಶಬ್ದಗಳ ಕುರಿತು ಖಚಿತ ಜ್ಞಾನವನ್ನು ತರುತ್ತದೆ.

ಶುದ್ಧ ಬರಹ ಅಥವಾ ಕೇಳಿ ಬರಹ

ಪ್ರತಿ ಪಾಠ ಮುಗಿದಾಗಲೂ ಒಂದು ದೀರ್ಘವಾದ ಪ್ಯಾರಾವನ್ನು ಕೇಳಿ ಬರಹಕ್ಕಾಗಿ ಉಪಯೋಗಿಸಬೇಕು. ಬೋಧಕರು ಓದುವಾಗ ಎಲ್ಲ ಮಕ್ಕಳಿಗೂ ಕೇಳುವಂತೆ ಸರಿಯಾದ ರೀತಿಯಲ್ಲಿ ಹೆಚ್ಚು ನಿಧಾನವೂ ಹೆಚ್ಚು ವೇಗವೂ ಆಗದ ರೀತಿಯಲ್ಲಿ ಓದಬೇಕು.

ಉದಾ: "ಅಶೋಕನು ರಣರಂಗದಲ್ಲಿ ಬಿದ್ದು ಆರ್ತನಾದ ಮಾಡುತ್ತಿದ್ದ ಲಕ್ಷಾಂತರ ಗಾಯಾಳು ಸೈನಿಕರನ್ನು ಕಣ್ಣಾರೆ ಕಂಡು ಮಮ್ಮಲ ಮರುಗಿದನು" ಎಂಬ ವಾಕ್ಯವಿದೆ ಎಂದುಕೊಳ್ಳುವ. ಇದನ್ನ ಕೇಳಿ ಬರಹಕ್ಕೆ ಆರಿಸಿಕೊಂಡಾಗ ವಾಕ್ಯ ಖಂಡವನ್ನು ಒಮ್ಮಲೇ

ಓದಬೇಕು. ಬದಲಾಗಿ "ಅಶೋಕನು.... ಅಶೋಕನು, ರಣರಂಗದಲ್ಲಿ ಬಿದ್ದು... ಬಿದ್ದು" ಹೀಗೆ ಬಿಡಿಸಿ ಬಿಡಿಸಿ ಓದಬಾರದು. ನಾಲ್ಕಾರು ಬಾರಿ ದೊಡ್ಡದಾಗಿ ವಾಕ್ಯ ಓದಿಸಬೇಕು. ಅನಂತರ ಬರೆಯಲು ಹೇಳಬೇಕು. ತಪ್ಪಿದರೆ ಹತ್ತು ಬಾರಿ ಬರೆಸಬೇಕು. ಅಥವಾ ಅದಕ್ಕೂ ಮೊದಲು ಮಕ್ಕಳ ಪ್ರಗತಿಯನ್ನೂ ಗಮನಿಸಿ ಅರ್ಥ ಪೂರ್ಣವಾದ ವಾಕ್ಯಖಂಡವನ್ನು ಓದಬೇಕು.

ನೋಡಿ ಬರಹ

ಇದರಲ್ಲಿ ಎರಡು ವಿಧಗಳು. ಅಕ್ಷರಗಳನ್ನು ಸುಂದರಗೊಳಿಸುವುದಕ್ಕಾಗಿ ಬರೆಯುವುದು. ಇನ್ನೊಂದು ಪಾಠವನ್ನು ನೋಡಿ ಬರೆಯುವುದು. ಮೊದಲನೆಯದು ಅಕ್ಷರಗಳನ್ನು ಸುಂದರಗೊಳಿಸಿದರೆ, ಎರಡನೆಯದು ಬರಹವನ್ನು ಶುದ್ಧಗೊಳಿಸುತ್ತದೆ. ದಿನಾಲೂ ಮನೆಯಿಂದ ಒಂದು ಜೋಡು ಗೆರೆ ನೋಟ್ ಪುಸ್ತಕದಲ್ಲಿ (ಹಿಂದಿ ಬರೆಯಲು ಉಪಯೋಗಿಸುವ) ಪಾಠ ಬರೆದು ತರಲು ಹೇಳಬೇಕು. ಮೂರನೆಯ ತರಗತಿಯಿಂದಲೇ ಈ ಪದ್ಧತಿ ಜಾರಿಗೆ ಬಂದಲ್ಲಿ ನಾಲ್ಕು ಮತ್ತು ಐದನೆಯ ತರಗತಿಗೆ ಮಗು ಬರುವ ಹೊತ್ತಿಗೆ ಅಕ್ಷರಗಳು ಮುತ್ತಿನಂತೆ ಆಕಾರ ಪಡೆಯುತ್ತವೆ.

ಉಚ್ಚಾರದ ಸುಭಗತೆ

ಬಹಳ ಮಕ್ಕಳಿಗೆ ಉಚ್ಚಾರದ ತೊಂದರೆ ಇರುತ್ತದೆ. ಶಬ್ದ, ವಾಕ್ಯಗಳ ಉಚ್ಚಾರ ಕಷ್ಟವಾಗುತ್ತದೆ. ಇದಕ್ಕೆ ವಾಡಿಕೆಯಲ್ಲಿ 'ನಾಲಗೆ ತಿರುಗದೇ ಇರುವುದು' ಎನ್ನುತ್ತಾರೆ. ಇದಕ್ಕೆ ಕೆಲವು ಪದ್ಯಗಳನ್ನು ಆರಿಸಿಕೊಂಡು ಒಂದು ಆಟವನ್ನು ಆಡಿಸಬಹುದು. "ಕರಿ ಕುರಿ ಮರಿ ಕೆರೆ ಏರಿ ಮೇಲೆ ಮೇಯ್ತದೆ" ಎಂಬ ಸಾಲನ್ನು ತೀರಾ ವೇಗ ವೇಗವಾಗಿ ಉಚ್ಚರಿಸಲು ಹೇಳಬೇಕು. ಶಿಕ್ಷಕರಿಗೆ ಮೊದಲು ಈ ರೀತಿಯ ಪದ್ಯ ಬರಬೇಕು. ಮಕ್ಕಳಿಗೆ ಈ ರೀತಿಯ ಉಚ್ಚಾರ ಖುಶಿ ಕೊಡುತ್ತದೆ. ಪಾಠ, ಆಟ ಆದಂತಾಗಿ ಮಕ್ಕಳಿಗೆ ಉಚ್ಚಾರದ ಸಮಸ್ಯೆ ಅರಿವಿಲ್ಲದಂತೆ ಮಾಯವಾಗಿ ಬಿಡುತ್ತದೆ. ಇದಕ್ಕೆ ಪೂರಕವಾದ ಪದ್ಯದ ಸಾಲುಗಳು ನಮ್ಮ ಜಾನಪದ ಸಾಹಿತ್ಯದಲ್ಲಿ ಬಹಳ ಸಿಗುತ್ತವೆ.

ಕವನ ಹಾಡುವುದು ಮತ್ತು ಓದುವುದು

ಕವನಗಳನ್ನು ಹಾಡುವುದೆಂದರೆ ಮಕ್ಕಳಿಗೆ ಎಲ್ಲಿಲ್ಲದ ಹುರುಪು. ಕೆಳಗಿನ ತರಗತಿಯಲ್ಲಿ ಪ್ರಾಸಪದ್ಯ, ಮಕ್ಕಳ ಪದ್ಯ, ತಮಾಷೆಯ ಪದ್ಯ ಹಾಡಿಸಬಹುದು. ಮುಂದಿನ ತರಗತಿಗಳಲ್ಲಿ ಭಾವಗೀತೆ ಹಾಡಿಸಬೇಕು. ಷಟ್ಪದಿಯನ್ನು ಗಮಕದ ರೀತಿಯಲ್ಲಿ ಹಾಡುವುದು. ಇವುಗಳನ್ನು ಮತ್ತು ಇತರ ಕವನಗಳನ್ನು ಮಾದರಿ ಓದನ್ನಾಗಿ ಕೊಟ್ಟು ಅರ್ಥವತ್ತಾಗಿ ಓದುವುದನ್ನು ಕಲಿಸಬೇಕು.

ನೆನಪನ್ನು ಹೆಚ್ಚಿಸಲು ಸ್ವರಚಿತ ಪದ್ಯ

ಮಕ್ಕಳಲ್ಲಿ ನೆನಪಿನ ಶಕ್ತಿ ಹೆಚ್ಚಿಸಲು ಪದ್ಯ ಹೆಣೆಯುವ ಆಟ ಆಡಿಸಬಹುದು. ಉದಾಹರಣೆಗಾಗಿ -ಇಲ್ಲಿ ಒಂದು ಪದ್ಯ ಕೊಡುತ್ತೇನೆ. (ಇದನ್ನು ನನಗೆ ಗೆಳೆಯ ಶ್ರೀಪಾದ ಭಟ್ಟ ಹೇಳಿದ್ದು. ಅವರಿಗೆ ಬೇರೆ ಯಾರೋ...)

"ಕೂಜಳ್ಳಿ ಮುದುಕ ಪೇಟೆಗೆ ಬಂದ."

ಇದನ್ನು ಮಕ್ಕಳ ಗುಂಪು ಹೇಳಬೇಕು.

ಅನಂತರ ಪುನಃ ಬೋಧಕ-

"ಮುದುಕನ ಹೆಂಡತಿ ಪೇಟೆಗೆ ಬಂದಳು."

ಪುನಃ ಮಕ್ಕಳು ಹೇಳಬೇಕು.

ಅನಂತರ ಶಿಕ್ಷಕ-

"ಕೂಜಳ್ಳಿ ಮುದುಕ ಮುದುಕನ ಹೆಂಡತಿ ಪೇಟೆಗೆ ಬಂದರು."

ಪುನಃ ಮಕ್ಕಳ ಗುಂಪು ಉಚ್ಚರಿಸಬೇಕು.

ಅನಂತರ ಶಿಕ್ಷಕ-

"ಮುದುಕನ ಮಗ ಪೇಟೆಗೆ ಬಂದ."

ಮಕ್ಕಳ ಗುಂಪು ಉಚ್ಚರಿಸಬೇಕು.

ಅನಂತರ ಬೋಧಕ-

"ಕೂಜಳ್ಳಿ ಮುದುಕ, ಮದುಕನ ಹೆಂಡತಿ, ಮುದುಕನ ಮಗ ಪೇಟೆಗೆ ಬಂದರು."

ಪುನಃ ಮಕ್ಕಳ ಗುಂಪು ಹೇಳುತ್ತದೆ. ಹೀಗೆ ಸಾಲುಗಳನ್ನು ಮೊದಲಿನ ಸಾಲಿಗೆ ತಕ್ಕಂತೆ ಕೂಡಿಸುತ್ತಾ ಹೋಗುವ ಆಟ. ಆಯಾಯ ಊರು, ಅಲ್ಲಿನ ಜನ, ಭಾಷೆ, ರಿವಾಜುಗಳನ್ನು ಬಳಸಿ ಅವರವರಿಗೆ ಸುಲಭವಾದ ಪದ್ಯ ಹೆಣೆಯಬಹುದು. ಇದನ್ನು ಎಷ್ಟೂ ಬೆಳಸಬಹುದು. ಅನಂತರ ಇದರಲ್ಲಿಯೇ ಒಂದು ಸ್ಪರ್ಧೆ ಏರ್ಪಡಿಸಬಹುದು. ಮಕ್ಕಳು ಸೋಲುವ ತನಕ ಪದ್ಯ ಮುಂದುವರಿಯಬಹುದು. ಇದರಿಂದ ಮಕ್ಕಳಿಗೆ ಖುಶಿ ಸಿಗುತ್ತದೆ. ಪಾಠ, ಆಟವಾಗುವಲ್ಲಿನ ಹೊಸ ಲೋಕ ಸೃಷ್ಟಿಟಿಯಾಗುತ್ತದೆ.

ಹಲವು ಮಕ್ಕಳು ಅಂತ್ಯಾಕ್ಷರಿ ಸ್ಪರ್ಧೆಯನ್ನು ಟಿ.ವಿ. ಗಳಲ್ಲಿ ನೋಡಿರಬಹುದು. ಶಬ್ದ ಯಾ ವಾಕ್ಯಗಳನ್ನು ಬಳಸಿ ಅದರ ಕೊನೆಯ ಅಕ್ಷರದಿಂದ ಮುಂದೆ ಬೆಳೆಸುವ ಕ್ರಿಯೆ-ಸ್ಪರ್ಧೆ. ಪದ್ಯಗಳನ್ನೂ ಬಳಸಿಕೊಳ್ಳಬಹುದು. ವೈಯಕ್ತಿಕವಾಗಿ ಅಥವಾ ಗುಂಪು ಗುಂಪಾಗಿ ಬೇಕಾದಂತೆ ಈ ಸ್ಪರ್ಧೆಯನ್ನು ರೂಪಿಸಿಕೊಳ್ಳಬಹುದು. ಇದರ ಜತೆ ಕವನಗಳ 'ರಸಪ್ರಶ್ನೆ' ಕಾರ್ಯಕ್ರಮಗಳನ್ನೂ ಮಾಡ ಬಹುದಾಗಿದೆ. ಒಂದರಿಂದ, ಏಳನೆಯ ತರಗತಿಯ ವರೆಗಿನ ಪಠ್ಯಪುಸ್ತಕದ ಪದ್ಯಗಳನ್ನು ಇದಕ್ಕೆ ಸೀಮಿತಗೊಳಿಸ ಬಹುದು.

ಕತೆ ಹೇಳುವುದು

ಕತೆ ಹೇಳುವುದು ಮತ್ತು ಕೇಳುವುದು ಯಾವ ತರಗತಿಯ ಮಕ್ಕಳಿಗೇ ಆದರೂ ಬಹಳ ಪ್ರಿಯ. ಕತೆ ಹೇಳಿಸುವ, ಕೇಳಿಸುವ ಕ್ರಿಯೆ ಒಬ್ಬರಿಂದ ಒಬ್ಬರಿಗೆ ಬದಲಾಗುತ್ತಾ ಸಾಗಬೇಕು.

ಬೋಧಕರು ಕೊನೆಗೆ ಒಂದು ಕತೆ ಹೇಳಬೇಕು. ಮುಂದಿನವಾರ ಇದೇ ಕತೆಯನ್ನು ಮಕ್ಕಳು ಹೇಳಬೇಕೆಂದು ಸವಾಲು ಹಾಕಬೇಕು. 'ಝೊ.... ಝೋ ಕತೆಯನ್ನು ಮಾಡಿಸಬಹುದು. (ಒಬ್ಬೊಬ್ಬರು ಒಂದೊಂದುವಾಕ್ಯ ಹೇಳಿ ಕತೆ ಮುಗಿಸುವುದಕ್ಕೆ 'ಝೊ... ಝೋ ಕತೆ ಅನ್ನುತ್ತಾರೆ'). ಇದರಿಂದ ಮಕ್ಕಳ ಕಲ್ಪನಾಶಕ್ತಿ ಕುದುರುತ್ತದೆ. ಭಾಷೆ ಬೆಳೆಯುತ್ತದೆ.

ಒಗಟು ಮತ್ತು ಗಾದೆ ಮಾತುಗಳು

ಐದರಿಂದ ಏಳನೆಯ ತರಗತಿಯ ಮಕ್ಕಳಿಗೆ ಈ ಅಭ್ಯಾಸ ಮಾಡಿಸಬಹುದು. ಒಗಟುಗಳನ್ನು ಮತ್ತು ಗಾದೆ ಮಾತುಗಳನ್ನು ಪುಸ್ತಕರೂಪದಲ್ಲಿ ಸಂಗ್ರಹಿಸಿ, ಶಾಲೆಯಲ್ಲಿ ಅಂದವಾಗಿ ಇಡಬಹುದು. ಒಂದು ನೋಟ್ ಬುಕ್ ತಂದು ಒಂದು ಕಡೆ ಗಾದೆಗಳು; ಇನ್ನೊಂದು ಕಡೆ ಒಗಟುಗಳನ್ನು ಬರೆದು ಇಡಬಹುದು. ಯಾರು ಹೆಚ್ಚುಸಂಗ್ರಹಿ ಸುತ್ತಾರೋ ಅಂಥವರಿಗೆ ಬಹುಮಾನ ಕೊಡಬೇಕು. ಪುಸ್ತಕವನ್ನು ಅಂದವಾಗಿ ಇಟ್ಟವರಿಗೂ ಪ್ರೋತ್ಸಾಹಕರ ಬಹುಮಾನ ಇಡಬೇಕು. ವರ್ಷದಲ್ಲಿ ಕೆಲವು ಬಾರಿ ಇದರ ಪ್ರದರ್ಶನ ಏರ್ಪಡಿಸಬಹುದು. ಇದರ ಜತೆಗೆ ಮಕ್ಕಳು ಸ್ವತಂತ್ರವಾಗಿ ಗಾದೆಗಳನ್ನು, ಒಗಟುಗಳನ್ನು ರಚಿಸುವಂತೆ ಹುರಿದುಂಬಿಸಬೇಕು.

ಜನಪದ ಕತೆ, ಕವನ ಸಂಗ್ರಹಿಸುವಿಕೆ

ಮಕ್ಕಳಿಗೆ ಮನೆಗೆಲಸದ ಜತೆ ಒಂದು ವಿಶೇಷ ಕೆಲಸವನ್ನೂ ಕೊಡಬಹುದಾಗಿದೆ. ತಂತಮ್ಮ ಹಿರಿಯರಿಂದ ಮತ್ತು ಸುತ್ತಮುತ್ತಲಿನ ಜನಪದರಿಂದ ಜನಪದ ಕತೆ, ಕವನಗಳನ್ನು ಸಂಗ್ರಹಿಸಲು ಪ್ರೋತ್ಸಾಹಿಸಬೇಕು. ಜನಪದ ವೈದ್ಯ, ಮಾಟಗಳ ಬಗ್ಗೆಯೂ ಸಂಗ್ರಹಿಸಲು ಸೂಚಿಸಬೇಕು. ಇವುಗಳನ್ನು ಸೇರಿಸಿ, 'ಕೈಬರೆಹ ಪತ್ರಿಕೆ' ತರಬಹುದು.

ಏಕಪಾತ್ರಾಭಿನಯ

ಭಾಷೆಯ ಬೆಳವಣಿಗೆಯಲ್ಲಿ ಏಕಪಾತ್ರಾಭಿನಯ ಮಹತ್ವದ ಪಾತ್ರವಹಿಸುತ್ತದೆ. ಒಂದೇ ವ್ಯಕ್ತಿ ಎರಡು, ಮೂರು ಜನರ ಅನುಕರಣೆ ಮಾಡುವುದು, ಪೌರಾಣಿಕ (ರಾಮಾಯಣ, ಮಹಾಭಾರತ, ಪಂಚತಂತ್ರ, ಬೈಬಲ್, ಜನಪದ, ಕರಾನ್ ಹೀಗೆ) ಪಾತ್ರ ಕತೆಗಳನ್ನು ಅಭಿನಯಿಸುವುದು ಇತ್ಯಾದಿ. ಇದರಿಂದ ಭಾವಪೂರ್ಣವಾದ ಮಾತು, ಅರ್ಥಪೂರ್ಣವಾದ ಕಲ್ಪನೆ ಬೆಳೆಯುತ್ತದೆ.

ಚರ್ಚಾಕೂಟ

ಇತ್ತೀಚಿನ ದಿನಗಳಲ್ಲಿ ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ಚರ್ಚಾಕೂಟ ಕಾರ್ಯಕ್ರಮಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಮಕ್ಕಳ ಅನುಭವ ಮತ್ತು ಕಲ್ಪನೆಗೆ ಎಟಕುವ ವಿಷಯಗಳನ್ನೇ ಆಯ್ದು ಚರ್ಚಾಗೋಷ್ಠಿ ಏರ್ಪಡಿಸಬಹುದು. 'ಕೊಡೆ ಮೇಲೋ ಕಂಬಳಿ ಮೇಲೋ' ನಗರ ಮೇಲೋ ಹಳ್ಳಿ ಮೇಲೋ', 'ವಿಜ್ಞಾನವರವೋ ಶಾಪವೋ?' ಇತ್ಯಾದಿ. ಮಕ್ಕಳಲ್ಲಿ ಚರ್ಚಾಕೂಟಗಳ ಮೂಲಕ ತಾರ್ಕಿಕ ಜ್ಞಾನ, ವಿಷಯಜ್ಞಾನ, ಚುರುಕುತನ, ನಿರೀಕ್ಷಣಾ ಚತುರತೆ ಬೆಳೆಯುತ್ತದೆ. ಎಲ್ಲವೂ ಮಕ್ಕಳ ಸ್ವಂತ ಬೌದ್ಧಿಕತೆಯ ಮೇಲೇ ಕೂಟ ಸಾಗಬೇಕು.',

ಚಿತ್ರಕತೆ

ಒಂದು ಚಿತ್ರವನ್ನು ಕೊಟ್ಟು ಮಕ್ಕಳಿಗೆ ಅದರ ಮೇಲೆ ಕಥೆ ಅಥವಾ ಕವನ ರಚಿಸುವಂತೆ ಸೂಚಿಸಬೇಕು.

ಟಿ.ವಿ. ಸುದ್ದಿ ರಚನೆ

ಈಗ ಹಳ್ಳಿಹಳ್ಳಿಗಳಲ್ಲೂ ಟಿ.ವಿ ಬಂದಿದೆ. ಹೀಗಾಗಿ ನಮ್ಮ ಮಕ್ಕಳಿಗೆ ಟಿ.ವಿ ಹೊಸದೇನಲ್ಲ. ಮಕ್ಕಳಿಗೆ ಟಿ.ವಿ.ಯಲ್ಲಿ ಬರುವ ಸಮಾಚಾರವನ್ನೇ ಅನುಕರಿಸಿ ತಂತಮ್ಮ ಸ್ವಂತ ಕಲ್ಪನಾಶಕ್ತಿಯ ಆಧಾರದ ಮೇಲೆ ಸುದ್ದಿ ಸೃಷ್ಟಿಸಿ ಹೇಳಲು ಹೇಳಬೇಕು. ಮಕ್ಕಳಿಗೆ ಇಂಥ ಆಟ-ಪಾಠ ಅಂದರೆ ಇಷ್ಟ. ಅವರಿಗೆ ಒಳ್ಳೆಯ ಮನೋರಂಜನೆಯೂ ದೊರಕುತ್ತದೆ.

ಉದಾ: ನಿನ್ನೆ ಇಂಥ ಊರಿನ ಸಮೀಪದ ಇಂಥಲ್ಲಿ ಮೀನಿಗೂ ಕೆ.ಎಸ್.ಆರ್.ಟಿ.ಸಿ. ಬಸ್ಸಿಗೂ ಭೀಕರ ಅಪಘಾತ ಸಂಭವಿಸಿ ಬಸ್ಸು ತೀವ್ರ ಹಾನಿಗೊಳಗಾಯಿತು.

ದೇಶದ ಪ್ರಧಾನ ಮಂತ್ರಿಗಳು (ಇಂಥವರು) ನಮ್ಮ ಶಾಲೆಯ ಪ್ರಧಾನಮಂತ್ರಿಯನ್ನು ಭೇಟಿಯಾಗಿ ತಮ್ಮ ಮಂತ್ರಿ ಮಂಡಲಕ್ಕೆ ಸೇರುವಂತೆ ಆಹ್ವಾನ ನೀಡಿದರು. ಆದರೆ ನಮ್ಮ ಪ್ರಧಾನಿ ಕು। ಇಂಥವರು ಅದನ್ನು ನಯವಾಗಿಯೇ ನಿರಾಕರಿಸಿದರು.

ಹೀಗೆ ಹಾಸ್ಯಭರಿತ ಸುದ್ದಿಗಳನ್ನು ಸೃಷ್ಟಿಸಿ ಟಿ.ವಿ ನ್ಯೂಸ್ ಮಾಡಬಹುದು.

ಪ್ರಬಂಧ, ಅರ್ಜಿ, ಆಮಂತ್ರಣಪತ್ರಿಕೆ, ಪತ್ರಿಕಾ ವರದಿ ರಚನೆ

ಶಾಲೆಗಳಲ್ಲಿ ಪ್ರಬಂಧ ಬರೆಸುವುದು ಸಾಮಾನ್ಯ. ಆದರೆ ಬದಲಾದ ಸಾಮಾಜಿಕ ವ್ಯವಸ್ಥೆಯ ಸಂದರ್ಭದಲ್ಲಿ ಅರ್ಜಿ ಬರೆಯುವ, ಆಮಂತ್ರಣ ಪತ್ರಿಕೆ ತಯಾರಿಸುವ, ಪತ್ರಿಕಾ ವರದಿ ತಯಾರಿಸುವ ಪರಿಪಾಠವನ್ನೂ ಮಕ್ಕಳಿಗೆ ಹೇಳಿಕೊಡಬೇಕು. ಮಕ್ಕಳಿಗೆ ಹೊಸ ಹೊಸ ವಿಷಯ, ವಿಚಾರಗಳ ಪರಿಚಯ, ಖುಶಿ, ರಂಜನೆ ಎಲ್ಲವೂ ದೊರಕುತ್ತದೆ. ಜತೆಗೆ ಬುದ್ಧಿಶಕ್ತಿ ಬೆಳೆಯುತ್ತದೆ. ಬದುಕಿನ ವಿವಿಧ ವ್ಯಾವಹಾರಿಕ ದಿನಚರಿಗಳ ಅರಿವೂ ಆಗುತ್ತದೆ.

ಪ್ರಬಂಧಕ್ಕೆ, ಪತ್ರಿಕಾವರದಿಗಳ ತಯಾರಿಕೆಗೆ ನಿರ್ದಿಷ್ಟ ವಿಷಯ ಕೊಡಬೇಕು. ಉತ್ತಮ ವರದಿ, ಪ್ರಬಂಧ, ಅರ್ಜಿ ತಯಾರಿಕೆಗಳಿಗೆ ಬಹುಮಾನ ಇರಿಸಬೇಕು.

ಕೈಬರೆಹ ಪತ್ರಿಕೆ

ನಮ್ಮ ಶಾಲೆಗಳಲ್ಲಿ ಕೈಬರೆಹ ಪತ್ರಿಕೆ ತಯಾರಿಸುವುದು ಯಾವಾಗಿನಿಂದಲೂ ಇದೆ. ಆದರೆ ಅದು ವರ್ಷಕ್ಕೊಮ್ಮೆ ಎಂಬ ತಿಳವಳಿಕೆಯಾಗಿದೆ. ವಾರ್ಷಿಕೋತ್ಸವಕ್ಕೆ ಮಾತ್ರ ಎಂಬಂಥಾಗಿದೆ. ಹೀಗಾಗಬಾರದು. ಕೈಬರೆಹ ಪತ್ರಿಕೆ ಪ್ರತಿ ತಿಂಗಳಿಗೊಂದರಂತೆ ಹೊರಬರಬೇಕು. ಅದಕ್ಕೆ ಮಕ್ಕಳಲ್ಲಿಯೇ ಒಂದು ಸಂಪಾದಕೀಯ ಮಂಡಳಿ ರಚಿಸಬೇಕು. ಶಿಕ್ಷಕರು ಮೇಲ್ವಿಚಾರಣೆ ನಡೆಸುತ್ತಾ ಮಾರ್ಗದರ್ಶನ ಮಾಡಬೇಕು. ಪುಟ್ಟ-ಪುಟ್ಟ ಬರೆಹ, ಚಿತ್ರಗಳು, ಜನಪದ ಸಂಗ್ರಹ, ಕವನ, ಕಥೆ, ಲೇಖನ, ರಂಗೋಲಿ, ಸಾಹಿತಿ-ಕಲಾವಿದರ, ವಿಜ್ಞಾನಿಗಳ ಮಹಾತ್ಮರ, ರಾಜಕಾರಣಿಗಳ ಚಿತ್ರ, ವಿವರ ಸಂಗ್ರಹ ಇತ್ಯಾದಿ ವೈವಿಧ್ಯ ಇರಬೇಕು.

ಮೂರು ಮುಖ್ಯ ಚಟುವಟಿಕೆಗಳು

ಕೊನೆಯದಾಗಿ ಅತ್ಯಂತ ಮಹತ್ವದ ಮತ್ತು ಹೊಸದಾದ ಮೂರು ಚಟುವಟಿಕೆಗಳನ್ನು ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಭಾಷಾ ಬೆಳವಣಿಗೆಗಳಿಗೆ ಪೂರಕವಾಗಿ ಸೂಚಿಸುತ್ತೇನೆ. ಅವೆಂದರೆ ಶಬ್ದಕೋಶ ರಚನೆ. ವಿಶ್ವಕೋಶ ರಚನೆ. ಮುಕ್ತ ಗ್ರಂಥಾಲಯ.

ಶಬ್ದಕೋಶ ರಚನೆ

ಶಬ್ದಕೋಶ ರಚನೆ ಎಂದೊಡನೆ ಇದೇನಪ್ಪಾ ಆಗುಹೋಗದ ಕೆಲಸ. ಇದೇನು ವಿಶ್ವವಿದ್ಯಾಲಯವೇ? ಮುಂತಾಗಿ ಯೋಚಿಸಿ ಗಾಬರಿ ಆಗಬೇಕಾಗಿಲ್ಲ.

ಶಬ್ದಕೋಶ ರಚನೆಯಿಂದ ಮಕ್ಕಳಲ್ಲಿ ಸಂಶೋಧನಾ ಪ್ರವೃತ್ತಿ, ಸ್ವಾವಲಂಬನೆ, ಸೂಕ್ಷ್ಮ ಗ್ರಹಿಕೆ, ಖಚಿತ ಜ್ಞಾನ, ನೆನಪು, ವಿಷಯಜ್ಞಾನ ಇತ್ಯಾದಿಗಳ ಪಟುತ್ವ ಬೆಳೆಯುತ್ತದೆ. ಈ ಶಬ್ದಕೋಶ ರಚನೆಯ ಕಾರ್ಯವನ್ನು ಆರನೆಯ ಕ್ಲಾಸಿನಿಂದ ಹತ್ತನೆಯ ತರಗತಿಯವರೆಗೂ ವಿಸ್ತರಿಸಬಹುದು.

ಇದರಲ್ಲಿ ಕೇವಲ ಭಾಷೆಗೆ ಸಂಬಂಧಿಸಿ ಮಾತ್ರ ಇರಬೇಕಾಗಿಲ್ಲ. ಮಕ್ಕಳ ಜ್ಞಾನಕ್ಕೆ ಅನುಸರಿಸಿ ಭೂಗೋಲ ಪದಕೋಶ, ಚರಿತ್ರೆಯ ಪದಕೋಶ, ವಿಜ್ಞಾನ ಪದಕೋಶ ಹೀಗೆ ವೈವಿಧ್ಯಮಯವಾಗಿ ಮಾಡಬಹುದು.

ಕೆಲವು ಉದಾಹರಣೆಗಳು

ಆರನೆಯ ತರಗತಿ

ಮೃಗರಾಜ - ಸಿಂಹ, ಪಂಚಾಸ್ಯ

ನದಿ - ಹೊಳೆ, ದೊಡ್ಡಹಳ್ಳ

ಬಾನು - ಆಕಾಶ, ಆಗಸ

ಭಾನು - ಸೂರ್ಯ, ನೇಸರು

ಗುಲಾಬಿ - ಒಂದು ಹೂವಿನ ಹೆಸರು

ರಸ್ತೆ - ದಾರಿ, ಹಾದಿ, ಮಾರ್ಗ

ಏಳನೆಯ ತರಗತಿ

ಇಲ್ಲಿ ತುಸು ವಿಸ್ತರಿಸಬೇಕು. ಪದಕೋಶದಲ್ಲಿ ಉಪಯೋಗಿಸುವ ಸಂಕ್ಷಿಪ್ತ ಚಿಹ್ನೆಗಳ ಬಳಕೆ ಬರಬೇಕು. ಉದಾ; ನಾಮಪದ (ನಾ.ಪ),

ಕ್ರಿಯಾಪದ (ಕ್ರಿ.ಪ), ನಾಮವಿಶೇಷಣ (ನಾ.ವಿ)

ಭಾವನಾಮ (ಭಾ.ನಾ) ಇತ್ಯಾದಿ

ಅಡವಿ - (ನಾ. ಪ). ಬೆಟ್ಟ, ವನ

ನದಿ- (ರೂ.ನಾ) ಹೊಳೆ, ದೊಡ್ಡಹಳ್ಳ

ಆನಂದ- (ಭಾ.ನಾ) ಸಂತೋಷ, ಸುಖ

ಓಡು - (ಕ್ರಿ.ಪ) ವೇಗವಾಗಿ ಚಲಿಸು ಇತ್ಯಾದಿ.

ಹೀಗೆ ಎಂಟನೆಯ ತರಗತಿ, ಒಂಬತ್ತನೆಯ ತರಗತಿವರೆಗೆ ಶಬ್ದಕೋಶ ರಚಿಸಬಹುದು. ಇದಕ್ಕೆ ಒಂದು ಪ್ರತ್ಯೇಕ ನೋಟ್‌ಬುಕ್ ತಯಾರಿಸಬೇಕು. ಸ್ವಚ್ಛ, ಸುಂದರವಾಗಿ ಬರೆಯಬೇಕು. ಪರಿಶೀಲನೆಗೆ ಮಕ್ಕಳಲ್ಲಿಯೇ ಒಂದು ಕಮಿಟಿ ಮಾಡಬೇಕು. ಶಿಕ್ಷಕರು ಮಾರ್ಗದರ್ಶನ ಮಾಡಬೇಕು.

ಹತ್ತನೆಯ ತರಗತಿಯಲ್ಲಿ ವಾಗ್ರೂಢಿಗಳ ವಾಕ್ಯ ಪ್ರಯೋಗಗಳನ್ನು ಸೇರಿಸಬೇಕು. ಭೂಗೋಲ, ಇತಿಹಾಸ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿ ಶಬ್ದಕೋಶ ರಚಿಸಬೇಕು.

ಹೀಗೇ ಮನೆಮಾತುಗಳ ಸಂಗ್ರಹಗಳನ್ನೂ ಮಕ್ಕಳಿಂದ ಮಾಡಿಸಬಹುದು. ಪ್ರೌಢಶಾಲೆಗಳಿಗೆ ಅನುಕೂಲವಾಗುವ ವಿಶ್ವಕೋಶವನ್ನು ರಚನೆ ಮಾಡಲು ಮಕ್ಕಳಿಗೆ ಪ್ರೇರೇಪಿಸಬಹುದು.

ಉದಾ: ನಮ್ಮ ನಮ್ಮ ಮನೆಗಳಲ್ಲಿಯೇ ಇರುವ ಸಾಮಾನುಗಳ ವಿವರ ಸಂಗ್ರಹಿಸುವುದು.

ಚೂಳಿ: ಇದು ಬೆತ್ತದಿಂದ ಮಾಡುವ ದೊಡ್ಡದಾದ ಬುಟ್ಟಿ. ರೈತರ ದಿನಚರಿಯಲ್ಲಿ ಬಹಳ ಮುಖ್ಯ ಪಾತ್ರವಹಿಸುವ ಸಾಧನ. ಇದು ಗುಡಿಕೈಗಾರಿಕೆಯ ಉತ್ಪನ್ನ. (ಸಾಧ್ಯವಾದರೆ ಚಿತ್ರ ಕೊಡಬಹುದು.)

ಹೀಗೇ ಬೆಳೆಸಬಹುದು.

ಮುಕ್ತ ಗ್ರಂಥಾಲಯ

ಈಗಂತೂ ಶಾಲೆಗಳಿಗೆ ಸರಕಾರ ತಾನೇ ಗ್ರಂಥ ಖರೀದಿಸಿ ಕೊಡುತ್ತದೆ. ಆ ಪುಸ್ತಕಗಳ ಸದುಪಯೋಗ ಆಗಬೇಕಾದದ್ದು ಅಗತ್ಯ. ಶಾಲೆಯಲ್ಲಿ ಇರುವ ಪುಸ್ತಕಗಳನ್ನು ಒಂದು ಕಪಾಟಿನಲ್ಲಿ ಇಟ್ಟು ಯಾವುದೇ ಸಮಯದಲ್ಲಿ (ಸಮಯ ಸಿಕ್ಕಾಗ) ಅವರೇ ತೆಗೆದು ಓದಲು ಹೇಳಬೇಕು. ಪುಸ್ತಕವನ್ನು ಚೆಂದವಾಗಿ, ಜೋಪಾನವಾಗಿ ಇಡುವುದನ್ನು ಕಲಿಸಬೇಕು. ಪುಸ್ತಕ ಪ್ರೀತಿ ಬೆಳೆಸಬೇಕು. ಇದರಿಂದ ಮಕ್ಕಳಲ್ಲಿ ವಾಚನಾಭಿರುಚಿ ಬೆಳೆಯುತ್ತದೆ. ಬಹುತೇಕ ನಮ್ಮ ಶಾಲೆಗಳಲ್ಲಿ ಮಕ್ಕಳಿಗೆ ನೇರ ಪುಸ್ತಕದ ಕಪಾಟಿಗೆ ಕೈಹಾಕಲು ಬಿಟ್ಟರೆ ಪುಸ್ತಕಗಳು ಹಾಳಾಗುತ್ತವೆ ಎಂಬ ಭಾವನೆ ಇದೆ. ಇದು ಹೋಗಬೇಕು.

ಹೀಗೆ ಪ್ರಾಥಮಿಕ ಶಾಲೆಯಲ್ಲಿ ಭಾಷಾ ಬೆಳವಣಿಗೆಯ ದಿಕ್ಕಿನಲ್ಲಿ ಪ್ರಯೋಗ ಮಾಡಬಹುದಾಗಿದೆ. ಪ್ರಯೋಗಶೀಲತೆ ಎನ್ನುವುದೇ ಒಂದು ಕಷ್ಟ ಮತ್ತು ಜವಾಬ್ದಾರಿ. ಆದರೆ ಇಂಥ ಕಷ್ಟ ಮತ್ತು ಜವಾಬ್ದಾರಿಯನ್ನು ತೆಗೆದುಕೊಂಡಾಗಲೇ ಫಲ ಪ್ರಾಪ್ತವಾಗುವುದು.

*

ನಮ್ಮ ಶಿಕ್ಷಣ ತಜ್ಞರು

ಶಿಕ್ಷಣ (education) ಅಂದರೇನು? ಎನ್ನುವುದನ್ನು ಮೂಲಭೂತವಾಗಿ ವಿಚಾರಿಸ ಹೊರಟರೆ ನಮಗೆ ಖಚಿತವಾದ ಕೆಲವು ಸಂಗತಿಗಳು ಗೊತ್ತಾಗುತ್ತವೆ. ಅದೇ ವಿಚಾರ ಬೇರೆ ಬೇರೆ ವ್ಯಕ್ತಿಗಳಿಂದ ಬೇರೆ ಬೇರೆ ಸನ್ನಿವೇಶದಲ್ಲಿ ರೂಪಧಾರಣ ಮಾಡುತ್ತದೆ.

ಮಾನವರು ಸಮಾಜ ಜೀವಿಗಳು ಎನ್ನುವುದು ಒಂದು ಸರ್ವಗ್ರಾಹ್ಯವಾದ ವಿಚಾರ. ಅದಕ್ಕಿಂತ ಹಿಂದೆ ನಾವು ವಿಚಾರ ಮಾಡಲಾರೆವು. ಕುಟುಂಬಕ್ಕೆ ಕೂಡಾ ಸಮಾಜವೇ ಆಕರ. ಅದರ ಸ್ವರೂಪ, ವಿಸ್ತಾರ ಬೇರೆ ಬೇರೆ ಆಗುತ್ತಲಿರಲಿ. ಒಟ್ಟಾರೆಯಾಗಿ ಮನುಷ್ಯ ಗುಂಪಿನಲ್ಲಿಯೇ ತನ್ನ ಪ್ರಗತಿ ಪಥದ ಹೆಜ್ಜೆ ಗುರುತುಗಳನ್ನು ದಾಖಲು ಪಡಿಸಿದ್ದಾನೆ.

ಅಂಥ ಒಂದು ಅನಾಗರಿಕ ಎನ್ನುವ ಸಂದರ್ಭದಲ್ಲಿಯೇ ಶಿಕ್ಷಣ ಎಂಬುದು ತಲೆ ಎತ್ತಿದ್ದು. ಅದು ಪ್ರತ್ಯೇಕ ಶಾಖೆಯಾಗಿ ಕಂಡಿರಲಿಕ್ಕಿಲ್ಲ. ಆದರೆ ಜೀವನ ಮುಂದುವರಿಕೆಯಲ್ಲಿ ಅದರ ಅವಶ್ಯಕತೆ ಇತ್ತು. ಅಂಥ ಅವಶ್ಯಕತೆ ಯಾವುದು?

ಈ ಗುಂಪು ತನ್ನ ಆಹಾರಕ್ಕಾಗಿ ಬೇಟೆಗೆ ಹೊರಟಿತು ಎಂದುಕೊಳ್ಳುವ. ಇದಕ್ಕೆ ತಯಾರಿಯಾಗಿ ಶಿಲಾಯುಗದ ಮನುಷ್ಯ, ಪ್ರಾಣಿಗಳನ್ನು ಗಾಯಗೊಳಿಸಲು ಗಟ್ಟಿಯಾದ ಕಲ್ಲನ್ನು ಸಿದ್ಧಪಡಿಸಿಕೊಳ್ಳಬೇಕಾಯಿತು.

ನಿಸರ್ಗ ಅತ್ಯಂತ ರಹಸ್ಯಮಯವಾದುದು. ಸಾವಿರ ಜನರನ್ನು ಜನರೆಂದು ಗಂಡು ಹೆಣ್ಣುಗಳೆಂದು- ಗುರುತಿಸುವೆವಾದರೂ ಸಾವಿರ ಜನರ ಮುಖ ಒಂದೇ ತೆರ ಇರದು. ಹಾಗೆಯೇ ಸಾವಿರ ಜನರ ವ್ಯಕ್ತಿತ್ವ, ಬುದ್ಧಿವಂತಿಕೆ ಒಂದೇ ತೆರ ಇರದು. ಹಾಗೆ ಬೇಟೆಗೆ ಸಿದ್ಧನಾಗುವ ಮನುಷ್ಯ ಒಂದು ಹರಿತವಾದ ಕಲ್ಲಿನ ಆಯುಧವನ್ನು ಸಿದ್ಧಗೊಳಿಸಿದ ಎನ್ನುವ. ಆಗ ಅಂಥ ಹಲವು ಅಸ್ತ್ರಗಳ ಅವಶ್ಯಕತೆಗಳಿಗನುಸಾರ ಆತ ಅಥವಾ ಅವಳು ಅದನ್ನು ತಮ್ಮ ಗುಂಪಿನ ಸದಸ್ಯರಿಗೆ ಕಲಿಸಬೇಕಾಗುತ್ತದೆ. ಈ ಉದಾಹರಣೆಯನ್ನೇ ತುಸು ಮುಂದುವರಿಸುವ. ಗುಂಪಾಗಿ ಬೇಟೆಗೆ ಹೊರಟಾಗ ಅವರು ಪ್ರಾಣಿಗಳನ್ನು ಸುತ್ತುವರಿಯುವ, ಅಪಾಯದಿಂದ ತಪ್ಪಿಸಿಕೊಳ್ಳುವ ವ್ಯೂಹವನ್ನು ರಚಿಸಬೇಕು. ಬೇಟೆಯಲ್ಲಿ ಬಾಲಕ-ಬಾಲಕಿಯರೂ ಭಾಗವಹಿಸಬೇಕು ತಾನೆ? ಅವರಿಗೆ ಈ ವ್ಯೂಹ ರಚನೆ ಕುರಿತು ತಿಳಿವಳಿಕೆ ಕೊಡಬೇಕಾಗುತ್ತದೆ. ಇದೋ ಇಲ್ಲಿಯೇ ಶಿಕ್ಷಣ ಹುಟ್ಟಿತು.

ಮೊದಲ ಪ್ರಕಟನೆ: 'ಶಿಕ್ಷಣ ಮತ್ತು ಮುಸ್ಲಿಮರು' ಮಂಗಳೂರು; ೧೯೯೧.

ಸರಿಯೇ; ಮನುಷ್ಯ ಸಮಾಜ ಜೀವಿ. ಆದರೆ ವ್ಯಕ್ತಿ ಬೇರೆ ಬೇರೆ. ಆದರೆ ಈ ವ್ಯಷ್ಟಿ, ಸಮಷ್ಟಿ ಆಗುವುದು ಹೇಗೆ? ಹಲ್ಲು ಉದುರಿದ ಮುದುಕಿಗೆ ಅಥವಾ ಮುದುಕನಿಗೆ ಹಲ್ಲುಳ್ಳ ಜವ್ವನಿಗರು ಮಾಂಸವನ್ನು ತಮ್ಮ ಶೂಲವಾದ ಹಲ್ಲಿನಿಂದ ಹಿಂಜಿಯೋ, 'ಜಗಿದೋ ಕೊಡಬೇಕಾದ ಅವಶ್ಯಕತೆ ಇದ್ದಿರಲಾರದೆ? ಅಥವಾ ಕುಟುಂಬದ ಯಜಮಾನನಿಗೆ ಆ ಕುಟುಂಬಕ್ಕೆ ಸೇರಿದ ವ್ಯಕ್ತಿಗಳ ವಿಧೇಯತೆ ಇರಬೇಡವೆ? ಹಾಗಿದ್ದಾಗಲೇ ಸಾಮಾಜಿಕ, ಕೌಟುಂಬಿಕ ನಿಯಮಗಳ ಉದ್ಭವವಾದುದು. ಬುಡಕಟ್ಟಿನ - ಸಮಾಜದ ಸ್ವಾಸ್ಥ್ಯಕ್ಕೆ ಈ ನಿಯಮವನ್ನು ಹಿರಿಯರು ಕಿರಿಯರಿಗೆ ಕಲಿಸಬೇಕು. ಇದೂ ಶಿಕ್ಷಣಕ್ಕೆ ಸೇರಿದ್ದು. ಇಲ್ಲಿಯವರೆಗಿನ ಉದಾಹರಣೆಯಿಂದ ಸಿದ್ಧವಾಗುವುದೇನು? **ಮನುಷ್ಯ ಅಥವಾ ಮನುಷ್ಯಳು ಉತ್ಪನ್ನದ ವಿಧಾನವನ್ನು, ಕರಕುಶಲತೆಯನ್ನು, ಸಾಮಾಜಿಕ ನಿಯಮಗಳನ್ನು ಮತ್ತು ಅನುಭವ ವಿಶೇಷತೆಯನ್ನು, ಇಹಪರದ ಚಿಂತನೆಯನ್ನು ಮುಂದಿನ ಪೀಳಿಗೆಗೆ ಮುಂದುವರಿಸಿಕೊಂಡು ಹೋಗುವ ತರಬೇತಿಯೇ ಶಿಕ್ಷಣ.** ಅದು ವ್ಯಕ್ತಿಯನ್ನು ಬೆಳೆಸುವ ಹಾಗೆ ಅವರನ್ನು ಸಮಾಜಿಕರನ್ನಾಗಿಯೂ ಮಾಡಬೇಕು.

ಇದೇ ಶಿಕ್ಷಣದ ಮೂಲಭೂತವಾದ ವ್ಯಾಖ್ಯೆ. ಆದರೆ ಈ ಕರಕುಶಲತೆ, ಸಾಮಾಜಿಕ ನಿಯಮ, ಇಹಪರ ಚಿಂತನೆ ಇದಾವುದೂ ಎಲ್ಲಾ ಕಾಲಕ್ಕೂ ಒಂದೇ ಇರಲು ಸಾಧ್ಯವಿಲ್ಲ. ಒಂದು ನದಿ ಯಾವುದೋ ಮೂಲದಲ್ಲಿ ಒರತೆಯಾಗಿ ಹುಟ್ಟಿ ಮುಂದುವರಿದಂತೆ ಕಿರುಹಳ್ಳವಾಗಿ, ಹಳ್ಳವಾಗಿ, ಹೊನಲಾಗಿ, ಹೊಳೆಯಾಗಿ ವಿಸ್ತರಿಸುತ್ತಲೇ ಹೋಗುವಂತೆ ಜೀವನ ಪ್ರಕ್ರಿಯೆಯ ಸಹ. ನದಿ ಎನ್ನುವ ಶಬ್ದಕ್ಕೆ ಜೀವನ ಎನ್ನುವ ಅರ್ಥ ಕೂಡಾ ಇಲ್ಲಿ ಸಾರ್ಥಕವೇ. ಆದ್ದರಿಂದ ಕಾಲಕಾಲಕ್ಕೆ ಮನುಷ್ಯನ ಸಾಮಾಜಿಕ ಸ್ವರೂಪ, ಕಲಾತ್ಮಕ-ಭಾವಾತ್ಮಕ ಬೆಳವಣಿಗೆ, ವೈಜ್ಞಾನಿಕ ಅನ್ವೇಷಣೆ -ಇವುಗಳಿಂದ ಶಿಕ್ಷಣದ ವ್ಯಾಖ್ಯೆ, ವಿವರಣೆ ಬದಲಾಗುತ್ತಾ ಹೋಗುತ್ತದೆ. ಅದೇನೇ ಇದ್ದರೂ ಶಿಕ್ಷಣ ಎನ್ನುವುದು ಮನುಷ್ಯ ಕುಲದ ಅವಿಭಾಜ್ಯವಾದ ಚಟುವಟಿಕೆ ಎನ್ನುವುದರಲ್ಲಿ ಸುಳ್ಳಿಲ್ಲ. ವರ್ತಮಾನದ ಜೀವನಕ್ಕೆ ಭೂತಕಾಲದ ಅನುಭವ ಪ್ರವಾಹ, ಪ್ರಭಾವ ಅವಿಚ್ಛಿನ್ನವಾಗಿರುವುದರಿಂದಲೇ ಶಿಕ್ಷಣದ ಸೂತ್ರೀಕರಣ ಸಹ ನಡೆಯುತ್ತದೆ.

ಹೀಗೆ ಸೂತ್ರೀಕರಣ, ವಿಚಾರ ನಿರೂಪಣೆ ನಡೆಯುವುದು ಶೂನ್ಯದಲ್ಲಿ ಆಗಿರುವುದಿಲ್ಲವಾದ್ದರಿಂದ ಇಂತಹ ಶೈಕ್ಷಣಿಕ ವಿವರಣೆಯ ಮೇಲೆ ಆಯಾ ಕಾಲದ ಸಮಾಜ-ಸನ್ನಿವೇಶದ ಪ್ರಭಾವ ಹಾಗೂ ವ್ಯಕ್ತಿಯ ಬೆಳವಣಿಗೆಯ ಪರಿಸರ, ಕುಟುಂಬ ಹಾಗೂ ತಾನು ಪಳಗಿಸಿಕೊಂಡ ಶಿಕ್ಷಣದ ಪ್ರಭಾವ ಒಟ್ಟಾರೆಯಾಗಿ ನಿರೂಪಿಸಿದ ಸೈದ್ಧಾಂತಿಕ, ನಿಲುವು ಪರಿಣಾಮ ಬೀರುತ್ತದೆ. ಆದ್ದರಿಂದ ಪ್ಲೇಟೋ ಶಿಕ್ಷಣದ ಬಗ್ಗೆ ಹೇಳಿದೊಡನೆ ಅಲ್ಲಿಗೇ ನಿಂತು ಹೋಗುವುದಿಲ್ಲ. ಅಥವಾ ವೇದದಲ್ಲಿ ಶಿಕ್ಷಣದ ಬಗ್ಗೆ ಹೇಳಿದೊಡನೆ ಅದೇ ಇಂದಿಗೂ ಸಿದ್ಧಿಸುವುದಿಲ್ಲ. ಎಂತಲೇ ಯಾರೊಬ್ಬರ ಶೈಕ್ಷಣಿಕ ವಿಚಾರವನ್ನು ಹೇಳಬೇಕಾದರೂ ಈ ಎಲ್ಲಾ ಪರಿಸರ ಪ್ರಭಾವದ ಕುರಿತು ವಿಚಾರ ಮಾಡಬೇಕಾಗುತ್ತದೆ. ಈ ಹಿನ್ನೆಲೆ ನಾನು ಮುಂದೆ ವಿವರಿಸಲಿರುವ ಶಿಕ್ಷಣ ತಜ್ಞರ ವಿಚಾರ ವಿವರಣೆ ವಿಶ್ಲೇಷಣೆಗೆ ಮಾರ್ಗಸೂಚಿ ಎನ್ನಬಹುದು.

ಡಾ. ಸರ್ವಪಳ್ಳಿ ರಾಧಾಕೃಷ್ಣನ್

ಡಾ. ರಾಧಾಕೃಷ್ಣನ್ ಆಧುನಿಕ ಕಾಲದ ಮನುಷ್ಯ. ಅಂದರೆ ಅವರು ನಮ್ಮ ಹಿಂದಿನ ತಲೆಮಾರಿಗೆ ಸೇರಿದ ಶಿಕ್ಷಣ ತಜ್ಞ. ಅವರು ಹುಟ್ಟಿದ್ದು ೧೮೮೮ರಲ್ಲಿ. ಒಂದು ಸುಶಿಕ್ಷಿತ ಮನೆತನದಲ್ಲಿ ಜನಿಸಿದರು. ಸ್ವಾಭಾವಿಕವಾಗಿ ಸಂಪ್ರದಾಯವಾದಿ ಧಾರ್ಮಿಕ ಶಿಕ್ಷಣವನ್ನು ಪಡೆದವರು. ತಮ್ಮ ಉನ್ನತ ಶಿಕ್ಷಣದಲ್ಲಿ ತತ್ವಶಾಸ್ತ್ರವನ್ನು ಮುಖ್ಯ ವಿಷಯವನ್ನಾಗಿ ಅಭ್ಯಾಸ ಮಾಡಿದವರು. ಅವರು ಕಾಲೇಜಿನಲ್ಲಿ ಉಪನ್ಯಾಸಕರಾಗಿ ತಮ್ಮ ಜೀವನವನ್ನು ಆರಂಭಿಸಿದರು. ದೇಶ ವಿದೇಶಗಳ, ಅನೇಕ ವಿಶ್ವವಿದ್ಯಾಲಯಗಳಲ್ಲಿ ಪ್ರೊಫೆಸರ್ ಆಗಿ ಅನುಭವ ಪಡೆದವರು. ತತ್ವಜ್ಞಾನಿಯಾಗಿ ಪೌರಾತ್ಯ, ಪಾಶ್ಚಾತ್ಯ ಧರ್ಮಗಳನ್ನು ಆಳವಾಗಿ ಅಭ್ಯಾಸ ಮಾಡಿದವರು.

ಅವರು ಪ್ರಕಾಶಕ್ಕೆ ಬರುತ್ತಿರುವ ಕಾಲವೆಂದರೆ ಭಾರತದ ಸ್ವಾತಂತ್ರ್ಯ ಹೋರಾಟದ ಕಾಲ. ಮಹಾತ್ಮಗಾಂಧೀಜಿಯ ಸಮೀಪ ಸಂಪರ್ಕ ಪಡೆದರು. ಭಾರತ ಸ್ವಾತಂತ್ರ್ಯಾನಂತರ ಉಪರಾಷ್ಟ್ರಪತಿ, ರಾಷ್ಟ್ರಪತಿಯಾಗಿ ಆಡಳಿತ ಸಂಪರ್ಕ ಪಡೆದರು. ಶಿಕ್ಷಣ ಸಮಿತಿಯ ಅಧ್ಯಕ್ಷರಾಗಿ ವರದಿ ಕೊಟ್ಟವರು. ಹೀಗೆ ಅವರಲ್ಲಿ ಪ್ರಾಚೀನ ಕಾಲದ ಹಿಂದೂ ತತ್ವಜ್ಞಾನದ ಒಳನೋಟ ಇದ್ದಂತೆ ಆಧುನಿಕ ಕಾಲದ ಸೆಕ್ಯುಲರ್ ತಿಳಿನೋಟವೂ ಇತ್ತು. ಇವೆಲ್ಲ ಅವರ ಶೈಕ್ಷಣಿಕ-ವಿಚಾರದ ಹಿಂದೆ ಪ್ರೇರಕ ಧಾತುವಾಗಿ ಕೆಲಸ ಮಾಡಿವೆ. ಭಾರತೀಯ ಶಿಕ್ಷಣ ತಜ್ಞರಲ್ಲಿ ಅವರ ಹೆಸರು ಮೇಲ್ಪಂಕ್ತಿಗೆ ಸೇರಿದೆ.

ಮುಖ್ಯವಾಗಿ ರಾಧಾಕೃಷ್ಣನ್ ಆದರ್ಶವಾದಿಗಳು. (Idealist) ಹಾಗೆಂದಾಕ್ಷಣ ಅವರು ಲೌಕಿಕವನ್ನು ನಿರಾಕರಿಸಲಿಲ್ಲ. ನಿರಾಕರಿಸಲು ಸಾಧ್ಯವಿಲ್ಲ ತಾನೇ? ಆದ್ದರಿಂದ ಅವರ ಶೈಕ್ಷಣಿಕ ವಿಚಾರ ಆದರ್ಶವಾದಕ್ಕೂ, ಭೌತಿಕವಾದಕ್ಕೂ ಬೆಸೆದ ಬೆಸುಗೆಯಾಗಿದೆ. ಒಟ್ಟಾರೆಯಾಗಿ 'ಇಲ್ಲಿ ಸಲ್ಲುವವರು ಅಲ್ಲೂ ಸಲ್ಲುವರು' ಎಂಬಂತೆ ಒಂದು ಸಾಮರಸ್ಯ ಹೊಂದಿದೆ.

ರಾಧಾಕೃಷ್ಣನ್ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಒಂದು ದೈವಿಕ ಕಿಡಿ ಅಥವಾ ಬೆಳಕಿನ ಕಿಡಿ ಇದೆ. ಮನುಷ್ಯ ಜೀವನದ ಅಂತಿಮವಾದ ಉದ್ದೇಶ ಈ ದೈವಕತೆಯ ಸಾಕ್ಷಾತ್ಕಾರವೇ ಆಗಿದೆ. ಆದ್ದರಿಂದ ಜೀವನಕ್ಕೆ ಒಂದು ಉದ್ದೇಶವಿದೆ. ಆ ಉದ್ದೇಶವನ್ನು ಸಾಕ್ಷಾತ್ಕರಿಸಿಕೊಂಡು ಜೀವನವನ್ನು ಉದ್ಧರಣ ಮಾಡಿಕೊಳ್ಳಲು ಅನುವು ಮಾಡಿಕೊಡುವುದೇ ಶಿಕ್ಷಣದ ಪರಮೋದ್ದೇಶ.

ಹಾಗೆ ಮನುಷ್ಯ ಅಂತರಂಗದಲ್ಲಿ ಅಡಗಿದ ದೇವನ ಕಿಡಿಯನ್ನು ಅರಿವಿಗೆ ತಂದುಕೊಳ್ಳಲು ಅಸಮರ್ಥನಾದರೆ ಕೇವಲ ಭೌತಿಕನಾಗುತ್ತಾನೆ, ನಾಸ್ತಿಕನಾಗುತ್ತಾನೆ. ಹಾಗಾಗುವುದೆಂದರೆ ಅಧಃ ಪತನದತ್ತ ಸಾಗಿದಂತೆ. ಹಾಗಾಗದಂತೆ ಮನುಷ್ಯನನ್ನು ಭೋಗ, ಮೋಹ, ಧನದಾಹ, ಅಧಿಕಾರದಾಹದಿಂದ ಮೇಲಕ್ಕೆತ್ತಿ ಅವನ ವ್ಯಕ್ತಿತ್ವದ ದೈವಿಕತೆಯನ್ನು ಅರಳಿಸಲು ಶಿಕ್ಷಣ ಸಹಾಯಕವಾಗಬೇಕು.

ಅಂತೆಯೇ ಅವರು, ವಿಶ್ವವಿದ್ಯಾಲಯಗಳು ವಿದ್ಯಾರ್ಥಿಯ ಬೌದ್ಧಿಕತೆಯನ್ನು ಬೆಳೆಸಲು, ಭಾವಾತ್ಮಕತೆಯಲ್ಲಿ ಉದಾತ್ತತೆಯನ್ನು ಸಾಧಿಸಲು, ದೈವಿಕತೆಯನ್ನು (Spiritual) ಅರಳಿಸಲು ಮೀಸಲಾಗಿರಬೇಕಾದ ಕ್ಷೇತ್ರ ಎನ್ನುತ್ತಾರೆ.

ಹೀಗೆ ಭಾವಿಸಲು ಮತ್ತು ಚಿಂತನೆಯ ಸಾಮರಸ್ಯವನ್ನು ಸಾಧಿಸಿಕೊಂಡು ಉನ್ನತ ವ್ಯಕ್ತಿತ್ವವನ್ನು ಪಡೆಯಲು ಧಾರ್ಮಿಕ ಶಿಕ್ಷಣ ಅತ್ಯಂತ ಅವಶ್ಯ ಎಂದು ರಾಧಾಕೃಷ್ಣನ್ ಎನ್ನುತ್ತಾರೆ. ಧಾರ್ಮಿಕ ಶಿಕ್ಷಣ ಎಂದೊಡನೆ ಯಾವ ಧರ್ಮದ್ದು? ದಿನಕ್ಕೆಷ್ಟು ಸಲ ಪೂಜೆ ಮಾಡುವುದು ಅಥವಾ ಪ್ರಾರ್ಥನೆ ಮಾಡುವುದು? ಆದರೆ ರಾಧಾಕೃಷ್ಣನ್ ಮತ ಧರ್ಮದ ಈ ಹೊರ ಆಚರಣೆಯ ಕುರಿತು, ಕರ್ಮಠತನದ ಕುರಿತು ಹೇಳುತ್ತಿಲ್ಲ. ಅವರೆನ್ನುವುದು ಎಲ್ಲ ಧರ್ಮಗಳ ಆಳವಾದ ಅಭ್ಯಾಸವನ್ನು ಎಲ್ಲ ಧರ್ಮಗಳೂ ಅತ್ಯಂತ ಆಳದಲ್ಲಿ ಒಂದೇ ಉದ್ದೇಶವನ್ನು ಹೊಂದಿವೆ. ಅದೆಂದರೆ ಜೀವನದ ಪರಮ ಸಾರ್ಥಕತೆ, ದೈವಿಕ ಸಾಕ್ಷಾತ್ಕಾರ. ಈ ಒಳತಿರುಳನ್ನು ಅರಿತು ಶಿಕ್ಷಣ ಸಾಗಬೇಕು. ರಾಧಾಕೃಷ್ಣನ್ ಹಲವು ಮತ ಧರ್ಮಗಳು ಬದಿಬದಿಗೆ ಬಾಳುತ್ತಿರುವ ನಾಡಿನಲ್ಲಿ ಹುಟ್ಟಿದ್ದರು. ಹಿಂದು, ಮುಸ್ಲಿಮ್, ಕ್ರೈಸ್ತ, ಸಿಖ್ ಎನ್ನದೆ ಎಲ್ಲರೂ ಒಟ್ಟಾಗಿ ಸ್ವಾತಂತ್ರ್ಯ ಚಳವಳಿಯಲ್ಲಿ ತೊಡಗಿದ್ದರು. ಅದೇ ಹೊತ್ತಿಗೆ ಧಾರ್ಮಿಕ ಮೂಲಭೂತವಾದಿಗಳ ಸಂಘಟನೆ ಚಿಗುರೊಡೆಯುತ್ತಿತ್ತು. ಇಂಥ ಸಂದರ್ಭ ಅವರ ಮುಂದಿತ್ತು. ಈ ಧಾರ್ಮಿಕ ಸಂಕುಚಿತತೆಯನ್ನು ದೂರ ಮಾಡಿ ಒಂದು ಸಾಮರಸ್ಯ ಸಾಧಿಸಬೇಕಾದ ಅವಶ್ಯಕತೆ ಶಿಕ್ಷಣಕ್ಕೆ ಇತ್ತು. ಅದು ಅಂದು ಹೇಗೋ ಇಂದೂ ಹಾಗೆಯೇ.

ಹೀಗೆಂದಾಕ್ಷಣ ರಾಧಾಕೃಷ್ಣನ್ ವೈಜ್ಞಾನಿಕ ಶಿಕ್ಷಣವನ್ನು ಕಡೆಗಣಿಸಲಿಲ್ಲ. ಅವರ ಪ್ರಕಾರ ಸತ್ಯದ ಸಂಶೋಧನೆ ಧರ್ಮದ್ದೂ ಹೌದು, ವಿಜ್ಞಾನದ್ದೂ ಹೌದು. ನಮ್ಮ ತಾಂತ್ರಿಕ, ಔದ್ಯೋಗಿಕ ಪ್ರಗತಿಯನ್ನು ಸಾಧಿಸುವ ವೈಜ್ಞಾನಿಕ ಶಿಕ್ಷಣ ನಮಗೆ ಬೇಕು. ಶಿಕ್ಷಣ ಮಕ್ಕಳಲ್ಲಿ ಅನ್ವೇಷಣಾ ಗುಣವನ್ನು ಬೆಳಗಿಸಬೇಕು. ಇದ್ದುದನ್ನು ವಿಶ್ಲೇಷಿಸುವ, ಹೊಸದನ್ನು ಸೃಷ್ಟಿಸುವ, ಪೂರ್ವಾಗ್ರಹವನ್ನು, ಮೂಢನಂಬಿಕೆಯನ್ನು ಛಿದ್ರಗೊಳಿಸಿ, ಹೊಸ ಹೊಸದನ್ನು ಸ್ವೀಕರಿಸುವ ಮನೋಭಾವವನ್ನೂ ಹೊಸದನ್ನು ಸ್ವಾಗತಿಸುವ ತೆರೆದ ಮನಸ್ಸನ್ನು ಶಿಕ್ಷಣ ಬೆಳೆಸಬೇಕು.

ನಾವು ಪ್ರಜಾಪ್ರಭುತ್ವಯುಗದಲ್ಲಿ ಇದ್ದೇವೆ. ಪ್ರಜಾಪ್ರಭುತ್ವಕ್ಕೆ ತಕ್ಕದಾದ ನಾಗರಿಕನನ್ನು ಶಿಕ್ಷಣ ತರಬೇತುಗೊಳಿಸಬೇಕು. ತನ್ನನ್ನು ತಾನು ಆಳಿಕೊಳ್ಳುವ, ತನಗೆ ತಾನೇ ಶಿಸ್ತನ್ನು ಕಾಪಾಡಿಕೊಳ್ಳುವ ತರಬೇತು ನಮಗೆ ಬೇಕು. ನಮ್ಮ ಮುಂದಿರುವ ಆಮಿಷಗಳು ಹಲವು. ಆದರೆ ಅದನ್ನು ಹತೋಟಿಗಿಟ್ಟುಕೊಳ್ಳುವ, ತನ್ನ ಕಾರ್ಯಕ್ಕೆ ತಾನೇ ಹೊಣೆಯಾಗುವ, ತನಗೆ ತಾನೇ ವೈಚಾರಿಕತೆಯನ್ನು ಬೆಳೆಸಿಕೊಳ್ಳುವಂತೆ ಮಾಡುವ ಕೆಲಸ ಇಂದಿನ ಶಿಕ್ಷಣದ್ದಾಗಬೇಕು.

ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಸಮಾನ ಹಕ್ಕು ಮತ್ತು ಕರ್ತವ್ಯ. ಅಂತೆಯೇ ರಾಧಾಕೃಷ್ಣನ್ ಶಿಕ್ಷಣ ಸಾರ್ವತ್ರಿಕವಾಗಬೇಕೆಂದರು. ಶಿಕ್ಷಣ ಎಲ್ಲರಿಗೆ ತಲುಪಬೇಕು. ಬಡವರಿರಬಹುದು. ಸಾಮಾಜಿಕವಾದ ಉನ್ನತ ಸ್ಥಾನ ಹೊಂದಿರದಿರಬಹುದು. ಆದರೆ ಎಲ್ಲರಿಗೂ ಶಿಕ್ಷಣ ಮುಕ್ತವಾಗಿ ದೊರಕಬೇಕು. ಆ ಶಿಕ್ಷಣ ಅವರ ಅಂತಸ್ತನ್ನು ಹೆಚ್ಚಿಸಿಕೊಳ್ಳಲು ಒಂದು ಅವಕಾಶ. ಅವರ ಬೌದ್ಧಿಕತೆ ಬೆಳೆಯಬೇಕು. ಪ್ರಸ್ತುತ ಸಮಾಜದಲ್ಲಿ ಅವರು ತಮ್ಮ ಸ್ಥಿತಿಯನ್ನು ಪ್ರಗತಿಯ ಕಡೆಗೆ ಒಯ್ಯುವಂತಾಗಬೇಕು. ಆದ್ದರಿಂದ ಶಿಕ್ಷಣ ಕೆಲವೊಂದು ವರ್ಗಕ್ಕೆ ಮೀಸಲಾಗಿರದೇ ಎಲ್ಲರ ಹಕ್ಕಾಗಬೇಕು ಎನ್ನುವುದು ಅವರ ವಿಚಾರ. ಶಿಕ್ಷಣದ ಸಾರ್ವತ್ರಿಕತೆ ಇಂದಿನ ಆವಶ್ಯಕತೆಗಳಲ್ಲಿ

ಒಂದು. ಅದಕ್ಕೆ ರಾಧಾಕೃಷ್ಣನ್ ಕುರುಡಾಗಲಿಲ್ಲ. ಪ್ರಜಾಪ್ರಭುತ್ವದಲ್ಲಿ ಬದುಕುವವರು ಯಾರೂ ಕುರುಡಾಗಲು ಸಾಧ್ಯವಿಲ್ಲ.

ಪ್ರಜಾಪ್ರಭುತ್ವದಲ್ಲಿ ಸಲ್ಲದ ಇನ್ನೊಂದು ಮಹತ್ವದ ಸಂಗತಿ ಎಂದರೆ ಲಿಂಗಭೇದ. ನಮ್ಮಲ್ಲಿ ಅದು ಹಿಂದುವಾಗಿರಲಿ, ಮುಸ್ಲಿಮ್ ಆಗಿರಲಿ ಹೆಣ್ಣು ಮಕ್ಕಳನ್ನು ಎರಡನೇ ದರ್ಜೆ ಪ್ರಜೆಗಳಾಗಿಯೇ ಕಂಡಿದ್ದೇವೆ. ಧರ್ಮದ ಮೂಲದಲ್ಲಿ ಅದಿರಲಿ ಇಲ್ಲದಿರಲಿ ಆದರೆ ವರ್ತಮಾನದ ವರ್ಗೀಯ ಸಮಾಜದಲ್ಲಂತೂ ಗಂಡಿನದೇ ಯಜಮಾನ್ಯ. ಆದ್ದರಿಂದ ಗಂಡಿಗೆ ತೆರೆದಿರುವ ಸಾಮಾಜಿಕ ಹಾಗೂ ಶೈಕ್ಷಣಿಕ ಅವಕಾಶಗಳು ಹೆಣ್ಣಿಗೆ ಸಾಹಸದ ಮಾತು. ರಾಧಾಕೃಷ್ಣನ್ ಗಂಡು-ಹೆಣ್ಣಿಗೆ ಸಮಾನ ಶಿಕ್ಷಣವನ್ನು ಬೋಧಿಸುತ್ತಾರೆ.

ಒಟ್ಟಾರೆಯಾಗಿ ಡಾ. ರಾಧಾಕೃಷ್ಣನ್ ವಿಚಾರದಲ್ಲಿ ಶಿಕ್ಷಣ, ಧಾರ್ಮಿಕ ಮತ್ತು ವೈಜ್ಞಾನಿಕ ವಿಚಾರದಲ್ಲಿ ಒಂದು ಸಾಮರಸ್ಯವನ್ನು ಹೊಂದಿಸುವಂತಿರಬೇಕು. ಧಾರ್ಮಿಕ ಶಿಕ್ಷಣದಿಂದ ವಂಚಿತವಾದ ಶಿಕ್ಷಣ ಪರಿಪೂರ್ಣವಲ್ಲ. ಅದು ಐಹಿಕ ಸುಖದ ಮೋಹವನ್ನು ಅಥವಾ ಆವೇಶವನ್ನು ನಿಯಂತ್ರಿಸಬೇಕು. ವೈಜ್ಞಾನಿಕ ವೈಚಾರಿಕ ಮನೋಭಾವವನ್ನು ಬೆಳೆಸಬೇಕು. ಜ್ಞಾನದ ಬೆನ್ನು ಹತ್ತಿ ಹೋಗುವಂತೆ ಪ್ರೇರೆಪಿಸಬೇಕು. ಅಂಥಜ್ಞಾನ (ಧಾರ್ಮಿಕ-ವೈಜ್ಞಾನಿಕ) ಸತ್ಯ-ನ್ಯಾಯಗಳ ಬಗ್ಗೆ ಗೌರವವನ್ನು ಹೆಚ್ಚಿಸಬೇಕು. ಹೊಸ ಹೊಸ ಸಂಶೋಧನೆಯನ್ನು ಅನುಸಂಧಾನ ಮಾಡುತ್ತಾ ಬಾಳನ್ನು ಸಮೃದ್ಧ ಪಡಿಸುವಂತಿರಬೇಕು. ಆದರೆ ಈ ಯಾವ ಧಾರ್ಮಿಕವಾಗಿರಲಿ, ವೈಜ್ಞಾನಿಕವಾಗಿರಲಿ ಅದು ಮನುಷ್ಯರನ್ನು ಹಿಂಸಕರನ್ನಾಗಿ, ಸರ್ವಾಧಿಕಾರಿಗಳನ್ನಾಗಿ, ನ್ಯಾಯನಿಷ್ಠುರತೆಯಲ್ಲಿ ಭರವಸೆ ಕಳಕೊಂಡವರನ್ನಾಗಿ ಬೆಳೆಸಬಾರದು. ಶಿಕ್ಷಣದ ಪರಮೋದ್ದೇಶ ಮಾನವತೆಯನ್ನು ಪೋಷಿಸುವುದೇ, ಬೆಳೆಸುವುದೇ ಆಗಿದೆ.

ಮಹಾತ್ಮಾ ಗಾಂಧಿ:

ಹಾಗೆ ಕೇಳಿದರೆ, ಮೋಹನ ಕರಮಚಂದ ಗಾಂಧಿ ಒಬ್ಬ ವೃತ್ತಿ ಪರ ಶಿಕ್ಷಣ ತಜ್ಞನಲ್ಲ. ಅವರ ಜೀವನ ಆರಂಭಿಸಿದ್ದು ಒಬ್ಬ ನ್ಯಾಯವಾದಿಯಾಗಿ. (ನ್ಯಾಯವಾದಿ ಪದಕ್ಕೆ ಪೂರ್ಣ ಅರ್ಥದಲ್ಲಿ ನ್ಯಾಯ ಸಲ್ಲಿಸಿದವರು ಅವರೊಬ್ಬರೇ ಇರಬೇಕು) ನಂತರ ಒಬ್ಬ ರಾಜಕೀಯ ನೇತಾರನಾಗಿ.

ಗಾಂಧೀಜಿಯ ಕಾಲವೆಂದರೆ ಭಾರತದ ಒಂದು ಸಂಕ್ರಮಣದ ಹಂತದ ಕಾಲ. ಅವರು ಮೂರು ದಶಕಗಳ ದೀರ್ಘಕಾಲ ಭಾರತ ಸ್ವಾತಂತ್ರ್ಯ ಹೋರಾಟದ ನೇತಾರನಾಗಿ ಕಾರ್ಯ ಚಟುವಟಿಕೆಯಲ್ಲಿ ನಿರತರಾಗಿದ್ದರು. ಅವರ ರಾಜಕಾರಣ ವೆಂದರೆ ಅಧಿಕಾರ ಚಲಾವಣೆಯ ಕಾಲವಲ್ಲ; ಬದಲಾಗಿ ರಾಷ್ಟ್ರೀಯ ಹೋರಾಟಕ್ಕೆ ಮುಖಂಡರನ್ನೂ, ಜನಸಾಮಾನ್ಯರನ್ನೂ ತಯಾರಿಸುವ ಕಾಲ. ಗಾಂಧಿಯೇನೋ ಮೇಲು ಮಧ್ಯಮ ಕುಟುಂಬದಲ್ಲಿ ಹುಟ್ಟಿ ಬಂದಿದ್ದಾದರೂ ಅವರು ಭಾರತದ ಎಲ್ಲ ವರ್ಗದ ಜನರ ಜೀವನ ಸ್ಥಿತಿಯ ಮತ್ತು ಹೋರಾಟದ ಸಹವರ್ತಿಯಾಗಿರಬೇಕಾಗಿತ್ತು. ಭಾರತವನ್ನು ಸ್ವತಂತ್ರಗೊಳಿಸಲೆತ್ನಿಸಿದಾಗ, ಸ್ವಾತಂತ್ರ್ಯಾನಂತರದ

ಕನಸನ್ನು ರೂಪಿಸಬೇಕಿತ್ತು. ಹೀಗೆ ಹಲವು ಹತ್ತು ಯೋಜನೆ-ಕಾರ್ಯಚಟುವಟಿಕೆಗಳ ಪ್ರಕ್ರಿಯೆಯಾಗಿ ಹುಟ್ಟಿಕೊಂಡುದೇ ಅವರ ಶೈಕ್ಷಣಿಕ ವಿಚಾರ.

ಒಂದು ವಿಚಾರ, ಒಂದು ಆಂದೋಲನ ಆಯಾ ಕಾಲದ ಆರ್ಥಿಕ ಹಾಗೂ ಸಾಮಾಜಿಕ ಪರಿಸ್ಥಿತಿಯ ಗರ್ಭದಿಂದಲೂ ಹುಟ್ಟಬರುತ್ತದೆ ಎನ್ನಲು ಗಾಂಧೀಜಿಯ ಶೈಕ್ಷಣಿಕ ವಿಚಾರಕ್ಕಿಂತ ಬೇರ ಉತ್ತಮ ಉದಾಹರಣೆ ಬೇಕಿಲ್ಲ.

ಗಾಂಧಿ ಭಾರತಕ್ಕೆ ಬರುವ ಪೂರ್ವದಲ್ಲೇ ದಕ್ಷಿಣ ಆಫ್ರಿಕಾದಲ್ಲಿ ತಮ್ಮ ಕಾರ್ಯ ಪಟುತ್ವವನ್ನು ಹದಗೊಳಿಸಿದ್ದರು. ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ಕುರಿತು ಇರುವ ಕೀಳರಿಮೆಯನ್ನು ಹೋಗಲಾಡಿಸಲು ಅಲ್ಲಿಯ ಭಾರತೀಯ ಮಕ್ಕಳಿಗಾಗಿ ಅವರೇ ಶಾಲೆಯನ್ನು ತೆರೆಯಬೇಕಾಯಿತು. ಆಗಲೇ ಅವರ ಮೇಲೆ ರಷಿಯಾ ದೇಶದ ಮಹಾ ಸಾಹಿತಿ ಟಾಲ್‌ಸ್ಟಾಯ್ ಅವರ ಶಾಲೆಯ ಪ್ರಭಾವ ಬಿದ್ದಿತು. ಅಥವಾ ಅದು ಸೂಕ್ತ ಪರಿಣಾಮ ಮಾಡಿತು. ಅದರ ಮುಖ್ಯ ಪರಿಣಾಮವೆಂದರೆ ಉದ್ಯೋಗ ಪೂರ್ಣವಾದ ಶಿಕ್ಷಣ. ಟಾಲ್‌ಸ್ಟಾಯ್ ಅವರ ಶಾಲೆಯ ಬಾಗಿಲಿಗೆ "ಈ ಶಾಲೆಯನ್ನು ಪ್ರವೇಶಿಸಿ ಸ್ವತಂತ್ರವಾಗಿ ಬಾಳುವುದನ್ನು ಕಲಿತು ಹೊರಬೀಳಿ" ಎಂದು ಬರೆದಿತ್ತಂತೆ. ಗಾಂಧೀಜಿಯ ಶಾಲೆಯ ಜೀವಾಳವೂ ಇದುವೇ.

ಭಾರತಕ್ಕೆ ಬಂದಾಗಲೂ ಗಾಂಧಿ ಕಂಡಿದ್ದೇನು? ಪಾಶ್ಚಾತ್ಯ ಶಿಕ್ಷಣ ಹೊಂದಿದ ಶಿಷ್ಟವರ್ಗ, ಶಿಕ್ಷಣವೇ ಇಲ್ಲದೆ ವಂಶ ಪರಂಪರೆಯಲ್ಲಿ ಬಂದ, ಉದ್ಯೋಗವನ್ನೂ ಕಳಕೊಂಡ ನಿರುದ್ಯೋಗಿ ಬಡವರ್ಗ. ಈ ಎರಡೂ ವರ್ಗವನ್ನು ಒಟ್ಟಾಗಿ ಬೆಸೆಯುವುದು, ಬಡವರಲ್ಲಿ ಸ್ವಾವಲಂಬನೆ ಬೆಳೆಸುವುದು, ಎಲ್ಲರನ್ನೂ ರಾಷ್ಟ್ರೀಯ ಹೋರಾಟದಲ್ಲಿ ಬೆಸೆಯುವುದು ಅಂದಿನ ಅವಶ್ಯಕತೆಯಾಗಿತ್ತು. ಈ ಎಲ್ಲದರ ಪರಿಸ್ಥಿತಿಯ ಪ್ರಭಾವವೂ ಗಾಂಧಿಯ ಶೈಕ್ಷಣಿಕ ವಿಚಾರದ ಮೇಲೆ ಪರಿಣಾಮ ಬೀರಿದೆ. ಗಾಂಧೀಜಿಯ ಶೈಕ್ಷಣಿಕ ವಿಚಾರದಲ್ಲಿ ಅಸಂಗತೆಯೂ ಇದೆ. ಆದರೆ ಅದೇನೇ ಇದ್ದರೂ ಕಾರ್ಯ ಚಟುವಟಿಕೆಯ ಮಧ್ಯದಲ್ಲೇ ಮೂಡಿ ಬಂದ ಅವರ ವಿಚಾರದಲ್ಲಿ ಶೈಕ್ಷಣಿಕ ಕ್ರಾಂತಿಕಾರಕ ಗುಣ ಹಾಗೂ ಮನಶ್ಶಾಸ್ತ್ರೀಯ ಉತ್ತಮೋತ್ತಮ ಗುಣಗಳೂ ಸೇರಿವೆ. ಆದ್ದರಿಂದಲೇ ಅವರು ಭಾರತೀಯ ಹಿರಿಯ ಶಿಕ್ಷಣ ತಜ್ಞರ ಪಟ್ಟಿಯಲ್ಲಿ ಸೆರುತ್ತಾರೆ.

ಬೌದ್ಧಿಕ- ಧಾರ್ಮಿಕ, ಶಾರೀರಿಕ ಈ ಎಲ್ಲ ಗುಣಗಳ ಸರ್ವಾಂಗೀಣ ವ್ಯಕ್ತಿತ್ವ ಉನ್ನತಿಯನ್ನು ಸಾಧಿಸುವುದೇ ಶಿಕ್ಷಣ (An all round drawing out of the best in child and man-body, mind and spirit) ಎಂಬ ಅವರ ವಾಕ್ಯ ಪ್ರಸಿದ್ಧವೇ ಇದೆ.

ಗಾಂಧೀಜಿ ಮಗುವಿನ ಆಂತರಿಕ ಮತ್ತು ಬಾಹ್ಯ ಎಲ್ಲದರಲ್ಲಿಯ ಉತ್ತಮತೆಯನ್ನು ಶಿಕ್ಷಣ ಪ್ರಕಾಶಕ್ಕೆ ತರಬೇಕು ಎನ್ನುತ್ತಾರೆ. ಮುಖ್ಯವಾಗಿ ಗಾಂಧೀಜಿ ಧಾರ್ಮಿಕ ಮನುಷ್ಯ. ಧರ್ಮ ಎಂದರೆ ಯಾವ ಸಂಕುಚಿತ ಅರ್ಥದಲ್ಲೂ ಅಲ್ಲ. ಅವರು ದೇವರ ಸಾಕ್ಷಾತ್ಕಾರ ಕಟ್ಟ ಕೊನೆಯ ಸತ್ಯ ಎಂದು ನಂಬುತ್ತಾರೆ. ಆ ದೇವರನ್ನು ಸಾಕ್ಷಾತ್ಕರಿಸುವ ದಾರಿಯೆಂದರೆ ಸತ್ಯ ಮತ್ತು ಅಹಿಂಸೆಯ ಆಚರಣೆಯೇ ಆಗಿದೆ. ಯಾಕೆಂದರ ದೇವರೆಂದರೆ ಪ್ರೀತಿ (Love)

ಎಂದೇ ಆಗಿದೆ. ಆದ್ದರಿಂದ ಸತ್ಯ ಮತ್ತು ಅಹಿಂಸೆ ಒಂದಕ್ಕೊಂದು ಹೊಂದಿಕೊಂಡಿರುವುದೇ ಆಗಿದೆ. ಇಂಥ ಸತ್ಯದ ಸಾಕ್ಷಾತ್ಕಾರಕ್ಕಾಗಿ ವ್ಯಕ್ತಿ ಕ್ರಾಂತಿಗೂ ಸಿದ್ಧನಾಗಬೇಕಾಗಬಹುದು ಅಥವಾ ಹಾಗೆ ಮಾಡಬೇಕು. ಈ ಸತ್ಯ ಶೋಧನೆಯಲ್ಲಿ ಆತ ಹೊಸ ಮಾರ್ಗವನ್ನೇ ಕಾಣಬಹುದು. ಆದರೆ ಅದು ಕೇವಲ ವ್ಯಷ್ಟಿಗಾಗಿ ಇರದೆ ಸಮಷ್ಟಿಗಾಗಿ ಇರಬೇಕು.

ಗಾಂಧೀಜಿ ಧಾರ್ಮಿಕ ಮನುಷ್ಯ ಎಂದು ಮೇಲೆ ಹೇಳಿದೆ. ಆದರೆ ಅವರ ಧಾರ್ಮಿಕತೆ ಗಂಭೀರವಾದುದು, ಚಿತ್ತ ವೇದ್ಯವಾದುದೂ ಆಗಿದೆ. ಅವರು ಧಾರ್ಮಿಕ ಶಿಕ್ಷಣದ ಬಗ್ಗೆ ಹೇಳುವ ಮಾತು ಇದಕ್ಕೆ ಸಾಕ್ಷಿಯಾಗಿದೆ. "**ಇಂದಿನ ಧರ್ಮಗಳ ಬೋಧನೆಯ ರೀತಿ ಹಾಗೂ ಆ ಧರ್ಮಗಳ ಆಚರಣೆ ಇವನ್ನು ನೋಡಿದಲ್ಲಿ ಈ ಧರ್ಮಗಳು ಐಕ್ಯಕ್ಕೆ ಕಾರಣವಾಗದೇ ದ್ವೇಷಕ್ಕೆ ಕಾರಣವಾಗುತ್ತದೆಂಬ ಉದ್ದೇಶದಿಂದ ವರ್ಧಾ ಶಿಕ್ಷಣ ಪದ್ಧತಿಯಲ್ಲಿ ಧಾರ್ಮಿಕ ಶಿಕ್ಷಣಕ್ಕೆ ಅವಕಾಶ ಕೊಟ್ಟಿಲ್ಲ. ಆದರೆ ಈ ಎಲ್ಲ ಧರ್ಮಗಳಲ್ಲಿಯೂ ಸಾಮಾನ್ಯವಾದ ಸತ್ಯಾಂಶಗಳನ್ನು ಬಾಲಕರಿಗೆ ಕಲಿಸಬಹುದು**; ಕಲಿಸಲೇಬೇಕೆಂದು ನನ್ನ ಅಭಿಪ್ರಾಯ" ಗಾಂಧೀಜಿಯ ವಿಚಾರದಲ್ಲಿ ಶಿಕ್ಷಣ ಮುಖ್ಯವಾಗಿ ಎರಡು ಸಂಗತಿಗಳನ್ನು ಸಾಧಿಸಬೇಕು. ಮೊದಲನೆಯದು, ಉದ್ಯೋಗ ತರಬೇತಿಯನ್ನು ಕೊಡಬೇಕು. ಆ ಮುಖಾಂತರ ವ್ಯಕ್ತಿ ಹೊಟ್ಟೆ-ಬಟ್ಟೆಯ ಬಗ್ಗೆ ಸ್ವಾವಲಂಬಿಯಾಗಿರಬೇಕು. ಸಾಂಸ್ಕೃತಿಕ ಮಟ್ಟವನ್ನು ದೊರಸಿಕೊಳ್ಳಬೇಕು. ಎರಡನೆಯದೆಂದರೆ, ತನ್ನ ಅಂತರಂಗದಲ್ಲಿ ಹುದುಗಿದ ಸತ್ಯ ದರ್ಶನವನ್ನು, ದೈವಿಕತೆಯ ಸಾಕ್ಷಾತ್ಕಾರವನ್ನು ಪಡೆಯಬೇಕು. ಜೀವನದಲ್ಲಿ ನೀತಿ, ನಿಯಮ, ಸಂಯಮ, ಸಾಮಾಜಿಕತೆ, ಪರೋಪಕಾರ ಬುದ್ಧಿ, ಸಾರ್ವಜನಿಕ ಸೇವೆ ಮುಂತಾದ ಗುಣ ವ್ಯಕಿಗತವಾಗಬೇಕು. ಶಿಕ್ಷಣ ಅಂತಹ ತರಬೇತು ನೀಡಬೇಕು. ಅದಿಲ್ಲದಿದ್ದರೆ ಕೇವಲ ಅಕ್ಷರ ಕಲಿಕೆ ಯಾವ ಮಹತ್ವದ್ದೂ ಅಲ್ಲ. ಅಕ್ಷರ ಕಲಿಕೆ ಮಾತ್ರ ಶಿಕ್ಷಣದ ಧ್ಯೇಯವಲ್ಲ.

ಈ ಕಾರಣದಿಂದ ಗಾಂಧೀಜಿ ಮೂಲೋದ್ಯೋಗ (Craft) ಶಿಕ್ಷಣವನ್ನು ಪ್ರತಿಪಾದಿಸಿದರು. ಅಂದರೆ ಶಿಕ್ಷಣ ಉದ್ಯೋಗ ಮುಖಾಂತರ ಸಾಗಬೇಕು. ಗಣಿತವೇ ಇರಲಿ, ವಿಜ್ಞಾನದ ಇತರ ವಿಷಯವೇ ಇರಲಿ ಅದು ಒಂದು ಅಥವಾ ಹಲವು ಉದ್ಯೋಗದ ಸಾಹಚರ್ಯದಲ್ಲಿ- ಸಮನ್ವಯದಲ್ಲಿ ಸಾಗಬೇಕು. ಅಲ್ಲಿ ಸಾಂಘಿಕತೆ, ಶಿಸ್ತು, ಮುಂದಾಳ್ತನ, ಅರ್ಥಶಾಸ್ತ್ರೀಯ ಗುಣ, ಅಚ್ಚುಕಟ್ಟು, ಇಂದ್ರಿಯ ಪಟುತ್ವ ಬೆಳೆಯುತ್ತದೆ. ಅವರ ಪ್ರಕಾರ ಶಾಲೆಯ ಏಳುವರ್ಷಗಳ ಕಲಿಕೆಯ ನಂತರ ಆತ ಅಥವಾ ಅವಳು ಸ್ವಯಂ ಉದ್ಯೋಗಿಗಳಾಗಬೇಕು. ಇಷ್ಟಲ್ಲದೆ ಶಾಲಾ ಮಕ್ಕಳ ಉದ್ಯೋಗದ ಗಳಿಕೆಯಿಂದ ಶಿಕ್ಷಕರ ಸಂಬಳ ಇತ್ಯಾದಿ ವೆಚ್ಚ ಸಾಗಬೇಕು ಎಂದೂ ಅನ್ನುತ್ತಾರೆ! ಇದಕ್ಕೆ ಕ್ರೇಫ್ಟ್ ಸೆಂಟರ್ಡ್ ಎಜ್ಯುಕೇಶನ್-ಮೂಲೋದ್ಯೋಗ ಶಿಕ್ಷಣ ಎನ್ನುತ್ತಾರೆ.

ಈ ವಿಚಾರ ಗಾಂಧೀಜಿಯವರ ಕಾರ್ಯ ಸಂದರ್ಭದ ಅನುಭವದಿಂದ ಹುಟ್ಟಿದ್ದು. ಆದರೆ ಇದು ಸಂಪೂರ್ಣವಾಗಿ ಸ್ವೀಕಾರಾರ್ಹವಲ್ಲ. ಇದಕ್ಕೆ ಮಕ್ಕಳ ಮನೋವಿಜ್ಞಾನದ, ಹಾಗೆಯೇ ವ್ಯವಹಾರಿಕ ವಿಚಾರದಲ್ಲೂ ಬಾಧಕವಿದೆ. ಸಾಂದರ್ಭಿಕವಾಗಿ ಈ Craft

Centered ಶಿಕ್ಷಣ ಮಹತ್ವ ಪಡೆದರೂ ಅದು ಮನಶ್ಶಾಸ್ತ್ರೀಯವಾಗಿ ತುಷ್ಟಿ ಪಡೆಯಲಾರದು. Child Centred Education ಅಥವಾ ಮಗು ಕೇಂದ್ರಿತ ಶಿಕ್ಷಣವೇ ಯೋಗ್ಯವಾದುದೆಂದೇ ಇಂದಿನ ಗ್ರಹಿಕೆಯಾಗಿದೆ. ಇಂದಿನದು ಮಾತ್ರವಲ್ಲ ಗಾಂಧೀಜಿಯ ಸಮಕಾಲೀನ ಶಿಕ್ಷಣ ತಜ್ಞ ರವೀಂದ್ರನಾಥ ಟಾಗೂರರು ಇದನ್ನು (ಉದ್ಯೋಗ ಕೇಂದ್ರಿತ) ಪೂರ್ಣವಾಗಿ ಸ್ವೀಕರಿಸಿದಂತಿಲ್ಲ. ಹಾಗಂತ ಇಲ್ಲಿ ಮಗುವು ಪಡೆಯುವ ಸ್ವಂತ ಅನುಭವ, ತೊಡಗುವ ದೈಹಿಕ ಚಟುವಟಿಕೆ ಇವೆಲ್ಲಾ ಮಹತ್ವದ್ದೆ. ಆದರೆ ಏಳರಿಂದ ಹದಿನಾಲ್ಕು ವರ್ಷದ ಮಗುವನ್ನು ಶಾಲೆ ಎಂಬ ಕಾರಖಾನೆಯ ಕೂಲಿಯನ್ನಾಗಿ ಮಾಡುವುದು ಉದ್ಯೋಗ ತರಬೇತಿ ಆಗುವುದಿಲ್ಲ. ಇಂದಿನ ಶಿಕ್ಷಣದ ಪುಸ್ತಕದ ಹೊರೆಯಂತೆ ಅದೂ ಉದ್ಯೋಗದ ಹೊರೆ ಆಗಬಹುದು. ಇಷ್ಟೇ ಅಲ್ಲ ಆ ಪ್ರಯೋಗ ಯಶಸ್ವಿ ಕೂಡಾ ಆಗಲಿಲ್ಲ.

ಇನ್ನೊಂದು ವ್ಯವಹಾರಿಕ ತೊಂದರೆಯೆಂದರೆ ಮಕ್ಕಳ ಉದ್ಯೋಗ ಉತ್ಪತ್ತಿಯಿಂದ ಶಾಲೆಯ ಎಲ್ಲಾ ಖರ್ಚು ಸರಿದೂಗಿಸುವುದು. ಇದು ಇಂದಿನ ಬಂಡವಾಳಶಾಹಿ ಸಮಾಜದಲ್ಲಿ ಹಾಸ್ಯಾಸ್ಪದ ಸಂಗತಿಯಾಗುತ್ತದೆ.

ಗಾಂಧೀಜಿಯ ಶಿಕ್ಷಣದ ಪ್ರಶಂಸಾರ್ಹ ಗುಣವೆಂದರೆ ಅದು ವ್ಯಕ್ತಿತ್ವ ನಿರ್ಮಾಣದಲ್ಲಿ ಸಾಧಿಸ ಬಯಸುವ ಕ್ರಾಂತಿ.

ಆ ದರ್ಶನವೆಂದರೆ ಶಿಕ್ಷಣದಲ್ಲಿ ಪ್ರಭಾವ ಬೀರಿಕೊಂಡೇ ಬಂದ Theree 'R' ಅಂದರೆ ರೀಡಂಗ್, ರೈಟಿಂಗ್ ಮತ್ತು ರಿತ್‌ಮೆಟ್ - ಬದಲಾಗಿ Three 'H' ಹೇಂಡ್, ಹಾರ್ಟ್ ಮತ್ತು ಹೆಡ್ ಎನ್ನುವುದೇ ಆಗಿದೆ.[9] ಕೇವಲ ಓದು ಬರಹ ಮತ್ತು ಗಣಿತದ ಕಲಿಕೆ ಆಗಲೇ ಭಾರತದಲ್ಲಿ ಗುಮಾಸ್ತರನ್ನು ಸೃಷ್ಟಿಸುವ ಕಾರಖಾನೆ ಆಗುತ್ತಿರುವುದನ್ನು ಗಾಂಧೀಜಿ ಗಮನಿಸಿದ್ದರು. ಅದರ ಬದಲು ಅವರ ಕೈ ಬೆಳೆಯಬೇಕು (ಉದ್ಯೋಗ), ಹೃದಯ ವೈಶಾಲ್ಯ ಪಡೆಯಬೇಕು (ಮಾನವೀಯತೆ, ಪ್ರೀತಿ) ಮತ್ತು ಬುದ್ಧಿವಂತಿಕೆ ಬೆಳೆಯಬೇಕು. ಇವು ಒಂದನ್ನಗಲದೆ ಒಂದು ಪೋಷಣೆ ಪಡೆಯಬೇಕು. ಉದ್ಯೋಗ ಶಿಕ್ಷಣದಿಂದ ಸ್ವಾವಲಂಬನೆ, ಸ್ವಾಭಿಮಾನ ಮತ್ತು ಸಾಮಾಜಿಕತೆ (ಸಹಕಾರ ಭಾವ) ಬೆಳೆದರೆ ಅದೇ ಮುಂದಿನ ಬೆಳವಣಿಗೆಯ ಹೃದಯವಂತಿಕೆಗೆ ಕಾರಣವಾಗುತ್ತದೆ. ಹಾಗೆಯೇ ಪ್ರತ್ಯಕ್ಷ ಅನುಭವದಿಂದ ಅನ್ವೇಷಕ ಗುಣ ಪುಷ್ಟಿಗೊಳ್ಳುತ್ತದೆ. ಈ ಎರಡಕ್ಕೂ ಮಧ್ಯದಲ್ಲಿ ನಿಂತು ಚಾಲನಾ ಶಕ್ತಿಯಾಗುವುದು ಹೃದಯ. ಹೃದಯವಂತಿಕೆಯೇ ನಿಜವಾದ ಶಿಕ್ಷಣದ ಹಿರಿಯ ಧ್ಯೇಯ ಕೂಡ.

ಗಾಂಧೀಜಿಯವರ ಇನ್ನೊಂದು ಬಹಳ ಮಹತ್ವದ ವಿಚಾರವೆಂದರೆ ಮಾತೃ ಭಾಷೆಯ ಮುಖಾಂತರವೇ ಶಿಕ್ಷಣ. ಇಂಗ್ಲಿಷ್ ಶಿಕ್ಷಣ ಮಾಧ್ಯಮವನ್ನು ಗಾಂಧೀಜಿ ಸ್ಪಷ್ಟವಾಗಿ ಅಲ್ಲಗಳೆದಿದ್ದಾರೆ. "ಪರದೇಶಿ ಭಾಷಾ ಶಿಕ್ಷಣ ಮಾಧ್ಯಮ ನಮ್ಮ ಮಕ್ಕಳ ಮಿದುಳನ್ನು ದಣಿಸುತ್ತದೆ. ಅವರ ಇಂದ್ರಿಯಗಳ ಮೇಲೆ ಸಲ್ಲದ ಒತ್ತಡ ಹೇರುತ್ತದೆ. ಅವರನ್ನು ಕೇವಲ ಉರುಹೊಡೆಯುವವರನ್ನಾಗಿ ನಕಲಿಗಳನ್ನಾಗಿ ಮಾಡುತ್ತದ. ತಮ್ಮ ಜನರನ್ನೇ ಅಪರಿಚಿತರನ್ನಾಗಿ ಮಾಡುತ್ತದ" ಎಂದು ಹೇಳಿ ಮಾತೃ ಭಾಷಾ ಶಿಕ್ಷಣದ ಮಹತ್ವವನ್ನು ಎತ್ತಿ ಹೇಳಿದ್ದಾರೆ. ಈ

ಸಂಗತಿ ಇಂದಿನ ಎಲ್ಲಾ ಶಿಕ್ಷಣ ತಜ್ಞರಿಂದಲೂ ಮನ್ನಣೆ ಪಡೆದಿದೆ. ಮಾತೃಭಾಷಾ ಎನ್ನುವುದನ್ನು ರಾಜ್ಯಭಾಷಾ ಎಂದೂ ಅನ್ವಯಿಸಿಕೊಳ್ಳಬೇಕು.

ಒಟ್ಟಾರೆಯಾಗಿ ಶಿಕ್ಷಣ ಬಾಲಕ-ಬಾಲಕಿಯರಲ್ಲಿ ಧೈರ್ಯ, ಸ್ವಾಭಿಮಾನ, ಸ್ವಾವಲಂಬನೆ, ಸಂಯಮ, ನ್ಯಾಯಪ್ರಿಯತೆ, ಶಿಸ್ತು, ಆರೋಗ್ಯ, ಅಹಿಂಸಾಗುಣ ಮತ್ತು ವಿಶ್ವಬಂಧುತ್ವವನ್ನು ಬೆಳೆಸಬೇಕೆಂಬುದೇ ಗಾಂಧೀಜಿಯವರ ಶಿಕ್ಷಣ ಸೂತ್ರವಾಗಿದೆ.

ಡಾ. ಭೀಮರಾವ್ ಅಂಬೇಡ್ಕರ್ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದ ರಾಜಕೀಯದಲ್ಲಿ ಮತ್ತು ಸಮಾಜದ ಸುಧಾರಣೆಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಒಂದು ದೊಡ್ಡ ಹೆಸರು. ಅವರು ಗಾಂದೀಜಿಯ ಸಂದರ್ಭದ ರಾಜಕೀಯದಲ್ಲಿ ಬಿರುಗಾಳಿಯಂತೆ ಬೀಸಿದರು. ಹಿಂದೂ ಧರ್ಮದ ವಿಶ್ಲೇಷಣೆ ವಿಮರ್ಶೆಯಲ್ಲಿ ಲಾವಾರಸ ಹರಿಸಿದರು. ಒಟ್ಟಾರೆಯಾಗಿ ಅಂದಿನ ಸಾಮಾಜಿಕ ರೀತಿ ನೀತಿ ಮತ್ತು ಗಾಂಧಿ ರಾಜಕೀಯ ವಿರುದ್ಧ ಪ್ರವಾಹದಲ್ಲಿ ಬಲಶಾಲಿಯಾಗಿ ಈಸಿದರು. ಅವರು ಅಸ್ಪ ೃಶ್ಯರ ಮತ್ತು ಹಿಂದುಳಿದವರು ಪ್ರತಿನಿಧಿ ಮಾತ್ರವಾಗಿರಲಿಲ್ಲ, ಅವರು ಅಖಂಡ ವಿದ್ವಾಂಸರಾಗಿದ್ದರು. ಅಂತೆಯೇ ಅವಿಶ್ರಾಂತ ಕಾರ್ಯ ಪಟುವಾಗಿದ್ದರು.

ಡಾ. ಅಂಬೇಡ್ಕರ್ ಅಸ್ಪೃಶ್ಯ ಜನಾಂಗಕ್ಕೆ ಸೇರಿದ ಮಹಾರ ಜಾತಿಯಲ್ಲಿ ಹುಟ್ಟಿದ್ದರು. ತುಂಬ ಬಡತನ ಅವರದಾಗಿತ್ತು. ಬಡವರೂ, ಅಸ್ಪೃಶ್ಯರೂ ಆದ ಅವರು ವಿದ್ಯಾಭ್ಯಾಸ ಪಡೆಯುವಾಗ ದಾರುಣ ನೋವು ಅನುಭೋಗಿಸಿದರು. ಆದರೆ ವಿದೇಶದಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಮಾಡುವಾಗ ಅಲ್ಲಿಯ ಲಿಬರಲ್ ಮತ್ತು ಮುಕ್ತ ಸಮಾಜದ ಸಜ್ಜನಿಕೆಯನ್ನು ಮೈಗೂಡಿಸಿಕೊಂಡರು. ಸತತವಾದ ಓದು, ವಿಮರ್ಶೆ, ವಿಶ್ಲೇಷಣೆ ಅವರನ್ನು ಸ್ವಯಂಸಿದ್ಧ ಮನುಷ್ಯನನ್ನಾಗಿ ಮಾಡಿತ್ತು. ಅವರ ಶಿಕ್ಷಣ ವಿಚಾರವೂ ಇವೆಲ್ಲದರಿಂದ ಪ್ರೇರಿತ.

೧೯೩೮ ರಲ್ಲಿ ಮುಂಬೈ ಲೆಜಿಸ್ಲೇಟಿವ್‌ನಲ್ಲಿ ಗಾಂಧಿ ಪ್ರಣೀತ ವರ್ಧಾಶಿಕ್ಷಣ ಯೋಜನೆ ಚರ್ಚೆಗೆ ಬಂದಾಗ ಅದನ್ನು ಕಟುವಾಗಿ ಟೀಕಿಸಿದರು. ಅವರ ಪ್ರಕಾರ ಮೂಲೋದ್ಯೋಗ ಶಿಕ್ಷಣ ಸ್ವೀಕಾರಾರ್ಹರವಲ್ಲ. ಅಂಥ ಚರಕಾ ಉದ್ಯೋಗ ಪ್ರಣೀತವಾದ ಶಿಕ್ಷಣ ಮಕ್ಕಳ ಬೌದ್ಧಿಕತೆಯನ್ನು ಕುಂದಿಸುತ್ತದೆ. ಇದರಿಂದ ಶಿಕ್ಷಣದಲ್ಲಿ ಎರಡು ವರ್ಗ ಸಿದ್ಧವಾಗುತ್ತದೆ. ಒಂದು, ಗ್ರಾಮೀಣ ಪ್ರದೇಶದ ಉದ್ಯೋಗಿ ಜನ ಶಿಕ್ಷಣ ಮ್ಟಟವನ್ನು ಕುಂದಿಸಿಕೊಂಡು ಹಿಂದುಳಿಯುತ್ತಾರೆ. ಎರಡು, ಪಟ್ಟಣದ ಸೌಕರ್ಯ ಹೊಂದಿದ ಜನ ಶಿಕ್ಷಣ ಮಟ್ಟ ಏರಿಸಿಕೊಂಡು ಸರಕಾರದ ಉನ್ನತ ಸ್ಥಾನದ ಗುತ್ತಿಗೆ ಹಿಡಿಯುತ್ತಾರೆ.

ಅಂಬೇಡ್ಕರರ ಈ ವಿಚಾರ ವಿಶೇಷ ವಿಚಾರಕ್ಕೆ ಅರ್ಹವಾದುದು. ಹಾಗಂತ ಅವರು ಉದ್ಯೋಗವನ್ನು ನಿರಾಕರಿಸಲಿಲ್ಲ. ಅದರ ಬದಲು ತಾಂತ್ರಿಕ ಶಿಕ್ಷಣಕ್ಕೆ ಮಹತ್ವ ಕೊಡಬೇಕೆಂದರು. ತಾಂತ್ರಿಕ ಶಿಕ್ಷಣ ಪಡೆದು ಲಾಭಯುಕ್ತ ಉದ್ಯೋಗ ದೊರಕಿಸಿಕೊಳ್ಳುವುದು ಇಂದಿನ ಆವಶ್ಯಕತೆ ಎಂದೇ ಅವರ ಅಭಿಪ್ರಾಯ. ಆಮೂಲಕ ಆರ್ಥಿಕ ಸುಧಾರಣೆ ಮಾತ್ರವಲ್ಲ ಸಾಮಾಜಿಕ ಸಮಾನತೆ ಬರಲು ಸಾಧ್ಯ. ಸಮಾನತೆ ಅವರ ವಿಚಾರದಲ್ಲಿ ಸಿಂಹಪಾಲನ್ನು ಪಡೆಯುತ್ತದೆ.

ಸರಕಾರವೇ ಕಡ್ಡಾಯ ಶಿಕ್ಷಣ ತರಬೇಕೆಂದು ಅವರು ಪ್ರತಿಪಾದಿಸಿದರು. ಹಿಂದುಳಿದ ವರ್ಗದ ಅರ್ಹ ಅಭ್ಯರ್ಥಿಗಳಿಗೆ ರಾಜ್ಯದ ಬೊಕ್ಕಸದಿಂದಲೇ ವಿದ್ಯಾರ್ಥಿವೇತನ ದೊರೆಯುವಂತಾಗಬೇಕೆಂಬುದು ಅವರ ನಿಲುವು.

ಅವರು ಮುಂಬೈಯಲ್ಲಿ ಶಿಕ್ಷಣ ಪ್ರಸಾರಕ್ಕಾಗಿ ಕಾಲೇಜನ್ನು ತೆರೆದರು. ಅದಕ್ಕೆ 'ಸಿದ್ಧಾರ್ಥ ಕಾಲೇಜು' ಎಂದು ಹೆಸರಿಟ್ಟರು. ಹಾಗೆ ಹೆಸರಿಸುವ ಮೂಲಕವೇ ಅವರು ಬೌದ್ಧ ಧರ್ಮದ, ಬುದ್ಧನ ಉಪದೇಶದ ಬಗೆಗಿರುವ ತಮ್ಮ ಒಲವನ್ನು ತೋರಿದರು.

ಅಂಬೇಡ್ಕರ್ ಅಸ್ಪೃಶ್ಯತೆಯ ಶತ್ರುವಾಗಿದ್ದರು. ಅದರ ನೋವುಗಳನ್ನು ಸ್ವತಃ ಉಂಡಿದ್ದರು. ಅವರು ಸ್ಪಷ್ಟವಾಗಿ "ಯಾವ ಧರ್ಮ ಮನುಷ್ಯ ಮನುಷ್ಯರನ್ನೇ ಮುಟ್ಟಿಕೊಳ್ಳದಂತೆ ನಿರ್ಬಂಧಿಸುತ್ತದೋ ಅದೊಂದು ಧರ್ಮವಲ್ಲ, ಹುಚ್ಚು" ಎಂದರು. ಆದರೆ ಬೌದ್ಧ ಧರ್ಮ ಹಾಗಲ್ಲ. ಅದು ಸಮಾನತೆ, ಭಾತೃತ್ವವನ್ನು ಬೋಧಿಸುತ್ತದೆ. ಬೌದ್ಧ ಧರ್ಮ ಆದರ್ಶವಾದಿಯಲ್ಲ; ಬದಲಾಗಿ ವೈಜ್ಞಾನಿಕತೆಯ ಪರವಾಗಿದೆ. ಅದು ಜಾತೀಯತೆ, ಅಸ್ಪೃಶ್ಯತೆಯನ್ನು ಮನ್ನಿಸುವುದಿಲ್ಲ. ಪ್ರೀತಿ ಮಾನವೀಯತೆ ಅದರ ಸಂದೇಶ. ಈ ಸಮಾನತೆ, ವೈಜ್ಞಾನಿಕತೆ ಅಂಬೇಡ್ಕರ್ ಶೈಕ್ಷಣಿಕ ವಿಚಾರದಲ್ಲಿ ಹಾಸು ಹೊಕ್ಕಾಗಿದೆ.

ಅವರು ಸ್ವತಃ ಮೇಧಾವಿ ಪ್ರೊಫೆಸರ್ ಆಗಿದ್ದರು. ಅವರು, ಪ್ರೋಫೆಸರ್ ಆಳವಾದ ಅಭ್ಯಾಸಿಯೂ, ಸಂಶೋಧಕನೂ ಆಗಿರಬೇಕೆಂದರು. ಆದರೆ ಅಷ್ಟೇ ಸಾಲದು, ಅವನು ಸ್ಪಷ್ಟವಾದ ಉಚ್ಚಾರ ಸೌಲಭ್ಯ ಉಳ್ಳವನಾಗಿರಬೇಕು. ಸತತವಾದ ಅಧ್ಯಯನ, ಅನ್ವೇಷಣೆಯಲ್ಲಿರಬೇಕು. ಆತನಿಗೆ ಸರಿಯಾದ ಆರ್ಥಿಕ ಸೌಲಭ್ಯ ದೊರಕಬೇಕು. ಇಂದಿನ ವಿಶ್ವವಿದ್ಯಾಲಯಗಳು ರಾಷ್ಟ್ರದ ಅವಶ್ಯಕತೆಯನ್ನು ಪೂರೈಸಬೇಕು. ಅದೊಂದು ಜ್ಞಾನ ಗಂಗೋತ್ರಿಯಾಗಿರಬೇಕು. ಗುಮಾಸ್ತರನ್ನು ತಯಾರಿ ಮಾಡುವ ಫ್ಯಾಕ್ಟರಿಗಳಾಗಬಾರದು.

ವಿದ್ಯಾರ್ಥಿಗಳು ಒಂದು ಧ್ಯೇಯವನ್ನು ಗುರಿಯಾಗಿಸಿಕೊಂಡಿರಬೇಕು. ಆ ಗುರಿ ಸಾಧನೆಗಾಗಿ ಸತತ ಪರಿಶ್ರಮಪಡಬೇಕು. ನಿರಂತರ ಅಧ್ಯಯನದಲ್ಲಿ ಇರಬೇಕು ಹೊರತು ಕಾರ್ಯ ನಿರತ ರಾಜಕೀಯಕ್ಕೆ ಬೀಳಬಾರದು.

ಗ್ರಂಥಾಲಯಕ್ಕೆ ಅವರ ವಿಚಾರದಲ್ಲಿ ಮಹತ್ವದ ಸ್ಥಾನವಿದೆ. ವಿದ್ಯಾನಿಲಯಗಳು ಉತ್ತಮ ಗ್ರಂಥಾಲಯ ಹೊಂದಿರಬೇಕು.

ಮ್ಯಾಟ್ರಿಕ್ಯುಲೇಶನ್ ತನಕ ಗಂಡು-ಹೆಣ್ಣುಗಳಿಗೆ ಒಂದೇ ಬಗೆಯ ಶಿಕ್ಷಣ ಇರಲಿ, ಮುಂದೆ ಹೆಣ್ಣುಮಕ್ಕಳಿಗೆ ಅಂಥ ಶಿಕ್ಷಣದ ಅವಶ್ಯಕತೆಯೇನೂ ಎಲ್ಲ ಎಂಬುದು ಅವರ ಅಂಬೋಣ. ಆದರೆ ಇದೊಂದು ಪ್ರಸಂಶಿಕ ಹೇಳಿಕೆ ಎಂದು ತೋರುತ್ತದೆ.

ಒಟ್ಟಾರೆ ಅವರ ವಿಚಾರದಲ್ಲಿ ಮಾನವೀಯತೆಯನ್ನು ಬೆಳೆಸುವ ನೀತಿ ಶಿಕ್ಷಣ, ಆಧುನಿಕ ಜಗತ್ತಿಗೆ ಪೂರಕವಾದ ಉದ್ಯೋಗ ಶಿಕ್ಷಣ, ಉನ್ನತ ಮಟ್ಟದ ಬೌದ್ಧಿಕತೆಯನ್ನು ಬೆಳೆಸುವ ಕಾಲೇಜು ಶಿಕ್ಷಣ, ಸಾರ್ವಜನಿಕ ಕಡ್ಡಾಯ ಶಿಕ್ಷಣ, ಹಿಂದುಳಿದವರಿಗೆ ಶಿಕ್ಷಣ ಪ್ರೋತ್ಸಾಹ ಇವು ಮುಖ್ಯವಾಗಿವೆ.

ಸರ್‌ಸೈಯದ್ ಅಹ್ಮದ್‌ಖಾನ್

ಭಾರತದ ಶೈಕ್ಷಣಿಕ ಮತ್ತು ಸಮಾಜ ಸುಧಾರಣಾ ಆಕಾಶಗಂಗೆಯಲ್ಲಿ ಪ್ರಜ್ವಲಿಸುವ ನಕ್ಷತ್ರದ ಹಾಗೆ ಸರ್‌ಸೈಯದ್ ಆಹ್ಮದ್‌ಖಾನ್ ಕಂಗೊಳಿಸುತ್ತಾರೆ. ಅವರ ಸುಧಾರಣಾವಾದಿ ಮನೋಭಾವ ಉಜ್ವಲವಾಗಿತ್ತು. ಆ ತೀವ್ರತೆಯನ್ನು ಅಂದಿನ ಅಂದರೆ ೧೯ನೇ ಶತಮಾನದ ಉತ್ತರಾರ್ಧ (೧೯೫೭ರ ಸಿಪಾಯಿ ಬಂಡಾಯದ ನಂತರ)ದ ಮುಸ್ಲಿಮ್ ಸಮಾಜ ವಿರೋಧವಿಲ್ಲದೆ ಸ್ವೀಕರಿಸುವಷ್ಟು ಪಕ್ವತೆಯನ್ನು ಹೊಂದಿರಲಿಲ್ಲ. ಅಂತೆಯೇ ಅವರು ಬಿರುಗಾಳಿಯ ಮಧ್ಯೆ ತುಸುವೂ ಚಂಚಲಿಸದ ನಕ್ಷತ್ರದಂತೆ ತೋರುತ್ತಾರೆ.

ಅಂದಿನ ಮುಸ್ಲಿಮ್ ಸಮಾಜವೆಂದರೆ ಅತ್ಯಂತ ಹಿಂದುಳಿದ ಸಮಾಜವಾಗಿತ್ತು. ಅನಕ್ಷರತೆ, ಬಡತನ, ಮೌಢ್ಯ, ಧಾರ್ಮಿಕ ಕಂದಾಚಾರದಿಂದ ತೇಜೋಹೀನವಾಗಿತ್ತು. ಧರ್ಮ ತನ್ನ ನಿಜವಾದ ಅಂತಸ್ಸತ್ವವನ್ನು ಕಳಕೊಂಡು ಕೇವಲ ಕರ್ಮಠತನಕ್ಕೂ, ಡುಂಬತನಕ್ಕೂ ಪಾತ್ರವಾಗಿತ್ತು. ಇಂಥ ಸಂದರ್ಭದಲ್ಲಿ ಇಡೀ ಸಮಾಜವು ಅದರ ಶೈಕ್ಷಣಿಕ, ಧಾರ್ಮಿಕ ಮತ್ತು ಸಾಮಾಜಿಕ ಪುನರ್ಜೀವಕ್ಕೆ ಪಕ್ಕಾಗಿತ್ತು. ಅಂಥ ಒಂದು ಯುಗ ಪರಿವರ್ತನೆಯ ಕರ್ಣಧಾರರಾಗಿ ಸರ್‌ಸೈಯದ್ ಅಹ್ಮದ್‌ಖಾನ್ ಮೂಡಿ ಬಂದರು.

ಸಹಜವಾಗಿ ಅವರು ಬಯಸಿದ್ದರೆ, ಇಂಗ್ಲೆಂಡಿನಲ್ಲೋ ಅಥವಾ ಇಂಡಿಯಾ ದಲ್ಲಿಯೇ ಸುಖವಾಗಿ ಐಶಾರಾಮದಿಂದ ಬದುಕಬಹುದಾಗಿತ್ತು. ಆದರೆ ಅವರ ಮನಸ್ಸು ಅದಕ್ಕೆ ಒಡಂಬಡಲಿಲ್ಲ. ತನ್ನ ಜನತೆ ಹೀಗೆ ಕತ್ತಲೆಯಲ್ಲಿ ಮುಳುಗಿರುವಾಗ ತಾನೊಬ್ಬ ಭೋಗ ಜೀವನ ನಡೆಸುವುದು ಆ ಅಂತಃಕರಣಕ್ಕೆ ಸಾಧ್ಯವಾದುದಾಗಿರಲಿಲ್ಲ. ಆಗಲೇ ಹಿಂದೂಗಳಲ್ಲಿ ರಾಜಾರಾಮ್ ಮೋಹನ್‌ರಾಯರಿಂದ ಶುರುವಾಗಿ ಸಾಮಾಜಿಕ ಸುಧಾರಣೆ, ಶೈಕ್ಷಣಿಕ ಮುನ್ನಡೆ, ರಾಜಕೀಯ ಪ್ರಜ್ಞೆ ಮೂರು-ನಾಲ್ಕು ದಶಕಗಳನ್ನು ಮುಂದೆ ಹೋಗಿತ್ತು ಎಂದು ಅವರು ಅಭಿಪ್ರಾಯಪಡುತ್ತಾರೆ. ಅವರ ಹೃದಯ ತನ್ನ ಸಮಾಜದ ಸುಧಾರಣೆಗಾಗಿ, ಪ್ರಗತಿಗಾಗಿ ಎಷ್ಟೊಂದು ತೀವ್ರವಾಗಿ ಮಿಡಿಯುತ್ತಿತ್ತೆನ್ನಲು ಒಂದು ಉದಾಹರಣೆಯನ್ನು ನೋಡಬಹುದು. ಸುಧಾರಣಾ ವಿರೋಧಿಯಾದ ಮುಸ್ಲಿಮರನ್ನು ಒಲಿಸಿಕೊಳ್ಳಲು ಮತ್ತು ಅವರಿಗೆ ವೈಜ್ಞಾನಿಕ ಶಿಕ್ಷಣದ ಮಹತ್ವವನ್ನು ಮನಗಾಣಿಸಲು ಉದ್ಯುಕ್ತವಾಗಬೇಕೆಂಬ ಉದ್ದೇಶದಿಂದ ಮುಸ್ಲಿಮ್ ಜನರಲ್ಲಿ ಕಲಿಕೆಯ ಉನ್ನತಿ ಮತ್ತು ಪ್ರಗತಿಯ ಸಾಧನೆಗಾಗಿ ಒಂದು ಸಮಿತಿಯನ್ನು ಸ್ಥಾಪಿಸಲು ೧೮೭೦ರಲ್ಲಿ ಬನಾರಸ್‌ನಲ್ಲಿ ಸಭೆ ಕರೆಯಲಾಗಿತ್ತು. ಅದಕ್ಕೆ ಖಾನರ ಪ್ರೋತ್ಸಾಹಕರಾದ ನವಾಬ್ ಮೊಹಸಿನ್ ಉಲ್‌ಮುಲ್ಕ್-ಮುನ್ನಾದಿನ ರಾತ್ರಿಯೇ ಬಂದಿದ್ದರು. ಖಾನ್ ತಮ್ಮ ರೂಮಿನಲ್ಲಿಯೇ ಅವರ ವಸತಿ ಏರ್ಪಡಿಸಿದ್ದರು. ರಾತ್ರಿ ಮಾತಾಡಿ ಮಲಗಿದಾಗ ನವಾಬರಿಗೆ ಎರಡು ಗಂಟೆಯ ವೇಳೆ ಎಚ್ಚರವಾಯಿತು. ಖಾನ್ ಅಲ್ಲಿ ಇದ್ದಿರಲಿಲ್ಲ. ಹೊರಗೆ ಬಂದು ನೋಡಿದರೆ ಖಾನ್ ಕಣ್ಣೀರು ಸುರಿಸುತ್ತಾ ಹೊರಗೆ ತಿರುಗಾಡುತ್ತಿದ್ದರು. ನವಾಬರಿಗೆ ಆಶ್ಚರ್ಯವಾಗಿ ಏನಾದರೂ ಅಪಾಯದ ಸುದ್ದಿ ಮನೆಯಿಂದ ಬಂತೆ? ಎಂದು ವಿಚಾರಿಸಿದಾಗ ಖಾನ್, 'ಹಾಂ! ನನ್ನ ಜನಾಂಗದ ದುರವಸ್ಥೆಯೇ! ಅವರು ಪ್ರಗತಿ ದಾರಿಯನ್ನೇ ಕಂಡುಕೊಳ್ಳುತ್ತಿಲ್ಲ. ಇದಕ್ಕಿಂತ ದುಃಖ ಆಘಾತ ಮತ್ತಾವುದಿದೆ!' ಎಂದರು.

ಮುಸ್ಲಿಮರು ಧಾರ್ಮಿಕ, ಆರ್ಥಿಕ ವೈಜ್ಞಾನಿಕ ಹೀಗೆ ಸರ್ವವಿಧದಲ್ಲಿ ಪ್ರಗತಿ ಸಾಧಿಸಬೇಕೆಂದು ಬಯಸಿದ್ದರು. ಅವರು ಮುಸ್ಲಿಮರನ್ನು ಮಧ್ಯಕಾಲದ ಕುರುಡು ಗುಹೆಯಿಂದ ಆಧುನಿಕ ಕಾಲದ ನಾಗರಿಕ ಜಗತ್ತಿಗೆ ತರಬಯಸಿದ್ದರು. ಇದಕ್ಕೆ ಧರ್ಮ ಅಡ್ಡಬರುತ್ತಿತ್ತೆಂದು ಅವರ ಖಚಿತವಾದ ಅಭಿಪ್ರಾಯವಾಗಿತ್ತು. ಹಾಗಂತ ಅವರು ಧರ್ಮ ವಿರೋಧಿಗಳಾಗಲಿ, ನಾಸ್ತಿಕರಾಗಲಿ ಆಗಿರಲಿಲ್ಲ. ಅವರಿಗೆ ಪ್ರವಾದಿ ಪೈಗಂಬರರಲ್ಲಿ ಅಪಾರವಾದ ನಂಬಿಕೆ ಮತ್ತು ಕುರಾನಿನಲ್ಲಿ ಶ್ರದ್ಧೆ ಇತ್ತು. ಆದರೆ ಧರ್ಮ ಮಾನವನ ಪ್ರಗತಿಗೆ ತಡೆಯೊಡ್ಡುವುದನ್ನು ಸಹಿಸುತ್ತಿರಲಿಲ್ಲ. ಕಾಲದ ಓಟಕ್ಕೆ ತಕ್ಕಾಗಿ ಅಂದಿನ ಮುಸ್ಲಿಮರು ಹೆಜ್ಜೆಯಿಡುವುದಿಲ್ಲವೆಂದೇ ನಂಬಿದ್ದರು. "ಭಾರತೀಯ ಮುಸ್ಲಿಮರು ಸ್ವತಂತ್ರವಾಗಿ ವಿಚಾರ ಮಾಡುವುದನ್ನು ಕಲಿಯದಿದ್ದರೆ ಅವರು ಸಂಪತ್ತನ್ನು, ಗೌರವವನ್ನು, ಅಂತಸ್ತನ್ನು ಪಡೆಯಲಾರರು; ಅವರ ಪಾಲಿಗೆ ನಾಗರಿಕತೆಯೇ ಇರುವುದಿಲ್ಲ" ಎನ್ನುತ್ತಾರೆ. ಮತ್ತೆ False religion is doubtless an obstacle to civilised life, but genuine religion can never be obstacle to human progress" (ನಿಜವಾದ ಧರ್ಮ ಮಾನವನ ಪ್ರಗತಿಗೆಂದೂ ತಡೆಯಲ್ಲ. ಆದರೆ ಪ್ರಚಲಿತ ನಕಲಿಧರ್ಮ ನಿಶ್ಚಯವಾಗಿ ಪ್ರಗತಿಯನ್ನು ತಡೆಯುವಂತಹದು). ನಿಜವಾದ ಧರ್ಮವೆಂದರೆ ಇಡೀ ಮಾನವ ಕುಟುಂಬದ ಪ್ರೀತಿ ಮತ್ತು ಸೇವೆಯೇ ಆಗಿದೆ. ಪ್ರವಾದಿ ಅದಕ್ಕಾಗಿಯೇ ವ್ಯಕ್ತಿಗಳನ್ನು ನೇಮಿಸಿದ್ದಾರೆ ಎಂದು ಅವರು ನಂಬಿದ್ದರು. ಈ ಮಾತು ಮುಸ್ಲಿಮ್ ಧರ್ಮದವರಿಗೆ ಮಾತ್ರವಲ್ಲ ಹಿಂದೂ, ಮುಸ್ಲಿಮ್, ಕ್ರೈಸ್ತ, ಸಿಖ್‌ಮುಂತಾದ ಎಲ್ಲ ಧರ್ಮದ ಹೃದಯ ಸಾರವೇ ಆಗಿದೆ. ಸ್ವಾರ್ಥ, ಸ್ವಾಭಿಮಾನಹೀನತೆ, ಆಲಸ್ಯ, ಪರಧರ್ಮದವರನ್ನು ಸಹಿಸದಿರುವುದು, ಮತಾಂಧತೆ, ಬಹುಪತ್ನಿತ್ವ ಇಂಥವುಗಳನ್ನು ಖಡ್ಗದಲ್ಲಿ ಕತ್ತರಿಸುವಂತೆ ಖಂಡಿಸಿದರು. ಇಂಥವುಗಳ ರೂಢಿ ಮತ್ತು ಆಚರಣೆಯಿಂದ ಪ್ರಗತಿಯೂ ಇಲ್ಲ, ಸಂಸ್ಕೃತಿಯೂ ಇಲ್ಲ ಎಂದರು. ಶಿಕ್ಷಣ ಇಲ್ಲದ ಮನುಷ್ಯ ಉಳಿ ತಾಗದ ಬಂಡೆಗಲ್ಲಿನಂತೆ ಎಂದರು. ಎಂತಲೇ ಅವರು ಮುಸ್ಲಿಮ್ ಸಮಾಜದ ರಾಜಕೀಯ ಆರ್ಥಿಕ, ಸಮಾಜಿಕ, ಸಾಂಸ್ಕೃತಿಕ ಪ್ರಗತಿಗೆ ಶಿಕ್ಷಣ ಪ್ರಸಾರವೇ ಸರ್ವರೋಗ ಪರಿಹಾರ ಸಿದ್ಧೌಷಧ ಎಂದು ಸ್ವೀಕರಿಸಿದರು. ಆ ದಿಸೆಯಲ್ಲಿ ಪಣತೊಟ್ಟು ಹೋರಾಡಿದರು. ಶಿಕ್ಷಣ ಸಂಸ್ಥೆಯನ್ನು ಮುನ್ನಡೆಸಲು ಹಣ ಸಂಗ್ರಹಿಸಲು ತಮ್ಮ ಸ್ನೇಹಿತರನ್ನೂ, ಹಿತೈಷಿಗಳನ್ನೂ ಕಾಡಿದರು. ತಮಗೆ ಸತ್ಕಾರ ಮಾಡಬಯಸಿದವರಿಂದ ಅದರ ಖರ್ಚಿನ ಹಣ ತೆಗೆದುಕೊಂಡು ಅದನ್ನು ಶಿಕ್ಷಣ ನಿಧಿಗೆ ಸೇರಿಸಿದರು. ತಾವೇ ಸ್ವತಃ ಸಂಗೀತ ಹಾಡಿ ಹಣಬೇಡಿದರು. ಶಿಕ್ಷಣ ಅವರ ಜೀವನದ ಉಸಿರಾಗಿತ್ತು.

೧೮೫೯ರಲ್ಲಿ ಸರ್‌ಸೈಯದ್ ಖಾನ್ ಮುರಾದಾಬಾದ್‌ನಲ್ಲಿ ಪರ್ಶಿಯನ್ ಮದರಸಾ ಸ್ಥಾಪಿಸಿದರು. ಸಾರ್ವಜನಿಕರಿಗೆ ಶಿಕ್ಷಣ ಕೊಡಲೆಂದು ಮತ್ತು ಜನರಲ್ಲಿ ವೈಜ್ಞಾನಿಕ ಎಚ್ಚರ ಮೂಡಿಸಲೆಂದು ವಿಜ್ಞಾನ ಸಂಘ (Scientific society)ವನ್ನು ತೆರೆದರು. ನಂತರ ೧೮೬೪ರಲ್ಲಿ ಗಾಝಿಪುರದಲ್ಲಿ ಶಾಲೆಯನ್ನು ತೆರೆದರು ಮತ್ತು ೧೮೭೫ರಲ್ಲಿ ಆಲೀಘಡ ಕಾಲೇಜನ್ನು -ವಿಶ್ವವಿದ್ಯಾನಿಲಯವನ್ನು ತೆರೆದರು. ಆದರೆ ಅವರು ಸ್ಪಷ್ಟವಾಗಿ ಹೇಳಿದರು: ಇವೆಲ್ಲ ಮತೀಯ ಹಿತದ ಸಂಸ್ಥೆಯಾವರೂ ಕೋಮುವಾದಿ ಸಂಸ್ಥೆಯಲ್ಲ. ವಿಜ್ಞಾನ ಸಂಘದ

ಮುಖಾಂತರ ಹಿಂದೂ-ಮುಸ್ಲಿಮರನ್ನು ಒಟ್ಟಿಗೆ ತರಬಯಸಿದರು. ಅಲೀಘಡ ಕಾಲೇಜಿಗೆ ಅನೇಕ ಹಿಂದುಗಳು ಖೋಲಿಗಳನ್ನು ದಾನಮಾಡಿದ್ದಾರೆ. ಕಮಿಟಿಯಲ್ಲಿ ಹಿಂದೂ ಸದಸ್ಯರೂ ಇದ್ದರು. ಅವರು ಕೊನೆ ಉಸಿರು ಎಳೆಯುವಾಗ ಕಾಲೇಜಿನಲ್ಲಿ ೨೮೫ ಮಂದಿ ಮುಸ್ಲಿಮ್‌ವಿದ್ಯಾರ್ಥಿಗಳೂ ೬೪ ಹಿಂದೂ ವಿದ್ಯಾರ್ಥಿಗಳೂ ಓದುತ್ತಿದ್ದರು. ಅಲ್ಲಿ ಉರ್ದು, ಅರೇಬಿಕ್, ಪರ್ಶಿಯನ್ ಜೊತೆ ಸಂಸ್ಕೃತ ಕೂಡಾ ಅಭ್ಯಾಸದ ವಿಷಯವಾಗಿತ್ತು. ಹಿಂದೂ-ಮುಸ್ಲಿಮ್ ಸೋದರರೆಂದೂ, ಈ ಎರಡೂ ಧರ್ಮೀಯರ ಮಧ್ಯೆ ಸಾಮರಸ್ಯದಿಂದ ಮಾತ್ರ ಇಬ್ಬರ ಪ್ರಗತಿಯೂ ಸಾಧ್ಯ; ಇಲ್ಲದಿದ್ದರೆ ಇಬ್ಬರದೂ ನಾಶ ಎಂದು ಅವರು ತಮ್ಮ ಒಂದು ಭಾಷಣದಲ್ಲಿ ಹೇಳಿದ್ದಾರೆ.

ಅವರು ಶಿಕ್ಷಣ ಮುಖಾಂತರ ಹಳೆಯ ಮತ್ತು ಹೊಸ; ಪಶ್ಚಿಮ ಮತ್ತು ಪೂರ್ವದ ಮಧ್ಯೆ ಸಾಮರಸ್ಯ ಸಂಬಂಧವನ್ನು ಬೆಸೆಯ ಬಯಸಿದರು. ಬಾಲಕರಿಗೆ ತಮ್ಮ ಮಾತೃಭಾಷಾ ಮಾಧ್ಯಮದಲ್ಲಿ ಶಿಕ್ಷಣ ಕೊಡುವುದು ಒಳಿತೆಂದು ಅವರು ತಿಳಿದಿದ್ದರು. ಆದರೆ ಪಾಶ್ಚಾತ್ಯ ವಿಷಯ-ವಿಜ್ಞಾನ, ಚರಿತ್ರೆ, ಔಷಧ ಮುಂತಾದ ವಿಷಯವನ್ನು ಕಲಿಯುವ ಅಗತ್ಯ ಇರುವುದರಿಂದ ಇಂಗ್ಲೀಷ್ ಶಾಲೆಯಲ್ಲಿ ಇಂಗ್ಲೀಷ್ ಮಾಧ್ಯಮವೇ ಆಗತ್ಯ ಎಂದರು. ಸೆಕೆಂಡರಿ ಶಾಲೆಯ ತನಕ ಉರ್ದು ಮಾಧ್ಯಮವಾಗಿತ್ತು.

ಅವರು ಶಿಕ್ಷಣ ತರಬೇತಿಯಲ್ಲಿ ಮೂರು ಹಂತವನ್ನು ಗುರುತಿಸಿದರು. ಆರರಿಂದ ಹನ್ನೊಂದು, ಹನ್ನೆರಡರಿಂದ-ಹದಿನೆಂಟು ಮತ್ತು ಹದಿನೆಂಟರಿಂದ ಮುಂದೆ ಈ ಎಲ್ಲ ಹಂತಗಳಲ್ಲೂ ಧಾರ್ಮಿಕ ಶಿಕ್ಷಣದ ಅವಶ್ಯಕತೆಯಿತ್ತು.

ವಿಜ್ಞಾನದ ವಿಷಯಕ್ಕೆ ಅವರು ಹೆಚ್ಚು ಮಹತ್ವವನ್ನು ಕೊಡುತ್ತಿದ್ದರು. ಆಗಿನ ವಿಶ್ವವಿದ್ಯಾನಿಯಗಳು ಕೊಡುತ್ತಿರುವ ಜ್ಞಾನ ಅಲ್ಪವಾದುದೆಂದೇ ಅವರು ಹೇಳಿದರು. ಅಂತೆಯೇ ತಮ್ಮ ಕಾಲೇಜು ಆಕ್ಸ್‌ಫರ್ಡ್, ಕ್ಯಾಂಬ್ರಿಜ್ ವಿ.ವಿ.ಯಂತೆ ಆಗಬೇಕೆಂದರು. '**ಶಿಕ್ಷಣದ ನಿಜವಾದ ಉದ್ದೇಶವೆಂದರೆ ಜ್ಞಾನವನ್ನು ವೃದ್ಧಿಪಡಿಸುವುದೂ ಸೃಷ್ಟಿಶೀಲ ಮತ್ತು ಸಾಮರಸ್ಯದ ವ್ಯಕ್ತಿತ್ವವನ್ನು ಬೆಳೆಸುವುದೇ ಆಗಿದೆ**' ಎಂದು ಅವರು ನಂಬಿದ್ದರು.

ತಾಂತ್ರಿಕ-ಯಂತ್ರಶಿಕ್ಷಣ, ವಾಯುಶಾಸ್ತ್ರ, ವಿದ್ಯುಚ್ಛಕ್ತಿಗೆ ಸಂಬಂಧಿಸಿದ ಶಿಕ್ಷಣ, ಇತರ ವಿಜ್ಞಾನ, ತತ್ವಶಾಸ್ತ್ರಗಳ ಶಿಕ್ಷಣಕ್ಕೆ ವ್ಯವಸ್ಥೆ ಮಾಡಿದರು. ಒಕ್ಕಲುತನದ ಶಿಕ್ಷಣದ ಬಗ್ಗೆ ಅವರು ಹೆಚ್ಚು ಒತ್ತುಕೊಡುತ್ತಿದ್ದರು. ಇದರ ಕುರಿತು ಅನೇಕ ಪುಸ್ತಕಗಳನ್ನು ಅವರು ಉರ್ದುವಿಗೆ ಭಾಷಾಂತರಿಸಲು ಹಚ್ಚಿದರು. ಆದರೆ ಕೊನೆಗೆ ಅವರು ಆಯಾ ಭಾಷೆಯಲ್ಲಿಯೇ ಸ್ವತಂತ್ರ ಕೃತಿ ಹುಟ್ಟಬೇಕೇ ಹೊರತು ಈ ಅನುವಾದಗಳು ಕ್ರಿಯಾಶೀಲತೆಯನ್ನು ಕುದುರಿಸ-ಲಾರದೆಂದುಕೊಂಡರು.

ಚರಿತ್ರೆ- ಇತಿಹಾಸಕ್ಕೆ ಅವರ ದೃಷ್ಟಿಯಲ್ಲಿ ಮಹತ್ವದ ಸ್ಥಾನವಿತ್ತು. ಚರಿತ್ರೆಯೆಂದರೆ ಅಳರಸರ ದಿನಚರಿಯ ದಾಖಲೆಯಲ್ಲ ಎಂದು ಅವರು ಹೇಳಿದರು. ಇತಿಹಾಸವೆಂದರೆ ಜನಜೀವನದ

ಏಳು ಬೀಳುಗಳ ಜೀವಂತ ದಾಖಲೆ. ಹಿಂದಿನ ಇತಿಹಾಸದ ವಿಶ್ಲೇಷಣೆಯಲ್ಲಿ ಇಂದಿನ ಬದುಕನ್ನು ಸುಗಮಗೊಳಿಸಿಕೊಳ್ಳಬೇಕೆಂಬುದು ಅವರ ಅಭಿಪ್ರಾಯ.

ಇತಿಹಾಸದ ಕುರಿತು ಈ ಗ್ರಹಿಕೆ- ಬಹಳ ಮಹತ್ವದ್ದಾಗಿದೆ. ಇತಿಹಾಸದ ಅಭ್ಯಾಸ ಯಾವ ಸನ್ನಿವೇಶದಲ್ಲಿ ನಮ್ಮ ಹಿರಿಯರು ಹೇಗೆ ಬದುಕಿದರು. ಅಲ್ಲಿಯ ದೋಷ, ಔಚಿತ್ಯ ಯಾವುದು. ಇದರಿಂದ ನಮ್ಮ ಇಂದಿನ ಬದುಕು ಸಮೃದ್ಧವೂ, ಸಾಮರಸ್ಯ ಪೂರ್ಣವೂ ಆಗಬೇಕಾದರೆ ನಾವು ಯಾವುದನ್ನು ಗ್ರಹಿಸಬೇಕು ಎಂಬುದನ್ನು ಇತಿಹಾಸದಿಂದ ತಿಳಿಯಬೇಕು. ಹಾಗಾದಾಗಲೇ ನಮ್ಮ ಮಧ್ಯೆ ಇರುವ ಅನೇಕ ಗಂಡಾಂತರಗಳು ನಿವಾರಣೆಯಾಗಬಲ್ಲದು.

ಒಟ್ಟಾರೆಯಾಗಿ ಅವರ ಶಿಕ್ಷಣದ ಸೂತ್ರಗಳು ಹೀಗೆ ಇದ್ದವು.

೧. ಧಾರ್ಮಿಕ, ಸತ್ಯದ ಕುರಿತು ಜ್ಞಾನ ಹಾಗೂ ಸಂಪ್ರದಾಯ ಮತ್ತು ವೈಚಾರಿಕತೆಯ ಮಧ್ಯೆ ಸಾಮರಸ್ಯವನ್ನು ಬೆಳೆಸುವುದು.

೨. ವ್ಯಕ್ತಿಯ ಸಚ್ಚಾರಿತ್ರ್ಯವನ್ನು ರೆಸಿಡೆನ್ಶಿಯಲ್ ಸ್ಕೂಲ್ ಮುಖಾಂತರ ಬೆಳೆಸುವುದು. ಒಳ್ಳೆಯ ರೂಢಿಯನ್ನು ರೂಢಿಸುವುದು.

೩. ಆಧುನಿಕ ವಿಜ್ಞಾನವನ್ನು ಕಲಿಸುವುದರ ಮೂಲಕ ಅವರಲ್ಲಿ ಲೌಕಿಕ ಮತ್ತು ವೈಚಾರಿಕ ಜಾಗೃತಿಯನ್ನು ವೃದ್ಧಿಪಡಿಸುವುದು.

ಈ ಧ್ಯೇಯಗಳಿಗಾಗಿ ಅವರು ತಮ್ಮ ಜೀವಿತವನ್ನೇ ಮುಡಿಪಿಟ್ಟರು. ಅವರ ಈ ಆಧುನಿಕ ಮನೋಭಾವ, ಸ್ಪಷ್ಟವಾದ ನಿರ್ಧಾರವು ಸಂಪ್ರದಾಯವಾದಿಗಳಿಂದ, ಮೌಲ್ವಿಗಳಿಂದ ತೀವ್ರವಾದ ವಿರೋಧವನ್ನು ಎದುರಿಸಬೇಕಾಯಿತು. ಅದು ಎಷ್ಟರ ಮಟ್ಟಿಗೆ ಇತ್ತೆಂದರೆ ಅವರಿಗೆ ಬಹಿಷ್ಕಾರದ, ಕೊಲೆಯ ಬೆದರಿಕೆಯನ್ನೂ ಒಡ್ಡಲಾಯಿತು. ಆದರೆ ತನ್ನ ಜನಾಂಗದ ಪ್ರಗತಿಯೇ ತನ್ನ ಜೀವನ ಯಾತ್ರೆಯ ಗುರಿ ಎಂದು ನಂಬಿದ ಧೀರ ವ್ಯಕ್ತಿತ್ವದ ಖಾನ್, ಅಳುಕದೆ, ಅಂಜದೆ ತಮ್ಮ ಧ್ಯೇಯ ಸಾಧನೆಗಾಗಿ ದುಡಿದರು. ಹಿಂದುಗಳ ಸಾಮಾಜಿಕ-ಧಾರ್ಮಿಕ ಪುನರುಜ್ಜೀವನದ ಚರಿತ್ರೆಯಲ್ಲಿ ರಾಜಾರಾಮ್ ಮೋಹನ್ ರಾಯರಿಗೆ ಯಾವ ಉನ್ನತ ಸ್ಥಾನವಿದೆಯೋ ಅಂತಹದೇ ಸ್ಥಾನ ಮುಸ್ಲಿಮ್ ಪುನರುಜ್ಜೀವನದಲ್ಲಿ ಸರ್‌ಸೈಯದ್ ಅಹ್ಮದ್‌ಖಾನರಿಗೆ ಇದೆ.

ಮೌಲಾನ ಅಬುಲ್ ಕಲಾಮ್ ಆಝಾದ್

ಮೌಲಾನ ಅಬುಲ್ ಕಲಾಮ್ ಆಝಾದ್ ನಮ್ಮ ರಾಷ್ಟ್ರೀಯ ಮಹಾಪುರುಷರಲ್ಲಿ ಒಬ್ಬರು. ಭಾರತದ ಸ್ವಾತಂತ್ರ್ಯ ಹೋರಾಟದೊಡನೆ ಅವರು ದೀರ್ಘಕಾಲ ಮುಖ್ಯ ಪಾತ್ರವನ್ನು ವಹಿಸಿದವರು. ಆರು ವರ್ಷಗಳ ದೀರ್ಘಕಾಲ ಅವರು ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದರು. ಹೋರಾಟದ ಕಠಿಣ ಸಂದರ್ಭದಲ್ಲಿ ಅದನ್ನು ಮುನ್ನಡೆಸಿದರು. ಮಹಾತ್ಮಾ ಗಾಂಧೀಜಿಯ ಅಹಿಂಸಾ ತತ್ವವನ್ನು ಬಲಪಡಿಸಿದವರು ಅವರು. ಅಖಂಡ ಭಾರತದ ಸ್ವಾತಂತ್ರ್ಯಕ್ಕಾಗಿ ಅವರ ವಿಶ್ವಾಸ ಅಚಲವಾಗಿತ್ತು.

ಅವರು ಅಸಾಧಾರಣ ಮೇಧಾವಿಗಳಾಗಿದ್ದರು. ಅವರಿಗೆ ಪೌರಾತ್ಯ ಮತ್ತು ಪಾಶ್ಚಾತ್ಯ ಧರ್ಮ, ತತ್ವಜ್ಞಾನಗಳ ಆಳವಾದ ಅಭ್ಯಾಸವಿತ್ತು. ಜಾತ್ಯಾತೀತತೆ (ಸೆಕ್ಯುಲರಿಸಂ) ಅವರ ಅಂತರಂಗದ ಉಸಿರಾಗಿತ್ತು. ಸಹನೆ, ಭಾವನೆಯ ಮೇಲೆ ಹಿಡಿತ, ಕಾರ್ಯನಿರ್ಧಾರಕ ಶಕ್ತಿ, ಪ್ರಸಂಗಾವಧಾನತೆ, ಧೈರ್ಯ, ಜನರ ಮೇಲಿನ ಪ್ರೀತಿ ಅವರ ವ್ಯಕ್ತಿತ್ವದ ಅವಿಭಾಜ್ಯ ಅಂಗವಾಗಿದ್ದವು. ಇಂಥ ಒಬ್ಬ ಅನುಭವೀ ಮೇಧಾವಿ ಸ್ವತಂತ್ರ ಭಾರತದ ಶಿಕ್ಷಣ ಮಂತ್ರಿಯಾಗಿ ದೊರಕಿದ್ದು ಒಂದು ಘನತೆಯ ಸಂಗತಿಯಾಗಿತ್ತು. ಮೌಲಾನಾ ಸ್ವತಂತ್ರ ಭಾರತದ ಶಿಕ್ಷಣ ಶಿಲ್ಪಿಯಾಗಿದ್ದಾರೆ. ವಲ್ಲಭಬಾಯಿ ಪಟೇಲರನ್ನು ಭಾರತದ ಒಕ್ಕೂಟದ ಶಿಲ್ಪಿಯೆಂದೂ, ಪಂಡಿತ್ ಜವಹರಲಾಲ್ ನೆಹರೂ ಅವರನ್ನು ಪಂಚಶೀಲ ತತ್ವದ ಶಿಲ್ಪಿಯೆಂದೂ, ಹೇಳುವುದುಂಟು. ಆ ಸಾಲಿನಲ್ಲಿ ಮೌಲಾನಾ ಆಧುನಿಕ ಭಾರತದ ಶಿಕ್ಷಣ ಶಿಲ್ಪಿಯಾಗಿದ್ದಾರೆ. ಇಂದು ಅನೇಕ ಪರಿವರ್ತನೆಯೊಡನೆಯೂ ಶಿಕ್ಷಣ ಅವರದೇ ದಾರಿಯಲ್ಲಿ ಮುಂದುವರಿಯುತ್ತಿದೆ.

ಅವರ ಶೈಕ್ಷಣಿಕ ವಿಚಾರವನ್ನು ಐದು ಅಂಶಗಳಲ್ಲಿ ಕಲಿಕ್ ಅಹ್ಮದ್ ನಿಝಾಮರು ನಿರೂಪಿಸುತ್ತಾರೆ:

೧. ಶಾಲಾ ವಯಸ್ಸಿನ ಎಲ್ಲ ಮಕ್ಕಳಿಗೆ ಕಡ್ಡಾಯ ಶಿಕ್ಷಣ, ಹೈಸ್ಕೂಲ್ ವರೆಗೆ ಉಚಿತ ಶಿಕ್ಷಣ.

೨. ಅನಕ್ಷರಸ್ಥ ಪ್ರೌಢರಿಗೆ ಸಾಮಾಜಿಕ ಶಿಕ್ಷಣ.

೩. ಸೆಕೆಂಡರಿ ಮತ್ತು ಉನ್ನತ ಶಿಕ್ಷಣಕ್ಕೆ ಸೌಲಭ್ಯವನ್ನು ಹೆಚ್ಚಿಸುವುದು ಮತ್ತು ಶಿಕ್ಷಣ ಮಟ್ಟವನ್ನು ಎತ್ತರಿಸುವುದು.

೪. ಭಾರತದ ಅವಶ್ಯಕತೆಗೆ ತಕ್ಕಾದ ತಾಂತ್ರಿಕ ಮತ್ತು ವೈಜ್ಞಾನಿಕ ಶಿಕ್ಷಣ.

೫. ಸಮಾಜದ ಸಾಂಸ್ಕೃತಿಕ ಮಟ್ಟವನ್ನು ಹೆಚ್ಚಿಸುವುದು ಮತ್ತು ಕಲೆಗಳಿಗೆ ಹೆಚ್ಚು ಅವಕಾಶ ಒದಗಿಸುವುದು.

ಅವರ ಶೈಕ್ಷಣಿಕ ಸಾಧನೆಯಲ್ಲಿ ಈ ಅಂತಸತ್ವವು ಹೊಂದಿದೆ. ವೈಜ್ಞಾನಿಕ ಶಿಕ್ಷಣ ದೇಶದ ಪ್ರಗತಿಗೆ ಅವಶ್ಯಕವಾಗಿದೆ. ಅದರೊಟ್ಟಿಗೆ ಮಾನವೀಯ ವಿಜ್ಞಾನ ಸಹಾ ದೇಶದ ಚರಿತ್ರೆಯನ್ನು ಶಕ್ತಿಶಾಲಿಗೊಳಿಸಲು ಅವಶ್ಯಕ ಎಂದು ಅವರು ಗ್ರಹಿಸಿದ್ದರು. ಭಾರತ ಆರ್ಥಿಕ ಪ್ರಗತಿ ಹೊಂದಬೇಕಾದರೆ ತಾಂತ್ರಿಕ ಶಿಕ್ಷಣದ ಬೆಳವಣಿಗೆಯಾಗಬೇಕು. ಭಾರತದ ಭಾಷೆಗಳು ಉನ್ನತ ಶಿಕ್ಷಣದ ಮಾಧ್ಯಮವಾಗಲೂ ತಕ್ಕದಾಗಬೇಕೆಂಬುದು ಅವರ ಮನೀಷೆ. ಆದ್ದರಿಂದ ಅವರು ಭಾರತದ ಎಲ್ಲ ಮುಖ್ಯ ಭಾಷೆಗಳ ಬೆಳವಣಿಗೆಗೆ ಅನುಕೂಲ ಒದಗಿಸಿದರು. ಅದೇ ಹೊತ್ತಿನಲ್ಲಿ ಆಯಾ ರಾಜ್ಯ ಭಾಷಿಕ ಪ್ರದೇಶದಲ್ಲಿ ಬರುವ ಅಲ್ಪಸಂಖ್ಯಾತ ಭಾಷಿಕರು ರಾಜ್ಯಭಾಷೆಯಲ್ಲಿ ಕಲಿಯುವುದು ಅವರ ಸ್ವಯಂ ಪ್ರೇರಣೆಯಿಂದಲೇ.

ಹೀಗೆ ದೇಶ ಭಾಷೆಯ ಬಗ್ಗೆ ಒಲವು ತೋರಿದರೂ ಇಂಗ್ಲೀಷ್ ಭಾಷೆಯನ್ನು ಅವರು ಸಾರಸಗಟಾಗಿ ನಿರಾಕರಿಸಲಿಲ್ಲ. ಇಂಗ್ಲೀಷ್ ಭಾಷೆ ಭಾರತೀಯ ವಿವಿಧ ಪ್ರದೇಶಗಳ ಮತ್ತು

ಆಡಳಿತದಲ್ಲಿರುವ ಜನರನ್ನು ಒಂದುಗೂಡಿಸಿದ್ದು ಎಂಬುದನ್ನು ಮರೆಯಲಿಲ್ಲ. ಅಲ್ಲದೆ ರಾಷ್ಟ್ರೀಯ ಜಾಗೃತಿಯನ್ನು ಹುಟ್ಟಿಸಿ, ಬೆಳೆಸಿದ್ದೂ ಇಂಗ್ಲೀಷ್ ಭಾಷೆಯೇ. ಅಷ್ಟು ಮಾತ್ರವಲ್ಲ ಜಗತ್ತಿನ ಸಂಪರ್ಕವನ್ನು ಬೇರೆ ದಲ್ಲಾಳಿಗಳಿಲ್ಲದೆ ಇಂಗ್ಲೀಷ್ ಒದಗಿಸಿತು. ಅದಕ್ಕಿಂತ ಹೆಚ್ಚಾಗಿ ಇಂಗ್ಲೀಷ್ ಭಾರತೀಯರಿಗೆ ವೈಜ್ಞಾನಿಕ ಜಗತ್ತನ್ನು ತೆರೆದು ತೋರಿತು. ಆದ್ದರಿಂದ ಇಂಗ್ಲೀಷ್ ಶಿಕ್ಷಣದ ದೋಷವನ್ನಷ್ಟೆ ನಿವಾರಿಸಿ, ಅದರ ಉತ್ತಮಾಂಶವನ್ನು ಇಟ್ಟುಕೊಂಡರು.

ನಮ್ಮ ಸಂಕುಚಿತ ಮನೋಭಾವ ರಾಷ್ಟ್ರೀಯ ಪ್ರಗತಿಗೆ ಮಾರಕವಾಗಿದೆ ಎಂದು ಅವರೆಂದರು.

ಜನಸಾಮಾನ್ಯರಿಗೆ ಸಾಮಾಜಿಕ ಶಿಕ್ಷಣ ಕೊಡುವುದು ಒಂದು ರಾಷ್ಟ್ರೀಯ ಜವಾಬ್ದಾರಿ ಎಂದು ಅವರು ಹೇಳಿದರು. ಯಾಕೆಂದರೆ ಅವರಿಂದ ಮತ ಪಡೆಯುವುದು ಒಂದು ಕರ್ತವ್ಯವಲ್ಲ. ಬದಲಾಗಿ ಅದೊಂದು ಋಣ ಬದ್ಧತೆ. ಪ್ರೌಢ ಶಿಕ್ಷಣವೆಂದರೆ ಕೇವಲ ಅಕ್ಷರಾಭ್ಯಾಸ ಮಾತ್ರವಲ್ಲ. ಪ್ರಜಾಪ್ರಭುತ್ವಕ್ಕೆ ಬೇಕಾದ ಶಿಕ್ಷಣ ಜನಸಾಮಾನ್ಯರಿಗೆ ಸಿಕ್ಕಬೇಕು. ಆ ಕಾರಣಕ್ಕಾಗಿ ಅವರು ಹಳ್ಳಿಯ ಶಾಲೆಗಳು ಸಮಾಜ ಕೇಂದ್ರವಾಗಬೇಕು ಎಂದರು. ಶಾಲೆ ಸಾಮಾಜಿಕರಿಗೆ ನಾಗರಿಕ ಶಿಕ್ಷಣವನ್ನೂ, ಸಾಮಾನ್ಯವಾದ ತಾಂತ್ರಿಕ, ಔದ್ಯೋಗಿಕ ಶಿಕ್ಷಣವನ್ನು ಕೊಡಬೇಕು. ಅದಕ್ಕೆ ಅನುಕೂಲತೆಯನ್ನು ಸರಕಾರ ಒದಗಿಸಬೇಕು. ಸಾಮಾಜಿಕ ಕಲಾಭಿವೃದ್ಧಿಯಾಗುವಂತೆಯೂ ಅದು ನೋಡಿಕೊಳ್ಳ ಬೇಕು. ಹಾಡು, ನೃತ್ಯ, ನಾಟಕ ಮೊದಲಾದವೂ ಪ್ರೌಢಶಿಕ್ಷಣದ ಅಂಗವಾಗಬೇಕು ಮತ್ತು ಅಂಥ ಸಾಂಸ್ಕೃತಿಕ ಕಲೆಗಳು ರಾಷ್ಟ್ರೀಯ ಏಕತೆಯನ್ನು ಬೆಳೆಸಬೇಕು ಎಂದರು.

ಅವರ ಶಿಕ್ಷಣದ ಕಲ್ಪನೆಗೆ ಒಂದು ಜಾಗತಿಕ ದೃಷ್ಟಿಕೋನವಿತ್ತು. ಭಾಷೆ, ಧರ್ಮ ಇತ್ಯಾದಿಗಳ ಸಂಕುಚಿತತೆಯಿಂದ ಅದು ಬಿಡುಗಡೆಗೊಳ್ಳಬೇಕು. ಬೆಳಕು ಬರದಂತೆ ಬಾಗಿಲು ಮುಚ್ಚಿಕೊಳ್ಳಲು ಕಲಿಸುವ ಶಿಕ್ಷಣ ಯಾವ ಜನಾಂಗವನ್ನೂ ಬೆಳೆಸಲಾರದು. ಭಾರತ ಎಂದು ಸುತ್ತಲಿನ ಜಗತ್ತಿನೊಡನೆ ಸಂಪರ್ಕ ಹೊಂದಿದ್ದಾಗ ಅದು ಜ್ಞಾನ ಸಮೃದ್ಧಿಯನ್ನು ಹೊಂದಿತ್ತು. ಅದೇ ಸರಿಯಾದ ರೀತಿ. ಧರ್ಮ ಒಂದಲ್ಲ ಒಂದು ರೀತಿಯಿಂದ ಶಿಕ್ಷಣದಲ್ಲಿ ಅವಶ್ಯಕ. ಆದರೆ ಧಾರ್ಮಿಕ ಶಿಕ್ಷಣ ಅಕ್ಷರಕಲಿತ ಅಶಿಕ್ಷಿತರಿಂದ ಆಗಕೂಡದು. **ಆದ್ದರಿಂದ ಧರ್ಮ ರಾಜಕಾರಣದಿಂದ ಬೇರೆಯಾಗಿರಬೇಕು. ಧಾರ್ಮಿಕ ಅಂಧತೆ ಅಥವಾ ತಪ್ಪು ಅನುಸರಣೆ ರಾಷ್ಟ್ರೀಯ ಐಕ್ಯವನ್ನು ಒಡೆಯಕೂಡದು.**

ನವಭಾರತದ ಅವಶ್ಯಕತೆಗೆ, ಅದರ ಪ್ರಗತಿಗೆ ಮೂಲ ಸಂಶೋಧನಾ ಶಿಕ್ಷಣ ಅವಶ್ಯ. ಆ ಕಾರಣಕ್ಕಾಗಿ ದೇಶದಲ್ಲಿ ಅನೇಕ ಉತ್ತಮ ಪ್ರಯೋಗಾಲಯಗಳು ಉಂಟಾಗುವಂತೆ ಮಾಡಿದರು.

ಶಿಕ್ಷಣದ ಅಭ್ಯಾಸ, ನಿರೂಪಣೆ, ಪಠ್ಯಗಳು ನಿಂತ ನೀರಾಗಕೂಡದು. ಆಗಾಗ ಅದರ ಪರಿಶೀಲನೆ ನಡೆಯುತ್ತಿರಬೇಕು. ಕಲಿಸುವ ಪದ್ಧತಿ ಆಮೂಲಾಗ್ರ ಬದಲಾವಣೆಯಾಗಬೇಕು.

ಇದು ಸಾಧಿತವಾಗಲು ಅವರು ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಶನ್ ಮುಂತಾದ ಸಂಸ್ಥೆಗಳನ್ನು ಸ್ಥಾಪಿಸಿದರು. ಅವುಗಳಿಗೆ ಸರಕಾರಕ್ಕೆ ಯೋಗ್ಯ ಮಾರ್ಗದರ್ಶನ ಮಾಡುವಂತೆ ಸಲಹೆ ಮಾಡಿದರು.

ಅವರು ಉನ್ನತ ಶಿಕ್ಷಣ ಮತ್ತು ಸೆಕೆಂಡರಿ ಶಿಕ್ಷಣಕ್ಕಾಗಿ ನೀತಿ ನಿರೂಪಣೆ, ಸಲಹೆ ಮಾಡಲು ಆಯೋಗವನ್ನು ನೇಮಿಸಿದರು. ಉನ್ನತ ಶಿಕ್ಷಣಕ್ಕೆ ಸಲಹೆ ಮಾಡಲು ಡಾ. ರಾಧಾಕೃಷ್ಣನ್ ಅವರ ನೇತೃತ್ವದಲ್ಲಿ ಸಮಿತಿ ನೇಮಿಸಿ, ಅದರ ವರದಿಯನ್ನು ಬಹು ಆಸಕ್ತಿಯಿಂದ ಅಳವಡಿಸಿಲು ಪ್ರಯತ್ನಿಸಿದರು. ಅಂತೆಯೇ ಯುನಿವರ್ಸಿಟಿ ಗ್ರ್ಯಾಂಟ್‌ಕಮಿಷನ್‌ನ್ನು ಸಹಾ ನೇಮಿಸಿದರು. ಇವು ಭಾರತದ ಉನ್ನತ ಶಿಕ್ಷಣಕ್ಕೆ ಭದ್ರತಳಹದಿ ಒದಗಿಸಿದವು.

"It appears to me that increasing emphasis will have to be placed on providing higher education in the field of agriculture, Medicine, Engineering, technology and science" (ಇನ್ನು ಮುಂದೆ ಕೃಷಿ, ಔಷಧಿ, ಇಂಜನಿಯರಿಂಗ್, ತಾಂತ್ರಿಕತೆ ಮತ್ತು ವಿಜ್ಞಾನ ಶಿಕ್ಷಣವು ಹೆಚ್ಚು ಸ್ಥಾನ ಪಡೆಯಬೇಕು ಎಂದು ನನಗನ್ನಿಸುತ್ತದೆ.) ಎಂದು ಸೆಂಟ್ರಲ್ ಎಡ್ವೈಸರಿ ಬೋರ್ಡ್ ಸಭೆಯಲ್ಲಿ ಹೇಳಿರುವುದು ಭಾರತದಲ್ಲಿ ಶಿಕ್ಷಣದಿಂದ ಸಾಧಿತವಾಗಬೇಕಾದ ಗುರಿಯನ್ನು ಆ ಕುರಿತು ಮೌಲಾನಾರ ಕಾರ್ಯಕ್ರಮದ ದಿಕ್ಕನ್ನು ಸೂಚಿಸುತ್ತದೆ.

ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಅವರಿಗೆ ಹೆಚ್ಚಿನ ಅಸಕ್ತಿಯಿತ್ತು "Educated mothers will mean children who can be easily made literate" (ತಾಯಿ ಸುಶಿಕ್ಷಿತಳಾಗುವಂತೆ ಮಾಡಿ, ಮಕ್ಕಳು ಸುಲಭವಾಗಿ ವಿದ್ಯಾವಂತರಾಗುತ್ತಾರೆ) ಹುಡುಗರಿಗೆ ಸಿಕ್ಕುವ ಎಲ್ಲ ಶಿಕ್ಷಣ ಸೌಲಭ್ಯವೂ ಹುಡುಗಿಯರಿಗೆ ಸಿಕ್ಕಬೇಕು ಎಂಬುದು ಅವರ ಅಭಿಮತ.

ಅವರ ಪಾಲಿಗೆ ಶಿಕ್ಷಣ ಎಂದರೆ ಕೇವಲ ಶಿಕ್ಷಣಕ್ಕಾಗಿ ಶಿಕ್ಷಣ ಅಲ್ಲ. ಶಿಕ್ಷಣ ಸಾಮಾಜಿಕ ಬದಲಾವಣೆಗೆ ವಾಹಕವಾಗಬೇಕು. ಆರ್ಥಿಕಾಭಿವೃದ್ಧಿಯ ಸಾಧನವಾಗಬೇಕು. ಸಚ್ಚಾರಿತ್ರ್ಯವನ್ನೂ ವ್ಯಕ್ತಿತ್ವವನ್ನೂ ಬೆಳೆಸುವಂತಿರಬೇಕು.

ಹಾಗೆಯೇ ವೈಜ್ಞಾನಿಕ ಶಿಕ್ಷಣದಂತೆ ಕಲಾ ಶಿಕ್ಷಣದ ಬೆಳವಣಿಗೆ ಸಹ ಅತೀ ಮುಖ್ಯವಾದುದು. ಆ ಕಾರಣ ಅವರು ಸಾಹಿತ್ಯ ಅಕಾಡಮಿ, ಸಂಗೀತ ಅಕಾಡಮಿ, ಕಲಾ ಅಕಾಡಮಿ ಮುಂತಾದ ವ್ಯವಸ್ಥೆ ಮಾಡಿದರು. ಎಲ್ಲ ಭಾಷೆಗಳಲ್ಲಿ ಕಲೆಗಳನ್ನು ಬೆಳೆಸುವುದು ಅಂದರೆ ಅದಕ್ಕೆ ಪ್ರೋತ್ಸಾಹ ಕೊಡುವುದು ಸರಕಾರದ ಕರ್ತವ್ಯ ಎಂಬುದನ್ನು ಪ್ರಾಯೋಗಿಕವಾಗಿ ಸಾಕ್ಷಾತ್ಕರಿಸಿದರು. ಕಲೆ ಕಲೆಗಾಗಿ ಅಲ್ಲ, ಅದು ಸಮಾಜೋಪಯೋಗಕ್ಕಾಗಿ ಎಂದು ಕಲಾವಿದರನ್ನು ಎಚ್ಚರಿಸಿದರು. ಕಲೆಯೂ ಶಿಕ್ಷಣದ ಒಂದು ಭಾಗವೆ.

ವಿದ್ಯಾರ್ಥಿಗಳ ಗೊಂದಲ (unrest) ಅವರನ್ನು ನೋವು ಪಡಿಸಿತ್ತು. ಯುವಕರ ಸೃಜನ ಶೀಲ ಶಕ್ತಿಗೆ ಅವಕಾಶ ಒದಗಿಸಲು ಬೇರೆ ಬೇರೆ ಚಟುವಟಿಕೆಗಳು ಇರಬೇಕು ಎಂದರು.

ಅದರಂತೆ ಅವರು ವಿದ್ಯಾರ್ಥಿಗಳಿಗೆ ದೇಶದ ತೊಡಕುಗಳನ್ನು ಅಳಿಸಿ ಹಾಕುವಂತೆಯೂ ಅವರ ಯುವಶಕ್ತಿಯನ್ನು ಅನುತ್ಪಾದಕ, ನಿರುಪಯೋಗಿ ಮತ್ತು ಹಿಂಸಾತ್ಮಕ ಕೆಲಸಗಳಿಂದ ದೂರ ಇರಿಸುವಂತೆಯೂ ಕರೆ ನೀಡಿದರು.

ಮೌಲಾನಾರ ಎದುರು ಕೇವಲ ಶೈಕ್ಷಣಿಕ ವಿಚಾರವನ್ನು ಸಾದರ ಪಡಿಸುವುದು ಮಾತ್ರ ಇದ್ದಿರಲಿಲ್ಲ. ಅದನ್ನು ಅವರು ಒಪ್ಪಿ ಮಂತ್ರಿಯಾಗಿ ಜಾರಿಗೊಳಿಸಬೇಕಿತ್ತು. ಇದು ಅತ್ಯಂತ ಜವಾಬ್ದಾರಿಯ ಮತ್ತು ಕಠಿಣವಾದ ಕಾರ್ಯವಾಗಿತ್ತು. ಒಬ್ಬ ದೂರದರ್ಶಿ ಶಿಕ್ಷಣತಜ್ಞನಿಗೆ ಮಾತ್ರ ಸಾಧ್ಯವಾಗುವ ಕೆಲಸವಾಗಿತ್ತು. ಅದನ್ನು ಅವರು ಸಾಧಿಸಿಯೇ ತೋರಿಸಿದರು. ಅವರ ಕಾರ್ಯ ಪಟುತ್ವದ ಕುರಿತು ಡಾ. ರಾಜೇಂದ್ರ ಪ್ರಸಾದ್ ಹೇಳುವ ಮಾತು ಅವರ ಸಾಧನೆ ಮತ್ತು ಸಾಧನಾ ವಿಧಾನದ ಮೇಲೆ ಬೆಳಕು ಚೆಲ್ಲುತ್ತದೆ. "ಪ್ರೋತ್ಸಾಹ ಮತ್ತು ಧೈರ್ಯ ಕೊಡುವಿಕೆಯಿಂದ ಅವರು ಕಲೆ, ಸಂಸ್ಕೃತಿ, ಸಾಹಿತ್ಯದ ಬೆಳವಣಿಗೆಯ ಕಾರ್ಯವನ್ನು ಸಾಧಿಸಿದರು. ಹಾಗೆಯೇ ವಿಜ್ಞಾನದ ಮುನ್ನಡೆಯನ್ನು ಸಾಧಿಸಿದರು. ಅನೇಕ ಅಕಾಡೆಮಿ, ಪ್ರಯೋಗಾಲಯ ಮತ್ತು ನಿಗಮಗಳನ್ನು, ಆಗಾಗ ಸಂಘಟಿಸುವ ವೈಜ್ಞಾನಿಕ ಅನ್ವೇಷಣೆ, ಕಲೆಗಳ ಬೆಳವಣಿಗೆಯನ್ನು ಸಾಧಿಸಿದರು."

ಮೌಲಾನಾ ಹನ್ನೊಂದು ವರ್ಷಗಳ ಕಾಲ ಭಾರತದ ಶಿಕ್ಷಣದ ಮಂತ್ರಿಯಾಗಿದ್ದರು. ಒಂದು ದೇಶದ ಸಾಂಪತ್ತಿಕ, ಬೌದ್ಧಿಕ ಹಾಗೂ ಹೃದಯವಂತಿಕೆಯ ಬೆಳವಣಿಗೆ ಸರಿಯಾದ ಶಿಕ್ಷಣವನ್ನು ಅವಲಂಬಿಸಿದೆ. ಭಾರತ ಸ್ವತಂತ್ರವಾದಾಗ ವಿವಿಧ ಜನಾಂಗದ, ವಿವಿಧ ಭಾಷೆ, ಸಂಸ್ಕೃತಿಗಳಿಂದ ತುಂಬಿದ ದೇಶ ಒಂದು ಬಗೆಯ ಅನಾಥ ಸ್ಥಿತಿಯಲ್ಲಿತ್ತು. ಅಂಥ ಸಂದರ್ಭದಲ್ಲಿ ಭಾರತದ ಆಶೋತ್ತರಗಳನ್ನು ನನಸಾಗಿಸುವ ಧೀರ ಮೇಧಾವಿಯನ್ನು ಅದು ಬಯಸುತ್ತಿತ್ತು. ಅಂಥ ಸ್ಥಾನವನ್ನು ಮೌಲಾನಾ ಅಬುಲ್ ಕಲಾಮ್ ಆಝಾದ್ ತುಂಬಿದರು. ಅವರು ಸ್ವತಂತ್ರ ಭಾರತದ ಶಿಕ್ಷಣದ ರುವಾರಿಯಾದರು.

ಸಾಂದರ್ಭಿಕ ಗ್ರಂಥ

1. Theory and principles of Education
   By Kamal Bhatia M.A. M.Ed. Phd,
   B.D. Bhatia M.A, M.Ed. Doaba House
   Booksellers and Publishers, New Delhi 1945

೨. ಶ್ರೇಷ್ಠ ಶಿಕ್ಷಣ ತಜ್ಞರು. ಪ್ರೊ. ಎಂ.ಕೆ. ವರಗಿರಿ
   ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿ.ವಿ. ೧೯೭೫

೩. ಎಸ್. ರಾಧಾಕೃಷ್ಣನ್ ಬಿ.ವಿ. ಶಿವಾನಂದ್, ಸೌಮ್ಯ ಪ್ರಕಾಶನ
   ಬೆಂಗಳೂರು- ೩-೧೯೯೦.

೪. ಪ್ರಾಚ್ಯ ಮತ್ತು ಪಾಶ್ಚಾತ್ಯ ಮೂಲ; ಡಾ. ಎಸ್. ರಾಧಾಕೃಷ್ಣನ್
   ಕನ್ನಡ ಪ್ರೊ. ಎನ್.ವಿ. ನಿಕಂ ಮತ್ತು ಎನ್.ಎಸ್. ಅನಂತರಂಗಾಚಾರ್
   ಮೈಸೂರು ವಿ.ವಿ. ೧೯೬೧.

೫. ಸತ್ಯ ಅಹಿಂಸೆ. ಮೋ.ಕ. ಗಾಂಧಿ ಸ್ಮಾರಕ ೧೯೫೮.

೬. ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹ- ಮೊ.ಕ. ಗಾಂಧಿ
ಕನ್ನಡ: ಎಸ್.ವಿ. ಕೃಷ್ಣ ಮೂರ್ತಿರಾವ್, ಗಾಂಧಿ ಸ್ಮಾರಕ ನಿಧಿ, ೧೯೫೮

7. Dr. Ambedker- A Critical study by. W.N. Kuber
Peoples Publishing House, New Delhi,1979.

8. History of the freedom movement Vol II.
by: Tarachand- Pub: Ministry of information
and broadcasting Govt. of India.
Patiale house New Delhi,1974

9. Maulana Azad- A commemoration volume
by: Khaliq Ahmad Nizam. pub:
Idarah-i-Adabiyat, Delhi -New Delhi-6,1990

10. The British Paramountery and Indian renaissance II
R.C. Mujumadar 1981. Bharatiya Vidya Bhavan Bombay
11) sayyed Ahmad Khan

By: K.A. Nizam series of builders of India
Publication Division Ministry of information
and Broad casting, Govt. of India-1974.

12. The lid off By: J.N. Sahani
Allied Publication, New Delhi-1971.

ವರ್ಣದಿಂದ ವರ್ಗದ ಕಡೆಗೆ

ಯಾವುದೇ ರಾಜ್ಯದ ಒಟ್ಟು ಅಭಿವೃದ್ಧಿ ಕ್ರಮವನ್ನು ಹಲವು ಬಗೆಗಳಲ್ಲಿ ನೋಡಲು ಅವಕಾಶವುಂಟು! ಧಾರ್ಮಿಕ, ಆರ್ಥಿಕ, ಸಾಮಾಜಿಕ ನೋಟಗಳ ಮೂಲಕವೂ ನೋಡಬಹುದು. ಇವುಗಳನ್ನು ನೋಡುವಾಗ ಭಾಷೆ, ಅಧಿಕಾರ ಮತ್ತು ಜ್ಞಾನ -ಇವು ಮೂರೂ ನಮ್ಮ ಪರಿಶೀಲನೆಗೆ ಒಳಗಾಗುತ್ತವೆ. ಅಂತಿಮವಾಗಿ ಈ ಮೂರೂ ನೆಲೆಗಳನ್ನು ತಿಳಿದರೆ ಸಂಸ್ಕೃತಿ ರಹಸ್ಯವನ್ನು ತಿಳಿದಂತೆಯೇ ಸರಿ. ಆರ್.ವಿ. ಭಂಡಾರಿ ಅವರ ಇಲ್ಲಿಯ ಚಿಂತನಾತ್ಮಕ ಬರೆಹಗಳು ಅಧಿಕಾರ, ಭಾಷೆ ಮತ್ತು ಜ್ಞಾನ -ಈ ಸಾಂಸ್ಕೃತಿಕ ಪರಿಕಲ್ಪನೆಗಳ ನಡುವೆ ಅನುಸಂಧಾನಿಸುತ್ತವೆ. ಹೊಸ ಬಗೆಯ ಅನುಸಂಧಾನಕ್ಕೂ ಅವಕಾಶ ಮಾಡಿಕೊಡುತ್ತವೆ. ನಮ್ಮ ಈ ಹೊತ್ತಿನ ರಾಷ್ಟ್ರೀಯತೆ, ನವರಾಷ್ಟ್ರೀಯತೆ, ಹಿಂದುತ್ವ, ಧರ್ಮನಿರಪೇಕ್ಷತೆ, ಸಾಮರಸ್ಯ, ದೇಶೀಯತೆ, ಭಾವೈಕ್ಯ, ಸಾಂಸ್ಕೃತಿಕ ಪುನರುಜ್ಜೀವನ, ಬ್ರಾಹ್ಮಣ್ಯ, ಬಂಡಾಯ -ಇಂಥ ಸಾಂಸ್ಕೃತಿಕ ಪರಿಭಾಷೆಗಳನ್ನು ಪರಿಕಲ್ಪನೆಗಳನ್ನೂ ಕಲಾಕೃತಿಗಳ ಜತೆಗೂ ಸಾಹಿತ್ಯ ಕೃತಿಗಳ ಜತೆಗೂ ಇಟ್ಟು ನೋಡಿರುವ ಲೇಖಕರ ದೃಷ್ಟಿಕೋನ ನಮಗೆ ಹೊಸ ತಿಳಿವಳಿಕೆಯನ್ನು ನೀಡುತ್ತದೆ. ಇದು ಪ್ರಾಧಿಕಾರದ ವಿಶಿಷ್ಟ ಕೃತಿ ಪ್ರಕಟಣೆಗಳಲ್ಲಿ ಒಂದೆಂದು ನಾನು ಭಾವಿಸಿದ್ದೇನೆ.

-ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಅಧ್ಯಕ್ಷರು

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಚಾಮರಾಜಪೇಟೆ, ಬೆಂಗಳೂರು

ISBN 81-7713-129-X

ಬೆಲೆ : 100/-